ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಸಂಪುಟ ೫೧
ಸಂಚಿಕೆ ೯

Vol. 51
No. 9

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, 4—11—1971

ಪರಮಾಣು ವಿಜ್ಞಾನದಲ್ಲಿ ಅಪೂರ್ವ ಖನಿಜಗಳ ಪಾತ್ರ

ಕೇಂದ್ರ ಸರ್ಕಾರ ೧೯೫೮ರಲ್ಲೇ ಇಸವಿ ಡಿಸೆಂಬರನಲ್ಲಿ ಕೇರಳ ರಾಜ್ಯದ ಆಲ್ವೆಯಲ್ಲಿ ಅಪೂರ್ವ ಖನಿಜಗಳ ಮಣ್ಣಿನ ಸಂಸ್ಕರಣ ಕಾರ್ಖಾನೆಯನ್ನು ಸ್ಥಾಪಿಸಿತು. ಇಂದು ಈ ಕಾರ್ಖಾನೆ ವಿಶ್ವದಲ್ಲಿ ದೊರಕುವ ಅಪೂರ್ವ ಖನಿಜಗಳ ಮೂರನೇ ಒಂದು ಭಾಗ ದಷ್ಟು ಮಣ್ಣನ್ನು ಸಂಸ್ಕರಿಸುತ್ತಿದೆ. ಈ ಖನಿಜಗಳ ಮಣ್ಣಿನ ರಫ್ತಿನಿಂದ ದೇಶಕ್ಕೆ ಅಮೂಲ್ಯ ವಿದೇಶೀ ವಿನಿಮಯ ಸಂಪಾದನೆಯಾಗುತ್ತಿದೆ; ಹಾಗು ದೇಶದಲ್ಲಿ ಅಧಿಕ ಬೇಡಿಕೆಯಲ್ಲಿಂದ ಟ್ರೈಸೋಡಿಯಂ ಫಾಸ್ಫೇಟನ್ನು ಪೂರ್ಣವಾಗಿ ಪೂರೈಸುತ್ತಿದೆ.

1948ರಲ್ಲಿ ಪರಮಾಣುಶಕ್ತಿ ಆಯೋಗದ ರಚನೆಯಾಯಿತು. ಈ ಆಯೋಗವು ಆಲ್ವೆಯಲ್ಲಿ ಅಪೂರ್ವ ಖನಿಜಗಳ ಮಣ್ಣಿನ ಸಂಸ್ಕರಣ ಕಾರ್ಖಾನೆಯನ್ನು ಸ್ಥಾಪಿಸಿತು. ಇಲ್ಲಿ ಮೊನೊಜೈಟ್ ಮಣ್ಣನ್ನು ಸಂಸ್ಕರಿಸಿ ಥೋರಿಯಂ, ಯುರೇನಿಯಂ ಮತ್ತು ಅಪೂರ್ವ ಖನಿಜಗಳ ಮಣ್ಣನ್ನು ಪ್ರತ್ಯೇಕಿಸಲಾಗುತ್ತಿದೆ. ಈ ಕಾರ್ಖಾನೆಯಲ್ಲಿ ಎರಡು ವಿಭಾಗಗಳಿವೆ. ಆಲ್ವೆಯಲ್ಲಿ ಅಪೂರ್ವ ಮಣ್ಣಿನ ಶಾಖೆ, ಸಂಸ್ಕರಣ ಯಂತ್ರ ಮತ್ತು ಸ್ಥಳೀಯ ಕಚೇರಿಯಿದೆ. ಕ್ವಿಲಾನ್‌ನಲ್ಲಿ ಖನಿಜಗಳ ವಿಭಾಗವಿದೆ. ಈ ಕಾರ್ಖಾನೆಯು ಟ್ರಾಂಬೆಯಲ್ಲಿ ಥೋರಿಯಂ ಯಂತ್ರ ಸ್ಥಾಪಿಸಿದೆ. ಇಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಘಟಕವಿದೆ.

ಯಂತ್ರ ನಿರ್ಮಾಣ

ಆಲ್ವೆಯಲ್ಲಿ ಸಂಸ್ಕರಣ ಯಂತ್ರಸ್ಥಾಪಿಸಲು ಫ್ರೆಂಚ್‌ಸಂಧಾನದಿಂದ ನೆರವು ಪಡೆಯಲಾಯಿತು. ಇಲ್ಲಿ ಸ್ಥಾಪಿಸಲಾದ ಸಂಸ್ಕರಣ ಯಂತ್ರದ ಉದ್ಘಾಟನೆಯನ್ನು ಅಂದಿನ ಪ್ರಧಾನಿ ಶ್ರೀ ಜವಹರಲಾಲ್ ನೆಹರು ೧೯೫೯ರಲ್ಲೇ ಇಸವಿ ಡಿಸೆಂಬರಿನಲ್ಲಿ ನೆರವೇರಿಸಿದರು.

ರೇಲ್ ಆರ್ತ್ಸ್ ಕ್ಲೋರೈಡನ್ನು ಕನ್ನಡಕ್ಕೆ ಬಳಸುವ ಗಾಜಿನ ಹೊಳಪಿಗೆ, ಮಿಸ್ಟ್ ಲೋಹ, ಎರಕದ ಕಬ್ಬಿಣದ ಮಿಶ್ರಲೋಹಗಳು ಮುಂತಾದುವುಗಳ ತಯಾರಿಕೆಗೆ ಉಪಯೋಗಿಲಾಗುತ್ತದೆ.

ಆಲ್ವೆಯಲ್ಲಿರುವ ಯಂತ್ರದಲ್ಲಿ ಸೀರಿಯಂ ಆಕ್ಸೈಡ್, ಸಿರಿಯಂ ಫ್ಲೋರೈಡ್ ಹಾಗು ಅಪೂರ್ವ ಖನಿಜಗಳ ಉತ್ಪನಗಳನ್ನು ತಯಾರಿಸಲಾಗುತ್ತಿದೆ. ಈ ಕಾರ್ಖಾನೆಯಲ್ಲಿ ರೇರ್ ಅರ್ತ್ಸ್ ಕ್ಲೋರೈಡ್ ಮತ್ತು ಸಾಂದ್ರೀಕೃತ ಥೋರಿಯಂ ಸಂಗ್ರಹಿಸಲು ಪೀಪಾಯಿಗಳನ್ನೂ ತಯಾರಿಸಲಾಗುತ್ತಿದೆ.

ಆಲ್ವೆಯಲ್ಲಿರುವ ಕಾರ್ಖಾನೆಗೆ ಕೇರಳ ಮತ್ತು ತಮಿಳುನಾಡಿನ ತೀರಪ್ರದೇಶದಲ್ಲಿರುವ ಕರಿಮರಳನ್ನು ಕಚ್ಚಾವಸ್ತುವಾಗಿ ಬಳಸಲಾಗುತ್ತಿದೆ. ಈ ಮರಳು ದೇಶದ ಅತ್ಯಮೂಲ್ಯ ಖನಿಜ ಸಂಪತ್ತಾಗಿದೆ. ಈ ಮರಳು ಸಮುದ್ರ ತೀರಪ್ರದೇಶದಲ್ಲಿ ದೊರಕುವ ಖನಿಜ ಮರಳಿನಲ್ಲಿ ವಿಶ್ವದಲ್ಲೇ ಅತ್ಯಂತ ಉತ್ಕೃಷ್ಟವಾದುವಾಗಿದೆ. ಆಲ್ವೆಯ ಕಾರ್ಖಾನೆಗೆ ಕೇರಳದಲ್ಲಿ ಕಯಂ ಕುಲಂ-ನೀಂದಕರ ಸಮುದ್ರ ತೀರದಲ್ಲಿರುವ ಮರಳು ಹಾಗು ತಮಿಳುನಾಡಿನ ಮನವಳ ಕುರಿಚಿ ತೀರದ ಎರಡು ಕೆಲೋಮೀಟರ್ ಪ್ರದೇಶದಲ್ಲಿ ದೊರಕುವ ಮರಳು ಮುಖ್ಯಸಿಕ್ಷೇಪವಾಗಿದೆ. ಈ ಮರಳಿನಲ್ಲಿ ಇಲ್ಮೆನೈಟ್, ಜಿರ್ಕಾನ್, ರುಟೈಲ್, ಮೋನಜೈಟ್, ಸಿಲ್ಲಿಮನೈಟ್ ಹಾಗು ಗಾರ್ನೆಟ್ ದೊರಕುತ್ತದೆ.

ಆಲ್ವೆ ಕಾರ್ಖಾನೆಯು ಮನವಾಳ ಕುರಿಚಿಯಲ್ಲಿ ಯಂತ್ರವೊಂದನ್ನು ಸ್ಥಾಪಿಸಿದೆ. ಈ ಯಂತ್ರವು ವಾರ್ಷಿಕ 50—60 ಸಹಸ್ರ ಟನ್ ಇಲ್ಮೆನೈಟ್, 3300 ಟನ್ ಮೊನಜೈಟ್, 1500 ಟನ್ ರುಟೈಲ್, 5700 ಜಿರ್ಕಾನ್, 1 200 ಟನ್ ಗಾರ್ನೆಟ್, 300 ಟನ್ ಸಿಲ್ಲಿಮನೈಟ್ 350 ಟನ್ ಲ್ಯುಕೋಕ್ಸೀನನ್ನು ಉತ್ಪಾದಿಸುತ್ತದೆ.

ಚವಾರದಲ್ಲಿರುವ ಮತ್ತೊಂದು ಯಂತ್ರವು ವಾರ್ಷಿಕ ಒಂದು ಲಕ್ಷ ಟನ್ ಇಲ್ಮೆನೈಟ್, 5850 ಟನ್ ರುಟೈಲ್, 7ಸಹಸ್ರ ಟನ್ ಜಿರ್ಕಾನ್, 583 ಟನ್ ಮೊನಜೈಟ್ ಹಾಗೂ 4ಸಾವಿರ ಟನ್ ಸಿಲ್ಲಿಮನೈಟ್ ತಯಾರಿಸುತ್ತಿದೆ.

ಥೋರಿಯಂ ಯಂತ್ರ

ಆಲ್ವೆ ಕಾರ್ಖಾನೆಯಲ್ಲಿ ಉತ್ಪಾದಿಸುವ ಕಚ್ಚಾ ಥೋರಿಯಂ ಹೈಡ್ರಾಕ್ಸೈಡನ್ನು ಸಂಸ್ಕರಿಸಲೆಂದು ಗಾಣಗರಲ್ಲಿ ಟ್ರಾಂಬೆಯಲ್ಲಿ ಮತ್ತೊಂದು ಯಂತ್ರ ಸಜ್ಜುಗೊಳಿಸಲಾಯಿತು.

ಆಲ್ವೆ ಕಾರ್ಖಾನೆಯಲ್ಲಿ ತಯಾರಿಸಿದ ಸಾಂದ್ರೀಕೃತ ಥೋರಿಯಂ ಧಾತುವನ್ನು ಹೈಡ್ರೊಕ್ಲೋರಿಕ್ ಆಮ್ಲದಲ್ಲಿ ಕರಗಿಸಲಾಗುತ್ತದೆ ಎಂದಲ್ಲಿರುವ ಕಲ್ಮಷವನ್ನು ತೆಗೆಯಲು ಸೋಸಲಾಗುತ್ತದೆ. ಆನಂತರ ದುರ್ಬಲ ಸಲ್ಫ್ಯೂರಿಕ್ ಆಮ್ಲವನ್ನು ಬೆರೆಸಲಾಗುತ್ತದೆ. ಥೋರಿಯಂ ಸಲ್ಫೇಟ್ ಹರಳುಗಳನ್ನು ಕೇಂದ್ರಾಪಗಾಮಿ ಯಂತ್ರದಲ್ಲಿ ಹಾಕಿ ಮೂಲದ್ರಾವಣದಿಂದ ಬೇರ್ಪಡಿಸಲಾಗುತ್ತದೆ. ಇದನ್ನು ಮತ್ತೆ ಶುದ್ಧಿಗೊಳಿಸಲಾಗುತ್ತದೆ.

ಶುದ್ಧವಾದ ಥೋರಿಯಂ ಸಲ್ಫೇಟನ್ನು ಹೈಡ್ರಾಕ್ಸೈಡಾಗಿ ಸಾಂದ್ರೀಕರಿಸಲಾಗುತ್ತದೆ. ಇದನ್ನು ನೀರಿನಲ್ಲಿ ಕರಗುವ ಕಲ್ಮಶಗಳಿಂದ ಬೇರ್ಪಡಿಸಲಾಗುತ್ತದೆ. ಆನಂತರ ಅತಿಶುದ್ಧವಾದ ನೈಟ್ರಿಕ್ ಆಮ್ಲದಲ್ಲಿ ಕರಗಿಸಿ ಥೋರಿಯಂ ನೈಟ್ರೇಟ್ ದ್ರಾವಣ ಪಡೆಯಲಾಗುತ್ತದೆ. ಈ ದ್ರಾವಣವನ್ನು ಗಾಜಿನ ಅಂಚರುವ ತಟ್ಟೆಯಲ್ಲಿಟ್ಟು ಸಾಂದ್ರೀಕರಿಸಿ ಘನವಸ್ತುವಾಗಿ ಮಾಡಲಾಗುತ್ತದೆ. ಇದನ್ನು ವಿಶೇಷ ನಾತ್ರಗಳಲ್ಲಿಟ್ಟು ಪ್ಯಾಕ್ ಮಾಡಿ ಪೂರಾಟ ಮಾಡಲಾಗುತ್ತದೆ.

ಥೋರಿಯಂ ಮತ್ತು ಯುರೇನಿಯಂ ಧಾತುವನ್ನು ಪೂರ್ಣವಾಗಿ ಪಡೆಯಲು ಥೋರಿಯಂ ಸಲ್ಫೇಟಿನ ಮೂಲದ್ರಾವಣವನ್ನು ಹೈಡ್ರೊ ಫ್ಲೋರಿಕ್ ಆಮ್ಲ ಬಿಡಲಾಗುತ್ತದೆ. ಅಂತಿಮವಾಗಿ ಯುರೇನಿಯಂ ಫ್ಲೂರೈಡ್ ತಯಾರಿಸಲಾಗುತ್ತದೆ.

ಥೋರಿಯಂ ನೈಟ್ರೇಟ್ ಮತ್ತು ಥೋರಿಯಂ ಆಕ್ಸೈಡನ್ನು ದ್ರಾವಕದಿಂದ ಪಡೆಯುವ ಸಾಧ್ಯತೆಯನ್ನು ಈಗ ಪರಿಶೀಲಿಸಲಾಗುತ್ತಿದೆ.

●●

ಹಿಂಸಾತ್ಮಕ ಆಕಾಂಕ್ಷೆಗಳು ಹಿಂಸಾತ್ಮಕ ಅಂತ್ಯವನ್ನೇ ಕಾಣುವವು. ಅವುಗಳ ಗೆಲವಿನೊಡನೆ ಸಾವೂ ಬರುವುದು.

—ಶೇಕ್ಸ್‌ಪೀಯರ್

○ ○ ○

ನಮ್ಮ ಅಭಿಪ್ರಾಯಗಳೂ ನಮ್ಮ ಗಡಿಯೊರಗಳು ತೋರಿಸುವ ಹೊತ್ತಿನಂತೆಯೇ ಇರುವವು. ಒಂದೊಂದು ಒಂದೊಂದು ತರ. ಆದರೆ, ವ್ಯಕ್ತಿಯೊಬ್ಬನೂ ತನ್ನದೇ ಸರಿ ಎಂದು ಬಗೆಯುತ್ತಾನೆ. —ಹೋಪ್

○ ○ ○

ಒಳ್ಳೇತನದ ವೈಭವವನ್ನು ಮಹಾತ್ಮರೇ ಅರಿಯುತ್ತಾರೆ. —ಸೋಫೋಕ್ಲೆಸ್

○ ○ ○

ಹಣವು ಯಾರೊಬ್ಬರ ಆಳಲ್ಲ.

— ಮಹಾಭಾರತ

○ ○ ○

ಹಸಿಯದಿರೆ ಉಣಬೇಡ; ಪಸಿದು ಮತ್ತಿತರ ಬೇಡ, ಬಿಸಿಗೂಡಿ ತಂಗುಳಿಗಾಗಿ ಬೇಡ, ವೈದ್ಯರ ಬೆನಲೇ ಬೇಡ—ಸರ್ವಜ್ಞ.

○ ○ ○

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
137 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾವ್ ಶೆಟ್ಟಿ,
ಜೆಯರ್‌ಮೆನ್.

ನವಯುಗ

ಹೊನ್ನ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ

ಹೊನ್ನ ಹಬ್ಬದ ವಿಶೇಷ ಸಂಚಿಕೆಗೆ ಜಾಹೀರಾತು ಕೊಟ್ಟು ಸಹಕರಿಸಿರಿ.

'ಗಾಂಧಿಜಿಯ ಕೊಲೆ'

(ಭಾಗ ಏಳು – ಕೊಲೆಯ ಹಿನ್ನೆಲೆ ೧)

ಬರೆವನರು: ಶ್ರೀ ಬಿ. ಕೃಷ್ಣ ಭಟ್, ಭದ್ರಾವತಿ

1945ರ ಡಿಸೆಂಬರಿನಲ್ಲಿ ಬ್ರಿಟಿಷ್ ಸರ ಕಾರ, ಭಾರತದ ರಾಜಕೀಯ ಪರಿಸ್ಥಿತಿ ಯನ್ನು ಅಭ್ಯಸಿಸಲು ಒಂದು ಪಾರ್ಲಿಮೆಂ ಟರಿ ಪ್ರತಿನಿಧಿಗಳ ನಿಯೋಗವನ್ನು ಕಳಿಸಿತು. ಆದರ ಬೆನ್ನಿಗೇ ನೂರ್ಜಿ 1946ರಲ್ಲಿ ಮಂತ್ರಿ ಸಂ ವುಟದ ನಿಯೋಗವೊಂದನ್ನು ಕಳಿಸಿತು. ಈ ನಿಯೋಗದ ಸದಸ್ಯರು, ಭಾರತದ ವಿ ವಿಧ ರಾಜಕೀಯ ಪಕ್ಷಗಳ ಮುಖಂಡರ ನ್ನು ಭೆಟ್ಟಿಯಾದರು. ಸಮಸ್ಯೆಯ ಪರಿಹಾ ರಕ್ಕೆ ಅವರೊಡನೆ ವಿಚಾರ ವಿನಿಮಯ ಮಾಡಿಕೊಂಡರು. ಹೊಸ ದಾರಿಗಳನ್ನು ಕಂಡು ಕೊಳ್ಳಲು ಪ್ರಯತ್ನಿಸಿದರು. ಆ ಆ ಭಿಪ್ರಾಯಗಳನ್ನು ರೂಢಿಸಿ ಎಲ್ಲರಿಗೂ ಮಾನ್ಯವಾಗುವ ಸೂತ್ರವನ್ನು ಕಂಡುಕೊಂ ಡರು. ಈ ಶಿಫಾರಸುಗಳನ್ನು ಮಂತ್ರಿ ಸಂ ವುಟದ ನಿಯೋಗದ ಸಲಹೆಗಳೆಂದೇ ಚರಿ ತ್ರೆಕಾರರು ಕರೆಯುತ್ತಾರೆ.

ಮುಖ್ಯ ಕೇಂದ್ರ; ಸ್ವಾಯತ್ತ ಪ್ರಾಂ ತಗಳು. ಅಧಿಕಾರದ ಕೇಂದ್ರೀಕರಣಕ್ಕೆಂತ ವಿಕೇಂದ್ರೀಕರಣಕ್ಕೆ ಹೆಚ್ಚಿನ ಪ್ರಾಮುಖ್ಯ ತೆ. ಆ ಸಲಹೆಯ ಪ್ರಕಾರ ಭಾರತದ ಅಂ ಗರಚನೆ ಫೆಡರಲ್ ಸ್ವರೂಪದ್ದು–ಕೇಂದ್ರ ದ ಅಧಿಕಾರ ನೂರು ವಿಷಯಗಳಿಗೆ ಸೀ ಮಿತಗೊಂಡಿತ್ತು–ಸಂಪರ್ಕ, ವಿದೇಶಾಂಗ, ರಕ್ಷಣೆ. ಇದು ಎಲ್ಲ ಕೋಮಿನ ಜನಕ್ಕೆ ತೃಪ್ತಿ ತರುವ ಸಲಹೆಯಿತ್ತು. ಸಂಖ್ಯಾ ಬಲದಿಂದ ಒಂದೊಂದು ಕೋಮಿನವರು ಒಂದೊಂದು ಪ್ರಾಂತದಲ್ಲಿ ಮೇಲುಗೈಯಾ ಗಬಹುದಿತ್ತು. ಲೀಗಿಗೆ ಈ ಸಲಹೆ ಒಪ್ಪಿ ಗೆಯಾಯಿತು. ದೇಶದ ಅಖಂಡತೆಯನ್ನು ಈ ಸೂತ್ರ ತತ್ವಶಃ ಒಪ್ಪಿಕೊಂಡಿತ್ತು. ಆ ದ್ದರಿಂದ ಕಾಂಗ್ರೆಸು ಈ ಪರಿಹಾರೋಪಾ ಯವನ್ನು ಸ್ವೀಕರಿಸಲು ಸಿದ್ಧವಾಯಿತು.

ಈ ಯೋಜನೆಯನ್ನು ಕಾರ್ಯಗತ ಗೊಳಿಸಲು ಕಾಂಗ್ರೆಸ್–ಲೀಗ್ ಮುಖಂ ಡರನ್ನು ಆಹ್ವಾನಿಸಲಾಯಿತು. ಹಂಗಾಮಿ ಸರಕಾರವನ್ನು ರಚಿಸುವಂತೆ ಕೇಳಿಕೊಳ್ಳ ಲಾಯಿತು. ಮೂಲ ಸೂತ್ರಕ್ಕೆ ಬಾಧಕ ಬಾರದ ರೀತಿಯಲ್ಲಿ ರಾಜ್ಯಾಂಗ ರಚಿಸಲು ರಾಜ್ಯಾಂಗ ಸಭೆಯನ್ನು ಕರೆಯಲು ಸೂ ಚಿಸಲಾಯಿತು.

ಕ್ಯಾಬಿನೆಟ್ ನಿಯೋಗದ ಸಲಹೆಯ ನ್ನು ಮುಸ್ಲಿಂ ಲೀಗ್, ತನ್ನ ಅಧಿವೇಶನದ ಲ್ಲಿ ಚರ್ಚಿಸಿತು. ಈ ಸೂತ್ರವನ್ನು ಒಪ್ಪು ವಂತೆ ಶ್ರೀ ಮಹಮ್ಮದಾಲಿ ಜಿನ್ನಾ ಸದಸ್ಯ ರಿಗೆ ಮನವಿ ಮಾಡಿಕೊಂಡರು. ಲೀಗ್ ಸ ಲಹೆಯನ್ನು ಅಂಗೀಕರಿಸಿತು. ಎಷ್ಟು ದೂ ರ ಕ್ರಮಿಸಬಹುದೋ, ಅಷ್ಟು ದೂರ ಯೋಗಿದ್ದೇವೆ. ಇದಕ್ಕಿಂತ ಹೆಚ್ಚಿಗೆ ಸಿಗುವ ಭರವಸೆಯಿಲ್ಲ ಎಂದು ಶ್ರೀ ಜಿನ್ನಾ ಸ್ಪಷ್ಟ ವಾಗಿ ನುಡಿದರು.

ಕಾಂಗ್ರೆಸಿನ ಪರಿಷ್ಕರ ಕೆಲಸ ಅಷ್ಟು ಸು ಲಭವ್ಯಾಗಿರಲಿಲ್ಲ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಈ ಸೂತ್ರವನ್ನು ಅಂಗೀಕರಿಸಿ, ಅ ದನ್ನೊಂದು ನಿರ್ಣಯ ರೂಪದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮುಂದೆ ಅನುಮೋದಿಸುವುದಕ್ಕೆ ಮಂಡಿಸುವ ಅಗ ತ್ಯತೆ ಇತ್ತು.

ಆದಕ್ಕಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನವನ್ನು ಜುಲ್ಯಾ ಏಳ ರಂದು ಮುಂಬಯಿಯಲ್ಲಿ ಕರೆಯಲಾಯಿ ತು. ಅದರ ಹಿಂದಿನದಿನ ಕಾಂಗ್ರೆಸ್ ವರ್ಕಿಂ ಗ್ ಕಮಿಟಿಯ ಸಭೆ ಮುಂಬಯಿಯಲ್ಲಿ ಸೇರಿತು. ಕ್ಯಾಬಿನೆಟ್ ನಿಯೋಗದ ಸಲಹೆ ಯನ್ನು ಅಂಗೀಕರಿಸಬೇಕೆನ್ನುವ ನಿರ್ಧಾರ ಕ್ಕೆ ವರ್ಕಿಂಗ್ ಕಮಿಟಿ ಬಂದಿತು. ಆ ನಿ ರ್ಧಾರವನ್ನು ಅಧಿಕೃತ ನಿರ್ಣಯವಾಗಿ ಮಂಡಿಸುವ ಹೊಣೆಯನ್ನು ಶ್ರೀ ಆಜಾದರಿ ಗೆ ವಹಿಸಲಾಯಿತು. ಕ್ಯಾಬಿನೆಟ್ ನಿಯೋ ಗದ ಪ್ರಮುಖರೊಡನೆ ಸಂಧಾನದ ಮಾ ತುಕತೆ ನಡೆಸಿದವರು ಆಜಾದರು. ಈ ಜ ವಾಬ್ದಾರಿಯನ್ನು ಆ ದಿನಗಳಲ್ಲಿ ಕಾಂಗ್ರೆಸಿ ನ ಅಧ್ಯಕ್ಷರಾಗಿದ್ದ ಆಜಾದರಲ್ಲದೆ ಬೇರಾರು ನಿಭಾಯಿಸ ಬಲ್ಲರು?

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಮುಂದು ನಿರ್ಣಯವನ್ನು ಸ್ವತಃ ಆಜಾದ ರೇ ಮಂಡಿಸಿದರು. ಯೂಸುಫ್ ಮೆಹರಲ್ಲಿ ಮೊದಲಾದ ಯುವಕರು ನಿರ್ಣಯವನ್ನು ವಿರೋಧಿಸಿದರು. ಅಧಿಕೃತ ನಿರ್ಣಯದ ಭರ್ಜರಿ ಬಹುಮತ ಪಡೆಯಿತು. ಕ್ಯಾಬಿನೆ ಟ್ ನಿಯೋಗದ ಸೂತ್ರಕ್ಕೆ ಅಖಿಲ ಭಾರತ ಕಾಂಗ್ರೆಸ್ ಸಮಿತಿ ತನ್ನ ಸಮ್ಮತಿ ಸೂಚಿಸಿ ತು. ಈ ಅಂಗೀಕಾರ ದೊರಕಿದ್ದು ಜುಲ್ಯಾ 9ರಂದು– ಪಂಡಿತ ಜವಾಹರಲಾಲರ ಅಧ್ಯ ಕ್ಷತೆಯಲ್ಲಿ.

ಜುಲ್ಯಾ ಏಳರಂದು ಆಜಾದರು ಕಾಂ ಗ್ರೆಸ್ ಗದ್ದುಗೆಯನ್ನು ಜವಹರಲಾಲರಿಗೆ ವಹಿಸಿಕೊಟ್ಟರು. ಅಧಿಕಾರದ ಹಸ್ತಾಂತರ ದ ಕಾರಣ ಇನ್ನೂ ಬಯಲಿಗೆ ಬಂದಿಲ್ಲ.

ಎಲ್ಲ ಸರಿ ಹೋಯಿತು ಎನ್ನುವಷ್ಟರಲ್ಲಿ ಒಂದು ಅಚಾತುರ್ಯ ನಡೆದು ಹೋಯಿ ತು. ತೀರ್ಮಾನ ತೆಗೆದು ಕೊಂಡ ಮರುದಿ ನ–ಜುಲ್ಯಾ 10 ರಂದು– ಕಾಂಗ್ರೆಸ್ ಅ ಧ್ಯಕ್ಷ ಜವಹರಲಾಲರು ಒಂದು ಪತ್ರಿಕಾ ಗೋಷ್ಠಿ ಕರೆದರು. ಪತ್ರಿಕೋದ್ಯಮಿಯೊ ಬ್ಬರು ಅವರನ್ನು ಹೀಗೆ ಪ್ರಶ್ನಿಸಿದರು: 'ಬ್ರಿ ಟಿಷ್ ಕಾಬಿನೆಟ್ ನಿಯೋಗದ ಸೂತ್ರವ ನ್ನು ಕಾಂಗ್ರೆಸು ಪೂರ್ತ ಒಪ್ಪಿಕೊಂಡಂತ ಲ್ಲವೇ?

ಆ ಪ್ರಶ್ನೆಯನ್ನು ಉತ್ತರಿಸದೆ ಹೋಗಿ ದ್ದರೆ ಏನೂ ಆಗುತ್ತಿರಲಿಲ್ಲ. ಮುಂದಿನ ಅ ನಾಹುತ :ಖಂಡಿತ ತಪ್ಪುತಿತ್ತು. ಪಂಡಿತ ನೆಹರು ಆ ಪ್ರಶ್ನೆಗೆ ಹೀಗೆ ಉತ್ತರ ಕೊಟ್ಟ ರು. 'ಒಪ್ಪಿಕೊಂಡುದು ನಿಜ. ಆದರೆ ಈ ಒ ಪ್ಪಂದ ಕಾಂಗ್ರೆಸನ್ನು ಯಾವ ರೀತಿಯಿಂದ ಲೂ ನಿರ್ಬಂಧಿಸಿಲ್ಲ. ಪರಿಸ್ಥಿತಿಯನ್ನು ಎದು ರಿಸುವ ದೃಢ ಚಿತ್ತದಿಂದ, ಮುಕ್ತ ಮನಸ್ಸಿ ನಿಂದ ಕಾಂಗ್ರೆಸು ರಾಜ್ಯಾಂಗ ಸಭೆಯನ್ನು ಪ್ರವೇಶಿಸುವುದು.

'ಹಾಗಿದ್ದರೆ ಕ್ಯಾಬಿನೆಟ್ ನಿಯೋಗದ ಸಲಹೆಯನ್ನು ಬದಲಾಯಿಸುವುದು, ಮೂ ರ್ಪಡಿಸುವುದು ಸಾಧ್ಯವೇ'?

'ನಾವೇನೋ ರಾಜ್ಯಾಂಗ ಸಭೆಯನ್ನು ಒಪ್ಪಂದಕ್ಕೆ ಬದ್ಧರಾಗಿಯೇ ಪ್ರವೇಶಿಸುತ್ತೇ ವೆ. ಆದರೆ ಒಪ್ಪಂದ ನಮ್ಮನ್ನು ಬಂಧಿಸಿಲ್ಲ ವೆಂದು ಗ್ರಹಿಸಿದ್ದೇವೆ. ಅಗತ್ಯವಿದ್ದಲ್ಲಿ ನಿ ಯೋಗದ ಸಲಹೆಯನ್ನು ಮೂರ್ಪಡಿಸುವ ಸ್ವಾತಂತ್ರ್ಯ ನಮಗಿದ್ದೇ ಇದೆ.'

ಈ ಪ್ರಶ್ನೆ— ಈ ಉತ್ತರ ಭಾರತದ ಇ ತಿಹಾಸದಲ್ಲಿ ಹೊಸ ತಿರುವನ್ನು ತಂದಿತು. ಮುಂದಿನ ಘಟನೆಗಳಿಗೆ ದಾರಿ ಮಾಡಿ ಕೊ ಟ್ಟಿತು. ಭಾರತದ ವಿಭಜನೆಗೆ ನಾಂದಿಹಾ ಡಿತು. ಪಂಡಿತ್‌ಜೀ ಉತ್ತರ, ದೇಶಕ್ಕೆ ಅನ ರ್ಥ ಪರಂಪರೆಯ ಮಹಾ ಪೂರವನ್ನೇ ತಂ ದಿತು. ಅವರ ಬೇ ಹುರಿ ಹೇಳಿಕೆ ನೆತ್ತ ರಿನ ಓಕುಳಿಗೆ ಕಾರಣವಾಯಿತು. ಭಾರತ ದ ವಿಭಜನೆಗೆ, ಮುಸ್ಲಿಂ ಲೀಗ್ ಜಿನ್ನಾ, ರಾಜಾಜಿಗಳಿಗಿಂತಲೂ ನೆಹರೂಜಿ ಹೆಚ್ಚಿನ ಪ್ರಮಾಣದಲ್ಲಿ ಹೊಣೆಗಾರರು. ಈ ಆರೋ ಪದಿಂದ ಅವರು ಅಷ್ಟು ಸುಲಭ್ಯವಾಗಿ ನು ಣುಚಿ ಕೊಳ್ಳಲಾರರು.

ಜುಲ್ಯಾ 7ರ ತನಕ ಕಾಂಗ್ರೆಸಿನ ಅಧ್ಯ ಕ್ಷರಾಗಿದ್ದ ಆಜಾದರು ತಮ್ಮ ಪುಸ್ತಕದಲ್ಲಿ ಆ ಸಂದರ್ಭದನ್ನು ಹೀಗೆ ವಿವರಿಸಿದ್ದಾರೆ. 'ಜವಹರಲಾಲರ ಹೇಳಿಕೆ ದುರದೃಷ್ಟಕರ ದ್ದು ಅದು ಸತ್ಯಕ್ಕೆ ದೂರವಾಗಿದೆ ಎಂದು ಉಲ್ಲೇಖಿಸಿದೆ ವಿಧಿಯಿಲ್ಲ. ಮಾಡಿಕೊಂಡ ಒಪ್ಪಂದದಂತೆ ಕ್ಯಾಬಿನೆಟ್ ನಿಯೋಗದ ಸೂತ್ರವನ್ನು ಮೂರ್ಪಡಿಸುವ ಸ್ವಾತಂತ್ರ್ಯ ಕಾಂಗ್ರೆಸಿಗೆ ಇರಲಿಲ್ಲ. ಒನ್ವಂದಕ್ಕೆ ಬಂದ ಇತರ ಪಕ್ಷಗಳ ಅನುಮತಿಯಿಲ್ಲದೆ ಮೂ ಲ ಸೂತ್ರವನ್ನು ಯಾವ ರೀತಿಯಿಂದಲೂ ಕಾಂಗ್ರೆಸು ಏಕ ಪಕ್ಷೀಯವಾಗಿ ಬದಲಾ ಯಿಸುವಂತಿರಲಿಲ್ಲ.'

ಶ್ರೀ ಜಿನ್ನಾ ಒಪ್ಪಿದ. ಮನಸ್ಸಿನಿಂದ ನಿ ಯೋಗದ ಸಲಹೆಯನ್ನು ಒಪ್ಪಿದವರು. ಬೇರೆ ಸೂತ್ರ ಅವರ ಬತ್ತಳಿಕೆಯಲ್ಲಿರಲಿಲ್ಲ. ಆದರೆ ನೆಹರೂ ಹೇಳಿಕೆಯಿಂದ ಅವರು ಸಿ ಡಿಮಿಡಿ ಗೊಂಡರು– ಮುಸ್ಲಿಂ ಲೀಗಿನ ಆ ತುರದ ಸಭೆ ಕರೆಯುವಂತೆ liಯೂಖತ್ ಅಲೀ ಖಾನರಿಗೆ ಆದೇಶ ಕೊಟ್ಟರು. ಕಾಂ ಗ್ರೆಸ್ ಅಧ್ಯಕ್ಷರ ಹೇಳಿಕೆಯಿಂದ ಪರಿಸ್ಥಿತಿ ಹದಗೆಟ್ಟಿದೆ. ನಿಯೋಗದ ಸಲಹೆಯನ್ನು ಲೀಗ್ ಒಪ್ಪಿದ್ದು ನಿಜ. ಆದರೆ ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆಯ ಅನುನಯದಲ್ಲಿ ಹಿಂ ದಿನ ತೀರ್ಮಾನವನ್ನು ವಿಮರ್ಶಿಸುವ ಅಗ ತ್ಯ ಬಿದ್ದಿದೆ. ರಾಜ್ಯ ಸೂತ್ರವನ್ನು ಕಾಂಗ್ರೆ ಸು ಒಪ್ಪಿಕೊಂಡಿದೆ ಎಂದು ನಿಯೋಗ ನ ಮಗೆ ತಿಳಿಸಿತು. ಆ ಸೂತ್ರದ ಆಧಾರದ ಮೇಲೆ ಮುಂದಿನ ರಾಜ್ಯಾಂಗದ ರಚನೆಗೆ ಕಾಂಗ್ರೆಸು ಸಮ್ಮತಿಸಿದೆ ಎಂದು ಭರವಸೆ ನೀಡಿತು. ಆದರೆ ಕಾಂಗ್ರೆಸ್ ಅಧ್ಯಕ್ಷರು ಅ ದನ್ನು ಬಹಿರಂಗವಾಗಿ ಅಲ್ಲಗಳೆದಿದ್ದಾರೆ. ಸ್ವತಂತ್ರ ಭಾರತದಲ್ಲಿ ಅಲ್ಪ ಸಂಖ್ಯಾಕರು, ಬಹು ಸಂಖ್ಯಾಕರ ತೀರ್ಮಾನವನ್ನು ತಲೆ ತಗ್ಗಿಸಿ ಸ್ವೀಕರಿಸ ಬೇಕೆಂಬುದೇ ಈ ಮಾತಿ ನ ಅರ್ಥ. ಕಾಂಗ್ರೆಸು ನಿಯೋಗದ ರಾಜ್ಯ ಸೂತ್ರವನ್ನು ಧಿಕ್ಕರಿಸಿದೆ. ಅದನ್ನು ಅಂಗೀ ಕರಿಸಿಡ ಲೀಗನ್ನು ಈಗ ವೈಸರಾಯರು ಆ ಹ್ವಾನಿಸಿ, ಹಂಗಾಮಿ ಸರಕಾರ ರಚಿಸಲು ಕೇಳಿಕೊಳ್ಳಬೇಕು ಎಂದು ಗುಡುಗಿದರು.

ಮುಂಬಯಿಯಲ್ಲಿ ಸೇರಿದ ಮುಸ್ಲಿಂಲೀ ಗ್ ಸಭೆ ಕ್ಯಾಬಿನೆಟ್ ನಿಯೋಗದ ಸೂತ್ರ ವನ್ನು ತಿರಸ್ಕರಿಸಿತು. ನೇರ ಕಾರ್ಯಕ್ರಮ ಕ್ಕೆ ಕರೆ ಕೊಟ್ಟಿತು. ಪಾಕಿಸ್ತಾನ ನಿರ್ಮಾ

(ಹನ್ನೊಂದನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅಸುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ವಿದ್ಯಾಶಾಲಾ (ಪೇಟೆಂಟ್) ಲಿಮಿಟೆಡ್,
ವತಿಯಿಂದ
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K

ಸಂಪುಟ : 51
ಸಂಚಿಕೆ : 9

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೨೫

ಚಿಕ್ಕ ಜೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವುದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈ ಸೇರಬೇಕು.

ಪ್ರಧಾನಿಯವರ ಮಹತ್ವದ ವಿಶ್ವ ಸಂಚಾರ

ಪ್ರಧಾನಿ ಇಂದಿರಾಗಾಂಧಿಯವರು ಬಂಗ್ಲಾ ಸಮಸ್ಯೆಯು ಭಾರತದ ಮೇಲೆ ಬೀರಿದ, ಮೂಡಿದ ಅನಪೇಕ್ಷಣೀಯ ಪರಿಣಾಮಗಳನ್ನು, ಭಾರತದ ಅರ್ಥವ್ಯವಸ್ಥೆಗುಂಟು ಮಾಡಿದ ಹೃತ್ಪಂಪದ ಭೀಕರತೆಯನ್ನು ನಮ್ಮ ಮಿತ್ರರೆಂದು ಹೇಳಿಕೊಳ್ಳುವ ಕೆಲವು ಪಾಶ್ಚಾತ್ಯ ದೇಶಗಳಿಗೆ ಭೆಟ್ಟಿ ನೀಡಲು ಹೊರಟಿದ್ದಾರೆ. ಈ ದೇಶಗಳ ಪಟ್ಟಿಯಲ್ಲಿ ರಶ್ಯವೂ ಸೇರಿದೆ. ರಶ್ಯ ಮತ್ತು ಭಾರತಗಳು ನೆರೆಹೊರೆಯ ದೇಶಗಳು. ಶ್ರೀಮತಿ ಗಾಂಧಿಯವರು ಪ್ರಧಾನಿಯೊದ ಬಳಿಕ ನವದೆಹಲಿ ಮತ್ತು ಮೋಸ್ಕೋಗಳ ನಡುವಣ ದೂರ ಬಹಳಷ್ಟು ಕಡಮೆಯಾಗಿದೆ. ಆದುದರಿಂದಲೇ ಇವೆರಡು ಮಹಾ ನಗರಗಳ ನಡುವೆ ಉನ್ನತ ರಾಜಶಾಂತಿಕರನ್ನೋ, ಮಂತ್ರಿಮಾಗಧರನ್ನೋ ಹೊತ್ತು ವಾರ ಕ್ರೌಂಡಾವರ್ತಿಯೂಯರೂ ವಿಮಾನಗಳು ಹಾರುತ್ತಲಿವೆಯೆ ಂಬ ಭ್ರಮೆ ಹುಟ್ಟಿಕೊಂಡಿದೆ. ಶ್ರೀಮತಿ ಗಾಂಧಿಯವರು ಈ ಮೊದಲೇ ತನ್ನ ಸಹ ಮಂತ್ರಿಗಳನ್ನು ವಿವಿಧ ದೇಶಗಳಿಗಟ್ಟಿ 'ಬಂಗ್ಲಾ' ಪ್ರಶ್ನೆಯನ್ನು ಜೆನ್ನಾಗಿ ವಿವರಿಸಿ ಅವರಿಂದ ಹೃದಯಪೂರ್ವಕ ಹಾಗೂ ಅರ್ಥ ಮೂಲಕ ಸಹಾನುಭೂತಿಗಳಿಸುವ ಪ್ರಯತ್ನ ಮೂಡಿದ್ದರೂ ಆದು ಮೂತಿನ ಸಹಾನುತಾಪಕಕ್ಕೇ ಸೀಮಿತವಾಗಿ ಪರಿಣಮಿಸಿದ್ದರಿಂದ ಸದ್ಯ ಶ್ರೀಮತಿಯವರೇ ದಿಗ್ವಿಜಯಕಾಂಕ್ಷಿಗಳಾಗಿ ಹೊರಟಿದ್ದಾರೆ. ಈ ಮೊದಲಿನ ಯಶಸ್ವಿಗಿಂತ ಈ ಬಾರಿ ತುಸು ಹೆಚ್ಚು ಯರ ಜೊರೆಯ ಬಹುದಷ್ಟೇ ಹೊರತು, ಪಾಕಿಸ್ತಾನದ ಕಿವಿ ಹಿಂಡುವುದಕ್ಕೆ ಅಮೆರಿಕೆ ಮೊದಲಾದ ಪ್ರಮುಖ ರಾಷ್ಟ್ರಗಳು ಇನ್ನೂ ಸಿದ್ಧವಿಲ್ಲ. ಬಂಗ್ಲಾ ಸಮಸ್ಯೆಯು ಪಾಕಿಸ್ತಾನದ ಆಂತರಿಕ ಪ್ರಶ್ನೆಯೆಂದು, ಇದರಲ್ಲಿ ಕೈಹಾಕುವುದು ಅನಪೇಕ್ಷಣೀಯ ಹಸ್ತಕ್ಷೇಪವಾಗುವುದೆಂದು ಅವರು ತಿಳಿದಿರುವುದು ನ್ಯಾಯವೇ. ಆದರೆ, ಪಾಕಿಸ್ತಾನದ ಈ ಆತಂರಿಕ ಪ್ರಶ್ನೆಯು ಭಾರತದ ಜನಜೀವನವ, ಅರ್ಥ ವ್ಯವಸ್ಥೆಯ ಮೇಲೆ ಪ್ರತಿಕೂಲ-ನಿಷರೀತ ಪರಿಣಾಮಗಳನ್ನು ನೂಡುತ್ತಿರುವಾಗಲೂ ಅದು ಅಂತರಿಕ ಪ್ರಶ್ನೆಯೊಗಿಯೇ ಉಳಿದಿರುವುದು ಹೇಗೆ ಸಾಧ್ಯ? ಆದುದರಿಂದಲೇ ಅದು ಅಂತಾರಾಷ್ಟ್ರೀಯ ಸಮಸ್ಯೆ. ಸಾಕ್ ಭಾರತಗಳ ನಿಮಿತ್ತ ರಾಷ್ಟ್ರಗಳು ಇಲ್ಲಿ ಮೂಡಬೇಕಾದ ಕಾರ್ಯ ಜಹಾರವಿದೆ: ಅವು ತಮ್ಮ ಕರ್ತವ್ಯಚ್ಯುತವಾದರೆ, ಉಭಯ ಪಕ್ಷಕ್ಕೂ ಹಾನಿ ತಟ್ಟುವುದು ನಿಲ್ಲದು.

ಶ್ರೀಮತಿ ಗಾಂಧಿಯವರು ವಿದೇಶಯಾತ್ರೆಗೆ ಹೊರಡುವುದಕ್ಕೆ ಮೊದಲು ಭಾರತ ಪಾಕ್ ಗಡಿಯಲ್ಲಿ ಸಮರದ ಭೀತಿ ತಲೆ ಹಾಕಿದೆ. ಪೂರ್ವ—ಪಶ್ಚಿಮ ಗಡಿಗಳೆರಡರಲ್ಲೂ ಖಾಕ್ ಸೇನೆ ಘಾಸಾಳ ಜನೆಯಾಗಿ ನಿಂತಿದೆ ಆಗಾಗ, ಬಾಂಬು, ಶೆಲ್‌ಗಳು ನಮ್ಮ ಭೂಪ್ರದೇಶಕ್ಕೆ ಸುಸುಳಿದ್ದೂ ಉಂಟು. ನಾಗರಿಕರ ವಿತ್ತ ಜೀವಿಗಳಿಗೆ ಹಾನಿ ತಟ್ಟಿದ್ದೂ ಉಂಟು. ಅಂದರೆ, ಇವೆಲ್ಲ ಅತ್ಯಾಚಾರ-ಅನಾಚಾರಗಳನ್ನು ನಾವು ಕೈಕಟ್ಟಿಕೊಂಡು ನೋಡುತ್ತಿದ್ದೇವೆಂದರ್ಥವಲ್ಲ ಒಂದೊಮ್ಮೆ ಪಾಕಿಸ್ತಾನವು ನಮ್ಮ ಮೇಲೆ ಯುದ್ಧವನ್ನು ಅಪ್ರಚೋದಿತವಾಗಿ ಸಾರಿದರೆ, ಅದು ಅನಿರೀಕ್ಷಿತವಾಗಬಾರದೆಂದು ಸಾಕಷ್ಟು ತಯಾರಿ ನಮ್ಮದೂ ನಡೆದಿದೆ ಯುದ್ಧದ ಸಕಲ ಸಿದ್ಧತೆಗಳೂ ಇಕ್ಕಟೆಯಲ್ಲೂ ನಡೆದಿದೆ; ಹೆಳೆಯೊಂದು ದೊರೆತಲ್ಲಿ ಆದು ಆರಂಭವಾಗಲಿದೆ. ಆದರೆ, ಯುದ್ಧದ ಆರಂಭ ಪಾಕಿಸ್ತಾನವೇ ಮೂಡಬೇಕಷ್ಟೆ: ನಾವಲ್ಲ. ಪಾಕಿಸ್ತಾನವು ಯುದ್ಧವಾರಂಭಿಸುವುದು ಹಗಲಿನಷ್ಟು ಸತ್ಯವೆಂಬ ಭಾವನೆಯನ್ನು ಕೇಂದ್ರಸರಕಾರವೂ, ಆಡಳಿತ ಪಕ್ಷವೂ ನಾನಾ ಪರಿಯೊಗಿ ಜನಮನದ ಮೇಲೆ ಬಿಂಬಿಸಹೊರಟಿವೆ; ಮತ್ತು ಈ ಯುದ್ಧದಲ್ಲಿ ನೋಲು ಪಾಕಿಸ್ತಾನಕ್ಕೇ ಎಂಬ ಭವಿಷ್ಯಕ್ಕೂ ಸಾಕಷ್ಟು ಪ್ರಚಾರ ಕೊಟ್ಟಿವೆ. ಸಮರ ಘೋಷಣೆಗೆ ಮೊದಲೇ ಸಮರ ಭೀತಿಯನ್ನು ಅವು ಹುಟ್ಟಿಸಿವೆ. ಶ್ರೀಮತಿ ಗಾಂಧಿಯವರು ರಾಷ್ಟ್ರಪತಿ ಸಂಗ್ರೀವಾಜ್ಞೆಯ ಮೂಲಕ ಸುಮಾರು 20 ಕೋಟಿ ರೂಪಾಯಿ ವರಮಾನ ಒರಿವಂತೆ ಸರ್‌ಭಾರ್ಜು ಹೊರಿಸಿದ್ದಾರೆ. ಇದು ಕೇವಲ ತಾತ್ಕಾಲಿಕ ಕ್ರಮವೆಂದು ಅರ್ಥ ಮಂತ್ರಿ ಚವನರು ಭರವಸೆ ನೀಡಿದ್ದಾರೆ. ಸುಮಾರು ಒಂಬಕೋಟಿಯ ಗಡಿಮುಟ್ಟಿದ ನಿರಾಶ್ರಿತರ ಪಾಲನೆ-ಪೋಷಣೆಗಾಗಿ ವ್ಯಯವಾಗುತ್ತಿರುವ ದಿನಾ ಎರಡು ಕೋಟಿ ರೂಪಾಯಿಗಳ ನಡುವೆ ಇದು ಒಂದು ತಿಂಗಳ ವೆಚ್ಚವಾಯಿತಷ್ಟೆ. ಉಳಿದ ಹನ್ನೊಂದು ತಿಂಗಳ ವೆಚ್ಚವನ್ನು ನಾವಿನ್ನು ಭರಿಸಬೇಕು. ಇಷ್ಟರಿಂದಲೇ ನಮ್ಮ ಆರ್ಥ ವ್ಯವಸ್ಥೆಯ ಮೇಲೆ ಬಂಗ್ಲಾದ ನರಮೇಧವು ಬೀರಿದ ಭೀಷಣ ಪರಿಣಾಮಗಳನ್ನು ಹಳ್ಳಿಗಾಡಿನ ಗೊಗ್ಗನೂ ಮನವರಿಕೆ ಮಾಡಿಕೊಳ್ಳುವುದು ಸಾಧ್ಯ. ಆದರೆ, ಅಮೆರಿಕೆಯಂತಹ ಬುದ್ಧಿವಂತ, ಸಂಪನ್ನ ರಾಷ್ಟ್ರಗಳ ಪರಿಷ್ಕಾರಿಗೆ ಇಷ್ಟೂ ಬುದ್ಧಿಬಾರದುಳಿದದ್ದು ಯೂಹ್ಯಾಖಾನನ ಅದೃಷ್ಟ; ಪಾಕಿಸ್ತಾನದ ದುರದೃಷ್ಟ.

ಶ್ರೀಮತಿ ಗಾಂಧಿಯವರು ಸದ್ಯ ಇದೇ ಸಂಗತಿಗಳನ್ನು ಅಮೆರಿಕಾದಿ ದೇಶಗಳ ಅಧಿಕಾರಲೋಲರಿಗೆ ತಿಳಿಸಿ ಹೇಳುತ್ತಾರೆ. ಅವರು ಕೇಳಿ ಸತ್ಯವನ್ನು ಕಂಡುಕೊಂಡರೆ, ಯೂಹ್ಯಾಖಾನರ ಮೇಲೆ ಬಂಗ್ಲಾ ಸಮಸ್ಯಾ ವರಿಹಾರಕ್ಕೆ ಒತ್ತಾಯ ಹೇರಿದರೆ, ಇದರ ಮುಂದೆ ಯೂಹ್ಯಾಖಾನರು ಮಣಿದರೆ, ಮುಂದೆ ವಾತಾವರಣ ತುಸು ಶಾಂತವಾಗ ಬಹುದು. ಹಾಗಾಗದೆ ಹೋದರೆ, ಭಾರತವು ಇನ್ನೆಷ್ಟು ಸಮಯ ನಿರಾಶ್ರಿತರನ್ನು ಸಾಕಬಲ್ಲುದು? ಒನ್ಪೊತ್ತಿಗೇ ಗತಿಯಿಲ್ಲದ ಕೋಟ್ಯಂತರ ವ್ಯಥೆಗಳು ನಮ್ಮ ದೇಶದಲ್ಲೇ ನವೆಯುತ್ತಿರುವಾಗ, ಅವರ ಉದ್ಧಾರವೇ ಭಾರತದ ಉದ್ಧಾರವೆಂದು ತಿಳಿದು ಬಡತನ ನಿರ್ಮೂಲನವನ್ನು ಇದುವರೆಗೆ ಬರಿಯ ಘೋಷಣೆಯಲ್ಲೇ ಹಿಡಿದು ಕುಳಿತ ನಾವು ಕಾರ್ಯಕ್ಕಿಳಿಯದೆ ಹೋದರೆ, ನಮ್ಮ ಬೆನ್ನು ಮೂಟೆ ಬಾಗಿ ಭೂತಲಶಾಯಿಯೊಗುವುದು ಸೂರ್ಯಕಿರಣಗಳಷ್ಟು ಸ್ಪಷ್ಟ. ಆದುದರಿಂದ ಶ್ರೀಮತಿ ಗಾಂಧಿಯವರು ತಮ್ಮ ಸಂಚಾರದಲ್ಲಿ ಯಾವುದಾವರೂ ಒಂದನ್ನು ನಿರ್ಧರಿಸಿಕೊಂಡೇ ಬರಬೇಕಾದೀತು—ಸಂಧಾನವೋ ಸಂಗ್ರಾಮವೋ ಎಂದು ಭಗವಾನ್ ಕೃಷ್ಣ ಕೇಳಿದಂತೆ. ಆದರೆ ಒಂದು ಮಾತು ನಿಜ. ಈ ಬೇಳೆ ಸಂಗ್ರಾಮವೇ ಘಟಿಸಿದರೆ, ಆದರೆ ರಂಗ ವಿಶ್ವವ್ಯಾಪ್ತಿಯೊಗುವುದೆಂಬುದನ್ನು ಮರೆಯಲಾಗದು. ಆದುದರಿಂದಲೇ ಈ ಸಂಬಂಧದಲ್ಲಿ ಎಚ್ಚರಿಕೆ—ಅತೀವ ಎಚ್ಚರಿಕೆ ಅತ್ಯಗತ್ಯ. ದುಡುಕಿನಿಂದಿಟ್ಟ ಒಂದು ಹೆಜ್ಜೆಯೂದರೂ ವಿಶ್ವ ನಾಶಕ್ಕೇ ನಾಂದಿಯೊದೀತು. ಇದನ್ನು ಗಮನಿಸಿಯೇ ಪ್ರಧಾನಿ ಗಾಂಧಿ ವಿಶ್ವ ಪರ್ಯಟನಕ್ಕೆ ಹೊರಟಿದ್ದಾರೆ; ಆಕೆಗೆ ತನ್ನ ಪ್ರಯತ್ನ ದಲ್ಲಿ ಯಶಸ್ಸು ಸಿಗಲಿ.

ಅಮೆರಿಕೆಗೆ ಆಘಾತ

ಶಾಂತ ಸಾಗರದ ಸುತ್ತಲಿನ ಬಿಕ್ಕಟ್ಟು ನಿವಾರಣೆಯೊಗಿ, ವಿಶ್ವಶಾಂತಿಗೆ ಪೂರಕ ವಾಗಬೇಕೆಂಬ ಇರಾದೆಯಿಂದ ಅಮೆರಿಕ ಪೂರ್ಣ ಚೀನಾಕ್ಕೆ ವಿಶ್ವಸಂಸ್ಥೆಯಲ್ಲಿ ಪ್ರವೇಶ ಬೇಕೆಂದು ಬಯಸಿತ್ತು. ಆಯಲ ಭಿಸಿಯೂ ಆಯ್ತು. ಆದರೆ, ಅಮೆರಿಕೆಯ ಆಶಯಕ್ಕೆ ವಿರುದ್ಧವಾಗಿ ತೈವಾನನ್ನು ಉಚ್ಚಾಟನೆ ಮಾಡಿದ್ದು ಮಾತ್ರ ಅಮೆರಿಕೆಯ ಹೃದಯಕ್ಕೆ ತುಂಬ ಆಘಾತವನ್ನುಂಟುಮಾಡಿದೆ. ತೈವಾನದೊಂದಿಗೆ ತಾನು ಹಲವಾರು ಒಡಂಬಡಿಕೆಗಳಿಗೆ ಬದ್ಧವಾಗಿರುವುದರಿಂದ ಅದಕ್ಕೆ 'ಎರಡು ಚೀನ' ನೀತಿಯನ್ನು ಬಿಟ್ಟು ಕೊಡುವುದು ಸಾಧ್ಯವಾಗಲಿಲ್ಲ; ಮುಂದೆಯೂ ತೈವಾನದೊಂದಿಗೆ ತನ್ನ ಸಮಧುರ ಸಂಬಂಧವನ್ನೆ ಉಳಿಸಿಕೊಳ್ಳಲು ನಿರ್ಧಾರ ಮಾಡಿರುವುದರಿಂದ ವಾಷಿಂಗ್ಟನ್—ಪೀಕಿಂಗ್‌ಗಳ ಸಂಬಂಧ ಹೇಗೆ ರೂಪುಗೊಳ್ಳುವುದೆಂದು ಹೇಳಬರುವುದಿಲ್ಲ ಸದ್ಯ, ತನ್ನ ನೆಲದಲ್ಲೇ ತನಗಾಗ ಅವಮಾನವನ್ನು ಅಮೆರಿಕೆ ತೀವ್ರವಾಗಿ ಪರಿಗಣಿಸಿದರೆ, ಬಹುಮತದ ನಿರ್ಣಯದ ಮುಂಪೆ ತಲೆಬಾಗಿದಂತೆ ತೋರಿಸಿಕೊಂಡರೂ, ವಿಶ್ವಸಂಸ್ಥೆಯ ಬಗ್ಗೆ ಆಸಕ್ತಿ ತೋರಿಸುವುದಿಲ್ಲವೆಂದು ನಂಬುವುದು ಕಷ್ಟ ಸಾಧ್ಯ. ಆರ್ಥಿಕ ನೆರವು ನೀಡುವಲ್ಲಿ ಸದಾ ತುದಿಗಾಲಲ್ಲಿ ನಿಂತುಕೊಂಡಿದ್ದ ಅಮೆರಿಕೆಯನ್ನು ಕೈಗಿಡ್ಡ ಮಾಡದೇ ಹೋದರೆ ತಡೆ ಆಶ್ಚರ್ಯ ಅಮೆರಿಕೆಯ ಕಾಂಗ್ರೆಸ್ಸಿನಲ್ಲಿ ಶಾಸನವೊಂದನ್ನು ಮಂಜೂರು ಮಾಡಿ 'ಸಹಾಯ ಕಡಿತ' ಸಾಧಿಸುವುದಕ್ಕೂ ಕೆಲವು ಸೆನೆಟರರು ಯೋಚಿಸಿದ್ದಾರೆಂದರೆ, ಇತಿಹಾಸ ಪ್ರಸಿದ್ಧ ನಿರ್ಣಯದಿಂದ ಅಮೆರಿಕೆಯ ಮನಸ್ಸಿಗೆ ಒರೆಯಿಲ್ಲದಂತಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ✪ ✪

ತಿದ್ದುಪಡಿ:- ಕಳೆದ ಸಂಚಿಕೆಯ (ತಾ. 28—10—71) ನಾಲ್ಕನೆ ಪುಟದಲ್ಲಿ ಪ್ರಕಟವಾದ ಎಡ್ವಕೇಟ್ ಬಿ. ಈಶ್ವರ ಭಟ್ಟರ, ಬೆಳ್ತಂಗಡಿ ಮುನ್ಸಿಫ್ ಕೋರ್ಟಿನ O. S. No. 128 1971 ನೋಟೀಸಿನಲ್ಲಿ ಪಾರಿಯ ಪೆಸರು "ಜಾತ್ಯಾಬಿ" ಎಂತ ಆಗುವ ಬದಲಿಗೆ ಪಾರ್ತಾಬಿ ಎಂತಲೂ ಶ್ರತಿವಾದಿಯ ಹೆಸರು "ರುಕ್ಕಾಬಿ" ಎಂತ ಆಗುವ ಬದಲು ಪುಕ್ಕಾಜೆ ಎಂತಲೂ ತಪ್ಪಾಗಿ ಪ್ರಕಟವಾಗಿರುತ್ತದೆ. ಈ ಬಗ್ಗೆ ವಿಷಾದಿಸುತ್ತೇವೆ.

ಗೇಪರರಾಜ್ಯದಲ್ಲಿ

ಬೇಕಿದೆ – ಪಟ್ಟಿ ಹೊಲಿಯುವ ಸಿಂಪಿಗ

"ಸಿನ್ಹೂನ ಎ ಎ ಸಿ ಯಲ್ಲಿ ಚುನಾವಣಾ ಸಮಿತಿಗೆ ತನ್ಮರ್ದಿಗಳನ್ನು ಆರಿಸಿದರಲ್ಲಾ

'ಹೌದೂಂತಂತೀನಿ '

'ಎನ್ರಿಲ್ಲಿ ಪ್ರಧಾನಿಯ ಆಶಯಕ್ಕೆ ವಿರೋಧವಾಗಿ ಚಂದ್ರಶೇಖರ್ ವಿಜಯಿಯಾಗ್ತಾರಂತಲ್ಲಾ ?'

'ಹ್ಞೂಂ ಅವ್ರು ವಿಜಯ ಏಖರವೇರಿದ್ದು ಹೌದು ಆದ್ರೆ, ಪ್ರಧಾನಿಯ ಇಚ್ಛೆಗೆ ವಿರುದ್ಧವಾಗೀಂತ ಯಾಕೆ ಹೇಳ್ಬೇಕು?'

'ಯಾಕೆ ಹೇಳ್ಬೇಕೂಂತಂದ್ರೆ, ಅವ್ರೂ ಅವ್ರ ಪೈಕವೊಂಡೂ ಚಂದ್ರಶೇಖರರ ಉಮೇದ್ವಾರಿಕೆಯನ್ನು ಬೆಂಬಲಿಸಲಿಲ್ಲ ಆದ್ರೂ ತವ್ರು ಗೆದ್ದು ಬಂದ್ರು '

'ಹುಡ್ಗಿಂ ತಿದ್ರಿಂದೇನಾಯ್ತು?'

'ಏನಾಯ್ತೂಂತಂದ್ರೆ ಪ್ರಧಾನಿ ಗಾಂಧೀ ಸೋಲಾಯ್ತು '

'ಆದ್ರೆ ನೋಡು, ಪ್ರಧಾನಿಗಾಂಧೀನೆ ಬಹಿರಂಗವಾಗಿ ಘೋಷಿಸಿದ್ದಾರಲ್ಲಾ–ಚಂದ್ರಶೇಖರರ ಗೇಲು ನನ್ನ ಸೋಲಲ್ಲವೆಂದು '

'ಅವ್ರು ಎಂದಾದ್ರೂ ಸೋತಿದುಂಟೆ?'

'ಇಳ್ಲಾನ್ನು ರಾಮಯ ಸ್ವಸ್ತಿ, ರಾವಣಾಯ ಸ್ವಸ್ತಿ '

'ಹಾಗಲ್ಲ'

'ಮತ್ತೆ?'

'ಶಖಾಯ ಸ್ವಸ್ತಿ, ಲವಣಾಯ ಸ್ವಸ್ತಿ '

'ಅಸ್ತು '

'ಅಸ್ತು ಅಲ್ಲ, ಬೇಸ್ತು '

'ಯಾರು?'

'ಮತ್ಯಾರು? ಇಂಡಿಕೇಟಿಗರು '

'ಯಾಕೆ?'

"ನೋಡಿ, ಪೈಕನೊಂಡಿನ ಆಟೆಗೆ ವಿರುದ್ಧ ಚಂದ್ರಶೇಖರ ಜೆಂಡು ಹುಟದು ನಿಂತದ್ದು, ಇದಕ್ಕೆ ಪಕ್ಷದೊಳಗ ಬೆಂಬಲ ದೊರೆತದ್ದು ಸುಳ್ಳಲ್ಲ ತಾನೆ?"

"ಅಮ ಹೇಗೆ ಸುಳ್ಳಾದೀತ?"

'ಅಂದ್ರೆ ಪೈಕವೊಂಡಿನ ಆದೇಶವನ್ನು ಮೀರುವ ಬಂಡುಗಾರರ ಒಂದು ಗುಂಪು ಇಂಡಿಕೇಟನೊಳಗೇನೇ ಹುಟ್ಟಕೊಂಡಿದೆ ಯೆಂಬುದು ಖಾತ್ರಿ

"ಹ್ಞೂಂ ಹಾಗೇನೂ ಇಲ್ಲಾಂತಂತಾರೆ ಆದ್ರೂ ಒಪ್ಪಿಕೊಳ್ಳೋಣ "

"ಒಲ್ರಿ, ತನ್ನ ಪಾಲಿಗೆ ಸೂರ್ಯನೇ ಇಲ್ಲಾಂತಂದ್ರೆ ಅದು ಸತ್ಯವಾಗುದುಂಟೇನು?"

'ಅದ್ಕೇ ಅಂದದ್ದಲ್ಲ, ಒಪ್ಪಿಕೊಳ್ಳೋಣ ಅಂತ '

'ಸರಿ ನೋಡಿ, ಉನ್ನತ ನಾಯಕರ ವಿರುದ್ಧ ಬಂಡೇಳುವುದನ್ನ ಪ್ರಧಾನಿ ಗಾಂಧಿಯವರೇ ಹೇಳಿಕೊಟ್ಟರು ಈಗ ಅದು ಅವರಿಗೇ ಮುಳುವಾಗಿ ಪರಿಣಮಿಸ ತೊಡಗಿದೆ '

'ಅಲ್ವೆ, ಪ್ರಧಾನಿ ಗಾಂಧಿಯೆಲ್ಲಿ ಬಂಡೆದ್ದಿದ್ದಾರೆ? ಸಿಂಡಿಕೇಟಿನ ಮುಷ್ಟಿಯೊಳಗಿನಿಂದ ಕಾಂಗ್ರೆಸ್ಸನ್ನು ಬಂಧ ಮುಕ್ತಗೊಳಿಸಿ ಶ್ರೀ ಸಾಮಾನ್ಯನ ಕೈಗಳಿಗೆ ಒಪ್ಪಿಸಿದ್ದಾರೆ.. '

'ಹೌದೂನ್ನಿ, ಈಗ ಆಕೆಯೂ ಕಾಂಗ್ರೆಸ್ಸನ್ನು ತನ್ನ ಕಪಿಮುಷ್ಟಿಯೊಳಗೆ ತುರುಕಿಕೊಳ್ಳಲೆಸಿ ಸೋಲುತಿದ್ದಾರೆ '

'ಛೆ ಟಿ ಇದಾಕೆಯ ಸೋಲಲ್ಲ ಜನತಂ ಜನಾರ್ಧನನ ನಿರ್ಧಾರ ಅವರ ಮುಂದೆ ಆಕೆ ಸದಾ ಲವನತೆ ಶಿರೆ '

'ಅದಕ್ಕೇನು ಹೆಸರಾದರೂ ಕೊಡಿ ನೋಡಿ, ಆಂಧ್ರಪ್ರದೇಶದಲ್ಲಿ ರೆಡ್ಡಿಯ ಗದ್ದುಗೆಯ ಮೇಲೆ ನರಸಿಂಗರಾಯರನ್ನು ಕೂರಿಸಿದರೂ ತೆಲಂಗಾಣ ಪ್ರಜಾಸಮಿತಿಯನ್ನು ತನ್ನ ವಿಶಾಲೋದರದಲ್ಲಿ ಸಮಾವೇಶಗೊಳಿಸಿದರೂ ಮೂಯೆ ಕಾಡುವುದು ಬಿಡಲಿಲ್ಲ ''

'ಏನು ಮಾಡುವುದು? ಕೆಲವೊಮ್ಮೆ ಹಾಗೆ ಆಗುವುದೂ ಇದೆ . '

'ರೆಡ್ಡಿ ಸಂಪುಟಕ್ಕಿಂತ ತನ್ನ ಸಂಪುಟ ಸಣ್ಣದಿರುವುದೆಂದು ರಾಯರು ಸಾರಿದರೂ ಎಲ್ಲರನ್ನೂ ತೃಪ್ತಿ ಪಡಿಸುವ ಸಲುವಾಗಿ ಅದು ವಿಶಾಲಕಾಯವಾಯ್ತು '

'ಹೂಂ ಆದ್ರೆ ತಪೂಶೆಯೆಂಪ್ರೆ, ಹಾಗಾದ್ರೂ ಸಮಸ್ಯೆ ಸಮಸ್ಯೆಯಾಗಿಯೇ ಉಳಿದು ಬಿಟ್ಟಿತು '

'ಮತ್ತೆ ನೋಡಿ. ಮಹಾರಾಷ್ಟ್ರದ ವಿಪಿ ನಾಯಕರಿಗೆ ಅಧಿಕಾರ ಬಿಡಲು ನೋಟೀಸು ಜ್ಯಾರಿಯೂಗಿದೆ ಆವರಿನ್ನೂ ಅಲ್ಲಿ ಉಳಿದಿರುವುದಾದರೆ, ಅವರ ಉತ್ತರಾಧಿಕಾರಿ ಯಾರಾಗಬೇಕೆಂಬ ಬಗ್ಗೆ ಪ್ರಧಾನಿ—ಜವನರಲ್ಲರುವ ಭಿನ್ನಮತ '

ಹ್ಞೂಂ ಮಹಾರಾಷ್ಟ್ರವನ್ನು ಚವನರ ಕೈಗಳಿಂದ ಬಿಡಿಸಿ ತನ್ನ ನೇರ ಹತೋಟಗ ತಂದುಕೊಳ್ಳಬೇಕೆಂದು ಶ್ರೀಮತಿ ಗಾಂಧಿಯಿಂಗಿತ ಮಂಠಾರಾವಾಡದವರೇ ಮುಂದಿನ ಮುಖ್ಯಮಂತ್ರಿಯೂಗುವುದೂ ಆಗ ವಿದರ್ಭ ಚಳುವಳಿ ತೀವ್ರವಾಗುವುದೂ ಸ್ವಾಭಾವಿಕ '

"ಒರಿಸ್ಸಾದ ಕತೆ ಮತ್ತೇನೂಂತ? ಮೊನ್ನೆ ಮಾನ್ನೆ ವಿಧಾನ ಸಭೋಪ ಚುನಾವಣೆಗಳಲ್ಲಿ ಘಟಪಟ ಹಾರಿ ಹೋಯ್ತಲ್ಲ ಇಂಡಿಕೇಟು '

'ಅಲ್ವೆ, ಅಧಿಕೃತ ಅಭ್ಯರ್ಥಿಯ ವಿರುದ್ಧವಾಗಿ ಇಂಡಿಕೇಟಿಗರೇ ಪ್ರಚಾರನೂಡಿದ್ರಂತಲ್ಲಿ !'

'ಅಂದ್ರೆ ಅಲ್ಲೂ ಬಂಡಾಯದ ಸೂಚನೆ ಬಂತೂಂತಾಯ್ತಲ್ಲ' ಮದ್ಯ ಪ್ರದೇಶದಲ್ಲೂ ಇದೇ ಕತೆ'

'ಪೂಜೆ ಮುಖ್ಯಮಂತ್ರಿ ಡಿ ಪಿ ಮಿಶ್ರರ ವಿರುದ್ಧ ಶ್ಯಾಮಚರಣ ಶುಕ್ಲರು ಎಮ್ಮೆಲ್ಲೆಗಳನ್ನು ಎತ್ತಿ ಕಟ್ಟಿ, ತಾನೇ ಮುಖ್ಯ ಮಂತ್ರಿಯೂದರು '

'ಇದು ನಡೆದದ್ದು ಯಾವಾಗ? ಕಾಂಗ್ರೆಸ್ಸು ಹೋಳಾಗುವುದಕ್ಕೆ ಮೊದಲು ಇದಕ್ಕೆಸಿಂಡಿಕೇಟೇ ಕಾರಣವೆಂದು ನಂಬಿ ಮಿಶ್ರರು ಇಂಡಿಕೇಟನಲ್ಲಿ ನಿಷ್ಠೆ ತೋರಿದ್ದರು '

'ಪೌದೂನ್ನು ಈಗ ಮಿಶ್ರ–ಶುಕ್ಲ ಬಣಗಳು ಬಲವಾಗಿನೆ ಪರಸ್ಪರ ಆರೋಪ ಪ್ರತ್ಯಾರೋಪಗಳ ಜಡಿಮಳೆ ನಡೆದಿದೆ '

'ಅಲ್ರಿ, ರಾಜಿಪಂಚಾತಿಕೆ ನಡೆಯುತ್ತಿದೆಯಲ್ಲ?'

'ಹ್ಞೂಂ ಇವ್ರಂತೆ ಹಲವಾರು ಮಂತ್ರಿಗಳು ರಾಜೀನಾಮೆ ನೀಡಿದ್ದಾರೆ ಉಳಿದವರೂ ಕೊಡಬಹುದೂನ್ನು ಶುಕ್ಲರು ಸಂಪುಟವನ್ನು ಪುನರ್ಘಟಿಸಲು ಮುಂದಾಗಿದ್ದಾರೆ ಮಿಶ್ರಾರ ಬಣಕ್ಕೆ ಬಗ ಹೆಚ್ಚಿನ ಪಾಲು ದೊರೆಯಲೆ' ಬೇಕು ಹಾಗಿದ್ದರೂ ಮುಂದಿನ ಚುನಾವಣೆಗಳ ನಂತರ ಶುಕ್ಲಾರಿಗೆ ಅರ್ಧಚಂದ್ರ ಪ್ರಯೋಗ ಅನಿವಾರ್ಯವಾದೀತು '

'ಅಂದ್ರೆ ಮಿಶ್ರ ಮತ್ತೆ ಮುಖ್ಯಮಂತ್ರಿಯೂಗ್ತಾರೆಯೆ?'

'ಆವ್ರೇ ಯಾಕಾಗಬೇಕು? ಅವ್ರ ಪೆಸರಲ್ಲಿ ಪಾಪೆಯೊಂದನ್ನು ಕೂರಿಸಿದರೂ ಅದು ಕಾರುಬಾರು ನೂಡುತ್ತದೆ ಮತ್ತೆ ನೋಡು, ಕರ್ನಾಟಕದ ಕಥೆಯಂತೂ ತೀರ ಹಳೆಯದು '

(ಬಂಭತ್ತನೆ ಪುಟ ನೋದಿರಿ)

ಚಾರುಚಯನ —

ಸಂಯುಕ್ತರಾಷ್ಟ್ರ ಸಂಸ್ಥೆಯಲ್ಲಿ

ಅಮೆರಿಕೆಯ ಗದ್ದಾಣ ಕುರುಡಾಯ್ತು

೧೯೭೧ ಸಂಯುಕ್ತರಾಷ್ಟ್ರ ಸಂಸ್ಥೆಯ ಇತಿಹಾಸದಲ್ಲಿ ಮಹತ್ವದ ವರ್ಷ. ತನ್ನ ಜನ್ಮದಿಂದಲೂ ಮಾಡುತ್ತಲೇ ಬಂದ ಘೋರಾಪರಾಧವನ್ನು ಅದು ತಿದ್ದಿಕೊಂಡ ಅಮೃತ ವರ್ಷ.

ಚಿಯೊಂಗ್ ಕೈ ಶೇಕರು ಚೀನಾದಿಂದ ಸ್ಥಾನೋತ್ಸಾಕ್ಕೆ ಓಡಿಬಂದು ಆಲ್ಲೇ ತನ್ನ ಬೇರನ್ನು ಬಹಳ ಆಳಕ್ಕೆ ಬಿಟ್ಟು ಎರಡು ದಶಕಗಳು ಮಿಂದಿದುವು. ಚೀನಾವಲ್ಲಿ ಮಾವೊ-ತ್ಸೆ ತುಂಗರ ನೇತೃತ್ವದಲ್ಲಿ ಕಮ್ಯುನಿಸ್ಟ್ ಸರಕಾರ ರಚನೆಯಾಗಿಯೂ ಅಷ್ಟೇ ಸಮಯ ಕಳೆಯಿತು. ವಾಸ್ತವವಾಗಿ ಜನತಾ ಚೀನಾಕ್ಕೆ ಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಸ್ಥಾತಿನಿಧ್ಯ ಬೇಕಿತ್ತು; ಆದರೆ, ಪಾಶ್ಚಾತ್ಯರ ಕುಂಟು ರಾಜ್ಯಕೀಯದ ಮುಂದ ದೃಷ್ಟಿಗೆ ಜನತಾ ಚೀನಾ ಗೋಚರವಾಗಲಿಲ್ಲ ಪೀಕಿಂಗಿನ ಬದಲು ಅವರು ತೈಪೆಯನ್ನೇ ಚೀನಾವೆಂದು ಹೇಳಿದರು.

ಜಗತ್ತಿನ ಜನರಲ್ಲಿ ಏವರಿಗೊಬ್ಬನಿರುವ ಜನತಾ ಚೀನವನ್ನು ಪಾಶ್ಚಾತ್ಯ ರಾಷ್ಟ್ರಗಳು ಕಣ್ಣಿದ್ದ ಕುರುಡರಂತೆ ನೋಡಿದುವು. ಕಮ್ಯುನಿಜಂ ವಿರೋಧ ವೊಂದು ಕಡೆ; ಚಿಯೊಂಗ ಮೋಹ ಇನ್ನೊಂದೆಡೆ ಅವರನ್ನು ತಿಪ್ಪರಲಾಗ ಹಾಕಿಸಿದುವು. ತೈಪೆಗೆ ಸರ್ವಪ್ರಕಾರದ ಆರ್ಥಿಕ— ಸೈನಿಕ ನೆರವು ವಾಶಿಂಗಟನ್ನಿನಿಂದ ಬಾರದೆ ಇರುತಿದ್ದರೆ, ಚಿಯೊಂಗರ ತೈವಾನಮೆಂಬೋ ಜನತಾಚೀನೋದರದಲ್ಲಿ ಸಮೂವೇಶಗೊಳ್ಳುತಿತ್ತು.

ಪ್ರಪಂಚದ ಬಹುಸಂಖ್ಯಾತ ಪ್ರಜೆಗಳನ್ನು ಪ್ರಾಪಂಚಿಕ ಸಂಸ್ಥೆಯಿಂದ ದೂರವಿರಿಸುವುದು ಸಂಯುಕ್ತ ರಾಷ್ಟ್ರ ಸಂಸ್ಥೆಯ ಆರೋಗ್ಯಕ್ಕೆ ಉತ್ತೇಜಕವಲ್ಲ; ಶಾಂತಿಗೆ ಸಹಕಾರಿಯಲ್ಲ; ಸಹ ಅಸ್ತಿತ್ವಕ್ಕೂ ಅದು ಪ್ರೇರಕ ಶಕ್ತಿಯಲ್ಲ.

ಈ ಸಂಗತಿಯನ್ನು ಮೊದಲಿಗೆ ಕಂಡುಕೊಂಡವರು ಶಾಂತಿದೂತ ವಿಶ್ವನಾಯಕ ಪಂ. ಜವಾಹರಲಾಲ ನೆಹರು, ಅವರು ಜನತಾ ಚೀನಾವನ್ನು ಸಂ. ರಾ. ಸಂಘಕ್ಕೆ ಸೇರಿಸಿಕೊಳ್ಳಬೇಕೆಂದು ಬಹಳವಾಗಿ ಪ್ರತಿವಾದಿಸಿದ್ದರು. ಚೀನಾ—ಭಾರತ ಭಾಯಿ ಭಾಯಿ ಎಂದು ಆಕಾಶದೆತ್ತರಕ್ಕೆ ಘೋಷಿಸುವ ಗುಂಗಿನಲ್ಲಿ ಅವರು ಪೀಕಿಂಗಿಗೆ ಹೋಗಾದರೂ ಅಲ್ಲಿ ಸ್ಥಾನ ದೊರಕಿಸುವ ಬಗ್ಗೆ ಭಗೀರಥ ಪ್ರಯತ್ನವನ್ನೇ ಮಾಡಿದ್ದರು.

ಮುಂದೆ ಚೀನಾ ಭಾರತ ಭಾಯಿ ಭಾಯಿ ಹೋಗಿ ಕೈ-ಕೈ ಅರಂಭಗೊಂಡಾಗ, ಪಂ. ನೆಹರು ಅಪ್ರತಿಭರಾದದ್ದು ಸಹಜ. ಆದರೂ ಪೀಕಿಂಗಿಗೆ ಯುಕ್ತರಾಷ್ಟ್ರ ಸಂಘದಲ್ಲಿ ಪ್ರವೇಶ ನೀಡುವ ಬಗೆಗೆ ಭಾರತ ಮೌನವಾಯ್ತೇ ಹೊರತು ವಿರೋಧಿಸಲಿಲ್ಲ. ಶತ್ರು ಮಿತ್ರರಲ್ಲಿ ಪಂ. ನೆಹರುರದ್ದು ಸಮದರ್ಶನ.

ಮುಂದೆಯೂ ಅಷ್ಟೆ ಸೋವಿಯತ್ತಿಗೂ ಕೆಂಪು ಚೀನಾಕ್ಕೂ ವಿವಾದವೆದ್ದ ಬಳಿಕ ಈ ಸಂಬಂಧ ಆಲ್ಬೇನಿಯಾಕ್ಕೆ ನಾಯಕತ್ವ ಕೆಂಪು ಚೀನಾಕ್ಕೆ ಪ್ರಾತಿನಿಧ್ಯ ನೀಡಲು ಪ್ರಬಲ ವಿರೋಧಿ ಅಮೆರಿಕೆ. ಅದು ಕೂಪಮಂಡೂಕ. ತೈಪೆಯೇ ಅದಕ್ಕೆ ಬೃಹತ್ ಚೀನಾ.

ಇತ್ತೀಚೆಗೆ ಅಂದರೆ ಸರಿಸುಮಾರು ಮೂರು ನೂರು ತಿಂಗಳುಗಳಿಗೆ ಮೊದಲು ಅಮೆರಿಕೆಯ ನೀತಿ ಏರುಪೇರು. ಕಾರಣ ಬಲ್ಲವರು ನಿಕ್ಸನ್ ನೂತ್ರ. ಎರಡನೆಯವರಿದ್ದರೆ, ಕೇಸಿಂಗರ್ ವಾಶಿಂಗಟನ್ ಪೀಕಿಂಗಿಗೆ ಸ್ನೇಹ ಹಸ್ತ ನೀಡಿತು. ಪೀಕಿಂಗು ತನ್ನ ಕೈಮಿಲಾಯಿಸಲು ಒಪ್ಪಿತು. ಯಾವ ತಳಹದಿ? ಯಾವ ಉದ್ದೇಶ್ಯ? ಪ್ರಾಯಃ ಈ ಬಗ್ಗೆ ಇಬ್ಬರೂ ಅನಭಿಜ್ಞರು.

ನಿಕ್ಸನ್ನರ ನೀತಿಯಿಂದ ತೈಪೆ ಕ್ರಿಶಂಕುವಿಗೆ ತನ್ನನ್ನು ಸಾಕಿಸಲಹಿದ ವಾಶಿಂಗಟನ್ನು ತನ್ನ ಶತ್ರು ಸವತಿಯನ್ನು ಅಪ್ಪಿಕೊಳ್ಳಲು ಮುಂದು. ಆಗ ತನ್ನ ಗತಿ?

ನಿಕ್ಸನ್ನರ ಭರವಸೆ-ಬೆದರ ಬೇಡಿ, ಬೆಚ್ಚ ಬೇಡಿ, ಕಳವಳ ಪಡಬೇಡಿ. ನಿಮ್ಮನ್ನು ಮೊದಲಿನಂತೆಯೇ, ಯಾಕೆ, ಅದಕ್ಕೂ ಮಿಗಿಲೆನಿಸುವ ರೀತಿಯಲ್ಲಿ ಯೂವಜ್ಞನ ಪರಿಪಾಲಿಸಿಕೊಂಡು ಬರುತ್ತೇವೆ.

ಮುಳುಗುವವನಿಗೊಂದು ಹುಲ್ಲುಕಡ್ಡಿ ಇದರಿಂದಲೇ ಆಡ್ಡಾದಿಡ್ಡಿ.

ಪೀಕಿಂಗ್ ಸಾರಿತು. ನಿಮ್ಮ ಎರಡು ಹೆಂಡಿರ ನೀತಿ ನಮಗೆ ಆಗದು. ಒಂದೇ ತೈಪೆ, ಇಲ್ಲ ಪೀಕಿಂಗ್. ನಾವು ಬರಬೇಕಾದರೆ, ತೈಪೆ ಮನೆ ಬಿಟ್ಟು ಹೊರಡಲೇ ಬೇಕು. ಪೀಕಿಂಗು ಅವಿಚ್ಛಲಿತ. ನಿಕ್ಸನ್ ಸಂತಾಡಿತ.

ಆಲ್ಬೇನಿಯೂಪ ನಿರ್ಣಯವ ಮೇಲೆ ಅಮೆರಿಕನ್ ತಿದ್ದಪಡಿಗಳು. ಕೆಂಪು ಚೀನವೂ ಬರಲಿ; ತೈಪೆಯೂ ಉಳಿಯಲಿ. ಹೊಸ ಹೆಂಡತಿಯ ಸ್ವಾಗತದ ಭರವಲ್ಲಿ ಹಳೆಯ ಹೆಂಡತಿಯನ್ನದು ಮರೆಯಲಿಲ್ಲ, ತೈಪೆ, ಧನ್ಯ.

ಮೊದಲೆದ್ದ ಕವಿಗಳಿಗಿಂತ ಮುಂದೆ ಮೂಡಿದ ಕೊಂಬುಗಟ್ಟಿ. ವಿಶ್ವ ಸಂಸ್ಥೆಯ ಸ್ಥಿಪ್ರೇಸ್ಥಾನದ ಸಣ್ಣ ಪುಟ್ಟ ಇಂದು—ನಿನ್ನೇ ಸ್ವತಂತ್ರನಾವೆ ದೇಶಗಳದ್ದೇ ಸ್ವಾಬಲ್ಯ. ಇವುಗಳ ಹುಡುಗಾಟಿಕೆಯಿಂದ ತೈಪೆ ತವುಟ್. ಅದನ್ನು ಬಹು ಸಂಖ್ಯಾಕರು ಕತ್ತು ಹಿಡಿಮು ಹೊರದಬ್ಬಿದರು.

ಕೆಲವರು ಈ ಯುವ ನೀತಿಯನ್ನು ಖಂಡಿಸಿ ತೈಪೆಯನ್ನು ಬಮಕಿಸಲು ಹೆಣಗಾಡಿದರು. ಆದರೇನು, ಅವರದ್ದು ಅಲ್ಪ ಬಲ.

ಇನ್ನು ಕೆಲವರು ಈ ಹೊಸ ನಾಟಕವನ್ನು ಮಿಕಿ ಮಿಕಿ ನೋಡುತ್ತಲೇ ಕುಳಿತರು.

ತೈಪೆ ಹೊರ ಹೋಯ್ತು. ಕೆಂಪು ಚೀನಾವನ್ನು ಸ್ವಾಗತಿಸಲು ವಿಶ್ವಸಂಸ್ಥೆ ತೋರಣಕಟ್ಟಿ ಕಾದು ಕುಳಿತಿತು.

ಕೆಂಪು ಚೀನಾದ ತ್ವರಿತ ಪ್ರತಿಕ್ರಿಯೆ ಶೂನ್ಯ.

ಇದಕ್ಕೆ ವಿಧ್ಯುಕ್ತವೆಗೆ ವಿಶ್ವ ಸಂಸ್ಥೆಯ ಪ್ರಾತಿನಿಧ್ಯವನ್ನು ಅದು ಹಾರ್ದಿಕವಾಗಿ ಬಯಸುತ್ತಿದೆಯೆ? ಇದನ್ನು ಸ್ವೀಕರಿಸುವುದರಿಂದ ಅದಕ್ಕೇನು ಲಾಭ?

ಮತ್ತಾವ ಲಾಭವೂ ದೂರಗೋಚರ. ವಿಶ್ವ ಸಂಸ್ಥೆಯು ತೈಪೆಗೆ ನೀಡಿದ್ದ ಮನ್ನಣೆಯನ್ನು ಹಿಂತೆಗೆದುಕೊಂಡದ್ದರಿಂದ ಅದು ರಾಷ್ಟ್ರವೇ ಅಲ್ಲ. (ಅದು ಕೆಂಪು ಚೀನಾದ ಒಂದು ಭಾಗ?)

ಬಂಗ್ಲಾದೇಶದಲ್ಲಿ ಯೂಹ್ಯಾಖಾನರ ವಿಯತನಾಮದಲ್ಲಿ ನಿಕ್ಸನ್ನರ ನರಮೇಧಗಳ ಸಾಲಿನಲ್ಲಿ ತೈವಾನದಲ್ಲಿ ಮಾವೋ:ಯೂಗಳ್ಕೆ ತೊಡಗುವರೆ?

ಅನ್ಯಾಯವನ್ನು ಅನ್ಯಾಯವೆಂದು ಕರೆಯಲು ಹಿಂಜರಿವ ಸಂಯುಕ್ತರಾಷ್ಟ್ರ ಸುಳಿದಿಂದ ಯಾವ ಸಾಧನೆಯೂಡೀತು?

ಒಂದು ಸಂಗತಿ ಸುನೀಶ್ಚಿತ. ಸಂಯುಕ್ತರಾಷ್ಟ್ರ ಸಂಘದಲ್ಲಿ ಪೂರ್ವದ ಗಾಳಿ ಬಲವಾಗಿ ಬೀಸತೊಡಗಿದೆ. ಇದರಿಂದ ಪಶ್ಚಿಮಕ್ಕೆ ತೀವ್ರ ಅಸಮಾಧಾನ.

ಇದು ಒಳ್ಳೆಯದಕ್ಕೋ ಕೆಟ್ಟದ್ದಕ್ಕೋ ಕಾದು ನೋಡ ಬೇಕಷ್ಟೆ.

ಇಪ್ಪತ್ತೆರಡು ವರ್ಷಗಳ ಸುದೀರ್ಘ ಹೋರಾಟದಲ್ಲಿ ಪೀಕಿಂಗು ಅಯಾಚಿತನಾಗಿ ವಿಜಯ ಪಡೆಯಿತು. ನವದೆಹಲಿಯು ಕನಸು ನನಸಾಯಿತ್ತು.

●●

ಏದು

In the Court of the Assistant Registrar of Co-operative Societeis,
PUTTUR.

EXNSR. 157/69-70

Sri. M. Ishwara Bhat, S/o. Sri. Ganapathi Bhat, Siddavana, Ujre village, P.O. Ujre, Belthangady Taluk.

—Claim petitioner.

Vs—

Golithattu Service Co-op. Society Ltd. --Respondent.

NOTICE

The claim petition dated: 12-1-1971 filed under Rule 41 of the Mysore Co-operative Societies Rules 1960, is posted by me for hearing on 8—11—1971 at 10 A.M. in the office of the Assistant Registrar of Co-operative Societies, Puttur. The petitioner should appear on that date and produce the necessary documents in support of the claim failing which, the petitioner will be decided exparte and the petition disposed off on merits. The respondent should also be present on that date to defend the case of the Society.

Given under my hand this 27th day of October 1971.

(Sd.....)
Senior Sale Officer of
Cooperative Societies,
Puttur sub-division.

To

The Petitioner
and
the Respondent.

ನಿಮಗೆ ಬೇಕಾಗುವ
ಸುಲಕ್ಷಣವಾದ, ನೀಲಿಸ್ಪಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಕೊಲಿಟಿಯಲ್ಲಿ, ಸ್ಯಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ
ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರೆಟ ತೂಕದಲ್ಲಿ
ಮುಂದಾಗಿ ನನ್ನಿಂದ ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್
ರಥಬೀದಿ—ಉಡುಪಿ, ದ. ಕ.

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ದ್ರಾವಿಡ ಮುನ್ನೇಟ್ರ ಕಳಗಮಿನ ಪ್ರಾಮಾಣಿಕತನ

ಸಂಸದಿನಲ್ಲಿ ಅರ್ಧಅಮಾತ್ಯ ಯರಪಂತರಾಯ ಭವಾನರು ಇಂದಿರಾಜೀಯವರ ಅರ್ಥ ಸಂಕಲ್ಪವನ್ನು ಮುಂಡಿಸಿದಾಗ 'ಆತ್ಮಘಾತುಕ', 'ವಂಚನೆ', 'ಸುಳ್ಳು' ಮುಂತಾದ ಮುಳ್ಳು ಮಾತುಗಳು ಕೇಳಿ ಬಂದುವು. ಇವನ್ನು ಇಂದಿರಾ–ವಿರೋಧಿ ಪಕ್ಷಗಳು ಹೇಳುತ್ತಿವೆಲ್ಲಿ ಎಂದಿನ ಟೀಕಾಸ್ತ್ರವೆಂದು ಸುಮ್ಮಗುಳಿಯಬಹುದು. ಆದರೆ ಇಂದಿರಾಜಿಯವರೊಂದಿಗೆ ಸೇರಿಕೊಂಡು ಚುನಾವಣಾ ಜಿಂಡಮೂರುತವನ್ನೆಮರಿಸಿರುವವೇ ಹೇಳುವಾಗ ಸ್ಥಂಭೀಭೂತರಾಗುವಷ್ಟು ನಮ್ಮ ಸಜ್ಜನಿವೆ. ಇಂದಿರಾಜೀಯವರ ಆಸನ ಸಹವಿವ್ತ ಪಾಗೂ ಆಸರೆ ಇತ್ತಿದ್ದ ಕಮ್ಯೂನಿಸ್ಟ್ ಪಕ್ಷ, ದ್ರಾಮುಕೆ, ಮುಸ್ಲಿಂ ಲೀಗು ನಮ್ಮಾ ಬೇಕೆಸಲು ಮುಂದೆ ಬಂದಿವೆ. ಆದರಲ್ಲಿ ದ್ರಾ.ಮು.ಕ.ವು ಬಹಳ ಮುಂದಕ್ಕೆ ದುಮುಕಿದೆ. ರಾಜ್ಯ ಸಭಾ ಸದಸ್ಯ ತಿರು ಅಪ್ಪಾಸ್ವಾಮಿಯವರು, ಪ್ರಧಾನಿಯವರ ಹಾಗೂ ಅರ್ಥ– ಅಮಾತ್ಯರ ಕೃಪಾಕಟಾಕ್ಷಕ್ಕೆ ಕಾತುರರಾಗಿರುವವರು ಅರ್ಥ—ಸಂಕಲ್ಪದಿಂದ ಸಂತೋಷ ಹೊಂದಿದ್ದಾರೆಂದು ಹೇಳಿ, ಇದು ಅತ್ಯಘಾತುಕ ಅರ್ಥ–ಸಂಕಲ್ಪವೆಂದು ನಾರಿದರು. ಸೋಷ್ಯಾಲಿಸಂ! ವಿಮಾನಗಳಲ್ಲೇ ಪ್ರಯಾಣಮಾಡಲು ಬಯಸುವ, ಹೆಚ್ಚೆಜ್ಜು ವರಮಾನ ಯೂಚಿಸುತ್ತಿರುವ ಸಂಸತ್ ಸದಸ್ಯರು ಸಮಾಜವಾದದ ಕುರಿತು ಮಾತಾಡುವುದೇ! ಅಪ್ಪಾ ರಾವರಿಗೆ ಇಂಥ ಆಶ್ಚರ್ಯವಾಯಿತು. 'ಧನಿಕಂಗಳ ವ್ಯಾಮೋಹಿಕ ರಾಜನೀತಿ ನಿಪುಣರಾಗಿಲು ಸಾಧ್ಯವಾಗದಿದ್ದಲ್ಲಿ, ಕೊನೆಯ ಪಕ್ಷ ವ್ಯಾಮೋಹಿಕ ರಾಜಕಾರಣಿಗಳಾಗಲಾದರೂ ನಾವು ಪ್ರಯತ್ನಿಸೋಣ" ಎಂದು ಅಪ್ಪನ್‌ರವರು ಅಂದು ಕೇಳಿಕೊಂಡರು.

ಸುಖ ಲಾಲಸೀ ಸಂಸತ್ ಸದಸ್ಯರು ಸಮಾಜವಾದದ ಕುರಿತು ಮಾತಾಡುವುದು! ದ್ರಾ.ಮು.ಕ. ಸದಸ್ಯ ವ್ಯಾಮೋಹಿಕತನದ ಕುರಿತು ಮಾತಾಡುವುದು! ಆಶ್ಚರ್ಯ, ಆತ್ಯಾಶ್ಚರ್ಯ! ಆದರೂ ಇಂದಿಷ್ಟಾರಲ್ಲಾ!

ದ್ರಾ. ಮು. ಕ. ಧುರೀಣರು ತಮ್ಮ ಪಕ್ಷ ಆಡಳಿತ ಲಗಾಮನ್ನು ಹಿಡಿದುಕೊಳ್ಳುವ ಪಕ್ಷನಾಗುತ್ತದೆನ್ನುವ ಭ್ರಮೆಯಿಲ್ಲಾದರೂ ಇದ್ದವೇನು? ಅಂತಹ ಸಮಯದಲ್ಲಿ ಕಾಂಗ್ರೆಸ್ಸಿನ ಮೇಲಿನ ಹಟವನ್ನು ತೀರಿಸಿಕೊಳ್ಳುವ ಛಲದಿಂದ ರಾಜಗೋಪಾಲಾಚಾರಿಯವರು ಅಣ್ಣಾದೊರೈಯವರೊಂದಿಗೆ ರಾಜಿಮಾಡಿಕೊಂಡರು. ಕಾಂಗ್ರೆಸ್ ವಿರೋಧಿದ ಚಂಡಮೂರುತ ಆದಕ್ಕೆ ಗಾಳಿ ಹಾಕಿತು. ಇದ್ದರೂ ಪಟ್ಟವನ್ನೇರುವ ಕಲ್ಪನೆ ಕೂಡಾ ಅಣ್ಣಾದೊರೈಯವರಿಗೆ ಇರಲಿಲ್ಲ. ಆದೇ ಧೈರ್ಯದಿಂದಲೇ ಏನೋ ಅವರು ರೂಪಾಯಿಗೆ ಮೂರು ಪಡಿ (ಪಲ್ಲ) ಅಕ್ಕಿ ಸಿಗುವಂತೆ ಮಾಡುತ್ತೇನೆಂದು ಆಶ್ವಾಸನೆ ಇತ್ತರು. ಅಕ್ಕಿ ದೊರಕದೆ ಇದ್ದ ಕಷ್ಟಕಾಲವದು. ಅಣ್ಣಾದೊರೈ ಮುಖ್ಯ ಮಂತ್ರಿಗಳಾದರು. ಮೂರು ಪಲ್ಲ ಎಲ್ಲಿ?—ಕೇಳಿದ ಕೊರಳಿಗೆ ಉತ್ತರ, ನಾನು ಆ ರೀತಿ ಹೇಳಿಯೇ ಇಲ್ಲ; ರೂಪಾಯಿಗೆ ಒಂದು ಪಲ್ಲ ಕೊಡುತ್ತೇನೆಂದು. ಆದಾದರೂ ಎಲ್ಲಿ? ಕೆಲ ಜಿಲ್ಲೆಗಳಲ್ಲಿ ನೂರಾರು ಕಾಸುಗಳಿಗೆ ಒಂದು ಪಲ್ಲ ರೇಶನ್ ಅಂಗಡಿಗಳಲ್ಲಿ ಕೆಲ ಸಮಯ ಸಿಕ್ಕಿತು. ಅದೆಂತಹ ಅಕ್ಕಿ! ಎನೇ ಇರಲಿ, ಅಕ್ಕಿ ಸಿಗದಿದ್ದ ದಿನಗಳನ್ನು ಅಷ್ಟು ಬೇಗ ಮರೆತು ಹೋಗುವದುಂಟೇ ದಿನಗಳುರುಳಿದುವು ಅದೂ ಹೋಯಿತು. ಕಮ್ಮಿ ಆದಾಯದವರಿಗೆ ಮಾತ್ರ ಆ ಅಂಗಡಿಗಳಲ್ಲಿ ಕಾರ್ಡಿನಕ್ಕೆ ಸಿಗುವದೆಂದಾಯಿತು. ರಾಜ್ಯದಲ್ಲಿ ಬೆಲೆ ಹೆಚ್ಚಾದರೂ ಅಕ್ಕಿ ಏನೋ ಬೇಕಾದಂತೆ ಸಿಗುತ್ತದೆ ಆಸರೆ ಕೊಟ್ಟ ಮಾತು? ವ್ಯಾಮೋಹಿಕತನ ಅನ್ನುವದಕ್ಕೇನಾದರೂ ಅರ್ಥ ಸಗ್ಗೆರೆ ಇದೆಯೇ?

ದ್ರಾ.ಮು.ಕ. ಧುರೀಣರು ತಾವೇನೂ ದೇವರ ಮೇಲೆ ನಂಬಿಕೆ ಇಲ್ಲದವರಲ್ಲವೆಂದು ಸಾಮಾನ್ಯ ಜನತೆಯ ಮುಂದೆ ಹೇಳಿದರು. ಅಧಿಕಾರಕ್ಕೆ ಬಂದಮೇಲೆ ತಡ—ಕಾಲುವಾರಿಯಲ್ಲಿದ್ದ ಬಡವರ ದೇವನ್ನಾನಗಳನ್ನು ನಗರ ನಿರ್ಮಲೀಕರಣದ ಹೆಸರಿನಲ್ಲಿ ಧ್ವಂಸಮಾಡಲಾಯಿತು. ಆದರೆ ಅದ್ಯಾವ ಮಸೀದಿಯನ್ನಾಗಲೀ ಇಗರ್ಜಿಯನ್ನಾಗಲೀ ಹಾಳು ಗೆಡವಲಿಲ್ಲ. ...ದರೆ ಆ ದೇವರ ಮೇಲೆ ಮಾತ್ರ ಇವರಿಗೆ ನಂಬಿಕೆ ಏನು? ದೇವಸ್ಥಾನಕ್ಕೆ ಸಂಬಂಧ ಪಟ್ಟ ಮಂತ್ರಿಗಳು ದೇವನ್ನಾನಕ್ಕೆ ಹೋದರು. ಅಲ್ಲಿ ಕೊಟ್ಟ ಪ್ರಸಾದಗಳನ್ನು ಕುಪ್ಪೆಗೆ ಇವರು ಬಿಸಾಡಿದರು! ಎಂತಹ ನಂಬಿಕೆ! ದೇವಸ್ಥಾನದ ಪಾವಿತ್ರ್ಯವನ್ನು ಪಾಳುಗೆಡವಲು ಅದೇನು ಮಾಡಬೇಕೋ ಅದನ್ನೆಲ್ಲಾ ಇವರು ಕಂಡುಕೊಂಡು ಬಂದು ಅದಕ್ಕಾಗಿ ಶ್ರಮ ಪಟ್ಟರು. ಹಲವಾರೆಡೆಗಳಲ್ಲಿ ಹಲವಾರು ಹಿಂದೂಗಳು ಪೂಜಿಸುತ್ತಿರುವ ಮರ್ಯಾದಾ ಪುರುಷೋತ್ತಮ ವ್ರಭು ಶ್ರೀರಾಮಚಂದ್ರನ, ದೇವರೆಂಬುದೇ ಇಲ್ಲ—ಸುಯಗ (ಸುಬ್ರಹ್ಮಣ್ಯ)ನೊಬ್ಬನೇ ದೇವರೆಂದು ಹೇಳುವ ತಮಿಳರಿಗೂ ಚುಚ್ಚುವಂತೆ ಆ ಸ್ವಂದನ ಚಿತ್ರಗಳನ್ನು ಬರೆದು ಕೆಲವರು ಉಪಮಾನಗೊಳಿಸಿದಾಗ ಅದಕ್ಕೆ ವ್ಯೋತ್ಪತ್ತಿಯನ್ನಿತ್ತಿರುವವರು ನಮಗೂ ಆ ದೇವರ ಮೇಲೆ ನಂಬಿಕೆ ಇದೆಯೆಂದು ಹೇಳುತ್ತಿದ್ದಾರೆ. ಶ್ರೀರಾಮಚಂದ್ರನ ಕುರಿತು ತುಚ್ಚ—ನಾಟಕವನ್ನಾಡಲು ಇದೇ ದ್ರಾಮುಕ ಸರಕಾರ ಏರ್ಪಾಡು ಮಾಡಿಕೊಟ್ಟದ್ದು ತನಗೂ ದೇವರ ಮೇಲೆ ನಂಬಿಕೆ ಇದೆಯೆಂದು ಹೇಳುವ ಪಲ್ಲಿ ವ್ಯಾಮೋಹಿಕತನಕ್ಕೇನಾದರೂ ಅರ್ಥವಿದೆ ಏನು? ಧಾರ್ಮಿಕ ಆಚರಣೆಗಳಲ್ಲಿ ತಲೆಹಾಕುವದಿಲ್ಲ, ತಮಗೆ, ಸೆಕ್ಯೂಲರಿಸಮಿನಲ್ಲಿ ನಂಬಿಕೆ ಇದೆ ಎನ್ನುವ ದ್ರಾ.ಮು.ಕ. ಅಸ್ಲಿಯರನ್ನು–ಮುಸ್ಲಿಮರನ್ನು–ಹಿಂದುಗಳನ್ನು ಭಿನ್ನ ಭಿನ್ನ ದೃಷ್ಟಿಕೋಣದಿಂದ ಕಾಣುತ್ತಿರುವದು ವ್ಯಾಮೋಹಿಕತನದಿಂದೇನು?

ಗವರ್ನರ್ ರೊರೆಯವರಿಗೆ ಚಿಕ್ಕ ಮನೆ ಸಾಕು, ಹೆಚ್ಚು ಆಡಂಭರ ಅಗ್ಗೆರೆ ಇರಬಾರದೆಂದು ಹೇಳಿದ ದ್ರಾ.ಮು.ಕ. ಸದಸ್ಯರು ಮಂತ್ರಿ ಮಾಗಧರು ಅಧಿಕ ವರಮಾನ, ಭೋಗ ಜೀವನ ಬೇಡವೆನ್ನುತ್ತಿದ್ದಾರೇನು? ಅದೇ ಅಕ್ಕಿ ... ಅಕ್ಕಿ ಕೊಡದೆ ಇರುವ ವರೆಗೆ ಅರ್ಥಸಂಬಳವೆಂದು ಸಂಬಳ ಮಾತ್ರ ಕಮ್ಮಿ ಜೆಗೆದು ಕೊಳ್ಳುತ್ತಿದ್ದ ಸಚಿವರು ಈಗ ಪೂರ್ತಿದ್ದೇನು? ಅಕ್ಕಿ ಬೆಲೆ ಅಧಿಕ ಆಗುತ್ತಿರುವಾಗ ಪೂರ್ತಿ ಸಂಬಳ ಜೆಗೆದುಕೊಳ್ಳಲು ಮುಂದಾಗುವುದಲ್ಲದೆ ಮಂತ್ರಿಮಂಡಲವನ್ನು ಅಧಿಕಗೊಳಿಸಿಕೊಂಡರು! ಎಂತಹ ವ್ಯಾಮೋಹಿಕತನ!

ಬಡಜನತೆ ಈ ರೀತಿ ಕಷ್ಟಪಡುತ್ತಿರುವಾಗ ದ್ರಾ.ಮು.ಕ. ದವರು ಅಲ್ಲಲ್ಲಿ ಅಣ್ಣಾದೊರೆಯವರ ಮೂರ್ತಿಗಳನ್ನು ನಿಲ್ಲಿಸಿರುವದಲ್ಲದೆ ಅವುಗಳರಕ್ಷಣೆಗಾಗಿ ಸಹಸ್ರಾರುರೂ ವ್ಯಯಮಾಡುತ್ತಿದೆ ಬಾಯಲ್ಲಿಅಣ್ಣಾ ಅನ್ನುತ್ತಿರುವಂತೆ ಅವರ ಧೋರಣೆಗೆ ಧಿಕ್ಕಾರವೆನ್ನಲಾಗುತ್ತಿದೆ. ಅಣ್ಣಾದೊರೈಯವರು ಕಾಂಗ್ರೆಸ್ಸ್ ವಿರೋಧಿ ಮನೋಭಾವನೆಯವರಿದ್ದು ಚಕ್ರವರ್ತಿ ರಾಜಾಜಿಯವರೊಡನೆ ರಾಜಿಮಾಡಿಕೊಂಡಿದ್ದಲ್ಲಿ ಅವರ ನಂತರ ಬಂದವರು ಬ್ರಾಹ್ಮಣವಿರೋಧಿ ಮನೋಭಾವನೆಯಿಂದ ರಾಜಾಜಿಯವರ ಛಾಂಧ್ಯನ್ನವನ್ನು ಕಡಿದೊಗೆದುದಲ್ಲದೆ ಅವರಿಗಾಗದ ಇಂದಿರಾ ಕಾಂಗ್ರೆಸ್ಸಿನೊಡನೆ ಕೈ ಮಿಲಾಯಿಸಿಕೊಂಡರು. ಅಣ್ಣಾದೊರೈಯವರನ್ನು ಕಮಿಳ್ನಾಡಿನ ಗಾಂಧಿಯೆಂದು ಕೆಲವರು ಹಾಡಿದ್ದುಂಟು. ಈಗೆ ಹಾಡಲುಕಾರಣವೆಂದರೆ ಪಾನಪ್ರತಿಬಂಧಕಾಜ್ಞೆಯನ್ನು ಅವರು ಹಾಗೇ ಬಿಟ್ಟದ್ದೆ. ಅದೇ ಇದೀಗ ಪಾನಪ್ರತಿಬಂಧಕಾಜ್ಞೆಯನ್ನು ಹರಿದೊಗೆಯಲಾಯ್ತು. ಅದಕ್ಕೆಹಲವಾರು ಕಾರಣಗಳನ್ನು ಹೇಳಲಾಗುತ್ತದೆ. ನೋಡಿದವರಿಗೆ ಅದು ಪತ್ಯವೆಂಬಂತೆ ಕಂಡು ಬರಬಹುದು ನೊದಲನೆಯದಾಗಿ ಹಣದ ಪ್ರಶ್ನೆ. ಈ ದೃಷ್ಟಿಯಿಂದ ಹಾಗೂ ಪಾನಪ್ರತಿಬಂಧಕಾಜ್ಞೆ ಸರಿಯೂಗಿಜಾರಿಯಲ್ಲಿಲ್ಲವೆಂಬ ಕಾರಣದಿಂದ ಅದನ್ನು ಭಾವನೆಗೊಳಗಾಗದೆಬದಿಗೆ ಸರಿಸಿಬಿಡಬೇಕೆಂದು ದ್ರಾ.ಮು.ಕ.ದೊಂದಿಗೆ ಒಂದಾಗಿದ್ದ ರಾಜಾಜಿಯವರು ಹೇಳುತ್ತಿದ್ದಾಗ ಅದು ಕಿವಿಗೆ ಬೀಳಲಿಲ್ಲ ಆಗ ಆರ್ಥಿಕ ಪರಿಸ್ಥಿತಿ ಒಳ್ಳೆಯದಿತ್ತೇನು? ಈಗ ಲಾಟರಿಯಾದರೂ ಇದೆ. ಆಗ ಅದು ಕೂಡಾ ಇರಲಿಲ್ಲ. ಈಗ ರಾಜಾಜಿ ಪಾನಪ್ರತಿಬಂಧಕಾಜ್ಞೆ, ಬೇಕೆನ್ನುತ್ತಾರೆ, ದ್ರಾ.ಮು.ಕ. ಬದಿಗೆ ಸರಿಸುತ್ತಿದೆ! ಆರ್ಥಿಕ ಮುಗ್ಗಟ್ಟೇ ಅದಕ್ಕೆ ಕಾರಣವೇನು? ಬೇರೊಂದು ಮಾತು ಕೇಳಿಬರುತ್ತಿದೆ.ಅದುವೇ ಕರುಣಾನಿಧಿ ಇಂದಿರಾಜೀ ಕಡೆ! ದ್ರಾ.ಮು.ಕ.ಅಧಿಕಾರಕ್ಕೆಬಂದೊಡನೆ ಇಲ್ಲಿಂದ ಪೋಲೀಸ್ ಮುಖ್ಯಾಧಿಕಾರಿಅರಸರನ್ನು ದಿಲ್ಲಿಗೆ ಕಳುಹಿಸಲಾಗಿತ್ತು. ಇದೀಗ ಅವರನ್ನು ಹಿಂದಕ್ಕೆ ಕಳುಹಿಸಲಾಗುತ್ತಿದೆ ಅಷ್ಟೇ ಅಲ್ಲ. ಇಂದಿರಾಜೀ ಸಂಪುಟದಲ್ಲಿದ್ದ ಕೆ. ಕೆ. ಷಾ ತಮಿಳ್ನಾಡಿನ ಗವರ್ನರ್ ಎಂದೊಡನೆ ವಾನ ಪ್ರತಿಬಂಧಕಾಜ್ಞೆ ಹರಿದೊಗೆಯುವ ಕೇಕೇ ತಾರಕಕ್ಕೇರಿತು. ಯಾಕೆ? ಪಾನಪ್ರತಿಬಂಧಕಾಜ್ಞೆ ಇರುವಾಗ ಕಳ್ಳ ಭಟ್ಟಿ ತಯಾರಿಸುತ್ತಿದ್ದವರಿಗೇನೂ ಕೊರತೆ ಇರಲಿಲ್ಲ. ಅದನ್ನು ಗುಡಿಕೈಗಾರಿಕೆ ಎನ್ನಲಾಗುತ್ತಿತ್ತು. ತಯಾರಿಸುತ್ತಿದ್ದವರು ಯಾರು? ಅವರು ದ್ರಾ. ಮು. ಕ. ಕ್ಕೆ ಸೇರಿದವರು. ಅವರ ವಿಜಾನೆಯನ್ನು ತುಂಬುವವರು. ಇಷ್ಟರ ವರೆಗೆ ಪೋಲೀಸರ ಮೇಲೆ ದ್ರಾ. ಮು. ಕ. ಸ್ಥಳೀಯ ಧುರೀಣರ ವರ್ಚಸ್ಸು ವರ್ತಸುತ್ತಿತ್ತು. ಈ ಕಳ್ಳ ಭಟ್ಟಿ ತಯಾರಿಸುವವರನ್ನು ಮುಟ್ಟುವ ಧೈರ್ಯ ಪೋಲೀಸರಿಗೆ ಇರಲಿಲ್ಲ. ಮುಟ್ಟಿದರೆ ವರ್ಗ ಇತ್ಯಾದಿ. ಅದರ ಬದಲು ಅವರು ಮೂಮೂಲಿಸಿಂದ ತೃಪ್ತಿ ಹೊಂದುತ್ತಿದ್ದು ಇತರರು ಕಳದಲ್ಲಿಳಿಯವಂತೆ ನೋಡಿಕೊಳ್ಳುತ್ತಿದ್ದರು. ಇದಕ್ಕೆಲ್ಲಾ ಅರುಳ್ ಅಯ್ಯಪ್ಪ ಅನ್ನುವವರಲ್ಲ. ಆವರಿಗೆ ನ್ಯಾಯವೇ ಮುಖ್ಯವಿದೆ, ಪಕ್ಷಪಾತಕ್ಕೆ ಅಸರೆಕೊಡುವವರಲ್ಲ. ಅಲ್ಲದೆ ಅವಕ್ಕೂ ಮೇಲೆ ಇಂದಿರಾಜೀಯವರ ಸ್ಪೆಷಲ್ ಗವರ್ನರ್ ಕೆ.ಕೆ. ಷಾ ಇದ್ದಾರೆ. ಹೀಗೆ ತಮ್ಮ ಪಕ್ಷದವರು ಸಿಕ್ಕಿಬೀಳುವದಕ್ಕೆಂತ ಪಾನ ಪ್ರತಿಬಂಧಕಾಜ್ಞೆಯನ್ನು ಸರಿಸಿದಲ್ಲಿ ಸರಕಾರಕ್ಕಾದರೂ ಹಣ ಬರುತ್ತದೆಯಲ್ಲವೇ? ಸರಿ. ಹಾಗೆ ತೆಗೆದರೂ ನಾಳೆ ರಸ್ತೆಗಳಲ್ಲಿ 'ಉಪದ್ರ ಜೀವಿಗಳಾಗಿ ಸಿಕ್ಕಿ ಬೀಳುವವರು ಯಾರು? ಹೆಚ್ಚಿನವರು ದ್ರಾ. ಮು. ಕ. ಅನುಯಾಯಿಗಳು. ಇವರನ್ನುಳಿಸಿಕೊಳ್ಳಲು ಪಕ್ಷ ಪ್ರಯತ್ನಿಸಬೇಕು. ಇದಕ್ಕೆನೇ ಏನ—ಮೇಷ, ಜೂನ್-ಜಿಗೊಸ್ಟ್ ವಗೈರೆ ವ್ಯಾಮೋಹಿಕತನದಿಂದ ಪಾನಪ್ರತಿಬಂಧಕಾಜ್ಞೆ

ಪುರು

ಕಮ್ಮುಗ ೪

ಇದು ನಮ್ಮ ಭಾರತ

ಪ್ರಾಮಾಣಿಕತೆಗೇನು ಉಡುಗೊರೆ?

ನೂರು ಮತ್ತು ಐವತ್ತು ರೂಪಾಯಿಗಳ ಉದ್ದಗಲಗಳು ಸರಿಸುಮಾರು ಸರಿಸಮವಾಗುತ್ತ ಬಂದಿವೆ. ಅವಸರದಲ್ಲಿ, ಅಶಿಕ್ಷಿತರು ಮಾತ್ರವಲ್ಲ, ಸುಶಿಕ್ಷಿತರೂ ಕೇವಲೊಮ್ಮೆ ಗಡಿಬಿಡಿ ಬೀಳುವುದುಂಟು; ಮೋಸಹೋಗುವುದುಂಟು.

ಗತಿಂಗಳ ನವೆಂಬರ ತಿಂಗಳಲ್ಲಿ ನಡೆದ ಘಟನೆಯಿದು. ಶ್ರೀಮತಿ... ....ಯವರು ಬೀಳೆ ಕೊಳ್ಳಲೆಂದು ಮೂರುಕಟ್ಟೆಗೆ ಹೋದರು. ಬಟ್ಟೆಬರೆಗಳನ್ನೂ ಕೊಳ್ಳುವುದಿತ್ತು. ಆದುದರಿಂದ ನೂರು–ಹತ್ತು ರೂಪಾಯಿಗಳ ನಾಲ್ಕಾರು ನೋಟುಗಳು ಅವರ ಬಳಿ ನಿಷರ್ಸಿನಲ್ಲಿದ್ದುದುಡಿಕೊಂಡು ಬಿದ್ದಿದ್ದವು. ಆಕೆ ಎಡಡು ಕಿಲೊ ಬೀಳೆಕೊಂಡರು. ಪರ್ಸಿನಿಂದ ಒಂದು ನೋಟು ತೆಗೆದು ಅಂಗಡಿಗಾರನಿಗೆ ಕೊಟ್ಟರು. ವಾಸ್ತವವಾಗಿ ಅದು ನೂರು ರೂಪಾಯಿಯದಿತ್ತು. ಶ್ರೀಮತಿಯವರೂ ಅಂಗಡಿಕಾರನೂ ಅದು ಹತ್ತರದೆಂದೇ ತಿಳಿದಿದ್ದರು. ಚಿಲ್ಲರೆ ತೆಗೆದುಕೊಂಡು ಶ್ರೀಮತಿಯವರು ಬಟ್ಟೆಯಂಗಡಿಯತ್ತ ಕಾಲು ಕಿತ್ತರು.

ಅದೇನು ತೊರಿತೋ, ಕತ್ತಲಾಗುತ್ತ ಬಂತು, ಈ ರಾತ್ರಿಯಲ್ಲಿ ಒಟ್ಟೆ ತೆಗೆಯೋದೇನು ಎಂದವರು ಮನ ಬದಲಾಯಿಸಿ ಮನೆಯ ದಾರಿ ಹಿಡಿದರು

ಎಷ್ಟು ದಿನಗಳ ನಂತರ ಒಟ್ಟೆ ತೆಗೆಯಲೆಂದು ಶ್ರೀಮತಿಯವರು ಹೊರಟರು. ಈ ನಡುವೆ ತವರು ಪರ್ಸಿನಿಂದ ಹಣವನ್ನು ತೆಗೆಲಿದಿಲ್ಲವಾದುದರಿಂದ ಅದನ್ನು ತೆರೆದು ನೋಡುವ ಗೋಜಿಗೆ ಅವರು ಹೋಗಲಿಲ್ಲ ಸಂಜೆಯ ನಾಲ್ಕು ಗಂಟೆಯ ಸಮಯ. ಶ್ರೀಮತಿಯವರು ರಾಜ ರಸ್ತೆಯಲ್ಲಿ ನಡೆಯುತ್ತ ಹೋಗ ತಿದ್ದರು. ತಾನು ಕೊಂಡು ಕೊಳ್ಳಬೇಕಾದ ಬಟ್ಟೆಬರೆಗಳ ಬಗ್ಗೆ ಯೋಚನಾಮಗ್ನರಾಗಿದ್ದರು.

ಯಾರೋ ಕೂಗಿ ಕರೆದಂತಾಯ್ತು. ಈ ರಸ್ತೆಯಲ್ಲಿ ತನ್ನನ್ನು ಕರೆಯುವವರಾರು? ಆಕೆ ದಿಙ್ಮೂಢರಾದರು ಸ್ವಾಯ: ಯಾರನ್ನೋ ಯಾರೋ ಕರೆಯುತ್ತಿದ್ದಾರೆಂದು ತಿಳಿದು ಆಕೆ ಮತ್ತೂ ಕಾಲುಕಿತ್ತರು. ನಾಲ್ಕಾರು ಹೆಜ್ಜೆಯಿಡುವಷ್ಟರಲ್ಲೇ ಒಬ್ಬ ನಡು ಹರೆಯದ ವ್ಯಕ್ತಿ 'ನಮಸ್ಕಾರ ಅಮ್ಮಾ' ಎಂದಾಗ, ಆಕೆಗೊಮ್ಮೆ ದಿಗಿಲು ಹಾರಿತು.

ಶ್ರೀಮತಿ ಆ ವ್ಯಕ್ತಿಯನ್ನು ಅಪಾದಮಸ್ತಗ ನೋಡಿದರು ಎಲ್ಲಿಯೋ ನೋಡಿದ ನೆನಪು. ಎಲ್ಲೆಂದು ಹೊಳೆಯುದು ಆಕೆ ಅವರ ಅವಸರದಲ್ಲೇ ಪ್ರತಿಸಮಸ್ಕಾರ ಹೇಳಿ ಮತ್ತೆ ನುಂದುವರಿದಳು....

'ಅಮ್ಮಾ, ಇಕೊಳ್ಳಿ....' ಆ ವ್ಯಕ್ತಿ ಮಾತಿಗೆ ಹೊಲಲು ಮಾಡಿದ. ಇದೊಂದೆಲ್ಲಿಯ ಶನಿ? ಇವನಿಗೇನು ಬೇಕು, ಯಾವ ಎಂದು ಮುಂತಾದ ನೂರು ಪ್ರಶ್ನೆಗಳು ಶ್ರೀಮತಿಯನ್ನು ಕಾಡಿತು. ನಡುರಸ್ತೆಯಲ್ಲಿ ಯಾರಾದರೂ ನೋಡಿದರೆ ಎಂಬ ಭಯವೂ ಮೂಡಿತು.

'ಅಮ್ಮ, ನಿಮ್ಮನ್ನೆ ನೀವು ನಮ್ಮ ಅಂಗಡಿಯಿಂದ ಎರಡು ಕೆ.ಜಿ. ತೊಗರಿ ಬೀಳೆ ತೆಗೆದುಕೊಂಡಿದ್ದೀರಿ....'

'ಹೌದು. ಅದಕ್ಕೇನಾಗಬೇಕು? ನಿತ್ಯ ನೂ ನಿಮ್ಮ ಅಂಗಡಿಯಿಂದಲೇ ಬೇಳೆಕೊಂಡು ತಿನ್ನಬೇಕೆ?' ಶ್ರೀಮತಿಯವರಿಗೆ ಈಗ ಆ ವ್ಯಕ್ತಿಯ ಪರಿಚಯವೂ ಆಯ್ತು: ಜತೆಗೆ ಸಿಟ್ಟೂ ಬಂತು.

'ಹಾಗಲ್ಲ ಅಮ್ಮ. ಆ ದಿನ ರಾತ್ರಿ ಹಣ ಲೆಕ್ಕ ಮಾಡುವಾಗ ನೂರು ರೂಪಾಯಿಯ ನೋಟೊಂದು ಬಂತು. ನಾನು ಆ ದಿನ ಯಾರಿಂದಲೂ ನೂರರ ನೋಟು ತೆಗೆದುಕೊಂಡಿರಲಿಲ್ಲ. ಮತ್ತೆ ಇಷ್ಟು ವ್ಯಾಪಾರವಾದರೂ ನವ.ಗೆಲ್ಲಿಯದು? ಎಲ್ಲಿಂದ ಬಂತು ಅಂತ ಯೋಚನೆ ಮಾಡುವಾಗ ನಿನ್ನು ನೆನಪಾಯ್ತು. ವಿಚಾರಿಸ ಬೇಕೆಂದು ನಿನ್ನೆಯಿಂದ ಕಾದಿದ್ದೇನೆ. ನಿಮ್ಮ ಹೆಸರು—ನನಗೆ ಯಾಕೋ ಗೊತ್ತಿಲ್ಲ. ಆಕಸ್ಮಾತ್ತಾಗಿ ಈಗ ದೃಷ್ಟಿಗೆ ಬಿದ್ದಿರಿ. ಕ್ಷಾಯ: ನೀವೂ ನಿಮ್ಮ ರೂಪಾಯಿಗಳನ್ನು ಲೆಕ್ಕ ನೂಡಲಿಲ್ಲವೆಂದು ತೋರುತ್ತದೆ. ನೆನಪುಮಾಡಿ. ನೀವು ಹತ್ತರ ನೋಟು ಕೊಟ್ಟದ್ದೋ ನೂರರದ್ದೋ!'

ಶ್ರೀಮತಿಯವರೂ ಗಡಿಬಿಡಿಗೆ ಬಿದ್ದರು. ತಾನು ಹತ್ತರದ್ದೇ ಕೊಟ್ಟಿದ್ದಿರಬೇಕು. ಪರ್ಸಿನ ಹಣ ಲೆಕ್ಕಮಾಡಿದರೆ ಸತ್ಯಸಂಗತಿ ತಿಳಿಯುತ್ತದೆ ನಿಜ. ಒಮ್ಮನೇಳೆ ನಾನು ನೂರರದ್ದೇ ಕೊಟ್ಟಿರಬಹುದಾಗಿದ್ದರೂ ಈ ವ್ಯಾಪಾರಿ ನನ್ನನ್ನು ಮೋಸಗಾರಳೆಂದು ಬಗೆದರೆ? ಆಕೆ ವ್ಯಾಪಾರಿಯ ಮುಖವನ್ನೊಮ್ಮೆ ದಿಟ್ಟಿಸಿ ನೋಡಿದರು. ಆದರಲ್ಲಿ ಯಾವ ವಂಚನೆಯೂ ಮಿಂಚಲಿಲ್ಲ.

ಸತ್ಯ ಬಹಿರಂಗವಾಯ್ತು. ಶ್ರೀಮತಿ ಮುಖ ಕೆಳಗೆ ಮಾಡಿ ನಿಂತಳು. ಇಷ್ಟರಿಂದಲೇ ವ್ಯಾಪಾರಿಗೆ ಹೊಳೆಯಿತು–ಆಕೆಯದ್ದೇ ಅನೋಟು ಎಂದು ವ್ಯಾಪಾರಿ ತಕ್ಷಣ ತನ್ನ ಹುಡುಗನನ್ನು ಕೂಗಿ 'ತೊಂಬತ್ತು' ರೂಪಾಯಿಗಳನ್ನು ತರಲು ಹೇಳಿದ. ಅವನ್ನು ಶ್ರೀಮತಿಯವರ ಕೈಗಳಿಗೆ ಕೊಡುತ್ತ ಹೇಳಿದ:ಅಮ್ಮಾ, ಸಿಟ್ಟುಮಾಡಿಕೊಳ್ಳಬೇಡಿ ನಿಮಗೆನ್ನು ತೊಂದರೆಯಾಯ್ತೋ ಏನೋ. ಸಾ.ಜೆ ಹೊತ್ತು ಬೇರೆ. ಹತ್ತರದ್ದೋ ನೂರರದ್ದೋ ಸರಿಯಾಗಿ ಕಾಣದೆ ಹೋಯ್ತು. ಕ್ಷಮಿಸಿ ಬಿಡಿ.'

ಶ್ರೀಮತಿಯವರ ಕಣ್ಣುಗಳಲ್ಲೇಗ ನೀರೂರಿತು. ಅವರು ಹತ್ತರ ಒಂದು ನೋಟು ತೆಗೆದು ಮುಂದು ಮಾಡಿದರು. ವ್ಯಾಪಾರಿ ಹೇಳಿದ–'ನನ್ನ ನ್ಯಾಯವಾದ ದುಡಿಮೆ ನನಗೆ ಸಾಕಮ್ಮ, ಹಾಗೆ ಹಣ ಬೇಕೆಂದಿದ್ದರೆ, ನಿನುಗೆ ತೊಂಬತ್ತು ಏಕೆ ಮರಳಿ ಕೊಡುತ್ತಿದ್ದೆ?'

ಆತನ ಪ್ರಾಮಾಣಿಕತೆಗೆ ಉಡುಗೊರೆಯೆಂದು ಹೇಳಿನಾಗ ಆತನೆಂದ–'ಅಮ್ಮಾ, ಪ್ರಾಮಾಣಿಕತೆಗೆ ಉಡುಗೊರೆ ಹಣವಲ್ಲ, ವಸ್ತು ಒಡವೆಗಳಲ್ಲ. ನಾವೂ ಪ್ರಾಮಾಣಿಕರಾಗಿ ಬಾಳುವುದು. ನಿಮಗೆ ಹೇಳುವಷ್ಟು ನಾನು ಕಲಿತವನಲ್ಲ. ಆದರೂ ಒಂದು ಮಾತು ಹೇಳುತ್ತೀನಿ–ಎಲ್ಲಾದರೂ ನನ್ನಂಥವರು ಚಿಲ್ಲರೆ ಕೊಡುವಾಗ ಜಾರಿಬಿದ್ದರೆ, ಅವರನ್ನು ಒತ್ತಿ ಹಿಡಿಯಬೇಕಮ್ಮ, ತಪ್ಪು ಮರೆವು ಎಲ್ಲರಿಂದಲೂ ತಿಳಿಯದೆಯೂ ಆಗುತ್ತದೆ ...'

ಶ್ರೀಮತಿಯವರು ಹೃದಯ–ಕಣ್ಣುಗಳಲ್ಲೇ ಕೃತಜ್ಞತೆ ಸೂಚಿಸಿ ಮುಂದುವರಿದರು. ಆ ದಿನ ಬಟ್ಟೆ ಅಂಗಡಿಯಲ್ಲಿ ಒಂದು ಘಟನೆ ನಡೆಯುತ್ತು.

ಇನ್ನೂರ ಎಪ್ಪತ್ತವ:ಮೂರು ರೂಪಾಯಿ ಇಪ್ಪತ್ತೈದು ಪೈಸೆಗಳ ವ್ಯಾಪಾರ ಮಾಡಿ ಶ್ರೀಮತಿಯವರು ನೂರರ ಮೂರು ನೋಟು ಕೊಟ್ಟರು. ಸಾಹುಕಾರರು ಎಪ್ಪತ್ತವ:ಮೂರು ರೂಪಾಯಿ ಇಪ್ಪತ್ತೈದು ಪೈಸೆ ಮರಳಿಸಿನಾಗ ಶ್ರೀಮತಿಯವರು ಲೆಕ್ಕಾಚಾರ ಸರಿಮಾಡಿ ಆತನಿಗಾಗ ಬಹುದಾಗಿದ್ದ ನಷ್ಟವನ್ನು ತಪ್ಪಿಸಿದರು.

'ಥ್ಯಾಂಕ್ ಯು ಮ್ಯಾಡಮ್' ಎಂಬ ಮೂರು ಶಬ್ದಗಳಲ್ಲಿಯೇ ಆತ ತನ್ನ:ದೇಶಾವರ ನಗೆ ನಕ್ಕು ಜೇರೆ ಗಿರಾಕಿಗಳಿಂದ ಹಣ ತೆಗೆದುಕೊಳ್ಳಹೋದ.

ಶ್ರೀಮತಿಯವರ ಮುಂದೆ ಇಬ್ಬರು ವ್ಯಾಪಾರಿಗಳಿದ್ದರು. ಒಬ್ಬ ದೇಶಾವರಿ ನಗುವಿನ ದಷ್ಟ ಮುಷ್ಟ ರೂಪಿನ ತಿರುಗು ಕುರ್ಚಿ ಮಂಡಿತ, ಇನ್ನೊಬ್ಬ, ಜಾವೆಯ ಮೇಲೆ ಕ್ಷಿತ ಎಲುಬು ಹಂದರದ ನಗು ಮೋರೆಯವ

●●

ಯನ್ನು ಹರಿದೊಗೆಯಲಾಗುತ್ತಿರುವುದಿಲ್ಲ. ಸುತ್ತಲಿನ ರಾಜ್ಯಗಳಲ್ಲಿ ಪಾನಕ್ಕೆ ತಡೆ ಇಲ್ಲದಿರುವಾಗ ತಮಿಳುನಾಡಿನಲ್ಲಿ ಪೂರ್ಣ ಇರುವದು ನ್ಯಾಯವೇನು? ಕಾಂಗ್ರೆಸ್ ಸರಕಾರಗಳೇ ಪಾನಕ್ಕೆ ಮೊರೆ ಹೋಗಿರುವಾಗ ದ್ರಾ.ಮು.ಕ. ದೂರಕ್ಕುಳಿಯಲು ನಾಧ್ಯವೇನು? ಇಲ್ಲವೆ? ಇರಲಿ. ಎಲ್ಲೆಲ್ಲೂ ಇಂದಿರಾ ಅನುಯಾಯಿಗಳೇ ಅಧಿಕವಾಗಿರುವಿಸುತ್ತಿರುವಾಗ ತಮಿಳ್ನಾಡಿನಲ್ಲಿ (ಪೊಂಡಿಚೇರಿ ಸೇರಿ) ದ್ರಾ.ಮು.ಕ. ಅಧಿಕಾರದಲ್ಲಿರುವುದು ಸರಿಯೇನು? ನಾಳೆ ಅಧಿಕಾರವಿಂದ ಕೆಳಗಿಳಿದು ಇಂದಿರಾಕಾಂಗ್ರೆಸಿಗೆ ದ್ರಾ.ಮು.ಕ. ಶರಣು ಹೋಗುತ್ತದೆ ಏನು? ಇಲ್ಲವೆಂದಲ್ಲಿ ಪ್ರಾಮಾಣಿಕತನಕ್ಕೆ ಆರ್ಥವಾದರೂ ಏನು?

ಘಟನೆ ೧:ಚರವಾಗುವ ಸಾಮಾನ್ಯ ಉದಾಹರಣೆಗಳವು. ಒಳಗಿನ ಗುಟ್ಟು ಪ್ರಕಟನೆಗೆ ತಕ್ಕುದಲ್ಲ ಅದನ್ನು ಅರಿತುಕೊಂಡಿರುವ ಜಪ್ಪನ್‌ರವರು ಪ್ರಾಮಾಣಿಕ ರಾಜನೀತಿ ನಿಪುಣರಾಗಲು ಸಾಧ್ಯವಿಲ್ಲವೆನ್ನುವ ನಿರ್ಧಾರಕ್ಕೆ ಬಂದ ಹಾಗೆ ಆಗಿದೆ ಲಂಚಾವತಾರ, ಪಕ್ಷಬೇಧ, ಜಾತಿಮೋಹಗೈರೆ ತಾಂಡವವಾಡುತ್ತಿರುವಾಗ ರಾಜನೀತಿಜ್ಞರು ಆಡಳಿತ ಅಂಕುಶ ಹಿಡಿದುಕೊಂಡಿರುವವರು ಮಾಡುತ್ತಿರುವದೇನು? ಲಂಚಾವತಾರದ ಹೆಸರಿನಲ್ಲಿ ಒಮ್ಮೆ ಸಚಿವ ಸ್ಥಾನದಿಂದ ಕೆಳಗಿಳಿಸಿದ ತಿರುವಾಳರನ್ನು ಮತ್ತೊಮ್ಮೆ ವಿಧಾನ ಸಭಾಧ್ಯಕ್ಷರನ್ನಾಗಿ ನೂಡುವದೆಂದರೆ ಪ್ರಾಮಾಣಿಕತನದ ಪ್ರಮಾಣವನ್ನು ಜಪ್ಪನ್‌ರವರು ಅಷ್ಟು ಸ್ಪಷ್ಟವಾಗಿಯೇ ಸೂಚಿಸಿದ್ದಾರೆ. ಇಂದಿನ ಅಧಿಕಾರವಾಹಿ, ಭೋಗಲಾಲಸಿ ರಾಜ್ಯಕೀಯೋದ್ಯಮಿಗಳು ರಾಜನೀತಿ ನಿಪುಣರಾಗಲು ಸಾಧ್ಯವೇ ಇಲ್ಲವೆನ್ನುವ ರೀತಿಯಲ್ಲಿ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕೊನೆಯ ಪಕ್ಷ, ಪ್ರಾಮಾಣಿಕ ರಾಜಕಾರಣಿಗಳಾದರೂ ಆಗ ಬೇಕೆಂದು ಅವರು ಕಳಕಳಿಯಿಂದ ಕೇಳಿಕೊಂಡಿದ್ದಾರೆ. ರಾಜಕೀಯದಲ್ಲಿ ಪ್ರಾಮಾಣಿಕತನಕ್ಕೆ ಸ್ಥಾನವೇ ಇಲ್ಲವೆಂದು ರಾಜಕೀಯಜ್ಞರು ಅಭಿಪ್ರಾಯ ಸ್ಪಷ್ಟ ಪಡಿಸಿರುವಾಗ ವಿನಂತಿಯ ಗತಿಯೊದರೂ ಏನಾದೀತು? ಏನೇ ಆಗಲಿ ದ್ರಾವಿಷ ಮುನ್ನೇಟ್ರ ಕಳ್ಳಗಮಿನ ಧುರೀಣ, ಮುಂದಾಳು ಆಪಕ್ಷದ ಪ್ರಾಮಾಣಿಕತನಕ್ಕೆ ಪ್ರಶಂಸಾ ಪತ್ರವನ್ನಿತ್ತಿದ್ದಾರೆ.

—ಶ್ರೀ ಶಿವಶಂಕರ

If you are a Book Lover

and

Kannada Books are your special interest, then

PLEASE ENQUIRE AT

NAVABHARAT BOOK DEPOT, UDIPI

(Regd. Publishers & Book Sellers)

For your requirements.

We have always in stock

the latest books published all over Karnatak

ಭಾವನೆ

ಎಲ್ಲ ಹೋಗಲಿ, ಏನು ಮಾಡಲಿ,
ದಾರಿ ತಪ್ಪಿಪ ನಿನವಲಿ;
ಎಷ್ಟು ನಡೆದರು, ದಾರಿ ಮುಗಿಯದು
ಶಾಂತಿಯಿಲ್ಲ ಮನವಲಿ ‖ ೧ ‖

ಭಾವ ಲೌಕಿಕ ಜೀವಿಯೂಗಿ
ಕಾವ್ಯ ಜೀವನ ನಡೆಸಲೇ?
ಜನತೆ ಮೂಲ್ಯತೆ ನೀಡದಿರಲು
ದಾರಿಯಂಚಿಗೆ ಬೀಳಲೆ? ‖ ೨ ‖

ಕೆಟ್ಟ ಕಾಲದಿ, ಹೇಗೆ ಹೇಳಲಿ
ಯಾರು ಬರುವರು ಹಿತದಲಿ?
ಸಹಿಸಿ ನೋಡುವೆ ಬರುವ ಕಾಲವ;
ನೆನೆದು ದೇವನ ಮನವಲಿ, ‖ ೩ ‖

ಹೆಜ್ಜೆ ಹೆಜ್ಜೆಗೆ ಪಡುವ ಕಷ್ಟವ,
ಹೇಳಲಾರೆನು ದೇವನೆ;
ಸುಡುವ ಹೃದಯವ ಉರಿವ
ನೋಡಿ ಆರಿಸಲು ಬಾ, ಜೀವನೆ ‖ ೪ ‖

ದೇಹ ನಿನ್ನದು, ಹೃದಯ ನಿನ್ನದು
ನನ್ನದೆಲ್ಲ ಈಶನೆ;
ಭೌತದೇಹವ ಜೀವಿಯೂಗಿ
ಕೆಟ್ಟೆ ನಾ, ಪರಮಾತ್ಮನೆ ‖ ೫ ‖

ಕಾಲನಿನೆ ಒಂದೊಂದು ಕಾರ್ಯಕ
ಕಾಲು ನನಗಿದೆ, ದೇವನೆ;
ನಡೆದು, ನಡೆದು, ಮುಂದೆ ಹೋಗುವ
ಗುರಿಯ ಮುಟ್ಟುವ ಭಾವನೆ ‖ ೬ ‖

—ಮ. ಗೋ. ಹೆಗಡೆ. (ಆನಂದ ಪುಸ್ತಕ)

ಮಹಿಳೆಯರ ಕೈಯಲ್ಲಿ

ಶಾಂತಿ ಸುಭದ್ರವಾಗಿರುತ್ತದೆ

ವಿದೇಶಕ್ಕೆ ಭೇಟಿ ನೀಡುವ ಮಹಿಳೆಯರು ಯಾವಾಗಲೂ ಪ್ರಕಟಿಸಲಾದ ಸಂಚಾರ ಕಾರ್ಯಕ್ರಮವನ್ನಲ್ಲರಿಯುವುದಕ್ಕಿಂತಲೂ ಹೆಚ್ಚು ವಿಷಯಗಳ ಪರಿಚಯವನ್ನು ಪಡೆಯುತ್ತಾರೆ. ಉದಾಹರಣೆಗೆ, ಅವರು ಆ ದೇಶದಲ್ಲಿ ತಮ್ಮ ಸೋದರಿಯರ ಬಾಳುವೆ, ಅವರ ಗೃಹಕಾರ್ಯ ಇತ್ಯಾದಿಗಳನ್ನು ಸ್ವತಃ ಗಮನಿಸಲು ಪ್ರಯತ್ನಿಸುತ್ತಾರೆ. ಆತಿಥ್ಯ ನೀಡುವವರು ಸಹಕರಿಸಲು ವಿಶೇಷ ಸಿದ್ಧತೆಯನ್ನು ತೋರಿಸಿದಾಗ ಮಾತ್ರವೇ ಈ ಅತಿಥಿಗಳು ಅತ್ಯಂತ ತೃಪ್ತರಾಗುತ್ತಾರೆ. ಭಾರತದ ಮಹಿಳೆಯರ ನಿಯೋಗದ ಸದಸ್ಯೆಯರಿಗೆ ಸೋವಿಯೆತ್ ಒಕ್ಕೂಟಕ್ಕೆ ಅವರು ಇತ್ತೀಚೆಗೆ ನೀಡಿದ ಭೇಟಿಯ ಕಾಲದಲ್ಲಿ ಪ್ರತಿಯೊಂದು ಕಡೆಯೂ ಇಂತಹ ಸಹಕಾರವು ತುಂಬಾ ಲಭಿಸಿತೆಂದೆನಿಸುತ್ತದೆ.

"ನಾವು ಕಾಣಬಯಸಿದ ಪ್ರತಿಯೊಂದನ್ನೂ ನಾವು ಕಂಡಿದ್ದೇವೆ"—ಎಂದು ಭಾರತೀಯ ಮಹಿಳೆಯರ ರಾಷ್ಟ್ರೀಯ ಸಂಯುಕ್ತ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ಲಕ್ಷ್ಮಿ ರಘುರಾಮಯ್ಯ ಅವರು ಮಾಸ್ಕೋದಲ್ಲಿ ನಡೆದ ವಿದಾಯಕೂಟದಲ್ಲಿ ತಿಳಿಸಿದರು. ಭಾರತೀಯ ಅತಿಥಿಗಳ ಗೌರವಾರ್ಥವಾಗಿ ಸೋವಿಯೆತ್ ಮಹಿಳಾ ಸಮಿತಿಯು ಈ ಸತ್ಕಾರ ಸಮಾರಂಭವನ್ನು ಏರ್ಪಡಿಸಿತ್ತು. 'ಸೋವಿಯೆತ್ ಜನತೆಯು ನಮಗೆ ತೋರಿಸಲು ಉತ್ಸುಕರಾಗಿದ್ದದ್ದ ಕ್ಕಿಂತಲೂ ಹೆಚ್ಚು ವಿಷಯಗಳನ್ನು ನಾವು ಗಮನಿಸಿದ್ದೇವೆ. ಏಕೆಂದರೆ ಅವರು ತಮ್ಮ ನಿತ್ಯದ ರೂಢಿಯಲ್ಲಿ ವಿಶೇಷ ಮಹತ್ವವನ್ನು ಪೀಡಿಸ ಎಷ್ಟೋ ವಿಷಯಗಳ ಸ್ವರೂಪವು ನನಗೆ ವ್ಯಕ್ತವಾಗುತ್ತದೆ"—ಎಂದು ಶ್ರೀಮತಿ ರಘುರಾಮಯ್ಯ ಅವರು ಒತ್ತಿ ಹೇಳಿದರು.

ಭಾರತದ ಬಗೆಗೆ ಸೋವಿಯೆತ್ ಜನತೆಗಿರುವ ಪ್ರೇಮಕ್ಕೆ ನಿದರ್ಶನವಾಗಿ ಅವರೊಂದು ಘಟನೆಯನ್ನು ವಿವರಿಸಿದರು. ಶೋಲ್‌ಸ್ತೋಯ್ ಅವರು ವಾಸಿಸುತ್ತಿದ್ದ ಕೆಲಸ ಮಾಡುತ್ತಿದ್ದ ಮತ್ತು ತಮ್ಮ ಕಡೆಯು ಸಿರಿಳೆದ ತಾಣವಾದ ಯಾಸ್ನಯ ಪೊಲ್ಯಾನಕ್ಕೆ ಈ ನಿಯೋಗದ ಸದಸ್ಯೆಯರು ಹೋಗುತ್ತಿದ್ದಾಗ ನಡೆದ ಘಟನೆ ಇದು. ಬಸ್ಸಿನ ಜಾಲಕರು ಇದ್ದಕ್ಕಿದ್ದಂತೆಯೇ ಗಾಡಿಯನ್ನು ನಿಲ್ಲಿಸಿ, ಭಾರತೀಯ ನಿಯೋಗದ ಪ್ರಯಾಣಿಕರೆಲ್ಲರಿಗೂ ಮಂಜುಕೆನೆ ಹಲ್ವಾ ತಂದು, ಅದನ್ನು ಸ್ವೀಕರಿಸಬೇಕೆಂದು ಅತ್ಯಂತ ಆದರ ಪೂರ್ವಕವಾಗಿ ಕೋರಿದರು.

ರಶಿಯನ್ ಸಂಯುಕ್ತ ಗಣರಾಜ್ಯದಲ್ಲಿ ಮೂತ್ರವಲ್ಲದೆ ಕಜಾಖಸ್ತಾನದಲ್ಲಿಯೂ ಈ ನಿಯೋಗವು ಸಂಚರಿಸಿತು. ಇದು ಸೋವಿಯೆತ್ ಒಕ್ಕೂಟದಲ್ಲಿ ಎರಡನೆಯ ಅತ್ಯಂತ ದೊಡ್ಡ ಗಣರಾಜ್ಯ. "ಕ್ರಾಂತಿಗೆ ಮೊದಲು ಕಜಾಖಸ್ತಾನವು ಹೇಗಿತ್ತೆಂಬುದನ್ನು ನಾವು ಓದಿದ್ದೇವೆ. ಆಗ ಅದು ಬರಿಯ ದುಡಿಮೆಯ ನಾಡಾಗಿತ್ತು. ಆದರೆ ಈಗ ಅಲ್ಲಿ ನಾವು ಕಂಡಿರುವ ವಿಶೇಷತೆಯನ್ನು ಕಲ್ಪಿಸಿ ಕೊಳ್ಳುವ ಪ್ರಯತ್ನವೂ ಊಹಾತೀತವಾದುದೇ. ಗಣ ರಾಜ್ಯದ ರಾಜಧಾನಿ ಆಲ್ಮ ಆತ ನಗರವು ಅದ್ಭುತವಾಗಿದೆ. ಆಲ್ಲಿನ ಜನರೂ ಉಲ್ಲೇಖನೀಯರೇ. ಕಜಾಖಿ ಜನರ ಆರ್ಥಿಕ ಪುನರುತ್ಥಾನಗಳಿಂದ ಮಾತ್ರವಷ್ಟೇ ಅಲ್ಲದೆ, ಅವರ ಸಾಂಸ್ಕೃತಿಕ ವಿಕಾಸ ಸಾಧನೆಯಿಂದಲೂ ನಾವು ಪ್ರಭಾವಿತರಾದೆವು" ಎಂದು ಶ್ರೀಮತಿ ತೀಲಾ ಕೌಲ್ ಹೇಳಿದರು. "ವಿಭಿನ್ನ ಜನತೆಗಳ ಪ್ರತಿನಿಧಿಗಳು ತಮ್ಮ ಸಮಾನ ರಚನಾತ್ಮಕ ಕಾರ್ಯಸಾಧನೆಯಲ್ಲಿ ಒಂದುಗೂಡಿದ್ದು, ಅದೇ ನೇಳೆಯಲ್ಲಿ, ಈ ಏಕತೆಯಲ್ಲಿ ಸಮೃದ್ಧಗೊಳ್ಳುತ್ತಿರುವ ತಮ್ಮ ರಾಷ್ಟ್ರೀಯ ಲಕ್ಷಣಗಳನ್ನೂ ಉಳಿಸಿಕೊಂಡಿದ್ದಾರೆಂಬ ವಾಸ್ತವಾಂಶವು ಸೋವಿಯೆತ್ ದೇಶದ ಸ್ಮರಣಾರ್ಹ ವೈಶಿಷ್ಟ್ಯವೆಂದು ಆಕೆ ತಿಳಿಸಿದರು.

ಭಾರತೀಯ ಮಹಿಳೆಯರು ಮಾಡುತ್ತಿರುವ ಕಾರ್ಯವನ್ನು ಭಾರತೀಯ ಅತಿಥಿಗಳು ವಿವರಿಸಿದರು. ನವಭಾರತ ನಿರ್ಮಾಣ ಕಾರ್ಯದಲ್ಲಿಯೂ, ಅವರು ಎದುರಿಸುತ್ತಿದ್ದ ಸಮಸ್ಯೆಗಳ ಬಗ್ಗೆಯೂ ಸೋವಿಯೆತ್‌ಮಹಿಳೆಯರು ವಿಶೇಷಾಸಕ್ತಿಯನ್ನು ವ್ಯಕ್ತಪಡಿಸಿದರು. ಅವರ ಕೋರಿಯ ಮೇಲೆ ಭಾರತೀಯ ನಿಯೋಗದ ಸದಸ್ಯೆಯರು ಇತ್ತೀಚೆಗೆ ಭಾರತದಲ್ಲಿ ನಡೆದ ಚುನಾವಣೆಗಳಲ್ಲಿ ತಮ್ಮ ಸಂಘಟನೆಗಳು ವಹಿಸಿದ ಪಾತ್ರವನ್ನು ವಿವರಿಸಿದರು.

"ನಾಡಿನ ಸಾಮಾಜಿಕ ಜೀವನದಲ್ಲಿ ಭಾರತೀಯ ಮಹಿಳೆಯರು ನಿರಂತರವಾಗಿ ಹೆಚ್ಚು ವ್ಯಾಪಕವಾದ ಸಹಯೋಗವನ್ನು ನೀಡುತ್ತಿದ್ದಾರೆ. ಸೋವಿಯೆತ್ ನಾಡಿನ ಮಹಿಳೆಯರ ಉದಾಹರಣೆಯಿಂದ ನಮಗೆ ಸ್ಫೂರ್ತಿಯುಂಟಾಗಿದೆ"— ಎಂದು ಶ್ರೀಮತಿ ಲಕ್ಷ್ಮಿ ರಘುರಾಮಯ್ಯ ಹೇಳಿದರು.

ಸೋವಿಯೆತ್ ದೇಶದ ಎಲ್ಲ ಕಾರ್ಯಕ್ಷೇತ್ರಗಳಲ್ಲೂ ಮಹಿಳೆಯರು ಕೆಲಸ ಮಾಡುತ್ತಿರುವುದನ್ನು ನಾವು ಕಂಡಿದ್ದೇವೆ. ಮಹಿಳಾ ಸಮಿತಿಯಲ್ಲಿ ನಡೆದ ಸಮಾರಂಭವೇ ಅದಕ್ಕೊಂದು ನಿದರ್ಶನವೆಂದು ಶ್ರೀಮತಿ ಕೌಲ್ ಹೇಳಿದರು. ಆಲ್ಲಿ ದುಂಡು ಮೇಜಿನ ಸುತ್ತಲೂ ಕುಳಿತಿದ್ದವರಲ್ಲಿ ಕಲಾವಿದೆ ವೇರ ಆರಲೊವ, ವಿಜ್ಞಾನಿ ತಮಾರ ದೆವ್ಯಾತ್ಕಿನ, ನೆಯ್ಗೆಯ ಕಾರ್ಯನಿಪುಣೆ ಮತ್ತು ಸರ್ವೋಚ್ಚ ಸೋವಿಯೆತ್ತಿನ (ಸಂಸತ್) ಸದಸ್ಯೆ ವಾಲೆಂತಿನ ಪಪೂಗಿನ, ವಕೀಲ ವೃತ್ತಿಯ ರಿಮ್ಮಾ ಕಲಿಸ್ತ್ರಾತೊವ ಮತ್ತು ಡಾಕ್ಟರ್ ನೀನ್ ಕ್ರಿಲೊವ ಅವರುಗಳಿದ್ದರು.

"ಇಲ್ಲಿ, ಈ ಮೇಜಿನ ಬಳಿಯಲ್ಲಿ, ಎದೆಯ ಮೇಲೆ ಹತ್ತಾರು ಪ್ರಶಸ್ತಿಗಳ ಪಟ್ಟಿಗಳುಳ್ಳ ಮಹಿಳೆಯೊಬ್ಬರಿದ್ದಾರೆ. ನಾಡಿನ ಜೀವನದ ಇತರ ವಲಯಗಳಲ್ಲಿನಂತೆಯೇ ಸಾಯುಧ ಸೇನೆಗಳಲ್ಲಿಯೂ ಸೋವಿಯೆತ್ ಮಹಿಳೆಯರೂ ನಿಜವಾಗಿಯೂ ಸಮಾನ ಸ್ಥಾನದಲ್ಲಿದ್ದಾರೆಯೆ?"—ಎಂದು ಕೌಲ್ ಕೇಳಿದರು.

ಮರೀನ ಚೇಜ್ಜಿನ ಅವರ ಕುರಿತು ಆಕೆ ಮಾತನಾಡುತ್ತಿದ್ದರು. ಈ ಮಾತನ್ನು ಕೇಳಿ ಚೇಜ್ಜಿನ ಅವರು ಮುಗುಳ್ನಕ್ಕು ತಲೆಯನ್ನಲ್ಲಾಡಿಸಿದರು. "ಮಹಿಳೆಯರು ಪುರುಷರೊಂದಿಗೆ ಸಮಾನತೆಗಾಗಿ ಸ್ಪರ್ಧಿಸದಿರುವ ಏಕಮಾತ್ರ ಕ್ಷೇತ್ರವು ಪ್ರಾಯಶಃ ಸೈನಿಕ ವಲಯವೊಂದೇ ಆವರನ್ನು ಕಡ್ಡಾಯವಾಗಿ ಸೈನ್ಯಕ್ಕೆ ಭರ್ತಿ ಮಾಡಲಾಗುತ್ತಿಲ್ಲ ಮೂವತ್ತು ವರ್ಷಗಳ ಹಿಂದೆ ಫಾಸಿಸ್ಟ್ ಜರ್ಮನಿಯು ನಮ್ಮ ದೇಶಕ್ಕೆ ಮುತ್ತಿಗೆ ಹಾಕಿದ್ದಾಗಲೂ ಮಹಿಳೆಯರನ್ನು ಸೈನ್ಯಕ್ಕೆ ಭರ್ತಿ ಮಾಡಲಿಲ್ಲ. ಆದರೂ ಸಾವಿರಾರು ಮಂದಿ ಮಹಿಳೆಯರು ತಾವಾಗಿಯೇ ಯುದ್ಧ ರಂಗಕ್ಕೆ ಬಂದರು. ಅವರಲ್ಲಿ ನಾನೂ ಒಬ್ಬಳು. ನಾನು ಮಹಿಳೆಯರ ವಾಯುಸೇನಾ ವೃಂದದಲ್ಲಿದ್ದೆ. ಈ ವೃಂದದವರು ಯುದ್ಧೋದ್ದೇಶದ ಸಾವಿರಾರು ವಿಮಾನೋಡ್ಡಯನಗಳಲ್ಲಿ ಭಾಗವಹಿಸಿದರು. ನನ್ನ ಸ್ನೇಹಿತೆಯರು ಅನೇಕ ಜನರು ತಾಯ್ನಾಡ ರಕ್ಷಣೆಯ ಕಾರ್ಯದಲ್ಲಿ ಪ್ರಾಣಾರ್ಪಣೆ ಮಾಡಿದರು"—ಎಂದು ಮರೀನ ಚೇಜ್ಜಿನ ಅವರು ನುಡಿದರು.

"ಇದರ ಮನರಾವರ್ತನೆಯು ಪುನಃ ಎಂದೂ ಆಗಕೂಡದು. ನಾವು ಬೇರೇನನ್ನೂ ಬಯಸುತ್ತಿಲ್ಲ. ಇದೇ ಕಾರಣದಿಂದ ನಾವು, ಸೈನಿಕ ಸೇವೆಗೆ ಬದ್ಧರಲ್ಲದ ಶಾಂತಿಶೀಲ ಮಹಿಳೆಯರು ಶಾಂತಿಯನ್ನು ಉಳಿಸುವುದಕ್ಕಾಗಿಯೂ ಬಲಪಡಿಸುವುದಕ್ಕಾಗಿಯೂ ಕೆಲಸ ಮಾಡಲೇ ಬೇಕು. ನಮ್ಮ ಸಂಖ್ಯೆಯು ಹೆಚ್ಚಿದಷ್ಟೂ, ನಮ್ಮ ಕೈಗಳಲ್ಲಿ ಶಾಂತಿಯೂ ಹೆಚ್ಚು ಸುರಕ್ಷಿತವಾಗುತ್ತದೆ. ಇದೇ ಕಾರಣದಿಂದಲೇ ನಾವು ನಿರ್ಮೂಲನೆಗೆ, ಸಮಾನ ಲಕ್ಷ್ಯ ಸಾಧನೆಗಾಗಿ ಮುನ್ನುಡೆಯುತ್ತಿರಲು ನಮಗೆ ಸಂತೋಷವಾಗುತ್ತಿದೆ"—ಎಂದು ಮರೀನ ಅವರು ಹೇಳಿದರು.

ಭಾರತದ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರಿಂದ ಒಂದು ಸಂದೇಶವನ್ನು ಭಾರತೀಯ ಮಹಿಳೆಯರು ತಂದರು. ಎರಡೂ ದೇಶಗಳ ಮಧ್ಯೆ ಅನೇಕ ಮಟ್ಟಗಳಲ್ಲಿ ಸಕ್ರಿಯಬಂಧಗಳನ್ನು ಸ್ಥಾಪಿಸಿಕೊಳ್ಳಲಾಗುತ್ತಿದೆಯೆಂದು ಅವರು ಆ ಸಂದೇಶದಲ್ಲಿ ತಿಳಿಸಿದ್ದಾರೆ. ಮಹಿಳೆಯರು ಪ್ರತಿಯೊಂದು ವ್ಯಕ್ತಿಗಳಾಗಿಯೂ ಸಂಘಟನೆಗಳ ಸದಸ್ಯೆಯರಾಗಿಯೂ ಪರಸ್ಪರ ಸ್ನೇಹ–ಸೌಮನಸ್ಯ ಸ್ಥಾಪನೆಗೆ ವಿಶೇಷ ಸಹಾಯಕರಾಗಿರಬಹುದೆಂದು ಅವರು ಸೂಚಿಸಿದ್ದಾರೆ.

ಭಾರತೀಯ ಮಹಿಳೆಯರು ಸ್ವದೇಶಕ್ಕೆ ಪ್ರಯಾಣ ಬೆಳೆಸುತ್ತ, ಸೋವಿಯೆತ್ ಮಹಿಳಾ ಸಮಿತಿಯಿಂದ ಶ್ರೀಮತಿ ಇಂದಿರಾ ಗಾಂಧಿಯವರಿಗಾಗಿ ಉತ್ತರ ರೂಪದ ಸಂದೇಶವನ್ನು ಕೊಂಡೊಯ್ದರು. ಅದರಲ್ಲಿ ಭಾರತೀಯ ಮಹಿಳೆಯರ ಚಟುವಟಿಕೆಗಳಿಗೆ ವಿಶೇಷ ಬೆಲೆ ಕಟ್ಟಲಾಗಿದೆ. ಪ್ರಪಂಚ ಶಾಂತಿಗಾಗಿಯೂ ನೆಮ್ಮದಿಗಾಗಿಯೂ ಮಹಿಳೆಯರು ನಡೆಸುವ ಹೋರಾಟವು ಜಯಪ್ರದವಾಗುವುದೆಂಬ ದೃಢವಿಶ್ವಾಸವನ್ನು ಆ ಸಂದೇಶದಲ್ಲಿ ವ್ಯಕ್ತಪಡಿಸಲಾಗಿದೆ.

●●

ಸುಬ್ರಹ್ಮಣ್ಯ ಚಂಪಾಷಷ್ಠಿ

ದಕ್ಷಿಣ ಕನ್ನಡ ಜಿಲ್ಲಾ ಸುಳ್ಯ ತಾಲ್ಲು ಸುಬ್ರಹ್ಮಣ್ಯ ಗ್ರಾಮದಲ್ಲಿರುವ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ಹಲ್ಲಿ ಪೂರ್ವ ಶಿಷ್ಟ ಸಂಪ್ರದಾಯ ಪ್ರಕಾರ ಇದೇ ವಿರೋಧಿಕೃತ್ ಸಂವತ್ಸರದ ಕಾರ್ತಿಕ ಬಹುಳ ೧೩ ಯು ರವಿವಾರ ತಾರೀಕು 14–11–71 ರಿಂದ ಉತ್ಸವವು ಪ್ರಾರಂಭವಾಗಿ ತಾ 17–11–71 ರಲ್ಲು ಲಕ್ಷ ದೀಪೋತ್ಸವ, ತಾ 22.11.71ರಲ್ಲು ಹೂವಿನ ತೇರು ಉತ್ಸವ. ತಾ 23.11.71ರಲ್ಲು ಪಂಚಮಿ ರಥೋತ್ಸವ. ತಾ 24.11.71ರಲ್ಲು ಚಂಪಾಷಷ್ಠಿ ಮಹಾ ರಥೋತ್ಸವ, ತಾರೀಕು 25.11.71ರಲ್ಲು ಅವಭೃತೋತ್ಸವವೇ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗಲ್ಪಡುತ್ತವೆ.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ ೧–75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಲಾಗುವುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

Gram : VISHWA Tel: 28111 & 28112

When at Bangalore
Stay at

HOTEL NATARAJA

Restaurant, Boarding & Lodging.
107 Police Road. City Market,
BANGALORE-2

Centrally situated, delicious food,
Comfortable rooms, Courteous service.

Attached bath rooms with running hot and cold water.
Telephone attached rooms.

ಲಘು ಪರಿಚಯ

ಶ್ರೀ ಕೆ. ವೆಂಕಟರಾಯಾಚಾರ್ಯರ ಸಾಹಿತ್ಯ – ಸಂಶೋಧನಗಳು

ಸುರತ್ಕಲ್ಲಿನ ವಿದ್ವಾನ್ ಶ್ರೀ ಕೆ. ವೆಂಕಟರಾಯಾಚಾರ್ಯ, ಇವರು ಈ ಮೂವತ್ತು ವರ್ಷಕ್ಕೂ ಮಿಕ್ಕಿದ ಅವಧಿಯಲ್ಲಿ, ನಾನಾತರದ ಪತ್ರಿಕೆಗಳಲ್ಲಿಯೂ, ಸಂಭಾವನ ಗ್ರಂಥಗಳಲ್ಲಿಯೂ, ನ್ಯಾರಕ ಸಂಪುಟಗಳಲ್ಲಿಯೂ ಪ್ರಕಟವಾದ ಸಾಹಿತ್ಯಕೃತಿಗಳ ಸಂಪಾದನ (ಪ್ರಕಟನ). ವಿಮರ್ಶನ, ಸಂಶೋಧನ ಸರಣಿಗಳನ್ನೊಳಗೊಂಡ ಹಲವಾರು ಹಿರಿಯರ—ಕಿರಿಯರ ಗ್ರಂಥ-ಲೇಖನಗಳನ್ನು ಓದಿ ಕೊಳ್ಳುತ್ತಾ, ಅವುಗಳ ಸಾರವನ್ನು ನೆನಪಿರಿಸಿಕೊಂಡು, ಆ ಬಗೆಯಲ್ಲಿ ತನ್ನ ನಿಷ್ಪಕ್ಷಪಾತದ-ಸಾಧಾರವಾದ ಆಶಯವನ್ನು ವೈಶ್ಲೆಷಿಸುವಲ್ಲಿ ತುಂಬ ಪರಿಶ್ರಮಿಸುತ್ತಿದ್ದಾರೆ.

ಲೇಖನಾರಂಭ: 'ವಾಲ್ಮೀಕಿ ರಾಮಾಯಣ'ವು ಶ್ರೀರಾಮನ ಪುಣ್ಯ ಪಟ್ಟಾಭಿಷೇಕದ ಮೇಲೇನೇ ರಚಿತವಾಗಿರಬೇಕೆಂಬ ವಿಮರ್ಶಾತ್ಮಕ—ಪ್ರಾಥಮಿಕ ಲೇಖನವು 1942ರಲ್ಲಿ ಧಾರವಾಡದ 'ಜಯ ಕರ್ನಾಟಕ'ದಲ್ಲಿ ಪ್ರಕಟವಾಗಿದೆ. ಮಹಾಭಾರತ ಗ್ರಂಥವಲ್ಲಿ ಹಿರಿಯ ವ್ಯಕ್ತಿಯೂವ 'ಭೀಷ್ಮ ಸ್ವಯಂ ಬ್ರಹ್ಮಚಾರಿಯೋ? ನಿವಾಹಿತನೋ?' ಎಂಬ ಬಗೆಗೆ ಸಂಸ್ಕೃತದಲ್ಲೇ ಬರೆದ ಇವರ ಲೇಖನ ಅಯೋಧ್ಯೆಯ 'ಸಂಸ್ಕೃತಂ' ಸಾಪ್ತಾಹಿಕದಲ್ಲೂ, ಮಂಗಳೂರ 'ಕಂಠೀರವ'ದಲ್ಲೂ ಮೊದಲಾಗಿ ಪ್ರಕಾಶನಗೊಂಡ ವಿಮರ್ಶಾತ್ಮಕ ವಾದವಾಗಿದೆ. ಶ್ರೀ ಎಂ. ಗೋವಿಂದ ಭೈಯವರು (1935ರಲ್ಲಿ) ಬರೆದ 'ನೀನ್ ಆರ್‌ಗೆ' ಎಂಬ ಶಬ್ದಾರ್ಥ ವಿಚಾರದಲ್ಲಿ ತನಗೆ ಕಾಣುವ ಆಕಯೊಂತರವನ್ನು ಸಾಧಾರವಾಗಿ ಬರೆದುದು (ಗೆ ಪ್ರತ್ಯಯವಿಚಾರ) ನೈಸೂರ ವಿಶ್ವವಿದ್ಯಾಲಯದ 'ಪ್ರಬುದ್ಧ ಕರ್ಣಾಟಕ'ದಲ್ಲಿ (1949ರಲ್ಲಿ) ಮೊದಲಾಗಿ ಪ್ರಕಟವಾದ ಇವರ ಸಂಶೋಧನ ಲೇಖನವಾಗಿದೆ.

ಸಂಗ್ರಹಣ: ಆ ಮೊದಲಲ್ಲಿ, ನೆರೆಯ ಶ್ರೀ ಚಿತ್ರಾಪುರ ದುರ್ಗಾಲಯದ ಮೂರು ಶಿಲಾಶಾಸನಗಳ ಸಾದಾ ಪ್ರತಿ ತಾಳೆಗರಿಯಲ್ಲಿದ್ದಂತೆ ಬರೆದು 'ಯುಗಪುರುಷ'ದಲ್ಲೂ 'ಕಂಠೀರವ'ದಲ್ಲೂ ಪ್ರಕಟಿಸಿದ್ದರು. ಆಸುಪಾಸಿನ ಗ್ರಾಮಗಳಲ್ಲಿ 'ನಾರಾಯಣ ಕವಿಯ ಉತ್ತರ ರಾಮಕತೆ' ಮತ್ತು ಕನ್ನಡ ಆದಿತ್ಯ ಪುರಾಣಗಳೆಂಬೆರಡು ತಾಳೆ ಪ್ರತಿಗಳನ್ನು ಸಂಪಾದಿಸಿದರು.

ಪ್ರಕಾಶನ: ಮೈಸೂರು ಸರ್ಕಾರದ ಸಾಹಿತ್ಯ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಖಾತೆಯ ಧನಸಹಾಯವೊದಗಿದ ಪ್ರಯುಕ್ತ 'ಉತ್ತರ ರಾಮಕತೆ'ಯು ಪ್ರಕಟನೆಗೆ ಹಲವಾರು ಮಂದಿ ಇವರಿಗೆ ನೆರವಿತ್ತರು. ಅಂತೆ 'ಕನ್ನಡ ಆದಿತ್ಯ ಪುರಾಣ'ದ ಒಂದನೆ ಸಂಪುಟ (15ಸಂಧಿ) ಪುಸ್ತಕಾಕಾರವಾಗಿ ಇವರಿಂದ ಪ್ರಕಟವಾಗಿದೆ.

1956ರಲ್ಲಿ, ಆ ಮೊದಲು ಬೇರೆ ಬೇರೆ ಪತ್ರಿಕೆಗಳಲ್ಲಿ ಲೇಖನಗಳಾಗಿ ಪ್ರಕಟವಾಗಿದ್ದು, ಹಸ್ತಾಕ್ಷರ ಪ್ರತಿಯಾಗಿ ತಯಾರಿಸಿದ 'ಸಂಶೋಧನಾತ್ಮಕ ಲೇಖನಗಳು (ಸಾಹಿತ್ಯದ ಹಿನ್ನೆಲೆ)' ಇದಕ್ಕೆ ಮದರಾಸ್ ಸರ್ಕಾರದ ವತಿಯಿಂದ ಬಹುಮಾನವೊದಗಿತ್ತು. ಅದು ಹುಬ್ಬಳ್ಳಿಯ 'ಸಾಹಿತ್ಯ ಭಂಡಾರ'ದಿಂದ ಪ್ರಕಟವಾಗಿದೆ.

1949ರ ಹಿಂದಿನಿಂದಲೂ ಶ್ರೀ ಆಚಾರ್ಯರು ಪುಣೆಯ ಭಾಂಡಾರ್ಕರ್ ಸಂಸ್ಥೆಯ ವಿಶ್ವವಿಖ್ಯಾತರಾದ ಕ್ಯುರೇಟರ್, ಡಾ| ಪಿ. ಕೆ. ಗೋಡೆಯವರಲ್ಲಿ ಪತ್ರ ವ್ಯವಹಾರ ಸಂಪರ್ಕವಿರಿಸಿಕೊಂಡಿದ್ದರು; ಡಾ. ಗೋಡೆಯವರ ಹಲವು ಲೇಖನಗಳ ಮೇಲಚ್ಚು ಇವರಲ್ಲಿರುವುದು ಈ ಬಗೆಗೆ ನಿದರ್ಶನವಾಗಿದೆ.

1939ರ ಸಾಲಿಗೆ ಇವರಿಗೆ ದೊರಕಿದ ಕನ್ನಡ ಪದ್ಯಕಾವ್ಯ 'ಶುಕಸಪ್ತತಿ'ಯೆಂಬುದು ಇದುವರೆಗೆ ಅಪ್ರಕಟಿತವಾದ ಕೃತಿರತ್ನವಾಗಿದೆ. ಚಿಕ್ಕ ಪುಸ್ತಿಕೆಯೊಕಾರದಲ್ಲಾದರೂ ಇದರ ಪರಿಚಯ (ಮೂಲ ರೂಪದಲ್ಲಿ) ಕನ್ನಡಿಗರಿಗೆ ಒದಗಿಬರಲೆಂಬ ಹಟದಿಂದ ಕಾರ್ಯ ಪ್ರವೃತ್ತರಾಗಿವ್ವಾರೆಂದರೆ, ಇವರ ಹಟನಾದಕ್ಕೆ ಜೇರೆ ಉದಾಹರಣೆಗಳು ಬೇಕಾಗಿಲ್ಲ.

1968ರಲ್ಲಿ ಬೇರೆ ಬೇರೆಡೆ ಪ್ರಕಟವಾದ ತನ್ನ ಹನ್ನೆರಡು ಲೇಖನಗಳನ್ನು ಒಟ್ಟಿಸಿ 'ಸಾಹಿತ್ಯ ಹಾಗೂ ಸಂಶೋಧನೆ'ಯೆಂಬ ಹೆಸರಲ್ಲಿ ಪ್ರಕಟಿಸಿದ್ದಾರೆ. ಶ್ರೀ ಆಚಾರ್ಯರು ಕಾಳಿದಾಸನ ಕೃತಿಗಳಲ್ಲಿ ದಾಪದ ಪ್ರಭಾವವು ಇತ್ತೀಚೆಗೆ ನೈಸೂರಲ್ಲಿ ಪ್ರಕಟನಾದ 'ಸವಿನೆನಪು' (ಶ್ರೀ ತ. ಸು. ವೆಂಕಣ್ಣಯ್ಯನವರ ಸ್ಮಾರಕ ಗ್ರಂಥ) ಎಂಬುದರಲ್ಲಿ ಆಡಕವಾಗಿದೆ ಶ್ರೀ ಶಿವಮೂರ್ತಿ ಶಾಸ್ತ್ರಿಗಳ ಸಂಭಾವನಗ್ರಂಥ 'ವೇಣುಗಂಗೆ'ಯಲ್ಲಿ ಮತ್ತಿತರ ಪತ್ರಿಕೆಗಳಲ್ಲಿ ಪ್ರಕಟವಾದ ಹಲವಾರು ಚಿಕ್ಕ ದೊಡ್ಡ ಬರಹಗಳು ನಾಡಿನ ಹಿರಿಯರಿಂದ ಸನಾವೃತವಾಗಿವೆ. ಶ್ರೀಯುತರು ಕನ್ನಡದಲ್ಲಿ ಮೂತ್ರಪಲ್ಲಿ, ಸಂಸ್ಕೃತ ಭಾಷೆಯಲ್ಲೂ ಉತ್ತಮ ವಿಷಯದ ಲೇಖನಗಳನ್ನು ಬರೆದಿವ್ವಾರೆ. ಡಾ| ಪಿ. ಕೆ. ಗೋಡೆಯವರ ನಂಬಾವನ ಗ್ರಂಥದಲ್ಲಿರುವ 'ಶ್ರೀ ಮಧ್ವಾಚಾರ್ಯರ ಕಾಲಮಾನ ವಿಚಾರ, ಪುಣೆಯ 'ಪಿರಿಯಂಟಲಿಸ್ಟ್' ತ್ರೈಮಾಸಿಕದಲ್ಲಿ ಬರೆದ 2 ಲೇಖನಗಳು ಕುರುಕ್ಷೇತ್ರದ ವಿಶ್ವವಿದ್ಯಾಲಯದ 'ಪ್ರಾಜ್ಞೇ' ಸಂಕಲನದಲ್ಲಿ ಹೇಳಿಕೆ. ಡಿಲ್ಲಿಯ ಡಾ| ರಘು ವೀರರ 'ಶ್ರದ್ಧಾಂಜಲಿ'ಯಲ್ಲಿ, ಅವರ ಲೇಖನದ ಮಹತ್ವವೇನೆಂದು ಬರೆಮದು ಪ್ರಕಟವಾಗಿದೆ. ಪುಣೆಯ ದ್ವೈವೃತ ಸಿದ್ಧಾಂತ ಪ್ರಕಾಶಿನಿಯೆಂಬ ಮರಾಠಿ ಮಾಸಿಕವಲ್ಲಿ 'ಉಡ್ಡಿ ಪರ್ಯಾಯದ ಪರಿಚಯ' ಲೇಖನವ ಅನುವಾದವಿದೆ. ಭಾಷಣಗಳನ್ನು ಕೈಗೊಂಡರೂ ಶ್ರೀ ಆಚಾರ್ಯರು ಸಿರರ್ಗಳವಾಗಿ ಸರಸವಾಗಿ ವಿಷರಿಸಬಲ್ಲರು. ಆದರೆ. ಲೇಖನಗಳಲ್ಲಿ ಹೆಚ್ಚು ಆಸಕ್ತಿಯಿರುವುದು ಇವರ ಜಾಯಮಾನಕ್ಕೆ ಸೇರಿದೆ. ಪುರಾತನ ಕೃತಿಗಳ ವಿಮರ್ಶೆ ಸಂಶೋಧನೆಗಳಲ್ಲದೆ, ಆ ಬಗೆಗೆ ಆಳವಾದ ಚರ್ಚೆಗೆ ಶ್ರೀ ವೆಂಕಟರಾಯಾಚಾರ್ಯರು ಉತ್ಸಾಹದಿಂದಲೂ ಆದರದಿಂದಲೂ ಪ್ರವರ್ತಿಸುವರು. ಈ ಬಗೆಗೆಹಲವಾರು ಕಡೆಗಳ ಹಿರಿಯರಲ್ಲಿ ವೈಯಕ್ತಿಕವಾಗಿ ಸರಸವಾಗಿ ವಿಷರಿಸಿ, ವಿಷಯಾಂಶಗಳ ಸಾರವನ್ನು ಸಂಗ್ರಹಿಸಿ ತಕ್ಕ ತೂಲನಾತ್ಮಕ ಹಾಗೂ ವಿಮರ್ಶಾತ್ಮಕ ಮತ್ತು ವೈಜ್ಞಾನಿಕ ರೀತಿಯಲ್ಲಿ ವಿಷರಿಸುತ್ತಾರೆ.

—ಪರಿಚಿತರಲ್ಲೊಬ್ಬ, ಸುರತ್ಕಲ್ಲು.

ಬೇಕಿದೆ—
ಪಟ್ಟೆ ಹೊಲಿಯುವ ಸಿಂಪಿಗ

(ನಾಲ್ಕನೇ ಪುಟದಿಂದ)

'ಹೌದೂಂತೇನೆ. ಪ್ರಾಯಃ ಇದೇ ಸ್ಥಿತಿ ಉಳಿದೆಡೆಯೂ ಇರಬಹುದು....'

'ಇರಬಹುದು ಅಲ್ಲ; ಇದೆ....'

'ಯಾಕೆ ಹಾಗಂತೀರಿ?'

'ಆಲ್ವೆ ಮುಂದಿನ ನಾಲ್ಕು ತಿಂಗಳಲ್ಲಿ ವಿಧಾನ ಸಭಾ ಚುನಾವಣೆ ಬರುತ್ತೆ. ಆದರೊಳಗೆ ಸಕ್ಕದ ಚುನಾವಣೆಗಳೆಲ್ಲವನ್ನೂ ಮುಗಿಸಿಬಿಡಬೇಕಿತ್ತು..... ಆದ್ರೆ ಇಂಡಿಕೇಟು ನಾಯಕರು ಆದಕ್ಕೆ ಹಿಂಜರಿಯುತಿದ್ದಾರೆ.'

'ಅಲ್ರಿ, ಇದಕ್ಕೂ ತಿದಕ್ಕೂ ಸಂಬಂಧ ವೇನೂಂತ '

'ಭಾರೀ ಭಾರೀ ಸಂಬಂಧವಿದೆ ಕಣೇ. ಪಕ್ಷದೊಳಗಿನ ಅಸಮಾಧಾನ ಸಕ್ಕದ ಚುನಾವಣೆಗಳ ವೇಳೆ ಭುಗಿಲೆದ್ದು ಬಿಟ್ಟರೆ, ಇಂದಿಡಿಕೇಟು ಹೂರಣ ಕರಟೆ ದುರ್ಗಾಸನೆ ಸೂಸುವುದು.?

'ಅದಕ್ಕೆಂಪೇ ತೇಪೆ ಹಾಕುವ ಪ್ರಯತ್ನ ವೆಂದು ತೋರುತ್ತದೆ'

'ಹ್ಞೂಂ....'

'ಅಲ್ರಿ, ಇದೇ ರೀತಿ ಸಿಂಡಿಕೇಟಿನಲ್ಲೂ ಇದೆಯಲ್ಲಾ ...'

'ಎಲ್ಲವೂ ಒಂದೇ. ಅಧಿಕಾರ ಪ್ರಾಪ್ತರು ಅಧಿಕಾರ ಚ್ಯುತರು– ಇವರ ನಡುವಣ ಕಿತಾಪತಿಯೇ ಬಂಡಾಯದ ಮೂಲ. ಈಗ ಇಂಡಿಕೇಟಿನಲ್ಲಿ ಮೂಡಿರುವ ಬಂಡಾಯದ ಮನೋಭಾವನೆಯನ್ನು ನಿರ್ನಾಮಗೊಳಿಸಲು ವ್ಯಾಯಃ ಇಂದಿರಾಗಾಂಧಿಗೂ ಸಾಧ್ಯವಿಲ್ಲ. ಬದ್ದರಿಂದಲೇ ಜಂದ್ರಶೇಖರರ ವಿಜಯ ತನ್ನ ಸೋಲಲ್ಲವೆಂದು ಆಕೆ ಉಗ್ಗಡಿಸಿದ್ದು....'

'ಹ್ಞೂಂ.... ನಮ್ಮ ಆಕೆ ವಿದೇಶ ಯಾತ್ರೆಗೆ ಹೊರಟಿದ್ದಾರಲ್ಲಾ? ಬಂಡಾಯ ಮುಂಬಯಲೆಂದು ಸಂಜೀವಿನೀ ಮೂಲಿಕೆ ತಂದಾರು....'

'ತಂದಾರು ಕಣೇ ತಂದಾರು ಆದರೆ ನೋಡು, ಎಲ್ಲಿರ ಮೈಗೂ ಪೆನ್ಸಿಲಿನ್ ಸರಿ ಹೊಂದ.ವುದಿಲ್ಲ. ಅಧಿಕಾರ ಲೋಲುಪ ಸ್ವಾರ್ಥ ಸಾಧಕರಿಗೆ ಯಾವ ಉಪದೇಶವೂ ಪಥ್ಯವಾಗುವುದಿಲ್ಲ '

'ಹ್ಞೂಂ....'

'ಏನು?'

'ಏನೋ ತಸ್ಕೋದು? ಹೀಗೇ ಪರಿಸ್ಥಿತಿ ಮುಂದುವರಿದರೆ. ಇಂಡಿಕೇಟು ಕೂಡ ಸಿಡಿದು ಹೋಗ ಬಹುದೆನಿಸುತ್ತದೆ....'

'ಹೋದರೂ ಹೋಗಬಹುದು....'

'ಆಗ, ಇಂದಿರಾಗಾಂಧಿ ಏನಂದಾರು?'

'ಅದನ್ನು ಊಹಿಸಲೆ ಬಿಡುವುದೇ ಕ್ಷೇಮ....'

'ಯಾಕೆ?'

'ನಾವೇನಂದಾರೆಂದು ಕೊಳ್ಳುತ್ತೇವೋ ಅವರದಕ್ಕೆ ವಿರುದ್ಧ ಅಂತಾರೆ....'

'ಒಂದು ತರ ಚಂಡಿ .'

'ಛಿ, ಛಿ, ಹಾಗೆಲ್ಲ ಅನ್ನಬಾರದು.'

'ಮತ್ತೇನನ್ನ ಜೇಕು?'

'ಡಿಲ್ಲೀಶ್ವರೀ ವಾ ಜಗದೀಶ್ವರೀ ವಾ? ಪಟ್ಟೆ ಹೊಲಿಯುವ ಸಿಂಪಿಗಜೇಕಾಗಿದ್ದಾನೆ..'

'ಅಹಹ.. ಭಾರೀ ಪಸಂದು....'

'ಏನು...?'

'ಮತ್ತೇನು,...'

'ಓ....' —ಗೋರಾ.

●●

ಅಪೂರ್ವ ಯಕ್ಷಗಾನ ಗೋಷ್ಠಿ

ತಾ. 27-10-71ರಂದು ಉಡುಪಿಯ ಎಂ. ಜಿ. ಎಂ. ಕಾಲೇಜಿನಲ್ಲಿ ಜರಗಿದ ಯಕ್ಷಗಾನ ವೇಷಭೂಷಣ ಮತ್ತು ಆಭಿನಯ ಗೋಷ್ಠಿಯನ್ನು ಡಾ| ಟಿ. ಎಂ. ಎ ಪೈಯವರ ಅಧ್ಯಕ್ಷತೆಯಲ್ಲಿ ಕೆನರಾ ಜೇಂಬರ್ ಕಸ್ಟೋಡಿಯನ್ ಶ್ರೀ ಕೆ. ಪಿ. ಜೆ. ಪ್ರಭುರವರು ಉದ್ಘಾಟಿಸಿದರು. ಉಡುಪಿ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳಿಂದ ಯಕ್ಷಗಾನ ರೀತ್ಯಾ ಪ್ರಾರ್ಥನೆಯೊಡನೆ ಬಳಿಕ ಡಾ| ಶಿವರಾಮ ಕಾರಂತರು ಸ್ವಾಗತಿಸುತ್ತಾ, ದೀರ್ಘ ಕಾಲದ ಇತಿಹಾಸವುಳ್ಳ ಈ ಕಲೆ ತಲೆಮಾರಿನಿಂದ ಜನತೆಗೆ ಸಂತೋಷವನ್ನು ನೀಡುತ್ತಾ ಬಂದಿದೆ ಇದು ಜನಾಂಗವ ಸಂಸ್ಕೃತಿಗೆ ಕಾರಣವಾಗಿದೆ. ಕಲಾಜೀವಿಗಳಿಗೆ ಕಲೆಯೆ ಪರಂಪರೆಯ ಆರಿವು ಅವಶ್ಯ ಎಂದರು. ಆನಂತರ ಮುಂದುವರಿಯುತ್ತಾ ಯಕ್ಷಗಾನದ ವೇಷಭೂಷಣ ಪರಿಷ್ಕರಣ ಸುಂದರವಾದ ರಂಗ ಆವರಿ ಅಂದಿನ ಆಧುನಿಕ ರೀತಿಯ ಉಡುಪುಗಳ ಅನುಕರಣೆ ಯಕ್ಷಗಾನದಲ್ಲಿರುವುದಿಲ್ಲವೆಂಬ ಕಂಡು ಬರುತ್ತಿದ್ದು ಇದು ಆಪಾಯಕರವೆಂದೆ ಅನೇಕ ಈ ವಿಷಯದಲ್ಲಿ ಒಂದು ನಿಶ್ಚಿತ ಧೋರಣೆಯನ್ನು ಸಹಿಸಬಹುದು ಆವಶ್ಯ ಎಂದರು. ಯಕ್ಷಗಾನ ತಾರಜೇತ ಕೇಂದ್ರದ ಕುರಿತು ಪ್ರಸ್ತಾವಿಸಿ ಕೇಂದ್ರದ ಪ್ರಯೋಜನವನ್ನು ಪಡೆಯಬೇಕಾಗಿ ಕೇಳಿಕೊಂಡರು.

ಶ್ರೀ ಪ್ರಭುಗಳು ಉದ್ಘಾಟಿಸುತ್ತಾ, ಡಾ| ಕಾರಂತರ ಮುಖಾಂಡತ್ವದಲ್ಲಿ ಉಚ್ಚ್ರಾಯ ಸ್ಥಿತಿಗೆ ಬರುತ್ತಿರುವ ಪ. ಕೆ. ಚಿಟ್ಟೆಯ ಈ ಹೆಸ್ಮೆಯ ಕಲೆ ಎಲ್ಲ ಕಷೆಗಳಲ್ಲೂ ಹಬ್ಬುವಂತೆ ನೂಡಬೇಕಾಗಿ ವಿನಂತಿಸಿ ಈ ಕೇಂದ್ರಕ್ಕೆ ತಾನು ಶ್ರೀಮತಿ ಮೂರ್ಫ ಬರೆದ ಪತ್ರದಿಂದ ಪ್ರಭಾವಿತನಾಗಿ ವೇಷಭೂಷಣಗಳ ಬಗ್ಗೆ ಪ್ರಥಮ ಕಂತನ್ನು ನೀಡಿರುವುದಾಗಿ ತಿಳಿಸಿ ಇನ್ನು ಮುಂದೆಯೂ ತನ್ನಿಂದಾಗುವ ಸಹಾಯವೀಯುವುದಾಗಿ ಭರವಸೆಯಿತ್ತರು. ಶ್ರೀಮತಿ ಶಾಂತೇರಿ ಪ್ರಭುಗಳು ಕೆನರಾ ಜೇಂಕಿನವರು ನೀಡಿದ ವೇಷಭೂಷಣಗಳನ್ನು ಕೇಂದ್ರದ ಡೈರೆಕ್ಟರ್ ಶ್ರೀ ಕು.ಶಿ. ಹರಿದಾಸ ಭಟ್ಟರಿಗೆ ಒಪ್ಪಿಸಿದರು.

ಆಧ್ಯಕ್ಷತೆ ವಹಿಸಿದ್ದ ಡಾ| ಪೈಗಳು ತಮ್ಮ ಭಾಷಣದಲ್ಲಿ, ನಮ್ಮ ಸಂಸ್ಕೃತಿಯ ಬಗ್ಗೆ ನಮಗೆ ಹೆಮ್ಮೆ ಇರಬೇಕೆಂದು ತಿಳಿಸಿ ನಮ್ಮ ಭಾಷೆ, ಶಿಲ್ಪ, ಕಲೆ ಎಲ್ಲವು ಯಕ್ಷಗಾನ ಕಲೆಯಲ್ಲಿವೆ ಎಂದರು ಡಾ| ಕಾರಂತರು ಯಕ್ಷಗಾನ ಕ್ಷೇತ್ರದಲ್ಲಿಯೂ ಸಾಹಿತ್ಯ ಕ್ಷೇತ್ರದಲ್ಲಿಯಂತೆ ಕಾರ್ಯಮಾಡುತ್ತಿರುವುದು ಶ್ಲಾಘನೀಯವೆಂದರು. ಈ ವಿಚಾರಗೋಷ್ಠಿಯ ಮೂಲಕ ಕಲಾವಿದರು, ಆಸುಭನ ಪಡೆದು ತಮ್ಮಾಲಕ ಇತರರನ್ನು ರಂಜಿಸುವಂತಾಗಲೆಂದು ಹರಸಿದರು.

ಉಡುಪಿ ಯಕ್ಷಗಾನ ತರಜೇತಿ ಕೇಂದ್ರದ ಡೈರೆಕ್ಟರ್ ಶ್ರೀ ಕು.ಶಿ ಹರಿದಾಸ ಭಟ್ಟರು ನಂದನಾರ್ಪಣೆಗೈಯುತ್ತಾ, ನಿದ್ಯಾನಂತ ಜನ ಕರಿಗೆ ತಮ್ಮ ಪ್ರಯ ನೀದಿದ್ದಾರೆ ಎಂಪು ತಿಳಿಸಿ ಯಾವುದೋ ಹೊರ ಜೀನಪ ಕಲಾವಿದೆ ಬರೆದ ಸತ್ಯದಿದ ಆರ್ಥಿಕ ಕ್ಷೇತ್ರದಲ್ಲಿರುವವರು ಪ್ರಭಾವಿತರಾಗುವ್ರವಾರೆ ಇತರರ ಹೃದಯ ಕರಗುವುದಕ್ಕೆ ಹೆಚ್ಚು ಸಮಯ ಹೋಗದು. ಡಾ| ಕಾರಂತರು 15 ವರುಷಗಳಿಂದ ಈ ಕಲೆಯ ಕುರಿತು ಮಾಡಿದ ಪ್ರಯತ್ನಕ್ಕೆ ದೊರಿತ ಮನ್ನಣೆ ಇದು ಎಂದು ನುಡಿದರು ಬಳಿಕ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳಿಂದ 'ಉಷಾ ಪರಿಣಯ' ಬಯಕಾಟ ನಡೆಯಿತು.

ಒಂಭತ್ತು

ರಾಜರತ್ನಂ ಅಧ್ಯಕ್ಷತೆಯಲ್ಲಿ

ಜಿಲ್ಲಾ ಸಾಹಿತ್ಯ ಸಮ್ಮೇಳನ

ಕಾರ್ಕಳ ಶ್ರೀ ಭುವನೇಂದ್ರ ಕಾಲೇಜಿನಲ್ಲಿ ರತ್ನಾಕರ ಮಂಟಪದಲ್ಲಿ ತಾ. 31ರಿಂದ ಆರಂಭವಾದ ಎರಡು ದಿನಗಳ ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ಶ್ರೀ ಜಿ. ಪಿ. ರಾಜರತ್ನಂರವರ ಅಧ್ಯಕ್ಷತೆಯಲ್ಲಿ ಪ್ರೊ| ದೇ. ಜವರೇ ಗೌಡರು ಉದ್ಘಾಟಿಸಿದರು.

ವೆಂಕಟರಮಣ ದೇವಳದಿಂದ ಸಮ್ಮೇಳನದ ಮಂಟಪದ ವರೆಗೆ ಮುಖ್ಯ ಅತಿಥಿಗಳನ್ನು ತೆರೆದ ಜೀಪಿನಲ್ಲಿ, ಮಂಗಳ ವಾದ್ಯ ಘೋಷಗಳೊಂದಿಗೆ ಮೆರವಣಿಗೆಯಲ್ಲಿ ತರಲಾಯಿತು. ಸಮಾರಂಭದ ಸ್ಥಳದಲ್ಲಿ ಕಾರ್ಯ ಸಮಿತಿಯ ಅಧ್ಯಕ್ಷ ಶ್ರೀ ಬಿ. ಮಂಜುನಾಥ ಪೈಯವರು ಹಾರ ಅರ್ಪಿಸಿ ಮುಖ್ಯ ಅತಿಥಿಗಳನ್ನು ಸ್ವಾಗತಿಸಿದರು. ಕಾಲೇಜು ವಿದ್ಯಾರ್ಥಿನಿಯರಿಂದ ಕನ್ನಡ ದೇನಿಯ ಪ್ರಾರ್ಥನೆಯೊಡೊಡನೆ ಸ್ವಾಗತ ಸಮಿತಿಯ ಅಧ್ಯಕ್ಷ ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗ್ಡೆಯವರೂ, ಜಿಲ್ಲಾ ಸಾಹಿತ್ಯ ಪರಿಷತ್ ಪರವಾಗಿ ಶ್ರೀ ಬಿ. ಎಂ. ಇದಿನಬ್ಬನವರೂ ಸ್ವಾಗತ ಭಾಷಣಮಾಡಿದರು.

ಉದ್ಘಾಟಕ ಮೈಸೂರು ವಿ.ವಿ.ನಿಲಯದ ಉಪಕುಲಪತಿ ಶ್ರೀ ದೇ. ಜವರೇ ಗೌಡರು ಶ್ರೀಸಾಮಾನ್ಯನ ಯುಗವಾದ ಇಂದು ಅವರ ಆಶೋತ್ತರಗಳನ್ನು ಬಿಂಬಿಸುವ ಸಾಹಿತ್ಯ ರಚನೆಯೊಗಬೇಕೆಂದರು.

ಸಮ್ಮೇಳನದ ಸ್ಮರಣ ಸಂಚಿಕೆ"ದಿಬ್ಬಣ" ವನ್ನು ಉಡುಪಿಯ ಶ್ರೀ ಪೇಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ ಶ್ರೀ ಪಾದಂಗಳವರು ಬಿಡುಗಡೆಗೊಳಿಸಿ ನಮ್ಮ ಹೃದಯಗಳಲ್ಲಿ ಪೂರ್ಣವತೆಯು ಉದಯಿಸುವಂತಹ ಸಾಹಿತ್ಯ ಇಂದು ಸೃಷ್ಟಿಯೊಗಬೇಕು. ಜನತೆಯನ್ನು ನೀತಿ ಧರ್ಮ ಅಧ್ಯಾತ್ಮಗಳತ್ತ ಜಾಗೃತರಾಗುವಂತೆಮಾಡುವ ಕಾರ್ಯ ದೇಶದ ಎಲ್ಲೆಡೆಗಳಲ್ಲಾಗಬೇಕೆಂದು ಅವರು ಹೇಳಿದರು. ಆರಂಭದಲ್ಲಿ ಕಾರ್ಯ ನಿಯೋಜಕ ಸಮಿತಿಯ ಕಾರ್ಯದರ್ಶಿ ಶ್ರೀ ಎಂ. ರಾಮಚಂದ್ರ ಅವರು ಸಂದೇಶ ವಾಚನಗೈದಿದ್ದರು.

ಶ್ರೀ ರಾಜರತ್ನಂರವರು ಅಧ್ಯಕ್ಷ ಭಾಷಣಮಾಡುತ್ತ ಸಾಹಿತ್ಯದ ವೈಶಿಷ್ಟದಲ್ಲಿ ಕಾವ್ಯದ ಕೊಂಬೆಗೆ ಪ್ರಾಧಾನ್ಯವಿದ್ದ ಕಾಲವೊಂದಿತ್ತು. ಆ ಕಾಲಕ್ಕೆ 'ರಸಾತ್ಮಕಂ ವಾಕ್ಯಂ' ಎಂಬ ಸೂತ್ರ ಸಾಹಿತಿಗೆ ಸಾಕಾಗುತ್ತಿತ್ತು. ಆದರೆ ಈಗ ಎಲ್ಲ ಕೊಂಬೆಗಳೂ ಸಮಾನವಾದ ಬೆಲೆಯನ್ನು ಬಯಸುತ್ತಿರುವಾಗ ಆದರಲ್ಲಿಯೂ ವಿಮರ್ಶೆ ಎಂಬ ಅಗತ್ಯವಾದ ಕೊಂಬೆ ತನ್ನ ರಿಂಬೆಗಳನ್ನು ಪಸರಿಸುತ್ತಿರುವಾಗ 'ಅನುದ್ವೇಗ ಕರಂ ವಾಕ್ಯಂ' ಎಂಬುದನ್ನು ಸಾಹಿತಿ ತನ್ನ ಧ್ಯೇಯವಾಗಿ ಟ್ಟುಕೊಳ್ಳದೆ ಹೋದರೆ' ಅವನಿಗೂ ಅವನ ಸಾಹಿತ್ಯಕ್ಕೂ ಉಳಿಗಾಲವಿಲ್ಲ ಎಂದು ನುಡಿದು ನಮಗೆ ಸಮ್ಯಕ್ ಸಾಹಿತ್ಯದ ಗುರಿ ಬೇಕೆಂದು ಕರೆಯಿತ್ತರು. ಸಮ್ಯಕ್ ಸಾಹಿತ್ಯದ ಬಗ್ಗೆ ಮಾತಾಡಿದ ಅವರು ಆತ್ಮವನ್ನು ನಿರ್ಮೂಲಮಾಡತಕ್ಕ ಸಾಹಿತ್ಯವೇ ಸಮ್ಯಕ್ ಸಾಹಿತ್ಯ ಎಂದರು. ಇಂಥ ಸಾಹಿತ್ಯದ ಬಗ್ಗೆ 'ಅನುದ್ವೇಗ ಕರಂ ವಾಕ್ಯಂ' ಎಂಬ ಸೂತ್ರವನ್ನು ಗಮನದಲ್ಲಿರಿಸಿಕೊಂಡು ವಿಚಾರ ಮಂಥನ ನಡೆಯಲೆಂದು ಹಾರೈಸಿದರು. ಕಾರ್ಯ ನಿರ್ವಾಹಕ ಸಮಿತಿ ಅಧ್ಯಕ್ಷ ಶ್ರೀ ಬಿ. ಮಂಜುನಾಥ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಸಂಜೆ ನಡೆದ ಸಾಹಿತ್ಯ ಗೋಷ್ಠಿಯಲ್ಲಿ ಶ್ರೀ ಉದ್ಯಾವರ ಮಾಧವ ಆಚಾರ್ಯ—ದಕ್ಷಿಣ ಕನ್ನಡದ ಕಾದಂಬರಿಗಳು, ಶ್ರೀಮತಿ ಆನಂದಿ ಸದಾಶಿವರಾವ್—ಸಂಣಕತೆಗಳು, ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ = ವಿಮರ್ಶೆ–ಸಂಶೋಧನೆ, ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ—ತುಳು ಸಾಹಿತ್ಯ ಸಂಸ್ಕೃತಿಗಳು, ಶ್ರೀ ಪಿ.ಕೆ. ನಾರಾಯಣ . ಭಾಷಾ ಪಂಡಿತರ ಸಮಸ್ಯೆಗಳು ಮತ್ತು ಶ್ರೀ ಕುಡ್ಪಿ ವಾಸುದೇವ ಶೆಣೈ ಅವರ ಪರವಾಗಿ ಶ್ರೀ ವಿನೇಕ ರೈ – ಪತ್ರಿಕೋದ್ಯಮ ಅವರೂ ಉಪನ್ಯಾಸವಿತ್ತರು. ಈ ಗೋಷ್ಠಿಯು ಪ್ರೊ| ಎಂ. ಮರಿಯಪ್ಪ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಅವರು ಜಿಲ್ಲೆಯಲ್ಲಿ ಕನ್ನಡದ ಭಾಷೆ–ಸಾಹಿತ್ಯದ ವಿಕಸನವನ್ನು ವಿವರಿಸಿದರು.

ರಾತ್ರಿ ಎಂ. ಜಿ. ಎಂ. ಕಾಲೇಜ್ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳಿಂದ ಬಯಲಾಟ ನಡೆಯಿತು ಇತರ ಮನರಂಜನ ಕಾರ್ಯಕ್ರಮಗಳೂ ಇದ್ದವು.

ಸಮಾರೋಪ

ಜಿಲ್ಲಾ ಸಾಹಿತ್ಯ ಸಮ್ಮೇಳನದ ಎರಡನೆಯ ದಿನ ತಾ. 1ರಂದು ಕವಿಗೋಷ್ಠಿ, ಯಕ್ಷಗಾನಗೋಷ್ಠಿ, ಸನ್ಮಾನ ಸಮಾರಂಭ, ಕನ್ನಡ ರಾಜ್ಯೋತ್ಸವ ಹಾಗೂ ಸಮಾರೋಪ ಸಮಾರಂಭಗಳು ಯಶಸ್ವಿಯಾಗಿ ಜರಗಿದವು.

ಬೆಳಿಗ್ಗೆ ನಡೆದ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ಶ್ರೀ ಕಯ್ಯಾರ ಕಿಞ್ಞಣ್ಣ ರೈಯವರು ವಹಿಸಿದ್ದರು. ಅವರು ಸಾಹಿತ್ಯದಲ್ಲಾದ ಪ್ರಗತಿಯನ್ನು ವಿವರಿಸಿ ಕನ್ನಡ ಕಾವ್ಯಕ್ಷೇತ್ರವನ್ನು ಫಲ ಸಮೃದ್ಧವಾಗಿ ಮಾಡಲು ನಾವೆಲ್ಲರೂ ಪಣ ತೊಡಬೇಕಾಗಿದೆ ಎಂದರು. ಈ ಗೋಷ್ಠಿಯಲ್ಲಿ ಜಿಲ್ಲೆಯ ಹಳೆ ಹಾಗೂ ಹೊಸ ಪಂಥದ ಕವಿಗಳು ಪಾಲ್ಗೊಂಡಿದ್ದು ತಮ್ಮ ತಮ್ಮ ಕೃತಿಗಳನ್ನು ಓದಿದರು. ಆರಂಭದಲ್ಲಿ ಶ್ರೀ ಸೂರ್ಯನಾರಾಯಣ ಉಡಿಗರು ಸ್ವಾಗತಿಸಿದ್ದರು.

ಅನಂತರ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನ ಪ್ರಿನ್ಸಿಪಾಲ್ ಪ್ರೊ| ಎಂ ಆರ್. ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಯಕ್ಷಗಾನಗೋಷ್ಠಿ ಜರಗಿತು. ಅವರು ಪ್ರಭೇದಗಳಲ್ಲಿನ ಸಾಮ್ಯ ಚಿಂತನೆಗೆ ಕರೆಯಿತ್ತು ತನ್ನ ಪಾತ್ರದ ಚಿತ್ರೀಕರಣದಲ್ಲಿ ಪ್ರಭುತ್ವ ಪಡೆಯುವುದು ಹೇಗೆ ಎಂಬುದೇ ಕಲಾವಿದರ ಉದ್ದೇಶವಾಗಿದ್ದು ಹಾಡು ಮತ್ತು ಅರ್ಥ ಅನ್ಯೋನ್ಯವಾಗಿರಬೇಕೆಂದರು

ಯಕ್ಷಗಾನ ತೆಂಕುತಿಟ್ಟಿನ ಕುರಿತು ಶ್ರೀ ಕುಕ್ಕೆಲ ಕೃಷ್ಣ ಭಟ್ಟರೂ, ಬಡಗುತಿಟ್ಟಿನ ಕುರಿತು ಶ್ರೀ ಎ. ಸದಾನಂದ ಹೆಬ್ಬಾರರೂ ಉಪನ್ಯಾಸವಿತ್ತರು. ಅಂತ್ಯದಲ್ಲಿ ಶ್ರೀ ಬೈಕಾಡಿ ವೆಂಕಟಕೃಷ್ಣಯ್ಯರು ಧನ್ಯವಾದವಿತ್ತರು.

ಅಪರಾಹ್ನ ಡಾ| ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಸಂಮಾನ ಸಮಾರಂಭವೊಂದನ್ನು ಏರ್ಪಡಿಸಿದ್ದು ಅದರಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದುಡಿದ ವಿವಿಧ ಮಹನೀಯರುಗಳನ್ನು ಶ್ರೀ ಕಾರಂತರು ಶಾಲು ಹೊದಿಸಿ, ಫಲಪುಷ್ಪವಿತ್ತು ಸನ್ಮಾನ ಪತ್ರಗಳನ್ನು ಆರ್ಪಿಸಿ ಸನ್ಮಾನಿಸಿದರು. ಶ್ರೀ ಜಿ. ಆರ್. ಪಾಂಡೇಶ್ವರರು ಸತ್ಕೃತರ ಪರವಾಗಿ ಮಾತಾಡಿದರು. ಶ್ರೀ ಕಾರಂತರು ಮಾತಾಡುತ್ತಾ, ಸನ್ಮಾನಗಳಲ್ಲಿ ಹೊಗಳಿಕೆಗಿಂತಲೂ ನೀವು ಯಾವ ರೀತಿಯಲ್ಲಿ ಅಂತಹ ವ್ಯಕ್ತಿಗಳನ್ನು ಗುರುತಿಸಿ ಕೊಂಡಿರಿ ಎಂಬುದು ಮುಖ್ಯ ಎಂದರು.

ಸಾಯಂಕಾಲ ಮೈಸೂರು ರಾಜ್ಯದ ಲೇಬರ್ ಕಮಿಶನರ್ ಶ್ರೀ ಎಚ್. ಎಲ್. ನಾಗೇ ಗೌಡ ಅವರ ಅಧ್ಯಕ್ಷತೆಯಲ್ಲಿ ಕನ್ನಡ ರಾಜ್ಯೋತ್ಸವವು ಜರಗಿತು. ಪ್ರೊ| ಎಸ್. ವಿ. ಪರಮೇಶ್ವರ ಭಟ್ಟರು ಉಪನ್ಯಾಸವಿತ್ತರು.

ಬಳಿಕ ಶ್ರೀ ಜಿ. ಪಿ ರಾಜರತ್ನಂರವರ ಅಧ್ಯಕ್ಷತೆಯಲ್ಲಿ ಸಮ್ಮೇಳನದ ಸಮಾರೋಪ ಸಮಾರಂಭವು ಯಶಸ್ವಿಯಾಗಿ ನೆರವೇರಿತು. ಕನ್ನಡ ಸಾಹಿತ್ಯ ಪರಿಷತ್ತಿನ ವಿಶೇಷ ಪ್ರತಿನಿಧಿ ಶ್ರೀ ಹಂ. ಪ. ನಾಗರಾಜಯ್ಯ ಇವರು ಈ ಸಂದರ್ಭದಲ್ಲಿ ಭಾಷಣವಿತ್ತರು.

ಈ ಸಂದರ್ಭದಲ್ಲಿ ಶ್ರೀ ಮಧ್ವರಾಜರು ಕಾಸರಗೋಡನ್ನು ಕರ್ನಾಟಕದೊಡನೆ ಸೇರಿಸಬೇಕೆಂಬ ನಿರ್ಣಯವನ್ನು ಮಂಡಿಸಿದರು. ಅಲ್ಲದೆ 'ಮೈಸೂರು' ರಾಜ್ಯಕ್ಕೆ 'ಕರ್ನಾಟಕ' ಎಂಬ ಪುನರ್ನಾಮಕರಣವಾಗಬೇಕೆಂಬ ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವರ, ಶಿಕ್ಷಣ ಮಾಧ್ಯಮ ಕನ್ನಡವಾಗಬೇಕೆಂಬ ಶ್ರೀ ಶ್ರೀ ಗುಂಡ್ಮಿ ಚಂದ್ರಶೇಖರ ಐತಾಳರ, ಪುಂಡಿತರಿಗೂ ಪದವೀಧರ ಶಿಕ್ಷಕರ ವೇತನ ಸಿಗಬೇಕೆಂಬ ಶ್ರೀ ಎಂ. ವಾಸುದೇವರಾಯರ ನಿರ್ಣಯಗಳನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು.

ಅ.ನ.ಕೃ., ಪುಯಲಲಗೋಳ ಮುಂತಾದ ಮಹಾವ್ಯಕ್ತಿಗಳಿಗೆ ನಿಧನದ ಕುರಿತು ಸಂತಾಪ ಸೂಚಿಸಲಾಯಿತು. ಜಿಲ್ಲೆಯು ಹೊರಗಿನಿಂದ ಬಂದವರ ಪರವಾಗಿ ಶ್ರೀಮತಿ ಪ್ರೇಮಾ ಭಟ್, ಶ್ರೀ ಸಂತೋಷ ಕುಮಾರ ಗುಲ್ವಾಡಿ ಹಾಗೂ ಸೂರ್ಯನಾರಾಯಣ ಚಡಗರು ಮಾತಾಡಿದರು. ಕಾರ್ಕಳ ಜನತೆಯ ಪರವಾಗಿ ಶ್ರೀ ಎಸ್. ಶ್ರೀನಿವಾಸ ಕಾಮತರು ಮಾತನಾಡಿದರು. ಅಂತ್ಯದಲ್ಲಿ ಶ್ರೀ ಎಂ. ರಾಮಚಂದ್ರರು ಧನ್ಯವಾದವಿತ್ತರು.

ರಾತ್ರಿ ಜರಗಿದ ಮನರಂಜನಾ ಕಾರ್ಯಕ್ರಮವು ಅಂಗವಾಗಿ ಕಾಸರಗೋಡಿನ ರಾಮರಾಜ ಕ್ಷತ್ರಿಯ ಸೇವಾ ಸಂಘದವರಿಂದ 'ಸತ್ಯ ಪರೀಕ್ಷೆ' ಎಂಬ ಗೀತರೂಪಕವನ್ನೂ, ಕುಂದಾಪುರ ರೂಪಂಗದವರಿಂದ 'ಕಲ್ಯಾಣಿ' ಎಂಬ ನಾಟಕವನ್ನೂ ಪ್ರದರ್ಶಿಸಲಾಗಿತ್ತು. ಈ ಎರಡು ದಿನಗಳ ಕಾರ್ಯಕ್ರಮ ಜಿಲ್ಲೆಯ ಸಾಹಿತ್ಯಾಸಕ್ತರ ಮನದಲ್ಲಿ ಅಚ್ಚಳಿಯದೆ ನಿಲ್ಲುವಂತೆ ವೈಭವಯುಕ್ತವಾಗಿ ಆಕರ್ಷಕವಾಗಿ ನೆರವೇರಿತು. ●

ತೊಟ್ಟಂ ಕಥೋಲಿಕ್ ಯುವಕ ಸಂಘ

ತೊಟ್ಟಂ ಕಥೋಲಿಕ್ ಯುವಕ ಸಂಘದ ಪ್ರಥಮ ಪಾರ್ಷಿಕೋತ್ಸವವು ಕಳೆದ ತಾ. 24 ರಂದು ವಿ ಲಿ ಫಾ ವಾಲೇರಿಯನ್ ಡಿ'ಸೋಜಾರ ಅಧ್ಯಕ್ಷತೆಯಲ್ಲಿ ಜರಗಿತು. ಕು| ರೀಟಾ ಡಿ'ಸೋಜಾ ಸ್ವಾಗತಿಸಿದರು. ಕಾರ್ಯದರ್ಶಿ ನೂರ್ಕು ಫೆರ್ನಾಂಡಿಸರು ವರದಿಯನ್ನೋದಿದರು. ಮುಖ್ಯ ಅತಿಥಿ ಶ್ರೀ ಶಿರ್ವಾಡಿ ವಿಲಿಯಂ ಪಿಂಟೋ ಮಾತನಾಡುತ್ತ ಹಿರಿಯರು ಯುವಕರ ವಿಶೇಷ ಶಕ್ತಿ ಆಸಕ್ತಿಯನ್ನು ಉಪಯೋಗಿಸಿಕೊಳ್ಳಬೇಕೆಂದರು. ಅಧ್ಯಕ್ಷರ ಭಾಷಣವಾದ ಬಳಿಕ ನಾಟಕ ಪ್ರದರ್ಶನವಿತ್ತು.

ರೋಕೀ ಫೆರ್ನಾಂಡಿಸ್‌ರ ನಿಧನ

ಜನಸ್ತೋಮರೂ ಶಿಕ್ಷಣ ತಜ್ಞರೂ ಉತ್ಸಾಹಿ ಕಾರ್ಯ ಪಟುಗಳೂ ಆಗಿದ್ದ ಶ್ರೀ ರೋಕೀ ಫರ್ನಾಂಡಿಸರು ತಮ್ಮ 78ನೇ ವಯಸ್ಸಿನಲ್ಲಿ ತಾ. 27ರಂದು ನಿಧನರಾದರು. ಅವರು ಉಡುಪಿ ಬೋರ್ಡು ಹೈಸ್ಕೂಲಿನಲ್ಲಿ 30 ವರುಷಗಳ ಕಾಲ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿದ್ದರು. ಇಂಗ್ಲಿಷಿನಲ್ಲಿ ಉತ್ತಮ ನಾಗಿ ಗೀತೆಗಳೂ ದಕ್ಷ ಆಡಳಿತಗಾರ ಎಂದು ಹೆಸರು ಪಡೆದಿದ್ದರು. ಅನೇಕ ಸಾಮಾಜಿಕ,ಶೈಕ್ಷಣಿಕ ಹಾಗೂ ಸಹಕಾರಿ ಸಂಸ್ಥೆಗಳ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ಆಕರ್ಷಕ ವ್ಯಕ್ತಿತ್ವವಿದ್ದ ಚೇತನ ಶಕ್ತಿಯೊಗಿ ಬೆಳಗಿದ್ದರು.

ಶ್ರೀ ಫೆರ್ನಾಂಡಿಸರು ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಶೈಕ್ಷಣಿಕ ಚಟುವಟಿಕೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ಪತ್ನಿ, ಐವರು ಪುತ್ರರು, ಐಳು ಮಂದಿ ಪುತ್ರಿಯರು ಮತ್ತು ಅಸಂಖ್ಯಾತ ಅಭಿಮಾನಿಗಳನ್ನು ಅಗಲಿರುವರು.

ದಿ| ಫೆರ್ನಾಂಡಿಸರ ಅಂತ್ಯ ವಿಧಿಯು ತಾ. 28ನೇ ಸಂಜೆ ಉಡುಪಿಯ ರೋಸರಿ ಕೆಥೊಲಿಕ್ ಚರ್ಚ್‌ನಲ್ಲಿ ಜರಗಿತು. ದಿವಂಗತರ ಆಂಬಲಪಾಡಿ ಮನೆಯಿಂದ ಹೊರಟ ಶವ ಮೆರವಣಿಗೆಯಲ್ಲಿ ಸಾಸಿರಾರು ಜನರು ಪಾಲ್ಗೊಂಡಿದ್ದರು.

ಧರ್ಮಸ್ಥಳ ಲಕ್ಷದೀಪೋತ್ಸವ

ಧರ್ಮಸ್ಥಳ ಲಕ್ಷದೀಪೋತ್ಸವವು ನವೆಂಬರ 13ರಿಂದ 17ರ ವರೆಗೆ ನಡೆಯಲಿರುವುದೆಂದೂ ತಾ. 16ರಂದು ಸರ್ವಧರ್ಮ ಸಮ್ಮೇಳನ, ತಾ. 17ರಂದು ಸಾಹಿತ್ಯ ಸಮ್ಮೇಳನಗಳು ಜರಗುವವೆಂದೂ ನಾಡಿನ ಖ್ಯಾತ ವಿದ್ವಾಂಸರಿಂದ ಸಂಗೀತ, ನೃತ್ಯ, ನಾಟಕ, ಹಾಡ್ಯಗೋಷ್ಠಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿರುವುದೆಂದೂ ತಿಳಿದು ಬರುತ್ತದೆ.

ಪ್ರಸಾರಾಂಗ ಶಾಖೆಯ ಉದ್ಘಾಟನೆ

ಮಂಗಳೂರಿನ ಕೆ.ಎಂ.ಸಿ.ಯ ಸಭಾಂಗಣದಲ್ಲಿ ಜರಗಿದ ಪ್ರಸಾರಾಂಗದ ಪುಸ್ತಕ ಪ್ರದರ್ಶನ ಮತ್ತು ಮಂಗಳೂರು ಶಾಖೆಯ ಉದ್ಘಾಟನೆಯನ್ನು ತಾ 30ರಂದು ಮೈಸೂರು ವಿ.ವಿ.ನಿಲಯದ ಉಪಕುಲಪತಿ ಪ್ರೊ.| ದೇ. ಜವರೇ ಗೌಡರ ಅಧ್ಯಕ್ಷತೆಯಲ್ಲಿ ಮಣಿಪಾಲದ ಎಕಾಡೆಮಿ ಆಫ್ ಜನರಲ್ ಎಜುಕೇಶನಿನ ಗೌರವ ಕಾರ್ಯದರ್ಶಿ ಶ್ರೀ ಟಿ. ರಮೇಶ ಪೈಗಳು ಉದ್ಘಾಟಿಸಿದರು.

ಆರಂಭದಲ್ಲಿ ಮಂಗಳೂರು ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಪ್ರೊ.| ಎಸ್.ವಿ.ಪರಮೇಶ್ವರ ಭಟ್ಟರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿಸಿದರು. ಶ್ರೀ ರಮೇಶ ಪೈಗಳು ಉದ್ಘಾಟಿಸುತ್ತಾ, ಮೈಸೂರು ವಿಶ್ವವಿದ್ಯಾನಿಲಯವು ಸ್ವಾಧ್ಯಾಪಕರ ಉಸಬೋಗೆಕ್ಕಿಂದೋ, ಇತರರ ಜ್ಞಾನದಾಪಪ ನಿಪಾರಣೆಗೋ, ಬರಹಗಳ ಉತ್ತೇಜನೆಗೋ ಸಾಮಿರಕ್ಕೂ ಹೆಚ್ಚಿನ ಪುಸ್ತಕಗಳನ್ನು ಪ್ರಕಟಿಸಿ ಸುರಿತನರಿಂದ ಉಪಯುಕ್ತ ಉಪನ್ಯಾಸಗಳನ್ನೇರ್ಪಡಿಸಿರುವುದು ಹೆಮ್ಮೆಯ ನಿದಾರ ವೆಂದರು.

ಕೆ.ಎಂ.ಸಿ.ಯ ಪ್ರಿನ್ಸಿಪಾಲ್ ಡಾ| ಎ. ಸಿ. ಪೈಯವರು ಯುಗಯುತ್ತೀ ಭಾರತೀಯ ಸಂಸ್ಕೃತಿಯ ಎರಡನೇ ಸಂಪುಟವನ್ನು ಉದ್ಘಾಟಿಸಿ ಮಂಗಳೂರಲ್ಲಿ ಪ್ರಸಾರಾಂಗದ ಶಾಖೆ ತೆರೆಯುವಂತಾಡುವಲ್ಲಿ ತಮ್ಮ ಸಂಕೋಚ ವ್ಯಕ್ತಪಡಿಸಿದರು. ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ ಕೆ. ಪೈಯವರು ಡಾ| ಎಂ. ಮಾಧಯ್ಯರ 'ಫಿನಾನ್ಶಿಯಲ್ ಇಂಟರ್ ಮೆಡಿಯರೀಸ್ ಎಕೆನಾಮಿಕ್ ಡೆವಲಪ್‌ಮೆಂಟ್ ಎಂಡ್ ಮೊನಿಟರಿ ಪಾಲಿಸಿ' ಎಂಬ ಕೃತಿಯನ್ನೂ ಬಿಡುಗಡೆ ಮಾಡಿದರು.

ಅಧ್ಯಕ್ಷರ ಭಾಷಣದ ನಂತರ ಪ್ರಸಾರಾಂಗದ ಡೈರೆಕ್ಟರ್ ಡಾ| ಪ್ರಭುಶಂಕರರು ಧನ್ಯವಾದಗಳನ್ನರ್ಪಿಸಿದರು.

'ಗಾಂಧಿಜಿಯ ಕೊಲೆ'

(ಎರಡನೇ ಪುಟದಿಂದ)

ಣವೇ ವಿಮೋಚನೆಗೆರುವ ದಾರಿ ಎಂದು ಘೋಷಿಸಿತು.

ಈ ಬೆಳವಣಿಗೆ ಸಹಜವಾಗಿಯೇ ಕೆಲವ ರಲ್ಲಿ ಆತಂಕ ಹುಟ್ಟಿಸಿತು. ಜಾಜಾದ್ ಮೊ ದಲಾದವರು ವರ್ಕಿಂಗ್ ಕಮಿಟಿಯನ್ನು ಕರೆಯುವುದು ಒಳ್ಳೆಯದೆಂಬ ಅಭಿಪ್ರಾಯ ಕ್ಕೆ ಬಂದರು. ಆಗಸ್ಟ್ 8ರಂದು ವರ್ಕಿಂಗ್ ಕಮಿಟಿ ಸಭೆ ಸೇರಿ ಇನ್ನೊಂದು ನಿರ್ಣಯ ಮಾಡಿತು. ಆದರಿಂದ ಪರಿಸ್ಥಿತಿ ಸುಧಾರಿಸಲಿಲ್ಲ. ವರ್ಕಿಂಗ್ ಕಮಿಟಿಗೆ ನೆಹರೂರವರ ಹೇಳಿಕೆಯನ್ನು ಅಲ್ಲಗಳೆಯುವ ಧೈರ್ಯ ಇರಲಿಲ್ಲ ಹಾಗೆ ಮಾಡಿದ್ದರೆ ಅದು ನೆಹರೂ ಗಳನ್ನು ನಾಡು ನೀರಲ್ಲಿ ಕೈ ಬಿಟ್ಟಂತೆ. ಈ ನಿಲುವಿನಿಂದ ಅವರ ವ್ಯಕ್ತಿತ್ವಕ್ಕೆ ಧಕ್ಕೆಯಾ ಗುತ್ತಿತ್ತು. ಕಾಂಗ್ರೆಸಿನ ಶಕ್ತಿ ಕ್ಷಯಿಸುವಂ ತಿತ್ತು. ಹಾಗೆಪು ಕ್ಯಾಬಿನೆಟ್ ಸೂತ್ರವ ನ್ನು ತಿರಸ್ಕರಿಸುವಂತಿರಲಿಲ್ಲ, ತಿರಸ್ಕರಿಸುವು ದರಿಂದ ದೇಶ ಛಿದ್ರವಾಗುವುದರಲ್ಲಿತ್ತು.

ಅತ್ತ ದರಿ—ಇತ್ತ ಸುಲಿ, ಹೀಗಾಯಿ ತು. ಇಬ್ಬಂದಿಯಲ್ಲಿ ಸಿಲುಕಿ ಕೊಂಡ ಕಾಂ ಗ್ರೆಸ್ ವರ್ಕಿಂಗ್ ಕಮಿಟಿ ಸ್ಥಿತಿ. ಆಗಷ್ಟು 10ರಂದು ಕರೆದ ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸಭೆ, ನಿಯೋಗದ ಸೂತ್ರವ ನ್ನು ಒಪ್ಪಿದೆ ಎಂದು ಶ್ರುತ ಪಡಿಸಿತು. ಆ ದರೆ ತನ್ನ ನಿಲುವಿನಲ್ಲಿ ಬದಲಾವಣೆಯೊಗು ವುದಿಲ್ಲವೆನ್ನುವ ಭರವಸೆಯನ್ನು ಠರಾವು ಕೊಡಲಿಲ್ಲ.

ಪ್ರಕ್ಷುಬ್ಧಗೊಂಡ ವಾತಾವರಣ ಈ ಠ ರಾವಿನಿಂದ ತಿಳಿಯಾಗಲಿಲ್ಲ. ಜಿನ್ನಾ ನೆಹರು ಗಳನ್ನು ಟೀಕಿಸಿದರು. ನೆಹರು ಕಾಂಗ್ರೆಸಿನ ಅಧಿಕೃತ ವಕ್ತಾರರು. ಕಾಂಗ್ರೆಸಿನ ಕೆಲಸಗಾ ರರಲ್ಲಿ ಬಹುಮಂದಿ ನೆಹರುಗಳ ಹಿಂಬಾಲ ಕರು. ಇವರಿಗೆ ನೆಹರು ಮಾತು ಪಥ್ಯ—ವರ್ಕಿಂಗ್ ಕಮಿಟಿಯು ತೀರ್ಮಾನ ಸಾಮೂ ಹ್ಯ ಕಾಂಗ್ರೆಸಿಗರ ನಿಲುವು ಆಗುವುದು ತೀರ ಅಸಂಭವ. ಬ್ರಿಟಿಷರು ಇನ್ನೂ ಭಾರತ ಬಿ ಟ್ಟಲ್ಲ, ಅಧಿಕಾರ ನಡೆಸುತಿದ್ದಾರೆ. ಆವರಿರು ವಂತೆಯೇ ಅಲ್ಪ ಸಂಖ್ಯಾತರ ಸ್ಥಿತಿ ಶೋಚ ನೀಯ ಮಟ್ಟಕ್ಕೆ ಮುಟ್ಟದೆ. ಕಾಂಗ್ರೆಸು ದಿನ ದಿನಕ್ಕೆ ಬದಲಾಯಿಸಲಾರಂಭಿಸಿದೆ. ಬ್ರಿಟಿಷರು ಹೊರಟು ಹೋದೊಡನೆ ಕಾಂ ಗ್ರೆಸು ನೆಹರು ಅಬಿಪ್ರಾಯಕ್ಕೆ ಬರುವುದಿ ಲ್ಲವೆನ್ನುವುದಕ್ಕೆ ಏನು ಭರವಸೆ?

ಇದು ಮುಚ್ಚು – ಮರೆಯನ್ನರಿಯದ ಜಿನ್ನರ ಬಿಚ್ಚು ಮಾತು. ಕಾಂಗ್ರೆಸು ಈ ತೀರ್ಮಾನಕ್ಕೆ ಬರುವುದೇ ತಡ, ಆಗಿನ ವೈ ಸರಾಯರು ಶ್ರೀ ವೇವೆಲ್ ತಾತ್ಕಾಲಿಕ ಸರಕಾರ ರಚಿಸುವಂತೆ ನೆಹರುಗಳನ್ನು ಕೇ ಳಿ ಕೊಂಡರು. ಆಗಸ್ಟ್ 12ರಂದು ವೈಸರಾ ಯರಿಂದ ಬಂದ ಈ ಆಮಂತ್ರಣವನ್ನು ಶ್ರೀ ನೆಹರು ಸ್ವೀಕರಿಸಿದರು.

ಲೀಗ್ ಈ ಸಚಿವ ಸಂಪುಟದಿಂದ ಹೊ ರಗುಳಿಯಿತು. ನೆಹರು ನಾಯಕತ್ವದಲ್ಲಿ ಆ ಗಸ್ಟ್ 16ರಂದು ಹೊಸ ಸರಕಾರ ರೂಪು ತಳೆಯಿತು. ಅಂದೇ ಮುಸ್ಲಿಂ ಲೀಗಿನ ನೇ ರ ಕಾರ್ಯಕ್ರಮವನ್ನು ಆರಂಭಿಸಿತು. ಕಲಕತ್ತೆಯಲ್ಲಿ ಗಲಭೆಯಾಯಿತು. ರಕ್ತದ ಕೋಡಿ ಹರಿಯಿತು. ಹಂಗಾಮಿ ಸರಕಾರ ಉದ್ದಿಮೆದಾರರ ಹಿತ ಸಂವರ್ಧನೆಗೆ ಮುಂ ದಾಯಿತು. ಉದ್ದಿಮೆದಾರರ ಇಬ್ಬರು ಪ್ರ ತಿನಿಧಿಗಳು ಸಂಪುಟ ಸೇರಿದವರು—ಜಾನ್ ಮಥಾಯಿ, ಸಿ. ಎಚ್. ಭಾಬಾ.

ವೇವೆಲ್ಲರ ಒತ್ತಾಯಕ್ಕೆ ಮಣಿದು ಮು ಸ್ಲಿಂಲೀಗು ಸರಕಾರವನ್ನು ಸೇರಿಕೊಂಡಿತು. ಆದರೆ ರಾಜ್ಯಾಂಗ ಸಭೆಯಲ್ಲಿ ಪಾಲ್ಗೊಳ್ಳಲು ನಿರಾಕರಿಸಿತು ಯಾವ ಮಾನದಂಡ ದಿಂದ ಆಳೆದರೂ ಅದನ್ನು ರಾಜ್ಯಾಂಗ ಸಭೆ ಯೆಂದು ಕರೆಯಲು ಬರುವುದಿಲ್ಲ. ಅದಕ್ಕೆ ಪ್ರಾತಿನಿಧಿಕ ಸ್ವರೂಪವೇ ಇರಲಿಲ್ಲ ಅದಕ್ಕೆ ನಡೆದ ಚುನಾವಣೆಯೂ ಕ್ರಮಬದ್ಧವಿರಲಿ ಲ್ಲ. ಅದು ನೇರ ಚುನಾವಣೆಯು ಆಗಿರಲಿ ಲ್ಲ. ಅದು ಅಪ್ರತ್ಯಕ್ಷ ಚುನಾವಣೆ. ಆದರ ಲ್ಲಿದ್ದ ಸದಸ್ಯರ ಸಂಖ್ಯೆ 207. ಅದನ್ನು ಹೀಗೆ ವರ್ಗೀಕರಿಸ ಬಹುದು. ಹಿಂದುಗಳು 185; ಮುಸ್ಲಿಮರು 4, ಕ್ರೈಸ್ತಿಯನರು 6. ಶಿಖ್ಖ ರು 7, ಪಾರ್ಸಿಗಳು 3, ಆಂಗ್ಲೋ ಇಂಡಿಯ ನರು 2. ಆಂದಿನ ದಿನಗಳಲ್ಲಿ ರಾಜ್ಯಾಂಗ ಸಭೆಯ ರಚನೆಯನ್ನು ಬಹಿರಂಗವಾಗಿ ಟೀ ಕಿಸಿದವರಲ್ಲಿ ಯಂ. ಯನ್. ರಾಯ್, ಅಾರ್ಡ ನೈಮನ್ನರು ಪ್ರಮುಖರು. ನೈಮ ನ್ನರು ಅಾರ್ಡ್ಸ ಸಭೆಯಲ್ಲಿ ರಾಜ್ಯಾಂಗ ಸ ಭೆ ಭಾರತಕ್ಕೆ ವಿಪಕ್ತು ತರುವುದೆಂದು ಎ ಚ್ಚರಿಸಿದರು. ಚಿರೋಲರ ಮೇಲೆ ಹಾಕಿದ ಖಟ್ಲೆಯಲ್ಲಿ ನೈಮನ್ನರು ಲೋಕಮಾನ್ಯ ಬಾಲ ಗಂಗಾಧರ ತಿಲಕರ ವಕೀಲರು. ನೈ ಮನ್ ಕಮಿಷನಿನ ಅಧ್ಯಕ್ಷರು. ಈ ನಿರ್ಭೀ ತ ಟೀಕೆಗಳಿಂದ ಎಚ್ಚರಗೊಂಡ ನೆಹರು, ಮುಸ್ಲಿಂಲೀಗನ್ನು ರಾಜ್ಯಾಂಗ ಸಭೆಯೊಳ ಕ್ಕೆ ಕರಲು ಪ್ರಯತ್ನಿಸಿದರು.

ಆದರೆ ಕಾರ್ಯ ನಿಂಚಿ ಹೋಗಿತ್ತು. ಮುರಿದ ಮನಸ್ಸು, ಒಡೆದ ಮಡಿಕೆ, ಎರ ಡನ್ನೂ ಪುನಃ ಕೂಡಿಸುವುದು ಕಷ್ಟದ ಮಾ ತು. ರಾಜ್ಯಾಂಗ ಸಭೆಯು ಜನವರಿ 22ರ ಪ್ರತಿಜ್ಞಾ ರೂಪದ ನಿರ್ಣಯ–ಗುರಿ–ಧ್ಯೇ ಯಗಳನ್ನು ವಿವರಿಸುವ ಠರಾವು—ಮುಸ್ಲಿ ಮರನ್ನೂ, ಇತರ ಅಲ್ಪ ಸಂಖ್ಯಾತರನ್ನೂ ಆಕರ್ಷಿಸಲಾರದೆ ಹೋಯಿತು. ಈ ಮಾ ತು ಜೀವ ನೋಣಕ್ಕೆ ಹೇಳಿದ 'ಬಾ ನೊಣ ವೆ, ಬಾನನ್ನ ಮನೆಗೇ, ಬಾನಿನೊಳು ಹಾ ರಿ ದಣುವಾಯ್ತು ನಿನಗೇ' ಎನ್ನುವುದಕ್ಕಿಂ ತ ಎತ್ತರಕ್ಕೆ ಏರಲಿಲ್ಲ.

ಅಧಿಕಾರದಲ್ಲಿದ್ದ ಲೇಬರ್ ಪಕ್ಷ ತನ್ನ ತಾತ್ಕಾಲಿಕ ನಿಲುವನ್ನು ಕಳೆದು ಕೊಂಡಿತು. ಸಮ ಯ ತಳ್ಳುವುದೇ ಅಥವಾ ಕೈ ತೊಳೆದುಕೊ ಳ್ಳುವುದೇ? ಅನಿಶ್ಚಿತತೆ ಬ್ರಿಟಿಷ್ ಸರಕಾರ ಕೈ ಜೀಕಿರಲಿಲ್ಲ. ಕಾಲ ತಳ್ಳುವುದರಿಂದ ತ ಮ್ಮ ಪ್ರತಿಷ್ಠೆಗೆ ಧಕ್ಕೆ ಎಂದು ಪ್ರಧಾನಿ ಆ ಟ್ಲಿ ಭಾವಿಸಿದರು. ಲೀಗ್—ಕಾಂಗ್ರೆಸ್ ಕಿತ್ತಾಟ ಬಗೆ ಹರಿಯಲಿ, ಹರಿಯ ದಿರಲಿ. ಭಾರತ ಬಿಡುವ ದಿನವನ್ನು ನಿಗದಿ ಗೊಳಿಸುವುದು ಒಳಿತೆಂದು ಅವರು ಭಾವಿಸಿದರು. 1948ರ ಜೂನ್ ಅಂತ್ಯ ದೊಳಗಾಗಿ ಭಾರತ ಬಿಟ್ಟು ಹೋಗುವುದಾ ಗಿ ಬ್ರಿಟಿಷ್ ಸರಕಾರ ಘೋಷಿಸಿತು.

ಈ ತೀರ್ಮಾನ ತೀರ ಆಶ್ಚರ್ಯವೆಂದು ವೈಸರಾಯ ವೇವೆಲ್ಲರು ಅಭಿಪ್ರಾಯ ಪ ಟ್ಟರು. ಮುತ್ಸಾಂಧತೆ ಮುಗಿಲು ಮುಟ್ಟಿದ ಸಂಧಿಯಲ್ಲಿ. ಸುಸೂತ್ರವಾಗಿ ಯಾವುದ ನ್ನೂ ಬಗೆ ಹರಿಸದೆ, ಭಾರತವನ್ನು ಅದರ ಪಾಡಿಗೆ ಬಿಟ್ಟು ಹೊರಡುವುದು ಹೊಣೆಗೇ ಡಿತನವೆಂದು ಅವರು ತರ್ಕಿಸಿದರು. ಈ ವರ್ಕನೆ ಭಾರತವನ್ನು ವಿಪತ್ತಿನಲ್ಲಿ ಸಿಲು ಕುವಂತೆ ಮಾಡುತ್ತದೆ. ಎಂದು ಅವರು ಶಂ ಕಿಸಿದರು. ಈ ಶಂಕೆ ಸಹಜವಾದ್ದೆಂಬುದು ಆನಂತರದ ಘಟನೆಗಳಿಂದ ಸಿದ್ಧವಾಯಿತು. ಅರಾಜಕ ಸ್ಥಿತಿಯಲ್ಲಿ ಬಿಟ್ಟು ಹೋದರೆಂಬ ಅಪವಾದ ಹೊರಲು ಅವರ ಮನಸ್ಸು ಹಿಂದೆಗೆಯಿತು.

ವೇವೆಲ್ಲರನ್ನು ಸರಕಾರ ಹಿಂದಕ್ಕೆ ಕರೆಸಿ ಕೊಂಡಿತು. ಅವರ ಸ್ಥಳದಲ್ಲಿ ಮೌಂಟ್‌ಬ್ಯಾ ಟನ್ನರನ್ನು ವೈಸರಾಯರಾಗಿನೇಮಿಸಿತು. ಇ ಬ್ಬರೂ ಸೈನ್ಯ ಖಾತೆಯಲ್ಲಿ ಹಿರಿಯ ಹುದ್ದೆ ಯಲ್ಲಿದ್ದವರು. ವೇವೆಲ್ಲರು ಧಾರತದ ವಿಭ ಜನೆಗೆ ಹೆದರಿದರು. ಅವರಉತ್ತರಾಧಿಕಾರಿ ಪ್ರೇರಕ ಶಕ್ತಿಯಾದರು. ಒಬ್ಬರಿಗೆ ಅನಾ ಧ್ಯವೆನಿಸಿದ್ದು, ಇನ್ನೊಬ್ಬರಿಗೆ ಸುಲಭ ಸಾ ಧ್ಯವೆನಿಸಿತು. ಆಶ್ಚರ, ಆತುರವಾಗಿಯೇ ಅವರು ಈ ಕೆಲಸವನ್ನು ಮುಗಿಸಿದರು. ಆ ದರೆ ಅದರಲ್ಲಿ ಮುತ್ಸದ್ದಿತನದ ಲವಲೇಶ ವಿರಲಿಲ್ಲ. (ಆಧಾರಿತ)

●●

ಮನೆಯೆಂದಾದಲ್ಲಿ ಇರಲೇಬೇಕಾದ
ಗೃಹವೈದ್ಯ
ಮನೆ-ಮದ್ದು
ಬೆಲೆ: ರೂ. 2-00

ಪ್ರತಿಯೋರ್ವನೂ ನಿತ್ಯ ಪಠಿಸಬೇಕಾದ
ಗೀತೆಯ ಸಮೂಲ ಅನುವಾದ
ಗೀತೆಯ ಕೆಗನ್ನಡಿ
ಪಾಕೆಟ್ ಎಡಿಶನ್ ಬೆಲೆ ರೂ. 2-00

ಸುಲಭದಲ್ಲಿ ಇಂಗ್ಲಿಷ್
ಆಂಗ್ಲ ಸ್ವಯಂಬೋಧಿನಿ ರೂ. 2-00

Letter Writing Made Easy
ಸುಲಭದಲ್ಲಿ ಪತ್ರಲೇಖನ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನನಿತ್ಯ ಪತ್ರಸಂಕಲನ
ಬೆಲೆ ರೂ. 1-50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯಾರ್ಡರು ಕಳಿಸುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್)
ಉಡುಪಿ, ದ. ಕ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—
ಹೊಟೆಲ್ ಶಿವಪ್ರಸಾದ
ಕುಂದಾಪುರ, ದ. ಕ.
ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ
ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಶಕಲ ನಿಧದ ತಿಂಡಿತಿನಿಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್
ಫೋನ್: 77
Please Visit
HOTEL SHIVAPRASAD
High Class Boarding, Lodging & Restaurant
COONDAPUR, S. K.

ಶ್ರೀ ಮೃತಾಂಜನ
● ತಲೆ ಸಿಡಿತ ● ಮೈ ನೋವು
● ಉಳುಕು ● ಕಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಸುದ್ರಾಗು-4

ಉಡ್ಪಿ ಮುನ್ಸೀಫ್ ಕೋರ್ಟಿನಲ್ಲಿ

O.S. No. 222/1971.

ನಿನ್ಸೆಂಟ್ ಸೋಜಾ —ವಾದಿ

ಮ ತ್ತು

ರಾಮಪ್ಪ ಕೋಟ್ಯಾನ್ —ಪ್ರತಿವಾದಿ

ಇವರೊಳಗೆ

ನೋ ಟೀ ಸು

ಉಡ್ಪಿ ತಾಲ್ಲು ಕೊಡವೂರು ಗ್ರಾಮದ ಕು ಲಾ ಎಂಬಲ್ಲಿರುವ ಉದ್ಯಾವರ ಗುಡ್ಡ ಕಂಬೇಲ ರ ಮಗ ಪ್ರತಿವಾದಿ ರಾಮಪ್ಪ ಕೋಟ್ಯಾನ್‌ರವ ರಿಗೆ ತಿಳಿಯಪಡಿಸುವುದೇನೆಂದ್ರೆ—

ನೀವು ತಾ. 6-7-1968ರಲ್ಲು ವಾದಿಗೆ ರೂ. 3000/-ಕ್ಕೆ ಬರಕೊಟ್ಟ ಪ್ರೋ. ನೋಟ ನ ಅಸಲು ಬಡ್ಡಿ ಖರ್ಚು ವಸೂಲು ಕೇಳಿ ವಾ ದಿಯು ದಾಖಲು ಮಾಡಿದ ಮೇಲ್ಕಂಡ ನಂಬ್ರ ವನ್ನು ನಿಮ್ಮ ಹಾಜರಾತಿಯ ಬಗ್ಗೆ ತಾ. 18-11-1971ಕ್ಕೆ ಇಡಲಾಗಿದೆ. ಫಿಂಯದೇನಾ ಕ್ಕೂ ಆಕ್ಷೇಪಣೆ ಯಿದ್ದರೆ ಆ ದಿನ ಪೂರ್ವಾಹ್ನ 11 ಘಂಟೆಗೆ ಸದರೀ ಕೋರ್ಟು ಮುಂದೆ ಹಾಜ ರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು. ತಪ್ಪಿ ದ್ರೆ ನಿಮ್ಮ ಗೈರುಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕ್ಕುಂ ಪ್ರಕಾರ.

ಪಿ. ಎನ್. ಕೃಷ್ಣಮೂರ್ತಿ ರಾವ್.
ವಾದಿ ಕಡೆ ಎಡ್ವಕೇಟ್

ಉಡ್ಪಿ, ದ.ಕ. ತಾ. 26-10-1971.

NAVAYUGA 4-11-1971

Registered with the Registrar of News Papers for India under No R. N. 3546/'67

REGD. No B. G. 176
LICENCE No. 33
Licensed to Post without Prepayment

ಅಭಿಪ್ರಾಯ:

ಭಾರತ ಗಲಭೆಗಳ ಮಸಣದಲ್ಲಿದೆ

ಶಾಂತಿ ತಾಣವ ಕ್ಷೇತ್ರವೆಂದು ಹೆಸರಾಗಿದ್ದ ಭಾರತ ಇಂದು ಅಶಾಂತಿಯ ಮಸಣವಾಗಿರುವುದು ನೋಚನೀಯ. ಯಾವ ನೇಪಥ್ಯದಲ್ಲಿ ಪಾಲು ಹೊಳೆ ಹರಿಯಿತೋ ಯಾವ ನೆಲಪಲ್ಲಿ ಕುಳಿತು ಮುನಿಗಳು ಉಪನಿಷತ್ತಿನ 'ಓಂ ಶಾಂತಿಃ ಶಾಂತಿಃ ಶಾಂತಿಃ' ಮಂತ್ರವನ್ನು ರಚಿಸಿದರೋ ಆದೇ ನೆಲವಿಂದು ಅನ್ಯಾಯ, ಅನಾಚಾರ, ಗಲಭೆಗಳ ರುದ್ರ ಭೂಮಿಯಾಗಿದೆ. ಭಾರತೀಯರು ಯಂತ್ರಸ್ಥಿತ ಹೆಣವ ನೋಲೆ ಕಾಣಿಯುವ ಕಾಗೆ ಪರಿಗಣಿಸಿದ್ದಾರೆ. ಹಾಲು ಹೊಳೆ ಹರಿವ ನೆಲವಲ್ಲಿ ಲಕ್ಷಾಂತರ ನಿಷ್ಪಾಪಿಗಳ ರಕ್ತ ಜಿನುಗುತ್ತಿದೆ

ಈ ಅಶಾಂತಿ ಗಲಭೆಗಳಿಗೆ ಕಾರಣ ಯಾವುದು? ಒಬ್ಬನಿಗೆ ಐಶ್ವರ್ಯ ಬಂದರೆ ಮಧ್ಯರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡ ಎಂಬ ಸರಕಾರ. ಮಂಗನ ಕೈಯಲ್ಲಿ ಪೂರ್ಣಿಕ್ಯ ಬಂದಿವೆ: ಹೊತ್ತ ಕನ್ಸೂರಿಯ ಬೆಲೆ ಕತ್ತೆಗೇನು ಗೊತ್ತು? ಅಡಳಿತ ಅರಿಯದ ಭೂಪರು ಕುಬುಡಾಗಿದ್ದಾರೆ. ಅಂಕದ ಪರದೆಯ ಹಿಂದೇನಿದೆಯೆಂದು ಅವರರಿಯರು. ನಮ್ಮ ಸರಕಾರನ ವೈಫಲ್ಯಗಳಿಗೆ ದಿಲ್ಲಿಯಿಂದ ಆಜೆ ಸಿರಿಮಂತ ಪ್ರದೇಶಗಳಾವ ರಷ್ಯ, ಅಮೇರಿಕಗಳು ಕಾಣಿಸುತ್ತವೆ. ತಮ್ಮ ಹಿಂದೆ ಬಡ ಭಾರತೀಯರಿದ್ದಾರೆಂದು ಅವರಿಗೆ ಗೊತ್ತಿಲ್ಲ. ನಾಯಿಯನ್ನು ಎತ್ತಿ ಸಿಂಹಾಸನದಲ್ಲಿ ಕೂಡಿಸಿದರೆ ಕಾಲು ಎತ್ತಿ ಮೂತ್ರ ಮಾಡುವುದು ಬಿಟ್ಟೀತೆ! ಭರವಸೆಯ ನಾಲಿಗೆಯಿಂದ ನಯವಾಗಿ ನಮ್ಮನ್ನು ನೆಕ್ಕಿ ಓಟು ಗಿಟ್ಟಿಸಿಕೊಂಡು ಪಟ್ಟೇರಿದರೆ ಹಿಂದಿನದು ಗೊತ್ತಿಲ್ಲ. ಮುಂದೆ ತಿಳಿದಿಲ್ಲ.

ಅಲ್ಲಲ್ಲಿ ಯುವ ಜನತಾಂಗ ಸಿಡಿದೆದ್ದಿದೆ. ಹಿಂದಿ ಭಾಷೆ ಗಲಭೆ, ಸಬ್ಸಿಡಿ ಗಲಭೆ, ಸ್ಪಿನ್ನಿವಾಲರು ಗದರಿಸಿದ ಗಲಭೆ ಎಂದೆಲ್ಲಾ ಎತ್ತಿಕೊಂಡು ಬಸ್ಸುಗಳಿಗೆ ಬೆಂಕಿ ಕೊಟ್ಟರು ಕಟ್ಟಡಗಳಿಗೆ ಕಲ್ಲೆಸೆದರು. ಅವರಿಗೆ ಆನಗತ್ಯವಾದ ವೈಯಕ್ತಿಕ ಕಾರಣಗಳಿಗೆ ತಲೆ ಹಾಕಿದರು. ಅದರಿಂದ ಸರಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟ.

ಕಳೆದ ತಿಂಗಳಲ್ಲಿ ಕೋಲಾರದ ಬಿ ಇ ಎಂ ಎಲ್ ಕಾರ್ಖಾನೆಯ ಲಾಕ್ ಔಟ್ ಘೋಷಿಸಲಾಯಿತು. ಬೋನಸ್‌ನ ತಗಾದೆಯಂತೆ. ನೌಕರರು ತಡವಾಗಿ ಬರುವುದು, ಇತರರನ್ನು ಫ್ಯಾಕ್ಟರಿಗೆ ಹೋಗದಂತೆ ತಡೆಯುವುದು, ಅಧಿಕಾರಿಗಳಿಗೆ ಬೆದರಿಕೆ ಪತ್ರ ಬರೆಯುವುದು ಮುಂತಾದ ಪಿಡುಗುಗಳು ಇನ್ನೂ ನಡೆಯುತ್ತಲೇ ಇವೆ. ಬೆಂಗಳೂರಿನ ಮೈಕೋ ಕಾರ್ಖಾನೆಯ ಕಾರ್ಮಿಕರೆಲ್ಲೂ ಎರಡು ಸಂಗಡಗಳು. ಸಪ್ಟಂಬರ್ ೨೬ನೆಯ ದಿನಾಂಕ ಅಲ್ಲಿ ಇವರೆಂಬಳಿಗೆ ಘರ್ಷಣೆ, ಬ್ಲೇಡು ಮತ್ತು ಚೂರಿಯಿಂದ ಇರಿತ ನಡೆಯಿತು. ಬಿ ಇ ಎಂ ಎಲ್‌ನಂತೆ ಅಲ್ಲೂ ಹಲವು ತಗಾದೆಗಳು.

ಗೋಕಾಕದ ತಾಲೂಕು ಮಂಡಳಿ ಉಪಾಧ್ಯಕ್ಷರನ್ನು ಹಾಡು ಹಗಲೇ ಇತ್ತೀಚೆಗೆ ಇರಿದು ಕೊಂದರು. ರೇಡಿಯೋ ಕವಿ ಹಿಂದಿದರೆ, ಪತ್ರಿಕೆಯ ಪುಟ ತೆರೆದರೆ ಈಗೀಗ ಮೈ ಕಾವೇರುತ್ತಿದೆ. ಅಲ್ಲಿ ಕೊಲೆ, ಇಲ್ಲಿ ಇರಿತ, ಗಲಭೆ ರೈಲು ದುರಂತ, ಬಂಗ್ಲಾ ಸಮಸ್ಯೆ–ಒಂದೊಂದು ವಾರ್ತೆಯೂ ಕೂರಂಬಿನಂತೆ ಬಡ ಭಾರತೀಯನ ಎದೆಯನ್ನು ಇರಿಯುತ್ತಿದೆ. ಈ ಯಾವ ಸಮಸ್ಯೆಯೆಡೆಗೂ ಸರಕಾರ ಗಮನ ಬೀಯದೆ ತೆರಿಗೆ ಹೆಚ್ಚಳವನ್ನು ಮಾತ್ರ ಸರಿದೂಗಿಸುತ್ತಿದೆ.

ಸರಕಾರ ನಿವಾರಣೆ ಮಾಡದಿರುವ ಈ ಅನಿವಾರ್ಯ ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿದ ದೇಶ ತಳ ಕಾಣದೆ, ಮೇಲಕ್ಕೇಳಲಾರದೆ ಚಡಪಡಿಸುತ್ತಿದೆ. ಇಂದು ಪ್ರತಿಭಾವಂತರಿಗೆ ಇಲ್ಲಿ ಬೆಲೆ ಇಲ್ಲ ಪ್ರತಿಭಾನಂತರನ್ನು ನಿವಾರಿಸುವವರಿಗೆ ಮಾನ್ಯತೆಯಿದೆ. ದಿವಂಗತ ಪ್ರಧಾನಿ ಲಾಲ್ ಬಹಾದ್ದುರ್ ಶಾಸ್ತ್ರಿಯವರಿಗೆ ವಿಷವ್ಯಾಪ್ತಿ ಮಾಡಿಸಿ ತಾಷ್ಕೆಂಟಿನಲ್ಲಿ ಕೊಲ್ಲಲಾಗಿತ್ತೆಂದು ಅನೇಕ ಮೂಲಗಳು ತಿಳಿಸಿವೆ. ಇವರ ತನಿಖೆಯನ್ನು ಮುಚ್ಚಿಡಲು ನೈ.ಬಿ. ಚವ್ಹಾಣ್ ಹಾಗೂ ಸ್ವರಣ ಸಿಂಗರು ಯತ್ನಿಸುತ್ತಿರುವುದು ಮೇಲಿನ ಮಾತಿಗೆ ಪುಷ್ಟಿಕೊಡುವುದಿಲ್ಲವೆ?

ರಾಜಧನವನ್ನು ರದ್ದು ಮಾಡುವುದು ನಿಶ್ಚಿತವೆಂಬ ಇತ್ತೀಚೆಗೆ ಇಂದಿರಾ ಸರಕಾರ ಮರಳಿ ಸ್ಪಷ್ಟ ಪಡಿಸಿದೆ. ಕೆಲವು ಶತ ಮಾನಗಳ ಹಿಂದೆಯೇ ಮುಸಲ್ಮಾನ ದರ್ಗಾವೋ ಕ್ರಿಸ್ತಾನರ ಬೆತ್ಲೆಹೇಮೋ ಆಗಲಿದ್ದ ನಮ್ಮ ಮೈಸೂರು, ರಾಜಸ್ತಾನ ನೊಡಲಾದ ರಾಜ್ಯಗಳ ಉಳಿವಿಗಾಗಿ ಆ ರಾಜರು ಎಷ್ಟು ಹೋರಾಡಿದ್ದಾರೆ? ಯಾವ ಒಪ್ಪಂದದಿಂದ ರಾಜ್ಯವನ್ನು ಕಾವಾಡಿದ್ದಾರೆಂದು ಇತಿಹಾಸದಲ್ಲಿ ಇವರು ಓದುತ್ತಿದ್ದರೆ ಆ ಗೋಜಿಗೇ ಹೋಗುತ್ತಿರಲಿಲ್ಲ. ಸರ್ವಸ್ವವನ್ನೂ ರಾಷ್ಟ್ರಕ್ಕೆ ಧಾರೆಯೆರೆದುಹೋರಾಡಿದ ಧೀರ ಬಾರತೀಯನಿಗೆ ಕೊನೆಗೆ ಕೌಪೀನಕ್ಕೆ ಗತಿಯಿಲ್ಲದೆ ಹೋಗಬೇಕು ರಾಷ್ಟ್ರಕ್ಕೇನೂ ದುಡಿಯದೆ ಬೊಜ್ಜು ಬೆಳೆಸಿಕೊಂಡು ತಿರುಗಾಡುವ ಮಂತ್ರಿಗಳು ತಮಗೆ ಸಿಗುವ ಸಾವಿರಗಟ್ಟಲೆ ಸಂಬಳದಲ್ಲಿ ರಾಷ್ಟ್ರಕ್ಕೆ ಎಷ್ಟು ಬಿಟ್ಟಿದ್ದಾರೆ? ಯಾವ ಸಭೆ ಸಮಾರಂಭಕ್ಕೆ ಕಾರಿಲ್ಲದೆ ಹೋಗಿದ್ದಾರೆ? ಮೊದಲು ಬಂದ ಹಲ್ಲಿಗಿಂತ ಮತ್ತೆ ಬಂದ ಮಿಸೆಯೇ ಮೇಲು ಎಂಬಂತೆ ರಾಷ್ಟ್ರದ ತಳಪಾಯವಾಗಿದ್ದ ರಾಜರನ್ನು ಹೊಡೆದೋಡಿಸಿ, ದಟ್ಟ ದರಿದ್ರರನ್ನಾಗಿ ಮಾಡಿ ಈ ಮಂತ್ರಿಗಳು ನೂರು ಬಂಗಲೆ ಕಟ್ಟಿಸ ಬೇಕೇಕೆ? ಶ್ರೀ ಸಾಮಾನ್ಯನ ಬೆವರಿಗೆ ಬೆಲೆಯಿಲ್ಲವೆ? ಕೂಲಿಯಿಲ್ಲವೆ?

ಹುಲ್ಲಿನ ಮೆಡೆಗೆ ಬೆಂಕಿ ಕೊಟ್ಟು ಹನುಮಂತನಿಂದ ಲಂಕಾದಹನ ಮಾಡಿಸುವುದು ಇಂದಿನ ರಾಜಕಾರಣಿಗಳು. ಯುವ ಜನಾಂಗದ ತೃಪ್ತಿಗೆ ಅದೇ ಕಾರಣ. ಹುಲಿಹೋದ ದಾರಿ. ಕಾಣದೆ ಇಲಿ ಬಾರದಂತೆ ಅದು ಕಾವಲು ನಿಂತರೆ ದೇಶ ಉಳಿದೀತೆ? ವ್ಯಾಮೋಹಿಕ ಸರಕಾರದಿಂದ ಮಾತ್ರ ಸುಭದ್ರ ಆಡಳಿತ ಸಾಧ್ಯ. ಆದಕ್ಕಾಗಿ ದೇಶ ನಾಯಕರನ್ನು ಆರಿಸುವಾಗ ತುಂಬ ಜಾಗರೂಕತೆ ಬೇಕು. ಈ ಯುವ ಜನರು ವ್ಯರ್ಥ ಗಲಭೆಯ ಗೊಂದಲದಿಂದ ನಿಷ್ಪಾಪಿ ಜನರ ರಕ್ತ ಹಿಂಡುವುದಕ್ಕಿಂತ ಆಡಳಿತವಿರೋಧದ ಕೋತಿಗಳನ್ನು ಗದ್ದುಗೆಯಿಂದ ಇಳಿಸಿ, ಹೊಟ್ಟೆಯ ಪರಿವೆಯಿಲ್ಲದೆ ರಟ್ಟೆ ಮುರಿಯುವವರನ್ನು ಎದುರಿಗೆ ತಂದರೆ ಹತ್ತುತ್ತಿರುವ ಬೆಂಕಿ ನಂದದಿರದು.

—ಹ. ರಾಮಕೃಷ್ಣ ಶಾಸ್ತ್ರಿ

ಮೂವರು ಪ್ರತಿಭಾವಂತರಿಗೆ ಸನ್ಮಾನ

ಉಡುಪಿಯ ಮೂವರು ಪ್ರತಿಭಾವಂತರಿಗೆ ಮಂಗಳೂರಿನ ಕನ್ನಡ ಸಂಘದವರು ತಾ. 24-10-71 ರಂದು ಉಡುಪಿ ವರದೇಂದ್ರ ಕಲಾಮಂದಿರದಲ್ಲಿ ಸನ್ಮಾನಿಸಿದರು. ಈ ಮೂವರು ಪ್ರತಿಭಾವಂತರು ಆಧ್ಯಾಪನ, ಚಿತ್ರಕತೆ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಉನ್ನತ ಸಾಧನೆ ನಡೆಸಿರುವ ಶ್ರೀಗಳಾದ ಯು. ಪುಂಡಲೀಕ ಶೆಣೈ, ಬಿ. ಪಿ. ಬಾಯರಿ ಮತ್ತು ಎಂ. ರಾಜಗೋಪಾಲ ಆಚಾರ್ಯ ಮೊದಲಾದವರು. ಸನಂರಂಭವು ಡಾ ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿತು.

ಆರಂಭದಲ್ಲಿ ಕನ್ನಡ ಸಂಘದ ಅಧ್ಯಕ್ಷ ಶ್ರೀ ತೆಕ್ಕುಂಜೆ ಗೋಪಾಲ ಕೃಷ್ಣ ಭಟ್ಟರು ಸ್ವಾಗತಿಸಿದರು. ಬಳಿಕ ಶ್ರೀ ಎ ಜೆ. ಆರ್ಡೆಯವರು ಶ್ರೀಯು. ಪುಂಡಲೀಕ ಶೆಣೈಯವರ ಆದರ್ಶ ಜೀವನದ ಕುರಿತು ಮಾತಾಡಿದರು, ಸಂಘದ ವರವಾಗಿ ಅಭಿನಂದನ ಪತ್ರ, ಶಾಲು ಮತ್ತು ಶ್ರೀ ಕೃಷ್ಣನ ವಿಗ್ರಹವನ್ನು ಸಭಾಧ್ಯಕ್ಷರು ಅರ್ಪಿಸಿದ ಬಳಿಕ ಶ್ರೀ ಶೆಣೈಯವರು ತಮ್ಮ ಕೃತಜ್ಞತೆ ಸೂಚಿಸಿದರು.

ಶ್ರೀ ಬಿ. ಎಸ್. ಆಚಾರ್ಯರು ಶ್ರೀ ಬಾಯರಿಯವರ ಕುರಿತು ಮಾತಾಡಿ ಅವರ ಕಲಾತಪಸ್ಸಿನ ಪರಿಚಯ ಮಾಡಿದರು ಶ್ರೀ ಬಾಯ್ರಿಯವರು ತಮಗಿತ್ತ ಗೌರವಕ್ಕಾಗಿ ಕೃತಜ್ಞತೆ ಸೂಚಿಸಿದರು.

ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಶ್ರೀ ಎಂ. ರಾಜಗೋಪಾಲಾಚಾರ್ಯರ ಸಂಸ್ಕೃತ ಹಾಗೂ ಕನ್ನಡ ಪಾಂಡಿತ್ಯವನ್ನು ಮೆಚ್ಚಿ ಮಾತಾಡಿ, ವಿನಯ ಶೀಲ ಆಚಾರ್ಯರಿಂದ ಇನ್ನೂ ಹೆಚ್ಚಿನ ಕೃತಿಗಳನ್ನೂ ನಿರೀಕ್ಷಿಸಬಹುದಾಗಿ ಹೇಳಿದರು. ಶ್ರೀ ಆಚಾರ್ಯರ ಉತ್ತರದ ನಂತರ ಡಾ ಪೈಗಳು ಮಾತಾಡುತ್ತಾ, ಕನ್ನಡ ಸಂಘವು ಊರೂರುಗಳಲ್ಲಿ ಉನ್ನತ ವ್ಯಕ್ತಿಗಳನ್ನು ಗುರುತಿಸಿ, ಅವರವರ ಸ್ವಂತ ಊರುಗಳಲ್ಲಿ ಅವರನ್ನು ಸನ್ಮಾನಿಸುವ ಉಪಕ್ರಮವನ್ನು ಮೆಚ್ಚಿ ಮಾತಾಡಿದರು. ಈ ಸಂದರ್ಭದಲ್ಲಿ ಗೌರವಿಸಲ್ಪಟ್ಟ ತ್ರಿಮೂರ್ತಿಗಳ ಜೀವನ ಸಫಲತೆಯನ್ನೆವರು ಶ್ಲಾಘಿಸಿದರು.

ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ಎ. ಬಾಲಕೃಷ್ಣ ಶೆಟ್ಟಿ ಪೂಳಲಿಯವರು ವಂದಿಸಿದರು. ರಾತ್ರಿ ಶರಸೇತು ಭಂಗವೆಂಬ ಪ್ರಸಂಗದ ಮೇರೆ ತಾಳಮದ್ದಳೆ ಕಾರ್ಯಕ್ರಮವಿತ್ತು.

ಸರ್ವೋದಯ ಕೆಮಿಸ್ಟ್ ಉದ್ಘಾಟನೆ

ಉಡುಪಿ ಚರ್ಚ್ ರೋಡಿನಲ್ಲಿ ಹೊಸದಾಗಿ ಪ್ರಾರಂಭಿಸಿದ ಸರ್ವೋದಯ ಕೆಮಿಸ್ಟ್ ಮತ್ತು ಜನರಲ್ ಸ್ಟೋರ್ಸಿನ ಉದ್ಘಾಟನೆಯನ್ನೂ ಮಣಿಪಾಲ ಕಾಲೇಜ್ ಆಫ್ ಫಾರ್ಮಸಿಯ ಪ್ರೊಫೆಸರ್ ಡಾ ಸಿ. ಗುಂಡುರಾಯರೆ ಅಧ್ಯಕ್ಷತೆಯಲ್ಲಿ ನಿಂಡಿಕೇಟ್ ಬ್ಯಾಂಕಿನ ಕನ್ಸೋರ್ಡಿಯಮ್ ಶ್ರೀ ಕೆ. ಕೆ. ಪೈಯವರು ಇನ್ನೇ ತಾ. 21-10-71 ರಂದು ಉದ್ಘಾಟಿಸಿದರು. ಆರಂಭದಲ್ಲಿ ಪಾರ್ಟ್ನರರಲ್ಲೊಬ್ಬರಾದ ಫೋಮಸ್ ಜಿ. ಲೂವಿಸ್ ರವರು ಸ್ವಾಗತಿಸಿ ಜನರ ಸಹಕಾರ ಕೋರಿದರು. ಶ್ರೀ ಕೆ. ಕೆ ಪೈಯವರು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ, ಜನರಲ್ಲಿ ಸ್ವತಂತ್ರ ಉದ್ಯೋಗ ಕೈಕೊಳ್ಳುವ ಪ್ರವೃತ್ತಿ ಬೆಳೆಯ ಬೇಕೆಂದು ಹೇಳಿ ಸಂಸ್ಥೆಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ಸಾಧ್ಯವಿರುವ ನೆರವನ್ನೂ ನೀಡುವ ಭರವಸೆಯಿತ್ತರು.

ರೀ ಫಾ ಲಾರೆನ್ಸ್ ಪಾಯಸ್, ಡಾ ವಿ. ಎಸ್. ಆಚಾರ್ ಹಾಗೂ ಪ್ರಿನ್ಸಿಪಾಲ್ ಡಾ ಪಿ ಗುರುರಾಜ ಭಟ್ಟರು ನೂತನವಾದಿ ಸಂಸ್ಥೆಗೆ ಶುಭ ಹಾರೈಸಿದರು.

ಅಧ್ಯಕ್ಷತೆ ವಹಿಸಿದ್ದ ಡಾ ಸಿ. ಗುಂಡುರಾಯರು ನೂತನವಾಡುತ್ತಾ, ದೇಶದಲ್ಲಿ 2100 ಸಂಸ್ಥೆಗಳು ಔಷಧಿಗಳನ್ನು ಉತ್ಪಾದಿಸುತ್ತಿರುವಾಗ ಅದನ್ನು ವಿಕ್ರಯಿಸುವ ಅಂಗಡಿಗಳು ಎಷ್ಟಾದರೂ ಹೆಚ್ಚಲ್ಲ. ಉಡುಪಿಯಂಥ ನಗರದಲ್ಲಿ ರಾತ್ರಿಗೂ ಸೇವೆ ಸಲ್ಲಿಸುವಂಥ ಮದ್ದಿನ ಅಂಗಡಿ ಅವಶ್ಯವೆಂದು ತಿಳಿಸಿದರು. ಅಂತ್ಯದಲ್ಲಿ ಇನ್ನೊಬ್ಬ ಪಾರ್ಟ್ನರ್ ಶ್ರೀ ಜಿ ಎಸ್. ಲೂವಿಸರು ಧನ್ಯವಾದಗಳನ್ನರ್ಪಿಸಿದರು.

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರಹ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 59/1971

ಸದಾಶಿವ ಬಡಿಕಿಲ್ಲಾಯ— ಅರ್ಜಿದಾರ

ವೆನ ಕನ್ನಡ. ಅಂಕುಗೌಡ ಯೂನೆ ಕನ್ನಡರ ನುಗ್ಯಬೆಳ್ತಂಗಡಿ ತಾಲ್ಲು, ಉಜ್ರೆ ಗ್ರಾಮದ ಕಕ್ಕಕಬೆಟ್ಟು ಎಂಬಲ್ಲಿ. —ಎದ್ರಿ

ಇವರಿಗೆ ಕೋರ್ಟು ಹ್ಯುಂ ಪ್ರಕಾರ ತಿಳಿಸುವುದೇನೆಂದ್ರೆ ಅರ್ಜಿದಾರನು ನಿಮ್ಮ ಮೇಲೆ 1970—71ನೇ ವರ್ಷದ ನೇಗಿ ಬಾಕಿ ಬಗ್ಗೆ ಮಾಡಿಹ ಮೇಲ್ಕಂಡ ವ್ಯನಹರಣೆಯು ತಾ. 18—11—71ಕ್ಕೆ ಯಿಟ್ಟರುವುದರಿಂದ ಯಿತ್ಯ ನಿಮ್ಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿನ್ನ ಮೇಲ್ಕಂಡ ಕೋರ್ಟು ಮುಂದೆ ನೀವು ಸ್ವತಹ ನ ವಕೀಲರ ಮೂಲ್ಕ ಬೆಳಿಗ್ಗೆ 11ಗಂಟೆಗೆ ಸರಿಯಾಗಿ ಹಾಜರಾಗಿ ಉದಪರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜಿರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲ್ಕ ತಿಳಿಸೋಣಾಗಿಯದೆ.

(Sd) B. Ishwara Bhat
Advocate for Petitioner

ಪುತ್ತೂರು, ತಾ. 26—10—71.

Edited, Printed & Published by K. H. Shetty at the Navayuga Press, Udipi, S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, 11—11—1971

ಸಂಪುಟ ೫೧
ಸಂಚಿಕೆ ೧೦

Vol. 51
No. 10

ಆಳುವವರ ಅದೂರದರ್ಶನ

ಶ್ರೀಸಾಮಾನ್ಯನ ಕೊರತೆ ಧನ ವಿನಿಯೋಗ

ತಾಲೂಕು ಕಛೇರಿಯ ದಾರಿಯಲ್ಲಿ ನೊನ್ನೆ ಹೋದವರು ನಿತ್ಯ ನೋಡದಂತಹ ದೃಶ್ಯವೊಂದನ್ನು ವೀಕ್ಷಿಸಿದರು–ಕಛೇರಿಯ ಆಂಗಳದಲ್ಲಿ ಜಮಖಾನ ಹಾಸಿ ಹಲವರು ಕುಳಿತಿದ್ದಾರೆ ವಿಚಾರಿಸುವವರಿಗೆ ಇದು ಧರಣಿ ಚಳುವಳಿಯೆಂದೂ ಭಾರತೀಯ ಜನಸಂಘವು ಇದನ್ನು ಸಂಘಟಿಸಿತೆಂದೂ ತಿಳಿಯಬಹುದು. ಇದರ ಉದ್ದೇಶವೆಂದರೆ, 'ತುಟ್ಟಿಭತ್ಯೋಧ'ವನ್ನು ಬಹಿರಂಗ ಪಡಿಸುವುದು; 'ಸರಕಾರದ ದೂರ ದೃಷ್ಟಿ ರಹಿತವಾದ ಆರ್ಥಿಕ ನೀತಿಗಳ ಪರಿಣಾಮವಾಗಿ ಇತ್ತೀಚಿಗಿನ ತಿಂಗಳುಗಳಲ್ಲಿ ಅಗತ್ಯ ವಸ್ತುಗಳ ಬೆಲೆಗಳು ಗಗನ ಮುಟ್ಟುತ್ತಿರುವ ಬಗ್ಗೆ ಸಾರ್ವಜನಿಕರ ಗಮನ ಸೆಳೆಯುವುದು ಮತ್ತು ಸಾಮಾನ್ಯ ಮನುಷ್ಯನಿಗೆ ಒದಗಿ ಬಂದಿರುವ ಆರ್ಥಿಕ ಹೊರೆಯ ಪರಿಜ್ಞಾನವನ್ನುಂಟುಮಾಡುವುದು.

ತಾಲೂಕು ಮತ್ತು ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿ ಸಭೆ–ಮೆರವಣಿಗೆಗಳನ್ನು ಸಂಘಟಿಸಿ ಜನ ಚಾಗೃತಿಯನ್ನುಂಟು ಮಾಡುವ ಸದುದ್ದೇಶ ಈ ಚಳುವಳಿಯದ್ದು. ಇದು ಕರ್ನಾಟಕ ರಾಜ್ಯೋದಯ ದಿನವಾದ ನವಂಬರ ೧ ರಂದು ಆರಂಭವಾಗಿದ್ದು ಮಕ್ಕಳ ದಿನವಾದ ನವಂಬರ ೧೪ ರ ಮರುದಿನ ಮುಕ್ತಾಯಗೊಳ್ಳಲಿದೆ.

ಬೆಲೆಯೇರಿಕೆಯು ಶ್ರೀಸಾಮಾನ್ಯನ ಅನುಭವಕ್ಕೆ ಬಂದಿಲ್ಲವೆಂದು ಚಳುವಳಿಗಾರರು ನಂಬಿರುವುದಾದರೆ, ಅದು ಶುದ್ಧಾಂಗ ಸುಳ್ಳು. ಪ್ರತಿ ನಾಗರಿಕನೂ ತಾನು ತನ್ನ ಆವಶ್ಯಕ ವಸ್ತುಗಳನ್ನು ಅಧಿಕ ಬೆಲೆತೆತ್ತೇ ಬಳಸಿಕೊಂಡು ಬಂದಿದ್ದಾನೆ. ಇಂದು ಸಾರ್ವಜನಿಕರ ಆವಶ್ಯಕ ವಸ್ತುಗಳ ಸ್ವರೂಪವೂ ಬದಲಾಗಿದೆ. ವಿದ್ಯುತ್ತಿನ ಬೆಲೆಯೇರಿತೆಂದೇ ಎಣ್ಣೆಯ ಧಾರಣೆ ಹೆಚ್ಚಿತೆಂದೋ ಕೀಪ ಹಚ್ಚದಿರುವುದು ನಾಗರಿಕತೆಯ ಲಕ್ಷಣವಲ್ಲ. ಎಲ್ಲ ವಸ್ತು - ಪದಾರ್ಥಗಳ ಬೆಲೆಯೂ–ಈಗ್ಗೆ ಐದಾರು ವರ್ಷಗಳಿಂದ ತೀವ್ರವಾಗಿ ಏರುತ್ತಲೇ ಇವೆ. ಇದು ಶ್ರೀಸಾಮಾನ್ಯನ ಅನುಭವ.

ಬರಿಯ ಆಹಾರವುಂಡು ಇಂದಿನ ಶ್ರೀಸಾಮಾನ್ಯ ತೃಪ್ತಿಪಡಲಾರ. ಮೈ ಮುಂಚ್ಚಲೆಂದು ಬಟ್ಟೆಯಿದ್ದರೂ ಸಾಲದು. ರುಚಿಕರವಾದ ಆಹಾರ ಬೇಕು; ಮಕ್ಕಳಿಗೆ ಯೋಗ್ಯ ಶಿಕ್ಷಣ ಬೇಕು; ಕಾಯಲೆ ಕಸಾಲೆಗಳಿಗೆ ಸಮುಚಿತ ಚಿಕಿತ್ಸೆ ಬೇಕು; ಉಳಿಯಲು ಜೊಕ್ಕವಾದ ಗುಡಿಸಲು ಬೇಕು; ಇನ್ನು ಏನಿನೂ ನೋಡಬೇಕು; ಹೊಗೆ ಸಂದ ಬೇಕು; ಕುಡಿಯಲೂ ಬೇಕು.... ಪಟ್ಟಿ ಬೆಳೆಯುತ್ತವೆ ಉಳ್ಳವರು ಹೊತೊಟ್ಟರೆ, ಇಲ್ಲದವರು ಇದರ ಎಸಳನ್ನಾದರೂ ಸಂಪಾದಿಸಬೇಕು

ಹೀಗೆ ಸಾರ್ವಜನಿಕರ ಆವಶ್ಯಕತೆಗಳು ಈ ಪ್ರಗತಿ ಯುಗದಲ್ಲಿ ಹೆಚ್ಚಿವೆ ಎಲ್ಲವಸ್ತುಗಳ ಬೆಲೆಯೂ ದುಬಾರಿ–ಶಿಬಾರಿಯಾಗುತ್ತಲೇ ನಡೆಯುತ್ತಿರುವುದರಿಂದ ಬೆಲೆಯೇರಿಕೆಯ ಅನುಭವ ಎಲ್ಲರಿಗೂ ಆಗಿದೆ. ಸರಕಾರ ತನ್ನ ಕೊರತೆಯನ್ನು ತುಂಬಿಸಲು ಹೆಚ್ಚಿನ ಕರ ಹೇರುತ್ತದೆ; ನೌಕರರು ಹೆಚ್ಚಿನ ವೇತನ ಬೇಡುತ್ತಾರೆ; ಕೂಲಿಗಳು ಮಜೂರರು ಹೆಚ್ಚಿನ ಕೂಲಿ, ಮಜೂರಿ ಬೇಡುತ್ತಾರೆ. ಸರಕಾರ ವಿದೇಶಗಳಿಂದ ಸಾಲ ಕೊಳ್ಳುತ್ತದೆ; ಸಾರ್ವಜನಿಕರೂ ಸಾಲ ಮಾಡುತ್ತಾರೆ. ಸರಕಾರ ಕೊರತೆ ಧನವನ್ನು ವಿನಿಯೋಗಿಸುತ್ತದೆ. ಸಾರ್ವಜನಿಕರೂ ಇದಕ್ಕೆ ಅಪವಾದವಲ್ಲ. ವ್ಯಾಪಾರೋಕ ತೆಯನ್ನು ಮೂರಿ ಬಟ್ಟು ತಮ್ಮ ಬಜೆಟ್ಟನ್ನು ಸಮಮಾಡಿಸಲು ಅವರು ಪ್ರಯತ್ನಿಸುತ್ತಾರೆ. ಲಂಚ, ಮೋಸ, ವಂಚನೆ–ಮೊದಲಾದುವುಗಳು ಇದರ ಫಲಶ್ರುತಿ. ಕೊರತೆ ಧನ ವಿನಿಯೋಗ ಮಾಡಲಾರದವರು ಮೂತ್ರ ಪಿಲಿವಿಲಿ ಒದ್ದಾಡಿ ಸಾಲದಲ್ಲೇ ಹುಟು ತ್ತಾರೆ; ಬದುಕುತ್ತಾರೆ, ಸಾಯುತ್ತಾರೆ. ಇದು ಇಂದು ನಿನ್ನೆಯಿಂದ ನಡೆದು ಬಂದು ದಲ್ಲ. ನ್ಯಾಯಃ ಅನಾದಿ, ಅನಂತ.

ನಮ್ಮ 'ಶ್ರೀಸಾಮಾನ್ಯ'ರಲ್ಲಿ ಹೆಚ್ಚಿನವರು ಇದೇ ಬಗೆಯವರು. ಅಂದರೆ, ಪ್ರಾಮಾಣಿಕರ ಸಂಖ್ಯೆ ಕಡಮೆ.ಬೆಲೆಯೇರಿಕೆ–ಉತ್ಪಾದನೆಯ ಇಳಿಕೆಗಳೇ ನಮ್ಮ ದುರವಸ್ಥೆಗೆ ಕಾರಣ. ಬಂಗ್ಲಾ ನಿರಾಶ್ರಿತರ ಹೊರೆ ಹೊರಲು ಮತ್ತೆ ತೆರಿಗೆ ಹೊರಬೇಕಾಗಿದೆ. ಶ್ರೀಸಾಮಾನ್ಯ- ನಮ್ಮ ಮುಂಕ್ರಿ–ಪೂಗಧರ, ಸರಕಾರವು ಉನ್ನತ ಅಧಿಕಾರಿಗಳ, ಪೆಜ್ಜೆಕೆ, ನಮ್ಮ ಪ್ರತಿನಿಧಿ ಶಾಸಕರ ಐಶೋ ಆರಾಮಕ್ಕಾಗಿ ನಾಗರಿಕ ಬಹಳಷ್ಟು ಆರ್ಥಿಕ ಹೊರೆ ಹೊರಬೇಕಾಗಿದೆ. ಮಿತವ್ಯಯದ ಪಾಠ ಶ್ರೀಸಾಮಾನ್ಯನಿಗೆ; ಚಿಕ್ಕ ಉಳಿತಾಯದ ಯೋಜನೆ ಶ್ರೀ ಸಾಮಾನ್ಯನಿಗೆ. ಒಂದಕ್ಕೆ ನಾಲ್ಕು ಬೆಲೆ ತೆತ್ತು ತನ್ನ ಆವಶ್ಯಕತೆಯನ್ನು ಆತ ಹೇಗೆ ಹೇಗೋ ಪೂರೈಸಿಕೊಳ್ಳಬೇಕು; ಸರಕಾರಕ್ಕೆ ತೆರಿಗೆ ಹೆಚ್ಚು ಹೆಚ್ಚಾಗಿ ತೆರುತ್ತ ಹೋಗಬೇಕು. ಈ ತೆರಿಗೆಯ ಹಣ ಪೋಲಾಗಬೇಕು?

ನಮ್ಮ ಸರಕಾರದ ಆರ್ಥಿಕ ನೀತಿ ವಿಫಲವಾಗಿವೆಯೆಂದು ವಿರೋಧಿ ಪಕ್ಷಗಳ ಅಭಿಪ್ರಾಯ. ಇದು ಅತ್ಯಂತ ಸಫಲವೆಂಬುದು ಸರಕಾರ ವರ್ತುಲದ ವೃಥಾ ವಿಶ್ವಾಸ. ಈ ಬಗ್ಗೆ ಸಾದ ವಿವಾದ ನೂಡುವುದರಿಂದ ಪ್ರಯೋಜನವಿಲ್ಲ ಎಲ್ಲರೂ ಆನೆಯನ್ನು ಮುಟ್ಟಿದವರೇ. ಆದರೂ ಬೆಲೆಯೇರಿಕೆ ಮತ್ತು ಅಪಸ್ಯಯಗಳ ಬಗ್ಗೆ ಎಲ್ಲರಲ್ಲೂ ಸಾಕಷ್ಟು ಸಹಮತವಿದೆ. ಆದುದರಿಂದ ಇವನ್ನು ತಡೆಗಟ್ಟಲು ಸರಕಾರ ಏನೂ ಕ್ರಮ ಕೈಕೊಂಡಿದೆ?

ನಮ್ಮ ನೀತಿಗಳನ್ನು ಆಪಲೋಕಿಸುವಾಗ ಒಂದು ಮಾತು ನೆನಪಿಗೆ ಬರುತ್ತದೆ. ಪೋಡಿ ಮನೆಗೆ ಬೆಂಕಿ ಕೊಟ್ಟು, ಬಳಿಕ ನೀರು ಅರಸಹೋದರಂತೆ. ನ್ಯಾಯಃ ನಮ್ಮ ಭಾರತದಷ್ಟು ಒಳ್ಳೆಯ ಉದಾಹರಣೆ ಇದಕ್ಕೆ ಬೇರೊಂದು ಸಿಗಲಾರದು. ನೀರು ಬರುವಾಗ ಮನೆಸುಟ್ಟು ಬೂದಿಯಾಗುತ್ತಿದೆ ಈ ಉರಿಯನ್ನು ನಾವು ಸಹಿಸಿಕೊಳ್ಳಲೇಬೇಕು; ಇಲ್ಲ ದೂರ, ದೂರ, ಬಹು ದೂರವೋಡಿಹೋಗಬೇಕು

ರಾಜ್ಯದ ವಿಧಾನ ಸಭೆಗಳಿಗೆ ಚುನಾವಣೆಗಳು ಹತ್ತಿರ ಹತ್ತಿರ ಬರತೊಡಗಿದ್ದರಿಂದ, ರಾಜ್ಯಕೀಯ ಪಕ್ಷಗಳು ಇನ್ನಾದರೂ ಜಾಗೃತವಾಗಬೇಕು. ತಮ್ಮ ಜಾಗೃತಿಯನ್ನು ಸೂಚಿಸಲು ಏನಾದರೊಂದು ಜನಪರ ಕೆಲಸ ನಡೆಸಬೇಕು. ಜನಸಂಘದ ಈ ಚಳುವಳಿಯೂ ಅದರ ಜಾಗೃತಾವಸ್ಥೆಯ ಸಂಕೇತ. ಈ ಚಳುವಳಿಯಿಂದ ಬೆಲೆಯೇರಿಕೆ ಇಳಿಯುವುದಿಲ್ಲ; ನಾಗರಿಕರ ಮೇಲಿನ ತೆರಿಗೆಯ ಹೆಚ್ಚಳ ಕಡಿಮೆಯಾಗುವುದೂ ಇಲ್ಲ. ಹತ್ತಾರು ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿರುವ ಇಂದಿನ ಶಾಯಂದಿರಿಗೆ ತಮ್ಮ ಮಕ್ಕಳಿಗೆ ಮೊಲೆ ಹಾಲೂಡಲು ಬಿಡುವಿಲ್ಲ ಬಾಟ್ಲಿ ಹಾಲೂಡುವುದು ಕೆಲಸ ಬಾಕಿಯು ಖಾಲಿಸದ್ದು ಆಕೆಯದು ಮುನಿನ ಚಿಂತೆ? ಮನೆಯೊಂದಾಗುವಂತೆ ಮಗು ಬೊಬ್ಬಾಟವಾಡಿದರೆ ಮಾತ್ರ, ನೌಕರಿ ಹೋದೀತೆಂಬ ಭಯದಿಂದ ಹಾಲೂಡಲು ಬರುಬಹುದಷ್ಟೆ. ಚಳುವಳಿಗಳೂ ಈ ಮಟ್ಟಕ್ಕೆ ಇಳಿಯಬಂದದ್ದು ಸ್ವಾತಂತ್ರ್ಯೋತ್ತರ ಯುಗದಲ್ಲಿ ಆಳುವ ಪಕ್ಷದ ಆದೂರ ದರ್ಶನದ ಫಲವಿದುಯೆಂಬರೆ, ಒಪ್ಪಿಕೊಳ್ಳಬಹುದೆ?

●●

ಸತ್ಯಾನ್ವೇಷಣೆಯೊಂದೇ ನಿನಗೆ ಸಕ್ಯಸಿಗದಿದ್ದರೂ ಮುಕ್ತಿ ಸಿಗುವುದು.

—ಕ್ಯಾರೆನ್ಸ್‌ಬ್ಯಾರೊ

○ ○ ○

ದುಡಿಯೈ ಸುಖಮಂ ಪಡೆಯೈ!
ದುಡಿಯದ ಮನುಜರಿಗೆ ಮುಖಮೆಂದುಂ
ಬಿಡದೈ ॥
ಗಿಡದೊಳಗೆ ಬಿಟ್ಟ ಫಲಗಳ್ |
ದುಡು ದುಡು ದೆಂದು ತಾನೆ ಬಂದು
ಬೀಳ್ವವೆ ಬಾಯೊಳ್ ॥

—ಪ್ರಾಚೀನ ಕವಿ

○ ○ ○

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
137 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½ % ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4 % ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಿಜಿಸ್ಟರ್ಡ್ ಆಫೀಸು:– ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.
ಎಮ್. ಸುಂದರ್‌ರಾಮ್ ಶೆಟ್ಟಿ,
ಜೆಯರ್‌ಮೆನ್.

'ಗಾಂಧಿಜಿಯ ಕೊಲೆ'

(ಭಾಗ ಎಂಟು – ಕೊಲೆಯ ಹಿನ್ನೆಲೆ ೨)

ಬರೆದವರು: ಶ್ರೀ ಬಿ. ಕೃಷ್ಣ ಭಟ್, ಭದ್ರಾವತಿ

ಮೌಂಟ್ ಬ್ಯಾಟನ್ನರ ಸವಿ ಮಾತಿಗೆ ಮೊನಲು ತಲೆ ತೂಗಿಸಿದವರು ಸ್ವರ್ಗೀಯ ಸರದಾರರು–ಜಿನ್ನಾ ಸಾಹೇಬರಿಗೆ ವಿಭಜನೆ ಬೇಕಿರಲಿಲ್ಲ ಅಲ್ಪ ಸಂಖ್ಯಾಕರ ಹಿತರಕ್ಷಣೆಯನ್ನು ಶಾಸನದ ಮೂಲಕ ಕಾಯ್ದುಕೊಳ್ಳುವುದು ಅವರ ಮುಖ್ಯ ಗುರಿಯಿತ್ತು. ಗುರಿ ಸಾಧನೆಗಾಗಿ ಅವರು ಪಾಕಿಸ್ತಾನದ ಬೇಡಿಕೆಯನ್ನು ಮುಂದಿಟ್ಟರು. ಪಾಕಿಸ್ತಾನದ ಪ್ರಾಪ್ತಿಯಿಂದ ಅವರಿಗೆ ನೆಮ್ಮದಿಯುಂಟಾಗಲಿಲ್ಲ. ನಡುಗಾಲ ಸರಕಾರ ನಡೆಸುವ ಸಮಯದಲ್ಲಿ ಆದ ಕಟು ಅನುಭವಗಳು ಸರದಾರರನ್ನು ವಿಭಜನೆಯತ್ತ ಪಾಲುವಂತೆ ಮಾಡಿತು. ಕೆತ್ತಾಟ ಜಗಳವಿಲ್ಲದೆ ಸಚಿವ ಸಂಪುಟದ ಒಂದು ಸಭೆಯೂ ಸುಗಮವಾಗಿ ನಡೆಯುತ್ತಿರಲಿಲ್ಲ ಈ ಪೀಡೆ ತೊಲಗಿದರೆ ಸಾಕೆಂದು ಸರದಾರರಿಗೆ ಅನಿಸಿದ್ದರಲ್ಲಿ ಆಶ್ಚರ್ಯವಿಲ್ಲ.

ತಟ್ಟಿ ತುಂಬ ಹಣ್ಣು. ಮುಂದೆ ಕುಳಿತವರಿಗೆ ತಿನ್ನಲೆಂದು ಇಟ್ಟುದು ಅವರಲ್ಲೊಬ್ಬ ಕರಳತನದಿಂದ ತಟ್ಟೆಯಲ್ಲಿನ ಹಣ್ಣುಗಳೆಲ್ಲ ತನಗೇ ಬೇಕೆಂಡು ತೆಗೆದಿಟ್ಟುಕೊಂಡರೆ ಉಳಿದವರು ಸುಮ್ಮನಿರುತ್ತಾರೆಯೇ? ಅಧಿಕಾರಕ್ಕಾಗಿ ಹಣಾ–ಹಣಿ ನಡೆಯಿತು. ಹಣ್ಣುಗಳನ್ನು ಸಮವಾಗಿ ಹಂಚಿಕೊಳ್ಳುವ ಎನ್ನುವ ಸಲಹೆ ಬಂತು, ಕೈಗೆ ಬಂದ ಅಧಿಕಾರವನ್ನು ಶಾಶ್ವತವಾಗಿ ಪಂಚಿಕೊಳ್ಳುವ ವ್ಯವಸ್ಥೆಗೆ ಇಕ್ಕಡೆಯ ನಾಯಕರು ಮುಂದಾದರು. ಅದಕ್ಕಾಗಿ ಭಾರತವನ್ನು ಹರಿದು ಹಂಚುವ ಸಿದ್ಧತೆ ನಡೆಸಿದರು. ಸರದಾರರನ್ನು ಸರಿದಾರಿಗೆ ತಿರುಗಿಸಿದ ಮೌಂಟ್‌ಬ್ಯಾಟನ್ನರು ತಮ್ಮ ದೃಷ್ಟಿಯನ್ನು ನೆಹರುಗಳತ್ತ ತಿರುಗಿಸಿದರು. ಅವರನ್ನು ಸುಳಿಯಲ್ಲಿ ಉರುಳಿಸಲು ತಮ್ಮ ಬತ್ತಳಿಕೆಯಲ್ಲಿನ ಅಸ್ತ್ರ ಪ್ರಯೋಗ ಮಾಡಿದರು. ಒಂದಿಷ್ಟು ಕಾಲ ನೆಹರುಗಳು ವಿಭಜನೆಯನ್ನು ವಿರೋಧಿಸುತ್ತ ಬಂದರು ಆದರೆ—ಕೊನೆಯಲ್ಲಿ ಕುಶಾಗ್ರಮತಿಯೂದ ಕೃಶಾಂಗಿ ಎಡ್ವಿನಾ ಮೌಂಟ್‌ಬ್ಯಾಟನ್ನರು ಬೀಸಿದ ಜಾಲದಲ್ಲಿ ಸಿಲುಕಿಕೊಂಡರು. ಈ ವಿದ್ಯಮಾನಗಳನ್ನು ಸ್ವರ್ಗೀಯ ಅಜಾದರು ತಮ್ಮ ಪುಸ್ತಕದಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ. ಚರಿತ್ರೆ ನಮ್ಮನ್ನು ಕ್ಷಮಿಸದು ಎಂಬ ಅವರು ನೆಹರುಗಳನ್ನು ಎಚ್ಚರಿಸಿದ್ದರು. ಆ ಮಾತು ನೆಹರುಗಳ ಕಿವಿಗೆ ಕೇಳಿಸಲಿಲ್ಲ. ಆಗಲೇ ನೆಹರು–ಸರದಾರ್ ಅಧಿಕಾರದ ರುಚಿಯುಂಡಿದ್ದರು. ಆ ರುಚಿ ಕಂಡ ಅವರಿಗೆ ಉಳಿಕೆಯೆಲ್ಲ ಕಹಿಯೆನಿಸಿತು. ವಿಭಜನೆಯಿಂದ ತಮ್ಮ ಅಧಿಕಾರದ ಅಲಗು ಇನ್ನಷ್ಟು ಹರಿತವಾಗುವುದೆಂದು ಗ್ರಹಿಸಿ, ಅಖಂಡಭಾರತವಾಗಿದ್ದುದನ್ನು ಖಂಡ–ತುಂಡ ಮಾಡಲು ಮುಂದಾದರು.

ತಮಗೆ ಅತ್ಯಂತ ಪ್ರಿಯರಾಗಿದ್ದ ನೆಹರು–ಸರದಾರರ ನಿಲುವು ನೋಡಿ ಗಾಂಧೀಜಿ ನೊಂದರು. ಅವರ ಶಿಷ್ಯರಿಗೇ ಅವರೀಗ ಬೇಡವಾಗಿರುವುದು ಒಡೆದು ಕಾಣುತಿತ್ತು. ವಿಭಜನೆಯನ್ನು ತಪ್ಪಿಸುವುದಕ್ಕೆ, ಸಮಸ್ಯೆಯನ್ನು ಪರಿಹರಿಸುವುದಕ್ಕೆ ಗಾಂಧಿಜಿ ಒಂದು ಸೂತ್ರವನ್ನು ಸಿದ್ದಗೊಳಿಸಿದರು. ಅದು ಮಾರ್ಚ 17ರಂದು ವೈಸರಾಯರ ಕೈ ಸೇರಿತು ಆ ಸಲಹೆಯ ರೂಪ-ರೇಖೆ ಹೀಗಿದೆ.

'ತಾತ್ಕಾಲಿಕ ಸರಕಾರವನ್ನು ರಚಿಸುವ ಅಧಿಕಾರವನ್ನು ಜಿನ್ನಾ ಸಾಹೇಬರಿಗೆ ಬಿಟ್ಟು ಕೊಡ ಬೇಕು. ಸರಕಾರಿತ ಸ್ವರೂಪವನ್ನು ನಿರ್ಧರಿಸುವ ಪೂರ್ಣ ಸ್ವಾತಂತ್ರ ಅವರಿಗಿರ ಬೇಕು. ಸಂಪುಟದ ಸದಸ್ಯರೆಲ್ಲ ಮುಸ್ಲಿಮರೇ ಆದರೂ ಆಕ್ಷೇಪಿಸ ಕೂಡದು. ಮುಸ್ಲಿಮೇತರರನ್ನೂ, ಇತರ ಹಿತಗಳ ಪ್ರತಿನಿಧಿಗಳನ್ನೂ ಅವರಿಗೆ ಸರಿ ತೋರಿದರೆ ಮಂತ್ರಿ ಸಂಪುಟಕ್ಕೆ ಸೇರಿಸಿಕೊಳ್ಳ ಬಹುದು. ಆದರೆ ಒತ್ತಾಯ ಸಲ್ಲದು

ಈ ಸಲಹೆಯನ್ನು ಮಿ. ಜಿನ್ನಾ ಅಂಗೀಕರಿಸುವುದಿದ್ದರೆ, ಕಾಂಗ್ರೆಸು ಸಹಕಾರದ ಭರವಸೆ ಕೊಡಬೇಕು. ಜಿನ್ನಾ ಸಾಹೇಬರ ಸಂಪುಟ ಕೈಗೆ ತೆಗೆದುಕೊಳ್ಳುವ ಎಲ್ಲ ಕಾರ್ಯಕ್ರಮಗಳನ್ನೂ ಪೂರ್ಣ ಮನಸ್ಸಿನಿಂದ ಕಾರ್ಯಗತಗೊಳಿಸಲು ಪ್ರಯತ್ನಿಸಬೇಕು.

ಸಂಪುಟದ ತೀರ್ಮಾನಗಳು ಭಾರತದ ಹಿತಕ್ಕೆ ಬಾಧಕವೇ—ಅಲ್ಲವೇ ಎಂಬುದನ್ನು ಸ್ವತಃ ವೈಸರಾಯರೇ ನಿರ್ಣಯಿಸತಕ್ಕುದು.'

ವೈಸರಾಯರಿಗೆ ಈ ಸಲಹೆಯನ್ನು ವೀಕ್ಷಿಸುವ ಆಶೆ ಇತ್ತು. ಆದರೆ ನೆಹರು–ಸರದಾರರು ಈ ಯೋಜನೆಯನ್ನು ವಿರೋಧಿಸಿದರು. ಗತ್ಯಂತರವಿಲ್ಲದೆ ಗಾಂಧೀಜಿ ವೈಸರಾಯರಿಗೆ ಹೀಗೆ ಬರೆದರು 'ನನ್ನ ಸಲಹೆಯನ್ನು ನನ್ನ ಅನುಯಾಯಿಗಳೇ ಒಪ್ಪುವುದಿಲ್ಲ. ಅವರು ನನ್ನ ದಾರಿಗೆ ಬರುವುದು ಶಕ್ಯವಿಲ್ಲ. ನನ್ನ ದೃಷ್ಟಿ ಸಲ್ಲಟ ಮೂಡುವ ದಾರ್ಢ್ಯವೂ ಅವರಿಗಿರುವಂತೆ ಕಾಣಲಿಲ್ಲ. ಈ ದಿಶೆಯಲ್ಲಿ ನನ್ನಿಂದ ನಿಮಗೆ ಯಾವ ಪ್ರಯೋಜನವೂ ಸಿಗುವಂತಿಲ್ಲ. ನನ್ನನ್ನು ನನ್ನ ವಾಡಿಗೆ ಬಿಡಿ. ಪೇಚಿನಲ್ಲಿ ಸಿಲುಕಿಸ ಬೇಡಿ'

ಮೌಂಟ್‌ಬ್ಯಾಟನ್ನರ ಸಲಹೆಯಿಂದಾಗಿ, ಬ್ರಿಟಿಷ್ ಸರಕಾರದ ಆತುರ ಹೆಚ್ಚಿತು, ನಿಗದಿ ಮಾಡಿದ ದಿನಕ್ಕಿಂತಲೂ ಮೊದಲು ಅದು ಭಾರತವನ್ನು ಬಿಟ್ಟಿತು ಅವರ ಘೋಷಣೆಯಂತೆ ಅವರು ಇಲ್ಲಿ 1948ರ ಜೂನ್‌ನಲ್ಲಿ ತನಕ ಇರಬೇಕಾಗಿತ್ತು. 1947ರ ಜುಲ್ಯೆ 22ರಂದು ಬ್ರಿಟನ್ನಿನ ಉಭಯ ಸದನಗಳು ಭಾರತೀಯ ಸ್ವಾತಂತ್ರ್ಯ ಶಾಸನಕ್ಕೆ ತಮ್ಮ ಸಮ್ಮತಿ ಕೊಟ್ಟವು.–ಅಂದೇ ಪ್ರಭುಗಳು ತಮ್ಮ ಅಂಗೀಕಾರ ಮುದ್ರೆಯೊತ್ತಿದರು. ಆ ಶಾಸನದಂತೆ 1947ರ ಆಗಸ್ಟ 14ರ ಸುಧ್ಯರಾತ್ರಿಯ ಸುಮೂರಿಗೆ ಭಾರತ ಸ್ವತಂತ್ರವಾಯಿತು. ಆದರೆ ಒಂದು ಹೋಗಿ, ಎರಡು ಸ್ವತಂತ್ರ ರಾಷ್ಟ್ರಗಳಾಗಿ ಮೈವೆತ್ತು ನಿಂತಿತು - ದೆಹಲಿ–ಕರಾಚಿಗಳಲ್ಲಿ ಸ್ವತಂತ್ರ ರಾಷ್ಟ್ರಗಳ ಧ್ವಜಗಳು ತಲೆ ಎತ್ತಿ ನಿಂತವು.

ಅಂದು ಗಾಂಧಿಜಿ ದೆಹಲಿಯಲ್ಲಿರಲಿಲ್ಲ.

ಭೂಮಿಯನ್ನು ಪೂತ್ರ ಹಂಚಿಕೊಂಡುವಲ್ಲ, ಸೈನ್ಯವನ್ನೂ ಹಂಚಿಕೊಂಡರು. ಆಂಗ್ಲರಿರುವಷ್ಟು ಕಾಲ ಈ ಕ್ಷೇತ್ರಕ್ಕೆ ಜಾತೀಯ ವಿಷ ಸೋಂಕಿರಲಿಲ್ಲ. ಎಲ್ಲ ಕೋಮಿನ ಜನ ಸೈನ್ಯದಲ್ಲಿ ಸೇರಿಕೊಂಡಿದ್ದರು. ಸೈನಿಕರಿಗೋ ಜಾತಿಯ ಪರಿವೆ ಇರಲಿಲ್ಲ. ಆಸ್ಪ ಸೈನ್ಯದ ಹಂಚಿಕೆ ಜಾತಿಯ ಆಧಾರದ ಮೇಲೆ ಆಗ ಬೇಕೆಂದು ಸರದಾರ್–ರಾಷ್ಟ್ರ ಬಾಹು ಹಚ್ಚಿ ಹಿಡಿದರು. ಇದು ಸಾಮಾನ್ಯ ಕೆಯಿಂದ ತಲೆ ತಗ್ಗಿಸ ಬೇಕಾದ ಸಂಗತಿ

ಸ್ವಾತಂತ್ರ್ಯವೆಂದರೆ ಏನೆಂದು ಅರಿಯದ ಜನ, ಎಂದೂ ಅನುಭವಿಸದ ಜನ, ಅನುಲೇಪಿಜವರಂತೆ ಸ್ವಚ್ಛಂದ ವರ್ತಿಸಿದರು ಅದು ತನಕ ಆಡಗಿಸಿಟ್ಟುಕೊಂಡಿದ್ದ ನೇಡಿನ ಕಿಡಿ ಹಾರಿತು-ಬೀದಿ ಜೀದಿಗಳಲ್ಲಿ ರಕ್ತದ ಕಾಲುವೆಹರಿಯಿತು. ಈ ಮೂರಿ ಕಾಣಿಕೆದಲ್ಲಿ ಮಣ್ಣು ಸೇರಿದವರ ಸಂಖ್ಯೆ ಮಿಲಿಯ ಮುಟ್ಟಿತು ಮಾನ-ಪ್ರಾಣಗಳಿಗಾಗಿ ನೆಲೆ ಕಳೆದು ಕೊಂಡವರ ಸಂಖ್ಯೆ ಅನರ ಮೂರಷ್ಟು. ಅತ್ಯಾಚಾರಕ್ಕೆ ಸಿಕ್ಕು ನವೆದ ಸ್ತ್ರೀಯರೆಷ್ಟೊ–?

ತಮ್ಮ ಹಿತಾಸಕ್ತಿಗಳ ರಕ್ಷಕನೆಂದು ತಿಳಿದು ಕೊಂಡಿದ್ದ ಮಿ ಜಿನ್ನಾ ಕರಾಚಿಗೆ ಹೊರಟು ಹೋದರು ಮುಸ್ಲಿಮರು ಭಾರತದ ನೆಲದಲ್ಲಿ ತಬ್ಬಲಿಗಳಾದರು ಆ ದಿನಗಳಲ್ಲಿ ಗಾಂಧಿಜಿ ಅವರ ಶ್ರೀ ರಕ್ಷೆ ನೊಂದವರ ಪಾಲಿಗೆ ಖಂದ ಸಂಜೀವಿನಿ. ಅವರ ದಗ್ಧ ಹೃದಯಗಳನ್ನು ತಣಿಸಲು ಪಾದಯಾತ್ರೆ ಹೊರಟರು.

ತಮ್ಮ ವ್ಯಾಥಶಾ ಸಭೆಗಳಲ್ಲಿ ಎಲ್ಲ ಧರ್ಮಗಳಿಗೂ ಸಮಾನ ಗೌರವ ಸಲ್ಲಿಸಿದರು ಜೈಬಲ್, ಖುರಾನ್‌ಗಳನ್ನು ಪರಿಸಲು ಹೇಳಿದರು. ಅವರ ಕೆಚ್ಚು, ನಿಲುವು, ಧೈರ್ಯ ಆಸ್ಥಿರಿಗೆ ಸಹ್ಯವಾಗಿರಲಿಲ್ಲ. ಅವರ ಅನುಗ್ರಹದಿಂದ ಅಧಿಕಾರಕ್ಕೆ ಬಂದ ನಾಯಕರಿಗೆ ಈಗ ಅವರ ಅಗತ್ಯವಿರಲಿಲ್ಲ ಗಾಂಧಿಜಿಯ ಕುರಿತು ಯೋಚಿಸಲು ಯಾರಿಗೂ ಸಮಯವಿರಲಿಲ್ಲ.

1948ರ ಜನವರಿ 12ರ ಪ್ರಾರ್ಥನಾ ಸಭೆಯಲ್ಲಿ ನಿರಶ್ಚಿತ ವೃತ ಹಿಂತೆಯುವುದಾಗಿ ಗಾಂಧಿಜಿ ತಿಳಿಸಿದರು. ಅವರು ಈ ದಿಟ್ಟ ನಿಲುವಿಗೆ ಕೊಟ್ಟ ಕಾರಣಗಳವು-

ದೆಹಲಿಯ ಮೇಲಿರುವ ಹತೋಟಿಯನ್ನು ನಾವು ಸ್ವಲ್ಪ ಸ್ವಲ್ಪವಾಗಿ, ಆದರೆ ಖಂಡಿತವಾಗಿ ಕಳೆದು ಕೊಳ್ಳುತಿದ್ದೇವೆ ದೆಹಲಿ ಕೈ ತಪ್ಪಿತು, ಭಾರತ ಕೈ ಬಿಟ್ಟಂತೆ. ಅದು ಕೈಯಿಂದ ನುಣುಚಿ ಕೊಂಡಿತೋ ಶಾಂತಿಯ ಮಾತು ಕನಸಿನಂತೆ. ನನ್ನಂತೆ ನಿರ್ಭೀತಿಯಿಂದ ಇಂದು ಸುರ್ಹವರ್ದಿ, ಜಕೇರ್ ಹುಸೇನ್ ದೆಹಲಿಯ ಬೀದಿಗಳಲ್ಲಿ ಸಂಚರಿಸುವಂತಿಲ್ಲ. ಇವರಿಗೆ, ಎಲ್ಲಿ, ಹೇಗೆ, ಎಂದು ಅಪಾಯ ಬರಬಹುದೆಂದು ಗ್ರಹಿಸಲು ಬರುತ್ತಿಲ್ಲ. ಕಡಿಮೆ ಸಂಖ್ಯೆಯಲ್ಲಿರುವವರು ಭೂಯೂತಂಕವಿಲ್ಲದೆ ಇರುವಂತೆ ನಾವು ಒಟ್ಟಾಗಿ ಪ್ರಯತ್ನಿಸ ಬೇಕು. ಪಾಕಿಸ್ತಾನದಲ್ಲಿರುವ ಅಲ್ಪ ಸಂಖ್ಯಾಕರ ವಿಷಯಕ್ಕೆ ಸ್ಸ ಅಸುತಾಪ. ಇದೆ. ಇಲ್ಲಿಯ ಸ್ಥಿತಿ ಹೀಗೆ ಹದಗೆಟ್ಟಿರುವಾಗ ನಾನು ಹೇಗೆ ಅಲ್ಲಿ ಮುಖ ತೋರಿಸ ಬಲ್ಲೆ.

ನನ್ನ ಕಣ್ಣು ಮುಂದೆ ಆಸಹಾಯಕರಾದ ಮುಸ್ಲಿಮರ ವಧೆ ನಡೆಯುತ್ತಿದೆ. ಶಾಸನ ಅವರಿಗೆ ರಕ್ಷಣೆ ಕೊಡಬೇಕು ಶಿಕ್ಷೆ--ರಕ್ಷೆಯ ಹೊಣೆ ಇಂದು ನನಗೆ ಅತ್ಯಂತವಾದ ವಲ್ಲಭ ಬಾಯಿಯ ಕೈಯಲ್ಲಿದೆ. ವಲ್ಲಭ ಬಾಯಿಯಿಂದ ಆ ಕೆಲಸ ಸಾಧ್ಯವಾಗುತ್ತಿಲ್ಲ. ಈ ಸಂಬಂಧದ ದೂರುಗಳನ್ನು

(ತನ್ನೊಪಪೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಸರಿಮಳೆಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದ್ದ ದರ್ಶಾಲಾ (ಪೆವೆಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 10

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಚಿಲ್ಲರೆ ಪ್ರತಿ ೦–೬೧

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಬಾಗಿಲ ಬಳಿಯಲ್ಲಿ ಬಂದೂಕು ಬಂದಿದೆ

ಪಾಶ್ಚಾತ್ಯ ದೇಶಗಳಿಗೆ ಮುಖ್ಯವಾಗಿ ಅಮೆರಿಕೆಗೆ ಅದು ಬಂಗ್ಲಾ ಸಮಸ್ಯೆಯನ್ನು ತಪ್ಪು ತಿಳಿದುಕೊಂಡಿದೆಯೆಂಬುದನ್ನು ತಿಳಿಯ ಪಡಿಸುವ ಸದುದ್ದೇಶದಿಂದ ಪ್ರಧಾನಿ ಗಾಂಧಿಯವರು ವಿದೇಶ ಯಾತ್ರೆಗೆ ತೊಡಗಿದರು. ಅಧ್ಯಕ್ಷ ನಿಕ್ಸನ್ನರೊಡನೆ ಶ್ವೇತ ಭವನದಲ್ಲಿ ಮಾತುಕತೆಯೂ ನಡೆಯಿತು. ಅಭಿಪ್ರಾಯ ವಿನಿಮಯವೂ ಆಯ್ತು. ಬಂಗ್ಲಾ ಸಮಸ್ಯೆಯು ಭಾರತದ ಮೇಲೆ ಪ್ರತಿಕೂಲ ಪರಿಣಾಮಗಳನ್ನು ಬೀರಿದೆಯೆಂಬುದನ್ನು ಅಧ್ಯಕ್ಷ ನಿಕ್ಸನ್ನರ ಮನಸ್ಸಿನಲ್ಲಿ ಪ್ರತಿಬಿಂಬಿಸಲು ಶ್ರೀಮತಿ ಗಾಂಧಿಯವರು ಬಹಳಷ್ಟು ಬೇಚಾಡಿದರು. ಕೊನೆಗೂ ನಿಕ್ಸನ್ ಇದನ್ನೇನೋ ಒಪ್ಪಿಕೊಂಡಂತೆ ಮಾಡಿದರು. ಭಾರತ—ಪಾಕಿಸ್ತಾನಗಳ ಸಂಬಂಧ ಮಿತಿಮೀರಿ ಕೆಟ್ಟದೆಯೆಂಬುದನ್ನು ಅಮೆರಿಕದ ಅಧ್ಯಕ್ಷರು ಮನವರಿಕೆ ಮಾಡಿಕೊಂಡರು. ಅವರು ಭಾರತ ಉಸಪಂಡದಲ್ಲಿ ಯುದ್ಧ ಬೇಡವೆಂದು ಹಲವು ಬಾರಿ ತಮ್ಮ ಮನೋಭಾವನೆಯನ್ನು ತೋರ್ಪಡಿಸಿದರು ನಿಜ; ಆದರೆ, ಯುದ್ಧದ ವಾತಾವರಣವನ್ನು ತಿಳಿಗೊಳಿಸಲು ಅವರು ಸಿದ್ಧರಾಗಿಲ್ಲೇಇಲ್ಲ. ಬಂಗ್ಲಾದಲ್ಲಿ ಯೊಹ್ಯಾಖಾನರ ವಿರುದ್ಧ ಹೋರಾಟವಾರಂಭವಾದ ಮೇಲೆ, ಭಾರತದತ್ತ ನಿರಾಶ್ರಿತರ ಪ್ರವಾಹ ಹರಿದು ಬರಲಾರಂಭಿಸಿದ ಮೇಲೆ, ಹಲವಾರು ರೀತಿಯ ಕೇಳಿಕೆ—ಬೇಡಿಕೆಗಳನ್ನು ಕಿವಿಗೆ ಹಾಕಿಕೊಳ್ಳದೆ, ತನ್ನ ನೆರವು ಬಂಗ್ಲಾ ನರಮೇಧಕ್ಕೆ ಆಸ್ಪದವಾಗಿಯುವುದೆಂದು ತಿಳಿತಿಳಿದೂ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಮಿಲಿಟರಿ ನೆರವನ್ನು ನಿಕ್ಸನ್ ಯೊಹ್ಯಾಖಾನರಿಗೆ ಕೊಡುತ್ತಲೇ ಬಂದಿದ್ದಾರೆ. ಈ ನೆರವಿನಿಂದಾಗಿಯೇ ಉಪ ಖಂಡದಲ್ಲಿ ಸಮರಶಕೆಯುದ್ಭವಿಸಿದೆಯೆಂದೂ ಇದನ್ನು ತಕ್ಷಣ ನಿಲ್ಲಿಸಬೇಕೆಂದೂ ಭಾರತದ ಪ್ರಧಾನಿ ಅರಿಕೆ ಮಾಡಿಕೊಂಡರೆ, ಅವಕ್ಕೆ ಸಮಾಧಾನಕರವಾದ ಉತ್ತರ ಅಮೆರಿಕನ್ ಅಧ್ಯಕ್ಷರ ಬಾಯಿಂದ ಬರಲಿಲ್ಲ.

ಅಧ್ಯಕ್ಷ ನಿಕ್ಸನ್ನರು ಶ್ರೀಮತಿ ಗಾಂಧಿಯವರನ್ನು ಸ್ವಾಗತಿಸಿ ಇವರಿಗೇ ಬುದ್ದಿ ಮಾತು ಹೇಳಿದರು. "ಭಾರತವು ತನ್ನ ಗಡಿಯಿಂದ ಸೇನೆಯನ್ನು ನಾಪಾಸುತೆಗೆಮಾಕೊಳ್ಳಬೇಕು; ಬಂಗ್ಲಾದೇಶದ ಬಂಡುಗಾರರಿಗೆ ಬೆಂಬಲ ನೀಡುವುದನ್ನು ನಿಲ್ಲಿಸಬೇಕು; ಗಡಿಯಲ್ಲಿ ವಿಶ್ವಸಂಸ್ಥೆಯ ವೀಕ್ಷಕರು ಕಾವಲು ನಿಲ್ಲಲು ಅನುಮತಿ ನೀಡ ಬೇಕು. ಇದಕ್ಕೆ ನೀವು ಸಿದ್ಧರಿರುವಾದರೆ, ನಿಮ್ಮ ಬೇಡಿಕೆಯನ್ನು ಪರಿಶೀಲಿಸಬಹುದು. ಒಂದೊಮ್ಮೆ ನೀವು ಒಪ್ಪದೆ ಹೋದರೂ ಯುದ್ಧಕ್ಕೆ ಮಾತ್ರ ತೊಡಗ ಬೇಡಿ; ಅನುಯೂರಿಗೂ ಲಾಭಪ್ರದವಲ್ಲ; ಶೋಚಿತರುವ ಸಂಗತಿಯೂ ಅಲ್ಲ." ಈ ಬುದ್ಧಿಮಾತುಗಳನ್ನು ಕೇಳುವಾಗ, ಯೊಹ್ಯಾಖಾನರ ಅಪಪ್ರಚಾರದ, ಅಬ್ಬರ ಅಮೆರಿಕನ್ ಅಧ್ಯಕ್ಷರ ಮೇಲೆ ಹೇಗೆ ಬಿದ್ದಿದೆಯೆಂದು ತಿಳಿಯುತ್ತದೆ. ಪಾಪ್ ಅಧ್ಯಕ್ಷರ ಹೇಳಿಕೆಯಂತೆ "ಬಂಗ್ಲಾದಿಂದ ಭಾರತಕ್ಕೋಡಿ ಬಂದ ನಿರಾಶ್ರಿತರ ಸಂಖ್ಯೆ ಬರಿಯ ಇಪ್ಪತ್ತು ಸಾವಿರ. ಇವರಲ್ಲಿ ಹನ್ನೊಂದು ಸಾವಿರ ಜನರು ಅದಾವಾಗಲೋ ಬಂಗ್ಲಾಕ್ಕೆ ಮರಳಿದ್ದಾರೆ. ಉಳಿದಿರುವವರೂ ಸ್ವದೇಶಕ್ಕೆ ಹೊರಡಲು ತುದಿಗಾಲಲ್ಲಿ ನಿಂತಿದ್ದಾರೆ. ಆದರೆ, ಭಾರತವು ಅವರನ್ನು ತಡೆದು ನಿಲ್ಲಿಸಿದೆ." ಇಲ್ಲಿ ಪ್ರತಿನಿತ್ಯ ನಲುವತ್ತು ಸಾವಿರದಷ್ಟು ಬಂಗ್ಲಾದೇಶೀಯರು ಅನಾಥರಾಗಿ ಬರುತ್ತಿದ್ದಾರೆ! ಭಾರತದ ಪ್ರಧಾನಿಯವರು ಗಂಡುನೂಹನ್ನೇ ಹೇಳಿದ್ದಾರೆ: 'ಪಾಕಿಸ್ತಾನವು ನಮ್ಮ ಗಡಿಯಲ್ಲಿ ಭಾರೀ ಸೇನೆಯನ್ನು ಕೂಡಿ ಹಾಕಿ ಯುದ್ಧ ಭೀತಿಯನ್ನು ಹೆಚ್ಚಿಸುತ್ತಿರುವಾಗ, ನಮ್ಮ ಸೇನೆಯನ್ನು ಹಿಂದೆ ಕರೆದು ಕೊಳ್ಳುವುದು ಸುತರಾಂ ಸಾಧ್ಯವಿಲ್ಲ. ಈ ಮೊದಲೇ ಮೂರುಬಾರಿ ಅಪ್ರಚೋದಿತವಾಗಿ ನಮ್ಮ ಮೇಲೆ ದಾಳಿ ಮಾಡಿರುವ ಪಾಕಿಸ್ತಾನವನ್ನು ನಾವಂತೂ ಇನ್ನು ಮುಂದೆ ನಂಬುವುದಿಲ್ಲ ಭಾರತಕ್ಕೆ ಕನ್ನ ಬಂಗ್ಲಾ ನೀತಿಯನ್ನು ರೂಪಿಸಿಕೊಳ್ಳಲು ಸಾರ್ವಭೌಮ ಅಧಿಕಾರವಿದ್ದೇ ಇದೆ ಸ್ಪಷ್ಟವಾಗಿ ಸಮಸ್ಯೆ ಭಾರತ—ವಾಕ್ ಸಮಸ್ಯೆಯಲ್ಲ; ಗಡಿತಂಟೆಯಲ್ಲ. ಬಂಗ್ಲಾ ಮತ್ತು ಯೊಹ್ಯಾಖಾನರ ನಡುವಣ ಪ್ರಶ್ನೆ. ಇದಕ್ಕೆ ವಿಶ್ವಸಂಸ್ಥೆಯ ವೀಕ್ಷಕರು ಗಡಿಯಲ್ಲಿ ನಿಂತು ಮಾಡಬೇಕಾದ್ದು ಏನೂ ಇರುವುದಿಲ್ಲ ನೀವು ಮಿಲಿಟರಿ ನೆರವು ನೀಡುವುದನ್ನು ನಿಲ್ಲಿಸಿ. ಬಂಗ್ಲಾದ ಚುನಾಯಿತ ಪ್ರತಿನಿಧಿಗಳೊಡನೆ ಯೊಹ್ಯಾಖಾನರು ಸೌಹಾರ್ದಯುತ ಒಡಂಬಡಿಕೆಗೆ ಬರುವಂತೆ ತಮ್ಮ ಪ್ರಭಾವವನ್ನು ಬಳಸಿ. ಎಲ್ಲವೂ ಸರಿಹೋಗುತ್ತದೆ.' ಅಧ್ಯಕ್ಷ ನಿಕ್ಸನ್ ಪ್ರಧಾನಿ ಗಾಂಧಿಯವರ ವಾದವನ್ನು ಏಕೆ ಒಪ್ಪುತ್ತಾರೆ? ಅವರಿಗೆ ಯೊಹ್ಯಾಖಾನರೂ ಅವರ ಪಾಕಿಸ್ತಾನವೂ ಬೇಕು. ಆದುದರಿಂದ ಲೇ ಯೊಹ್ಯಾರ ಹೇಳಿಕೆಗಳೇ ಇವರಿಗೆ ಸಮರ್ಥನೀಯ. ಈ ನಿಲುವಿಗೆ ಬ್ರಿಟನ್ನೂ ದೊರವಲ್ಲ. ಆದರೆ, ವಿಶ್ವಪೊರುಕಟ್ಟೆಯಲ್ಲಿ ಬ್ರಿಟಿಷ ಉಸಪೇಕ್ಷೆಕ್ಕೆ ಗುರಿಕಾಕಿಗಳಿಲ್ಲದಿರುವುದರಿಂದ ಈ ಬಗ್ಗೆ ಯೂರೂ ತಲೆಕೆಡಿಸಿಕೊಳ್ಳುವುದಿಲ್ಲ. ಭಾರತದಂತಹ ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರವೊಂದರ ಪ್ರಧಾನಿಯು ಕಾಮನ್‌ವೆಲ್ತಿನ ರಾಣಿ ಬ್ರಿಟನ್ನಿಗೆ ಸಂದರ್ಶನ ನೀಡಿದಾಗ, ಭೆಟ್ಟಿಯ ವಿವರಗಳನ್ನು ಇಂಗ್ಲಿಷ್ ಪತ್ರಿಕೆಗಳು ಗೌಣವಾಗಿ ಕಂಡವೆಂದರೆ, ಭಾರತದ ಕಡೆಗೆ ಎಂತಹ ಮನೋಭಾವ ಬ್ರಿಟಿಷರಿಯೆಂದು ತಿಳಿಯುತ್ತದೆ. ಪ್ರಜಾತಂತ್ರದ ಪಂಚಮಬಲವೆಂದು ಕರೆಯಲಾಗುವ ಸುದ್ದಿ ಪತ್ರಿಕೆಗಳು, ಯೊಹ್ಯಾಖಾನರ ಹೇಳಿಕೆಗಳನ್ನೇ ಸತ್ಯವೆಂದು ನಂಬಿ ಅದಕ್ಕೆ ಇನ್ನಿಲ್ಲದ ಪ್ರಚಾರ ನೀಡುತ್ತಿರುವುದಾದರೆ, ನಮ್ಮ ರಾಯಭಾರಿ ಕಛೇರಿಗಳು ವಿದೇಶೀ ಪ್ರಚಾರ ಸಾಧನಗಳು ಏನು ಮಾಡುತ್ತಿವೆ ಎಂಬ ಪ್ರಶ್ನೆ ಎದ್ದು ತೋರುತ್ತದೆ.

ಈ ಮೊದಲ ಬಾರಿಯೂ ವಿದೇಶಗಳು ಭಾರತದ ಸತ್ಯವಾದವನ್ನು ಕೇಳಿದ್ದೆಂಬುದೇ ಇಲ್ಲ. ಆದರಲ್ಲೂ ಪಾಕಿಸ್ತಾನದ ವಿರುದ್ಧ ಭಾರತವೇನು ಹೇಳಿದರೂ ಅದನ್ನು ನಂಬುವ ವಾತಾವರಣ ಪ್ರಭಾವಶಾಲಿ ವಿದೇಶಗಳಲ್ಲಿ ನಿರ್ಮಾಣಗೊಂಡಿದ್ದೆಂಬುದೇ ಇಲ್ಲ. ೧೯೬೫ರಲ್ಲಿ ಪಾಕಿಸ್ತಾನವು ಭಾರತದ ಮೇಲೆ ಆಕ್ರಮಣ ಮಾಡಿದಾಗ, ಭಾರತವೇ ಪಾಕಿಸ್ತಾನದ ಮೇಲೆ ಆಕ್ರಮಣ ಮಾಡಿತೆಂದು ತಿಳಿಮ ಹೇಳಿಕೆ ನೀಡಿದವರೇ ಹೆಚ್ಚು. ಅಂದರೆ, ನಮ್ಮ ನೀತಿಯನ್ನು, ನಮ್ಮ ನಿಲುವಿಮೆಯನ್ನು ನಮ್ಮ ರಾಜಮೊತರು, ನಮ್ಮ ರಾಜತಾಂತ್ರಿಕ ಸಿಬ್ಬಂದಿಯವರು ಪ್ರಭಾವಶಾಲಿಯಾಗಿ ಬಿತ್ತರಿಸುವುದಿಲ್ಲವೆಂದೇ ಹೇಳಬೇಕಾಗುತ್ತದೆ. ಖಾಕ್ ಅಧಿಕಾರಿಗಳು ಸ್ವದೇಶವನ್ನು ಪತನದತ್ತ ಒಯ್ಯುತ್ತಿರುವಾದರೂ ವಿದೇಶಗಳಲ್ಲಿ ನಂಬಿಕೆಯನ್ನು ಉಳಿಸಿಕೊಳ್ಳುವಂತೆ ಪ್ರಚಾರ ನಿರಕರಾಗಿದ್ದಾರೆ. ಸುಳ್ಳನ್ನಾವರೂ ಹತ್ತು ಬಾರಿ ಒತ್ತಿ ಒತ್ತಿ ಹೇಳಿದಾಗ ಅದುವೇ ಸತ್ಯವಾಗುತ್ತದೆಂಬ ಗಾದೆಯಿದೆ. ಖಾಕ್ ಸರಕಾರ ಇದನ್ನು ಸತ್ಯವಾಗಿ ನಂಬಿ ಕಾರ್ಯತತ್ಪರವಾಗಿದೆ; ಸತ್ಯವಾಗಿಸಿದೆ. ನಾವು ಸತ್ಯವನ್ನೇ ನುಡಿದರೂ ಅದನ್ನು ನಂಬುವಂತಹ ವಿಷಮ ಪ್ರತಿಕೂಲ ವಾತಾವರಣ ವಿದೇಶಗಳಲ್ಲಿ ಹರಡಿದೆ. ನಮ್ಮ ದೇಶೀಯ ಕಛೇರಿಗಳಂತೆ ವಿದೇಶಿಕಛೇರಿಗಳೂ ನಿಷ್ಕ್ರಿಯ ವಾಗಿರುವಂತೆ ಭಾಸವಾಗುತ್ತದೆ. ವಿದೇಶಗಳ ಖಾಕ್ ಪರ ನೀತಿಗೆ ಅವುಗಳನ್ನು ಮಾತ್ರ ದೂರುವುದರಿಂದ ಪ್ರಯೋಜನವಿಲ್ಲ. ನಮ್ಮನ್ನೂ ನಾವು ತಿದ್ದಿಕೊಳ್ಳಬೇಕು. ಪ್ರಧಾನಿ ಗಾಂಧಿಯವರ ವಿದೇಶಯಾತ್ರೆ ಮಹತ್ವಪೂರ್ಣ—ಯಶಪ್ರದವಾಗಲೆಂಬ ಹಾರೈಕೆಯೊಂದಿಗೆ ನಿರೀಕ್ಷೆಯಂತೆ ಸುಳ್ಳಾಗಿಹೆಯೆಂದೇ ಹೇಳಬೇಕು. ನಮ್ಮ ನಿಲುವಿಮೆಯನ್ನು ವಿವರಿಸಿದ್ದೇನೆಂಬ ಒಂದು ಸಮಾಧಾನ ಮಾತ್ರವಲ್ಲದೆ ಮತ್ತಿದರಿಂದ ಲಭ್ಯವೇನೂ ಇಲ್ಲ. ರಶ್ಯದೊಡನೆ ಭಾರತ ಸೈನಿಕ ಮಾತುಕತೆ ನಡೆಸುತ್ತಿರುವಂತೆ ಮಾಜಿ ವಿದೇಶ ಸಚಿವ ಶ್ರೀ ಭುಟ್ಟೋ ನಾಯಕತ್ವದಲ್ಲಿ ಪಾಕ್ ನಿಯೋಗವೊಂದು ಪೀಕಿಂಗಿಗೆ ತೆರಳಿದೆ. ವಿದೇಶೀ ಆಕ್ರಮಣದ ವೇಳೆ ಪಾಕಿಗೆ ಸಮರ್ಥನೆ ನೀಡುವಭರವಸೆ ಪಡೆದಿದೆ-ಇದನ್ನೆಲ್ಲ ನೋಡುವಾಗ ನಮ್ಮ ಬಾಗಿಲ ಬಳಿಯಲ್ಲೇ ಬಂದೂಕು ಬಂದಿದೆಯೆನಿಸುವುದಿಲ್ಲವೆ?

ತೊಟ್ಟಿಲು– ಕುಲಾವಿ ಬೇಕೆ?

ನಿವೃತ್ತ ಮುಖ್ಯ ಕಾರ್ಯದರ್ಶಿ ಶ್ರೀ ಕೆ. ನಾರಾಯಣಸ್ವಾಮಿಯವರು ಅಧ್ಯಕ್ಷರಾಗಿದ್ದ, ರಾಜ್ಯ ಸರಕಾರ ನೇಮಿಸಿದ್ದ, ಭಾಷಾ ಸಮಿತಿಯು ಸರಕಾರದ ಎಲ್ಲ ಹಂತಗಳಲ್ಲಿಯೂ ಕನ್ನಡವೇ ಆಡಳಿತ ಭಾಷೆಯಾಗಬೇಕೆಂದು ಒಮ್ಮತದ ಅಭಿಪ್ರಾಯ ತಳೆದಿದೆ. ಬಹು ದಿನಗಳ ಬಳಿಕ ಪ್ರಕಟಗೊಂಡ ಈ ವರದಿ ಹಲವಾರು ಪ್ರಮುಖ ಸಿಫಾರಸುಗಳನ್ನು ಮಾಡಿದೆ. 'ಆಡಳಿತ ಭಾಷೆಯಾಗಿ ತರುವುದರೊಂದಿಗೆ ಕೂಡಲೇ ಜಿಲ್ಲಾ ಮಟ್ಟದಲ್ಲೂ ತರಬೇಕು. ಆಡಳಿತ ಶಬ್ದಕೋಶಾದಿಗಳನ್ನು ಎಲ್ಲ ನೌಕರರಿಗೂ ಒದಗಿಸಬೇಕು. ಜಿಲ್ಲಾ ಮಟ್ಟದ ನ್ಯಾಯಾಲಯಗಳ ಭಾಷೆಯೂ ಕನ್ನಡವಾಗಬೇಕು. ನಾಮಫಲಕಗಳು ಕನ್ನಡದಲ್ಲಿರಬೇಕು;

(ಹತ್ತನೇ ಪುಟ ನೋಡಿರಿ)

ಕಳ್ಳಗಂ ದುಡುಕುತ್ತಿದೆ - ಲೀಗು ಮುನಿಯುತ್ತಿದೆ

೧೯೫೪ರ ಸಾರ್ವಜನಿಕ ಚುನಾವಣೆಯ ಸಮಯ ರಾಜಾಜಿ, ಅಣ್ಣಾದೊರೆಯಂತಹ ಹಿರಿಯ ರಾಜಕಾರಣಿ ದೊಡ್ಡ ರಾಜಕೀಯಸ್ಫೂರ್ತಿ ಪ್ರಯತ್ನದಿಂದಾಗಿ ದ್ರಾವಿಡ ಮುನ್ನೇಟ್ರ ಕಳ್ಗಗಂ, ಮುಸ್ಲಿಂಲೀಗು, ಫಾರ್ವರ್ಡ್ ಬ್ಲಾಕ್, ಪ್ರಜಾಸೋಷ್ಯಲಿಸ್ಟ್ ಪಾರ್ಟಿ, ಸೋಷ್ಯಲಿಸ್ಟ್ (ಸಂಯುಕ್ತ) ಪಾರ್ಟಿ, ತಮಿಳು ಅರಸು ಕಳ್ಗಗಂ ಮತ್ತು ಸ್ವತಂತ್ರ ಪಾರ್ಟಿಗಳು ಸೇರಿ ಸಂಯುಕ್ತ ರಂಗವನ್ನು ನಿರ್ಮಾಣಿಸಿದುವು. ಇವುಗಳೊಂದಿಗೆ ಕಮ್ಯೂನಿಸ್ಟ್ ಪಾರ್ಟಿಗಳು ಮತ್ತು ನಾಂ ತಮಿಳರು ಮುಂತಾದ ಪಕ್ಷಗಳೂ ಸೇರಿಕೊಂಡಿದ್ದುವು ಅಂದು ಕಾಂಗ್ರೆಸ್ಸಿಗೆ ವಿರುದ್ಧವಾಗಿ ಗಾಳಿ ಬೀಸುತ್ತಿತ್ತು. ಕೊಳೆಯುತ್ತಿರುವ ಕಾಂಗ್ರೆಸ್ಸಿನ ಕಸಾಳ ಅಡಳಿತವನ್ನು ಅಂತ್ಯಗೊಳಿಸಲು ಜನರು ಮುಂದಾಗಿದ್ದರು. ಇದರಿಂದ ಸಂಯುಕ್ತ ರಂಗಕ್ಕೆ ಜಯಸಿಕ್ಕಿತು.

ಅಣ್ಣಾದೊರೆಯವರಿದ್ದ ವರೆಗೆ ಒಂದು ರೀತಿ ಸಾಮ್ಯತೆಯ ರಾಗ ಕೇಳಿಬರುತ್ತಿತ್ತು. ಸಪ್ತ ಸ್ವರಗಳು ಸೇರಿವಾಗ ಅಣ್ಣಾದೊರೆಯವರು ಅನಿರೀಕ್ಷಿತ ಸಾವಿನಿಂದಾಗಿ ಕರುಣಾನಿಧಿಯವರ ಕೈಮೀರಿಯಾಯಿತು; ಕಠೋರ ಸ್ವರ ಕೇಳಿ ಬರಲಾರಂಭವಾಯಿತು. ಅದಕ್ಕೆ ಮೊದಲು ಬಲಿಯೂದದ್ದು ಸಂಯುಕ್ತ ಸೋಷ್ಯಾಲಿಸ್ಟ್ ಪಾರ್ಟಿ. ಅದು ಒಕ್ಕೂಟದಿಂದ ಹೊರಗೆ ಬಂದಿತು. ಎರಡನೆಯ ಪೆಟ್ಟು ಸ್ವತಂತ್ರ ಪಾರ್ಟಿಗೆ ಬಿತ್ತು. ಮದ್ರಾಸು ನಗರಸಭೆಗೆ ಚುನಾವಣೆ ನಡೆದಾಗ ಕೇವಲ ಕೆಲವೇ ಸ್ಥಾನಗಳನ್ನು ಅದಕ್ಕೆ ಬಿಟ್ಟುಕೊಡಲಾಯಿತು. ಸ್ವತಂತ್ರ ಪಾರ್ಟಿಯ ಲೋಕ, ರಾಜ್ಯ ವಿಧಾನ, ನಗರ ಸಭಾ ಸದಸ್ಯರು ವ್ಯತಿರಾದಾಗ ಉಂಟಾದ ಜಾಗವನ್ನು ತಂಬಲು ದ್ರಾ.ಮು ಕಳ್ಗಗಮೇ ಮುಂದಕ್ಕೆ ಬಂದಿತ್ತು. ಈ ಎರಡು ಪಾರ್ಟಿಗಳಿಗೆ ಮೊದಲ ಪ್ರಹಾರ ದ್ರಾ.ಮು.ಕ. ಕೊಡಲು ಬಲವಾದ ಕಾರಣಗಳಿವೆ. ತಮಿಳ್ನಾಡಿನ ಸಂಯುಕ್ತ ಸೋಷ್ಯಾಲಿಸ್ಟ್ ಪಾರ್ಟಿ ಒದೇನು ಬೇಕಾದರೂ ಅನ್ನಲಿ. ಆದರೆ ರಾಮ ಮನೋಹರ ಲೋಹಿಯಾರ ಹೆಸರೆತ್ತಿದಲ್ಲಿ ದ್ರಾ. ಮು. ಕ ಗಡ ಗಡ ನಡುಗುತ್ತದೆ. ಹಿಂದಿಯ ಹೆಸರೆತ್ತಿದಲ್ಲಿ ಕಿಡಿಕಿಡಿಯಾದಂತೆ ವೇಷ ಧರಿಸುತ್ತದೆ ದ್ರಾ. ಮು. ಕ ಅದೇ ರೀತಿ ಅಣ್ಣಾದೊರೆಯವರಿಗೆ ರಾಜಾಜಿಯವರ ಕೋಲಿನಾಸರೆ ಅಗತ್ಯವಾಗಿತ್ತು. ದ್ರಾ. ಮು. ಕ. ಬ್ರಾಹ್ಮಣ ವಿರೋಧಿ ಪಕ್ಷವೆನ್ನುವದನ್ನು ಮರೆಯಲು ಸಾಧ್ಯವೇ ಇರುವದಿಲ್ಲ. ರಾಜಾಜಿಯವರು ಬ್ರಾಹ್ಮಣರಿರುವ ಕಾರಣ ತಮಿಳ್ನಾಡಿನಲ್ಲಿ ಸ್ವತಂತ್ರ ಪಾರ್ಟಿಯು ಬ್ರಾಹ್ಮಣರ ಪಾರ್ಟಿ ಎನಿಸಿಕೊಂಡಿದೆ. ದ್ರಾ. ಮು ಕ. ಕೈ ಗದ್ದಿಗೆಯನ್ನೇರಬೇಕಾಗಿತ್ತು ಅವನ್ನೇರಲಾಗಿತು. ಹೊಳೆದಾಟಿದ ಮೇಲೆ ಅಂಬಿಗನ ಮಿತ್ರತ್ವ ಅದಕ್ಕೇಕೆ? ಅದು ತನ್ನ ಬುದ್ಧಿಯನ್ನು ತೋರಿಸಿದರೂ ವಯೋವೃದ್ಧ ರಾಜಾಜಿಯವರು ಕುಪಿತರಾಗಲಿಲ್ಲ, ಸಮಾಧಾನ—ಶಾಂತಿಗೆ ಎಳ್ಳು ನೀರು ಬಿಡದೆ ಬಹಳ ತಾಳ್ಮೆಯಿಂದ ವರ್ತಿಸಿದರು ಕೊನೆಯಲ್ಲಿ ದ್ರಾ. ಮು.ಕ. ವೇ ಅರ್ಧಚಂದ್ರ ಪ್ರಯೋಗವನ್ನಿತ್ತಿತು. ಇಲ್ಲಿಗೆ ಸಂಯುಕ್ತ ರಂಗದ ಒಂದು ಅಧ್ಯಾಯ ಅಂತ್ಯವಾಯಿತು.

ಬೇರೊಂದು ಹೊಸ ಅಧ್ಯಾಯ ಆರಂಭವಾಯಿತು. ಉತ್ತರದ ಹಿಂದಿ ಪಾರ್ಟಿ, ಬ್ರಾಹ್ಮಣರ ಪಾರ್ಟಿಯನ್ನು ಹೊರದೂಡಿ ದ್ರಾ. ಮು. ಕ. ಶುದ್ಧಿಕಾರ್ಯ ನಡೆಸಿತು. ಅಷ್ಟರಲ್ಲಿ ಮೂರ್ವಿಸ್ಟ್ ಕಮ್ಯೂನಿಸ್ಟ್ ಪಾರ್ಟಿಯೂ ಯುತಿಯಿಂದ ಹೊರಗೆ ಬಂತು. ಈ ನೂರು ಪಕ್ಷಗಳು ಹೋದರೂ ದ್ರಾ. ಮು. ಕಳ್ಗಗಮಿಗೆ ನಷ್ಟವಾಗಲಿಲ್ಲ. ಆದಕ್ಕೆ ಇಂದಿರಾಜೀಯವರ ವರದ ಹಸ್ತ ಸಿಕ್ಕಿತು. ದಿಲ್ಲಿ ದೇವತೆಯ ದಯಾಪೂರ್ಣ ಕೃಪಾಕಟಾಕ್ಷ ಇರುವಾಗ ಇವುಗಳ ಹಂಗೇನು ಕರುಣಾನಿಧಿಯವರಿಗೆ? ೧೯೭೧ರ ಚುನಾವಣೆಯಲ್ಲಂತೂ ವಿಪರೀತ ವಿಜಯ ಸಿಕ್ಕಿತು. ಇನ್ನು ಚಿಲ್ಲರೆ ಪಕ್ಷಗಳ ಆವಶ್ಯಕತೆಯಾದರೂ ಏನು? ಅದು ದುಡುಕಲಾರಂಭಿಸಿತು.

ಸಂಯುಕ್ತ ರಂಗದಲ್ಲಿರುವ ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ ಮತ್ತು ಮುಸ್ಲಿಂ ಲೀಗುಗಳು ದಿಲ್ಲಿ ದೇವತೆಯ ಕೃಪಾಕಟಾಕ್ಷಕ್ಕೊಳಗಾಗಿರುವವೇ ಇವೆ. ಇಂದಿರಾಜೀಯವರಿಗೆ ಸಿಕ್ಕಿರುವ ಅಸಾಮಾನ್ಯ ಗೆಲುವನ್ನು (ನ್ಯಾಯಾಲಯದಲ್ಲಿರುವ ದೂರುಗಳು ಒತ್ತಟ್ಟಿಗಿರಲಿ) ಕಂಡ ಈ ಪಕ್ಷಗಳಿಗೆ ಅವರ ಮೇಲೆ ಎಲ್ಲಿಲ್ಲದ ನಂಬಿಕೆ ಬಂದು ಬಿಟ್ಟಿದೆ. ಆ ವಿಜಯೋತ್ಸಾಹದಿಂದ ಕಮ್ಯೂನಿಸ್ಟ್ ಪಾರ್ಟಿಯು ಸಂಯುಕ್ತ ರಂಗದಲ್ಲಿದೆಯೊದರೂ ಆಗಾಗ ಚಳುವಳಿ ನಡೆಸುತ್ತ ಇದ್ದು, ಕೈಗಾರಿಕಾ ರಂಗದಲ್ಲಿ ದ್ರಾ. ಮು. ಕಳ್ಗಗಮಿಗೆ ಆಗಾಗ ತಲೆನೋವುಂಟು ಮಾಡುತ್ತಿರುತ್ತದೆ ಕೆ.ಕೆ. ಷಾಹ ತಮಿಳ್ನಾಡಿನ ಗವರ್ನರಾಗಿ ಬಂದ ಮೇಲಂತೂ ಈ ಎರಡು ಪಕ್ಷಗಳಿಗೆ ಹೊಸ ಸುಕ್ಕ ಬಂದಂತಾಗಿದೆ.

ಸಂಯುಕ್ತ ರಂಗದಲ್ಲಿ ಮುಸ್ಲಿಂ ಲೀಗು ಸೇರಿದೆಂದಿನಿಂದಲೂ ಅದು ತನ್ನ ವರ್ಚಸ್ಸಿಗೆ, ವ್ರಭಾವಕ್ಕೆ, ಘನತೆಗೆ ಕುಂದು ಬರುವಂತೆ ನಡೆದುಕೊಂಡಿಲ್ಲ. ನಗರ, ವಿಧಾನ, ರಾಜ್ಯ, ಲೋಕಸಭೆ ಇಂತಿಷ್ಟು ಸ್ಥಾನ ಬೇಕೆಂದು ಅಂದದ್ದನ್ನು ಅದು ಪಡೆದೇಕೊಂಡಿರುತ್ತದೆ. ಅಷ್ಟೇಅಲ್ಲ ಅದು ಗೆದ್ದಿರುತ್ತದೆ. ಆದರಿಂದ ಅದಕ್ಕೆ ಗರ್ವ ಬರುವದು ಸ್ವಾಭಾವಿಕವೇ ಇದೆ ಇದ್ದರೂ ಮುಸ್ಲಿಂಲೀಗು ದ್ರಾ. ಮು ಕಳ್ಗಗಮಿನ ಮುದ್ದಿನ ಪಕ್ಷವಾಗಿತ್ತು.

ವಾನ ಪ್ರತಿಬಂಧಕಾಜ್ಞೆಯನ್ನು ಬದಿಗೆ ಸರಿಸಿದುದರಿಂದ ಮುಸ್ಲಿಂ ಲೀಗಿಗೂ ದ್ರಾ. ಮು.ಕಳ್ಗಗಮಿಗೂ ನಡುವೆ ಕಟಿಪಿಟಿ ಆಂಟಾಗಿರುತ್ತದೆ ಅದನ್ನು ಬದಿಗೆ ಸರಿಸುವ ವಿಷಯವನ್ನು ದ್ರಾ ಮು.ಕ. ಹಲವಾರು ದಿನಗಳಿಂದ ಹೇಳುತ್ತಿದ್ದರೂ ವಿಧಾನ ಸಭೆ ಅಧಿವೇಶನದಲ್ಲಿದ್ದಾಗ ಸುಮ್ಮಗಿದ್ದು. ಅದು ಮುಗಿದೊಡನೆ, ಅವನರ ಕಾಪೂರ್ನಿನ ಮೂಲಕ, ಗವರ್ನರರ ಅಧಿಕಾರವನ್ನು ಸಯೋಗಿಸಿಕೊಂಡು ಹೆಂಡದ ಹೊಳೆಯನ್ನು ಹರಿಸಿಬಿಟ್ಟಿತು ಒಂದು ಕೈಯ್ಯಲ್ಲಿ ಹೆಂಡ, ಇನ್ನೊಂದರಲ್ಲಿ ಹೆಂಗಸು. ಆಹ್ಹಾ! ಒಂದು ಕೈಯ್ಯಲ್ಲಿ ಸಾರಾಯಿ ಇನ್ನೊಂದರಲ್ಲಿ ಸ್ತ್ರೀ ಆಹ್ಹಾ! ಒಂದು ಕೈಯ್ಯಲ್ಲಿ ಮದ್ಯ ಇನ್ನೊಂದರಲ್ಲಿ ಮಹಿಳೆ ವ್ಹಾ! ಒಂದು ಕೈಯ್ಯಲ್ಲಿ ಅಮಲು ಪದಾರ್ಥ ಇನ್ನೊಂದರಲ್ಲಿ ಅಂಗನೆ ಅಹ್ಹಾ! ಒಂದು ಕೈಯ್ಯಲ್ಲಿ ಕಳ್ಳು ಇನ್ನೊಂದರಲ್ಲಿ ಕನ್ಯೆ ಆಹ್ಹಾ! ಇದನ್ನು ಹಾಡಿದವನು ಮುಸ್ಲಿಂ ಕವಿಯೇ! ಮಹಮ್ಮದೀಯರ ದರ್ಬಾರು ನಡೆಯುತ್ತಿದ್ದಾಗ ಮದ್ಯದ ಪುಡಿಪೂತುಂಬಿತ್ತು. ಇದ್ದರೂ ಮತೀಯ ದೃಷ್ಟಿಯಲ್ಲಿ ಮಹಮ್ಮದೀಯರಿಗೆ ಮದ್ಯನಿಷೇಧ. ಮುಸ್ಲಿಂ ಲೀಗು ಮತೀಯ ಪಕ್ಷವಿದೆ. ಇನ್ನೊಂದು ಬದಿಯಲ್ಲಿ ವಾನ ಪ್ರತಿಬಂಧಕಾಜ್ಞೆಯನ್ನು ದ್ರಾ ಮು.ಕ. ಬದಿಗೆ ಸರಿಸಿರುವದರಿಂದ ಮುಂದಿನ ಚುನಾವಣೆಯಲ್ಲಿ ಜನತೆಯು ಅದ

ಹಿದು ಗುಟ್ಟು...

ಕುಟುಂಬ ಯೋಜನೆಯಿಂದ ಸಂಸಾರದ ಖರ್ಚು ಕಡಿಮೆ

ಹೆಚ್ಚಿನ ವಿವರ ಮತ್ತು ಉಚಿತವಾಗಿ ಸಲಹೆಪಡೆಯಲು ಹತ್ತಿರದ ಕುಟುಂಬ ಕಲ್ಯಾಣ ಕೇಂದ್ರಕ್ಕೆ, ಆಥವಾ ಪ್ರಸೂತಿ ಮತ್ತು ಶಿಶು ಆರೋಗ್ಯ ಕೇಂದ್ರಕ್ಕೆ ಹೋಗಿ ವಿಚಾರಿಸಿ.

ಕುಟುಂಬ ಕಲ್ಯಾಣ ಸಾಧನಗಳು ಸರ್ಕಾರದಿಂದ ಉಚಿತವಾಗಿ ಸರಬರಾಜಾಗುತ್ತವೆ

ನವಯುಗ

ಧರ್ಮಸ್ಥಳ
ಧರ್ಮ-ಸಾಹಿತ್ಯ ಸಮ್ಮೇಳನ-ವಿಶೇಷಾಂಕ
11-11-1971

ಸಮನ್ವಯ ಸಾಧಕ

ಧರ್ಮ-ಸಾಹಿತ್ಯ ಸಮ್ಮೇಳನಗಳು

ರಾಮ—ರಹೀಮರಲ್ಲಿ ಭೇದ ಸಾರಿದರು ಮಹತ್ಮಾ ಕಬೀರರಿಂದ ವಿವೇಕಾನಂದರವರೆಗಿನ ನೂರಾರು ಸಂತರು ಎಲ್ಲ ಧರ್ಮಗಳ ಗುರಿಯೊಂದೇ ಎಂದು ಉದ್ಘೋಷಿಸಿದರು ಇದೇ ಸದ್ಭಾವನೆಯನ್ನು, ವಿಶ್ವಕಲ್ಯಾಣ ಪರಿಪೋಷಕ ಶಕ್ತಿಯನ್ನು ಹುಟ್ಟಿಸಿ ಬೆಳಸುವುದು ಧರ್ಮ ಸಮ್ಮೇಳನ

ಹುರುಪುರಿ ಉಪನಿಷತ್ತು, ಸತ್ಯ ಧರ್ಮ ಯುಗವೂಮು ನಿರ್ಮಾಣವಾಗುವುದು—ಕಂಡಿತ ನಿನ್ನೆಲೆ ಎರಡೋದಲ್ಲವನ್ನು ಕಂಡ ಸತ್ಯ ತಥ್ಯವೆ ನಾಳೆಯ ಮಥ್ಯೆ ಹ್ಯನನ್ನೂ ಕಾಣಬಲ್ಲುದು ಪ್ರಶಾಂತ ಸ್ಥಲಿತ ವಾತಾವರಣ ನಿರ್ಮಾಣ ಎಂದು ಮತ ಧರ್ಮದಿಂದ ಸಾಧ್ಯವಿಲ್ಲ ಎಂದೊಂದು



ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆ

ಮೂನವೇತಿಹಾಸದಲ್ಲಿ ಉತ್ಕ್ರಾಂತಿಯೊಗುತ್ತಲಿದೆ ವೈಗತಿ ಜೀವನಸ್ಥಿತಿಯ ಸತ್ಯವೆನಿಸಿದೆ ಮೂನವಕುಲ ಸಂಕ್ಷೋಭೆಗೊಳ್ಳುತ್ತ ನಡೆಯುತ್ತಿದೆ ಅಂತಿಕ ಜಗತ್ತಿನ ವಿವಿಧ ಜನಾಂಗಗಳಲ್ಲಿ ಪರಸ್ಪರ ಹೊಂದಿಕಯಿಲ್ಲವೆಂದಾದರೆ, ಘರ್ಷಣೆಗಳು ಏನಿವಾರ್ಯ ಇದರಿಂದ ವಿಪತ್ಪರಂಪರೆಗಳಿಗೆ ನಾಂದಿ ಲೋಕಕಲ್ಯಾಣಕ್ಕಾಗಿ ಸಮನ್ವಯ ಭಾವನೆ ಬೆಳೆಯಬೇಕು, ಹಲವಾರು ಮತಾಚಾರಗಳಿಗೆ ಜನ್ಮಭೂಮಿಯೂ ಆವಾಸ ಸ್ಥಾನವೂ ಆಗಿರುವ ಭಾರತವೊಂದೇ ಈ ಅಪೂರ್ವಭಾವನವನ್ನು ಮೂಡಿಸಬಲ್ಲುದು ಅಕ್ಬರನಿಂದ ತೊಡಗಿ ಮಹತ್ಮಾಗಾಂಧಿಯವರೆಗೆ ಹಲವಾರು ಮೇಧಾವಿಗಳು ಸುತನನ್ನು ಸಾಹೋದರ್ಯವೆನ್ನು ತೀಯು ವ್ಯಕ್ತಿ ವ್ಯಕ್ತಿಗಳಾಗಿ ಪ್ರಾರಕನಂತೆ ಸಾಧ್ಯ ಸಾಧ್ಯ ವಿವಿಧ ದರ್ಮ ಧರ್ಮಾನನ್ನು ತಿತ ಮಾಡಿಕೊಂಡಾಗಲೇ ನಾನವಧರ್ಮ ದಶ್ರ ತ್ತೆ ನಡೆಯುತ್ತಿದೆ ಇನನಾನವ ಇನನಾನವನೆನ್ನುವುದನ್ನು ಬಿಟ್ಟು ಇನನಮ್ಮವ, ಇನನನುನನು ಮನೆಳ್ಳುವನೆಯು ನ್ನು ಸ್ರಷ್ಟಿಸಿಕುವವ್ಲಿ ಧರ್ಮ-ಸಮ್ಮೇಳನ ಗಳು ಸಾರ್ಥಕ್ಯ ಪಡೆಯಲಿ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಮೊತ್ತ ಮೊದಲ ಧರ್ಮ-ಸಮ್ಮೇಳನವು ಜಾತ್ಯಾತೀತ ಸಾಹಿತ್ಯ ಸಂಗೀತ ಕಲಾನಿಧೀನಂ ಸಾಕ್ಷಾತ್ ಪಶುಪುಚ್ಛ ವಿಷಾಣ ಹೀನಂ' ಎಂದೊಂದು ಸುಭಾಷಿತ ಹಾಡುತ್ತದೆ ಮಾನವ ಪಶುಗಳಾಗಿರುವ ಅಂತರವಾದರೂ ಇನ್ನೆಲ್ಲಿಯೇ "ಸಾಹಿತ್ಯ, ಸಂಗೀತ ಮತ್ತು ಕಲೆಗಳಿಂದ ಹೊರಬಿದ್ದವೋಡುವ ಮಾನವ ಬಾಲ-ಕೊಂಬುಗಳಿಲ್ಲದ ಪಶು" ಎಂದಿದರ ಅರ್ಥವನ್ನು ಸಂಗ್ರಹಿಸ ಬಹುದು ಶ್ರೀ ಧರ್ಮಸ್ಥಳದಲ್ಲಿ ದರ್ಮ ಸಮ್ಮೇಳನದೊಂದಿಗೆ ಸಾಹಿತ್ಯ ಸಮ್ಮೇಳನವೂ ಸಂಪ್ರದಾಯ ಬದ್ಧವಾಗಿ ನಡೆದು ಬರುತ್ತಿದೆ ಇವುಗಳಲ್ಲಿ ಸಾಹಿತ್ಯ ಸಂಗೀತ-ಕಲಾದಿಗಳಿಗೆಲ್ಲ ಸಾಕಷ್ಟು ಸಾಕಸನಾವಕಾಶಗಳು ದೊರೆಯುತ್ತಿವೆ ಸಾಹಿತ್ಯ-ಕಲೆಗಳಲ್ಲಿನ ನಾನಾ ಮುಖಗಳಲ್ಲಿ ವಿದ್ವಜ್ಜನರಿಸಿದವರು ತಮ್ಮ ವ್ಯಾಸಂಗಗಾಯನ್ನು ಪಾತ್ರೆಗಳಲ್ಲಿ ತುಂಬಿ ಶ್ರೀ ಸಾಮಾನ್ಯರ ಅಂಜಲಿಗೆ ಸುರಿಯುತ್ತಾ ಬಂದಿದ್ದಾರೆ ಈ ಮಹಾಮಹಿಮರನ್ನು ಒತ್ತಟ್ಟಿಗೆ ಕೂಡಿಸಿ ಹೆಗ್ಗಡೆಯವರು ಶ್ರೀ ಸಾಮಾನ್ಯರನ್ನು ಪರಮಪ್ರಸನ್ನೀತರಾಗಿಸುತ್ತ ಬಂದಿದ್ದಾರೆ ನಾಡಿನ ಹೆಸರಾಂತ ಸಾಹಿತಿಗಳು ಕಲಾವಿದರು ಪ್ರತಿಸರ್ಷವೂ ಬಂದು ಸೇರಿ ಸಾರಸ್ವತೋತ್ಸವವನ್ನು ನಡೆಸಿ ಜನರ ಕರ್ಣ—ನೇತ್ರವನ್ನು ತಣಿಸುವ ಈ ಸಮ್ಮೇಳನವು ಜನ ಜಾಗೃತಿಗೊತ್ತು ನಾದನವನ್ನಿಸುತ್ತ ಬಂದಿದೆ

ಶ್ರೀ ಮಂಜಯ್ಯ ಹೆಗ್ಗಡೆಯವರಿಂದ ಆರಂಭವಾದ ಈ ಸಮ್ಮೇಳನಗಳು ಶ್ರೀ ರತ್ನವರ್ಮ ಹೆಗ್ಗಡೆಯವರ ಅಮೃತಾವಧಿಯ (೧೯೬೯) ರಜತ ಮಹೋತ್ಸವವನ್ನು ಆಚರಿಸಿದುವು ಈಗಿನ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಸುವರ್ಣೋತ್ಸವ- ವಜ್ರೋತ್ಸವಗಳನ್ನೆಲ್ಲ ಶತಮಾನೋತ್ಸವವನ್ನೂ ಆಚರಿಸುವಂತೆ ಶ್ರೀ ಸ್ವಾಮಿ ಅನುಗ್ರಹಿಸಲೆಂದು ಎಳಹರೆಯದ ತಮ್ಮ ಅಮೃತಾಪೇಕ್ಷೆಯ ಸೌಮ್ಯ ದಾರ್ಮಿಕ ಕರ್ಮಾನುವೃತ್ತಿಯ ಶ್ರೀ ಹೆಗ್ಗಡೆಯವರು ಈ ಸಮ್ಮೇಳನಗಳ ಯಶಸ್ಸುಕ್ತತೆಯ ಪ್ರೇರಣೆಯಾಗಿ ಮನಪೂರ್ವಕ ಮಾರ್ಗದರ್ಶಿಕೆ ಮಾಡಿಕೊಂಡಿದ್ದಾರೆ ಶ್ರೀ ಸಾಮಾನ್ಯರಿಗೆ ಇವುಗಳು ಇನ್ನಿತ್ತೋತ್ಪಾದಕ, ಪ್ರಪ್ರದರ್ಶಕ ಉಪಯುಕ್ತ ಕಾರಕವಾಗುವಂತೆ ಶ್ರಮಿಸುತ್ತಿರುವುದು ಅಭಿನಂದನೀಯ ಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು ಎಲ್ಲೆಯೂ ನಡೆಯಬಹುದು, ಆದರೆ ಧರ್ಮಸ್ಥಳದ ಸಮ್ಮೇಳನಗಳಿಗೆ ತಮ್ಮದೇ ಆದ ವೈಶಿಷ್ಟ್ಯಗಳಿವೆ ಎಂದು ಶ್ರೀ ಸ್ವಾಮಿಯ ಅನುಗ್ರಹದಿಂದಲೇ ಬಂದಿದೆಯೆನ್ನುವುದು ನಿಸ್ಸಂದೇಹ

●●

ಎನ್ನ ಮನಕೆನ್ನೆಲ್ಲಿ ಸುಖ
ನೆಂಜಾನಾಥ?
ವಿಸ್ತಾರ ಸಾಗರದಿ ಹರಿವ
ನಾವೆಯು ಪಕ್ಷಿ
ಸುಖವರಸಿ ದೂರ ದೂರಕೆ ಹಾರಿ
ಹೋದರೂ,
ಮರಳಿ ನಾನೆಗೆ ಶರಣು ಬಾರದೆ?
ಮಂಜುನಾಥನ ಸೊರೆದು
ಒಳ್ಳೆ ದೇವರ ಗೊಡವೆಯೇಕೆ?

ನಂಜನ್ನು ಮಂಜಾಗಿಸುತ್ತಿರುವ ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ

ಪಡುವಣ ಕಡಲತೀರದ ಜಿಲ್ಲೆ ದಕ್ಷಿಣ ಕನ್ನಡ. ಶೈಕ್ಷಣಿಕ, ಸಾಮಾಜಿಕ, ಔದ್ಯಮಿಕ, ನಾಡೆಜ್ಯಮೊದಲಾದ ನೂರಾರು ರಂಗಗಳಲ್ಲಿ ಈ ಜಿಲ್ಲೆಯವರು ತೋರಿಸಿದ ಸಾಹಸ ಕಲ್ಪನಾತೀತ. ಇಡಿಯ ಭಾರತದ ಮೂಲೆ ಮೂಲೆಗಳಲ್ಲೂ ಇಲ್ಲಿನ ಜನರು ನೆಲೆಸಿದ್ದಾರೆ. ತಮಗೂ ತಮ್ಮ ಜಿಲ್ಲೆಗೂ ಹೆಸರು ತಂದುಕೊಂಡಿದ್ದಾರೆ. ಧಾರ್ಮಿಕ ಕ್ಷೇತ್ರದಲ್ಲೂ ದಕ್ಷಿಣಕನ್ನಡದವರು ಹಿಂದೆ ಬಿದ್ದವರಲ್ಲ. ಸರ್ವ ಧರ್ಮಗಳ ಸಮನ್ವಯ–ಸಹಿಷ್ಣುತೆಗಳಿಗೆ ಈ ಜಿಲ್ಲೆಮತ್ತೊಂದು ಹೆಸರು. ಹಿಂದೂ, ಜೈನ, ಇಸ್ಲಾಂ ಮತ್ತು ಕ್ರೈಸ್ತ ಮೊದಲಾದ ಮತೀಯರು ನಾನಾ ಭಾಷೀಯರು, ನಾನಾ ಜಾತೀಯರು ಇಲ್ಲಿ ಒಂದೇ ಮನೆಯವರಾಗಿ ಬಾಳಿಬಂದಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ ಸರ್ವ ಮತೀಯರಿಂದಲೂ ಸಮಾನ ಆದರಣೆ ಪಡೆಯುತ್ತ ಬಂದಿದ್ದಾನೆ.

ಶ್ರೀ ಕ್ಷೇತ್ರದ ಧರ್ಮಾಧಿಕಾರಿಗಳು ಜೈನರು; ಶ್ರೀ ಸ್ವಾಮಿಯ ಪೂಜಾರಿಗಳು ಹಿಂದುಗಳು. ಆತನ ಕರುಣಾರ್ತರಾಗಿ ಬರುವವರು ಅವರು ಇವರಲ್ಲ, ಎಲ್ಲವರು. ಸಮೂಹ ಜನ ಸಬಲ–ದುರ್ಬಲ ಅಂಗಗಳು ಸದಾ ತಮ್ಮ ದುರಿತ ವಿನಾಶಕನೆಂದು ಶ್ರೀ ಸ್ವಾಮಿಯನ್ನು ನಂಬಿ ಬಂದಿದ್ದಾವೆ; ತಮ್ಮ ನಂಬಿಕೆಯಲ್ಲಿ ಸಿದ್ಧಿಯನ್ನೂ ಪಡೆದಿದ್ದಾವೆ. ಬಾಳಬೇನೆಯ ವೇಳೆ ಆತನಿಗೆ ಪುರೆ ಹೋಗಿದ್ದಾವೆ, ಶರಣಾಗತ ಸಂರಕ್ಷಕನಿಂದ ಅಭಯವನ್ನು ಹೊಂದಿದ್ದಾವೆ. ಧರ್ಮಸ್ಥಳ ಕ್ಷಣ ಕ್ಷಣವೂ ಧರ್ಮ ನಡೆಯುತ್ತಿರುವ, ಧಾರ್ಮಿಕ ಮನೋಭಾವವನ್ನು ಉದ್ದೀಪ್ತಗೊಳಿಸುವ, ಧರ್ಮ ಪ್ರಿಯರ ಸ್ಥಳವಾಗಿ, ಮಂಜುನಾಥನಿಂದ ಪುನೀತವಾದ ಪುಣ್ಯಭೂಮಿಯಾಗಿ ಮೆರೆದು ಬಂದಿದೆ–ಕಳೆದ ಏಳೆಂಟು ಶತಮಾನವೂನಗಳಿಂದಲೂ ತನ್ನ ಮಹಿಮಾತಿಶಯದಿಂದ ಉಜ್ವಲ ಧರ್ಮಕ್ಷೇತ್ರವಾಗಿ ಬೆಳಗಿ ಬೆಳೆದುಬಂದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಒಳನಾಡಿನ ಒಂದು ತಾಲೂಕು ಬೆಳ್ತಂಗಡಿ. ಇಪರಮೂಹಣ ಬೆಟ್ಟದ ಸಾಲುಗಳಲ್ಲಿ ಒಂದು ಶಿಖರದ ಮೇಲೆ ಶ್ರೀ ಮಂಜುನಾಥ ನೆಲಸಿದ್ದಾನೆ. ಇಲ್ಲಿಗೆ ಜಿಲ್ಲೆಯ ಕೇಂದ್ರ ಮಂಗಳೂರಿನಿಂದ ಸುಮಾರು ೪೦ ಮೈಲಿ ದೂರ. ಜಿಲ್ಲೆಯ ಉಳಿದೆಡೆಗಳಾದ ಉಡುಪಿ, ಕುಂದಾಪುರ, ಕಾರ್ಕಳ, ಪುತ್ತೂರು ಮೊದಲಾದೆಡೆಗಳಿಂದಲೂ ನೇರ ಸಂಪರ್ಕ ಸೂರ್ಗಗಳು. ಪಶ್ಚಿಮ ಘಟ್ಟಗಳನ್ನು ಹಾಸ್ಸೂಡಿ ಗಾಟಿಯಲ್ಲಿ ಇಳಿದು ಉಜಿರೆ ಮಾರ್ಗವಾಗಿ ಶ್ರೀ ಸ್ವಾಮಿಯ ಸಾನ್ನಿಧ್ಯ ಸೇರಬಹುದು. ರಾಜ್ಯದ ರಾಜಧಾನಿಯಿಂದಲೂ ಧರ್ಮಸ್ಥಳಕ್ಕೆ ನೇರ ಸಾರಿಗೆ ಸಾಧನವಿದೆಯೆಂದ ಮೇಲೆ ಕೇಳಬೇಕೇನು?

ಶ್ರೀ ಕ್ಷೇತ್ರದ ಪ್ರಾಚೀನ ಹೆಸರು ಕುಡುಮ. "ಕೂಡುವ ಊರು" ಎಂಬ ಅರ್ಥ ಈ ಪದಕ್ಕೆ. ಆ ಕಾಲದಲ್ಲೂ ದಾನ, ನ್ಯಾಯ, ಧರ್ಮ, ನೀತಿಗಳಿಗೆ ಇದು ಪ್ರಸಿದ್ಧ. ದೀನಾರ್ತರಿಗೆ, ಬಡ–ಬಗ್ಗರಿಗೆ, ಭಕ್ತ ಭೃತ್ಯರಿಗೆ ಅಭಯ ವರದ ಹಸ್ತ ನೀಡುತ್ತಿದ್ದ ನುಹಾ ಪುಣ್ಯಧಾರಾಮ. ಸಾರಿಗೆ–ಸಂಪರ್ಕಗಳು ಹೆಚ್ಚುತ್ತ ಹೋದಂತೆ ಶ್ರೀ ಕ್ಷೇತ್ರದ ಕೀರ್ತಿಲತೆ ದೇಶವಿಡಿ ಹಬ್ಬತೊಡಗಿದ್ದು ಸಹಜ. 'ಕುಡುಮ' 'ಧರ್ಮಸ್ಥಳ'ವೆನಿಸಿದ್ದೂ ಇದರ ಪ್ರಭಾವದಿಂದಲೇ.

ಶ್ರೀ ಕ್ಷೇತ್ರದ ಉತ್ತರ ದಿಕ್ಕಿನಲ್ಲಿ ನದಿಯೊಂದು ನಲಿಯುತ್ತ ಹರಿಯುತ್ತದೆ. ಇದು ಶಿವನ ನೇತ್ರದಿಂದ ಉದ್ಭವಿಸಿತೆಂದು ಪ್ರತೀತಿ. ಕುದುರೆ ಮುಖದ ಬಳಿಯಿಂದ ಹುಟ್ಟಿ ಉಪ್ಪಿನಂಗಡಿಯಲ್ಲಿ ಕುಮಾರಧಾರೆಯನ್ನೂ ಕೂಡಿಕೊಂಡು ಮಂಗಳೂರ ಬಳಿ ಪಶ್ಚಿಮ ವಾಹಿನಿಯನ್ನು ಸೇರುತ್ತದೆ. ನದೈವ ಪ್ರಶಾಂತವಾಗಿ ಹರಿಯುವ ನೇತ್ರಾವತಿಯಲ್ಲಿ ಸ್ನಾನ ಮಾಡುವುದು ಶ್ರೀ ಕ್ಷೇತ್ರಕ್ಕಾಗಮಿಸುವ ಯಾತ್ರಿಕರಿಗೆ ಪರಮಪವಿತ್ರ ಕರ್ತವ್ಯ. ಈ ನದಿಯ ತೀರದಲ್ಲಿ ಸಾಲುಸಾಲಾಗಿ ಹಲವಾರು ಮಂಟಪಗಳಿವೆ. ಇವುಗಳಲ್ಲಿ ಪ್ರತಿಯೊಂದಕ್ಕೂ ಒಂದೊಂದು ಪೌರಾಣಿಕ ಹಿನ್ನೆಲೆಯಿದೆ. ಇವುಗಳಲ್ಲಿ ಪ್ರಮುಖವಾದ ಮಂಟಪಗಳು ಹನುಮಂದಳಿಕರ, ಸಂತೃಪ್ತಿಕರ. ಕ್ಷೇತ್ರ ದರ್ಶನಾಭಿಲಾಷೆಯಿಂದ ಬಂದಿರುವ ಭಕ್ತರು ನೇತ್ರಾವತಿಯ ಪುಣ್ಯ ಸಲಿಲಸ್ನಿಗ್ಧರಾಗದೆ ಮುಂದುವರಿಯುವುದಿಲ್ಲ.

ಇಲ್ಲಿಂದ ಸ್ವಾಮಿಸನ್ನಿಧಿಗೆ ಒಂದೂವರೆ ಮೈಲು ದೂರ. ಏರು ಮಾರ್ಗವಾದರೂ ವನ್ಯಶ್ರೀ ಮಧ್ಯೆ ನಡೆಯುವಾಗ ವಿಹಂಗಮ ಸಂಗೀತ ನದಿಯ ತಾಳಕ್ಕೆ ಸರಿಯಾಗಿ ಹೆಜ್ಜೆ ಯಿಡುತ್ತ ಮುಂದುವರಿಯುವಾಗ ಬೆಳ್ದಿಂಗಳಲ್ಲಿ ವಿಹರಿಸಿದ ಹೃದಯಂಗಮವೂನು ಭವ. ಬಗೆ ಗರಿಯೇರಿ ಸ್ವಾಮಿಯಡಿಪಾವಟಿಗೆಳತ್ತ ಅದೆಂದೋ ಧಾವಿಸಿರುತ್ತದೆ. ಇದನ್ನು ಪಂಚಭೂತಾತ್ಮಕ ಶರೀರ ಹಿಂಬಾಲಿಸಿ ಬರುತ್ತದೆ.

ಧರ್ಮದೇವತೆಗಳು ದರ್ಶನವಿತ್ತರು

ಶ್ರೀ ಕ್ಷೇತ್ರನಿರುವುದು ನೆಲ್ಯಾಡಿ ಬೀಡಿನೆ—ಕುದುರೆಯೇರಿದರು. ರಾಜ ಮರ್ಯಾದೆಯಿಂದ ನೆಲ್ಯಾಡಿ ಬೀಡಿಗೆ ಬಂದರು.

ಹೆಗ್ಗಡೆ ದಂಪತಿಗಳಿಂದ ಆದರೋಪಚಾರ ಪಡೆದರು. ಗಂಭೀರರಾಗಿಯೇ ತಮ್ಮ ವಾಸಕ್ಕೆಂದು ನೆಲ್ಯಾಡಿ ಬೀಡನ್ನು ಕೇಳಿದರು. ಒಡಂಬಟ್ಟ ಹೆಗ್ಗಡೆ ದಂಪತಿಗಳನ್ನು ಆಶೀರ್ವದಿಸಿ ಅದೃಶ್ಯರಾದರು. ಹೆಗ್ಗಡೆ ದಂಪತಿಗಳು ಆನಂದ ತುಂದಿಲರಾದರು. ದೈವ ದರ್ಶನ ಆನರಿಗಾಯಿತು; ಧರ್ಮಜ್ಞಾನ ದರ್ಶನ ಲಭ್ಯವಾಯಿತು. ತಮ್ಮ ಪದ್ಧತಿಯಂತೆ ಬಂಡಿನಲ್ಲಿ ತೂಗುಯ್ಯಾಲೆ ಕಟ್ಟಿದರು; ಮಂಚವಿಟ್ಟರು; ಸುಗಂಧ ಧೂಪ ದೀಪ ಹಚ್ಚಿದರು. ದೈವ ಸೇವಾತತ್ಪರರಾದರು. ಅದು ಪುಣ್ಯ ಭೂಮಿಯೆನಿಸಿತು; ಧರ್ಮ ಭಾವನೆ ಸದಾ ಹಸುರಾಗಿರತೊಡಗಿತು ಜನ–ಜನಾರ್ದನರ ಸೇವೆಗೆ ಆಗರವಾಗಿ ಬೆಳೆದು ಬಂತು.



ಶ್ರೀ ಮಂಜುನಾಥ ಸ್ವಾಮಿ

ಆ ಮೇಲೊಂದು ದಿನ ಆವೇ ಧರ್ಮದೇವತೆಗಳು ಹೆಗ್ಗಡೆ ದಂಪತಿಗಳಿಗೆ ಕನಸಿನಲ್ಲಿ ಕಾಣಿಸಿಕೊಂಡರು. ತಾವು ಧರ್ಮದೇವತೆಗಳೆಂದು ತಿಳಿಸಿದರು. ತಮಗೆ ಬೇರೆ ಬೇರೆ ಗುಡಿಗಳನ್ನು ಕಟ್ಟಿಸಿ ಕಾಲ ಕಾಲಕ್ಕೆ ಪೂಜಾದಿಗಳನ್ನು ನಡೆಸುತ್ತ ಬಂದರೆ, ತಮ್ಮ ದೂತನಾದ ಅಣ್ಣಪ್ಪನ ಮೂಲಕ ಸಕಲ ಕಾರ್ಯ ನಿರ್ವಹಣೆಯನ್ನು ಮಾಡುವೆವೆಂದು ಅಭಯ ನೀಡಿದರು. ಧರ್ಮದೇವತೆಗಳ ಅಪ್ಪಣೆಯಂತೆ, ಹೆಗ್ಗಡೆ ದಂಪತಿಗಳು ಕನ್ಯಾಕುಮಾರಿ, ಕುಮಾರ ಸ್ವಾಮಿ, ಕಳಕಾಯಿ ಮತ್ತು ಕಾಳರಾಹುಗಳೆಂಬ ಆ ದೈವಗಳಿಗೆ ಪ್ರತಿಪ್ರತ್ಯೇಕ ಗುಡಿಗಳನ್ನು ಕಟ್ಟಿಸಿದರು. ನಿಯಮನಿಷ್ಠರೂ ಸದಾಚಾರ ಸಂಪನ್ನರೂ ಆದ ಅರ್ಚಕರನ್ನು ಪೂಜಾದಿಗಳಿಗೆ ನೇಮಿಸಿದರು.

ಮಂಜುನಾಥ ಬಂದು ನೆಲೆನಿಂತನು

ಶ್ರೀ ಹೆಗ್ಗಡೆಯವರು ನಿಯಮಿತ ಕಾಲದಲ್ಲಿ ಉತ್ಸವ–ಪರ್ವ–ನಡಾವಳಿಗಳನ್ನು ನಡೆಸ ತೊಡಗಿದರು. ದಾನಧರ್ಮಗಳನ್ನು ನೂಡಲಾರಂಭಿಸ ಬಯಸಿದರು. ಇದಕ್ಕಾಗಿ ಬ್ರಾಹ್ಮಣರ ಅವಶ್ಯಕತೆ ಬಿತ್ತು. ಅವರ ನಲಹೆಯಂತೆ ದೇವರ ಮೂರ್ತಿಯೊಂವನ್ನು ಸ್ಥಾಪಿಸುವುದು ಅನಿವಾರ್ಯವಾಯ್ತು. ತನ್ನ ಬಯಕೆ ಈಡೇರದೆ ಹೋದುದರಿಂದ ಹೆಗ್ಗಡೆಯವರು ಅತೀವ ಚಿಂತಾಕ್ರಾಂತರಾದರು. ಇದನ್ನು ತಿಳಿದ ಧರ್ಮದೇವತೆಗಳು ತಮ್ಮ ದೂತ ಅಣ್ಣಪ್ಪನಿಗೆ ಅಪ್ಪಣೆ ನೀಡಿದರು. ಕಾಶಿಯಿಂದ ಕದಿರೆಗೊಂದು ಶಿವಲಿಂಗ ಆದೇ ವೇಳೆಗೆ ಬಂದಿತ್ತು. ಅಣ್ಣಪ್ಪನು ನೆಟ್ಟಗೆ ಕದಿರೆಗೆ ಹೋಗಿ ಅಲ್ಲಿನ ಶಿವಲಿಂಗವನ್ನು ಕುಡುಮಕ್ಕೆ ತಂದನು. ಹೆಗ್ಗಡೆ ದಂಪತಿಗಳಿಗೆ ಕಲ್ಪನಾತೀತ ಸಂತೋಷವಾಯ್ತು. ಅವರು ಆ ಲಿಂಗವನ್ನು ವಿಧಿವತ್ತು ಪ್ರತಿಷ್ಠಾಪಿಸಿ ಪೂರ್ಣ ಮನೋರಥರಾದರು.

ಶ್ರೀ ಮಂಜುನಾಥನೆಂಬ ಹೆಸರಿನಿಂದ ಈ ಲಿಂಗವು ಖ್ಯಾತನಾಮಾಯ್ತು. ಈ ದೇವಾಲಯದಲ್ಲಿ ಪೂಜೆ ಪುನಸ್ಕಾರಗಳೂ ಪರ್ವ—ಉತ್ಸವಗಳೂ ಆದಿನಿಂದಲೂ ನಿರಾತಂಕವಾಗಿ ನಡೆಯುತ್ತಲೇ ಬಂದಿವೆ. ಶ್ರೀ ಮಂಜುನಾಥನ ಖ್ಯಾತಿ ಉದ್ದಗಲಕ್ಕೆ ಹರಡಿದಂತೆ ಆತನ ಭಕ್ತರ ಸಂಖ್ಯೆ ಒಂದಕ್ಕೆ ಹತ್ತು ಹತ್ತಕ್ಕೆ ನೂರು, ನೂರಕ್ಕೆ ಸಾವಿರ ಪ್ರಮಾಣದಲ್ಲಿ ಹೆಚ್ಚಾಯಿತು. ಭಕ್ತಜನ ವತ್ಸಲನೂ ಅಭಯ ವರದನೂ ಆಗಿ ಭವರೋಗ ವೈದ್ಯನಾಗಿ ತನ್ನ ನಂಬಿದವರಿಗೆ ತನ್ನನ್ನು ತಾನೇ ತೆತ್ತುಕೊಂಡು ಬಂದಿದ್ದಾನೆ.

ಧರ್ಮ ದೇವತೆಗಳ ಆಣತಿಯಂತೆ ಶ್ರೀ ಕ್ಷೇತ್ರದ ಧರ್ಮಾಧಿಕಾರವು ಮಕ್ಕಳ ಕಟ್ಟಳೆಯಂತೆ ನಡೆದುಬರತೊಡಗಿತು. ಒಂಬೊನ್ಮೆ ಮಕ್ಕಳಿಲ್ಲದಿದ್ದಲ್ಲಿ ಅದೇ ಬೀಡಿನ ಮನೆತನಕ್ಕೆ ಸೇರಿದವರೊಬ್ಬರು ಅಧಿಕಾರ ಸ್ವೀಕರಿಸುವುದೂ ಕ್ರಮಾಗತವಾಯ್ತು. ●

ಭವರೋಗ ವೈದ್ಯನ ಪವಿತ್ರ ಆವಾಸ ಭೂಮಿಯಲ್ಲಿ-

ಸ್ಥಾನದೊಳಗಡೆ ಎರಡು ಪ್ರಾಕಾರಗಳನ್ನೆ ಒಳಗಿನ ಪ್ರಾಕಾರಕ್ಕೆ ಹೋಗಬಹುದು. ಹೊರಗಿನ ಪ್ರಾಕಾರದಲ್ಲಿ ಅನೇಕ ಅಂಗಡಿಗಳಿವೆ. ಅಲ್ಲಿ ಪೂಜಾ ಸಾಮಗ್ರಿಗಳು, ಹೂವು, ಹಣ್ಣು, ಕಾಯಿ, ಪಾನಕ, ಕಜ್ಜಾಯ ಮೊದಲಾದವುಗಳು ಮಾರಾಟಕ್ಕಿವೆ. ಇಲ್ಲಿ ಕೆಲವು ಹೋಟೆಲುಗಳೂ ಇವೆ. ಇಲ್ಲಿ ಕೆಲವು ಜನರು ಕುಳಿತು ಹರಟೆ ಹೊಡೆಯುತ್ತಿರುತ್ತಾರೆ. ಇಲ್ಲಿ ಕೆಲವು ಜನರು ಕುಳಿತು ಹರಟೆ ಹೊಡೆಯುತ್ತಿರುತ್ತಾರೆ. ಇಲ್ಲಿ ಕೆಲವು ಜನರು ಕುಳಿತು ಹರಟೆ ಹೊಡೆಯುತ್ತಿರುತ್ತಾರೆ.

ಪಂಚಾಮೃತಾಭಿಷೇಕ, ಪ್ಪೀರಾಭಿಷೇಕ, ತುಲಾಭಾರ ರತರುದ್ರಾಭಿಷೇಕ, ಮೂಲ ಕತೆ ತೀರ್ಥಾನ, ವಿಶೇಷಪೂಜ ಉತ್ಸವಗಳು ನಡೆಯಬೇಕಾಗಿದ್ದರೆ ಈ ಸಂಗತಿಯನ್ನು ಬೇಗನೇ ದೇಗುಲದ ಮಹೆಗಾರರಿಗೆ ತಿಳಿಸಬೇಕು. ಶಾಶ್ವತವಾಗಿ ಯಾವ ಪ್ರಾಮದರಾ ಸೇವೆ ನಡೆಯಬೇಕಾದಲ್ಲಿ ಹಣ್ಣಗಿಯವರನ್ನು ಮಾತಾಡಿಸಬೇಕು. ಶ್ರೀ ಕ್ಷೇತ್ರದ ನೆಲ್ಯಾಡಿಬೀದಿ ಮತ್ತು ಬದಿಸಡೆವಾಗಿವೆ ಆದುದರಿಂದಲೇ ದಿನದಿನವೂ ಹತ್ತಾರು ಬಸ್ಸು ತುಂಬ ಎಲ್ಲೆಲ್ಲಿಂದಲೋ ಯಾತ್ರಾರ್ಥಿ ಭಕ್ತಜನರು ಇಲ್ಲಿ ಬರುತ್ತಿರುತ್ತಾರೆ ಭವರೋಗದ ವೈದ್ಯನ ಕೃಪಾಲಾಭ ಪಡೆದು ಸಂತುಷ್ಟರಾಗಿ ಮರಳುತ್ತಾರೆ

●●

ಶ್ರೀ ಧರ್ಮಸ್ಥಳದ ಶಿಕ್ಷಣ ಸಂಸ್ಥೆಗಳು

ಶ್ರೀ ಕ್ಷೇತ್ರವು 'ವಿದ್ಯಾದಾನಂ ಮಹಾದಾನಂ' ಎಂಬುದನ್ನು ತಿಳಿದು ಮಲೆನಾಡಿನಲ್ಲಿಯೂ ಹಲವಾರು ಶಿಕ್ಷಣ ಸಂಸ್ಥೆಗಳೂ ಇನೆ ನಿಕಟ ಸಂಬಂಧವಿರಿಸಿದೆ ಉಜಿರೆಯ ಕರ್ನಾಟಕ ವಿದ್ಯಾಲಯ ಹೈಸ್ಕೂಲು, ಜನಾರ್ದನ ಬುನಾದಿ ಶಾಲೆ ನೊದಲಾದುವು ಕೆಲವು ದಶಕಗಳಿಂದಲೂ ಶ್ರೀಕ್ಷೇತ್ರದಲ್ಲೂ ಆಸುಪಾಸಿನಲ್ಲೂ ಶಿಕ್ಷಣ ಪ್ರಸಾರ ಕಾರ್ಯವನ್ನು ಸಫಲ ಸಲ್ಲಿಸುತ್ತ ಬಂದಿವೆ

ಇತ್ತೀಚೆಗೆ ಶ್ರೀ ಧರ್ಮಸ್ಥಳದಲ್ಲಿಯೇ ಮಂಜುನಾಥೇಶ್ವರ ಹೈಸ್ಕೂಲು ಸ್ಥಾಪನೆಯಾಗಿದೆ ಇಲ್ಲಿಯೇ ಶ್ರೀ ಮಂಜುನಾಥೇಶ್ವರ ಕಾಲೇಜು ಕೂಡ ನಿರ್ಮಾಣಗೊಂಡು ಜಿಲ್ಲೆಯ ತತ್ಸಮತ್ರನು ಕಾಲೇಜುಗಳ ಸಾಲಿನಲ್ಲಿ ತಲಚ್ಚವದಿಯಲ್ಲಿಗೆ ನಿಂತಿದೆ ನೇತ್ರಾವತಿ ಸ ತಾಪೆಸುನ್ನ ಹಾದು ಶ್ರೀ ಕ್ಷೇತ್ರಕ್ಕೆ ಹೊಗುವಾಗ ಪೂರ್ಗದ ಪಕ್ಕದಲ್ಲೇ ಕಾಲೇಜು ತಲೆಯೆತ್ತಿ ನಿಂತಿದೆ ಮಲೆನಾಡಿನಲ್ಲಿಯೂ ಉನ್ನತ ಶಿಕ್ಷಣ ಸೌಲಭ್ಯ ದೊರಕಿಸಿಕೊಡಬೇಕೆಂಬುದು ಹಿಂದಿನ ಧರ್ಮಾಧಿಕಾರಿಯಾಗಿದ್ದ ಶ್ರೀ ರತ್ನವರ್ಮ ಹೆಗ್ಗಡೆಯವರ ತಿಳಿಬಾಷೆಯಾಗಿತ್ತು ಇವರು ಆದಕ್ಕಾಗಿ ಒಪಳಸ್ಟ ಪ್ರಯತ್ನಿಸಿ ಕಾಲೇಜಿನ ಬೀಜ ಒತ್ತಿ ಪುಣ್ಯಸಂಪಾದರು

ಇಂದಿನ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ಈ ಶಿಕ್ಷಣಾಲಯದ ಎಳೆತು—ಕೆಡುಕುಗಳಲ್ಲಿ ಮಿತಿವಿರಿದ ತಸಕ್ತಿ ವಹಿಸಿ ಅವಶ್ಯ ನೀರು—ಗೊಬ್ಬರವರೆದು ಸಂಮೋಷಿಸಿಕೊಂಡು ಬಂದಿದ್ದಾರೆ ಸುಮಾರು ಹತ್ತುಲಕ್ಷ ರೂಪಾಯಿಯ ವಚ್ಚದಲ್ಲಿ ಕಾಲೇಜಿಗೊಂದು ತತ್ಕಾಲದುಸಿಕರೀತಿಯ ಸರ್ವಾಂಗ ಸುಂದರವಾದ ಸುಸಜ್ಜಿತವಾದ ಕಟ್ಟಡವೊಂದನ್ನವರು ಕಟ್ಟಿಸಿದ್ದಾರೆ ಉನ್ನತ ಅಧ್ಯಯನಕ್ಕೆ ಬೇಕಾಗಿರುವ ಸರ್ವಾನುಕೂಲತೆಗಳನ್ನೂ ಅವರು ಒದಗಿಸಿದ್ದಾರೆ

ಇಲ್ಲಿ ಸ್ಥಳೀಯ ವಿದ್ಯಾರ್ಥಿಗಳ ಸಂಖ್ಯೆ ಅತ್ಯಲ್ಪ ಬೇರೆಬೇರೆಡೆಯಿಂದ ಶಿಕ್ಷಣಾರ್ಥಿಗಳು ನೂರಾರು ಸಂಖ್ಯೆಯಲ್ಲಿ ಬರುತ್ತಾರೆ ಅವರಲ್ಲಿ ಎನಸ್ಯವಿದ್ದವರಿಗೆ ವಸತಿ— ಆಶನದ ವ್ಯವಸ್ಥೆಯೂ ಉದಾರ ತಳಹದಿಯ ಮೇಲೆ ನಡೆಯುತ್ತದೆ ಶ್ರೀ ಮಂಜುನಾಥ ಸ್ವಾಮಿಯ ದಿವ್ಯ ಸಾನ್ನಿಧ್ಯದಲ್ಲಿ ಧಾರ್ಮಿಕ ವಾತಾವರಣದಲ್ಲಿ ಲೌಕಿಕ ವಿದ್ಯೆಯನ್ನು ಅಳವಡಿಸಿ ಕೊಳ್ಳುತ್ತಿರುವ ಇಲ್ಲಿನ ವಿದ್ಯಾರ್ಥಿಗಳು ಧರ್ಮ ಮತ್ತು ಲೋಕ ತತ್ವಗಳನ್ನು ಜೀವನದಲ್ಲಿ ಸಮನ್ವಯ ಗೊಳಿಸುವಂತಾದರೆ, ಅವರು ದೇಶದ ಸತ್ಪ್ರಜೆಗಳಾಗುವುದರಲ್ಲಿ ಸಂದೇಹವೇ

ಈ ಬಗೆಯ ಉತ್ತಮ ತಲಬ್ಯ ಅವಕಾಶವನ್ನೊದಗಿಸಿಕೊಟ್ಟುದು ಶ್ರೀ ಹೆಗ್ಗಡೆಯವರ ದೂರದೃಷ್ಟಿ—ಧರ್ಮ ದೇವತೆ ಮತ್ತು ಶ್ರೀ ಸ್ವಾಮಿಯ ಅನುಗ್ರಹ ವೃಷ್ಟಿ ●



ಶ್ರೀಕ್ಷೇತ್ರ ಧರ್ಮಸ್ಥಳ



ಶ್ರೀ ಕುಮಾರ ಸ್ವಾಮಿಯ ಗುಡಿ

ಎಳೆಯ ಮಕ್ಕಳು ಕಜ್ಜಿ, ಕುರು, ಹುಣ್ಣುಗಳಿಂದ ಪೀಡಿತರು ಮೊದಲಾದವರನ್ನು ದೇವಾಲಯದ ಪಾಗಾಲುಗಳ ಬಳಿ ಪಹರೆಯನರು ತದಯುತ್ತಾರೆ ಅವರ ಮಾತನ್ನು ಮೀರಿ ನಡೆಯುವುದು ಸಂಸ್ಥಾಯವಲ್ಲ ಆಣ ಮಾತುಕತೆ ತೀರ್ಮಾನಗಳು ಇರುವವಾದರೆ ಆ ಸಂಗತಿಯನ್ನು ಮುಂದಾಗಿ ಹೆಗ್ಗಡೆಯವರಿಗೆ ಅಸಿದ್ದಿ ಅವಕ್ಕೆ ತಕ್ಕ ವಿರ್ವಾಡು ನಡೆಯುವುದು ಕಾಣಿಕೆ—ವ್ಯಾರ್ಧನೆ ಸಲ್ಲಿಸಲಿರುವವರು ಪೂಜೆಯ ನೇಳೆ ದೇಗುಲದ ಬಾಗಿಲಲ್ಲಿರುವ ಹರಿವಾಣದಲ್ಲಿ ಹರಕೆ—ಕಾಣಿಕೆ ಹಾಕಿ ತಮ್ಮ ಪ್ರಾರ್ಥನೆಯ ವಿಚಾರವನ್ನು ತಲ್ಲೇ ನಿಂತಿರುವ ಹೆಗ್ಗಡೆಯವರಿಗಾಗಲೀ ಅವರ ಅನುಮತಿಯಿಂದ ನಿಂತ ಪ್ರತಿನಿಧಿಗಾಗಲೀ ತಿಳಿಸಬೇಕು ಅವರಂದಂತೆ ಶ್ರದ್ಧೆಯಿಂದ ನಡೆದುಕೊಳ್ಳಬೇಕು

ಶ್ರೀ ಸ್ವಾಮಿಗೆ ಮೂಡಿಸುವ ಹಣ್ಣುಕಾಯಿಗಳನ್ನು ಅಲ್ಲೇ ದೇವಳದ ಹಣ್ಣುಕಾಯಿ ಅಂಗಡಿಯಲ್ಲಿ ಕೊಂಡುಕೊಳ್ಳಬೇಕೆಂಬುದು ಇಲ್ಲಿನ ಕ್ರಮ. ಪದ್ಧತಿ ಶುಚಿರ್ಭೂತರಾಗಿರುವ ಭಕ್ತರು ಹಣ್ಣುಕಾಯಿ ಹಿಡಿದುಕೊಂಡು ಪೂಜೆಯ ವೇಳೆಗೆ ಸರಿಯಾಗಿ ದೇಗುಲವನ್ನು ಹೊಗಬಹುದು. ದೇವ

ಧಾರ್ಮಿಕ ಲೌಕಿಕ ಸ್ಪಷ್ಟ

ಧರ್ಮಾಧಿಕಾರಿ ಪರಂಪರೆ

ಧರ್ಮಸ್ಥಳದ ದೇವಾಲಯಗಳ ಆಡಳಿತೆಯು ನೆಲ್ಯಾಡಿ ಬೀಡಿನ ಧರ್ಮದೇಪತೆಗಳಿಂದ ಅನುಗ್ರಹೀತರಾದ ಶ್ರೀ ಬರ್ಮಣ್ಣ ಹೆಗ್ಗಡೆಯವರ ಪರಂಪರೆಯವರಿಂದ ನಡೆದು ಬರುತ್ತದೆ. ಇದು ಅಳಿಯ ಸಂತಾನ ಕಟ್ಟಿನಿಂದ ನಡೆದು ಬಂದಿಲ್ಲ. ಧರ್ಮದೇವತೆಗಳ ಆದೇಶದಂತೆ ಮಕ್ಕಳ ಕಟ್ಟಿನಂತೆ ಮುಂದುವರಿಯುತ್ತಿದೆ. ಶ್ರೀ ಬರ್ಮಣ್ಣಹೆಗ್ಗಡೆಯವರಿಂದ ಆರಂಭವಾದ ಈ ಪೀಳಿಗೆಯಲ್ಲಿ ಇಂದಿನವರೆಗೆ ಇಪ್ಪತ್ತೊಂದು ತಲೆಮಾರು ನಡೆದಿದೆ. ಈ ಹೆಗ್ಗಡೆಯವರೆಲ್ಲರೂ ತಂತಮ್ಮ ಕಾಲದಲ್ಲಿ ಅತ್ಯಂತ ಪ್ರಗತಿಶೀಲ, ಧರ್ಮಭೀರು, ಲೋಕೋಪಕಾರಿಯೆಂದು ಹೆಸರು ಪಡೆದಿರುವರು. ಶ್ರೀ ಕ್ಷೇತ್ರದ ಆಡಳಿತೆಯನ್ನು ಅತ್ಯುತ್ತಮವಾಗಿ ನಡೆಸಿ, ಧರ್ಮದೇವತೆಗಳ ಮೂತುಗಳನ್ನು ಮಿರಾದೆ ಶ್ರೀ ಸ್ವಾಮಿಯ ಸಂಪೂರ್ಣ ಅನುಗ್ರಹಕ್ಕೆ ಪಾತ್ರರಾದವರು. ಹೆಗ್ಗಡೆ ಪರಂಪರೆ ಹೀಗಿದೆ–

ಬರ್ಮಣ್ಣ ಹೆಗ್ಗಡೆ.
ಪದ್ಮಯ್ಯ ಹೆಗ್ಗಡೆ.
ಒಂದನೆಯ ಚಂದಯ್ಯ ಹೆಗ್ಗಡೆ.
ದೇವರಾಜ ಹೆಗ್ಗಡೆ.
ಒಂದನೆಯ ಮಂಜಯ್ಯ ಹೆಗ್ಗಡೆ.
ಜಿನ್ನಪ್ಪ ಹೆಗ್ಗಡೆ.
ಇಮ್ಮಡಿ ಚಂದಯ್ಯ ಹೆಗ್ಗಡೆ.
ದೇವಪ್ಪರಾಜ ಹೆಗ್ಗಡೆ.
ಅನಂತಯ್ಯ ಹೆಗ್ಗಡೆ.
ವೃಷಭಯ್ಯ ಹೆಗ್ಗಡೆ.
ಗುಂಮಣ್ಣ ಹೆಗ್ಗಡೆ.
ವರ್ಧಯ್ಯ ಹೆಗ್ಗಡೆ.
ಮುಮ್ಮಡಿ ಚಂದಯ್ಯ ಹೆಗ್ಗಡೆ,
ಕುಮಾರಯ್ಯ ಹೆಗ್ಗಡೆ (೧೭೩೦)
ಸಾಲ್ಕಡಿ ಚಂದಯ್ಯ ಹೆಗ್ಗಡೆ.
(೧೭೩೦—೧೭೪೯)
ಇಮ್ಮಡಿ ಮಂಜಯ್ಯ ಹೆಗ್ಗಡೆ.
(೧೭೪೯-೧೭೭೩)
ಧರ್ಮಪಾಲ ಹೆಗ್ಗಡೆ. (೧೭೭೫-೯೬)
ಏದನೆಯ ಚಂದಯ್ಯ ಹೆಗ್ಗಡೆ.
(೧೭೯೭—೧೮೧೫)
ಮುಮ್ಮಡಿ ಮಂಜಯ್ಯ ಹೆಗ್ಗಡೆ.
(೧೮೧೫-೧೮೩೩)
ರತ್ನವರ್ಮ ಹೆಗ್ಗಡೆ. (೧೮೩೩–೧೮೬೮)
ವೀರೇಂದ್ರ ಹೆಗ್ಗಡೆ. (೧೮೬೮-)

ನೀತಿ—ಧರ್ಮ—ನ್ಯಾಯಗಳ ತ್ರಿವೇಣಿಯೆನಿಸಿ ಮೆರೆದು ಬಂದ ಈ ಹೆಗ್ಗಡೆ ಪರಂಪರೆಯವರು ಆರೇಳು ಶತಮಾನಗಳಿಂದಲೂ ಅವಿಚ್ಛಿನ್ನವಾಗಿ ನಡೆದು ಬಂದಿದ್ದಾರೆ. ಸಾಮಾಜಿಕ–ಸಾಮಯಿಕ ಪರಿಸ್ಥಿತಿಗಳನ್ನು ಧಾರ್ಮಿಕತೆಯೊಂದಿಗೆ ಮುಪ್ಪರಿಗೊಳಿಸಿ, ಧರ್ಮ–ಸಂಪ್ರದಾಯ–ಲೌಕಿಕತೆಗಳನ್ನು ಸಮನ್ವಯಗೊಳಿಸಿ ಮುಂದುವರಿದಿದ್ದಾರೆ. ಶ್ರೀ ಸ್ವಾಮಿಯು ಈ ಪರಂಪರೆಯ ಅನನ್ಯ ಸೇವಾ ಭಾವನೆಯಿಂದ ಸುಪ್ರಸನ್ನವಾಗಿ ತನ್ನ ನಂಬಿದವರಿಗೆ ತನ್ನನ್ನು ಒಪ್ಪಿಸಿ ಬಿಟ್ಟಿದ್ದಾನೆ. ಅವರ ಮೂಲಕ ಭಕ್ತ ಜನ ಸಂತೋಷಕನಾಗಿ, ಸಂರಕ್ಷಕನಾಗಿ ಅಭಯ–ವರದನಾಗಿ ಮೆರೆದಾಡುತ್ತಿದ್ದಾನೆ.

ಶ್ರೀ ರತ್ನವರ್ಮ ಹೆಗ್ಗಡೆ

ಇಂದಿನ ಧರ್ಮಾಧಿಕಾರಿಗಳ ತೀರ್ಥರೂಪರಾದ ಶ್ರೀ ರತ್ನವರ್ಮ ಹೆಗ್ಗಡೆಯವರು ಕ್ಷಿಪ್ರಪ್ರಗತಿಗೆ ಮತ್ತೊಂದು ಹೆಸರು. ಬರಿಯ ಹದಿಮೂರು ವರ್ಷಗಳ ಅಲ್ಪಕಾಲದಲ್ಲಿ ಇವರು ಶ್ರೀ ಕ್ಷೇತ್ರದ ಬಾಹ್ಯ ಸ್ವರೂಪವನ್ನೇ ಬದಲಾಯಿಸಿ ಬಿಟ್ಟರು. ಇಂದು ನಾವು ಕಾಣುವ ಶ್ರೀ ಕ್ಷೇತ್ರದ ಮೊಕ ಶಿಲ್ಪಿ ಇವರು. ಧರ್ಮ–ಸಮಾಜ ಶಿಕ್ಷಣಗಳಿಗೆ ಇವರು ನೀಡಿದ ಕಾಣಿಕೆ ಅವಿಸ್ಮರಣೀಯ. ಜನತೆಯೇ ಜನಾರ್ದನ, ಜನರಿರುವಲ್ಲಿ ಜನಾರ್ದನನೆಂಬುದನ್ನು ನಂಬಿ ಜನಾರ್ದನ ಸೇವೆಗೆಂದೇ ಬದ್ಧಕಂಕಣರಾದ ಧೀರೋದಾತ್ತ ನಾಯಕರು ಇವರು.

ಬೆಳ್ಳಿಯ ರಥದ ಕಾರ್ಯವನ್ನಿವರು ಸಂಪೂರ್ಣಗೊಳಿಸಿ ಶ್ರೀ ಸ್ವಾಮಿಗೆ ಅರ್ಪಿಸಿದರು. ವಸಂತ ಮಹಲನ್ನು ಪೂರ್ಣಮಾಡಿದರು. ಯಾತ್ರಿಕರ ಅನುಕೂಲಕ್ಕೆಂದು ದೊಡ್ಡ ದೊಡ್ಡ ಸರ್ವ ಸೌಕರ್ಯೋಪೇತ ಛತ್ರಗಳನ್ನು ಕಟ್ಟಿಸಿದರು. ದೇವಾಲಯದ ಆಸುಪಾಸುಗಳೂ ಪರಿಶುದ್ಧವಾಗಿರುವಂತೆ ನೋಡಿಕೊಂಡರು. ದೇಗುಲದ ಮಹಾದ್ವಾರ, ನೆಲ್ಯಾಡಿ ಬೀಡಿನ ಪುನಾರಚನೆ ಇತ್ಯಾದಿ ಇತ್ಯಾದಿ ಸದುಪಯೋಗಿ ಕಾರ್ಯಗಳನ್ನು

ಶ್ರೀ ಧರ್ಮಸ್ಥಳದ ಹಿಂದಿನ
ಧರ್ಮಾಧಿಕಾರಿ
ದಿ| ಡಿ. ರತ್ನವರ್ಮ ಹೆಗ್ಗಡೆ

ಶ್ರೀ ರತ್ನವರ್ಮ ಹೆಗ್ಗಡೆಯವರು ಮಾಡಿದರು; ಶ್ರೀ ಸ್ವಾಮಿಯ ಸನ್ನಿಧಿಯಲ್ಲಿ ಉನ್ನತ ಶಿಕ್ಷಣ ನೀಡುವ ಕಾಲೇಜನ್ನು ಆರಂಭ ಮಾಡಿದ ಶ್ರೇಯಸ್ಸು ಇವರಿಗೆ. ಬಾಹುಬಲಿ ಮೂರ್ತಿಯೊಂದನ್ನು ಶ್ರೀಕ್ಷೇತ್ರದಲ್ಲಿ ಸ್ಥಾಪಿಸುವ ಸಂಕಲ್ಪ ಮಾಡಿದವರೂ ಇವರೇ. ಬಹುಮುಖಿ ಸೇವೆಗೆಂದು ಸಿದ್ಧರಾಗಿದ್ದ ಶ್ರೀಯುತರನ್ನು ಕಾರ್ಯ ಸಾಧನೆಯ ಆ ಕೀರ್ತಿ ಮುಂದಿನವರಿಗೂ ಉಳಿಯಲಿ ಎಂದು ಅಕಾಲದಲ್ಲೇ ವಿಧಾತನು ತನ್ನ ರತ್ನಗರ್ಭದಲ್ಲಿ ಸಮಾವೇಶಗೊಳಿಸಿಕೊಂಡನು.

ಶ್ರೀ ವೀರೇಂದ್ರ ಹೆಗ್ಗಡೆ

ಈಗಿನ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ತಾರುಣ್ಯದ ಹೊಸ್ತಿಲಲ್ಲೇ ಗುರುತರ ಹೊಣೆಗಾರಿಕೆಯನ್ನು ಹೊತ್ತುಕೊಂಡಿದ್ದಾರೆ. ಇದು ಇತರರಿಗೆ ಭಾರವೆನಿಸಬಹುದಾದರೂ ಹೆಗ್ಗಡೆ ಪರಂಪರೆಗೆ ಭಾರವಲ್ಲ. ಶ್ರೀ ಸ್ವಾಮಿ ಅಂತಹವರ ಮೇಲೆ ವಿಶೇಷ ಕೃಪೆದೋರಿ ತನ್ನ ಇಷ್ಟಾರ್ಥವನ್ನು ಸಾಧಿಸಿಕೊಳ್ಳುತ್ತಾನೆ. ವಿದ್ಯಾವಿನಯ ಸಂಪನ್ನರಾದ ಶ್ರೀ ವೀರೇಂದ್ರ ಹೆಗ್ಗಡೆಯವರು ತಮ್ಮ ತೀರ್ಥರೂಪರು ಆರಂಭಿಸಿದ ಹತ್ತಾರು ಲೋಕಹಿತ ಯೋಜನೆಗಳನ್ನು ಸಂಪೂರ್ಣಗೊಳಿಸ ಹೊರಟಿದ್ದಾರೆ. ಕಾಲೇಜಿನ ಕಟ್ಟಡವನ್ನು ಸುಮಾರು ೧೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಿದ್ದಾರೆ. ಬಾಹುಬಲಿ ಮೂರ್ತಿಯ ನಿರ್ಮಾಣಕಾರ್ಯ ಮುಕ್ತಾಯಗೊಳ್ಳುತ್ತಿದ್ದು, ಅದರ ಸ್ಥಾಪನೆಗೆ ತಕ್ಕ ಸಿದ್ಧತೆ ಈಗ ನಡೆಯುತ್ತಿದೆ. ಮೂರ್ತಿಯನ್ನು ತರುವ ಸರ್ವತದಂತಹ ಸಮಸ್ಯೆ ಈಗ ಬಗೆಹರಿದಂತಾಗಿ ಸದ್ಯವೇ ವೈಭವೋಪೇತ ಪ್ರತಿಷ್ಠೆ ನಡೆಯುವ ನಿರೀಕ್ಷೆಯಿದೆ.

ಶ್ರೀ ವೀರೇಂದ್ರರ ನಯ–ವಿನಯ ಅನ್ಯಾದೃಶವಾದದ್ದು. ಕಲೆ–ಸಂಸ್ಕೃತಿ–ಧರ್ಮ ಜನತೆಯ ಮೇಲೆ ಅವರಿಗೆ ಅಪಾರ ಪ್ರೇಮ. ಶ್ರೀ ಸ್ವಾಮಿ ಸನ್ನಿಧಿಯಲ್ಲಿ ೧೯೩೩ರಿಂದಲೂ ಅವಿಚ್ಛಿನ್ನವಾಗಿ ನಡೆದು ಬರುತ್ತಿರುವ ಧರ್ಮ ಸಾಹಿತ್ಯ ಸಮ್ಮೇಳನಗಳನ್ನು ಅವರು ಮತ್ತಷ್ಟು ಉಪಯುಕ್ತವಾಗಿ ನಡೆಸುತ್ತಿದ್ದಾರೆ. ಮೊನ್ನೆ ಮೊನ್ನೆ ಕಾರ್ಕಳದಲ್ಲಿ ನಡೆದ ಜಿಲ್ಲಾ ಮಟ್ಟದ ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಅದರ ಯಶಸ್ಸಿಗೆಂದು ಶ್ರಿಕರಣ ಪೂರ್ವಕ ದುಡಿದ ಮಹಾ ವ್ಯಕ್ತಿಯವರು.

ಪ್ರಾಯದಲ್ಲಿ ಯುವಕರಾಗಿದ್ದರೂ ಶ್ರೀ ಸ್ವಾಮಿಯು ಅವರಲ್ಲಿ ವಿವೇಕ ವಿವೇಚನೆ ವಿನಯ– ವಿರಾಮ ಹೀನತೆ, ವಿಕಾಸ ಶೀಲತೆಗಳನ್ನು ತುಂಬಿದ್ದಾನೆ. ಆದುದರಿಂದಲೇ ಅವರು ದೇವಾಲಯದ ಧಾರ್ಮಿಕ ಕಾರ್ಯಗಳನ್ನೂ ಕ್ಷೇತ್ರದ ಲೌಕಿಕ ಕಾರ್ಯಕಲಾಪಗಳನ್ನೂ ಸಮನ್ವಯಗೊಳಿಸುತ್ತ ಲೋಕೋಪಕಾರ ಕೃತಿ –ಸಾಧನೆಗಳಲ್ಲಿ ನಿರತರಾಗಿದ್ದಾರೆ; ಯಶಗಳಿಸುತ್ತಿದ್ದಾರೆ. ಶ್ರೀ ಸ್ವಾಮಿಯ ಸುಭದ್ರ ಸುರಕ್ಷೆ ಅವರ ಮೇಲಿದೆ; ಅವರಿಂದ ಶ್ರೀ ಸ್ವಾಮಿ ಶರದಶ್ಶತ ಕಾಲ ಸೇವೆ ಮಾಡಿಸಿಕೊಳ್ಳಲಿ.

●●

ಉಡುಪಿಯ ಅಷ್ಟಮಠಗಳಲ್ಲೊಂದಾದ ಶ್ರೀ ಸೋದೆ ಮಠದ ಇತಿಹಾಸ ನಿರ್ಮಾತ ಪೀಠಾಧಿಪತಿಗಳಾದ ಶ್ರೀ ವಾದಿರಾಜ ಯತಿಗಳು ತುಡುಮದ ಧರ್ಮದಾನಗಳನ್ನು ಮೆಚ್ಚಿ ಪ್ರಶಂಸಿಸಿ ಅದರ ಹೆಸರನ್ನು ಧರ್ಮಸ್ಥಳವೆಂದು ಸಂಸ್ಕೃತೀಕರಿಸಿದರೆಂದು ಹೇಳಲಾಗುತ್ತದೆ.

ಪರಮ ಗಂಗೆಯ ನಡದಿ
ಬಾವಿ ತೋಡುವೆನೇಕೆ?
ಕಮಲರಸ ಸವಿದ ಕೆರುದುಂಬಿ
ಬೇಲ ಹಣ್ಣಿಗೆ ಸೋಲ್ವುದುಂಟೆ?
ಕಾಮಧೇನುವ ತೊರೆದು
ಆಡ ಕರೆಯುವರುಂಟೆ?
ಶ್ರೀ ಮಂಜುನಾಥನ
ಕರುಣವೊಂದಿರಲು
ನಂಜೆಲ್ಲ ಮಂಜಾಗಿ ಕರಗಿಹೋಗದೆ?

ಧರ್ಮಸ್ಥಳ ಲಕ್ಷದೀಪೋತ್ಸವ ಸರ್ವಧರ್ಮ–ಸಾಹಿತ್ಯ ಸಮ್ಮೇಳನ

ಧರ್ಮಸ್ಥಳ ಲಕ್ಷದೀಪೋತ್ಸವವು ಇದೇ ತಾ. 13ರಿಂದ 17ರವರೆಗೆ ಜರಗುವುದು. ತಾ. 16ರಂದು ಸರ್ವಧರ್ಮ ಸಮ್ಮೇಳನ ತಾ. 17ರಂದು ಸಾಹಿತ್ಯ ಸಮ್ಮೇಳನಗಳೂ ಜರಗುವವು.

ನಾಡಿನ ಖ್ಯಾತ ವಿದ್ವಾಂಸರಿಂದ ಸಂಗೀತ, ನೃತ್ಯ, ನಾಟಕ, ವಾದ್ಯಗೋಷ್ಠಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.



ಶ್ರೀ ಚಂದ್ರನಾಥ ಸ್ವಾಮಿಯ ಬಸದಿ

ನ್ನು ಬದಿಗೆ ಸರಿಸದಿರಲಾರದು ಹಾಗಿರುವ ದರಿಂದ ಮುಳುಗುತ್ತಿರುವ ದೋಣಿಯಲ್ಲಿರುವದಕ್ಕಿಂತ ಹಾಯೂದ್ ಹಡಗನ್ನು ಪಡುಕುವದೇ ಬುದ್ಧಿವಂತರ ಲಕ್ಷಣ ಇದೆ. ಇಂದಿರಾಜೀ ಅವರನ್ನು ಸ್ವಾಗತಿಸುತ್ತಿದ್ದಾರೆ ರೋಗಿ ಬಯಸಿಕೊಂಡಿರುವದೇ ಸಿಕ್ಕುತ್ತಿರುವಾಗ! ಈಗಿನ ಪರಿಸ್ಥಿತಿಯಲ್ಲಿ ಐದು ವರ್ಷಕ್ಕೆ ಲೋಕ ಹಾಗೂ ವಿಧಾನ ಸಭೆಗೆ ಚುನಾವಣೆ ಜಿಲ್ಲಾ ರಾಜ್ಯಸಭೆಗಾಗಿ ರಾಷ್ಟ್ರಾಂತರ ಮಾಡಬೇಕಾಗುತ್ತದೆ ಆಗ ಅವರ ದೃಷ್ಟಿಯಲ್ಲಿ ದುರಾದೃಷ್ಟವಶಾತ್, ಇಂದಿರಾ ಕಾಂಗ್ರೆಸ್ಸಿನ ಸದಸ್ಯರಾರೂ ವಿಧಾನ ಸಭೆಯಲ್ಲಿಲ್ಲ ಹಳೆಯ ಕಾಂಗ್ರೆಸ್ಸಿನ ಕೆಲವು ಸದಸ್ಯರು ಹೊಸ ಕಾಂಗ್ರೆಸ್ಸಿಗರಾಗಿದ್ದಾರೆ ಆ ಸಂಖ್ಯಾ ಬಲದಿಂದ ರಾಜ್ಯ ಸಭೆಯ ಸ್ಥಾನಗಿಟ್ಟಿಸಿಕೊಳ್ಳುವಂತಿಲ್ಲ ಆದಕ್ಕ ದ್ರಾಮು ಕಳ್ಳಗಮಿನ ದಯೆ-ಕರುಣೆ ಒತ್ಯಗತ್ಯ ಇದೇ ರೀತಿ ಮುಂದಿನ ವರ್ಷ ನಗರ ಸಭಾ ಚುನಾವಣೆ ಇದಕ್ಕೆ ಯೂರೋಂದಿಗೆ ಸೇರಿದಲ್ಲಿ ಹೆಚ್ಚು ಪ್ರಯೋಜನವಾದೀತು ಮುಸ್ಲಿಂ ಲೀಗು ಅದನ್ನು ಆಲೋಚಿಸುತ್ತಿದೆ ಅದಕ್ಕಾಗಿ ಈಗಲೇ ಆಡಿ ಪಂಚಾಂಗವನ್ನು ಹಾಕುತ್ತಿದೆ

ಪಾನ ಪ್ರತಿಬಂಧಕಾಜ್ಞೆಯನ್ನು ಬದಿಗೆ ಸರಿಸಿದಾಗ ದ್ರಾಮು ಕ ತನ್ನಬಳಿ ಸಮಾಲೋಚನೆ ನಡೆಸಿಲ್ಲವೆಂಬುದು ಮುಸ್ಲಿಂಲೀಗಿನ ಮುಸಿಸಿಗೆ ಕಾರಣ ಈ ಹಿಂದೆ ಆದ್ಯಾವಾಗ ತನ್ನ ಮಿತ್ರಪಕ್ಷದವರ ಬಳಿವಿಚಾರಿಸಿ ತೀರ್ಮಾನಕ್ಕೆ ತಾವು ಬಂದಿದ್ದೇವೆಂದು ದ್ರಾಮು ಕಳ್ಳಗಮಿನವರು ತೇಳುತ್ತಿದ್ದಾರೆ ಒಪ್ಪಂದ ನಡೆಸಿರುವದು ಚುನಾವಣೆಯಲ್ಲಿ ಹೊಂದಾಣಿಕೆಗಾಗಿ ಸ್ಥಾನಗಳಿಗೆ ಮಾತ್ರ, ಅಧಿಕಾರ ಅಂಗಣಕ್ಕಾಗಿ ಅಲ್ಲವೆಂಬುದು ದ್ರಾಮು ಕಳ್ಳಗಮಿನ ಅಭಿಪ್ರಾಯ ಇದ್ದರೂ ಮುಸ್ಲಿಂಲೀಗು ಇದನ್ನೇ ದೊಡ್ಡದನ್ನಾಗಿ ಮಾಡುತ್ತಿದೆ

ದ್ರಾಮು ಕಳ್ಳಗನು ನ್ನು ಪಟ್ಟಕ್ಕೇರಿಸಿದವರು ತಾನೇ ತಮಗೆ ಬೇಡವೆನಿಸಿದಾಗ ತನ್ನನ್ನು ಕೆಳಕ್ಕೆಳಿಸುವವರೂ ತಾನೇ ಅನ್ನುವದು ಮುಸ್ಲಿಂಲೀಗಿನ ಮಾತು ಹಾಗಿರುವಾಗ ದ್ರಾಮು ಕ ಧುರೀಣರು ತಮ್ಮ ಮನನೋಯುವಂತಹ ಮಾತುಗಳನ್ನು ತಾವು ಸಹಿಸಿಕೊಳ್ಳಲಾರರೆಂದು ಲೀಗಿನವರು ರಾಜಾರೋಷವಾಗಿ ಹೇಳುತ್ತಿದ್ದಾರೆ ಮುಸ್ಲಿಂ ಲೀಗಿನ ತಮಿಳ್ನಾಡು ಪಕ್ಷಕಾರ್ಯದರ್ಶಿಯು ದ್ರಾಮು ಕಳ್ಳಗಮಿಗೆ ಎಚ್ಚರಿಕೆಯನ್ನಿತ್ತಿರುವರು

ಅದನ್ನು ಕೇಳಿದ ಕರುಣಾನಿಧಿ ಕಿಡಿಕಿಡಿಯಾದರು ಮಂತ್ರಿ ನಟರಾಜನ್‌ರವರು ನರ್ಕಿಸಲಾರಂಭಿಸಿದರು ಸಂಯುಕ್ತರಂಗದಿಂದ ಮುಸ್ಲಿಂಲೀಗಿಗೆ ಅರ್ದಚಂದ್ರಪ್ರಯೋಗ ಮಾಡುವ ಮನಸ್ಸು ದ್ರಾಮು ಕಳ್ಳಗಮಿಗೆ ಇರುವದಿಲ್ಲ ಅದೇ ಆಗಿ ಹೊರ ಹೋಗಲು ಇಚ್ಛಿಸುವದಾದರೆ ದ್ರಾಮು ಕ ಅಡ್ಡಬರುವದಿಲ್ಲ ಅದಕ್ಕಾಗಿ ದ್ರಾಮು ಕ ದುಃಖಿಸುವದೂ ಇಲ್ಲ ಇದರಿಂದ ಮುಸ್ಲಿಂಲೀಗಿಗೆನೇ ನಷ್ಟ

ಇದೇ ರೀತಿಯ ಸೂತನನ್ನು ಹಿಂದೆ ದ್ರಾಮು ಕ ಸ್ವತಂತ್ರ ಪಾರ್ಟಿಗೂ ಹೇಳಿತ್ತು ಸರಿಯೂದ ಸಮಯ ಸಿಕ್ಕಿದಾಗ ಸ್ವತಂತ್ರ ಪಾರ್ಟಿಯು ತಾರೆಸುನ್ನು ಪರದೆಯೊಳಗೆ ಅದು ದಬ್ಬಿ ಬಿಟ್ಟಿತು ಈಗ ಮುಸ್ಲಿಂಲೀಗಿನ ಅರ್ದಚಂದ್ರನ ಸರದಿ ಸ್ವತಂತ್ರ ಪಾರ್ಟಿ ಸಿಡಿಮದ್ದೋಗುವ ಮಾತು ವಿಧಾನ ಸಭೆಯಲ್ಲಿ ಬಂದಾಗ ತಲೆ ಹೇಗೆ ಆಡುತ್ತದೆಂಬುದು ಮುಂದಿನ ಬಾಲ ಹೇಗೆ ಆಡುತ್ತದೆಂಬುದು ಮುಂದಿನಲ್ಲವೆಂದಿದ್ದವರು ಲೀಗಿನವರು ಸುಮ್ಮ ಜೇಕಾದರೂ ಹೇಳಲಿ ಇನ್ಯಾಯಿಲ್ ಹೇಳುವದೇ ನಮಗ ಮುಖ್ಯವೆಂದರು

ಈಗ ಇನ್ಯಾಯಿಲರು ಬಾಯಿ ತೆರೆಯುವೇಕಾಗಿ ಬಂದಿರುತ್ತದೆ ಎನ್ನಲಾದಿರುವ ಮಾತುಗಳು ಮನನೀಯವಾಗುತಹವೇ ಇವೆ 'ಒಕ್ಕಟ್ಟಿನ ಗಡಿಗೆ ತಂಗಾಳಿ ಒಡೆದು ಹೋಗಿರುತ್ತದೆ ಎಂದನ್ನು ಸುಸ್ಲೀಗು ಒಡೆಯುವ ಜಗತ್ತ ಇರುವದಿಲ್ಲ ಒಮ್ಮೆ ಗಡಿಗೆ ಒಡೆದು ಹೋಯಿತೆಂದರೆ ಅದು ಒಡೆದು ಹೋದಂತೆಯೇ ಸರಿ ದ್ರಾಮು ಕಳ್ಳಗಮಿನವರಿಗೆ ಪ್ರಗ ಬಲ ಬಂದಿರುವ ಕಾರಣ, ಅದರ ಅಹಂಕಾರದಿಂದ ಅವರು ಅನುಚಿತ ರಿತಿಯಲ್ಲಿ ವರ್ತಿಸುತ್ತಿದ್ದಾರೆ ತಮ್ಮ ವಿಜಯಕ್ಕೆ ಮುಸ್ಲಿಂಲೀಗು ಕಾರಣ ವೆಂಬುದನ್ನು ಪರಿತು ಪಟ್ಟ ತನ್ನುನು ಕೂಡಾ ಲೀಗಿನ ಸಂಬಂಧಗಳು ಕುರಿತು ಅಲ್ಪ ರೀತಿಯಲ್ಲಿ ತಡುತ್ತಿದ್ದಾರೆ ಮುತ್ತ ರಾಜಕೀಯ ಸಂಬಂಧಗಳು ದ್ರಾಮು ಕಳ್ಳಗಮಿಗೆ ಪ ನಸ್ಪತಿಬಂಧಕಾಜ್ಞೆಯನ್ನು ಒದಿಗೆ ಸರಿಸುವಮ ತಸ್ಪೆಂದು ಹೇಳುತ್ತಿದ್ದರೂ ಜೊತೆಸರ್ಕ್ಷಗಳ ಒಳ ವಿಚಾರವಿನಿಮಯ ನಡೆಸದೆನೇ ಆ ತೀರ್ಮಾನಕ್ಕೆ ಅವರು ಬಂದಿರಾರೆಂದು ಹೇಳಿದ ಇನ್ಯಾಯಿಲರು ದ್ರಾಮು ಕ ದುಡುಕುತ್ತಿದೆ ಮುಸ್ಲಿಂಲೀಗು ಮುನಿದಿದೆಂಬುದನ್ನು ತೀರಿಯ ಪಡಿಸಿರುವರು

ದ್ರಾಮು ಕ ಕೃತಘ್ನೆ ವಕ್ಷ ಇದು ಇನ್ನಾ ಇನೇರಿತಿ ವರ್ತಿಸಿದೆಲ್ಲಿ ವಿಚ್ಛೇದನ ಕೈ ತಲೆಯಿಗೆ ತಾವು ಮುಂಬಾಗ ಬೇಕಾದೀತೆಂದು ಲೀಗಿನ ರಾಜ್ಯಸಭಾ ಸದಸ್ಯರು ಎಚ್ಚರಿಕೆಯನ್ನಿತ್ತಿರುವರು

ದ್ರಾಮು ಕ ದುರೀಣರೂ ಮುಸ್ಲಿಂಲೀಗಿನ ಮುಂಬಾಳುಗಳೂ ನಮಂಬತ ಹದಿನಾಲ್ಕನೆಯ ತಾರೀಕಿನ್ನೇ ಎದುರು ಸೊಡತ್ತಿದ್ದಾರೆ ಈ ಮುಳ್ಳಿನ ದಿನಾಚರಣೆ ಹೇಗೆ ಕಾರ್ಯಗೊಳ್ಳುತ್ತದೊ! ಸಂಧಿತ ಜವಹರಲಾಲ ನೆಹ್ರೂರವರಿಗೂ ಈ ಮೈತ್ರಿಗೂ ಏನೂ ಸಂಬಂಧವೋ!

—ಶ್ರೀ ಎನರಂಕರ

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O S No 327/69

ಪಾರ್ವತಿ ಬ್ಯಾ —ವಾದಿಳು

ಪು ತ್ತು

ಜಂಪ್ರ ನ್ಯಾಕ ಕೂಡ — ಪ್ರತಿವಾದಿರು

ಇವರಿಬ್ಬರಿಗೆ

ಸಪ್ಲಿಕೆಂಟಿಲ್ 1ನೇ ಪ್ರತಿವಾದಿ ಜೇಮ್ಸ್ ಡ್ರೆ ನ್ಯಾಕ, ಬಾಬ ನಾಯ್ಕರ ಮಗ, ಉಡ್ಪಿ ತಾಲ್ಲೂ ಶಿರ್ವ ಗ್ರಾಮದ ಸೋಜಾರು ಹೊಸಮನೆಯಲ್ಲಿರುವವರು ಇವರಿಗೆ ತಮ ಮೂಲಕ ತಿಳಿಯಪಡಿಸುವದೇನೆಂದರೆ:—

ವಾದಿರು ಅರನಾರ್ಥ ಕೇಳಿ ವಾಕ್ಷು ಮಾಡಿದ ಮೇಲಿನ ಪಾಣಿಯ ತಾ 27-11-71ಕ್ಕೆ ಇಸ್ಮು ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ಉವಾಪರಿಸುವುದಿದ್ದರೆ ಸದ್ರಿ ತಾರೀಕು 27-11-71ಕ್ಕೆ ಬೆಳಿಗ್ಗೆ 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದ್ದು.

Sd/- Y C S Hegde

Advocate for Plaintiff

ಉಡ್ಪಿ, ತಾ. 4-11-71

ವಿಜ್ಞಾನ ವಿಸ್ಮಯ

ಸದ್ದು—ಸಪ್ಪಳಗಳಿಂದ ರಕ್ಷಣೆ

ಕೈಗಾರಿಕೆ ಮೊದಲಾದೆಡೆಗಳಲ್ಲಿ ಸದ್ದು ಸಪ್ಪಳಗಳನ್ನು ನಿಯಂತ್ರಿಸುವುದಕ್ಕೆ ಗಂಭೀರ ರೀತಿಯಲ್ಲಿ ಗಮನ ನೀಡಲಾಗುತ್ತಿದೆ ಯಾಕೆಂದರೆ ಸದ್ದು—ಸಪ್ಪಳಗಳು ಮಾನವ ಶರೀರಾಂಗದ ಮೇಲೆ ಬಹು ಕೆಟ್ಟ ಪರಿಣಾಮಗಳನ್ನುಂಟುಮಾಡುತ್ತಿವೆ. ಶ್ರವಣ ಶಕ್ತಿಯನ್ನು ನೂತ್ರವೇ ಇದು ಅಸ್ತವ್ಯಸ್ತಗೊಳಿಸುವುದಿಲ್ಲ ಅದರೆ ಹೃನ್ನಾಳ ಮತ್ತು ನರಮಂಡಲ ವ್ಯವಸ್ಥೆಗಳನ್ನೂ ಬಾಧಿಸುತ್ತದೆ ಕೃತ ಕೆಂಪನದ ಸದ್ದು—ಶ್ರುತಿ ನೆಲುಂಡಿಗೂ 1000ಕ್ಕೂ ಹೆಚ್ಚು ತರಂಗ ವೃತ್ತಗಳು— ಎಬ್ಬಿಸುತ್ತಾದಿಸುವ ಶಾರೀರಿಕ ಮತ್ತು ಚೈತಿಕ ಪರಿಣಾಮಗಳು ವಿಶೇಷ ಪ್ರಾಧಿಕಾರವಾಗಿವೆಯೆಂದು ಸಂಶೋಧನೆಗಳಿಂದ ಕಂಡುಬಂದಿವೆ

ತೀವ್ರ ರೀತಿಯ ಸದ್ದಿಗೆ ವದ್ದಲದ ಸ್ಥಿತಿಗಳಲ್ಲಿ ಕಲಸಮಾಡುತ್ತಿರುವವರ ಜನರಲ್ಲಿ ರಕ್ತದಾಪದ ಮತ್ತು ಹೃದಯ ಸೃಜಿಗಳ ವ್ಯಾಧಿಯ ಪ್ರಸಂಗಗಳು ಸಾಧಾರಣ ಸ್ಥಿತಿಗತಿಯವ್ಯಕ್ತಿಯಗಿಂತ ಹಚ್ಚಾಗಿರುವುದು ಇತ್ತೀಚೆಗೆ ಕಂಡ ಬಂದಿದೆ ಈಲ್ಲಿದೆ ಸದ್ದು—ಸಪ್ಪಳಗಳಿಂದ ಚಿತ್ತೈಕಾಗ್ರತೆ ಸಾಮರ್ಥ್ಯವು ದುರ್ಬಲಗೊಳ್ಳುತ್ತದೆ. ಬಳಲಿಕೆಯು ಹೆಚ್ಚುತ್ತದೆ ಹೀಗೆ ಶ್ರಮಿಕ ಉತ್ಪಾದನಾ ಕ್ಷಮತೆ ಮೇಲೆ ಅಹಿತ ಪರಿಣಾಮ ಉಂಟಾಗುತ್ತದೆ

ಶ್ರಮಿಕ ಸಂರಕ್ಷಣೆ, ವೃತ್ತಿ ವ್ಯಾಧಿಗಳ, ವಿಶೇಷವಾಗಿ ಸದ್ದು ಗದ್ದಲಿನಿಂದುಂಟಾದ ವ್ಯಾಧಿಗಳ ನಿರೋಧವು ಪ್ರತಿರೋಧಕ ಔಷಧಗಳ ಮುಖ್ಯ ಕಾರ್ಯವಾಗಿದೆ. ಇನ್ನು ಪ್ರತಿಯಂದಕ ಕ್ರಮಗಳ ಮುಖ್ಯ ಉದ್ದೇಶವು ಸಹನೀಯ ಮಟ್ಟಕ್ಕೆ ಸದ್ದುಸಪ್ಪಳಗಳನ್ನು ನಿಗ್ರಹಿಸುವುದಾಗಿದೆ ಸಂರಕ್ಷಣೆಯ ಬೇರೆ ಬೇರೆ ಸಾಧನಗಳೂ ಕೆಲವಿನೆ ಅವುಗಳಲ್ಲಿ ಸೌಂಡ್ ಇನ್ಸುಲೇಟೆಡ್ ಬೂತ್‌ಗಳು, ಸದ್ದು ನಿರ್ವಾಹಕ ಪ್ಯಾಡುಗಳು, ಪ್ಲಗ್ಗುಗಳು ಬುರಪ್‌ಗಳು ಅಧವಾ ಹತ್ತಿಯಿಂದ ತಯಾರಿಸಿದ ವಿಶಿಷ್ಟ ಮೆತ್ತೆ ಮೊದಲಾದುವುಗಳನ್ನು ಇಲ್ಲಿ ಹೇಳಬಹುದು

ಸೋವಿಯೆತ್ ವಿಜ್ಞಾನಗಳ ಒಕಾಡೆಮಿಯ ಶ್ರಮಿಕ ಆರೋಗ್ಯ ಸ್ಥೈರ್ಯ ಮತ್ತು ವೃತ್ತಿ ರೋಗಗಳ ಸೀರವ ಸದ್ದು ಹಾಗೂ ಕಂಪನ ಪ್ರಯೋಗ ಶಾಲೆಯಲ್ಲಿ ಕಾರ್ಯನಿರತರಾಗಿರುವ ಡಾಕ್ಟರರು ಕಾರ್ಪೋರೇಷನ್ ಶಾರೀರಕ—ರಾಸಾಯನಿಕ ಸೀರವೆದ ಸಂಶೋಧಕರ ಸಹಕಾರದೊಡನೆ ಪರಿಣಾಮಕಾರಿಯೂದಂಥ ಸದ್ದು ನಿಗ್ರಾಹಕ ಪ್ಲಗ್ಗು (ಬಿರಡೆ)ಗಳನ್ನು ವಿನ್ಯಾಸಗೊಳಿಸಿದ್ದಾರೆ ಔದ್ಯೋಗಿಕ ಸ್ವಾವರಗಳಲ್ಲಿ ಎಸದ್ದುಗದ್ದಲಿನಿಂದ ಶ್ರವಣ ಇಂದ್ರಿಯವನ್ನು ರಕ್ಷಿಸುವುದೇ ಇವುಗಳ ಮುಖ್ಯ ಉದ್ದೇಶ ಸೋವಿಯೆತ್ ಒಕ್ಕೂಟದ ಬಾರಿ ಕೈಗಾರಿಕಾ ಸಂಸ್ಥೆಗಳಲ್ಲೂ ಕಾರ್ಯನಿರ್ವಹಣೆಗೊಳ್ಳುತ್ತಿರುವ ಈ ಹೊಸ ಉಪಕರಣವು ಪ್ರಥಮ ಪ್ರಯತ್ನದಲ್ಲಿ ಯಶಸ್ವಿಯಾಗಿ ತೇರ್ಗಡೆ ಹೊಂದಿದೆ

ಈ ಹೊಸ ಸದ್ದನ್ನು ನಿಯಂತ್ರಿಸುವ ಪರಿಣಾಮಕಾರೀ ಬಿರಡೆಯೊಂದನ್ನು ಈಗ ದೊಡ್ಡ ಪ್ರಮಾಣದಲ್ಲಿ ತಯಾರಿಸಲಾಗುತ್ತಿದೆ ಇವನ್ನು ಪೊಲಿಮರ್ ಸೈಲಿಕೋನಿಂದ ತಯಾರಿಸಲಾಗಿದೆ ವಿಶಿಷ್ಟ ಉತ್ಪಾದನಾ ತಂತ್ರಕ್ಕೆ ಅನುಸಾರವಾಗಿ ಈ ಬಿರಡೆಯನ್ನು ಉತ್ಕೃಷ್ಟವಾದ ಪೆಕ್ಟೋರ್ಡಿಸಿಲ್ ಎಲ್ಲಿನಿಂದ ಅಧವಾ ಎನೆಟೆಲ್ ಸಲ್ಯುಲೋಸ್ ನಿಂದ ತಯಾರಿಸಲಾಗುತ್ತಿದ್ದು ಸನ್ನಾಟ್ಟಿ ತುಂಡಿನ-ತಿರುತ್ತದೆ ಈ ಒಟ್ಟಿಯು ಮೆದುವಾದ ಫ್ಲಾನೆಲ್ ಬಟ್ಟೆಯಂತೆ ಕಾಣಿಸಿ ತ್ತದೆ ಶಂಕುವಿನಾಕಾರದಲ್ಲಿ ಕಾಣಿಸ್ತಿಕೆನಿಂ ಎಲ್ಲಿಟ್ಟುಕೊಂಡರೂ ವ್ಯಕ್ತಿಯು ತನಾಡವಿನು ಪ ಸದ್ದಿನ ಮಟ್ಟವು ಅವಿಸ್ಟೋ ಕೆಳಗಿಳಿದಿರುತ್ತದೆ ಶರೀರರೋಗ್ಯದ ಮೇಲೆ ಯಾವುದೇ ಪರಿಣಾಮವೂ ಇಲ್ಲದೆ ಪಕ್ಷಿಯೊಬ್ಬನು ಬಹುಕಾಲದವರೆಗೆ ಸದ್ದುಗದ್ದಲಿನ ಕಾರ್ಖಾನೆಯಲ್ಲಿ ಕಲಸಮಾಡಲು ಇದು ಸಾಧ್ಯಗೊಳಿಸುತ್ತದೆ

ಸೋವಿಯೆತ್ ಒಕ್ಕೂಟದ ನಾವ ಜನಿಕ ಆರೋಗ್ಯ ಸಚಿವಾಲಯದ ಹೊಸ ವೈಜ್ಞಾನಿಕ ಉಪಕರಣಗಳ ಆಯೋಗವು ಈ ಹೊಸ ಸದ್ದು ನಿಯಂತ್ರಕ ಬಿರಡೆಗಳನ್ನು ಕೈಗಾರಿಕೆಗಳಲ್ಲಿ ವ್ಯಾಪಕವಾಗಿ ಬಳಸುವುದಕ್ಕೆ ಸಿಫಾರಸು ಮಾಡಿದೆ

HOTEL SATKAR

Boarding, Lodging & Restaurant

Behind Corporation Office,

Mission Road — Bangalore—27.

Phone No — 1 72303 Grams HOTEL SATKAR

2 72304

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms, Roof garden

Quiet, Calm Atmosphere

Personalised Service.

ನಾಮ ನಿರಾಕರಣ ಚಳುವಳಿ

ಶ್ರೀರಂಗ ಪಟ್ಟಣದಲ್ಲಿ ರಾಜ್ಯ ಮುಸ್ಲಿಂ ಲೀಗು ಸಮ್ಮೇಳನ.ಟಿಪ್ಪು ಸುಲ್ತಾನರ ಮರಿಮಗನು ಜೈ ಕರ್ನಾಟಕ ಭುವನೇಶ್ವರಿಯೆಂದು ದಡಿಗಂಟಲಿಂದ ಕೆರುಚುತಿದ್ದ, ಕರ್ನಾಟಕ ಸಿಂಹಾಸನಾಧೀಶ್ವರನಾದ ಟಿಪ್ಪು ಸುಲ್ತಾನ–ಆಗಮನ.

ಇಂಡಿಕೇಟಿನ ರಾಜ್ಯ ಶಾಖಾಧ್ಯಕ್ಷ ಶ್ರೀ ದೇವರಾಜ ಅರಸರಿಂದ ಉದ್ಘಾಟನೆ. ಮುಸ್ಲಿಂ ಸಮ್ಮೇಳನ ರಾಜ್ಯಕೀಯದಿಂದ ದೂರವೆಂಬ ಪೂರ್ವ ಘೋಷಣೆ. ಶ್ರೀ ಅರಸರಿಗೂ ಮುಸ್ಲಿಂ ಸಮ್ಮೇಳನಕ್ಕೂ ಗೋಕು ಲಾಷ್ಟಮಿ– ಇಮಾಂ ಸಾಹೇಬರ ಸಂಬಂಧ ಸಾಧನ.

'ರಾಜ್ಯದ ಹೆಸರು ಕರ್ನಾಟಕವೆಂದಾಗಬೇಕಿಲ್ಲ'– ಆ ಸಮ್ಮೇಳನದಲ್ಲಿ ಶ್ರೀ ಅರಸರ ಉಗ್ಗಡಕೂ ಮುಸ್ಲಿಂ ಸಮ್ಮೇಳನ– ರಾಜ್ಯದ ಹೆಸರುಗಳ ನಡುವೆ ಆ ಮೇಳ? ಬಾವರಾಯಣ.

ರಾಜ್ಯದ ಹೆಸರು ಕರ್ನಾಟಕವೆಂದಾದರೆ, ಇಲ್ಲಿರುವ ಮುಸ್ಲಿಮರ ಹಿತ ಸಂಬಂಧಗಳು ನುಚ್ಚುನೂರಾಗುವವೆಂಬ ಭಯ! ತಮಿಳುನಾಡಿನಲ್ಲಿ,ಮಹಾರಾಷ್ಟ್ರದಲ್ಲಿ, ಆಂಧ್ರ ಪ್ರದೇಶದಲ್ಲಿ ... ಮುಸ್ಲಿಮರಿಲ್ಲವೆ? ಅವರಿಗೆ ಸರ್ವಪ್ರಕಾರದ ಸ್ಥಾನ—ಮಾನ ಅಭಯ–ವರದ ದೊರಕುತ್ತಿಲ್ಲವೆ?

'ಭಾರತೀಕರಣ'ವೆಂಬ ಶಬ್ದಕ್ಕೆ ಅವಾರ್ಥ ಕಲ್ಪಿಸಿ, ಹಗರಣವೆಬ್ಬಿಸಿದ್ದ ಇಂಡಿಕೇಟಿಗರ ಮರಿಗಳು "ಕರ್ನಾಟಕ"ವೆಂಬ ಹೆಸರನ್ನು ಹುಲಿಯೆಂದು ಭೂತಕನ್ನಡಿ ಹಿಡಿದು ತೋರಿಸಿ ಮುಸ್ಲಿಮರನ್ನು ಹೆದರಿಸ ಹೊರಟಿದ್ದಾರೆಯೆ?

ಕರ್ನಾಟಕದಲ್ಲಿರುವ ಮುಸ್ಲಿಮರಲ್ಲಿಯೂ ಬಹುಸಂಖ್ಯಾಕರು ಕನ್ನಡ ಆಡುಭಾಷೆಯೊಗಿರುವವರು. ಮಲೆಯಾಳ ಆಡುವವರೂ ಇದ್ದಾರೆ, ಉರ್ದುನೂಕಾಡುವವರು ಕಡಮೆ.

ರಾಜ್ಯದ ಹೆಸರು ಮೈಸೂರು ಎಂದಿದ್ದರೆ ಮಾತ್ರ ಅವರು ನೆಮ್ಮದಿಯಿಂದ ಉಸಿರಾಡಬಲ್ಲರೆ? ಅದು ಕರ್ನಾಟಕವೆಂದು ಬದಲಾದ ಮಾತ್ರಕ್ಕೆ ಅವರೆಲ್ಲ ಏಕಕಾಲದಲ್ಲಿ ಉಸಿರು ಕಟ್ಟಿ ಸಾಯುವರೆ? ಶ್ರೀ ಅರಸರ ಈ ಹೊಸ ಸಂಶೋಧನೆಗೆ ಯಾರು ಡಾಕ್ಟರೇಟ್ ಕೊಡುತ್ತಾರೆ?

ಟೀಪುವನ್ನು ಮಹಾಮಹಿಮನೆಂದು, ದೇಶಪ್ರೇಮಿಯೆಂದು ಮುಸ್ಲಿಮರೂ ತಿಳಿದುಕೊಳ್ಳಬೇಕು. ದೇಶಕ್ಕಾಗಿ ತನ್ನ ಮೆಕ್ಕೆಳನ್ನೂ ಆತ ಆಡವಿಟ್ಟನೆಂಬ ಕಠೋರ ಸತ್ಯವನ್ನು ಮರೆಯ ಬಾರದು.

ಅವನನ್ನು "ಮೈಸೂರಿನ ಹುಲಿ" ಎಂದು ಕರೆದರು; "ಕರ್ನಾಟಕದ ಹುಲಿ" ಎನ್ನಲಿಲ್ಲ. ರಾಜ್ಯದ ಹೆಸರು ಕರ್ನಾಟಕವೆಂದಾದಲ್ಲಿ "ಮೈಸೂರಿನ ಹುಲಿ"ಗೆ ಸ್ವಾಸ್ಥ್ಯ ತಪ್ಪಿತೆಂದು ಹೆದರಿಕೆಯೆ? ನಶಿಸುತ್ತಿರುವ ಕಾಡಿನ ಹುಲಿಗಳ ಸಾಲಿನಲ್ಲಿ ಈ ಮೈಸೂರಿನ ಹುಲಿಯೂ ಕ್ಯೂ ನಿಲ್ಲುತ್ತಿದೆಂದು ಆಂಜಿಕೆಯೆ?

ಟಿಪ್ಪುವು ಹುಲಿಯೆಂದು ಕಂಡದ್ದು ಕನ್ನಡಿಗರಿಗಲ್ಲ; ಮೈಸೂರಿಗರಿಗೂ ಅಷ್ಟೇ ಕನ್ನಡಿಗ ಉರುಫ್' ಮೈಸೂರಿಗರಿಗೆ ಅವನು ದನವಾಗಿ, ಕಾಮಧೇನುವಾಗಿದ್ದ. ಜನತೆಯ ಕಷ್ಟ ಕಾರ್ಪಣ್ಯಗಳನ್ನು ಅರಿತು ದೂರ ಮಾಡುವಲ್ಲಿ, ಜನತೆಗೆ ಉತ್ತಮ ಸೌಕರ್ಯ ಅನುಕೂಲತೆಗಳನ್ನೊದಗಿಸುವಲ್ಲಿ, ಆತ ಉತ್ಸಾಹದಿಂದ ಕಾರ್ಯ ತತ್ಪರನಾಗಿದ್ದ.

ಅವನು ಹುಲಿಯಂತೆ ಕಂಡದ್ದು ಪರಂಗಿ ಸೇನೆಗೆ; ಕಾರ್ನವಾಲೀಸ ಮಹಾಶಯನಿಗೆ. ಕಾರ್ನವಾಲೀಸನಿಗೆ ಟೀಪು ಹುಲಿಯಾಗಿ ಕಂಡ. ಆಗಿನ್ನೂ ಕರ್ನಾಟಕ ಒಂದಾಗಿರಲಿಲ್ಲ; 'ಮೈಸೂರಿನ ಕಾಲಿ' ಎಂದು ಕರೆದ.

ಈ 'ಹುಲಿ'ಗಾಗಿ ಇಂದಿಗೂ ಎಂದೆಂದಿಗೂ ಕರ್ನಾಟಕ ಮೈಸೂರಾಗಿಯೇ ಉಳಿಯಬೇಕೆಂದು ಹೇಳಿ ಶ್ರೀ ಅರಸರು ಮುಸ್ಲಿಮರ ಸಹಾನುಭೂತಿಯನ್ನು ತನ್ನ ಪರ ಸೆಳೆದುಕೊಂಡರೆ? ಅದಕ್ಕಾಗಿಯೇ ಆ ಮಾತನ್ನು ಆಡಿದರೆ?

ಅದು ಅವರ ಪಕ್ಷದ ನೀತಿಯೆ?

ಹಾಗಿರಲಾರದು. ಕೇಂದ್ರ ಸಚಿವ ಶ್ರೀಮತಿ ಮಹಿಷಿಯ ವರು ರಾಜ್ಯದ ಹೆಸರು ಕರ್ನಾಟಕವಾಗ ಬೇಕೆಂದು ರಾಜ್ಯೋತ್ಸವ ದಿನ ಬಹಿರಂಗವಾಗಿ ಘೋಷಿಸಿದ್ದಾರೆ.

ಶ್ರೀ ಅರಸರು ಮೈಸೂರೇ ಉಳಿಯಬೇಕೆಂದು ಹಿಂದಿನಿಂದಲೂ ಹೇಳುತ್ತ ಬಂದವರು ಅವರು ಹುಟ್ಟಿದ್ದೂ ಬೆಳೆಯುತ್ತಿರುವುದೂ ಮೈಸೂರಲ್ಲೇ. ಆದರೆ, ಕನ್ನಡಿಗರು ಹುಟ್ಟಿದ್ದು, ಬೆಳೆದದ್ದು, ಮುಂದೆ ಸಾಯುವುದೂ ಕನ್ನಡನಾಡಿನಲ್ಲೇ.

ಮೈಸೂರಿನ ಅರಸರು ಮಹಾರಾಜಾ ಆಫ್ ಮೈಸೂರ್ ನಿಜ; ಆದರೆ ಕನ್ನಡಿಗರಿಗೆ ಅವರು ಕರ್ನಾಟಕ ಸಿಂಹಾಸನಾಧೀಶ್ವರರು ಎಂಬುದು ಶ್ರೀ ಅರಸರಿಗೆ ಮರೆತು ಹೋಯಿತೇ. ರಾಜ್ಯ ಪುನರ್ಘಟನೆಯ ಹಿನ್ನೆಲೆಬ ವರ್ಗದ ರಾಜ ಪ್ರಮುಖರ ರಾಜ್ಯವಾಗಿದ್ದ ಮೈಸೂರನ್ನು ಹಿಗ್ಗಿಸಿ, ಆದಕ್ಕೆ ಆ ವರ್ಗದ ಸ್ಥಾನಮಾನ ನೀಡುವುದಾಗಿರಲಿಲ್ಲ.

ಒಂದು ವೇಳೆ ಹಾಗಾಗಿದ್ದರೆ, ತಮಿಳು ತೆಲುಗು ಮಾತಾಡುವ ಜನರಿರುವ ಪ್ರದೇಶಗಳನ್ನು ಆದಕ್ಕೆ ಕೂಡಿಸಿ ಹಿಗ್ಗಿಸ ಬಹುದಿತ್ತು.

ಒಂದು ಭಾಷೆ–ಒಂದು ಸಂಸ್ಕೃತಿಯ ಜನರನ್ನು ಒಂದೆಡೆ ಕೂಡಿಸುವುದೆ ರಾಜ್ಯ ಪುನಾರಚನೆಯ ಮುಖ್ಯ ಉದ್ದೇಶ. ಆದು ಬಹುಮಟ್ಟಿಗೆ ಸಾಧಿಸಿದೆ. ಮೈಸೂರು ಸತ್ತು ಕರ್ನಾಟಕ ರಾಜ್ಯ ರಚನೆಯೊಗಿದೆ. ಇನ್ನೂ ಮೈಸೂರಿನ ಹೆಣನನ್ನು ಬರಷದಲ್ಲಿ ಸಂರಕ್ಷಿಸಿಕೊಂಡು ಬರುವುದರಲ್ಲಿ ಅರ್ಥವೇನು?

ಕನ್ನಡಿಗರು ಬಯಸಿದ್ದ ಕರ್ನಾಟಕ ರಚನೆಯೊಗಿಲ್ಲ ನಿಜ. ಕಾಸರಗೋಡು, ಮಡಕಶಿರ, ಶೋಲಾಪುರ..ಹೀಗೆ ಇನ್ನೂ ಕನ್ನಡ ಪ್ರದೇಶಗಳು ಪರರಾಜ್ಯದಲ್ಲಿವೆ.

ತಮ್ಮ ಅತೃಪ್ತಿಯನ್ನು ಸೂಚಿಸಲು ಪುರಸ್ಕಾರ ನಿರಾಕರಿಸುವುದು, ಇಷ್ಟಾರ್ಥ ಸಾಧನೆಗೆ ಸತ್ಯಾಗ್ರಹ ಹೂಡುವುದು ಇಂದಿನ ಫ್ಯಾಶನ್ನು.

ಕನ್ನಡಿಗರು ಬೇಡಿದ್ದಷ್ಟು ವಿಶಾಲ ರಾಜ್ಯ ದೊರೆಯದ ಕಾರಣ ಶ್ರೀ ದೇವರಾಜ ಅರಸರು ನಾಮ ನಿರಾಕರಣ ಚಳುವಳಿಯನ್ನು ಆರಂಭಿಸಿದ್ದಾರೆಂದು ತಿಳಿಯಬೇಕೆ?

ಹೀಗಾದಲ್ಲಿ ಅವರಿಗೆ ನಿಜಕ್ಕೂ ಶಹಬಾಸ್ ಕೊಡಬೇಕು. ಆದರೆ, ಕನ್ನಡಿಗರು ಕೊಟ್ಟು ಕೊಂಡಿರುವ ನಾಮವನ್ನು ನಿರಾಕರಿಸಲು ಅರಸರು ಯಾರು?

ಶ್ರೀಸಾಮಾನ್ಯನಿಗೂ ಶ್ರೀಮಾನ್ ಸಾಮಾನ್ಯನಿಗೂ ಅಜಗಜಾಂತರವಿದೆಯೆಂಬುದನ್ನು ಶ್ರೀಮಾನ್ ಅರಸರು ತೋರಿಸಿಕೊಟ್ಟರು. ಅಂದರೆ, ಇದು ಶ್ರೀಸಾಮಾನ್ಯರ ರಾಜ್ಯವಲ್ಲ; ಶ್ರೀಮಾನ್‌ಗಳ ರಾಜ್ಯವೆ?

●●

ಭಾರತ ಜನನಿಯ ತನುಜಾತೆ

(ಐದನೇ ಪುಟದಿಂದ)

ಅಮೆರಿಕೆಯ ವಿದೇಶೀ ನೆರವಿನ ಮೇಲೆ ಅಲ್ಲಿನ ನೆನೇಟು ಕತ್ತರಿ ಪ್ರಯೋಗ ಮಾಡಿದ್ದು ಸ್ವತಃ ನಿಕ್ಸನ್ನರಿಗೇ ಅಚ್ಚರಿಯನ್ನುಂಟುಮಾಡಿದೆ. ಇತ್ತೀಚೆಗಿನ ಹಲವು ವರ್ಷಗಳಿಂದ ಉದಾರವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಸಹಾಯ ಮಾಡುತ್ತಿರುವ ಅಮೆರಿಕನ್ ಸರಕಾರದ ಕೈಕಟ್ಟುವ ಈ ಸಾಹಸಕ್ಕೆ ನೆನೇಟು ಏತಕ್ಕೆ ಮುಂದುವರಿಯಿತು ಎಂಬುದೇ ಮುಖ್ಯ ಪ್ರಶ್ನೆ.

ಅಮೆರಿಕೆಯಿಂದ ನೆರವು ಪಡೆಯುತ್ತಿರುವ ದೇಶಗಳೆಲ್ಲ ಹೆಚ್ಚಿನವು ಇತ್ತೀಚೆಗೆ ಸ್ವಾತಂತ್ರ್ಯ ಗಳಿಸಿಕೊಂಡ ಆಫ್ರೇಷ್ಯಕ್ಕೆ ಸೇರಿದವು. ಮೊನ್ನೆ ಮೊನ್ನೆ ವಿಶ್ವ ಸಂಸ್ಥೆಯಲ್ಲಿ ಚೀನಾ ಪ್ರವೇಶ ಸಂಬಂಧದಲ್ಲಿ ಅವೆಲ್ಲವೂ ಅಮೆರಿಕೆಯ ಮುಖ ಭಂಗಮಾಡಿ ಬಿಟ್ಟವು. ತನ್ನ ಸಂರಕ್ಷಣೆಯಲ್ಲೇ ಬದುಕಿ ಬಂದಿರುವ ತೈವಾನನನ್ನು ವಿಶ್ವಸಂಸ್ಥೆಯಲ್ಲಿ ಶಾಖಾಯ ಲವಣಾಂಶ ಉಳಿಸಿಕೊಳ್ಳಲು ಅಮೆರಿಕೆ ಮಾಡಿದ ಪ್ರಯತ್ನವನ್ನು ಈ ಚಿಕ್ಕೆಲಿ ದೇಶಗಳು ನೀರ ಮೇಲಣ ಹೋಮ ಮಾಡಿ ಬಿಟ್ಟವು.

ಅಮೆರಿಕೆ ನೀಡಬಹುದಾದ ಯಾವುದೇ ನೆರವು ವಿಶ್ವಸಂಸ್ಥೆಯ ಪ್ರತಿನಿಧಿತ್ವದ ಮೂಲಕವೇ ನೀಡಬೇಕೆಂಬುದೂ ಕೆಲವು ನೇಟರರ ಅಭಿಪ್ರಾಯ. ಅದೇನಿದ್ದರೂ ತೈವಾನಕ್ಕೆ ಇದುವರೆಗಿನಂತೆಯೇ ತನ್ನ ನೆರವು ಮುಂದುವರಿಯುವುದೆಂದೂ ಪಾಕಿಸ್ತಾನಕ್ಕೆ ಮಿಲಿಟರಿ ಸಹಾಯ ನಿಲ್ಲುವುದಿಲ್ಲವೆಂದೂ ಸರಕಾರದ ಮೂಲಗಳು ಸ್ಪಷ್ಟ ಪಡಿಸಿವೆ. ಅಂದರೇನು? ತನ್ನ ನೀತಿಯನ್ನು ಒಪ್ಪದ ದೇಶಗಳಿಗೆ ನೆರವಿನ ಹೆಸರಲ್ಲಿ ಹಣನೇಕೆ ಸುರಿಯಬೇಕು? ಭಾರತ ದೊಡನೆ –ಹಿಂದೆ ಆಡಿದ ನಾಟಕವನ್ನೇ ಈಗ ಅಮೆರಿಕೆ ವಿಶ್ವರಂಗಭೂಮಿಯಲ್ಲಿ ಪ್ರದರ್ಶಿಸ ಹೊರಟಂತಿದೆ. ಆದರೆ, ಭಾರತ ದೊಡನಾಡುವಾಗ,ಸರಕಾರವೇ ನಾಯಕ ಪಾತ್ರದಲ್ಲಿತ್ತು; ಇದೀಗ ಆ ಪಟ್ಟ ನೆನೇಟಿಗೆ ಸ್ಥಾನಾಂತರಗೊಂಡಿದೆ.

●●

Gram: VISHWA Tel: 28111 & 28112

When at Bangalore

Stay at

HOTEL NATARAJA

Restaurant Boarding & Lodging.

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ-ಮದ್ದು

ಬೆಲೆ: ರೂ. 2–00

ಪ್ರತಿಯೊವ್ವನೂ ನಿತ್ಯ ಪಠಿಸಬೇಕಾದ **ಗೀತೆಯ ಸಮೂಲ ಅನುವಾದ**

ಗೀತೆಯ ಕೈಗನ್ನಡಿ

ಪಾಕೆಟ್ ಎಡಿಶನ್ **ಬೆಲೆ ರೂ. 2–00**

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ ರೂ. 2–00

Letter Writing Made Easy

ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ದಿನವಹಿ ಪತ್ರಸಂಕಲನ

ಬೆಲೆ ರೂ. 1–50.

ಪುಸ್ತಕ ಬೇಕಾದವರು ಆಯಾಯ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಬುಕ್ ಪೋಸ್ಟ್ ವೆಚ್ಚ ಸೇರಿಸಿ ಮನಿಯರ್ಡರು ಸಾಡುವುದು. ವಿಶೇಷ ಅಂಚೆವೆಚ್ಚ ತಗಲುವುದರಿಂದ ವಿ. ಪಿ. ಮಾಡುವುದಿಲ್ಲ.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್)

ಉಡುಪಿ, ದ. ಕ.

ಕಾರ್ಕಳದಲ್ಲಿ ಅತ್ಯಪೂರ್ವ ಸಾಹಿತ್ಯ ವಸ್ತು ಪ್ರದರ್ಶನ

ಕಾರ್ಕಳದಲ್ಲಿ ಜರಗಿದ ದ. ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದ ಸದನಕಾಶದಲ್ಲಿ ಏರ್ಪಡಿಸಲಾದ ಸಾಹಿತ್ಯ ವಸ್ತು ಪ್ರದರ್ಶನವು ಅತ್ಯಪೂರ್ವವಾಗಿದ್ದು ಸರ್ವರ ಮೆಚ್ಚುಗೆ ಗಳಿಸಿದೆಯೆನ್ನ ಬಹುದು. ಶ್ರೀ ಟಿ. ಚಿಂದ್ರರಾಜ ಸೆಟ್ಟಿ ಸಿದ್ಧಕಟ್ಟೆಯವರು ಕೆಲವು ವರುಷಗಳಿಂದ ಸಂಗ್ರಹಿಸುತ್ತಿದ್ದ "ಕನ್ನಡ ಬರಹಗಾರರ ಬಳಗ"ವು ಕುತೂಹಲಕಾರಿಯಾಗಿತ್ತು. ಸುರತ್ಕಲ್ ಗೋವಿಂದದಾಸ ಕಾಲೇಜಿನ ಪ್ರಾಧ್ಯಾಪಕ ಶ್ರೀ ಶೇಖರ ಇಡ್ಯ, ಇವರು ಸಾಹಸ ಪೂರ್ವಕ ಪ್ರದರ್ಶಿಸಿದ ಸಾಹಿತ್ಯ ಪ್ರದರ್ಶನವು ಶ್ಲಾಘನೀಯವಾಗಿತ್ತು. ಇದರಲ್ಲಿ ನಮ್ಮ ಜಿಲ್ಲೆಯಲ್ಲಿ ಕಳೆದ ಶತಮಾನದಲ್ಲಿ ಶ್ರ. ಕಟವಾದ ಹಾಗೂ ಕನ್ನಡಕ್ಕೆ ಮೊದಲನೆಯದಾದ ಕೃತಿಗಳೂ, ಪತ್ರಿಕೆಗಳೂ, ಪ್ರದರ್ಶಿತವಾದುದು ಪ್ರದರ್ಶನಕ್ಕೊಂದು ಕಳೆ ನೀಡಿತ್ತು. ಕನ್ನಡ ಕಲ್ಲಚ್ಚು ಮುದ್ರಣ, ದಾಸರ ಪದಗಳು (1850) ಜೈಮಿನಿ ಭಾರತ (1851), ಶಬ್ದಮಣಿದರ್ಪಣ (1868), ಜಿಗ್ಲರ್, ಕಟ್ಟೆಲ್ ನಿಘಂಟು, ವ್ಯಾಕರಣ ಗ್ರಂಥಗಳು, ಕನ್ನಡ ನುಡಿ ಹಿಡಿ (1906) ಬಿ. ಎಂ. ಶ್ರೀಯವರ ಕನ್ನಡ ಲಿಪಿ ಸಂಸ್ಕರಣ ಕ್ರಿಂತ 80 ವರುಷ ಮೊದಲು ಪ್ರಕಟವಾದ 'ರಾಜೇಂದ್ರನಾಮೆ' (1857), ಗುಲ್ವಾಡಿ ವೆಂಕಟರಾಯರ "ಇಂದಿರಾಬಾಯಿ" ಕನ್ನಡದ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಇತ್ಯಾದಿಗಳು ದಕ್ಷಿಣ ಕನ್ನಡದ ಹಿರಿಮೆಯನ್ನು ಸೂಚಿಸಲು ಸಹಕಾರಿಯಾಗಿದ್ದವು ಎನ್ನಬಹುದು. ಕಂಡವರೆಲ್ಲರು ಕೊಂಡಾಡಿದ ಅಪೂರ್ವ ಪ್ರದರ್ಶನವಿದು.

ಶ್ರೀ ಸತ್ಯಸಾಯಿ ಸೇವಾ ಸಮಿತಿಯ ವಾರ್ಷಿಕೋತ್ಸವ

ಉಡುಪಿಯ ಭಗವಾನ್ ಶ್ರೀ ಸತ್ಯಸಾಯಿ ಸೇವಾ ಸಮಿತಿಯ 2ನೇ ವಾರ್ಷಿಕೋತ್ಸವವು ಗೋವಿಂದ ಕಲ್ಯಾಣ ಮಂಟಪದಲ್ಲಿ ತಾ. 7ರಂದು ಪ್ರೊ। ಎಸ್. ವಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು. ಸಮಿತಿಯ ಅಧ್ಯಕ್ಷ ಶ್ರೀ ಪಿ. ರವೀಂದ್ರ ನಾಯಕರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ ಎ. ಮೋಹನ ರಾಯರು ವರದಿ ವಾಚನ ಗೈದರು. ಉಪಕಾರ್ಯದರ್ಶಿ ಶ್ರೀ ಗೋಪಾಲಕೃಷ್ಣರು ಸಂದೇಶಗಳನ್ನೋದಿದರು. ಜಿಲ್ಲಾ ಸಮಿತಿಯ ಅಧ್ಯಕ್ಷ ಶ್ರೀ ಕೆ. ಪಿ. ಮುಕುಂದ ಪ್ರಭುಗಳು ಸ್ವಾಸ್ವಾವಿಕ ಭಾಷಣ ಮಾಡಿದ ಮೇಲೆ ಶ್ರೀ ಮಡಿಯೂಲ ನಾರಾಯಣ ಭಟ್ಟರು ಬಾಬಾರ ಮಹತ್ವದ ಕುರಿತು ಹೃದಯಂಗಮ ಭಾಷಣವಿತ್ತರು. ಅಧ್ಯಕ್ಷ ಪ್ರೊ। ಭಟ್ಟರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಬಾಬಾರ ಬೇರೆ ಬೇರೆ ಪವಾಡಗಳನ್ನು ವಿವರಿಸಿ ಸಂದರ್ಭೋಚಿತವಾದ ತಮ್ಮ ಕೆಲವು ಕವನಗಳನ್ನು ಹಿಂದಿರು ಶ್ರೀ ಶ್ರೀಧರರಾಯರು ವಂದನಾರ್ಪಣೆ ಗೈದರು. ಆಂತ್ಯದಲ್ಲಿ ಶ್ರೀ ಪೈಲೂರು ಲಕ್ಷ್ಮೀನಾರಾಯಣ ರಾಯರು ಭಗವಾನರ ಚಲಚ್ಚಿತ್ರ ಪ್ರದರ್ಶಿಸಿದರು.

ಬೆಳಿಗ್ಗೆ ನಗರ ಸಂಕೀರ್ತನೆ, ವಿಚಾರಗೋಷ್ಠಿ ಮೊದಲಾದ ಕಾರ್ಯಕ್ರಮಗಳೆದ್ದುವು.

ಯಕ್ಷಗಾನಗೋಷ್ಠಿ ಸಮಾರೋಪ

ಉಡುಪಿ ಎಂ.ಜಿ.ಎಂ. ಕಾಲೇಜಿನಲ್ಲಿ ತಾ. 27ರಿಂದ ನಡೆಯುಬುದ ಯಕ್ಷಗಾನ ವೇಷಭೂಷಣ ಮತ್ತು ಅಭಿನಯಗೋಷ್ಠಿಯ ಸಮಾರೋಪ ಸಮಾರಂಭವು ತಾ. 31ರಂದು ಡಾ। ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು.

ಡಾ। ಕಾರಂತರು ಮಾತಾಡುತ್ತಾ, ಯಕ್ಷಗಾನ ನೋಪಜೀವಿಗಳಿಂದ ಕಲೆ ಉಳಿಯಬೇಕಾಗಿದೆ ಯೆಂದು ನುಡಿದು ಯಕ್ಷಗಾನಕ್ಕೆ ಜೇಗೆ ಪ್ರಾಧಾನ್ಯ ದೊರಕಿತು ಎನ್ನುವ ಕುರಿತು ಅವರು ವಿವರಿಸಿದರು. ದೆಹಲಿಯ ಸಂಗೀತ ನಾಟಕ ಅಕಾಡೆಮಿಯವರು ಯಕ್ಷಗಾನಕ್ಕೆ ಶ್ರೀ ವೀರಭದ್ರ ನಾಯಕರನ್ನು ಯೋಗ್ಯತೆಯ ಅರ್ಹತೆಯ ಮೇಲೆ ಗುರುವಾಗಿ ಆರಿಸಿದ್ದಾರೆ ಎಂದು ನುಡಿದರು. ಉಡುಪಿ ಯಕ್ಷಗಾನ ಕೇಂದ್ರದ ಕುರಿತು ಡಾ। ಕಾರಂತರು ಪ್ರಸ್ತಾಪಿಸಿ ಶ್ರೀಗಳಾಪ ಕು ಶಿ. ಹರಿದಾಸ ಭಟ್ಟರು, ಬಿ.ವಿ. ಆಚಾರ್ಯರು ಪ್ರಯತ್ನಪಟ್ಟು ಈ ಕೇಂದ್ರವನ್ನು ಸಂಘಟಿಸಿದ್ದಾರೆ. ನಾಲ್ಕುತಿಂಗಳ ಅವಧಿಯಲ್ಲಿ ಶ್ರೀ ವೀರಭದ್ರ ನಾಯಕರು ಬಯಲೆ ಸಾರ್ಥಕವಾದ ಕೆಲಸ ಮಾಡಿದ್ದಾರೆ ಎಂದರು.

ಈ ಕೇಂದ್ರದ ಪ್ರೇರಕ್ಕರಾದ ಶ್ರೀ ಕು. ಶಿ. ಹರಿದಾಸ ಭಟ್ಟರು ಪ್ರಾಸ್ತಾವಿಕ ಭಾಷಣ ಮಾಡಿ ಈ ಕೇಂದ್ರವನ್ನುಳಿಸಬೇಕಾದರೆ ಕಲಾವಿದರ ಸಹಕಾರ ಹಾಗೂ ಆರ್ಥಿಕವಾಗಿ ಇತರರ ನೆರವು ಅವಶ್ಯ ಎಂದರು. ಆವರು ಗೋಷ್ಠಿಯಲ್ಲಿ ಪಾಲ್ಗೊಂಡ ಕಲಾವಿದರಿಗೆ ಕೃತಜ್ಞತೆಗಳನ್ನರ್ಪಿಸಿದರು.

ಶ್ರೀಗಳಾದ ನಾರಾಯಣ ಉಪ್ಪೂರು, ರಾಮ ಕೃಷ್ಣ ಮೂರ್ತಿ, ಪುತ್ತೂರು ಕೃಷ್ಣ ಭಟ್ಟ, ಕೆ. ನಾರಾಯಣ ಶೆಟ್ಟಿ ಮೊದಲಾದವರು ಯಕ್ಷಗಾನ ನುತ್ತು ಕಾರಂತರ ಬಗ್ಗೆ ಮಾತಾಡಿದರು.

ಬಳಿಕ ಈ ಕೇಂದ್ರದಲ್ಲಿ ನಾಲ್ಕು ತಿಂಗಳುಗಳ ಕಾಲ ತರಬೇತಿ ಪಡೆದ 15 ಮಂದಿ ವಿದ್ಯಾರ್ಥಿಗಳಿಗೆ ಶ್ರೀ ಕಾರಂತರು ಪ್ರಶಸ್ತಿ ಪತ್ರ ನೀಡಿದರು.

ಸಮಾರಂಭವು ಕೇಂದ್ರದ ವಿದ್ಯಾರ್ಥಿಗಳು ಹಾಗೂ ಗುರು ಶ್ರೀ ವೀರಭದ್ರ ನಾಯಕರಿಂದ ಯಕ್ಷಗಾನ ಪ್ರದರ್ಶನದೊಂದಿಗೆ ಮುಕ್ತಾಯ ಕಾಯ್ತು. ಕೇಂದ್ರದ ಗುರು ಶ್ರೀ ವೀರಭದ್ರ ನಾಯಕರು ಧನ್ಯವಾದಗಳನ್ನರ್ಪಿಸಿದರು.

●●

(ಮೂರನೇ ಪುಟದಿಂದ)

ಕನ್ನಡದಲ್ಲಿ ಬಂದ ಅರ್ಜಿಗಳಿಗೆ ಆದ್ಯತೆ ನೀಡ ಬೇಕು; ಅಧಿಕಾರ ಮುದ್ರೆ ಮತ್ತು ಪತ್ರನಾಮೆಗಳು ಕನ್ನಡದಲ್ಲಿರಬೇಕು, ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು. ಕನ್ನಡ ಪದವೀಧರರಿಗೆ ಸರಕಾರಿ ನೌಕರಿಗಳಲ್ಲಿ ಅಗ್ರ ಪ್ರಾಶಸ್ತ್ಯವಿರಬೇಕು. ಅಧಿಕಾರಿಗಳು ಕನ್ನಡದಲ್ಲಿ ಹಸ್ತಾಕ್ಷರ ಹಾಕಬೇಕು; ಸಾರ್ವಜನಿಕರೊಡನೆ ಕನ್ನಡದಲ್ಲಿ ಮಾತಾಡಬೇಕು'....ಹೀಗೆ ಹಲವಾರು. ನೀರಲ್ಲಿ ಮುಳುಗಿದವನು ತನ್ನ ಜೀವ ರಕ್ಷಣೆಗಾಗಿ ಈಜುಬಾರದೆ ಹೋದರೂ ಕೈಕಾಲು ಬಡಿಯುತ್ತಾನೆ. ಈಜು ಬಂದವನೂ ಮುಳುಗುವುದುಂಟು. ನೀರಲ್ಲಿ ಮುಳುಗಿ ಸಾಯ ಬಹುದೆಂಬ ಅಂಜುಗುಳಿಗಳು ನೀರಿಗಿಳಿಯದೇ ಇದ್ದರೆ, ದೂಳಲ್ಲಿ ಹೊರಳಾಡಬಹುದಷ್ಟೇ; ಈಜಲಾರರು. ಈಜಬೇಕು ಈಸಿ ಜೈಸಬೇಕು. ಗೊತ್ತುವಳಿ. ಸಲಹೆಗಳನ್ನೆಲ್ಲ ಬದಿಗಿಟ್ಟು ಸರಕಾರ ಕನ್ನಡವೇ ಆಡಳಿತ ಭಾಷೆಯೆಂದು ಘೋಷಿಸಬೇಕು. ಮಗು ಹುಟ್ಟತೊಂದರೆ, ತೊಟ್ಟಿಲೂ ಬರುತ್ತದೆ, ಕುಲಾವಿಯೂ ಬರುತ್ತದೆ. ತೊಟ್ಟಿಲು ಕುಲಾವಿಯಿಲ್ಲದೆ ಮಗು ಬರಬಾರದು ಎಂದರೆ, ಮಗು ಬರುವುದು ನಿಲ್ಲುವುದಿಲ್ಲ; ತೊಟ್ಟಿಲು ಕುಲಾವಿಗಳನ್ನೂ ಆದೆಂದೂ ಕಾಯುವುದಿಲ್ಲ

●●

ನಿಮ್ಮ ಅಮೂಲ್ಯ ವಸ್ತು, ಒಡವೆಗಳನ್ನು ಸಂರಕ್ಷಿಸಲು ಕಾವಲು ನಾಯಿ ಬೇಕೇ?

ಮನೆಪೆಟ್ಟಿಗೆಯಲ್ಲಿರಿಸಿದ ನಿಮ್ಮ ಬೆಲೆಬಾಳುವ ವಸ್ತು, ಒಡವೆಗಳು ಸುಭದ್ರವಾಗಿರಲು ಸಾಧ್ಯವೇ?.... ಇಲ್ಲ. ಸಿಂಡಿಕೇಟ್ ಬ್ಯಾಂಕಿನ ಸೇಫ್ ಡಿಪಾಸಿಟ್ ಲಾಕರ್‌ಗಳು ಕಾವಲು ನಾಯಿಯಂತೆ ನಿಮ್ಮ ಅಮೂಲ್ಯ ವಸ್ತುಗಳನ್ನು ಸದಾ ಸುರಕ್ಷಿತವಾಗಿಯೂ ಸಂರಕ್ಷಿತವಾಗಿಯೂ ಇರಿಸುತ್ತದೆ.

ಬ್ಯಾಂಕು ತನ್ನ 80ಕ್ಕಿಂತಲೂ ಹೆಚ್ಚಿನ ಶಾಖೆಗಳಲ್ಲಿ ಸೇಫ್ ಡಿಪಾಸಿಟ್ ಲಾಕರ್‌ಗಳ ಸೌಲಭ್ಯವನ್ನು ಒದಗಿಸಿದೆ. ಸಿಂಡಿಕೇಟ್ ಬ್ಯಾಂಕಿನ ಸೇಫ್ ಡಿಪಾಸಿಟ್ ಲಾಕರ್‌ಗಳ ಪ್ರಯೋಜನವನ್ನು ಪಡೆದು ನಿಮ್ಮ ವಸ್ತು, ಒಡವೆ ಮತ್ತು ಅಮೂಲ್ಯ ದಾಖಲೆಗಳಿಗೆ ರಕ್ಷಣೆ ಹಾಗೂ ಭದ್ರತೆಯನ್ನು ನೀಡಿರಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಫ್ ಡಿಪಾಸಿಟ್ ಲಾಕರ್ ಸೌಲಭ್ಯವನ್ನು ಹೊಂದಿರುವ ನಮ್ಮ ಬ್ಯಾಂಕಿನ ಶಾಖೆಗಳು:

ಕುಂದಾಪುರ • ಮಣಿಪಾಲ • ಮಂಗಳೂರು — ಹಂಪನಕಟ್ಟಾ
ಪುತ್ತೂರು • ಉಡುಪಿ — ಲೋಕಲ್ ಆಫೀಸು

ದಕ್ಷ, ಪ್ರಾಮಾಣಿಕ ಬ್ಯಾಂಕಿಂಗ್ ಸೇವೆಗೆ

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಛೇರಿ: ಮಣಿಪಾಲ

ಕೆ. ಕೆ. ಪೈ ಕಸ್ತೂರಿಯಂಗ್

ಪ್ರಕಟಣೆ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 107/69

ಉಡುಪಿ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀವರ ತೀರ್ಥ ಸ್ವಾಮಿರು —ವಾದಿರು

ಮತ್ತು

ಲುವ್ಸಿ ಲೋಬೊ ಕೂಡಾ —ಪ್ರತಿವಾದಿರು

ಇವರೊಳಗೆ–

ಸಪ್ಟಿಮೆಂಟಲ್ 2ನೇ ಪ್ರತಿವಾದಿ-ಕ್ಲೆಮೆಂಟ್ ಲೋಬೊ, ರೆಗೋರಿ ಲೋಬೊ ಮಗ, ಉಡುಪಿ ತಾಲ್ಲೂ ಕಟ್ಟಿಂಗೆರೆ ಗ್ರಾಮ – ಇವರಿಗೆ ತಿಳಿಸುವದೇನಂದರೆ–

ಮೇಲ್ಕಂಡ ದಾನೆಯ 3ನೇ ಪ್ರತಿವಾದಿ ಮೃತ ರೆಗೋರಿ ಲೋಬೊ ವ್ಯಾಸಂಗಾರರಾಗಿ ನಿಮ್ಮನ್ನು ಕೂಡಾ ಕತ್ತಿಯಲ್ಲಿ ಸೇರಿಸ ಬೇಕಾಗಿಯೂ ವ್ಯಾದೆ ವಳಗೆ ಸದ್ರಿ ಅರ್ಜಿ ಕೊಡದೆಯಿದ್ದ ತಪ್ಪನ್ನು ಕ್ಷಮಿಸಲ್ಕೆಕಾಗಿ ಸಹಾ ಅರ್ಜಿದಾರ್ರು ಕೊಟ್ಟ ಅರ್ಜಿಗಳು ತಾ. 25.11.71ಕ್ಕೆ ಯಿಟ್ಟಿದೆ. ಆ ಕುರಿತು ಆಕ್ಷೇಪ ಹೇಳತಕ್ಕದ್ದುಯಿದ್ರೆ ಸದ್ರಿ ದಿನ್ನ ಪೂರ್ವಾಹ್ನ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ತಿಳಿಸೋಣಾಗಿಯಿದೆ.

V. R. Kidyoor.
Advocate for Plaintiff

ಉಡ್ಪಿ, 5.11.71.

ನೋಟೀಸು

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 190/71

K. ವೆಂಕಟ್ರಾವ್— ವಾದಿ

ಮತ್ತು

S. ರಾಮದಾಸ ಭಟ್ಟ— ಪ್ರತಿವಾದಿ

ಇವರೊಳಗೆ

ಉಡುಪಿ ತಾಲೂಕು ಕಡೆಕಾರು ಗ್ರಾಮದಲ್ಲಿರುವ ಆಸ್ತಿಯ ವಾಸ್ತವ್ಯದಲ್ಲಿ ವಾಸಿಸುತ್ತಿದ್ದ, ಕುಂಜಾರುಗಿರಿ ದೇವಸ್ಥಾನದಲ್ಲಿ ಮೆನೇಜರ ವೃತ್ತಿಯಲ್ಲಿರುವ S. ಲಕ್ಷ್ಮೀನಾರಾಯಣ ಭಟ್ಟರ ಮಗ S. ರಾಮದಾಸ್ ಭಟ್ಟ, ಇವರಿಗೆ ಈ ಮೂಲಕ ತಿಳಿಸುವುದೆದೇನೆಂದರೆ:

ವಾದಿಯು ಪ್ಲೈಂಟು ನಿವೃತ್ತಿ ಕೇಳಿ ದಾಖ್ಲು ಮಾಡಿರುವ ಮೇಲೆ ಹೇಳಿದ ವ್ಯಾಜ್ಯವು ತಾ. 29.11.71ಕ್ಕೆ ನಿಮ್ಮ ನೋಟೀಸು ಬ್ಗೆ ಇಟ್ಟಿರುತ್ತದೆ. ಆದುದರಿಂದ ನೀವು ಆ ದಿನ ಹಗಲು ಗಂಟೆ 11ಕ್ಕೆ ಸರಿಯಾಗಿ ಸ್ವತಹಾ ಅಥವಾ ಪರೀಲರ ಮುಖ್ತಾರ್ರು ಹಾಜ್ರಾಗಿ ನಿಮ್ಮದೇನಾದರೂ ಉದಾಹರಣೆ ಇದ್ದರೆ ಹಾಜ್ರು ಮಾಡತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗಿದೆ.

H. S. Kedlaya
Advocate for Plaintiff

ಉಡುಪಿ, 4.11.71.

ಪ್ರಕಟಣೆ

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 136/65 Ex. C. 2/1971

ಕೆ. ಸದಾಶಿವ ರಾವ್ —ಅರ್ಜಿದಾರ

ಮತ್ತು

1. ಸುಧಾನಿಧಿರಾವ್, 2. ವಿದ್ಯಾನಿಧಿರಾವ್ 3. ರಾಮರಾವ್, 4.ಲಕ್ಷ್ಮೀನಾರಾವ್–ಲಕ್ಷ್ಮೀನಿಧಿರಾಯರ ಮಕ್ಕಳು-

ಉಡ್ಪಿ ಕಛೇರಿ ಬ್ರಹ್ಮಗಿರಿ —ಯೆದ್ರಿರು

ಇವರೊಳಗೆ

ಸದ್ರಿ ಯೆದ್ರಿರಿಗೆ ಯಿ ಮೂಲ್ಕ ತಿಳಿಸುವದೇನಂದ್ರೆ–

ಮೇಲ್ಕಂಡ ಅನುಲ್ಲಾರಿಯಲ್ಲಿ ಜಪ್ತಾದ ಸ್ಥಿರಾಸ್ತಿ ವಿಕ್ರಯದ ಕುರಿತು ಹಾಜ್ರು ಪಡ್ಡಿದ ಯೇಲಂ ಇಸ್ತ್ಯಾರು ಶರತ್ ನಿರ್ಣಯಿಸುವರೆ ತಾ. 30–11–71ಕ್ಕೆ ಯಿಡೋಣಾಗಿಯಿದೆ. ಆ ಕುರಿತು ಯೆದ್ರಿರಿಗೆ ಆಕ್ಷೇಪ ಹೇಳತ್ಕದ್ದು ಯಿದ್ರೆ ಸದ್ರಿ ದಿನ್ನೆ ಪೂರ್ವಾಹ್ನ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ತಿಳಿಸೋಣಾಗಿಯಿದೆ.

V. R. Kidyoor
Advocate for Petitioners

ಉಡ್ಪಿ, 5—11—71

ದಯಮಾಡಿ

ನಿಮ್ಮ ಬಾಕಿ ಚಂದಾ ಹಣವನ್ನು ಕಳುಹಿಸಿರಿ

ಕಾರ್ಕಳದಲ್ಲಿ ಅತ್ಯಪೂರ್ವ ಸಾಹಿತ್ಯ ವಸ್ತು ಪ್ರದರ್ಶನ

ಕಾರ್ಕಳದಲ್ಲಿ ಜರಗಿದ ದ. ಕ. ಜಿಲ್ಲಾ ಸಾಹಿತ್ಯ ಸಮ್ಮೇಳನದ ಸದವಕಾಶದಲ್ಲಿ ಏರ್ಪಡಿಸಲಾದ ಸಾಹಿತ್ಯ ವಸ್ತು ಪ್ರದರ್ಶನವು ಅತ್ಯಪೂರ್ವವಾಗಿದ್ದು ಸರ್ವರ ಮೆಚ್ಚುಗೆ ಗಳಿಸಿದೆಯೆನ್ನ ಬಹುದು. ಶ್ರೀ ಟಿ. ಚಂದ್ರರಾಜ ಸೆಟ್ಟಿ ಸಿದ್ಧಕಟ್ಟೆಯವರು ಕೆಲವು ವರುಷಗಳಿಂದ ಸಂಗ್ರಹಿಸುತ್ತಿದ್ದ "ಕನ್ನಡ ಬರಹಗಾರರ ಬಳಗ"ವು ಕುತೂಹಲಕಾರಿಯಾಗಿತ್ತು. ಸುರತ್ಕಲ್ ಗೋವಿಂದದಾಸ ಕಾಲೇಜಿನ ಪ್ರಾಧ್ಯಾಪಕ ಶ್ರೀ ಶೀಬರ ಇಡ್ಯ, ಇವರು ಸಾಹಸ ಪೂರ್ವಕ ಪ್ರದರ್ಶಿಸಿದ ಸಾಹಿತ್ಯ ಪ್ರದರ್ಶನವು ಶ್ಲಾಘನೀಯವಾಗಿತ್ತು. ಇದರಲ್ಲಿ ನನ್ನು ಚಿಲ್ಲೆಯಲ್ಲಿ ಕಳೆದ ಶತಮಾನದಲ್ಲಿ ಪ್ರಕಟವಾದ ಹಾಗೂ ಕನ್ನಡಕ್ಕೆ ಮೊದಲನೆಯದಾದ ಕೃತಿಗಳೂ, ಪತ್ರಿಕೆಗಳೂ, ಪ್ರದರ್ಶಿತವಾದುದು ಪ್ರದರ್ಶನಕ್ಕೊಂದು ಕಳೆ ನೀಡಿತ್ತು. ಕನ್ನಡ ಕಲ್ಲಚ್ಚು ಮುದ್ರಣ, ದಾಸರ ಪದಗಳು (1850) ಜೈಮಿನಿ ಭಾರತ (1851), ಶಬ್ದಮಣಿದರ್ಪಣ (1858), ಜಿಗ್ಲರ್, ಕಿಟ್ಟೆಲ್ ನಿಘಂಟು, ವ್ಯಾಕರಣ ಗ್ರಂಥಗಳು, ಕನ್ನಡ ನುಡಿ ಹಿಡಿ (1906) ಬಿ. ಎಂ. ಶ್ರೀಯವರ ಕನ್ನಡ ಲಿಪಿ ಸಂಸ್ಕರಣ ಕ್ರಿಂತ 80 ವರುಷ ಮೊದಲು ಪ್ರಕಟವಾದ 'ರಾಜೇಂದ್ರನಾಮೆ' (1857), ಗುಲ್ವಾಡಿ ವೆಂಕಟರಾಯರ "ಇಂದಿರಾಬಾಯಿ" ಕನ್ನಡದ ಪ್ರಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಇತ್ಯಾದಿಗಳು ಪಕ್ಷಿನೋಟ ಕನ್ನಡದ ಹಿರಿಮೆಯನ್ನು ಸೂಚಿಸಲು ಸಹಕಾರಿಯೊಗಿದ್ದವು ಎನ್ನಬಹುದು. ಕಂಡವರಿಲ್ಲರು ಕೊಂಡಾಡಿದ ಅಪೂರ್ವ ಪ್ರದರ್ಶನವಿದು.

ಶ್ರೀ ಸತ್ಯಸಾಯಿ ಸೇವಾ ಸಮಿತಿಯ ವಾರ್ಷಿಕೋತ್ಸವ

ಉಡುಪಿಯ ಭಗವಾನ್ ಶ್ರೀ ಸತ್ಯಸಾಯಿ ಸೇವಾ ಸಮಿತಿಯ 2ನೇ ವಾರ್ಷಿಕೋತ್ಸವವು ಗೋವಿಂದ ಕಲ್ಯಾಣ ಮಂಟಪದಲ್ಲಿ ತಾ. 7ರಂದು ಪ್ರೊ। ಎಸ್. ವಿ. ಪರಮೇಶ್ವರ ಭಟ್ಟರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳೊಂದಿಗೆ ತಿಜೃಂಭಣೆಯಿಂದ ನೆರವೇರಿತು. ಸಮಿತಿಯ ಅಧ್ಯಕ್ಷ ಶ್ರೀ ಪಿ. ರವೀಂದ್ರ ನಾಯಕರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ ಎ. ಮೋಹನ ರಾಯರು ವರದಿ ವಾಚನ ಗೈದರು. ಉಪಕಾರ್ಯದರ್ಶಿ ಶ್ರೀ ಗೋಪಾಲಕೃಷ್ಣರು ಸಂದೇಶಗಳನ್ನೋದಿದರು. ಜಿಲ್ಲಾ ಸಮಿತಿಯ ಅಧ್ಯಕ್ಷ ಶ್ರೀ ಕೆ ಸಿ. ಮುಕುಂದ ಪ್ರಭುಗಳು ಪ್ರಾಸ್ತಾವಿಕ ಭಾಷಣ ಮಾಡಿದ ಮೇಲೆ ಶ್ರೀ ಮಡಿಯೂಲ ನಾರಾಯಣ ಭಟ್ಟರು ಬಾಬಾರ ಮಹತ್ವದ ಕುರಿತು ಹೃದಯಂಗಮ ಭಾಷಣವಿತ್ತರು. ಅನ್ನಕ್ಷ ಪ್ರೊ। ಭಟ್ಟರು ತನ್ನ ಅಧ್ಯಕ್ಷ ಭಾಷಣದಲ್ಲಿ ಬಾಬಾರ ಬೇರೆ ಬೇರೆ ಪವಾಡಗಳನ್ನು ವಿವರಿಸಿ ಸಂದರ್ಭೋಚಿತವಾದ ತಮ್ಮ ಕೆಲವು ಕವನಗಳನ್ನು ಹಿಡಿದರು ಶ್ರೀ ಶ್ರೀಧರರಾಯರು ವಂದನಾರ್ಪಣೆ ಗೈದರು. ಆಂತ್ಯದಲ್ಲಿ ಶ್ರೀ ಪೈಲೂರು ಲಕ್ಷ್ಮೀನಾರಾಯಣ ರಾಯರು ಭಗವಾನರ ಚಲಚ್ಚಿತ್ರ ಪ್ರದರ್ಶಿಸಿದರು.

ಬೆಳಿಗ್ಗೆ ನಗರ ಸಂಕೀರ್ತನೆ, ವಿಚಾರಗೋಷ್ಠಿ ಮೊದಲಾದ ಕಾರ್ಯಕ್ರಮಗಳಿದ್ದುವು.

ಯಕ್ಷಗಾನಗೋಷ್ಠಿ ಸಮಾರೋಪ

ಉಡುಪಿ ಎಂ.ಜಿ.ಎಂ. ಕಾಲೇಜಿನಲ್ಲಿ ತಾ. 27ರಿಂದ ನಡೆದುಬಂದ ಯಕ್ಷಗಾನ ವೇಷಭೂಷಣ ಮತ್ತು ಅಭಿನಯಗೋಷ್ಠಿಯ ಸಮಾರೋಪ ಸಮಾರಂಭವು ತಾ. 31ರಂದು ಹಾ। ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು.

ಡಾ। ಕಾರಂತರು ಮೂತಾಡುತ್ತಾ, ಯಕ್ಷಗಾನೋಪಜೀವಿಗಳಿಂದ ಕಲೆ ಉಳಿಯಬೇಕಾಗಿದೆಯೆಂದು ನುಡಿದು ಯಕ್ಷಗಾನಕ್ಕೆ ಹೇಗೆ ಪ್ರಾಧಾನ್ಯ ದೊರಕಿತು ಎನ್ನುವ ಕುರಿತು ಅವರು ವಿವರಿಸಿದರು. ದೆಹಲಿಯ ಸಂಗೀತ ನಾಟಕ ಅಕಾಡೆಮಿಯವರು ಯಕ್ಷಗಾನಕ್ಕೆ ಶ್ರೀ ವೀರಭದ್ರ ನಾಯಕರನ್ನು ಯೋಗ್ಯತೆಯ ಆಪತ್ತಿಯ ಮೇಲೆ ಗುರುವಾಗಿ ಆರಿಸಿದ್ದಾರೆ ಎಂದು ನುಡಿದರು. ಉಡುಪಿ ಯಕ್ಷಗಾನ ಕೇಂದ್ರದ ಕುರಿತು ಡಾ। ಕಾರಂತರು ಪ್ರಸ್ತಾಪಿಸಿ ಶ್ರೀಗಳಾದ ಕು ಶಿ. ಪರಿದಾಸ ಭಟ್ಟರು, ಬಿ.ವಿ. ಆಚಾರ್ಯರು ಪ್ರಯತ್ನಪಟ್ಟು ಈ ಕೇಂದ್ರವನ್ನು ಸಂಘಟಿಸಿದ್ದಾರೆ. ನಾಲ್ಕುತಿಂಗಳ ಅವಧಿಯಲ್ಲಿ ಶ್ರೀ ವೀರಭದ್ರ ನಾಯಕರು ಬಹಳ ಸಾರ್ಥಕವಾದ ಕೆಲಸ ಮಾಡಿದ್ದಾರೆ ಎಂದರು.

ಈ ಕೇಂದ್ರದ ಹೈರೆಕ್ಟರಾದ ಶ್ರೀ ಕು. ಶಿ. ಹರಿದಾಸ ಭಟ್ಟರು ಪ್ರಾಸ್ತಾವಿಕ ಭಾಷಣ ಮಾಡಿ ಈ ಕೇಂದ್ರವನ್ನುಳಿಸಬೇಕಾದರೆ ಕಲಾವಿದರ ಸಹಕಾರ ಹಾಗೂ ಆರ್ಥಿಕವಾಗಿ ಇತರರ ನೆರವು ಅವಶ್ಯ ಎಂದರು. ಅವರು ಗೋಷ್ಠಿಯಲ್ಲಿ ಪಾಲ್ಗೊಂಡ ಕಲಾವಿದರಿಗೆ ಕೃತಜ್ಞತೆಗಳನ್ನರ್ಪಿಸಿದರು.

ಶ್ರೀಗಳಾದ ನಾರಾಯಣ ಉಪ್ಪೂರು, ರಾಮಕೃಷ್ಣ ಮೂರ್ತಿ, ಪುತ್ತೂರು ಕೃಷ್ಣ ಭಟ್ಟ, ಕೆ. ನಾರಾಯಣ ಶೆಟ್ಟಿ ಮೊದಲಾದವರು ಯಕ್ಷಗಾನ ಮತ್ತು ಕಾರಂತರ ಬಗ್ಗೆ ಮಾತಾಡಿದರು.

ಬಳಿಕ ಈ ಕೇಂದ್ರದಲ್ಲಿ ನಾಲ್ಕು ತಿಂಗಳುಗಳ ಕಾಲ ತರಬೇತಿ ಪಡೆದ 15 ಮಂದಿ ವಿದ್ಯಾರ್ಥಿಗಳಿಗೆ ಶ್ರೀ ಕಾರಂತರು ಪ್ರಶಸ್ತಿ ಪತ್ರ ನೀಡಿದರು.

ಸಮಾರೋಪವು ಕೇಂದ್ರದ ವಿದ್ಯಾರ್ಥಿಗಳು ಹಾಗೂ ಗುರು ಶ್ರೀ ವೀರಭದ್ರ ನಾಯಕರಿಂದ ಯಕ್ಷಗಾನ ಪ್ರದರ್ಶನದೊಂದಿಗೆ ಮುಕ್ತಾಯವಾಯ್ತು. ಕೇಂದ್ರದ ಗುರು ಶ್ರೀ ವೀರಭದ್ರ ನಾಯಕರು ಧನ್ಯವಾದಗಳನ್ನರ್ಪಿಸಿದರು.

●●

(ಮೂರನೇ ಪುಟದಿಂದ)

ಕನ್ನಡದಲ್ಲಿ ಬಂದ ಅರ್ಜಿಗಳಿಗೆ ಆದ್ಯತೆ ನೀಡ ಬೇಕು; ಅಧಿಕಾರ ಮುದ್ರೆ ಮತ್ತು ಪತ್ರನಾಮೆಗಳು ಕನ್ನಡದಲ್ಲಿರಬೇಕು, ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು. ಕನ್ನಡ ಪದವೀಧರರಿಗೆ ಸರಕಾರಿ ನೌಕರಿಗಳಲ್ಲಿ ಅಗ್ರ ಪ್ರಾಶಸ್ತ್ಯವಿರಬೇಕು. ಅಧಿಕಾರಿಗಳು ಕನ್ನಡದಲ್ಲಿ ಹೆಸ್ತಾಕ್ಷರ ಹಾಕಬೇಕು; ಸಾರ್ವಜನಿಕರೊಡನೆ ಕನ್ನಡದಲ್ಲಿ ಮಾತಾಡಬೇಕು'....ಹೀಗೆ ಹೇಳುವಾರು. ನೀರಲ್ಲಿ ಮುಳುಗಿದವನು ತನ್ನ ಜೀವ ರಕ್ಷಣೆಗಾಗಿ ಈಜುಬಾರದೆ ಹೋದರೂ ಕೈಕಾಲು ಬಡಿಯುತ್ತಾನೆ. ಈಜು ಬಂದವನೂ ಮುಳುಗುವುದುಂಟು. ನೀರಲ್ಲಿ ಮುಳುಗಿ ನಾಯಿ ಬಹುದೆಂಬ ಅಂಜುಗುಳಿಗಳು ನೀರಿಗಿಳಿಯದೇ ಇದ್ದರೆ, ದೂಳಲ್ಲಿ ಹೊರಳಾಡಬಹುದಷ್ಟೇ; ಈಜಲಾರರು. ಈಸಬೇಕು ಈಸಿ ಜೈಸಬೇಕು ಗೊತ್ತುನಳಿ. ಸಲಹೆಗಳನ್ನೆಲ್ಲ ಬದಿಗಿಟ್ಟು ಸರಕಾರ ಕನ್ನಡವೇ ಆಡಳಿತ ಭಾಷೆಯೆಂದು ಘೋಷಿಸಬೇಕು ಮಗು ಹುಟ್ಟಿತೆಂದರೆ, ತೊಟ್ಟಿಲೂ ಬರುತ್ತದೆ, ಕುಲಾವಿಯೂ ಬರುತ್ತದೆ. ತೊಟ್ಟಿಲು ಕುಲಾವಿಯಿಲ್ಲದೆ ಮಗು ಬರಬಾರದು ಎಂದರೆ, ಮಗು ಬರುವುದು ನಿಲ್ಲುವುದಿಲ್ಲ; ತೊಟ್ಟಿಲು ಕುಲಾವಿಗಳನ್ನೂ ಅದೆಂದೂ ಕಾಯುವುದಿಲ್ಲ

●●

ನೋಟೀಸು

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 100/71

K. ವೆಂಕಟ್ರಾವ್— ವಾದಿ

ಮತ್ತು

S. ರಾಮದಾಸ ಭಟ್ಟ— ಪ್ರತಿವಾದಿ

ಇವರೊಳಗೆ

ಉಡುಪಿ ಪಾಲೂತು ಕಡೆಕಾರು ಗ್ರಾಮದಲ್ಲಿರುವ ಆಸ್ತಿಯ ವಾಸ್ತವ್ಯದಲ್ಲಿ ವಾಸಿಸುತ್ತಿದ್ದ, ಕುಂಜಾರುಗಿರಿ ದೇವಸ್ಥಾನದಲ್ಲಿ ಮೆನೇಜರ ವೃತ್ತಿಯಲ್ಲಿರುವ S. ಲಕ್ಷ್ಮೀನಾರಾಯಣ ಭಟ್ಟರ ಮಗ S. ರಾಮದಾಸ್ ಭಟ್ಟ ಇವರಿಗೆ ಈ ಮೂಲಕ ತಿಳಿಸುವುದೇನೆಂದರೆ:

ವಾದಿಯು ಪ್ಲೈಂಟು ನಿಮ್ಮತ್ತಿ ಕೇಳಿ ದಾಖ್ಲು ಮಾಡಿರುವ ಮೇರೆ ಹೇಳಿದ ನ್ಯಾಯ್ಯವು ತಾ. 29-11-71ಕ್ಕೆ ನಿಮ್ಮ ನೋಟೀಸು ಬಗ್ಗೆ ಇಟ್ಟ ರುತ್ತದೆ. ಆದುದರಿಂದ ನೀವು ಆ ದಿನ ಹಗಲು ಗಂಟೆ 11ಕ್ಕೆ ಸರಿಯಾಗಿ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜ್ರಾಗಿ ನಿಮ್ಮದೇನಾದರೂ ಉದಾಹರಣೆ ಇದ್ದರೆ ಹಾಜ್ರು ಮಾಡತಕ್ಕದ್ದು ಎಂತ ಈ ಮೂಲಕ ತಿಳಿಸೋಣಾಗಿದೆ.

H. S. Kedlaya
Advocate for Plaintiff

ಉಡುಪಿ, 4.11.71.

ಪ್ರಕಟಣೆ

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 136/65 Ex. C. 2/1971

ಕೆ. ಸದಾಶಿವ ರಾವ್ —ಅರ್ಜಿದಾರ

ಮತ್ತು

1. ಸುಧಾನಿಧಿರಾವ್, 2. ವಿದ್ಯಾನಿಧಿರಾವ್ 3. ರಾಮರಾವ್, 4. ಲಕ್ಷ್ಮಣ ರಾವ್—ಲಕ್ಷ್ಮೀನಿಧಿರಾಯರ ಮಕ್ಕಳು.

ಉಡ್ಪಿ ಶಹರ ಬ್ರಹ್ಮಗಿರಿ —ಯೆದ್ರಿರು

ಇವರೊಳಗೆ

ಸದ್ರಿ ಯೆದ್ರಿರಿಗೆ ಯಾ ಮೂಲ್ಕ ತಿಳಿಸುವ ದೇನೆಂದ್ರೆ—

ಮೇಲ್ಕಂಡ ಆಮಲ್ದಾರಿಯಲ್ಲಿ ಜಪ್ತಾದ ಸ್ಥಿರಾಸ್ತಿ ನಿಕ್ರಯದ ಕುರಿತು ಹಾಜ್ರು ಪಡ್ಚಿದ ಯೇಲಂ ಇಸ್ಯಾರು ಪರ್ತ ನಿರ್ಣಯಿಸುವರೆ ತಾ. 30-11-71ಕ್ಕೆ ಯಿಡೋಣಾಗಿಯದೆ. ಆ ಕುರಿತು ಯೆದ್ರಿರಿಗೆ ಆಕ್ಷೇಪ ಹೇಳತಕ್ಕದ್ದು ಯನ್ರೆ ಸದ್ರಿ ದಿವ್ಸ ಪೂರ್ವಾಹ್ನ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ತಿಳಿಸೋಣಾಗಿಯದೆ.

V. R. Kidyoor
Advocate for Petitioners

ಉಡ್ಪಿ, 5—11—71

ಪ್ರಕಟಣೆ

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 107/69

ಉಡ್ಪಿ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀವರ ತೀರ್ಥ ಸ್ವಾಮಿರು —ವಾದಿರು

ಮತ್ತು

ಉಪ್ಪಿ ಟೊಪೊ ಕೂಡಾ —ಪ್ರತಿವಾದಿರು

ಇವರೊಳಗೆ—

ಸಪ್ಟಮೆಂಟಲ್ 3ನೇ ಪ್ರತಿವಾದಿ—ಕ್ಲೆಮೆಂಟ ಟೊಪೊ, ರೆಗೋರಿ ಟೊಪೊ ಮಗ, ಉಡ್ಪಿ ತಾಲ್ಲೂ ಕಟ್ಟಿಂಗೆರೆ ಗ್ರಾಮ – ಇವರಿಗೆ ತಿಳಿಸುವದೇನಂದರೆ—

ಮೇಲ್ಕಂಡ ದಾವೆಯ 3ನೇ ಪ್ರತಿವಾದಿ ಮೃತ ರೆಗೋರಿ ಟೊಪೊ ವಾಲ್ತಿವಾರರಾಗಿ ನಿಮ್ಮನ್ನು ಕೂಡಾ ಕಕ್ಷಿಯಲ್ಲಿ ಸೇರಿಸ ಬೇಕಾಗಿಯೂ ವ್ಯಾದೆ ವಳಗೆ ಸದ್ರಿ ಅರ್ಜಿ ಕೊಡದೆಯಿದ್ದ ತಪ್ಪು ಕ್ಷಮಿಸಬೇಕಾಗಿ ಸಹಾ ಅರ್ಜಿದಾರ್ರು ಕೊಟ್ಟ ಅರ್ಜಿಗಳು ತಾ. 25-11-71ಕ್ಕೆ ಯಿಟ್ಟಿದೆ. ಆ ಕುರಿತು ಆಕ್ಷೇಪ ಹೇಳತಕ್ಕದ್ದುಯೆದ್ರೆ ಸದ್ರಿ ದಿವ್ಸ ಪೂರ್ವಾಹ್ನ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂತ ತಿಳಿಸೋಣಾಗಿಯದೆ.

V. R. Kidyoor.
Advocate for Plaintiff

ಉಡ್ಪಿ, 5-11-71.

ನಿಮ್ಮ ಅಮೂಲ್ಯ ವಸ್ತು, ಒಡವೆಗಳನ್ನು ಸಂರಕ್ಷಿಸಲು ಕಾವಲು ನಾಯಿ ಬೇಕೇ?

ಮನೆಪೆಟ್ಟಿಗೆಯಲ್ಲಿರಿಸಿವ ನಿಮ್ಮ ಬೆಲೆಬಾಳುವ ವಸ್ತು, ಒಡವೆಗಳು ಸುಭದ್ರವಾಗಿರಲು ಸಾಧ್ಯವೇ?.... ಇಲ್ಲ. ಸಿಂಡಿಕೇಟ್ ಬ್ಯಾಂಕಿನ ಸೇಫ್ ಡಿಪಾಸಿಟ್ ಲಾಕರ್‌ಗಳು ಕಾವಲು ನಾಯಿಯಂತೆ ನಿಮ್ಮ ಅಮೂಲ್ಯ ವಸ್ತುಗಳನ್ನು ಸದಾ ಸುರಕ್ಷಿತವಾಗಿಯೂ ಸಂರಕ್ಷಿತವಾಗಿಯೂ ಇರಿಸುತ್ತದೆ.

ಬ್ಯಾಂಕು ತನ್ನ 80ಕ್ಕಿಂತಲೂ ಹೆಚ್ಚಿನ ಶಾಖೆಗಳಲ್ಲಿ ಸೇಫ್ ಡಿಪಾಸಿಟ್ ಲಾಕರ್‌ಗಳ ಸೌಲಭ್ಯವನ್ನು ಒದಗಿಸಿದೆ. ಸಿಂಡಿಕೇಟ್ ಬ್ಯಾಂಕಿನ ಸೇಫ್ ಡಿಪಾಸಿಟ್ ಲಾಕರ್‌ಗಳ ಪ್ರಯೋಜನವನ್ನು ಪಡೆದು ನಿಮ್ಮ ವಸ್ತು, ಒಡವೆ ಮತ್ತು ಅಮೂಲ್ಯ ದಾಖಲೆಗಳಿಗೆ ರಕ್ಷಣೆ ಹಾಗೂ ಭದ್ರತೆಯನ್ನು ನೀಡಿರಿ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಫ್ ಡಿಪಾಸಿಟ್ ಲಾಕರ್ ಸೌಲಭ್ಯವನ್ನು ಹೊಂದಿರುವ ನಮ್ಮ ಬ್ಯಾಂಕಿನ ಶಾಖೆಗಳು:

ಕುಂದಾಪುರ ● ಮಣಿಪಾಲ ● ಮಂಗಳೂರು — ಹಂಪನಕಟ್ಟಾ

ಪುತ್ತೂರು ● ಉಡುಪಿ — ಲೋಕಲ್ ಆಫೀಸು

ದಕ್ಷ, ಸ್ವಾಮಾಣಿಕ ಬ್ಯಾಂಕಿಂಗ್ ಸೇವೆಗೆ

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ: ಮಣಿಪಾಲ

ಕೆ. ಕೆ. ಪೈ ಕಸ್ಟೋಡಿಯನ್

ದಯವಾಡಿ
ನಿಮ್ಮ ಬಾಕಿ ಚಂದಾ ಹಣವನ್ನು ಕಳುಹಿಸಿರಿ

'ಗಾಂಧಿಜಿಯ ಕೊಲೆ'

(ತರುವಾಯ ಮುಂದುವರಿದ)

ಆತ ಹಗುರವಾಗಿ ಕಾಣುತ್ತಿದ್ದಾನೆ. ನನಗೀಗ ಬೇರೆ ಮಾರ್ಗವಿಲ್ಲ. ಇದು ನನ್ನ ಬಳಿಯಿರುವ ಕೊನೆಯ ಅಸ್ತ್ರ. ಪರಿಸ್ಥಿತಿ ಸುಧಾರಿಸುವವರೆಗೂ ಉಪವಾಸವಿರುತ್ತೇನೆ'

ಹೇಳಿದಂತೆ ಜನವರಿ 13ರಂದು ಗಾಂಧಿಜಿ ಉಪವಾಸ ಪ್ರಾರಂಭಿಸಿದರು. ಈ ಉಪವಾಸ ಅನೇಕರನ್ನು ಪೇಚಿನಲ್ಲಿ ಹಾಕಿತು. ಈ ನಿರ್ಧಾರದಿಂದ ಅವರನ್ನು ವಿಮುಖಗೊಳಿಸುವ ಪ್ರಯತ್ನ ವಿಫಲವಾಯಿತು. ತಮ್ಮ ಹಟವನ್ನು ಗಾಂಧಿಜಿ ಬಿಡಲಿಲ್ಲ. ಪಂಡಿತ ನೆಹರು ಸರದಾರ ಪಟೇಲ್ ಅವರ ಮನವೊಲಿಸಲು ಯತ್ನಿಸಿದರು. ಗಾಂಧಿಜಿ ಜಗ್ಗಲಿಲ್ಲ. ಹಿಡಿದ ಪಟ್ಟು ಬಿಡಲಿಲ್ಲ. ಉಪವಾಸಕ್ಕೆ ಬಲವತ್ತರವಾದ ಕಾರಣಗಳಿಲ್ಲವೆಂದು ಮಾರುದಿನ ಪಟೇಲರು ಉದ್ಗರಿಸಿದರು. ಆದಕ್ಕೆ ಗಾಂಧಿಜಿಯ ಪ್ರತಿಕ್ರಿಯೆಯೂ ಅಷ್ಟೇ ಮೊನಚಾದ್ದು. 'ನನ್ನ ಕಣ್ಣಾ ಕಿವಿಗಳು ಸರಿಯಾಗಿವೆ. ಕಣ್ಣು ಕಾಣದವನ್ನು, ಕಿವಿ ಕೇಳಿದ್ದನ್ನು ನಾನು ಹೇಗೆ ಅಲ್ಲಗಳೆಯಲಿ? ವಲ್ಲಭಭಾಯಿಯನ್ನು ಒಪ್ಪಿಸುವ ಶಕ್ತಿ ಮಾತ್ರ ನನ್ನಲ್ಲಿ ಉಳಿದಿಲ್ಲ.'

ಒಪ್ಪಿಕೊಂಡಂತೆ ಪಾಕಿಸ್ತಾನಕ್ಕೆ 55 ಕೋಟಿ ರೂಪಾಯಿಗಳನ್ನು ಒಪ್ಪಿಸಲು ಗಾಂಧಿಜಿ ಭಾರತ ಸರಕಾರದ ಮೇಲೆ ಒತ್ತಾಸೆ ಹಾಕಿದರು.

ಆದರೆ ಗಾಂಧಿಜಿಯ ಉಪವಾಸದಿಂದ ಫಲಿಸಿದ ಪರಿಣಾಮ ಆಗಲಿಲ್ಲ. ಅವರ ಹಿರಿಕನ ವೃತಕ್ಕೆ ತುಂಬು ಬೆಂಬಲಬರಲಿಲ್ಲ. ಅವರ ಆಸೆಯೊಯಿಗಳು ಅವರನ್ನು ಉಳಿಸಿದರು. ಉಳಿದವರು, ಬಗ್ಗು ಬಡೆಯಲು ಸಮಯವಿದೆಂದು ಉಪವಾಸ ಮಾಡಿದರು. ಅವರ ಜೀವಿತದ ಮೊದಲ ಉಪವಾಸ 1924ರಲ್ಲಿ ನಡೆಯಿತು. ಆದರೆ ಉದ್ದಿಶ್ಯ ಹಿಂದು-ಮುಸ್ಲಿಂ ಐಕ್ಯ ಸಾಧನೆ. ಆ ಅವಧಿಯಲ್ಲಿ ದೇಶಕ್ಕೆ ದೇಶ ಅವರ ಹಿಂದೆ ನಿಂತಿತು. ಆ ಧ್ಯೇಯದ ಸಫಲತೆಗೇ ಕೊನೆಯ ಉಪವಾಸ ಕೈಗೊಂಡರು. ಆದರೆ ಮೊದಲ ವೃತ ಸಫಲವಾಯಿತು. ಕೊನೆಯದು ವಿಫಲಗೊಂಡಿತು. ಮೂರಾಬಟ್ಟೆಯಾಗಿ ಹರಿದು ಹೋದ ಜನರ ಮನಸ್ಸು ಮುಚ್ಚುರಿಗೊಳ್ಳಲಿಲ್ಲ. ಬತ್ತಿ ಗರಿಕುತ್ತ ಬಂದಿತ್ತು. ತೈಲ ಮುಗಿಯುತ್ತ ಬಂದಿತ್ತು. ಅವರ ನೈತಿಕ ತೈಲವನ್ನು ಹೀರಿ ಬೆಳೆದ ಸೋದರುಗಳು, ಅವರಿಲ್ಲದೆ ಬೆಳಗ ಬಲ್ಲೆವು ಎಂದು ಭ್ರಮಿಸಿದುವು.

ಯಾರ ತಪಃಶಕ್ತಿಯ ಬೆಳಕಿನಲ್ಲಿ, ದೆಹಲಿಯ ಅಧಿಸತ್ತೆಯ ಮೆಟ್ಟಿಲುಗಳನ್ನು ಹಂತ, ಹಂತವಾಗಿ ಪತ್ತಿ ಬಂದರೋ, ಆ ಜನಕ್ಕೆ ಈ ಜ್ಯೋತಿ ಬೇಕಿರಲಿಲ್ಲ. ಗಾಂಧೀಜಿ ಯಾರಿಗೂ ಬೇಡವಾದರು.

(ಆಧಾರಿತ)

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ಸರದಲ್ಲಿ ದೊರೆಯುತ್ತವೆ.

ಪರ್ಸ್, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಕುರುಕ್ಷೇತ್ರ ಸಮರದ ಕಾಲ

ಭಾರತದ ಮಹಾಕಾವ್ಯಗಳ ಸಾಲಿನಲ್ಲಿ ಮೊದಲನೆಯದು ರಾಮಾಯಣ, ಎರಡನೆಯದು ಮಹಾಭಾರತ. ಈ ಮಹಾಭಾರತದಲ್ಲಿ ದಾಯಾದಿಗಳಾದ ಕೌರವ—ಪಾಂಡವರೊಳಗೆ ಕದನ ನಡೆಯಿತು. ಈ ಕುರುಕ್ಷೇತ್ರ ಯುದ್ಧ ಯಾವಾಗ ನಡೆಯಿತೆಂಬ ಕುರಿತು ಹಲವು ವಿದ್ವಜ್ಜನರು ಚರ್ಚಿಸಿದ್ದಾರೆ. [ಮಹಾಭಾರತ ಯುದ್ಧ ಮೂರು ಸಾವಿರ ವರುಷಗಳ ಈಚಿನದೆಂದು ಪಂಡಿತರ ವಾದ.

ಬಂಕಿಂಚಂದ್ರರ "ಕೃಷ್ಣ ಚರಿತ್ರೆ"ಯಲ್ಲಿ ಕುರುಕ್ಷೇತ್ರ ಯುದ್ಧ ಕ್ರಿ.ಪೂ 1430ರಲ್ಲಿ ಆಯಿತೆಂದು ಬರೆದಿದೆ. ಇವರ ಪ್ರಧಾನ ಅಧ್ಯಯ್ಯುಗಳಾದ ಪಾಂಡವರ ಜನ್ಮಲಗ್ನ, ಜನ್ಮರಾಸಿ, ತಿಥಿಗಳು ಆದಿ ಪರ್ವದ 117 ಅಧ್ಯಾಯದಲ್ಲಿವೆ. ನೀಲಕಂಠ ಋಷಿಯು ಬರೆದ ಮಹಾಭಾರತ ಟೀಕೆಯನ್ನು ಎತ್ತಿಕೊಂಡರೆ ಪಾಂಡವರು ಜನಿಸಿದುದು ಹಿಮಾಲಯದ ಶತಶೃಂಗಗಿರಿಯ ತಿಖರದಲ್ಲಿ. ಪಸ್ತಿನಾವತಿಯ ಧೃತರಾಷ್ಟ್ರಾದಿಗಳ ಬಳಿಗೆ ಅವರು ಹೋಗುವಾಗ ಶತಶೃಂಗಗಿರಿಯಲ್ಲೇ ಅವರಿಗೆ ಬ್ರಹ್ಮೋಪದೇಶವಾಗಿತ್ತು. ಆಗ ಹಿರಿಯನಾದ ಧರ್ಮಜನಿಗೆ ಹದಿನಾರು ವರ್ಷ ಪ್ರಾಯ. ಅವನಿಗಿಂತ ಒಂದು ವರ್ಷಕ್ಕೆ ಭೀಮ ಕಿರಿಯ. ಭೀಮನಿಗಿಂತ ಅರ್ಜುನ ಒಂದು ವರ್ಷಕ್ಕೆ ಜಿಕ್ಕವ. ನಮ ವಯಸ್ಸಾದ ನಕುಲ ಸಹದೇವರಿಗೆ 13 ವರ್ಷ ಪ್ರಾಯವಾಗಿತ್ತು.

ವೇದವ್ಯಾಸರು ಬರೆದ ಮಹಾಭಾರತದಲ್ಲಿ ಪಾಂಡವರು ಕೌರವರೊಂದಿಗೆ ಅನಂತರ 13 ವರ್ಷವಿದ್ದರು; ಜೂಜಾಡಿದಾಗ ಯುಧಿಷ್ಠಿರನಿಗೆ 59 ವರ್ಷ ವಯಸ್ಸು. ಜೂಜಾಡುವ ಮೊದಲು ದ್ರುಪದನಲ್ಲಿ 1 ವರ್ಷ 23 ವರ್ಷ ಇಂದ್ರಪ್ರಸ್ಥದಲ್ಲಿ. ಆರು-ಆರು ತಿಂಗಳ ಕಾಲ ಆರಗಿನ ಮನೆ ಮತ್ತು ಏಕಚಕ್ರಪುರದಲ್ಲಿ, ಪುನಃ ಐದು ವರ್ಷ ಪಸ್ತಿನಾವತಿಯಲ್ಲಿದ್ದ. ಅನಂತರ ಜೂಜಾಟ ನಡೆಯಿತು. ತರುವಾಯ ಹನ್ನೆರಡು ವರ್ಷ ವನವಾಸ. ಒಂದು ವರ್ಷ ಅಜ್ಞಾತ ವಾಸದಲ್ಲಿ ಕಳೆದರು.

'ಅಂತರೇ ಚೈವ ಸಂಪ್ರಾಪ್ತೇ ಕಲಿ ದ್ವಾಪರಯೋರ ಭೂತ್| ಸಮಂತ ವಂಚತೇ ಯುದ್ಧಂ ಕುರು ಪಾಂಡವ ಸೇನಯೋಃ' (ಮಹಾಭಾರತ. ಆದಿ. ಅ. ೨)

ತರುವಾಯ ದ್ವಾಪರ ಯುಗ ಮತ್ತು ಕಲಿಯುಗದ ಸಂಧ್ಯಕಾಲದಲ್ಲಿ 18 ದಿನಗಳ ಕುರುಕ್ಷೇತ್ರ ನಡೆಯಿತೆಂದು ಆದಿ ಪರ್ವದಲ್ಲಿದೆ. ಕಲಿಪೂರ್ವ ವರ್ಷ 72ರ ಏಳನೆಯ ತಿಂಗಳ ಇಪ್ಪತ್ತೊಂಭತ್ತನೆಯ ದಿನ ಜ್ಯೇಷ್ಠ ಪೌರ್ಣಮಿಯ 16 ಘಳಿಗೆಯಲ್ಲಿ ಯುಧಿಷ್ಠಿರ ಜನಿಸಿದ. 71ನೆಯ ವರ್ಷ 10ನೆಯ ತಿಂಗಳ 2ನೆಯ ದಿನ ಜ್ಯೈತ್ರ ತ್ರಯೋದಶಿಯಂದು 16 ಘಳಿಗೆಯಲ್ಲಿ ಭೀಮನೂ 70ನೆಯ ವರ್ಷ ಹತ್ತನೆಯ ತಿಂಗಳ 29ನೆಯ ದಿನ ಪಾಲ್ಗುಣ 21 ಘಳಿಗೆಯಲ್ಲಿ ಅರ್ಜುನನೂ ತರುವಾಯ ನಕುಲ ಸಹದೇವರೂ ಹುಟ್ಟಿದ್ದರು. ಅವರ ಹುಟ್ಟಿದ ಘಳಿಗೆಗಳು ಮಹಾಭಾರತದಲ್ಲಿಲ್ಲ. ಅಂದರೆ ದ್ವಾಪರಾಯುಗದ ಕೊನೆಯ ದಿನದಲ್ಲಿ ಕುರುಕ್ಷೇತ್ರ ಯುದ್ಧ ಮುಗಿಯಿತು.

ಕುರುಕ್ಷೇತ್ರ ಯುದ್ಧದ ತರುವಾಯ ಪಾಂಡವರು 36 ವರ್ಷ ರಾಜ್ಯವಾಳಿದ್ದರು ಈ ಅನಧಿಯಲ್ಲಿ ಪರೀಕ್ಷಿದ್ರಾಜನಿಗೆ 35 ವರ್ಷ 6 ತಿಂಗಳು ವಯಸ್ಸಾಗಿತ್ತು. ಪಾಂಡವರು ಕಲಿಯುಗದಲ್ಲೇ ಈ 35 ವರ್ಷ ರಾಜ್ಯವಾಳಿದ್ದಾರೆಂದರೆ ಈಗ ಕಲಿಗತಾಬ್ದ. 185.2591 ದಿನ ಸಂದಿದೆ. ಅಂದರೆ 3101 ವರ್ಷ ಕ್ರೈಸ್ತಾಬ್ದದ ಹಿಂದೆ ಈ ಕುರುಕ್ಷೇತ್ರ ಯುದ್ಧ ನಡೆಯಿತೆಂಬ ಊಹನೆಯಿದೆ. ಆದರೆ ಕೋಲ್ ಬ್ರುಕ್, ಎಲ್ಫಿನ್‌ಸ್ಟನ್, ವಿಲ್ಸನ್, ಬುಕಾನನ್ ಅವರು ಕ್ರಿಸ್ತ ಪೂರ್ವ 1300 ರಿಂದ 1400ರೊಳಗೆ ಕುರುಕ್ಷೇತ್ರ ಯುದ್ಧವಾಯಿತೆಂದು ಅಭಿಪ್ರಾಯ ಪಡುತ್ತಾರೆ

ಪ್ರಾಟ್‌ರೆಂಬ ಸಂಶೋಧಕರು ಕ್ರಿಸ್ತ ಪೂರ್ವ 1200ರಲ್ಲಿ ಈ ಯುದ್ಧವಾಯಿತೆಂದು ಹೇಳಿದರೆ ರಮೇಶಚಂದ್ರರೆಂಬ ಪಂಡಿತರು 1250ರಲ್ಲಿ ನಡೆಯಿತೆನ್ನುವರು. ಮಹಾಭಾರತದ ಆಧಾರವನ್ನೆತ್ತಿಕೊಂಡು ಕಲಿಗತಾಬ್ದದ 3072 ವರ್ಷದಿಂದ 1971ನ್ನು ಕಳೆದರೆ ಕಿಸ್ತಪೂರ್ವ 3101ರಲ್ಲಿ ಈ ಯುದ್ಧವಾಯಿತೆನ್ನಬಹುದು. ಆದರೆ ಕುರುಕ್ಷೇತ್ರ ಯುದ್ಧದ ಬಳಿಕ ಎಷ್ಟು ಕಲಿಯುಗ ಜರುಗಿದೆ? ಭಾಸ್ಕರಾಚಾರ್ಯರೂ 3179 ವರ್ಷ ಹಿಂದೆ ಈ ಕದನ ನಡೆಯಿತೆಂದು ಅಭಿಪ್ರಾಯ ಪಡುತ್ತಾರೆ. ಈ ಯುದ್ಧ 3735 ವರ್ಷ, 556 ಶತಾಬ್ದಗಳ ಮೊದಲು ನಡೆಯಿತೆಂದು ಚಾಲುಕ್ಯ ವಂಶೀಯ ಎರತನೆಯ ಪುಲಕೇಶಿರಾಜ ಗುಜರಾತಿನ ಲ್ಲಿ ನೆಟ್ಟ ಶಿಲಾಶಾಸನದಲ್ಲಿದೆ.

ಪ್ರಧಾನ್, ಪಾರ್ಜಿತರ್ ಮೊದಲಾದವರು ನಿರ್ಧರಿಸಿದಂತೆ ಶ್ರೀ ರಾಮನ ಮೂವತ್ತನೆಯ ತಲೆಮಾರಿನಲ್ಲಿ ಹುಟ್ಟಿದವನೇ ಕೃಷ್ಣ. ಒಂದೊಂದೂ ತಲೆಮಾರಿನ ಅಂತರ ವರುಷ ಇಪ್ಪತ್ತು. ಅಂದರೆ ರಾಮನಿಗಿಂತ ಆರುನೂರು ವರ್ಷ ಅನಂತರದವ ಕೃಷ್ಣ. ಕ್ರಿಸ್ತ ಪೂರ್ವ 1550 ರಾಮನ ಕಾಲ. 950ರಲ್ಲಿ ಕುರುಕ್ಷೇತ್ರ ಯುದ್ಧವಾಯಿತೆಂದು ಪಾರ್ಜಿತರ್ ಬರೆದಿದ್ದಾರೆ. ಕ್ರಿಸ್ತ ಪೂರ್ವ 3048ರಲ್ಲಿ ಈ ಯುದ್ಧವಾದುದೆಂದು ಮಕರಂದಕಾರರ ಸಿದ್ಧಾಂತ ಶಿರೋಮಣಿಯಲ್ಲಿದೆ.

ಭರತ ಸಾವಿತ್ರಿಯೆಂಬ ಪರಮ ಪವಿತ್ರ ಗ್ರಂಥದಲ್ಲಿ ಆಮೂಲಾಗ್ರವಾಗಿಯೆಂದು ಶಲ, ಪಾಗೂ ದುರ್ಯೋಧನರ ವಧೆ ಆಯಿತೆಂದೂ ಪೇಸುಂತ ಋತುವಿನ ಶುಕ್ಲ ಪಕ್ಷದ ತ್ರಯೋದಶಿ ತಿಥಿ, ಭರಣಿ ತಿಥಿಯಲ್ಲಿ ಯುದ್ಧ ಆರಂಭವಾದುದೆಂದೂ ಹೇಳಿದೆ. ಪಾತ್ಯದಂದು ಧರ್ಮರಾಯನಿಗೆ ಪಟ್ಟಾಭಿಷೇಕವಾಯಿತು. ಅಂದಿನಿಂದ ಯುಧಿಷ್ಠಿರ ಶತಾಬ್ದ ವ್ಯಾರಂಭ. ವೈಶಾಖ ಶುಕ್ಲ ತದಿಗೆಯಲ್ಲಿ ಕೃತ. ಕಾರ್ತಿಕ ಶುಕ್ಲ ನವಮಿಯಲ್ಲಿ ತ್ರೇತ, ಶ್ರಾವಣ ಕೃಷ್ಣ ತ್ರಯೋದಶಿಯಲ್ಲಿ ದ್ವಾಪರಾಯುಗ ಆರಂಭವಾದಂತೆಯೇ ಮುಂದೆ ಒಂದೂವರೆ ತಿಂಗಳನ ಬಳಿಕ ಮಾಘ ಶುದ್ಧ ಹುಣ್ಣಿಮೆಯಿಂದ ಯುಧಿಷ್ಠಿರ ಶಕೆಯೋದಿಗೆ ಕಲಿಯುಗವೂ ಪ್ರಾರಂಭವಾಯಿತು.

ಮಹಾಭಾರತ ಪಂಚಮ ವೇದವೆನಿಸಿದೆ ಆರನೆಯ ಶತಾಬ್ದದಲ್ಲಿ ಅದನ್ನು ನಿತ್ಯ ಪಾರಾಯಣೆ ಮಾಡಲು ರಾಜನೊಬ್ಬ ಮಾಡಿದ ಶಾಸನ ಟಪೆಟ್ಟಿನಲ್ಲಿದೆ. ಮೂಲದಲ್ಲಿ "ಜಯ" ಎಂಬ ಮಹಾಭಾರತವಿದ್ದು, ಆದರಲ್ಲಿ ಗೆಲುವು ಕೌರವರವಾಗಿತ್ತೆಂದೂ ಅದನ್ನು ವೈಷ್ಣವರು ಬದಲಾಯಿಸಿದರೆಂದೂ ಆಂಗ್ಲರು ಹೇಳಿದ್ದಾರೆ.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

ಫೋನ್: 77

Please Visit

HOTEL SHIVAPRASAD

High Class Boarding, Lodging & Restaurant

KUNDAPUR, S. K.

ಶ್ರೀ ಮೃತಾಂಜನ

● ತಲೆ ಸಿಡಿತ ● ಪೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮಂಗಳೂರು-4

NAVAYUGA 11-11-1971

Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಜೀವನ ಚರಿತ್ರೆ:-

ಜಗಜ್ಯೋತಿ ಬಸವೇಶ್ವರರು

ಸಂಗ್ರಾಹಕರು:—ಶ್ರೀ ಎನ್. ಡಿ. ಶೆಟ್ಟಿ, ಮೂಲೂರು

ಕರ್ನಾಟಕದ ಇತಿಹಾಸದಲ್ಲಿ ಬಸವೇಶ್ವರರ ಹೆಸರು ಚಿರಂಜೀವಿಯೂಗಿದೆ. ಅವರು ಕ್ರಿ. ಶ. 12ನೇ ಶತಮಾಪದಲ್ಲಿ ಕನ್ನಡಿಗರ ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯ ಜೀವನದಲ್ಲಿ ಒಂದು ಮಹಾಕ್ರಾಂತಿಯನ್ನೇ ನಡೆಸಿದರು. ಅವರು ಸಮಾಜೋದ್ಧಾರ ಕಾರ್ಯಗಳನ್ನು ಕೈಕೊಂಡು ಜನತೆಯಲ್ಲಿದ್ದ ಮೂಢ ನಂಬಿಕೆಗಳನ್ನು ಹೋಗಲಾಡಿಸಿ ಅವರಿಗೆ ವಿವೇಕದ ಬೆಳಕನ್ನು ನೀಡಿದರು.

ಜನನ ಮತ್ತು ವಿದ್ಯಾಭ್ಯಾಸ

ಬಸವೇಶ್ವರರ ಜನನವು ವಿಜಾಪುರದ ಬಾಗೇವಾಡಿಯಲ್ಲಿ ಆಯಿತು. ಮಾದರಸ, ಮಾದಲಾಂಬಿಕೆಯರು ಅವರ ತಂದೆ ತಾಯಿಗಳು. ಬಾಲ್ಯದಿಂದಲೂ ಬಸವೇಶ್ವರರು ಶಿವಭಕ್ತರು. ತಂದೆ ತಾಯಿಗಳು ಮಗನಿಗೆ ಉಪನಯನವನ್ನು ಮಾಡಬೇಕೆಂದು ಹೇಳಿದಾಗ ಆ ಕಾರ್ಯ ತನಗೆ ಹಿತವಲ್ಲ ವೆಂದು ಹೇಳಿ ಬಸವೇಶ್ವರರು ಮನೆಯಿಂದ ಹೊರಬಿದ್ದು ಕೂಡಲ ಸಂಗಮ ಕ್ಷೇತ್ರಕ್ಕೆ ತೆರಳಿದರು. ಅಲ್ಲಿ "ಜಾತವೇದ" ಎಂಬ ಮುನಿಗಳಿಂದ ವಿದ್ಯಾಭ್ಯಾಸವನ್ನು ಪಡೆದು ಗಣಿತ, ಸಂಗೀತ ಶಾಸ್ತ್ರ, ವ್ಯಾಕರಣ ಮತ್ತು ಸಾಹಿತ್ಯ ಇವುಗಳಲ್ಲಿ ಪರಿಪೂರ್ಣವಾದ ಪಾಂಡಿತ್ಯವನ್ನು ಸಂಪಾದಿಸಿದರು.

ವೈವಾಹಿಕ ಹಾಗೂ ರಾಜಕೀಯ ಜೀವನ

ಜಾತವೇದರಿಂದ ವಿದ್ಯಾಭ್ಯಾಸವನ್ನು ಪಡೆದ ಬಳಿಕ ಅವರು ತನ್ನ ಸೋದರ ಮಾವ ಹಾಗೂ ಕಲ್ಯಾಣದ್ದ ಬಿಜ್ಜಳ ರಾಜನ ಮಂತ್ರಿಯಾಗಿದ್ದ ಬಲದೇವನ ಮಗಳಾದ ಗಂಗಾಂಬಿಕೆಯನ್ನು ವಿವಾಹನಾಗಿ ಗೃಹಸ್ಥ ಜೀವನ ನಡೆಸಿದರು. ಆನಂತರ ಅವರು ಕೂಡಲ ಸಂಗಮವನ್ನು ಬಿಟ್ಟು ಕಲ್ಯಾಣಕ್ಕೆ ಬಂದು ನೆಲೆಸಿದರು. ಕಲ್ಯಾಣವು ಬಿಜ್ಜಳನ ರಾಜಧಾನಿಯಾಗಿದ್ದಿತು.

ಬಸವೇಶ್ವರರು ಬಿಜ್ಜಳನ ಆಸ್ಥಾನದಲ್ಲಿ ಕರಣಿಕ ಕೆಲಸವನ್ನು ಪಡೆದರು ಕಾಯಕವೇ ಕೈಲಾಸ ಎಂಬ ತತ್ವವನ್ನು ಜನತೆಗೆ ಉಪದೇಶಿಸಿದರು. ಅವರು ನಿರ್ಮಲ ಭಕ್ತಿಗೆ ತುಂಬಾ ಪ್ರಾಧಾನ್ಯತೆಯನ್ನು ಕೊಡುತ್ತಿದ್ದರು. ಜಾತೀಯತೆ, ಅಪ್ಪೃಶ್ಯತೆ ಮೊದಲಾದುವುಗಳನ್ನು ಪ್ರತಿಭಟಿಸಿ ಸ್ವತಂತ್ರ ಜೀವನ, ಧರ್ಮ ನೀತಿ ಹಾಗೂ ಸಮತಾ ಭಾವನೆಗಳನ್ನು ಉಪದೇಶಿಸಿದರು. ಶ್ರದ್ಧೆ, ಭಕ್ತಿ, ವೈರಾಗ್ಯ ಹಾಗೂ ನೀತಿ ಬೋಧನೆಗಳನ್ನು ಬೋಧಿಸುತ್ತಾ ಅಂತರಂಗ ಮತ್ತು ಬಹಿರಂಗ ಶುದ್ಧಿ, ಶೀಲವಂತ ಜೀವನ, ನಡೆನುಡಿಗಳಲ್ಲಿ ವಿನಯ ಮುಂತಾದ ಒಳ್ಳೆಯ ಗುಣಗಳಿಂದ ಕೈವಲ್ಯವನ್ನು ಸಾಧಿಸಬಹುದು ಎಂದು ಹೇಳಿದರು. ದಯೆಯೇ ಧರ್ಮವಿದ ಮೂಲ, ಆಚಾರವೇ ಸ್ವರ್ಗ ಅನಾಚಾರವೇ ನರಕ, ಸತ್ಯ ನುಡಿಯುವುದೇ ದೇವಲೋಕ ಇತ್ಯಾದಿ ನುಡಿಮುತ್ತುಗಳಿಂದ ಬಸವೇಶ್ವರರ ಶ್ರೇಷ್ಠತೆಯನ್ನು ಕಂಡುಕೊಳ್ಳಬಹುದು.

ಅನುಭವ ಮಂಟಪ ಮತ್ತು ಸಮಾಜಕ್ರಾಂತಿ

ಬಸವೇಶ್ವರರು ಸಮಾಜೋದ್ಧಾರಕ್ಕಾಗಿ ತುಂಬಾ ಶ್ರಮಿಸಿದ್ದಾರೆ. ಅವರು ಜಲಸಾಮಾನ್ಯರು ಶಿವಶರಣರನ್ನು ಒಂದುಗೂಡಿಸಿ "ಅನುಭವ ಮಂಟಪ" ಎಂಬ ಧಾರ್ಮಿಕ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಅದರ ಉದ್ದೇಶ್ಯ ಆ ಕಾಲದಲ್ಲಿ ಸಮಾಜದಲ್ಲಿ ಹರಡಿರುವ ಆಧ್ಯಾತ್ಮಿಕ, ನೈತಿಕ, ಧಾರ್ಮಿಕ ಹಾಗೂ ಸಾಮಾಜಿಕ ವಿಷಯಗಳನ್ನು ವಿಚಾರ ಮಾಡಿ ಚರ್ಚಿಸುವುದು. ಅಲ್ಲದೆ ವೀರಶೈವ ಮತದ ತತ್ವಗಳನ್ನು ವಿಮರ್ಶಿಸಿ ಜ್ಞಾನ ಪ್ರಸಾರ ಮಾಡುವುದು. ಈ ಸಂಸ್ಥೆಯಲ್ಲಿ ಅಲ್ಲಮಪ್ರಭು ಮುಂತಾದ ಶಿವಶರಣರೂ, ಅಕ್ಕ ಮಹಾದೇವಿ ಮುಂತಾದ ಶರಣೆಯರೂ ಇದ್ದರು.

ಆಗ ಸಮಾಜದಲ್ಲಿ ಅಸ್ಪೃಶ್ಯತೆ ಬಹಳ ವಾಗಿದ್ದಿತು. ಅದನ್ನು ಹೋಗಲಾಡಿಸಲು ಬಸವೇಶ್ವರರು ತುಂಬಾ ಪ್ರಯತ್ನಪಟ್ಟರು. ಜಾತಿ ಬೇಧಗಳನ್ನು ಖಂಡಿಸಿದರು. ಆ ಹಿಂಸೆಯನ್ನು ಸಾರಿ ದಯೆಯ ಮಹಿಮೆಯನ್ನು ಪ್ರಚಾರ ಪಡಿಸಿದರು. ಅವರ ಸಮಾಜವು ಜಾತ್ಯತೀತ ಹಾಗೂ ಸಮಾನತೆಯಿಂದ ಕೂಡಿತ್ತು.

ಬಸವೇಶ್ವರರ ಉಪದೇಶ

ಬಸವೇಶ್ವರರು ದೇವರೊಬ್ಬನೇ, ಯಜ್ಞಯಾಗಾದಿಗಳಿಂದ ಮುಕ್ತಿದೊರೆಯದು. ಕಾಯಕವೇ ಕೈಲಾಸ ಎಂಬ ತತ್ವವನ್ನು ಜನತೆಗೆ ಉಪದೇಶಿಸಿದರು. ಅವರು ನಿರ್ಮಲ ಭಕ್ತಿಗೆ ತುಂಬಾ ಪ್ರಾಧಾನ್ಯತೆಯನ್ನು ಕೊಡುತ್ತಿದ್ದರು. ಜಾತೀಯತೆ, ಅಪ್ಪೃಶ್ಯತೆ ಮೊದಲಾದುವುಗಳನ್ನು ಪ್ರತಿಭಟಿಸಿ ಸ್ವತಂತ್ರ ಜೀವನ, ಧರ್ಮ ನೀತಿ ಹಾಗೂ ಸಮತಾ ಭಾವನೆಗಳನ್ನು ಉಪದೇಶಿಸಿದರು. ಶ್ರದ್ಧೆ, ಭಕ್ತಿ. ವೈರಾಗ್ಯ ಹಾಗೂ ನೀತಿ ಬೋಧನೆಗಳನ್ನು ಬೋಧಿಸುತ್ತಾ ಅಂತರಂಗ ಮತ್ತು ಬಹಿರಂಗ ಶುದ್ಧಿ, ಶೀಲವಂತ ಜೀವನ, ನಡೆನುಡಿಗಳಲ್ಲಿ ವಿನಯ ಮುಂತಾದ ಒಳ್ಳೆಯ ಗುಣಗಳಿಂದ ಕೈವಲ್ಯವನ್ನು ಸಾಧಿಸಬಹುದು ಎಂದು ಹೇಳಿದರು. ದಯೆಯೇ ಧರ್ಮವಿದ ಮೂಲ, ಆಚಾರವೇ ಸ್ವರ್ಗ ಅನಾಚಾರವೇ ನರಕ, ಸತ್ಯ ನುಡಿಯುವುದೇ ದೇವಲೋಕ ಇತ್ಯಾದಿ ನುಡಿಮುತ್ತುಗಳಿಂದ ಬಸವೇಶ್ವರರ ಶ್ರೇಷ್ಠತೆಯನ್ನು ಕಂಡುಕೊಳ್ಳಬಹುದು.

ವಚನಕಾರ ಬಸವೇಶ್ವರರು

ಬಸವೇಶ್ವರರು ಕನ್ನಡ ಸಾಹಿತ್ಯದೇವಿಗೆ ಅರ್ಪಿಸಿರುವ ಕಾಣಿಕೆ ಹಿರಿದಾದುದು. ಬಸವಣ್ಣನವರು ವಚನ ಸಾಹಿತ್ಯಕ್ಕೆ ಹೊಸ ರೂಪು ಕೊಟ್ಟರು. ಅವರು ಕಠಿಣ ಹಾಗೂ ಹಿರಿದಾದ ತತ್ವಗಳನ್ನು ಸರಳವಾದ ಹಾಗೂ ಸುಲಭ ಶೈಲಿಯಲ್ಲಿ ಪಂಡಿತ ಪಾಮರರೆಲ್ಲರಿಗೂ ತಿಳಿವಂತೆ ಹೇಳಿದ್ದಾರೆ. ಇವರ ವಚನಗಳೇ "ಕೂಡಲ ಸಂಗಮ" ಎಂಬ ಅಂಕಿತದಲ್ಲಿವೆ. ಇವರ ವಚನಗಳಂತೆಯೇ ಹಲವಾರು ಶಿವಶರಣರು ವಚನಗಳನ್ನು ಬರೆದು ಪ್ರಸಿದ್ಧರಾದರು.

ಬಸವಣ್ಣನವರ ಕೊನೆಯ ದಿನಗಳು

ಬಸವೇಶ್ವರರ ಪ್ರಸಿದ್ಧಿಯನ್ನು ಕಂಡು ಕೆಲವು ಜನರು ಮತ್ಸರ ಪಟ್ಟರು. ಇದರಿಂದ ಅವರು ರಾಜ ಬಿಜ್ಜಳನಿಗೆ ಬಸವೇಶ್ವರರ ವಿರುದ್ಧ ಚಾಡಿ ಹೇಳಿದರು. ಬಿಜ್ಜಳನು ಅವರ ಮಾತಿಗೆ ಕಿವಿಗೊಟ್ಟು ಹೀಗೆನುಡಿದನು. "ನೀವು ಜಂಗಮರಾಧನೆಯನ್ನು ಬಿಟ್ಟು ಬಿಡಿರಿ. ಇಲ್ಲದಿದ್ದರೆ ಪ್ರಧಾನಿ ಪಟ್ಟವನ್ನು ತ್ಯಜಿಸಿ." ಬಿಜ್ಜಳನ ದೃಷ್ಟಿಯು ಅವರು ನಡೆಸಿದ ಅಂತರ್ಜಾತೀಯ ವಿವಾಹದ ಕಡೆಗೆಹರಿಯಿತು. ಆಹನು ಮಧುವರಸ ಮತ್ತು ಹರಳಯ್ಯರಿಗೆ ಮರಣದಂಡನೆಯನ್ನು ವಿಧಿಸಿದನು. ಇವರ ಕೊಲೆಯಿಂದ ಬಸವೇಶ್ವರರಿಂದ ಸಹಿಸಲಾಗಲಿಲ್ಲ. ಅವರು ದುಃಖದಿಂದ ಕಲ್ಯಾಣದಿಂದ ಕೂಡಲ ಸಂಗಮಕ್ಕೆ ಹೋಗಿ ಅಲ್ಲೇ ಪರಮಾತ್ಮನಲ್ಲಿ ಲೀನವಾದರು. ಹೀಗೆ ಬಸವೇಶ್ವರರು ವೀರಶೈವ ಮತವನ್ನು ಪುರಸ್ಕರಿಸಿ, ಜನತೆಯಲ್ಲಿನ ಮೂಢನಂಬಿಕೆಗಳನ್ನು ಹೋಗಲಾಡಿಸಿ, ಸಮಾಜದಲ್ಲಿ ಒಂದು ಕ್ರಾಂತಿಯನ್ನು ನಡೆಸಿದರು. ಕನ್ನಡನಾಡಿನಲ್ಲಿ ಅಲ್ಲದೆ ದೇಶದ ಎಲ್ಲಾ ಕಡೆಗೂ ಅವರ ಕೀರ್ತಿ ಹಬ್ಬಿ ಬಸವೇಶ್ವರರ ಹೆಸರು ಅಮರವಾಯಿತು.

(ಸಂಗ್ರಹ)

●●

ನೋಟೀಸು

ಉಡುಪಿ ಮುನ್ಸೀಫರ ಕೋರ್ಟಿನಲ್ಲಿ

O.S. No. 229/71

ಅಮ್ಮುಂಜೆ ಗಣಪತಿ ಶೇಷಗಿರಿ ನಾಯಕ್ & ಸನ್ಸ್—ಉಡುಪಿ } —ವಾದಿ
ಮತ್ತು
ಎನ್. ಕೃಷ್ಣೋಜಿ ರಾವ್, ನಿಂಗೋಜಿರಾಯರ ಮಗ, ಶ್ರೀ ಶಿವಾಜಿ ರೈಸ್ & ಫ್ಲೋರ್ ಮಿಲ್ಸ್ ಮಂಡಗದ್ದೆ, ತೀರ್ಥಹಳ್ಳಿ, ತಾಲೂಕು-ಪ್ರತಿವಾದಿ ಇವರೊಳಗೆ

ಪ್ರತಿವಾದಿಗೆ

ಮೇಲಿನ ವ್ಯಾಜ್ಯವು ನಿಮ್ಮ ಹಾಜರಾತಿಯ ಬಗ್ಗೆ ತಾ. 29-11-1971ರಂದು ಪೂರ್ವಾಹ್ನ 11 ಗಂಟೆಗೆ ಇಟ್ಟುಕೊಳ್ಳತಕ್ಕದ್ದು.

ಆ ದಿನ ನೀವು ಸ್ವತಹ ಅಥವಾ ವಕೀಲರ ಮುಖಾಂತರ ಹಾಜರಾಗಿ ವ್ಯಾಜ್ಯವನ್ನು ತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಏಕ ಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಕೋರ್ಟು ಹುಕುಂ ಮೇರೆಗೆ

ಎಸ್. ವಿಟ್ಠಲ ಶೆಟ್ಟಿಗಾರ.

ವಾದಿಯ ಕಡೆ—ಎಡ್ವೋಕೇಟ್.

ಸ್ಥಳ—ಉಡುಪಿ ತಾ:-30-10-1971

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲಾಜಾಗರಾ ಪಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್, ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

READ & ADVERTISE IN NAVAYUGA WEEKLY

Edited, Printed & Published by K. H. Shetty at the Navayuga Press, Udipi, S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, 18—11—1971

ಸಂಪುಟ ೫೧
ಸಂಚಿಕೆ ೧೧

Vol. 51
No. 11

ಬಂಗ್ಲಾ ಸಮಸ್ಯೆಗೆ

ಭಾರತವೇ ಪರಿಹಾರವರಸಬೇಕೆ?

ಪ್ರಧಾನಿ ಶ್ರೀಮತಿ ಗಾಂಧಿಯವರು ಹಿಮಾಲಯದಷ್ಟು ಆಶೋತ್ತರಗಳನ್ನು ಹೊತ್ತುಕೊಂಡು ವಿದೇಶಯಾತ್ರೆಗೆ ತೆರಳಿದರು. ಬಳ್ಳದಲ್ಲಿ ಫಲಶ್ರುತಿ ಹಿಡಿದು ಮರಳಿದರು.

ಫ್ರಾನ್ಸ್‌ನಿಂದನ್ನಳಿದರೆ ಮತ್ತಾವ ದೇಶವೂ ಭಾರತದ ವಾದವನ್ನು ಬೆಂಬಲಿಸಲಿಲ್ಲ; ಅಥವಾ ಬೆಂಬಲಿಸಿದಂತೆ ತೋರಿಸಲಿಲ್ಲ. ಬಾಯುಪಚಾರ– ಸಹಾನುಭೂತಿಗಳು ಬಿಟ್ಟರೆಷ್ಟು ನೀಡುವುದನ್ನು ಮಾತ್ರ ಬಿಡಲಿಲ್ಲ.

ಬಂಗ್ಲಾ ಸಮಸ್ಯೆಯನ್ನು ಭಾರತ ನಿರ್ಮಿಸಿದ್ದಲ್ಲ. "ಇದು ಪಾಕಿಸ್ತಾನದ ಆಂತರಿಕ ವಿಷಯ".ಇದು ಎಲ್ಲರ–ಭಾರತ ಸೇರಿ ಅಭಿಮತ.

ಆದರೆ, ಪ್ರತಿನಿತ್ಯ ೩೫–೪೦ ಸಾವಿರ ನಿರಾಶ್ರಿತರು ಬಂಗ್ಲಾದಿಂದ ಭಾರತಕ್ಕೆ ಓಡಿ ಬರುತ್ತಿರುವುದರಿಂದ, ಅವರ ಸಂರಕ್ಷಣೆ ಆಂತಾರಾಷ್ಟ್ರೀಯ ಹೊಣೆಯೂದುದರಿಂದ ಭಾರತ ಈ ಸಮಸ್ಯೆಯಲ್ಲಿ ಸಿಕ್ಕುಹಾಕಿಕೊಳ್ಳುವುದು ಅನಿವಾರ್ಯವೇ ಆಯ್ತು.

ತನ್ನ ದೇಶದ ಅರ್ಥವ್ಯವಸ್ಥೆಯನ್ನು ಅಸ್ತವ್ಯಸ್ತ ಮಾಡುವ ಯಾವುದೇ ಕ್ರಮವನ್ನು ಯಾವುದೇ ದೇಶ ಹೇಗೆ ಸುಮ್ಮನೆ ಸಹಿಸಿಕೊಂಡಿರುವುದು ಸಾಧ್ಯ?

ಇಂದು ಭಾರತ ಪಾಕಿಸ್ತಾನ ಗಡಿಯು ಅಭದ್ರವಾಗಿದೆ. ಇಕ್ಕೆಡೆಯಲ್ಲೂ ಉಭಯ ಪಕ್ಷಗಳ ಸೇನೆ ನಿಂತಿದೆ; ಗುಂಡು ಹಾರಲು ಸಿದ್ಧವಾಗಿದೆ. ಮೊದಲ ಗುಂಡು ಎಸೆಯುತ್ತಿರುವ ಪಾಕಿಸ್ತಾನ ಅದು ಭಾರತದಕ್ಕಲಿಂದಲೇ ಬಿದ್ದಿದೆಯೆಂದು ತಿರುಬೊಬ್ಬೆ ಹಾಕುತ್ತಿದೆ.

ಗಡಿ ಪ್ರಕ್ಷುಬ್ಧವಾಗಿದೆ.... –

ಇದಕ್ಕೆ ಹೊಣೆಗಾರ ದೇಶ ಯಾವುದು? ಭಾರತಕ್ಕೆ ಪಾಕಿಸ್ತಾನದೊಂದಿಗೆ ಕದನ ಬೇಡ.ಅದಕ್ಕೆ ಬಂಗ್ಲಾ ಸಮಸ್ಯೆಯಲ್ಲಿ ಈಗ ಆಸಕ್ತಿಯೂ ಇಲ್ಲ. ಅದು ಪಾಕಿಸ್ತಾನದ ಆಂತರಿಕ ವಿಷಯವೆಂದು ಅದೆಂದೋ ಡಣಾಡಂಗುರವಾಗಿ ಹೇಳಿಬಿಟ್ಟಿದೆ.

ಬಂಗ್ಲಾ ನಿರಾಶ್ರಿತರಿಂದ ದೇಶ ತಲೆಕೆಳಗಾಗಗೊಡುವುದೆಂತು ಸಾಧ್ಯ? ಆದುದರಿಂದ ನಿರಾಶ್ರಿತರ ಪ್ರವಾಹ ನಿಲ್ಲಬೇಕು; ಬಂದಿರುವ ನಿರಾಶ್ರಿತರು ಸ್ವದೇಶಕ್ಕೆ ಮರಳಬೇಕು.—ಇದಕ್ಕೆ ಸುಯೋಗ್ಯ ವಾತಾವರಣ ಯೂಹ್ಯಾಖಾನರು ನಿರ್ಮಿಸಬೇಕು.

ಬಂಗ್ಲಾದ ಜನತೆಯ ಆಶಾದೀಪವಾದ ಶೇಕ್ ಮುಜಿಬುರ್ ರೆಹಮಾನರೊಡನೆ ಚರ್ಚಿಸಿ ಸೂಕ್ತ ಪರಿಹಾರವನ್ನವರು ಕೈಗೊಳ್ಳಬೇಕು –

ಜಗತ್ತಿನ ಹೊಣೆಗಾರ ದೇಶಗಳು ಇದನ್ನು ತಪ್ಪು ತಿಳಿದಿವೆ. ಪಾಕಿಸ್ತಾನದ ಆಂತರಿಕ ವಿಷಯದಲ್ಲಿ ಭಾರತ ಹಸ್ತಕ್ಷೇಪ ಮಾಡಿದೆಯೆಂದು ಬಣ್ಣ ಬಳಿದಿವೆ. ಹೊಸ ತಾಗಿ ವಿಶ್ವ ಸಂಸ್ಥೆಯ ಸದಸ್ಯತ್ವ ಪಡೆದ ಕೆಂಪು ಚೀನಾವೂ ಇದನ್ನು ಉಗ್ಗಡಿಸಿದೆ.

ಬಂಗ್ಲಾದ ಸಾಮೂಹಿಕ ನರಮೇಧದಿಂದ ಯೂಹ್ಯಾಖಾನರು ಭಾರತದ ಮೇಲೆ ಯುದ್ಧ ಸಾರಲು ನಿಶ್ಚಯ ಮಾಡಿದ್ದರು. ಆದರೆ, ಸೋವಿಯತ್ತು ಭಾರತಕ್ಕೆ ಬೆಂಬಲ ನೀಡಿದ್ದರಿಂದ ಇವರು ಚೀನಾದತ್ತ ಕೈ ಚಾಚಿದ್ದಾರೆ.

ಚೀನೀಯ ವಿದೇಶ ಸಚಿವರು ಪಾಕಿಗೆ ಸರ್ವ ಸಮರ್ಥನೆಯನ್ನು ನೀಡಿದರು; ಆದರೂ ಭಾರತ–ಪಾಕಿಸ್ತಾನಗಳು ಶಾಂತಿಯಿಂದಲೇ ವಿವಾದ ಇತ್ಯರ್ಥ ಮಾಡಿಕೊಳ್ಳುವುದು ಉತ್ತಮವೆಂದರು.

ಭಾರತ—ಪಾಕ್ ಸಮಸ್ಯೆಯಿದೆಂಬುದನ್ನು ಅಮೆರಿಕೆಯೂ ನಂಬಿದೆ. ಆದರ ನಿಲುವಿನಲ್ಲಿ ಮೆಯನ್ನು ಬದಲಾಯಿಸಲು ಶ್ರೀಮತಿ ಗಾಂಧಿ ಅಶಕ್ತರಾದರು

ಅಮೆರಿಕೆಯೂ ಯುದ್ಧ ಮಾಡಬೇಡಿರೆಂದು ಭಾರತಕ್ಕೆ ಬುದ್ಧಿಯೊರೆಯಿತು. ಕೆಂಪು ಚೀನಾವೂ ಕೆವಿಮೂತು ಹೇಳಿತು. ಆದರೆ, ಭಾರತವು ಯುದ್ಧವನ್ನು ಬಯಸುತ್ತಿದೆ!

ಪಾಕಿಸ್ತಾನಕ್ಕೆ ತಾನು ನೀಡುತ್ತಿರುವ ಸೈನಿಕ ನೆರವನ್ನು ನಿಲ್ಲಿಸುವ ಬಗ್ಗೆ ಅಮೆರಿಕೆ ಮಾತಾಡಿದೆ. ಈ ಬಗ್ಗೆ ಖಚಿತವಾದ ವಾಗ್ದಾನ ನಿಕ್ಸನ್ನರ ಬಾಯಿಂದ ಬರಲಿಲ್ಲ. ಒಂದೊನ್ಮೆ ಶಸ್ತ್ರಾಸ್ತ್ರ ನಿಲುಗಡೆಯ ಮಾತು ಹೊರಟರೂ ಅದು ಕಾರ್ಯರೂಪಕ್ಕೆ ಬರುವುದೆಂದು ಹೇಳಲಾಗದು.

ಕೊಟ್ಟ ಭರವಸೆಗಳನ್ನು ಮುರಿಯುವುದು ಅಮೆರಿಕೆಗೆ ಹೊಸ ಅನುಭವವಲ್ಲ. ಆದರ ಭರವಸೆಗಳನ್ನು ಸತ್ಯವೆಂದು ನಂಬಿದವರೇ ಮೋಸ ಹೋಗುವುದು ನಡೆದು ಬಂದ ದಾರಿ.

ಪ್ರಧಾನಿ ಗಾಂಧಿಯವರು ಪ್ಯಾರಿಸ್‌ನಲ್ಲಿ ಮಾತಾಡುತ್ತ ಹಿರಿಯ ರಾಷ್ಟ್ರಗಳ ಬೇಜವಾಬ್ದಾರಿಯ ಬಗೆಗೆ ತೀರ ವಿಷಾದದಿಂದ ನುಡಿದರು. ಅವರ ಮನಸ್ಸು ಎಷ್ಟುನೊಂದಿದೆಯೆಂಬುದು ಇದರಿಂದ ವೇದ್ಯವಾಗುವುದು.

ನಿರಾಶ್ರಿತರ ವಾಪಸಾತಿಯು ಸದ್ಯಕ್ಕೆ ಸಾಧ್ಯವೇ ಇಲ್ಲವೆನ್ನುವ ಪರಿಸ್ಥಿತಿ. ಇವರ ಭರಣ ಪೋಷಣಕ್ಕೆ ಭಾರತ ಸರ್ವಸ್ವಾಗವನ್ನೂ ಮಾಡಬೇಕು.

ಈ ಆರ್ಥಿಕ ಹೊರೆ–ಸಾಮಾಜಿಕ ಹೊರೆಯನ್ನು ಯೂಹ್ಯಾಖಾನರು ಭಾರತದ ಮೇಲೆ ಹೊರಿಸಿದ್ದಾರೆ. ಇದು ಅನಿವಾರ್ಯವಾದರೂ ಅಪೆಷ್ಟುಸಮಯ ಹೊತ್ತುಕೊಂಡಿರಲು ಸಾಧ್ಯ?

ಯೂಹ್ಯಾಖಾನರು ಬಂಗ್ಲಾ ನರಮೇಧಕ್ಕೆ ಹೊಣೆ ವಿಣಾಮ ಹಾಕುವುದಿಲ್ಲ. ನಿರಾಶ್ರಿತರ ವಾಪಸಾತಿಗೆ ಹಿತಕರ ವಾತಾವರಣ ನಿರ್ಮಿಸುವುದಿಲ್ಲ. ಬದಲಿಗೆ ಬಂಗ್ಲಾವನ್ನು ಧ್ವಂಸಮಾಡಲು ಇವರು ಸೊಂಟಕಟ್ಟಿದ್ದಾರೆ; ಇದಕ್ಕೆ ಅಮೆರಿಕೆ ಪರೋಕ್ಷ ಬೆಂಬಲ ನೀಡಿದೆ; ಕೆಂಪು ಚೀನ ಪ್ರತ್ಯಕ್ಷವಾಗಿ ಯೂಹ್ಯಾಖಾನರ ಹಿಂದಿದೆ.

ಇಗನ್ನೆಲ್ಲ ನೋಡುವಾಗ ವಿಚಿತ್ರ ಚಿತ್ರ ಮೊದು ಕಣ್ಣಿಗೆ ಕಾಣುತ್ತದೆ.

ಭಾರತದ ಮೇಲೆ ಆಕ್ರಮಣ ಮಾಡುವ ಹೆಬ್ಬಯಕೆ ಯೂಹ್ಯಾಖಾನರಿಗಿದೆ. ಇದಕ್ಕೆ ಅಮೆರಿಕೆಯ ಒತ್ತಾಸೆಯೂ ಇದೆ. ಚೀನಾದ ಉತ್ತೇಜನವೂ ಇದೆ.

ಆದರೆ, ಭಾರತವನ್ನೇ ಆಕ್ರಮಣಿಸಿಲವೆಂದು ಘೋಷಿಸಿಕೊಂಡು ಬರುತ್ತಿರುವ ಪಾಕಿಸ್ತಾನ ನೇರ ಆಕ್ರಮಣ ಮಾಡದೆ ನಿರಾಶ್ರಿತರ ಸಮಸ್ಯೆಯನ್ನು ತಾನಾಗಿಯೇ ಸೃಷ್ಟಿಸಿ ಯುದ್ಧವನ್ನು ಮನೆಬಾಗಿಲಿಗೆ ಕಳಿಸಿಕೊಟ್ಟಿದೆ.

ಯುದ್ಧಲಾಲಸೆ ತಾಂಡವವಾಡುತ್ತಿರುವ ಪಾಕಿಸ್ತಾನದ ಕುತಂತ್ರ ಮತ್ತು ಕುರುಡು ರಾಜ್ಯಕೀಯಕ್ಕೆ ವಿಶ್ವದ ಮೇಧಾವಿ ಸುಸಂಪನ್ನ ದೇಶಗಳು ಹೈರ್ತ್ಕರ್ಷಕ ಬೆಂಬಲ ನೀಡುತ್ತಿವೆ.

ಬೆಳ್ಳಗಿರುವುದನ್ನೆಲ್ಲ ಹಾಲೆಂದು ನಂಬಿ ಬರುವುದು ಭಾರತದ ರಾಜ್ಯಕೀಯ ಜ್ವಾಯವೂನ.

ಜಾ–ಎನ್–ಲಾಯರು ದೆಹಲಿಗೆ ಬಂದು ಪ. ನೆಹರುರನ್ನು ಅಪ್ಪಿ ಹಿಂದೀ–ಚೀನಿ ಭಾಯಿ ಭಾಯಿ ಎಂದರು ಈ ಅಪ್ಪುಗೆ ಹಾವಿನಪ್ಪುಗೆಯೆಂದು ತಿಳಿದಾಗ ಪ. ನೆಹರುರವರಿಗೆ ಹೃದಯಘಾತವಾಯ್ತು.

ಅಯೂಬಖಾನರನ್ನೂ ಶಾಸ್ತ್ರಿಗಳನ್ನೂ ತಾಷ್ಕೆಂಟಿಗೆ ಕರೆಸಿ ಒಡಂಬಡಿಕೆಯ ಹೆಸರಲ್ಲಿ ಏನೇನೋ ನಡೆಯಿತು. ಸಹಿ ಹಾಕಿದ ಮರುಗಳಿಗೆಯಲ್ಲಿ ಶಾಸ್ತ್ರಿ ಪ್ರಾಣಹಾರಿ ಹೋಯಿತು

ಪಾಕ್ ಕುತಂತ್ರಿಗಳು ಇವನ್ನೇ ಪ್ರಚುರಗೊಳಿಸಿ ತನ್ನ ಸಮಾನ ಕುತಂತ್ರಿಗಳು ಮಿತ್ರರು ಇಲ್ಲವೆಂದು ಹೇಳುತ್ತಿದ್ದಾರೆ. ಭಾರತ ತಾನಾಗಿ ಯುದ್ಧ ಮಾಡುವುದೆ?

ವಿಶ್ವದ ಬಹುತೇಕ ಸಂಪನ್ನ ದೇಶಗಳು ಭಾರತವನ್ನು ಅಪರಾಧಿಯ ದೃಷ್ಟಿಯಿಂದಲೇ ನೋಡುತ್ತಿವೆ; ನಿಜವಾದ ಅಪರಾಧಿ ಪಾಕಿಸ್ತಾನದ ಕಿವಿಹಿಂಡುವಲ್ಲಿ ನಿರಾಸಕ್ತವಾಗಿವೆ ಇದು ಇಂದಿರಾ ಸಂದರ್ಶನದ ಫಲಶ್ರುತಿ.

ಯೂಹ್ಯಾಖಾನರ ಮೇಲೆ ಆಂತರಾಷ್ಟ್ರೀಯ ಒತ್ತಡ ಹೇರಿಯೂದರೂ ಬಂಗ್ಲಾ ಸಮಸ್ಯೆಗೊಂದು ರಾಜ್ಯಕೀಯ ಪರಿಹಾರ ವರಸಿ. ನಿರಾಶ್ರಿತರ ಹೊರೆಯನ್ನು ಪಾಕಿಗೆ ಹಸ್ತಾಂತರ ಮಾಡೋಣವೆಂದರೆ, ಅದೀಗ ಸಾಧ್ಯವಿಲ್ಲವಾಗಿದೆ.

ಯೂಹ್ಯಾಖಾನರ ಲೆಕ್ಕಾಚಾರದಂತೆ ಬರಿಯ ೯ ಸಾವಿರ ನಿರಾಶ್ರಿತರಿದ್ದಾರೆ. ಅವರನ್ನು ಭಾರತ, ಬಂಗ್ಲಾಕ್ಕೆ ಮರಳಿಗೊಡುವುದಿಲ್ಲ.

ಈಗ ಯೂಹ್ಯಾ ನನು ಮಾಡಬೇಕು? ಬಲವಂತವಾಗಿ ನಿಲ್ಲಿಸಿಗೊಂಡ ಬಂಗ್ಲಾದೇಶೀಯರನ್ನು ತನಗೆ ಕಳಿಸಿಕೊಡಬೇಕೆಂದು ಹೇಳಬೇಕು. ಇಲ್ಲವಾದರೆ, ಅವರನ್ನು ಕರೆತರಲು ಯುದ್ಧಮಾಡಬೇಕು!

ಪರಿಸ್ಥಿತಿಯೆಷ್ಟಿ ಮುಟ್ಟಿತು! ತೊಂಬತ್ತು ಲಕ್ಷ ನಿರಾಶ್ರಿತರನ್ನು ಭಾರತಕ್ಕೆ ಅಟ್ಟಿರುವ ಯೂಹ್ಯಾಖಾನರು ಒಂಬತ್ತು ಸಾವಿರ ಬಂಗ್ಲಾ ಪ್ರಜೆಗಳೆನ್ನು ಭಾರತದ ನೆರೆಯಿಂದ ಬಿಡಿಸಲು ಸಮರ ಸಿದ್ಧತೆ ಮಾಡಿಕೊಳ್ಳುತ್ತಾರೆ.

ಸತ್ಯಕ್ಕೆ ಇದಕ್ಕೆ ಮಿರಿದ ಅಪಚಾರ ಬೇರೊಂದಿದೆಯೆ? ಈ ಅಪಚಾರವನ್ನೇ ಉಸರ್ಚಾರವೆಂದು ನಂಬಿರುವ ದೇಶಗಳು ನಮ್ಮ ಮಿತ್ರ ರಾಷ್ಟ್ರಗಳೆ?

ಬಹು ಜನರು ನಡೆದದ್ದೇ ದಾರಿಯೂ ಗುತ್ತದೆ ಹೆಚ್ಚಿನ ದೇಶಗಳು ಪಾಕಿಸ್ತಾನವನ್ನೇ ಪ್ರತ್ಯಕ್ಷ–ಪರೋಕ್ಷವಾಗಿ ಬೆಂಬಲಿಸುವಾಗ ಗೆದ್ದವರದ್ದೇ ಸತ್ಯವಾಗುತ್ತದೆ.

ಬಂಗ್ಲಾ ಸಮಸ್ಯೆಗೆ ಪರಿಹಾರವರಸುವ ಹೊಣೆಗಾರಿಕೆಯಿಂದ ಯೂಹ್ಯಾಖಾನರು ಪ್ರಬಲ ಪ್ರಚಾರೋಪಾಯದಿಂದ ತಪ್ಪಿಸಿಕೊಂಡಿದ್ದಾರೆ. ನಿರಾಶ್ರಿತರ ಸಮಸ್ಯೆಗೆ ಪರಿಹಾರ ಹುಡುಕುವ ಹೊಣೆಗಾರಿಕೆಯಿಂದ ಶ್ರೀಮತಿ ಗಾಂಧಿ ನುಸುಳಿಕೊಂಡರೆ ದೇಶ ಮತ್ತಷ್ಟು ಬವಣೆಗೊಳಗಾಗುತ್ತದೆ. ಬಂದದ್ದೆಲ್ಲ ಬರಲಿ ಎಂದು ಸಹಿಸಿ ಸುಮ್ಮನಿರುವುದು ಸಾಧ್ಯವಾದೀತೆ? ● ●

ಊಳಿಗವ ಉಣಿಸಿನ ಸವಿಗಿಂತ ಉತ್ತುಣಿಸು ಇನಿದು ಅಲ್ಲೇಳ್ಯಯ್ಯಾರ್

○ ○ ○

ವಿದ್ಯೆತು ಇದ್ದಲ್ಲಿ ಸ್ತ್ರೀತಿಯು ಕ್ಷಚಿತ್ತಾಗಿ ನೆಲಸುತ್ತದೆ. —ಪೋಪ್

○ ○ ○

'ಗಾಂಧಿಜಿಯ ಕೊಲೆ'

(ಭಾಗ ಒಂಭತ್ತು)

ಬರೆದವರು: ಶ್ರೀ ಬಿ. ಕೃಷ್ಣ ಭಟ್, ಭದ್ರಾವತಿ

20–1–48ರ ಸಭೆಯಲ್ಲಿ, ಮದನಲಾಲ ಎಸೆದ ಕೈ ಬಾಂಬಿನಿಂದ ಗಜಿ–ಬಿಜಿಯಾಯಿತು. ಅವನ ಜೊತೆಗಾರರು ಒಪ್ಪಿಕೊಂಡ ಕೆಲಸವನ್ನು ಮಾಡಲು ಮುಂದಾಗಲಿಲ್ಲ. ಸಾಲದ್ದಕ್ಕೆ ಮದನಲಾಲ ಪೋಲಿಸರ ವಶವಾದ. ಆದರಿಂದ ಅವನ ಸ್ನೇಹಿತರು ದಿಗಿಲು ಗೊಂಡರು.

ಆಪ್ಟೆ—ಗೋಡ್ಸೆ, ಬಾಡ್ಗೆ, ಕಿಷ್ಟಯ್ಯ ತಮ್ಮ ಕಾಲಿಗೆ ಬುದ್ದಿ ಹೇಳಿದರು. ಬಾಡ್ಗೆ–ಕಿಷ್ಟಯ್ಯ ಬಿರ್ಲಾ ಭವನದಿಂದ ನೇರ ಹಿಂದು ಮಹಾಸಭೆಯ ಕಚೇರಿಗೆ ಬಂದರು. ಕೈ ಚೀಲದಲ್ಲಿದ್ದ ಕೈ ಬಾಂಬುಗಳನ್ನು ಕಚೇರಿಯ ಹಿಂಭಾಗದಲ್ಲಿದ್ದ ಕಾಡಿನಲ್ಲಿ ಎಸೆದು ಬಿಡುವಂತೆ ಬಾಡ್ಗೆ, ಕಿಷ್ಟಯ್ಯನಿಗೆ ಸೂಚಿಸಿದ. ಆತ ಈ ಕೆಲಸ ಪೂರೈಸಿ ಹಿಂದಿರುಗುವುದರೊಳಗೆ ಬಾಡ್ಗೆ ಹಾಸಿಗೆಯ ಸುರುಳಿಯನ್ನು ಕಂಕುಳಲ್ಲಿ ಇರಿಸಿಕೊಂಡು ಹೊರಡಲು ಸಿದ್ಧನಾಗಿ ನಿಂತಿದ್ದ —

ಆಷ್ಟರಲ್ಲಿ ಆಪ್ಟೆ—ಗೋಡ್ಸೆ ಅಲ್ಲಿಗೆ ಬಂದರು. ಬಾಡ್ಗೆ ಹೃದಯ ಆಗಲೇ ತಲ್ಲಣಿಸಲಾರಂಭಿಸಿತು. ಆಪ್ಟೆ–ಗೋಡ್ಸೆಯರ ನಡತೆ ಆತನಿಗೆ ಸರಿ ಬೀಳಲಿಲ್ಲ. ತಮ್ಮನ್ನು ಬಲಿ ಕೊಟ್ಟು ತಾವು ದೊಡ್ಡವರಾಗಲು ಆವರಿಬ್ಬರು ಪ್ರಯತ್ನಿಸುತ್ತಿರುವುದಾಗಿ ಆತ ತರ್ಕಿಸಿದ. ಹೊಟ್ಟೆಯೊಳಗಿನ ಸಿಟ್ಟನ್ನು ಆದುಮಿಟ್ಟುಕೊಳ್ಳುವುದು ಅವನಿಂದಾಗಲಿಲ್ಲ. ಆವರಿಬ್ಬರನ್ನು ಆತ ಮನಸ್ಸೀ ಬೈದ.

ಆಪ್ಟೆ—ಗೋಡ್ಸೆ ಅಲ್ಲಿಂದ ಹೊರಟು ಹೋದರು. ಅದು ಮೂತಿಗೆ ಮೂತು ಬೆಳೆಯಿಸುವ ಸಮಯವಲ್ಲ. ಅದನ್ನವರು ಅರಿತಿದ್ದರು.

ಆಷ್ಟರಲ್ಲಿ ಬಾಡ್ಗೆಗೆ ಹಿಂದಿನ ದಿನ ಗೋಪಾಲ ಗೋಡ್ಸೆ ಕವಾಟದಲ್ಲಿ ಬಚ್ಚಿಟ್ಟ ಸ್ಫೋಟಕಗಳ ನೆನಪಾಯಿತು. ಅದನ್ನೂ ಎಸೆದು ಬರುವಂತೆ ಬಾಡ್ಗೆ, ಕಿಷ್ಟಯ್ಯನಿಗೆ ತಿಳಿಸಿದ. ಕಿಷ್ಟಯ್ಯ ಆ ಚೀಲವನ್ನೂ ಬರಿದು ಮಾಡಿದ.

ಆನಂತರ ಆವರಿಬ್ಬರು ಮಹಾಸಭೆಯ ಕಛೇರಿಯನ್ನು ಬಿಟ್ಟರು. ಇಬ್ಬರೂ ಬಿರ್ಲಾ ಮಂದಿರದ ತನಕ ನಡೆದು ಹೋದರು. ಅಲ್ಲಿ ಒಂದು ಟಾಂಗಾ ಗೊತ್ತು ಮಾಡಿದರು. ಟಾಂಗಾದಲ್ಲಿ ನವದೆಹಲಿಯ ರೈಲು ನಿಲ್ದಾಣಕ್ಕೆ ಬಂದರು. ಬಾಡ್ಗೆ ಅಲ್ಲಿ ಎರಡು ಮೂರನೆಯ ತರಗತಿಯ ಟಿಕೇಟು ಪಡೆದ. ಇಬ್ಬರೂ ಮುಂಬಯಿಗೆ ಮರಳುವ ಲೆಕ್ಕ ಹಾಕಿದರು.

ಅವರು ನಿಲ್ದಾಣ ತಲುಪುವಷ್ಟರಲ್ಲಿ, ಸ್ಟೇಷನ್ ತುಂಬ ಜನ. ಎಲ್ಲರ ಬಾಯಲ್ಲೂ ಅಂದು ಸಂಜೆ ನಡೆದ ಘಟನೆಯ ಮಾತು. ಜೊತೆಗೆ ಪೋಲಿಸರ ಸರ್ಪಗಾವಲು. ಬಾಡ್ಗೆ ಮನಸ್ಸು ಬದಲಾಯಿಸಿದ. ಟಿಕೇಟನ್ನೊಡನೆ ಟಾಂಗಾದ ಹತ್ತಿರಕ್ಕೆ ಬಂದ. ಗಾಡಿಯವನಿಗೆ ದೆಹಲಿಯ ರೈಲು ನಿಲ್ದಾಣದಲ್ಲಿ ತಮ್ಮನ್ನು ಬಿಟ್ಟು ಬಿಡುವಂತೆ ಹೇಳಿದ. ರಾತ್ರಿ ಹತ್ತರ ಸುಮಾರಿಗೆ ಇಬ್ಬರೂ ಮುಂಬಯಿಗೆ ಹೊರಡುವ ಹೊಗೆ ಬಂಡಿಯಲ್ಲಿ ಕುಳಿತರು. 22ರಂದು ಕಲ್ಯಾಣದಲ್ಲಿಳಿದು, ಅಲ್ಲಿಂದ ನೇರ ಪುಣೆ ತಲುಪಿದರು.

20—1—48ರ ರಾತ್ರಿ ಮಹಾಸಭೆಯ ಕಛೇರಿಯಲ್ಲಿರುವುದು ಒಳ್ಳೆಯದಲ್ಲವೆಂದು ಕರಕರೆ–ಗೋಪಾಲ ಗೋಡ್ಸೆ ಭಾವಿಸಿದರು. ಅಪಾಯವನ್ನು ಕಂಡುಕೊಂಡ ಅವರು ವಸತಿಗೆ ಬೇರೊಂದು ಸ್ಥಳವನ್ನು ಆರಿಸಿದರು. 20ರ ರಾತ್ರಿಯನ್ನು ಅವರಿಬ್ಬರು ದೆಹಲಿ ರೈಲು ನಿಲ್ದಾಣದ ಬಳಿಯಿರುವ 'ಫ್ರಾಂಟಿಯರ್ ಹೋಟೆಲ'ಲ್ಲಿ ಕಳೆದು, ಸುರಕ್ಷಿತವಾಗಿ ಮುಂಬಯಿ ಮುಟ್ಟಿದರು.

ಪೋಲಿಸ್ ಮಹರಿ ಬಿಗಿಯೂಗುತ್ತಿರುವುದನ್ನು ಆಪ್ಟೆ–ಗೋಡ್ಸೆ ಗಮನಿಸಿದರು. ಆವರನ್ನೂ ಅಂಜಿಕೆ ಆವರಿಸಿತು. ಮದನಲಾಲ ಬಂಧನದಲ್ಲಿದ್ದ. ಅವನಿಗೆ ಅವರು ಹೊಸಬರಿರಲಿಲ್ಲ ಜೊತೆಗಾರರ ಹೆಸರು ವಿವರಗಳನ್ನು ಪೋಲಿಸರು ಅವನಿಂದ ಅಷ್ಟರಲ್ಲಿಯೇ ಹೊರಡಿಸಿರುವರೆಂಬುದು ನಿರ್ವಿವಾದ. ಮದನಲಾಲ ಕೊಟ್ಟಿದ್ದರೆ. ತಮ್ಮ ಗತಿ ಏನು ಎಂಬ ಭೀತಿ ಜ್ವರ ಅವರನ್ನು ಬಾಧಿಸಿತು.

ಬಾಡ್ಗೆಯ ಕೈಯಲ್ಲಿ ಬೈಯಿಸಿಕೊಂಡ ಅವರು ನೇರ "ಮರೀನಾ ಹೋಟೆಲಿಗೆ" ಹೋದರು. ಹಿಡಿದುಕೊಂಡ ಕೋಣೆಯನ್ನು ಖಾಲಿ ಮಾಡಿದರು. ಬಿಲ್ಲನ್ನು ತೆತ್ತು ಬೀದಿಗಿಳಿದರು. ದೆಹಲಿ ನಿಲ್ದಾಣದ ಡಾದಿ ಹಿಡಿದರು. ಸ್ಟೇಷನಿನಲ್ಲಿ ಎರಡು ವ್ಯಥನು ತರಗತಿಯ ಟಿಕೇಟುಗಳನ್ನು ಪಡೆದು, ಖಾನ್‌ಪುರಕ್ಕೆ ಹೊರಟು ನಿಂತ ಗಾಡಿಯಲ್ಲಿ ಕುಳಿತರು. ಖಾನ್‌ಪುರದ ರೈಲು ನಿಲ್ದಾಣಕ್ಕೆ ಸೇರಿದ ಒಂದನೇ ನಂಬರಿನ ರಿಟಯರಿಂಗ್ ರೂಂನಲ್ಲಿ 21ರ ರಾತ್ರಿಯನ್ನು ಕಳೆದರು. ಅಲ್ಲಿ ಇಳಿದು ಕೊಂಡಾಗಲೂ ಅಲ್ಲಿ ಹೆಸರು ಬದಲಾಯಿಸಿ ಕೊಂಡರು. ಅಲ್ಲಿಂದ ಮುಂಬಯಿಗೆ–ಮರಳಿ ಆರ್ಯ ಪಥಿಕಾಶ್ರಮದ ಕೋಣೆಗೆ.

ಮದನಲಾಲ ಕೊಟ್ಟ ವರ್ತಮಾನದ ಮೇಲೆ, 23–1–48ರಂದು ತೊಗಲಕ್ ರಸ್ತೆಯಲ್ಲಿರುವ ಪೋಲಿಸ್ ತಾಣೆಯ ಅಧಿಕಾರಿಗಳು ಮರೀನಾ ಹೋಟೆಲಿಗೆ ಹೋದರು. ಹೋಟೆಲಿನ 40ನೇ ನಂಬರಿನ ಕೋಣೆಯಲ್ಲಿ ಜನವರಿ 17ರಿಂದ 20ರ ವರೆಗೆ ಇಳಿದು ಕೊಂಡಿದ್ದ ಯಸ್. ದೇಶಪಾಂಡೆ ಯಂ. ದೇಶ ಪಾಂಡೆಯವರಿಗೆ ಸೇರಿದ್ದೆಂದು ಹೇಳಲಾದ ಕೆಳಗಿನ ಮೂಲುಗಳನ್ನು ಆ ಕೋಣೆಕಾಯುವ ಹುಡುಗ ಕಾಳೀರಾಮ ಬಿನ್ ಗೋಪೀ ರಾಮ ಪೋಲಿಸರ ಮುಂದು ಹಾಜರು ಪಡಿಸಿದ. ತಮ್ಮವಶ ಪಡಿಸಿಕೊಂಡ ದ್ದಕ್ಕೆ ಪೋಲಿಸರು ಒಂದು ಪಂಚನಾಮೆ ಸಿದ್ಧ ಗೊಳಿಸಿದರು—

ಆಲ್ಲಿ ಅಂದು ಕೈವಶವಾದ ಮೂಲುಗಳ ವಿವರ. ಹೀಗಿದೆ:—1. ಒಂದು ಟಿನೆಲ್ ಆಂಚಿನಲ್ಲಿ N.V.G ಎಂತ ಕಪ್ಪು ಮಸಿಯಲ್ಲಿ ಬರೆದಿದೆ. 2. ಒಂದು ಜವಾಹರ್ ವೆಸ್ಟ್ ಕೋಟು. ಒಳ ಭಾಗದಲ್ಲಿ ಕಪ್ಪು ಮಸಿಯಲ್ಲಿ N.V.G ಎಂತ ಬರೆದಿದೆ. 3. ಒಂದು ಟ್ವಿಲ್ ಶರ್ಟು. ಕುತ್ತಿಗೆಯ ಭಾಗದಲ್ಲಿ B. N. V. G. ಎಂತ ಬರೆದಿದೆ. ವಿಚಾರಣೆಯ ಕಾಲದಲ್ಲಿ ಪೋಲಿಸರು ಈ ಪಂಚನಾಮೆಯ ರುಜುವಾತು ಬೇರೆ ಮಾಡಿದರು. ಈ ದಾಖಲೆಯ ಕ್ರಮ ಸಂಖ್ಯೆ Ex. C 29. N.V.G ಎಂದರೆ ನಾಥೂರಾಮ ವಿನಾಯಕ ಗೋಡ್ಸೆ ಎನ್ನುವುದರಲ್ಲಿ ಅನುಮಾನವಿಲ್ಲ.

ವಿಶೇಷ ಸೆಶನ್ಸ್ ನ್ಯಾಯಾಧೀಶ ಶ್ರೀ ಆತ್ಮಚರಣರ ಮುಂದೆ, ದೆಹಲಿಯ ಕೆಂಪು ಕೋಟೆಯಲ್ಲಿ ಮೊಕದ್ದಮೆಯ ವಿಚಾರಣೆ ನಡೆಯಿತು. ಆಪಾದನೆಯನ್ನು ಸ್ಥಿರಪಡಿಸಲು 140 ಮಂದಿ ಸಾಕ್ಷಿಗಳ ವಿಚಾರಣೆಯಾಯಿತು. 300 ರಷ್ಟು ದಾಖಲೆಗಳು, 50ಕ್ಕೂ ಮಿಕ್ಕಿ ಮೂಲುಗಳು ಹಾಜರು ಮಾಡಲ್ಪಟ್ಟವು. ಮದನಲಾಲ—ನಾಥೂರಾಮ ಗೋಡ್ಸೆ ಕೃತ್ಯ ನಡೆದ ಸ್ಥಳದಲ್ಲಿ ಮೂಲು ಸನ್ನೇತ ಸಿಕ್ಕಿ ಬಿದ್ದವರು–ಆವರಿಬ್ಬರು ವಹಿಸಿದ ಪಾತ್ರಗಳಿಗೆ ಪ್ರತ್ಯಕ್ಷ ದರ್ಶಿಗಳಿದ್ದರು. ಕೊಲೆ ಗೈಯ್ಯಲು ಸಂಚು ಹೂಡಿದ್ದರೆನ್ನುವುದಕ್ಕೆ ಪ್ರಾಸಿಕ್ಯೂಶನ್ ಬೇರೆ ಸಾಕ್ಷಿಗಳನ್ನು ದೊರಕಿಸಿ ಕೊಳ್ಳುವುದು ಅಗತ್ಯವಿತ್ತು–ಮಾಫಿ ಸಾಕ್ಷಿ ಬಾಡ್ಗೆಯ ಹೇಳಿಕೆಯನ್ನು ಮುಖ್ಯಾಂಶಗಳಲ್ಲಿ ಸಮರ್ಥಿಸುವ ಸ್ವತಂತ್ರ ಸಾಕ್ಷಿಯೂ ಬೇಕಾಗಿತ್ತು–ಕೊಲೆಯ ಜಾಲ ದೇಶದ ಕೆಲವು ಭಾಗಗಳಲ್ಲಿ ಹರಡಿತ್ತು. ಆದ್ದರಿಂದ ಸಾಕ್ಷಿ ನುಡಿಯ ಬಂದವರು ದೇಶದ ಬೇರೆ ಬೇರೆ ಭಾಗದವರು–ಬೇರೆ ಬೇರೆ ಭಾಷೆಯನ್ನಾಡುವವರು-ಕೋರ್ಟಿಗೆ ಆ ಭಾಷೆಗಳ ಪರಿಚಯವಿಲ್ಲ– ಆರೋಪಿಗಳಲ್ಲಿ ಕಿಷ್ಟಯ್ಯ ತೆಲುಗನ್ನುಳಿದರೆ ಬೇರೆ ಭಾಷೆ ಬಾರದವ. ಕರಕರೆಗೆ ಬರುತ್ತಿದ್ದುದು ಮರಾಠಿ ಮಾತ್ರ. ಮದನಲಾಲನಿಗೆ ಬರುತಿದ್ದ ಭಾಷೆ ಪಂಜಾಬಿ, ಹಿಂದುಸ್ತಾನಿ. ಸಾಕ್ಷಿಗಳ ಹೇಳಿಕೆಯನ್ನು ಭಾಷಾಂತರಿಸಿ, ಕೋರ್ಟಿಗೂ ಆರೋಪಿಗಳ ಲಾಯರುಗಳಿಗೂ ತಿಳಿಸಲು ಆಯಾ ಭಾಷೆ ಬಲ್ಲವರನ್ನು ಕರೆಸಬೇಕಾಯಿತು. ಇದಕ್ಕೆ ಕಾಲ ಹಿಡಿಯಿತು. 24-6-48 ರಂದು ಸಾಕ್ಷಿಗಳ ಹೇಳಿಕೆಯನ್ನು ತೆಗೆದುಕೊಳ್ಳಲು ಪ್ರಾರಂಭಿಸಲಾಯಿತು. 6-11-48 ರಂದು ಅದು ಮುಕ್ತಾಯಕ್ಕೆ ಬಂತು. ಈ ಹೇಳಿಕೆಗಳೇ 700 ಪುಟದ ಬೃಹತ್ ಸಂಪುಟವಾಯಿತು. 8-11-48ರಂದು ನ್ಯಾಯಾಧೀಶರು ಆರೋಪಿಗಳನ್ನು ಪ್ರಶ್ನಿಸಲು ಪ್ರಾರಂಭಿಸಿದರು. ಅದು ನವೆಂಬರ್ 22ಕ್ಕೆ ಮುಗಿಯಿತು. ಈ ಹೇಳಿಕೆಗಳೇ 106 ಪುಟಗಳಷ್ಟಾದವು. ಇದು ಸಾಲದು ಎಂದು ಆರೋಪಿಗಳಲ್ಲಿ ಎಲ್ಲರೂ–ಕಿಷ್ಟಯ್ಯನನ್ನುಳಿದು-- 300 ಪುಟಗಳ ಲಿಖಿತ ಹೇಳಿಕೆಯನ್ನು ವಕೀಲರು ಪಡಿಸಿದರು.

ತಮ್ಮ ವಿರುದ್ಧ ಬಂದ ಸಾಕ್ಷ್ಯವನ್ನು ನಂಬಲನರ್ಹವೆಂದು, ಅಥವಾ ತಾವು ಕೊಟ್ಟ

(ಹನ್ನೊಂದನೇ ಪುಟ ನೋಡಿರಿ)

ಅಮೃತಾಂಜನ

● ತಲೆ ಸಿಡಿತ ● ನೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು–4

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದ್ವೈದ್ಯಶಾಲಾ (ಪೈವೇಟ್) ಲಿಮಿಟೆಡ್,

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :

ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA

(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 11

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೭೫

ಚಿಕ್ಕ ಜೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಹಾಸನ–ಮಂಗಳೂರು ರೇಲ್ವೆಯ ನಿಲುಗಡೆ ಬೇಡ

ಕರ್ನಾಟಕ ರಾಜ್ಯದ ವಿಸ್ತಾರ–ಜನ ಸಂಖ್ಯೆಗಳಗನುಸಾರವಾಗಿ ಇಲ್ಲಿ ರೇಲ್ವೆ ಮಾರ್ಗಗಳಿಲ್ಲವೆನ್ನುವುದು ಎಲ್ಲರಿಗೂ ಗೊತ್ತು. ದಕ್ಷಿಣದ ರಾಜ್ಯಗಳಿಗೂ ರೇಲ್ವೆಗಳಿಗೂ ಹಿಂದಿನಿಂದಲೂ ಸಮರಸ ಸಂಬಂಧವಿಲ್ಲ. ಭಾರತದ ರೇಲ್ವೆ ನಕ್ಷೆಯನ್ನು ಅವಲೋಕಿಸಿದರೆ ಇದು ವೇದ್ಯವಾಗುವುದು. ಕರ್ನಾಟಕದ ಕರಾವಳಿಯಲ್ಲಿರುವ ಮಂಗಳೂರಿನೊಡನೆ ರಾಜ್ಯದ ಹಿನ್ನಾಡಿನ್ನು ಜೋಡಿಸಲು ಹಾಸನ—ಮಂಗಳೂರು ರೇಲ್ವೆ ಬೇಕೆಂಬುದು ಇಂದು– ನಿನ್ನೆಯ ಬೇಡಿಕೆಯಲ್ಲ. ಒಂದಲ್ಲ ಒಂದು ಕಾರಣದಿಂದ ಇದನ್ನು ಈರೀಂಛಿಸಲು ಹಲವಾರು ದಶಕಗಳನ್ನೇ ದೂಡಲಾಯ್ತು. ಮಂಗಳೂರನ್ನು ಸೆರ್ನಪುತು ಬಂದರಾಗಿ ಕಟ್ಟಲು ಕೇಂದ್ರ ಸರಕಾರ ನಿರ್ಧರಿಸಿದ ಮೇಲೆ ಈ ರೇಲ್ವೆಯ ಕಾರ್ಯಾರಂಭವಾಯ್ತು. ಆಗ, ೧೯೭೭ರ ನೇಳೆಗೆ ಇದು ಸಂಪೂರ್ಣವಾಗುವುದೆಂದು ಹೇಳಲಾಯ್ತು. ಆದರೆ, ದಕ್ಷಿಣ ರೇಲ್ವೆಯ ಜನರಲ್ ಮೆನೇಜರರಾದ ಶ್ರೀ ಜೆನ್ನ ಬಸಪ್ಪನವರು ಈ ಬಗ್ಗೆ ಈಗ ಸಂದೇಹದ ಮೂಕುಗಳನ್ನಾಡಿದ್ದಾರೆ. :ಮಂಗಳೂರು–ಪುತ್ತೂರು; ಹಾಸನ–ಸಕಲೇಶಪುರಗಳ ನಡುವಣ ದಾರಿ ಸಂಪೂರ್ಣವಾಗುವುದೆಂದೂ ಗಟ್ಟಿದ ದಾರಿ ಮಾತ್ರ ಆ ವೇಳೆಗೆ ಪೂರ್ಣವಾಗದೆಂಬೂ ಅವರು ಹೇಳಿದ್ದಾರೆ ಇದಕ್ಕೆ ಅವರು ನೀಡುವ ಕಾರಣವೊಂದೇ– ಮಂಗಳೂರು ಬಂದರಿನ ನಿರ್ಮಾಣಕಾರ್ಯ ಸಂಪೂರ್ಣವಾಗದೆ ಹಾಸನ—ಮಂಗಳೂರು ರೇಲ್ವೆ ಹೆಚ್ಚು ಪ್ರಯೋಜನಕರವಲ್ಲ; ಲಾಭದಾಯಕವೂ ಅಲ್ಲ.

ದಕ್ಷಿಣ ರೇಲ್ವೆಯ ಪ್ರಧಾನಾಧಿಕಾರಿಗಳು ಬಂದರಕ್ಕೂ ರೇಲ್ವೆಗೂ ತಾಳಿತಂತಿಕೂಡಿಸಿಕೊಂಡಿದ್ದಾರೆ. ಹಾಸನ—ಮಂಗಳೂರು ರೇಲ್ವೆಯ ರಚನೆಯನ್ನು ಕೇಂದ್ರ ಎತ್ತಿಕೋಡದ್ದು ಈ ತಾಳಿತಂತಿಯಿಂದಲೇ ಎಂಬುದನ್ನು ಒಪ್ಪಿಕೊಂಡರೂ ಈ ತಂತಿ ಸಂಬಂಧ ಇನ್ನೂ ಏಕೆ ಮುಂದರಿಯಬೇಕೆಂದು ಅರ್ಥವಾಗುತ್ತಿಲ್ಲ. ಕೈಗೆತ್ತಿಕೊಂಡಿರುವ ರೇಲ್ವೆದಾರಿಯನ್ನು ಸಂಪೂರ್ಣಗೊಳಿಸಲು ಬಂದರವನ್ನೇಕೆ ಕಾಯಬೇಕು? ರೇಲ್ವೆ ರಚನೆಯನ್ನು ನಿಲ್ಲಿಸುವುದರಿಂದ ಅಥವಾ ಕುಂಠಿತಗೊಳಿಸುವುದರಿಂದ ಏನು ಲಾಭವಿವೆ? ಮಂಗಳೂರು–ಪುತ್ತೂರು ನುತ್ತು ಹಾಸನ–ಸಕಲೇಶಪುರಗಳ ನಡುವೆ ರೇಲು ಓಡಬಹುದಾದರೆ. ನಡುವಣ ಕೆಲವು ಮೈಲಿಗಳ ನಡುವೆಯೇಕೆ ಓಡಬಾರದು? ಕರ್ನಾಟಕವ ಕಡೆಗೆ ಕೇಂದ್ರ ಸರಕಾರದ ದೃಷ್ಟಿ ಹೇಗಿದೆಯೆಂಬುದಕ್ಕೆ ಇದೂ ಒಂದು ಉದಾಹರಣೆ. ರಾಜ್ಯಕ್ಕೆ ಹತ್ತು–ಹಲವು ರೀತಿಯಿಂದ ಅನ್ಯಾಯವಾಗುತ್ತಿರುವುದನ್ನು ಕೆಂಡೂ ಕೆಂಡೂ ಸಮ್ಮನಾಯಕರು ನಪುಂಸಕರಾಗಿದ್ದಾರೆ. ದೇಶದಲ್ಲಿನ ಮಿಟರ್ ಗೇಜ್ ದಾರಿಯೆಲ್ಲವನ್ನೂ ಬ್ರಾಡ್ ಗೇಜಾಗಿ ಪರಿವರ್ತಿಸುವುದು ಇಂದಿನ ರೇಲ್ವೆ ನೀತಿ. ಹುಣಿ—ಬೆಂಗಳೂರು ಮಾರ್ಗದಲ್ಲಿ ಬ್ರಾಡ್ ಗೇಜು ಮಿರಜಿನ ತನಕ ಬಂದು ಅಲ್ಲೇ ನಿಂತು ಹೋಯಿತು. ಅಲ್ಲಿಂದದು ಬೆಂಗಳೂರಿಗೆ ಬರಲು ಇನ್ನೆಷ್ಟು ದಶಕಗಳು ಬೇಕೋ ಯಾರಿಗೆ ಗೊತ್ತು? ಹೊಸತಾಗಿ ರಚಿತವಾಗುತ್ತಿರುವ ಹಾಸನ—ಮಂಗಳೂರು ದಾರಿಯೂ ದರೂ ಬ್ರಾಡ್ ಗೇಜಿನಲ್ಲಿರಲಿ ಎಂದು ಕೇಂದ್ರದ ಮುಂದೆ ಮೊಣಕಾಲೂರಿ ಬೇಡಿದರೆ, ಈಗ ಮಿಟರೇ ಸಾಕು: ಮುಂದೆ ಆಗತ್ಯ ಕಂಡರೆ ಬ್ರಾಡಾಗಿ ಪರಿವರ್ತಿಸೋಣವೆಂದು ಸಮಾಧಾನ ಪಡಿಸಲಾಯ್ತು. ಎರಡೆರಡು ವೆಚ್ಚವನ್ನು ಭರಿಸುವುದರಿಂದ ಯಾರಿಗೆ ಲಾಭವೆಂಬುದು ಅಧಿಕಾರಿಗಳಿಗೇ ತಿಳಿದಂತಿಲ್ಲ ಇದೇ ರೀತಿಯಲ್ಲಿ ರಾಜ್ಯದ ಕರಾವಳಿಯ ರೇಲುದಾರಿಯ ಕತೆ. ಮಂಗಳೂರು—ಗೋವೆ ರೇಲುದಾರಿಯೊಂದು ನಿರ್ಮಾಣವಾದರೆ, ಕನ್ಯಾಕುಮಾರಿಯಿಂದ ಬೊಂಬಾಯಿಗೆ ನೇರ ದಾರಿಯೂ ಆಗುವುದು; ಕರಾವಳಿಯ ಅಭಿವೃದ್ಧಿಗೆ ಕಾರಣವಾಗುವುದು. ಸುಮಾರು ಇನ್ನೂರು ಮೈಲಿಯ ಈ ದಾರಿ ಬೇಕೆಂದು ನೂರು ವರ್ಷಗಳಿಂದಲೂ ಬೇಡಿಕೆಯಿದ್ದರೂ, ದೇಶ ಸ್ವತಂತ್ರ ಗೊಂಡು ಕಾಲು ಶತಮಾನ ಕಳೆದರೂ ಇದಿನ್ನೂ ತತ್ವತಃ ಸ್ವೀಕೃತವಾಗಲಿಲ್ಲ.

ಸದ್ಯದ ರೇಲ್ವೆ ಸಚಿವರು ಕನ್ನಡಿಗರಾದ ಶ್ರೀ ಕೆಂಗಲ್ ಹನುಮಂತಯ್ಯನವರು. ಶ್ರೀಯುತರು ಕರ್ನಾಟಕದ ಭವ್ಯ ಕನಸುಗಾರರಲ್ಲಿ ಒಬ್ಬರು. ಮೈಸೂರಿನ ಮುಖ್ಯ ಮಂತ್ರಿಗಳಾಗಿದ್ದಾಗ, ಕರ್ನಾಟಕದ ಏಕತೆಗಾಗಿ ಬಹಳಷ್ಟು ದುಡಿದವರು ಕನ್ನಡದ ಅವಶ್ಯಕತೆಗಳನ್ನು ಚೆನ್ನಾಗಿ ಮನವರಿಕೆ ಮಾಡಿಕೊಂಡಿರುವವರು. ಹಾಗೆಯೇ ದಕ್ಷಿಣ ರೇಲ್ವೆಯ ಪ್ರಧಾನಾಧಿಕಾರಿ ಶ್ರೀ ಜೆನ್ನ ಬಸಪ್ಪನವರೂ ಕನ್ನಡಿಗರೇ. ಈ ಇಬ್ಬರು ಕನ್ನಡಿಗರು ಕರ್ನಾಟಕದ ಮೇಲೆ ಪಕ್ಷಪಾತ ವಹಿಸಬೇಕೆಂದು ಯಾರೂ ಕೇಳುವುದಿಲ್ಲ; ನಿಷ್ಪಕ್ಷಪಾತತನದಿಂದ ವರ್ತಿಸಬೇಕೆಂದು ಮಾತ್ರ ಕನ್ನಡಿಗರು ಕೇಳುತ್ತಾರೆ. ಹಾಸನ—ಮಂಗಳೂರು ರೇಲ್ವೆಯು ಎಂದೋ ಮಂಜೂರಾದುದು. ಅನನ್ನು ಬೇಗನೇ ಪೂರ್ಣಗೊಳಿಸುವುದು ಪಕ್ಷಪಾತವಾಗುವುದಿಲ್ಲ ಬಂದರದ ಯೋಜನೆಗೆ ಅದನ್ನು ಗಂಟು ಹಾಕುವುದರಿಂದ ಬಂದರದ ರಚನೆ ತೀವ್ರವಾಗುವುದಿಲ್ಲ; ರೇಲ್ವೆಗೂ ಲಾಭವಾಗುವುದಿಲ್ಲ. ಮೊದಲಾಗಿ ರೇಲ್ವೆ ಕಾರ್ಯ ಮುಗಿದರೆ, ಬಂದರದ ಕಾರ್ಯವನ್ನು ತ್ವರೆಗೊಳಿಸುವಂತೆ ಒತ್ತಾಯ ತರುವುದೂ ಸಾಧ್ಯವಾಗುತ್ತದೆ. ಶ್ರೀ ಕೆಂಗಲ್ ಮತ್ತು ಶ್ರೀ ಜೆನ್ನಬಸಪ್ಪನವರು ಈ ಸಂಗತಿಗಳನ್ನು ಮನಸಾರೆ ಮೊಡಿಕೊಳ್ಳಬೇಕು. ಕನ್ನಡಿಗರ ತಾಳ್ಮೆಯನ್ನು ಇನ್ನೂ ಇನ್ನೂ ಪರೀಕ್ಷಿಸಲು ಹೋಗಬಾರದು. ಹತ್ತಿಯಂತಹ ಕೋಮಲ ವಸ್ತುವನ್ನಾದರೂ ದಟ್ಟಣಿಸಿ ಕಠೋರವಾಗಿಸುವುದು ಸಾಧ್ಯವೆಂಬುದವರಿಗೆ ತಿಳಿಯದ ಸಂಗತಿಯಲ್ಲ. ರಾಜ್ಯದ ಎಲ್ಲ ಎಂಪಿಗಳೂ ಈಗ ಇಂಡಿಕೇಟಿಗರಿರುವಾಗ,ರಾಜ್ಯಕ್ಕೆ ಕೇಂದ್ರದಿಂದಾಗುತ್ತಿರುವ ಪಕ್ಷಪಾತವನ್ನು ಮೂಕಸ್ಪೇಕ್ಷಕವಾಗಿ ನೋಡುತ್ತಿರುವುದು ಸೋಜಿಗವೇ ಸರಿ.

ಶ್ರೀ ಹನುಮಂತಯ್ಯನವರಿಗೆ ಮೊದಲು ಶ್ರೀ ಪೂಣಚ್ಚರು ಕೇಂದ್ರದಲ್ಲಿ ರೇಲ್ವೆ ಸಚಿವರಾಗಿದ್ದರು. ಅವರು ತಮ್ಮ ಅಧಿಕಾರಾವಧಿಯಲ್ಲಿ ಹಾಸನ–ಮಂಗಳೂರು ದಾರಿಯನ್ನು ಮಂಜೂರುಮಾಡಲು ಪ್ರಯತ್ನಿಸಿ ಯಶಸ್ವಿಗಳಿಸಿದರು. ಅವರೀಗ ಸಿಂಡಿಕೇಟ್‌ನಲ್ಲಿ ಉಳಿದುಕೊಂಡಿದ್ದಾರೆಂದು ಅವತಾರಂಭಿಸಿದ ರೇಲ್ವೆಯನ್ನು ಕುಂಠಿತಗೊಳಿಸುತ್ತಿರುವುದಾದರೆ, ಇದು ಅವಶ್ಯ ಖಂಡನೀಯ. ರಾಜ್ಯದ ಪ್ರಗತಿಯಲ್ಲಿ ಪಕ್ಷ ಸಂಗಡಗಳ ಭೇದ ತಲೆಹಾಕತೊಡಗಿದರೆ, ಅದರಷ್ಟು ಪಾಣಿಕಾರಕವಾದ ದುರಂತ ಮತ್ತೊಂದಿಲ್ಲ. ಆದುದರಿಂದ ಶ್ರೀ ಕೆಂಗಲ್ಲರು ಈ ಸಂಬಂಧ ವ್ಯಕ್ತಿಗತ ಆಸಕ್ತಿ ತಳೆಯಬೇಕು. ಈ ದಾರಿಯು ಪೂರ್ಣ ನಿರ್ಧಾರದಂತೆ ೧೯೭೭ರ ಹೊತ್ತಿಗೇ ಸಂಪೂರ್ಣಗೊಂಡು ಸ್ವಯೂಣಕ್ಕೆ ದೊರೆಯುವಂತಾಗಲು ಸ್ಪಷ್ಟ ನಿರ್ದೇಶನವೀಯಬೇಕು. ಅದರ ಜತೆಗೆ ರೇಲ್ವೆಯಲ್ಲಿ, ಆಕಾಶವಾಣಿಯಲ್ಲಿ, ಶಿಕ್ಷಣದಲ್ಲಿ ...ಎಲ್ಲೆಲ್ಲಿಯೂ ರಾಜ್ಯಕ್ಕಾಗುತ್ತಿರುವ ಪಕ್ಷಪಾತ–ಅನ್ಯಾಯವನ್ನು ಪ್ರತಿಭಟಿಸಲು ಮುಂದಾಗ ಬೇಕು ರಾಜ್ಯದ ಎಲ್ಲ ಎಂಪಿಗಳೂ ತನ್ನ ಪಕ್ಷದವರೇ, ಅಧಿಕಾರಾರೂಢ ಪಕ್ಷದವರೇ, ಆಗಿರುವಾಗಲೂ ಕರ್ನಾಟಕವನ್ನಿನಿಡೆಗೊಂದು ಪರಿಹಾರವಾಗದೆ ಹೋದರೆ, ಇದು ಖಂಡಜ್ಜೀವ ಕಾಡುತ್ತಿರುವುದೆಂದೇ ಹೇಳಬೇಕಾಗುತ್ತದೆ.

ಇವರು ವಚನ ಭ್ರಷ್ಟರು

ಯುವ ತುರುಷ್ಕರಾದ ಶ್ರೀ ಮೋಹನ ಧಾರಿಯೊರನ್ನು ಸಚಿವ ವದನಿ ನೀಡಿ ಶ್ರೀಮತಿ ಗಾಂಧಿಯವರು ಬಾಯ್ಮುಚ್ಚಿಸಿಕೊಂಡರೂ ಇನ್ನೊಬ್ಬ ಶ್ರೀ ಚಂದ್ರಶೇಖರರನ್ನು ಸುಮ್ಮನಿರಿಸುವುದು ಅವರಿಗೆ ಸಾಧ್ಯವಾಗಲಿಲ್ಲ. ಶ್ರೀ ಚಂದ್ರಶೇಖರರು ನಿರ್ಮಗ್ನ–ನಿರ್ಭೀಕ–ನಿರ್ಧಿಡೆಯ ವ್ಯಕ್ತಿತ್ವವುಳ್ಳವರೆಂದೂ ಅವರನ್ನು ತನ್ನ ಸೆರೆನಿಡೆ ಆಡಗಿಸಿಕೊಂಡರೂ ಅವರು ಅಲ್ಲೇ ಟಿ.ಕಾಸ್ತ್ರ ಬಿಡುವರೆಂದೂ ಅಕೆಗೆ ಚೆನ್ನಾಗಿಯೇ ಗೊತ್ತು. ಆದುದರಿಂದಲೇ ಶ್ರೀ ಚಂದ್ರಶೇಖರರನ್ನವ

(ಹತ್ತನೇ ಪುಟ ನೋಡಿರಿ)

ಪುತ್ತೂರು ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O.S. No. 462/70.

H. ರಾಮಯ ಗೌಡ ಸಹಾ —ವಾದಿರು
Vs.
H. ಅಣಯ್ಯ ಗೌಡ (ಪೌತಿ) ಸಹಾ
—ಪ್ರತಿವಾದಿರು
3. H. ಗುಡ್ಡಪ್ಪ ಗೌಡ. H. ಅಣಯ ಗೌಡ್ರ ಮಗ. ಸುಳ್ಳ ತಾಲ್ಲು ದೇವಚಳ್ಳ ಗ್ರಾಮದ ಕಂಪ್ರಿಹ್ಯಾಡಿ —ಇತರರಿಗೆ

ಮೇಲಿನ ದಾವೆಯ ವಾದಿಯು ಹಿಂತೆಗಿಯಿಸಿ ಕೊಡಬೇಕಾಗಿ ನಿಂಸು ಮತ್ತು ಇತರರ ಮೇಲೆ ಮೂಡಿದ ಮೇಲಿನ ಸಂಖ್ಯೆಯ ನಿಂಸು ಹಾಜರಾತಿ ಬಗ್ಗೆ ತಾ. 3—12—1971ಕ್ಕೆ ಇಟ್ಟಿದೆ. ಸಪ್ರ ದಿವಸ ನೀವು ಸ್ವತಹ ನ ವಕೀಲರ ದ್ವಾರಾ ಹಾಜರಾಗಿ ಉದಾಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಪೂರ್ತಿ ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

ಕೋರ್ಟು ಹ್ಯುಂ ಪ್ರಕಾರ
Sd|- K. Rama Bhat
Advocate for Plaintiff.
ಪುತ್ತೂರು 9.11.71.

ಬಾಹ್ಯ ಪ್ರದರ್ಶನ ಯುಗವಲ್ಲವೆ?

'ಬೆಲೆಯೇರಿಕೆಯ ವಿರುದ್ಧ ಚಳುವಳಿ ನಡೆಯಿತಲ್ಲಾ, ಅದರ ಪರಿಣಾಮವೇನಾಯ್ತೂಂತ?'

'ಆಗೋದೇನು, ಎಲ್ಲಾ ಚಳುವಳಿಗಳ ಸಾಲಿನಲ್ಲಿ ಇದೂ ಒಂದಾಯ್ತು. ಬೆಲೆ ಇಳಿದದ್ದು ಕಾಣಲಿಲ್ಲ ...'

'ಅಲ್ರಿ, ಬೆಲೆಯೇರಿಕೆಯನ್ನು ತಡೆಕಟ್ಟುತ್ತೀವೆ ಕಟ್ಟುತ್ತೀನೆಯೆಂದು ದೇಶದ ನಾಯಕ-ನಾಯಿಕೆಯರು ಒಂದು ವರ್ಷದಿಂದಲೂ ಹೇಳುತ್ತಲೇ ಬಂದಿದ್ದಾರೆ....'

'ಹೇಳಿದರೆ ಸಾಕಾದೀತೆ? ಸರಕಾರದ ಮಂತ್ರಿ-ಮಾಗಧರು ನೂರಾರು ಭರವಸೆ ಕೊಡುತ್ತ ಹೋಗುತ್ತಾರೆ; ಅವೆಲ್ಲವನ್ನೂ ಪೂರೈಸುವುದು ಪರಮಾತ್ಮನಿಗೇ ಸಾಧ್ಯವಿಲ್ಲದಿರುವಾಗ ಬಡದೇಶವೊಂದರ ಮಂತ್ರಿಗಳು ಏನುನೂಡಬೇಕು?'

'ಮತ್ತೆ ಭರವಸೆ ಕೊಡುವುದಾದರೂ ಏಕೆ?'

'ಕಣ್ಣಿಗೆ ಕಾಣಿಸಿಕೊಂಡ ಮೂರಿ ಮನೆ ಬಾಗಿಲನ್ನು ಹೋಗದಿರಲಿ ಎಂದು.'

'ಅಂದ್ರೆ ಮಂತ್ರಿ ಮೂತಿಗೆ ಕಾಸಿನ ಬೆಲೆಯಿಲ್ಲ ...'

'ಕಾಸಿನ ಬೆಲೆ ಮಂತ್ರಿಗಳಿಗು ಬೇಡ; ಅವರಿಗೆ ಬೇಕಾಗಿರೋದು ಓಟಿನ ಬೆಲೆ ಮಾತ್ರ....'

"ಓ, ಹಾಗಂದರೆ, ಅದಲ್ಲ ಇಲೆಕ್ಷನ್ ಸ್ಟಂಟು..."

"ಅಹೂ ಸ್ಟಂಟು; ಇದೂ ಸ್ಟಂಟು .."

"ಯಾವುದು?"

"ಅಲ್ಲ, ತುಟ್ಟಿ ವಿರೋಧ ಚಳುವಳಿ."

"ಯಾಕೆ ಹಾಗಂತೀರಿ? ಬೆಲೆಯೇರಿಕೆಯನ್ನು ಸರಕಾರ ತಾನಾಗಿ ತಡೆಯುವುದಿಲ್ಲ; ಹಾಗಿರುವಾಗ, ಆಕಡೆಗೆ ಸರಕಾರದ ಗಮನ ಸೆಳೆಯುವುದು ಹೇಗೆ ತಪ್ಪಾದೀತು?"

'ಗಮನ ಸೆಳೆಯುವುದು ತಪ್ಪಲ್ಲ ಕಣೇ. ಆದರೆ, ಈ ಚಳುವಳಿಯನ್ನು ಸಂಘಟಿಸಿದವರಿಗೆ, ಚಳುವಳಿಯಲ್ಲಿ ಭಾಗವಹಿಸಿದವರಿಗೆ ಹೃದಯ ಪೂರ್ವಕ ಕಾಳಜಿಯಿದೆಯೇ ಎಂಬುದು ಸಂದೇಹ ..'

'ಯಾಕೊ....'

'ದುಬಾರಿ ಬೆಲೆ ಹೇಳುವವರಿಂದ, ದುಬಾರಿ ಬೆಲೆ ಕೊಳ್ಳುವವರಿಂದ, ಕೃತಕ ಅಭಾವ ಪರಿಸ್ಥಿತಿ ನಿರ್ಮಾತರಿಂದ ಬೆಲೆಯೇರಿಕೆಯ ವಿರುದ್ಧ ಚಳುವಳಿ ನಡೆಯುವುದೆಂದರೆ, ಬೆಕ್ಕು ಸನ್ಯಾಸಿಯೂಗಿ ಇಲಿಗಳ ಜಾಥಾ ಹೊರಡಿಸಿ ಕಾಶಿಯಾತ್ರೆ ಮಾಡಿಸಿದಂತೆಯೇ ಸರಿ'

"ಅಂದ್ರೆ, ಅವರೆಲ್ಲ..."

'ಅವರೆಲ್ಲ ಅಂತ ಯಾಕೆ ಹೇಳಬೇಕು? ಅವಶ್ಯಕ ಪದಾರ್ಥಗಳನ್ನು ಜನತೆಗೆ ಪೂರೈಕೆ ಮಾಡುವ ಮಧ್ಯವರ್ತಿಗಳಾದ ವ್ಯಾಪಾರಿ ಬಳಗ ಈ ಚಳುವಳಿಯಲ್ಲಿ ದೇಶವ್ಯಾಪಿಯಾಗಿ ಭಾಗವಹಿಸಿದೆ?"

'ಅದು ಹೌದೂನ್ನಿ, ಸರಕಾರ ಬೆಲೆಯೇರುವುದಿಲ್ಲ ಅನ್ನೋದು; ಇಲ್ಲಿ ಒಂದೆರಡು ಪೈಸೆ ಬೆಲೆಯೇರಿಸುತ್ತಲೇ ಹೋಗೋದು.'

'ನೋಡು, ಇದು ಬರಿಯ ಚಿಲ್ಲರೆ ವ್ಯಾಪಾರಿಗಳ ತಪ್ಪಲ್ಲ. ಇಡಿಯ ವ್ಯಾಪಾರಿ ಬಳಗವೇ ಇದಕ್ಕೆ ತುಸು ಮಟ್ಟಿನ ಹೊಣೆ. ಸರಕಾರ ಅಂಕೆ-ಸಂಖ್ಯೆಗಳ ಲೆಕ್ಕಾಚಾರ ಹೇಳಿ ಅಭಾವ ಪರಿಸ್ಥಿತಿಯಿಲ್ಲವೆಂದು ಸಾರಿದರೆ, ಈ ವರ್ಗ ಅದೆಲ್ಲ ಕಾಗೆ ಲೆಕ್ಕ ಎಂದು ಪಟಾಕಿ ಹಾರಿಸಿ, ತಮ್ಮ ಸ್ವಾರ್ಥ ಸಾಧಿಸ ಹೊರಡುತ್ತದೆ ...'

'ಅಗ್ರೆಲ್ಲೂ ನೋಡಿ, ಬಂಗ್ಲಾ ನಿರಾಶ್ರಿತರ ಹೊಣೆ ನಮ್ಮ ಮೇಲೆ ಹೆಚ್ಚುತ್ತ ಬಂದಂತೆ ಬೆಲೆಯೇರಿಕೆಯೂ ಏರುತ್ತ ಬಂದಿದೆ.'

"ಹೌದು. ಇದಕ್ಕೆಲ್ಲ ಯಾರು ಹೊಣೆಗಾರರು?"

"ಯಾರು?"

"ನೋಡು, ಮೊದಲನೆಯದಾಗಿ ಹೊಟ್ಟುಮಾಡಬೇಕಾದ್ದು ಸರಕಾರವನ್ನು."

'ಯಾಕೆ?'

'ಯಾಕೆಂದರೆ, ಸರಕಾರ ಪರಿಣಾಮಕಾರಿಯಾಗಿ ಬೆಲೆಯೇರದಂತೆ ತಡೆಯಲು ಯಾವ ಕ್ರಮವನ್ನೂ ಕೈಕೊಂಡಿಲ್ಲ.'

'ಅಲ್ರಿ ಮೊನ್ನೆ ಮೊನ್ನೆ ಯಾರೋ ವ್ಯಾಪಾರಿಗಳ ಅಂಗಡಿ ನುಗ್ಗಿ ಅಕ್ರಮ ಸಂಗ್ರಹವನ್ನು ಬಯಲಿಗೆಳೆದರಂತಲ್ಲಾ....'

"ಅಲ್ವೆ, ಯಾರೋ ಒಬ್ಬಿಬ್ಬರನ್ನು ಮಾತಾಡಿಸಿದ ಮಾತ್ರಕ್ಕೆ...."

'ಅಲ್ರಿ, ಸ್ಥಳೀಸುಲಾಕ ನ್ಯಾಯದಿಂದ....'

'ನೋಡು, ಕಳ್ಳ ಸಂತೆ ಕಲಿತುಕೊಳ್ಳುವುದು ಸಾಂಕ್ರಾಮಿಕ ರೋಗ. ಉದ್ಯೋಗಿ ಬಂಧುಗಳು ಸಿಕ್ಕಿ ಬಿದ್ದರೆಂದು ತಿಳಿದ ಮೇಲೆ, ಅವರನ್ನು ಬಿಡಿಸುವುದಕ್ಕೂ ತಮ್ಮ ರಕ್ಷಣೆಗೂ ಉಳಿದವರು ಮುಂದಾಗುತ್ತಾರೆ....'

'ಅದು ಹೌದ್ರಿ.....ಯಾರೋ ಒಬ್ಬ ಬೆಂಗಳೂರಿನ ಕಾಳಸೂರುಕಟ್ಟೆ ಕಥೀನು ಇಡಿಕೇಟಿಗೆ ಕೆಲವು ಲಕ್ಷ ಸಹಾಯ ಮೂಡಿದನಂತೆ; ಕೂಡಲೇ ಆದಾಯ ತೆರಿಗೆ ಅಧಿಕಾರಿಗೆ ಕರೆ ಬಂತಂತೆ ಅವರ ಸುದ್ದಿಗೆ ಹೋಗ ಬೇಡೀಂತ....'

'ಅದೇ ಅಂದದ್ದು. ವ್ಯಾಪಾರಿ ವರ್ಗಕ್ಕೆ ರಾಜ್ಯಕೀಯ ಪುಡಾರಿಗಳ ಬೆಂಬಲವಿಲ್ಲದೆ ಹೋದರೆ, ಹೀಗೆಲ್ಲ ಏಕಾಗುತ್ತದೆ?'

'ಅಲ್ರಿ, ಸರಕಾರದ ಬಳಿ ಆಹಾರ ಧಾನ್ಯಗಳ ದಾಸ್ತಾನು ಧಾರಾಳವಿದೆ, ದೇಶದಲ್ಲಿ ಸಮೃದ್ಧ ಉತ್ಪಾದನೆಯೂ ಆಗಿದೆ. ಇದು ಜನಕ್ಕೂ ಗೊತ್ತು. ಆದುದರಿಂದ ಬಂಗ್ಲಾ ನಿರಾಶ್ರಿತರ ಆಗಮನದಿಂದೀನೂ ಅಭಾವ ಉಂಟಾಗುವುದಿಲ್ಲವೆಂದು ಆಹಾರ ಸಚಿವರು ಹೇಳುತ್ತಾರೆ. ಆದರೂ ಬೆಲೆ ಸುಗ್ಗಿಯ ಕಾಲದಲ್ಲೂ ಇಳಿದದ್ದು ಇಲ್ಲ. ಅದು ಏರುತ್ತಲೇ ಇದೆ.'

'ಮತ್ತೆ ಬೇಳೆ—ಕಾಳುಗಳ ಕತೆಯೇಂಥದು? ಸಕ್ಕರೆಯ ಮಾತೇನು? ಯಾಸ

(ಒಂಭತ್ತನೇ ಪುಟ ನೋಡಿರಿ)

ಓಂ

॥ ಶ್ರೀ ಮಂಜುನಾಥಾಯ ನಮಃ ॥

ಶ್ರೀ ಧರ್ಮಸ್ಥಳ ಲಕ್ಷದೀಪೋತ್ಸವ

ಸರ್ವಧರ್ಮ ಮತ್ತು ಸಾಹಿತ್ಯ ಸಮ್ಮೇಳನಗಳು

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪ್ರತಿ ವರ್ಷ ನಡೆಯುವ ಲಕ್ಷದೀಪೋತ್ಸವವು

ಇದೇ ತಾ. 13-11-71ನೇ ಶನಿವಾರದಿಂದ ತಾ.18-11-71ನೇ ಗುರುವಾರದ ತನಕ ನಡೆಯಲಿದೆ.

ಕಾರ್ಯಕ್ರಮಗಳು ಈ ಕೆಳಗಿನಂತಿವೆ :—

13-11-1971: ಶನಿವಾರ: **ಹೊಸಕಟ್ಟೆ ಉತ್ಸವ**

14-11-1971: ರವಿವಾರ: **ಕೆರೆಕಟ್ಟೆ ಉತ್ಸವ**

15-11-1971: ಸೋಮವಾರ: **ಉದ್ಯಾನನ ಉತ್ಸವ**

16-11-1971: ಮಂಗಳವಾರ: ಸಂಜೆ 4 ಘಂಟೆಗೆ **ಸರ್ವಧರ್ಮ ಸಮ್ಮೇಳನ**

ವಿಷಯ: ದೈನಂದಿನ ಚಟುವಟಿಕೆಗಳಲ್ಲಿ ಆಧ್ಯಾತ್ಮಿಕ ಹಾಗೂ ನೈತಿಕ ಮೌಲ್ಯಗಳ ಪಾತ್ರ

ಉದ್ಘಾಟಕರು. ಸನ್ಯಾನ್ಯ ಶ್ರೀ ಕೋಕ ಸುಬ್ಬರಾವ್ (ಭಾರತದ ಮಾಜಿ ಶ್ರೇಷ್ಠ ನ್ಯಾಯಾಧೀಶರು)

ಅಧ್ಯಕ್ಷರು: ಪೂಜ್ಯ ಆಚಾರ್ಯ ಬುದ್ಧರಕ್ಷಿತ ತೇರಾ

ಸಂಗೀತ: ಸಂಗೀತ ವಿದ್ವಾನ್, ಗಾನಸುಧಾಕರ, ಶ್ರೀ ಮಹಾರಾಜಪುರಂ ಸಂತಾನಂ—ಇವರಿಂದ.

ರಾತ್ರಿ: ಕಂಚಿಮಾರುಕಟ್ಟೆ ಉತ್ಸವ

17-11-1971: ಬುಧವಾರ: ಸಂಜೆ 4 ಘಂಟೆಗೆ **ಸಾಹಿತ್ಯ ಸಮ್ಮೇಳನ**

ವಿಷಯ: ಕವಿ ಮತ್ತು ಕಾಲಧರ್ಮ

ಉದ್ಘಾಟಕರು. ಡಾ. ಜಿ. ಎಸ್. ಶಿವರುದ್ರಪ್ಪ

ಅಧ್ಯಕ್ಷರು: ಪ್ರೊ. ವಿ. ಸೀತಾರಾಮಯ್ಯ

ಸಂಗೀತ: ಗಾನಕಲಾನಿಧಿ ಶ್ರೀ ಪಿ ರಾಮಚಂದ್ರನ್ (ಶ್ರೀ ಜಿ.ಎನ್. ಬಾಲಸುಬ್ರಹ್ಮಣ್ಯಂ ಅವರ ಶಿಷ್ಯ)

18-11-1971: ಗುರುವಾರ: ರಾತ್ರಿ 8 ಘಂಟೆಗೆ: **ಸಮವಶರಣ ಪೂಜೆ**

ರಾತ್ರಿ 10 ಘಂಟೆಗೆ: ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಯಕ್ಷಗಾನ ನಾಟಕಮಂಡಲಿಯವರಿಂದ ಸೇವೆಯ ಆಟ.

ಸರ್ವರಿಗೂ ಆದರದ ಆಮಂತ್ರಣ

ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು
ಅಧ್ಯಕ್ಷರು: ಸ್ವಾಗತ ಸಮಿತಿ
ಸರ್ವ ಧರ್ಮ ಮತ್ತು ಸಾಹಿತ್ಯ ಸಮ್ಮೇಳನ.

ಶ್ರೀ ಕ್ಷೇತ್ರ ಧರ್ಮಸ್ಥಳ
9—11—1971.

ಕೆಲವು ಬಗೆಯ ನೆನಪುಗಳ

ಕಾರ್ಕಳದಲ್ಲಿ ಸಮ್ಮೇಳನ

ಈ ಇಸವಿಯ ಅಕ್ಟೋಬರ 31 ಮತ್ತು ನವಂಬರ 1ರಲ್ಲು ಈ ಜಿಲ್ಲೆಯ ಮೊದಲ ಬಾರಿಯ ಸಾಹಿತ್ಯ ಸಮ್ಮೇಳವು ಬಲು ಯಶಸ್ವಿಯಾಗಿಯೂ ವಿಜೃಂಭಣೆಯಿಂದಲೂ ನಡೆಯಿತೆಂದು ಈಗಾಗಲೇ ಪ್ರಕಟವಾದ ಹಲವರ ಬರೆಹಗಳಿಂದ ನಮಗೆ ತಿಳಿದಿದೆ. (ಈಯೆರಡು ದಿನಗಳ ವರದಿ ತಾ 4ರ ಸಂಚಿಕೆಯಲ್ಲಿದೆ). ಹಾಗಾಗಿ, ಇದೀಗ ಈ ಸಮ್ಮೇಳನದಲ್ಲಿ ನಾನು ಕಂಡ ಬೇರೆ ಕೆಲವು ವಿಶೇಷಗಳನ್ನು ನೆನಪಿಸಲುಜ್ಜುಗಿಸುವೆನು.

೧) ಹಲವರು ಸಾಹಿತ್ಯಭಿಮಾನಿಗಳು ಜಿಲ್ಲೆಯ ಮೂಲೆ ಮೂಲೆಗಳ ಹಳ್ಳಿಗಳಿಂದ ಇಲ್ಲಿಗೆ ಬಂದಿದ್ದಾರೆ; ಹಲವರು ವೃದ್ಧರೂ, ಕೆಲವರು ತರುಣರೂ ಈ ಗುಂಪಿನವರಾಗಿದ್ದಾರೆ. ಮತ್ತೆ ಕೆಲವರು ಸಾಹಿತ್ಯಾರಾಧಕರಾದವರು (ಇದೀಗ ಅಷ್ಟು ಉತ್ಸಾಹದಿಂದ ಸಾಹಿತ್ಯ ಸೇವೆಗೆಯ್ಯುತ್ತಿಲ್ಲಾದರೂಹಿಂದಿನ ತಂತಮ್ಮ ರಂಗದ ಅನುಭವ ವಿಶೇಷಗಳಿಂದಾಗಿ ಸುಪ್ರಸಿದ್ಧರಾಗಿದ್ದವರು); ಇನ್ನು ಕೆಲವರು ಇದೀಗ ನಾಲ್ಕಾರು ವರ್ಷಗಳಲ್ಲಿ ಸಾಹಿತ್ಯವ ವಿವಿಧ ಮುಖಗಳಲ್ಲಿ ತಮಗೆ ನೆಟ್ಟಿದ ಬಗೆಯನ್ನು ಆರಿಸಿ ಅಭ್ಯಾಸ ನೂಡಿ ಪ್ರಸಿದ್ಧಿಗೆಳಸಿದವರು; ಕೆಲವರಾದರೂ ಈ ವಿವಿಧ ವರ್ಗದವರನ್ನು ಕಾಣುತ್ತಾ, ಇವರ ಮಾತನ್ನು ಕೇಳುತ್ತಾ ತಾವು ಮುಂದೆ ಸಾಹಿತ್ಯದಲ್ಲಿ ಅವಾವ ಬಗೆಯನ್ನು ಆರಿಸಬೇಕೆಂದು ತಿಳಿಯಲೆಳಸಿದವರು; ಹೀಗೆ ಹಲವು ತರದಲ್ಲಿರುವವರ ಸಂಪರ್ಕ—ಸಲಿವು— ಹಿಗ್ಗುಗಳು ಈ ತರದ ಸಾಹಿತ್ಯ ಸಮ್ಮೇಳನಕೊಂಮು ಹೊರ ಸವಿಯ ಆನರಣವಾಗಿದೆಯೆಂದರೆ ಸುಳ್ಳಲ್ಲ. ಇವರಲ್ಲದೆ, ಕೇವಲ ವಿನೋದಗಳ ರೀತಿಯಲ್ಲಿ ಆದರೂ ಈಚೆಗೆ ಏನೆಂದು ನೋಡಬಂದವರೂ ಕೆಲವರಿದ್ದರು. ಒಟ್ಟಿನಲ್ಲಿ ದ. ಕ ಜಿಲ್ಲೆಯಲ್ಲಿ ಹೀಗೆಲ್ಲಾ ವಿವಿಧ ಮುಖಗಳ ವ್ಯಕ್ತಿಗಳು ಒಂದೆಡೆ ಸೇರುವಂತಾಗಲು ಈ ಬಾರಿ ಕಾರ್ಕಳದಲ್ಲಿ ಸಮ್ಮೇಳನವನ್ನು ನೆರೆಯಿಸಿದ ಉದಾರಿಗಳಾದ, ಹಿರಿಯರಾದ, ವಿವಿಧ ಸಮಿತಿಯವರೆಲ್ಲರೂ ಅಭಿನಂದನಾರ್ಹರು, ಆವಿಸ್ಮರಣೀಯರೆನ್ನಲು ಸಂದೇಹವಿಲ್ಲ.

ಕಾರ್ಕಳವು ಈ ಸಮ್ಮೇಳದಂತೆ ವಿವಿಧ ರೀತಿಯ ವಿಶೇಷಗಳಿಂದ ಕೂಡಿ ಉತ್ತಮ ಕೂಡಿಕೆಯ 'ಆಡುಂಬೊಲ' ವಾಗಿದೆ: ಆನೆಕೆರೆ, ರಾ ಮ ಸ ಮು ದ್ರ ಗ ಳೆಂಬ ನೀರಿನ ತಾಣಗಳು, ಬೆಟ್ಟದ ಮೇಲಿರುವ ಗೊಮ್ಮಟ ಹಾಗೂ ಬೆಟ್ಟದ ಕಲ್ಲಿಂದ ರೂಪು ತಾಳಿದ ಹೊಸ ಗೋಮಟನ ವಿಗ್ರಹಗಳು, ಅನಂತಶಯನ, ವೆಂಕಟರಮಣರ ಭವ್ಯ ದೇವಾಲಯಗಳು, ಚತುರ್ಮುಖ ಬಸದಿ, ಶ್ರೀರಾಘವೇಂದ್ರರ ವೃಂದಾವನಗಳೆಂಬ ಪುಣ್ಯ—ಪಾವನ ಕ್ಷೇತ್ರಗಳು, ಎಸ್. ವಿ. ಟಿ. ಹೈಸ್ಕೂಲ್ ಮತ್ತು ಶ್ರೀ ಭುವನೇಂದ್ರ ಕಾಲೇಜ್ ಗಳೆಂಬ ವಿದ್ಯಾಸಂಸ್ಥೆಗಳು, ಇತ್ಯಾದಿಗಳು 'ಎಂದಿಗಾದರೊಮ್ಮೆ ಜನರು ಬಂದು' ನೋಡಲೇ ಬೇಕಾದವು ಅಲ್ಲಿ ಸಪಾ ರಾರಾಜಿಸುತ್ತಿವೆ. ಸಮ್ಮೇಳನಕ್ಕೆ ಬಂದವರಿಗೆ ಊಟ ಉಪಾಹಾರಗಳು ರುಚಿಕರವಾಗಿ ದೊರಕಿವೆ. ಇನ್ನೆಮ್ಮೆ ಸಮ್ಮೇಳನಕ್ಕೆ ಅಲ್ಲಿಡೆಯಾಗಲಿ ಎಂಬಂತಿದೆ. ಕಾಲೇಜಿನಲ್ಲಿ ಸಭೆಯು ನೇರುವ ಸ್ಥಳವೊಂದರೆ ಒಂದನೆ. ನೂಡು ಬದಿಯ ಮಾಳಿಗೆಯು. ನಡುವಣ ವಿಶಾಲಾಂಗಣದಲ್ಲಿ, ರಾತ್ರಿಯಲ್ಲಿ ಎರಡುದಿನಗಳಲ್ಲೂ ಜರಗಿದ ಮನೋರಂಜನ ಕಾರ್ಯಕ್ರಮಗಳನ್ನು ನೋಡಲು ತಕ್ಕಂತೆ ಜನುಗೊಳಿಸಿದ್ದರು (ಈ ಅಂಗಳದಲ್ಲೇ ಸಭೆಗಾಗಿ ಜಪ್ಪರವಿಕ್ಕಿ ಸಿದ್ದ ಗೊಳಿಸಬೇಕೆತ್ತೆಂದು ಒಬ್ಬರು. ಬಂದವರು ಆಶಿಸಿದ್ದರು. ಚಳಿಗಾಲದ ಬಿಸಿಲು ಬೇಗ ಉದೇತರಿಂದಲೂ ತಡೆಯಲಾಗದೆಂಬುದು ಆವರಿಗೇಕೆ ಹೊಳೆಯಲಿಲ್ಲವೋ?)ಕಾಲೇಜಿನ ಮೂಡುಬದಿಯ ಕೋಣೆಗಳಲ್ಲಿ ಮೈಸೂರು ವಿಶ್ವವಿದ್ಯಾಲಯ, ಸಾಗರದ ಉಷ್ಕರ ಪ್ರಕಾಶನ, ಉಡುಪಿಯ ಎಂ ಜ ಎಂ ಕಾಲೇಜಿನ ನವೋದಯ ಪ್ರಚಾರ ಪುಸ್ತಕಪಾಲ್, ಹುಬ್ಬಳ್ಳಿಯ ಸಾಹಿತ್ಯಭಂಡಾರಗಳ ಗ್ರಂಥಗಳು ಮಾರಾಟಕ್ಕೆ ಸಿಗುತ್ತಿದ್ದುವು, ಜಿಜ್ಞಾಸಪತ್ರಕ್ಕೆ ಬೇಕಾದ ಈ ವಿವಿಧ ಗ್ರಂಥಗಳನ್ನು ಕೆಲವರು ಪಡೆದು ಮುನ್ನಡೆಗಳಿಸಿದ್ದರು.

ಅಲ್ಲೊಂದೆಡೆ ಶ್ರೀ ಐ. ಕೆ. ಪಿ ಶರ್ಮರು ಸಂಗ್ರಹಿಸಿದ ಹಾಗೂ ಬರೆದ ಲೇಖನಗಳ ಸಂಗ್ರಹವೂ ಇತ್ತು. ಪಡ. ಬದಿಯ ಕೋಣೆಗಳಲ್ಲಿ ಶ್ರೀ ಟಿ. ಚಂದ್ರರಾಜ ಸಟ್ಟಿಯವರು ಸಂಕಲಿಸಿದ ಕನ್ನಡದ ಬರೆಹಗಾರರ ಬಳಗವೆಂಬ ಸಚಿತ್ರ ಸವಿವರ ಪರಿಚಯಗಳೂ. ಶ್ರೀ ಶೇಖರ ಶಾಸ್ತ್ರಿ. ಶ್ರೀರಘುನಾಥ ಭಟ್ ಶ್ರೀ ಪಿ ಸೋಮಶೇಖರ ರಾವ್ ಕೂಡಿ ಸಂಗ್ರಹಿಸಿದ- ತಂದಿಟ್ಟ ವಿವಿಧ ಪ್ರಕಾರಗಳ (ಈ ಶತಕ ಹಾಗೂ ಕಳೆದ ಶತಕದ) ಕನ್ನಡದ- ಅಂಗ್ಲದ ಹೆಬ್ಬೊತ್ತಿಗೆಗಳು ಕಂಗೊಳಿಸುತ್ತಿದ್ದವು. ಮತ್ತೊಂದು ಕೋಣೆಯಲ್ಲಿ ಸಮ್ಮೇಳನದ ಸಮಿತಿಯ ವತಿಯಿಂದ ಕರೆಸಿದ ವಿವಿಧ ಪುಸ್ತಕಗಳ ಮಾರಾಟವೂ ಇನ್ನೊಂದು ಕೋಣೆಯಲ್ಲಿ ಮಂಗಳೂರಿನ ಗಾಂಧಿ ಪ್ರತಿಷ್ಠಾನ ಕೇಂದ್ರದವರು ಏರ್ಪಡಿಸಿದ ಗಾಂಧೀ ಬರೆ ವಿವಿಧ ಚಿತ್ರಪುಸ್ತಕಗಳು ಇದ್ದವು. ಈ ಕೋಣೆಗಳ ದಾರಿಯಲ್ಲಿ ಗಂಧ ಇತ್ಯಾದಿ ಮರಗಳಲ್ಲಿ ತಯಾರಿಸಿದ ಕುಶಲಕೈಗಾರಿಕೆಯ ವಸ್ತುಗಳು ಇದ್ದುವು

ಒಂದನೆಯ ರಾತ್ರಿ ಬಡಗು ತಿಟ್ಟಿನವರಿಂದ ಬಯಲಾಟವಿತ್ತು. ಮರುದಿನ ನಾಟಕಗಳೂ ಬಯಲಾಟವೂ ಇದ್ದುವು. ಇದಕ್ಕೆ ಆತಿಥಿಗಳು ಹಣಕೊಡಬೇಕಾಗಿದ್ದಿಲ್ಲ. ಮಿಕ್ಕವರು ಒಂದು ರೂಪಾಯಿ ತೆರಬೇಕಾಗಿತ್ತು. (ಈ ತರದಲ್ಲಿ ಸಮ್ಮೇಳನಾಂಗವಾಗಿ ನಡೆವುದಕ್ಕೆ ಬೇರೆ ಹಣ ತರುವುದು ವಿಶೇಷ ಸಹಕಾರವೆಂದು ಒಪ್ಪಿಕೊಳ್ಳಬಹುದು).

ಒಂದನೆಯ ದಿನ ಮುಂಜಾನೆ ಉದ್ಘಾಟಕರಾದ ಶ್ರೀ ದೇ. ಜ. ಗೌ. ಅವರೂ, 'ದಿ ಬಿಣ್ಣ' ಸಂಚಿಕೆಯ ಬಿಡುಗಡೆ ಮಾಡಿದ ಶ್ರೀ ಶೇಜ್ಞಾನರ ಮಠದ ಸ್ವಾಮಿಗಳು, ಸಮ್ಮೇಳನದ ಹಿರಿಯ ಅಧ್ಯಕ್ಷರಾದ ಶ್ರೀ ಜಿ. ಪಿ. ರಾಜರತ್ನಂ, ಅವರೂ ಮಾತಾಡಿದ್ದು ಹೃದ್ಯವೂ ಸ್ವಾಗತಾರ್ಹವೂ ಆಗಿದೆ. (ಈ ಭಾಷಣಗಳ ಸಾರ ಪತ್ರಿಕೆಗಳಲ್ಲಿ ಬಂದಿವೆ. ಮುಂದೆ ಅವನ್ನೆಲ್ಲ ಒಟ್ಟಾಗಿ ಮುದ್ರಿಸಿದರೆ—ಮುದ್ರಿಸುವರೆಂದು ಕೇಳುತ್ತಿದೆ—ಜನತೆಗೆ ಸಂಗ್ರಾಹ್ಯವಾಗಿವೆ. ಸಂಜೆಗೆ ಎಳು ಮಂದಿ ಬರೆದ ವಿವಿಧ ವಿಚಾರಕ ಪ್ರಬಂಧಗಳ ಬಗೆಗೆ ಮುಂಮಾಗಿ ತಿಳಿಸಿದ ಹೊತ್ತು ಕಡಿಮೆ ಮಾಡಿತ್ತು; ಪ್ರತಿಯೊಂದು ಪ್ರಬಂಧವೋದಿದಾಗ ಕೇಳಿದವರು ಆ ಬಗೆಗೆ ಜಿಜ್ಞಾಸಾತ್ಮಕವಾಗಿ ಐದು ನಿಮಿಷದಲ್ಲಿ ಪ್ರಶ್ನಿಸುವುದುಂಟೆಂಬು ಕೇಳಿದ್ದರೂ, ಅದೇಕೋ ಆ ಬಗೆಯಿಲ್ಲ!

ಮರುದಿನ ಮೊದಲಲ್ಲಿ ಹದಿಮೂರು ಮಂದಿ ಹಳೆ—ಹೊಸತರದ ಕವಿಗಳು ತಮ್ಮ ಹೊಸ—ಹಳೆ ಕವಿತೆಗಳನ್ನು ನಿರ್ಭೀತಿಯಿಂದ ನಿಸ್ಸಂಕೋಚನಾಗಿ ವಾಚಿಸಿದರು (ಹೊಸ ಕೃತಿಗಳಲ್ಲಿ ಕೆಲವು ಉದಾತ್ತೀಕರಣಕ್ಕಿಂತಲೂ ನಿಕೃಷ್ಟವಾಗಿದ್ದುವು) ಅಮೇಲೆ, ಯಕ್ಷಗಾನ ಗೋಷ್ಠಿಯಲ್ಲಿ ಅಧ್ಯಕ್ಷರು ಮೊದಲ ಮೊತನ್ನೇನೂ ಹೆಚ್ಚಿನ್ನದೆಕೊನೆಗೆಪನ್ಯ ಹೇಳಿ ಆರ್ಥವಿವರಿಸಿ ಕ್ಲಾಸಿನಲ್ಲಿ ಹಾಗೂ ಇತರ ಸಭೆಗಳಲ್ಲಿ ಪರಿಚಯ (ಪ್ರಥಮ) ರೀಯುವಂತೆಂದುಮು ಅಭಾಸವಾಗಿದೆ. (ತೆಂಕುತಿಟ್ಟಿನ ಬಗೆಗೆ ಓದಿದುದರಲ್ಲಿ ಕೇವಲ ಭರತನಾಟ್ಯ ಶಾಸ್ತ್ರದ ಮಕ್ಕಾಮಕ್ಕೆ ಉದಾಹರಣವಿತ್ತು. ಗಾಂಧರ್ವಗಾನಕ್ಕೆ ಮಿಸಲಾದ, ನಾಟ್ಯಕ್ಕೆಂದೆ ಬರೆದಿರುವ ಭರತ ನಾಟ್ಯಶಾಸ್ತ್ರದಲ್ಲಿ ಯಕ್ಷಗಾನವೇ ಇದೆಯೊಂಬುದು ವಿವಾದಕ್ಕೆಡೆಯೊದೀತು. ಶ್ರೀ ಕುಕ್ಕಿಲ ಕೃಷ್ಣಭಟ್ಟರು ಇತ್ತೀಚೆ ಬರೆದ 'ಯವನ' 'ಯವನಿಕಾ' ಶಬ್ದದ ಚರ್ಚೆಯೆ ವಿದ್ಯಾಲಯದ 'ಪ್ರಬುದ್ಧ ಕರ್ಣಾಟಕ'ದಲ್ಲಿ ಬಂದುದನ್ನು ನೋಡಿದರೂ ಈ ತರದ ಪೂರ್ವಗ್ರಹ ನಿರೂಪವೂ; ಅಸಾಂಗತ್ಯವೂ ಕಾಣುವುದನ್ನು ಇಲ್ಲಿ ನೆನಪಿಸುವೆನು) ಈ ಯೆಜೆ ಶ್ರೀ ಕಾರಂತರು ಎಡೆಗೆ ಮಾತಾಡುವಂತೆ ಅಧ್ಯಕ್ಷೀಯ ಭಾಷಣವಿತ್ತು. ಒಡಗುತಿಟ್ಟಿನ ಬಗೆಗೆ ಸರಳವಾದ, ಕ್ಲಪ್ತವಾದ ನಿರೂಪಣವಿತ್ತು. ಆದೇ ಸಂಜೆ ಸಂಮೂಷಿತರಲ್ಲಿ ಹದಿನೈದು ಮಂದಿಯಲ್ಲಿ—ಮೂವರೂ ಬಂದಿಲ್ಲ; ಉಳಿದವರ ಬಗೆಗೆ ಶ್ರೀ ಜಿ.ಆರ್. ಪಾಂಡೇಶ್ವರರು ಸಂಘಟ್ಯರಾದ ಎಲ್ಲರ ಪರವಾಗಿ ಮಾತಾಡಿದಂತಿದ್ದಿಲ್ಲ. (ಹಾಗಾದರೆ, ಎಲ್ಲರಿಗೂ ಒಂದೆರಡು ನಿಮಿಷವಾದರೂ ಅವಕಾಶವಿರಿಸಬೇಕೆಂಬ ಸಭಾಸದರ ಜನಿಸಿಕೆಗೆದೆಯಿದ್ದಿಲ್ಲ!)ಅನಂತರ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರ ನವಿನವು ಭಾಷಣ ಹಾಗೂ ಶ್ರೀ ನಾಗೇಗೌಡರ ಚುಟುಕು ನುಡಿಗಳಿಂದ ರಾಜ್ಯೋದ್ಯದ ಆಚರಣೆಯಿತ್ತು. (ಕನ್ನಡನೆಂಬ ಹೆಸರು ಈ ರಾಜ್ಯಕ್ಕೆ ಬೇಗ ಹೇಳಿಸ ಬೇಕು, ಇಲ್ಲಿ ಕನ್ನಡ ಮೂಲ್ಯಮವಾಗಿ ರಾಜಕೀಯದಲ್ಲೂ ಆಗಬೇಕು, ಕಾಸರಗೋಡು ಕನ್ನಡಕ್ಕೆ ಸೇರುವಂತೆಸಗಬೇಕೆಂಬ ಸರ್ವಾನುಮತದ ನಿರ್ಣಯಗಳಾದವು. ಈ ಬಗೆಗೆ ಸಚೇತನ ಕ್ರಿಯೋತ್ಸಲರಾಗುವುದೇ ಅವಶ್ಯವೆಂದೇ ಹೇಳಲಡ್ಡಿಯಿಲ್ಲ!) ಈ ಜಿಲ್ಲೆಯವರಾಗಿ, ಜಿಲ್ಲೆಯ ಹೊರಗೆ ನೆಲೆಸಿರುವ ಶ್ರೀಮತಿ ಸ್ರೇನೂ ಎಸ್. ಭಟ್. ಶ್ರೀ ಸೂರ್ಯನಾರಾಯಣ ಚಡಗ, ಶ್ರೀ ಸಂತೋಷ ಕುಮಾರ ಗುಲ್ವಾಡಿ ಮತ್ತು ಜಿಲ್ಲೆಯವರಲ್ಲೊಬ್ಬರು ಈ ಸಾಹಿತ್ಯ ಸಮ್ಮೇಳನದ ಒಳತೇನೆಂಮು ಮಾತಾಡಿದರು. ಉಪಸಂಹಾರ ರೂಪದ ಭಾಷಣ (ಆಜ್ಞಾಗಿಲ್ಲಾದರೂ) ಶ್ರೀ ಜಿ.ಪಿ. ರಾಜರತ್ನಂ, ಅವರಿಂದ ಬಿತ್ತರಿಸಲಾಗಿತ್ತು; ಎರಡು ದಿನಗಳ ಕಾರ್ಯಕಲಾಪಗಳೆಲ್ಲವನ್ನು ನೆನೆದು, ಅದರದರ ಮೇಲೊಂದು ಪ್ರಜ್ಞಾವಲಯದಿಂದ ಅಶಯೋತ್ತರಗಳು ಅಲ್ಲಿ ಅಡಕವಾಗಿದ್ದುವು.

ಹಲವಾರು ಹಿರಿಯ ಸಾಹಿತ್ಯಜ್ಞರ ಅಭಿನೂತನ ಮೂಕುಗಾರಿಕೆಯೊಂಮು ಲಾಭನನಗಾಗಿದೆ. ಒಬ್ಬಬ್ಬರಲ್ಲಿ ನಡೆದ ಆಗಾಗ ತುಸ ಚರ್ಚೆಯ ಬಿರುಸುಗಳಲ್ಲೂ ನಾನು ಸೇರಿದ್ದೆನು. ಅಲ್ಲಿ ಹೆಚ್ಚಿನವಾಗಿ, ಕನ್ನಡದ ಅಭಿನವಯಾತ್ಮಕ ಕಾವ್ಯಕಲಾರಂಗದ ಯಕ್ಷಗಾನ ಕವಿಯ ಬಗೆಗೆ, ಯಕ್ಷಗಾನದ ಮೌಲಿಕವ ಬಗೆಗೆ ಪ್ರಸ್ತಾವಿಸಿದಾಗ ಬಲು ರೋಷದಿಂದ ಉತ್ತರಿಸಿದರೊಬ್ಬರು;ಅಂದರೆ ಆ ಬಗೆಗೆ ಸವಧಾನಗಳಿಂದ ನುಡಿದಷ್ಟು ಅವರಲ್ಲಿ ಅಂತಸ್ಸಾರವಿದ್ದಿಲ್ಲವೆಂದೇ ಬಗೆ

(ಎಂಟನೆ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
137 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.
ಎಮ್. ಸುಂದರ್‌ರಾಮ್ ಶೆಟ ್ಟಿ,
ಜೆಯರ್‌ಮೆನ್.

ಭುಟ್ಟೋ ಮಹಾಶಯರಿಗೊಂದು ಪ್ರಶ್ನೆ

ಗಂಗೆ - ಸಿಂಧುಗಳಲ್ಲಿ ರಕ್ತವೇಕೆ ಹರಿಯಬೇಕು?

'ಭಾರತವು ಪಾಕಿಸ್ತಾನದ ಮೇಲೆ ದಾಳಿ ಮಾಡಿದರೆ, ಚೀನವು ಮಧ್ಯೆ ಪ್ರವೇಶಿಸಿ ನಮಗೆ ನೆರವು ನೀಡುತ್ತದೆ' ಎಂಬ ಸಪಾಷಯವನ್ನು ಪಾಕ್ ಅಧ್ಯಕ್ಷ ಯಾಹ್ಯಾಖಾಶರು ವ್ಯಕ್ತಪಡಿಸಿದ್ದಾರೆ ಅದೇವೇಳೆಗೆ "ಒಂದೊಮ್ಮೆ ನಮ್ಮ ಮೇಲೆ ಆಕ್ರಮಣ ನಡೆದರೆ ಮಿತ್ರರಾಷ್ಟ್ರಗಳೆಲ್ಲವೂ ನಮಗೆ ಸಹಾಯ ಮಾಡುವವು" ಎಂಬಾಲೆಯನ್ನು ಪ್ರಧಾನಿ ಗಾಂಧಿಯವರೂ ಹೊಂದಿದ್ದಾರೆ. ಅಂದರೆ ಸನುರವು ಖಂಡಿತವೆಂದೂ ಇದು ಆರಂಭವಾದರೆ ಪಾಕಿಸ್ತಾನ-ಭಾರತಗಳ ಮಟ್ಟಿಗೆ ಮಾತ್ರ ಸೀಮಿತವಾಗಿರುವುದಿಲ್ಲವೆಂದೂ ಇಕ್ಕೆಲೆಯವರೂ ತಿಳಿದುಕೊಂಡಿರುವಂತಿದೆ.

ಯಾಹ್ಯಾಖಾನರೀಗೀಗ ಬಂಗ್ಲಾದ ಬಗೆಗೆ ಚಿಂತಿಸುವುದನ್ನೇ ಬಿಟ್ಟುಬಿಟ್ಟಿದ್ದಾರೆ. ಬಂಗ್ಲಾವನ್ನು ರುದ್ರ ಸ್ಮಶಾನವಾಗಿ ಮಾಪರ್ಡಲು ಅವರು ಅಂತಿಮ ಆಜ್ಞೆ ಕೊಟ್ಟ ಮೇಲೆ ಪಾಕ್ ಸೇನೆ ಹಿಂಸಾಕಾಂಡದಲ್ಲಿ ತಲ್ಲೀನವಾಗಿ ಹೋಗಿದೆ ನಿರಾಶ್ರಿತರ ಮರಳಿಕೆಗೆ ಅನುಕೂಲ ವಾತಾವರಣ ನಿರ್ಮಾಣವಾಗಿದೆಯೆಂದೂ, ನಿರಾಶ್ರಿತರನ್ನು ಸ್ವದೇಶಕ್ಕೆ ಮರಳಲು ಭಾರತವೇ ತಡೆಯುತ್ತಿದೆಯೆಂದೂ ಪಾಕ್ ಸರಕಾರ ನಾನಾ ಪರಿಯಾಗಿ ವಿದೇಶಗಳಲ್ಲಿ ಪ್ರಚಾರ ಮಾಡುತ್ತಲೇ ಇದೆ. ವಿಚಿತ್ರ ಸಂಗತಿಯೆಂದರೆ ಯಾಹ್ಯಾಖಾನರ ಬುರುಡೆ ಹೇಳಿಕೆಗಳನ್ನು ಪಾಶ್ಚಾತ್ಯ ಮೇಧಾವಿಗಳೂ ಪತ್ರಿಕೆಗಳೂ ಸತ್ಯವೆಂದು ನಂಬಿದ್ದಾರೆ, ಅವಕ್ಕೇ ಪ್ರಚಾರನೀಡುತ್ತಾರೆ, ಭಾರತದ ಸತ್ಯದರ್ಶನದ ಪ್ರಯತ್ನವೆಲ್ಲ ಕಾನನದ ಬೆಳುದಿಂಗಳಾಗಿಬಿಟ್ಟಿದೆ

ಭಾರತವು ಸೋವಿಯತ್ತಿನೊಡನೆ ಒಂದು ಬಗೆಯ ಸಂರಕ್ಷಣಾ ಒಡಂಬಡಿಕೆ ಮಾಡಿಕೊಂಡ ಮೇಲೆ ಅಲ್ಲಿ—ಇಲ್ಲಿ ಮಿಲಿಟರಿ ಚಟುವಟಿಕೆಗಳು ಹೆಚ್ಚಿದ್ದು ವಿದಿತವಾಗಿದೆ. ಪ್ರಧಾನಿ ಗಾಂಧಿಯವರು ನಿಕ್ಸನ್ನರ ಮನಸ್ಸಿನಲ್ಲಿ ತನ್ನ ವಿರುದ್ಧ ಬೀಜ ಬಿತ್ತುವಲ್ಲಿ ಸಫಲರಾದರೆ, ತಾನು ಏಕಾಕಿ ಯಾಗುವೆನೆಂದು ಯಾಹ್ಯಾಖಾನರಿಗೂ ಗೊತ್ತು ಆದುದರಿಂದಲೇ ಚೀನೀ ಮೂವಸೊಡನೆ ಸರಸವಾಡಿ ಮೆಚ್ಚುಗೆ ಪಡೆದ ಮಾಜಿ ವಿದೇಶ ಮಂತ್ರಿ ಭುಟ್ಟೋ ಮಹಾಶಯರನ್ನು ಸೀಕಿಂಗಿಗೆ ಕಳಿಸಿದರು; "ಅಮೆರಿಕೆ ಇಲ್ಲವೆನ್ನುವುದಕ್ಕೆ ಮೊದಲೇ ತಮಗೆ ಮರಿ ಹೋಗಿ ದ್ದೀವೆ" ಎಂದರು. ಭುಟ್ಟೋರನ್ನೆ ಈ ಕಾರ್ಯಕ್ಕೆ ಯಾಹ್ಯಾಖಾನರು ಆರಿಸಿಕೊಂಡದ್ದು ಸಮುಚಿತವೇ. ಚೀನೀಯ ನಾಯಕರನ್ನು ಯಾವರೀತಿ ಒಲಿಸಿಕೊಳ್ಳಬೇಕೆಂಬುದನ್ನು ತುಸುವಾದರೂ ಅರಿತುಕೊಂಡಿರುವವರು ಅವರೊಬ್ಬರೇ

ಚೀನೀ ನಾಯಕರು ವಿಶ್ವಸಂಸ್ಥೆಗೆ ಪ್ರವೇಶ ದೊರೆತ ಮೇಲೆ ತಮ್ಮ ಸ್ವರವನ್ನು ಬದಲಿಸಿದ್ದಾರೆ ಇದು ಗುರುತರ ಹೊಣೆಗಾರಿಕೆಯ ಪ್ರತೀಕವಿರಲೂಬಹುದು ಯುದ್ಧ ಸಂಭವಿಸಿದರೆ, ಸಮರ್ಥನೆಯಿಲ್ಲದೆಯೆಂಬ ಆಶ್ವಾಸನ ಅವರು ಭುಟ್ಟೋವಿಗೆ ನೀಡಿದರು ಆದರೆ, ಆ ಸಮರ್ಥನೆ ಯಾವ ರೀತಿಯದ್ದೆಂದು ಬಹಿಂಗ ಪಡಿಸಲಿಲ್ಲ. 'ಭಾರತವು ಪಾಕಿನ ಅಂತರಿಕ ವಿಚಾರದಲ್ಲಿ ಕೈ ಹಾಕಿದೆ' ಎಂಬ ಆರೋಪವನ್ನು ಚೀನೀ ನಾಯಕರು ನಮ್ಮ ಮೇಲೆ ಹೊರಿಸಿದ್ದು ಭಾರತವನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಲು ಮಾತ್ರ. ನಿಜವಾಗಿಯೂ ಚೀನೀ ನಾಯಕರು ಯಾಹ್ಯಾರಿಗೆ ಸಹಾಯ ಮಾಡಲು ಪ್ರತ್ಯಕ್ಷ ಮುಂದು ಬಂದಾರೆ? ಬ್ರಿಟಿಷ್ ಪತ್ರಿಕೆಗಳ ಊಹಾಪೋಹದಂತೆ ಪಾಕ್ ಏಕಾಕಿಯಾಗಿಯೇ ಹೋರಾಡ ಬೇಕಾಗುವುದು ಕೆಂಪು ಚೀನಾವು ಗಡಿಯಲ್ಲಿ ನಾಲ್ಕಾರು ಸಲ ಗುಂಡು ಹಾರಿಸಿ, ಮಾರ್ಚ್ ಮಾಡಿಸಿ, ಬೆದರಿಕೆ ಹಾಕಿ, ತೃಪ್ತಿ ಪಡಬಹುದೆ?

ಹಿಂದಿನ ಪಾಕ್ ಭಾರತ ಸಮರದ ವೇಳೆ ಪಾಕಿಗೆ ಪ್ರತ್ಯಕ್ಷ ನೆರವು ನೀಡಲು ಮುಂದೆ ಬಾರದ ಕೆಂಪು ಚೀನ ಈಗ ಸಹಾಯ ನೀಡುವುದೆಂದು ನಂಬುವುದು ಕಷ್ಟ; ಅಂದಿಗೂ ಇಂದಿಗೂ ತುಂಬ ರಾಜ್ಯಕೀಯ ಬದಲಾವಣೆಗಳು ನಡೆದಿವೆಯೆಂಬುದು ಸ್ಪಷ್ಟ ಅಂದು ಅಮೆರಿಕೇಯ ಯುದ್ಧ ಬಲವು ಪಾಕಿಸ್ತಾನಕ್ಕೆರಲಿಲ್ಲ ಸೋವಿಯತ್ತು ಭಾರತದ ಪಕ್ಷಪಾತಿಯೆನಿಸಿರಲಿಲ್ಲ ಇದೀಗ ಅಮೆರಿಕೆ ಯೇನಕೇನ ಯಾಹ್ಯಾಖಾನರನ್ನು ಬಿಟ್ಟು ಬಿಡಲು ಸಿದ್ಧವಿಲ್ಲ. ತನಗೂ ಮೂಪೋಗೂ ಮಧ್ಯೆಯಿರುವ ಯಾಹ್ಯಾಖಾನರನ್ನು ನಿಕ್ಸನ್‌ಮರೆತಾರೆ? ಚೀನಾ ನಿದೀಗ ವಿಶ್ವಸಂಸ್ಥೆಯಲ್ಲಿ ಪ್ರಾತಿನಿಧ್ಯ ಹೊಂದಿರುವುದರಿಂದ ಅದರ ಸ್ವೇಚ್ಛಂದಾಚಾರಕ್ಕ್ಕೂಂದು ತಡೆ ಬಾರದೆ? ಭುಟ್ಟೋ ಬೇಡಿಕೊಂಡದ್ದಕ್ಕೆ, ಚೀನೀಯ ಮೂವ ಹ್ಞೂಗುಟ್ಟಿದ್ದರು ಈ 'ಹ್ಞೂಂ'ವಿನ ಅರ್ಥವೇನೆಂಬುದನ್ನು ಸಮಯವೇ ಹೇಳಬೇಕು

ಂ ಂ ಂ

ಬಂಗ್ಲಾ ಪ್ರಶ್ನೆಗೆ ಹೊಣೆಗಾರರು ಪಾಕ್ ನಾಯಕರೇ ಅಧ್ಯಕ್ಷ ಯಾಹ್ಯಾಖಾನರನ್ನು ಬೊಟ್ಟು ಮಾಡುವುದು ಸಹಜವಾದರೂ ಈ ವಿಷಯದಲ್ಲಿ ಯಾಹ್ಯಾರ ಬೆಂಗೋಲಾಗಿದ್ದ ಮಹಾವ್ಯಕ್ತಿ ಜುಲ್‌ಫಿಕ್ರ್ ಅಲಿ ಭುಟ್ಟೋರೆ ಪ್ರೇರಕ ಶಕ್ತಿಯೆಂದು ಹೇಳಬೇಕು ಯಾಹ್ಯಾಖಾನ ಶೇಕಮುಜಿಬುರ್ ರೆಹಮೊನರ ನಡುವಣ ಮಾತುಕತೆಗಳಲ್ಲಿ ಭಾಗವಹಿಸಿದ್ದ ಭುಟ್ಟೊ ಮುಜಿಬುರ್ ರೆಹಮೊನರನ್ನೂ ಬಹುಮತ ಗಳಿಸಿದ ಜಿವರ ಪಕ್ಷವನ್ನೂ ಅಪಮೊನಕರವಾಗಿ ತಿರಸ್ಕರಿಸುವ ಅಭೂತಪೂರ್ವ ಸಲಹೆ ನೀಡಿದರು, ಬಲಪೂರ್ವಕವಾಗಿಯಾದರೂ ಬಂಗ್ಲಾ ದೇಶೀಯರನ್ನು ದಮನಿಸಲು ಹೇಳಿದರು ಯಾಹ್ಯಾಖಾನರು ಅವರ ಮಾತನ್ನು ಅಕ್ಷರಶಃ ಪಾಲಿಸಿದರು

ಪಾಕ್ ರಾಜಕಾರಣದಲ್ಲಿ ಬಹು ವರ್ಣೀಯ ವ್ಯಕ್ತಿಯೆನಿಸಿದವರು ಭುಟ್ಟೋ. ಅಯ್ಯೂಬಖಾನರ ಸಚಿವ ಸಂಪುಟದಲ್ಲಿ ವಿದೇಶ ಮಂತ್ರಿಯಾಗಿ, ಅಧ್ಯಕ್ಷರನ್ನೂ ಮೀರಿದ ಗತ್ತು ತೋರಿಸಿದ ಎದೆಗಾರ ವ್ಯಕ್ತಿಯೀವರು ಎದೆಗಾರನೆನ್ನುವುದಕ್ಕಿಂತಲೂ ಛಲಗಾರನೆಂದರೆ ಮತ್ತಷ್ಟು ಸರಿ ಹೊಂದೀತು ಅಯ್ಯೂಬಖಾನರ ಮನಸ್ಸಿಗೆ ವಿರೋಧವಾಗಿ ಭಾರತದೊಂದಿಗಿನ ದ್ವೇಷವನ್ನು ಹೆಚ್ಚಿಸಿ, ಕೆಂಪು ಚೀನಾದೊಡನೆ ಸಖ್ಯವಾಡಿ, ಭಾರತದ ಮೇಲೆ ಆಕ್ರಮಣ ಮಾಡಿಸೋಲುಂಡ ವ್ಯಕ್ತಿಯಿವರು. ಅಯ್ಯೂಬಖಾನರು ಅದೇನೇನೋ ಮಾಡಿ ಭುಟ್ಟೋರಿಗೆ ಮನೆಗೆಸ್ಪಷೆ ಕೊಟ್ಟು ಕಳಿಸಿದರು ಆದರೆ, ಭುಟ್ಟೋರ ಕಾರಣದಿಂದಲೇ ಅಯ್ಯೂಬಖಾನರೂ ಪದಚ್ಯುತರಾದರೆಂಬುದು ಸತ್ಯ.

ಬಾಯ್ಯೂತಿನಲ್ಲಿ ಭುಟ್ಟೊ ಪ್ರಜಾತಂತ್ರವಾದಿಗಳು. ಯಾಹ್ಯಾಖಾನರ ಮಿಲಿಟರಿ ಆಡಳಿತೆಯನ್ನು ಸುತರಾಂ ಒಪ್ಪದವರು. ಬಂಗ್ಲಾದ ಜನನಾಯಕ ಶಂಗಬಂಧು ಮುಜಿಬುರ್ ರೆಹಮೊನರ ವಾಸ್ತವಿಕ ಬೇಡಿಕೆಗಳನ್ನು ತಿರಸ್ಕರಿಸುವ ಸಲಹೆ ನೀಡಿದ ಧೀಮರು ತನ್ಮೂಲಕ ಪ್ರಜಾಸತ್ತೆಯ ಗೋಣು ಕೊಯ್ದವರು. ಆಲ್ಲಿ ಪಶ್ಚಿಮ ಪಾಕಿಸ್ತಾನದಲ್ಲೂ ಸ್ವಾಯತ್ತತೆಯ ಚಳುವಳಿಯನ್ನು ಆರಂಭಿಸುವವರು ಎಂದು ಸುದ್ದಿ —ಸದ್ಯ ಪಾಕಿಗೆ ಭಾರತದಿಂದ ಭಾರೀ ಗಂಡಾಂತರ ಬಂದಿದೆ ಎಂದು ದೃಢವಾಗಿ ತಿಳಿದಿರುವವರು-ಆ ಕಾರಣ ಯಾಹ್ಯಾರಿಗೂ ತನಗೂ ಇರುವ ರಾಜ್ಯಕೀಯ ಭಿನ್ನಾಭಿಪ್ರಾಯಗಳೆಲ್ಲವನ್ನೂ ಒತ್ತಟ್ಟಿಗೆ ಸೇರಿಸಿ, ಸಮರ ಸಿದ್ಧತೆಯಲ್ಲಿ ಯಾಹ್ಯಾರ ಬಲಗೈ ಬಂಟರಾಗಲು ಮುಂದೆ ಬಂದವರು. ಚೀನಕ್ಕೆ ಹೋಗಿ ಬಂದವಾಕ್ ಸಿಯೋಗದ ನ್ಯಾಯಕತ್ವ ವಹಿಸಿ, ನಿಯೋಗವನ್ನು ಸಾರ್ಥಕಗೊಳಿಸಿ ಬಂದೆನೆಂದು ಹೇಳಿಕೊಳ್ಳುವವರು

ಭುಟ್ಟೋ ಮಹಾಶಯರ ರೋಮ ರೋಮಗಳಲ್ಲಿ ಭಾರತ ದ್ವೇಷ ಉಕ್ಕಿ ಬರುತ್ತಿರುವುದು ದೃಗ್ಗೋಚರ. ಇದು ಏಕೆ ಎಂದು ತಿಳಿಯದು. ಇನ್ನೂ ಏನತ್ತರ ಗಡಿಯಲ್ಲಿರುವ ಈ ಯುವ ಪಾಕಿಸ್ತಾನಿಗೆ ಭಾರತವೇನು ಮಾಡಿದೆ? ಗಾಟ್ಸರ್ಪಾಕ್-ಭಾರತ ಸಮರವಾದರೂ ಇದೇ ಭುಟ್ಟೋ ಪ್ರೇರಿತವೇ?. ಅದಕ್ಕೆ ಮೊದಲು ರಣಕಚ್ಛ್‌ನ ಅಕ್ರಮಣಕ್ಕೂ ಈ ಮಹನೀಯರೇ ಮೂಲಪುರುಷರು. ಕಾಶ್ಮೀರದ ಕಡೆಗೆ ಸದಾ ವಕ್ರದೃಷ್ಟಿಯನ್ನಿಟ್ಟುಕೊಂಡಿರುವ ಪಾಕ್ ನಾಯಕರಲ್ಲಿ ಭುಟ್ಟೋ ಅಗ್ರಗಣ್ಯರು, ಇದೀಗ ಯುದ್ಧಪ್ರೇರಣೆ ಮಾಡುವವರೂ ಅವರೇ ಅಂದು ತುಂಡರಿಸಿಕೊಂಡ ತನ್ನ ಮೂಗಿಗೆ ಇಂದಾದರೂ ಪ್ಲಾಸ್ಟಿಕ್ ಸರ್ಜರಿ ಮಾಡಿಕೊಳ್ಳುವ ಹೇರಾಸೆ ಅವರಿಗೆ.

ಸೀಕೆಂಗಿನಿಂದ ಮರಳಿಬಂದ ಭುಟ್ಟೋ ಚೀನೀ ನಾಯಕರ ಸಂಪೂರ್ಣ ಸಮರ್ಥನೆ ತಮಗಿದೆಯೆಂದು ಹೇಳಿಕೊಂಡಿದ್ದಾರೆ ಒಂದೊಮ್ಮೆ ಭಾರತ-ಪಾಕಿಸ್ತಾನಗಳ ನಡುವೆ ಸಮರವೇ ಸಂಭವಿಸಿದರೆ, ಅದರ ರೂಪ ಭಯಂಕರವಾಗುವುದೆಂದು ಅವರು ವರ್ಣಿಸಿವ್ವಾರೆ ಗಂಗೆ ಮತ್ತು ಸಿಂಧು ನದಿಗಳೆಲ್ಲೆಯೇ ರಕ್ತ ತುಂಬಿ ಹರಿಯುವುದೆಂದವರು ಆಲಂಕಾರಿಕವಾಗಿ ಬಣ್ಣಿಸಿದ್ದಾರೆ. ಈ ಸಂಭಾವಿತ ಯುದ್ಧ ಮನೆ ಮನೆಯಲ್ಲೂ ನಡೆಯುತ್ತದೆಂದೂ ಮತ್ತೊಂದು ಕುರುಕ್ಷೇತ್ರವಾಗುವುದೆಂದೂ ಅವರು ವಿಶ್ವಾಸವಿಟ್ಟಿದ್ದಾರೆ.

ಆದರೆ, ಯುದ್ಧ ನಡೆಯಬೇಕು ಯಾಕೆ? ಎಂದುದನ್ನವರು ವಿಶ್ಲೇಷಿಸಲಿಲ್ಲ ಒಂದು ಕೋಟಿ ಬಂಗ್ಲಾ ನಿರಾಶ್ರಿತರನ್ನು ಸ್ವದೇಶಕ್ಕೆ ಕರೆಸಿಕೊಳ್ಳಲು ಯುದ್ಧ ಪ್ರೇರಕವಾಗುವುದೆ? ಅಥವಾ ಉಳಿದುಕೊಂಡಿರುವ ಬಂಗ್ಲಾ ದೇಶೀಯರನ್ನೂ ನಿರ್ನಾಮ ಮಾಡಿ, ಪಶ್ಚಿಮ ಪಾಕಿಸ್ತಾನದ ಪ್ರಜೆಗಳನ್ನು ಬಂಗ್ಲಾದಲ್ಲಿ ನೆಲೆನಿಲ್ಲಿಸಲು ಸಹಾಯಕವಾಗವುದೆ? ಪಶ್ಚಿಮ ಪಾಕಿಸ್ತಾನದ ನಾಯಕರು ಬಂಗ್ಲಾವನ್ನು ನಿರಂತರ ಶೋಷಣೆಗೀಡುಮಾಡಿದ್ದರಿಂದಲೇ ಅದು ಸ್ವಾಯತ್ತತೆಯನ್ನು ಬಯಸಿತೆಂಬ ಸತ್ಯಾಂಶವನ್ನು ಭುಟ್ಟೋ ಕಿವಿಗೆ ಹಾಕಿಕೊಳ್ಳಲಾರರು, ಬಂಗ್ಲಾದಲ್ಲಿ ಯಾಹ್ಯಾಖಾನರ ನರಮೇಧವನ್ನು ನಿಲ್ಲಿಸಲಾರರು, ಆವರು ಮತ್ತಷ್ಟು ಜನಾಂಗ ಹತ್ಯೆಗೆ ಉತ್ತೇಜನ ನೀಡುತ್ತಿವ್ವಾರೆ ಈ ಬಗೆಯ ತಲೆತಿರುಕ ನಾಯಕರನ್ನು ನಂಬಿಯೇ ಪಾಕಿಸ್ತಾನ ವಿನಾಶದತ್ತ ಉರುಳುತ್ತ ಬಂದಿದೆ

ಪಾಕ್ ನಾಯಕರು ದ್ವೇಷ ಭಾವವನ್ನು ಅಮೂಲಾಗ್ರ ಬಿಟ್ಟುಬಿಡಬೇಕು ರಕ್ತದಲ್ಲಿ ಓಕುಳಿಯಾಡುವ ತಮ್ಮ ರಾಕ್ಷಸ ದಾಹವನ್ನು ತೊರೆಯಬೇಕು. ಸಹೋದರ

HOTEL SATKAR

Boarding, Lodging & Restaurant

Tehind orporation Office,

9 Mission Road — Bangalore — 27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಸಂಸ್ಕೃತಿ ಪೋಷಕ ಸತ್ವಗಳು ಮತ್ತು ನಾವು

ಲೇಖಕರು: ಶ್ರೀ ಬಿ.ವಿ. ನಾಯಕ್.

ಉತ್ಸಾಹಿಗಳಾದ ನಮಗೆ, ಜೀವನದ ಎಲ್ಲ ರಂಗಗಳಲ್ಲಿ ಅಭಿವೃದ್ಧಿ ಸಾಧಿಸಿ ಮಹತ್ತಮ ಯಶಸ್ಸು ಪಡೆಯು ಬೇಕೆಂಬ ಅಭಿಲಾಷೆಯಿದೆಯೆಂಬುದಕ್ಕೆ, ನಾವು ಈವರೆಗೆ ಸಾಧಿಸಿದ ಕ್ರಾಂತಿಗಳೇ ಸಾಕ್ಷಿ. ಆದರೆ ನಮ್ಮಲ್ಲಿ ಉತ್ಸಾಹವಿದ್ದಷ್ಟು ಪರಿಣತಿಯಿಲ್ಲ ವೆಂಬುದು ಸ್ಪಷ್ಟವಾಗುತ್ತದೆ. ಒಂದು ರಂಗದಲ್ಲಿ ಕ್ರಾಂತಿಯನ್ನುಂಟುಮಾಡಿ ಜಯಭೇರಿ ಹೊಡೆಯಲಾರಂಭಿಸಿದಾಗ, ಮೊದಲು ಮುಂದುವರಿವ ರಂಗ ಹಿಂದೆ ಹೆಜ್ಜೆಯನ್ನಿಡುತ್ತದೆ. ಉದಾಹರಣೆಗಾಗಿ ಹಸಿರು ಕ್ರಾಂತಿ. ನಮ್ಮ ಜ್ಞಾನ, ಶಕ್ತಿಯೆಲ್ಲವನ್ನು ಒಂದು ಗೂಡಿಸಿ, ವ್ಯವಸಾಯ ರಂಗದಲ್ಲಿ ಹಿಂದೆಂದೂ ಮಾಡದ ಕ್ರಾಂತಿಯನ್ನುಂಟುಮಾಡಿ ಸುಧಾರಿತ ಸ್ಥಿತಿಯಲ್ಲಿರುವ ಈ ಸನುಯದಲ್ಲಿ ಕೈಗಾರಿಕಾರಂಗ ಹಿಂಡೆಬೀಳುವ ಅಶುಭ ಚಿಹ್ನೆಗಳು 'ತೋರಿಬರುತ್ತಿವೆ. ಒಂದು ಕಾಲದಲ್ಲಿ ಕೈಗಾರಿಕಾವಲಯ ಸುಧಾರಿತ ಸ್ಥಿತಿಯಲ್ಲಿರುವಾಗ ವ್ಯವಸಾಯರಂಗ ಬರಡಾಗಿತ್ತು. ಆಂತೂ, ನಮ್ಮ ಸ್ಥಿತಿ–ಕ ಪ್ಪೆಗಳನ್ನು ಪ್ರತಿಕ್ರಿಯೆಯಲ್ಲಿಟ್ಟು ತೂಕಮಾಡಿದಂತೆ. ಎಲ್ಲ ರಂಗಗಳಲ್ಲಿ ಸಮನಾದ ಅಭಿವೃದ್ಧಿಯನ್ನು ನಾವು ಸಾಧಿಸಿದರೆ ಎಷ್ಟು ಚೆನ್ನಾಗಿತ್ತು?— ಈ ಪ್ರಶ್ನೆ ಪ್ರತಿಯೊಬ್ಬ ನಾಗರಿಕನ ಕನಸಾಗಿಯೇ ಉಳಿದಿದೆ.

ಇದೇ ರೀತಿಯ ಸ್ಥಿತಿ ಸಂಸ್ಕೃತಿ ಪೋಷಕ ಸತ್ವಗಳಲ್ಲಿ ಇನ್ನೂ ಸ್ಪಷ್ಟವಾಗಿ ಕಂಡು ಬರುತ್ತದೆ. ನಮ್ಮ ಮನಸ್ಸು ಮುಖ್ಯವಾಗಿ ಮೂರು ವಿಧವಾಗಿ ಕೆಲಸ ಮಾಡುತ್ತದೆ. ೧) ಯೋಚಿಸುವುದು (thinking), ೨) ಅನುಭವಿಸುವುದು ಆಥವಾ ಗ್ರಹಿಸುವುದು (feeling) ಮತ್ತು ಒಪ್ಪಿಕೊಳ್ಳುವುದು (willing) ಪ್ರಕೃತಿಯ ಬಹಿರ್ಮುಖಗಳಲ್ಲಿ ಅಡಗಿರುವ ಸತ್ಯವನ್ನು ಶೋಧಿಸುವುದೇ ಯೋಚಿಸುವುದರ ಗುರಿ. ಸೌಂದರ್ಯದ ರಸಾಸ್ವಾದ ನೂಡುವುದೇ–ಅನುಭವಿಸುವ ಕ್ರಿಯೆ. ಒಳ್ಳೆಯ, ಹಿತಕರವಾದ ನೀತಿಗಳನ್ನು ಒಪ್ಪಿಕೊಳ್ಳುವುದೇ–ಮೂರನೇ ವಿಧದ ಕರ್ತವ್ಯ. ಹೀಗೆ ಸತ್ಯ, ಸೌಂದರ್ಯ, ನೀತಿ–ಇವು ಜೀವನಕ್ಕೆ ಸ್ಫೂರ್ತಿಯನ್ನೀಯುವ ಗುಣಗಳು.

ಜೀವನದ ಸ್ಫೂರ್ತಿದಾಯಕ ಗುಣಗಳಾದ ಈ ಸತ್ಯ, ಸೌಂದರ್ಯ, ನೀತಿಗಳನ್ನು ಕ್ರಮವಾಗಿ ವಿಜ್ಞಾನ, ಕಲೆ, ನೀತಿಶಾಸ್ತ್ರಗಳು ಸಾಧಿಸಿವೆ. ಆದ್ದರಿಂದ ವಿಜ್ಞಾನ, ಕಲೆ, ನೀತಿಗಳನ್ನು ಸಂಸ್ಕೃತಿ ಪೋಷಕ ಸತ್ವಗಳೆಂದು ಕರೆಯುತ್ತಾರೆ. ಮನಸ್ಸಿನ ಮೂರು ಕಾರ್ಯ ವಿಧಾನಗಳಿಗೂ ಸಂಸ್ಕೃತಿ ಪೋಷಕ ಸತ್ವಗಳಿಗೂ ಈ ರೀತಿಯ ವಿಶಾಲ ಸಂಬಂಧವಿದೆ. ಹಾಗಾಗಿ ಮನಸ್ಸಿನ ಮೂರು ಕಾರ್ಯವಿಧಾನಗಳ ವೈಶಾಲ್ಯ ರೂಪವೇ ಸಂಸ್ಕೃತಿ ಪೋಷಕ ಸತ್ವಗಳೆನಿಸುವುದು. ಈ ಸಂಸ್ಕೃತಿಪೋಷಕ ಸತ್ವಗಳ ಸಮನಾದ ಬೆಳವಣಿಗೆಯಿಂದ ರೂಪಿತವಾಗುವ ವ್ಯಕ್ತಿತ್ವವಾಗಲೀ, ಸಮಾಜವಾಗಲೀ, ರಾಷ್ಟ್ರವಾಗಲಿ ಸುಸಂಸ್ಕೃತವೆನಿಸುವುದು. ಸಂಸ್ಕೃತಿಸುಟ್ಟವನ್ನು ಅಳೆಯಲು ಈ ಮೂರು ಸತ್ವಗಳು ಯೋಗ್ಯ ಸಾಧನ.

ಚರಿತ್ರೆಯ ಪುಟಗಳನ್ನು ಗಮನಿಸಿದರೆ ನಮಗೆ ಈ ಅಂಶ ಸ್ಪಷ್ಟವಾಗುತ್ತದೆ. ಹಿಂದಿನ ಅನೇಕ ರಾಜರ ಆಳ್ವಿಕೆಯ ಕಾಲವನ್ನು 'ಚಿನ್ನದ ಯುಗ' ಎಂದು ಕರೆದಿರುವುದನ್ನು ನಾವು ನೋಡಬಹುದು. ಉದಾಹರಣೆಗಾಗಿ ಪರ್ಶಿಯಾ ಕಾಲದಲ್ಲಿ ಗ್ರೀಸ್, ಎಲಿಜಬೆತ್ ಆಳ್ವಿಕೆಯಲ್ಲಿ ಇಂಗ್ಲೆಂಡ್, ಗುಪ್ತರಕಾಲದಲ್ಲಿ ಭಾರತ. ಆ ಕಾಲದಲ್ಲಿ ವಿಜ್ಞಾನ, ಕಲೆ, ನೀತಿಗಳು ಸಮಪ್ರಮಾಣದಲ್ಲಿ ಬೆಳವಣಿಗೆ ಹೊಂದಿದ್ದೆ 'ಚಿನ್ನದ ಯುಗ' ಎನ್ನಲು ಕಾರಣ.

ಆದರೆ ಈ ಮೂರು ಸಂಸ್ಕೃತಿ ಸತ್ವಗಳು ಒಂದೇ ಪ್ರಮಾಣದಲ್ಲಿ ಬೆಳವಣಿಗೆ ಹೊಂದುವುದು ಅಪರೂಪ. ಹೆಜ್ಜಾಗಿ, ಒಂದು ಅತಿ ವೇಗದಲ್ಲಿ ಪ್ರಗತಿವತ್ತ ಸಾಗುವುದು; ಇನ್ನೊಂದು ನಿಶ್ಚಾನಸ್ಥೆಯಲ್ಲಿರುವುದು. ಇಂತಹ ಅಸಮ ಬೆಳವಣಿಗೆಯ ಸ್ಥಿತಿಯನ್ನು 'ಸಂಸ್ಕೃತಿ ನ್ಯೂನ್ಯತೆ' ಎಂದು ಕರೆಯುತ್ತಾರೆ ಇದಕ್ಕೆ ನಮ್ಮ ನವನವೋಜ್ಜ್ವಲ ಉತ್ತಮ ಉದಾಹರಣೆ. ವಿಜ್ಞಾನವು ದೊಡ್ಡ ದೊಡ್ಡ ಹೆಜ್ಜೆಗಳನ್ನಿಟ್ಟು ತೀವ್ರಗತಿಯಿಂದ ಧಾವಿಸುತ್ತಿದ್ದರೆ ಕಲೆ, ನೀತಿಗಳು ಮಂದಗತಿಯಿಂದ ನಾಗುತ್ತಿವೆ–ಪೊಲಮತ್ತು ಆಮೆಯ ಓಟದಂತೆ–ಪೊಲವೆಂಬ ವಿಜ್ಞಾನವು ತನ್ನ ಓಟದ ಪಥದಲ್ಲಿ ನಿದ್ರಿಸದಿದ್ದರೆ ಆಮೆಯೆಂಬ ಕಲೆ, ನೀತಿ ಓಟದಲ್ಲಿ ಅದನ್ನು ಹಿಂದಿಕ್ಕಿದೆ. ಕಾಲಚಕ್ರದೊಂದಿಗೆ ವಿಜ್ಞಾನವೇಗವನ್ನು ಪಡೆದುಕೊಳ್ಳದಿದ್ದರೂ ಮುನ್ನುಗ್ಗುತ್ತಿರುವಾಗಲೇ ಜನರಿಗೆ ವಿಜ್ಞಾನವೇ ತಮ್ಮ ಸಾಲಿನ ದೇವನಾಯ್ತು ಇಂದು, "ವಿಜ್ಞಾನವೇ ದೇವರು; ದೇವರು ಎಂಬ ಶಕ್ತಿ ಬೇರೊಂದಿಲ್ಲ" ಎನ್ನುವಮಟ್ಟಿಗೆ ನಾವುಮುಂದುವರಿದ್ದೇವೆ. ಒಂದು ರೀತಿಯಲ್ಲಿ ವಿವೇಚಿಸಿದರೆ ಇದನ್ನು ಅಲ್ಲಗಳೆಯಲಾಗುವುದಿಲ್ಲ. ಸೃಷ್ಟಿಯಲ್ಲಿ ಅನಾದಿಕಾಲದಿಂದಲೂ ಕಂಡುಬರುತ್ತಿರುವ ಬದಲಾವಣೆ, ವ್ಯತ್ಯಾಸ, ವೈಪರೀತ್ಯಗಳನ್ನು 'ದೇವರಲೀಲೆ' ಎಂದು ಬಣ್ಣಿಸುವುದು ಸಂಪ್ರದಾಯವಾದರೆ, ಪ್ರತಿಯೊಂದು ನೈಸರ್ಗಿಕ ಕ್ರಿಯೆಯ ಮೂಲದಲ್ಲಿ ಅಡಗಿರುವ ಮರ್ಮವನ್ನು ವಿಜ್ಞಾನ ಅರಿತುಕೊಂಡು, ಕಾರಣ ಕೊಟ್ಟು ಎಲ್ಲವನ್ನೂ ಲ್ಲದಿದ್ದರೂ ಹೆಚ್ಚಿನವುಗಳನ್ನು ತನ್ನ ಹಿಡಿತದಲ್ಲಿಟ್ಟುಕೊಂಡು, 'ದೇವರಲೀಲೆ' ಎಂಬ ಹಿಂದಿನ ಸ್ಪಷ್ಟಯುಕ್ತಿಯನ್ನು ಅಸ್ಪಷ್ಟವಾಗಿ ಮಾಡಿದೆ. ವಿಜ್ಞಾನವಿಂದು ಸೃಷ್ಟಿಕರ್ತ ಬ್ರಹ್ಮನ ಶಕ್ತಿಯನ್ನು ಪಡೆಯಲು ಹೋರಾಡುತ್ತಿದೆ. ಈಗಾಗಲೇ ಜನನ ನಿಯಂತ್ರಣ, ಸೃಷ್ಟಿಯ ಮೂಲಕ್ರಿಯೆಗಳಾದ ಹುಟ್ಟು, ಸಾವುಗಳ ಮೇಲೆ ವಿಜ್ಞಾನ ತನ್ನ ಶಕ್ತಿಯನ್ನು ಕೇಂದ್ರೀಕರಿಸಿಕೊಂಡು, ಹೇರಳ ಪ್ರಯೋಗಗಳನ್ನು ನಡೆಸಿ ಬಹುಮಟ್ಟಿಗೆ ಜಯದ ಪಥದಲ್ಲಿದೆ. ಇಂತಹ ವಾತಾವರಣದಲ್ಲಿ ಹಿಂದಿನ ಜನರಿಗೆ ದೇವರ ಮೇಲೆ ಇದ್ದಷ್ಟು ಭಯ, ಭಕ್ತಿ ಈಗಿನ ಜನರಿಗೆ ಇಲ್ಲವೆಂದರೆ ಅದು ಈಗಿನವರ ಪೂರ್ಣ ತಪ್ಪೆಲ್ಲ ಒಟ್ಟಿನಲ್ಲಿ ವಿಜ್ಞಾನದಿಂದ ಮನಸ್ಸು ವಿಕಾಸವಾಗಿ, ಅದರಿಂದ ಅನೇಕ ಸದುಪಯೋಗಗಳನ್ನು ಬಲ್ಲವರಾಗಿದ್ದಾರೆ; ದುರುಪಯೋಗಗಳನ್ನೂ ಕಲಿತಿದ್ದಾರೆ. ಹಿಂದಿನ, ಇಂದಿನ ಸಂಪ್ರದಾಯಗಳ ತುಲನೆಯಲ್ಲಿ. ಇಂದಿನದೇ ಒಳಿತೆಂದು ಸಂತೋಷಪಡುತ್ತಿರುವಾಗ, ಜನರು ನೀತಿ–ಧರ್ಮಗಳನ್ನು ಅಲ್ಪಸ್ವಲ್ಪವಾಗಿ ಮರೆತು ಬಿಡುತ್ತಿದ್ದಾರೆ. ಆಂತೂ. ನೀತಿಧರ್ಮಗಳ ಕ್ಷೇತ್ರ ಹಿಂದಿನಷ್ಟು ವಿಶಾಲವಾಗಿಲ್ಲ ಎಂಬುದು ನೂರಕ್ಕೆ ನೂರು ಸರಿ.

ಹೀಗೆ ಸಂಸ್ಕೃತಿ ಪೋಷಕ ಸತ್ವಗಳಲ್ಲಿ ಕಲೆ ಮತ್ತು ನೀತಿಗಳು ಈಗಾಗಲೇ ವಿಜ್ಞಾನದ ಪ್ರಭಾವಕ್ಕೆ ಸಿಲುಕಿವೆ. ಈ ಮೂರು ಸತ್ವಗಳಲ್ಲಿ ಪೂರ್ಣಕ್ರಾಂತಿಯೊದರೂ. ವಿಜ್ಞಾನದ ಪಾತ್ರ ಹಿರಿಯಾಗಿಯೇ ಉಳಿಯುತ್ತದೆಯಲ್ಲದೆ ಕಲೆ—ನೀತಿಗಳು ಇದನ್ನು ಮಿರಿಸುವಂತಿಲ್ಲ. ಈ ಕಾರಣದಿಂದ ಮೂರು ಸಂಸ್ಕೃತಿ ಪೋಷಕ ಸತ್ವಗಳು ಒಂದೇ ಪ್ರಮಾಣದಲ್ಲಿ ಬೆಳವಣಿಗೆ ಹೊಂದುವುದು ಇರಲು ಅಸಾಧ್ಯ. ಆದ್ದರಿಂದ ನಾವು ನಮ್ಮನ್ನು ಸುಸಂಸ್ಕೃತರೆಂದುಕರೆಯಿಸಿಕೊಳ್ಳುವುದು ಅಷ್ಟು ಸಮಂಜಸವಲ್ಲ. ಮುಖ್ಯವಾಗಿ ನಾವಿಂದು ನಾಗರಿಕರು.

●●

ಜಗನ್ನಾಥ ಎಜ್ಯುಕೇಶನ್ ಸೊಸೈಟಿ

ಬೊಂಬಾಯಿ

1971ನೇ ಎಪ್ರಿಲ್ ಪರೀಕ್ಷೆಯಲ್ಲಿ ಬೇರೆ ಬೇರೆ ತರಗತಿಗಳಲ್ಲಿ ಶ್ರೇಷ್ಠತೆಯ ಬಂಜೆ ಈ ಕೆಳಗಿನ ವಿದ್ಯಾರ್ಥಿಗಳಿಗೆ ಕೊರೊಕ್ರವಾಡಿ ಪಠೇಲ್ ಶ್ರೀ ಕೆ ಜಗನ್ನಾಥ ಶೆಟ್ಟಿ ಸ್ಮಾರಕ ಪಾರಿತೋಷಕಗಳನ್ನು ಕೊಡಲಾಗಿದೆ.

1) ಸುಯಜ್ಞ ಜೋಶಿ, ಡಿ ಕೆನಡಾಹೈಸ್ಕೂಲ್, ಉರ್ಸ. ಪ. ಕ. ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಪ್ರಥಮ, ರೂ 101 2)ರಾಮ ಮೋಹನ ಸಿ. ಕಾಮತ್, ನೆಹರೂ ಹೈಸ್ಕೂಲ್ ಆಡಿಪೂರು, ಎಸ್.ಎಸ್.ಎಲ್ ಸಿ.ಯಲ್ಲಿ ಪ್ರಥಮ ರೂ. 51. 3)ಸುಮನ, ಆಡಿಪೂರು ಸುಜೋಧಿನಿ ಹಾ.ಸ್ಕೂ.ಶಾಲೆ, ಅಲಿಪೂರು ರೂ.31. 4) ಲಲಿತ ಮರಕಾಲ್ತಿ, ಮಂಜೇಶ್ವರ ಪಾಸಿಗ ಸೀನಿಯರ್ ಪ್ರೈ.ಶಾಲೆ, ರೂ. 31. 5) ಕರುಣಾಕರ ಶೆಟ್ಟಿ, ಮಂಜೇಶ್ವರ ಜೋ.ಪ್ರೈ.ಶಾಲೆ. ರೂ. 21. 6) ರಮೇಶ ನಾಯಕ್, ಕುಕ್ಕಟ್ಟೆ ಜೇಸುಕ್ ಹಾ ಪ್ರೈ.ಶಾಲೆ, ರೂ. 31. 7) ವಿಜಯಲಕ್ಷ್ಮಿ, ಗ ಹಾ ಪ್ರೈ.ಶಾಲೆ, ಕೊರಂಗ್ರಪಾಡಿ ರೂ. 11. ಇವೇ ಶಾಲೆಯ 8) ಭಾಸ್ಕರ ಶೆಟ್ಟಿ, 9) ಜಾನಕಿ ಪೂಜಾರ್ತಿ, 10)ಸುಜಾತಶೆಟ್ಟಿ, 11) ಯಮುನ ಗುಡಿಗಾರ್ತಿ, ರೂ. 10 ರಂತೆ.

ಇಸ್ಮೈಲ್ ಆಲ್ಲಜೆ ಕೊರಂಗ್ರಪಾಡಿ ಸರಕಾರಿ ಹಾಸ್ಕೂಲ್ ಶಾಲೆಯ 50 ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಕೂಡ ಸೊಸೈಟಿಯು ಕೊಟ್ಟಿರುತ್ತದೆ.

ತೆ–ಸಮಾನತೆ ಮತ್ತು ಸ್ವತಂತ್ರತೆಗಳ ಪಾಠವನ್ನು ನೊದಲು ಕಲಿಯಬೇಕು. ಇಲ್ಲವಾದರೆ, ತಮ್ಮ, ಮರಿಗಳನ್ನು ತಾವೇ ತಿನ್ನುವ ವನ್ಯ ಪಶು ಜಾತಿಗೂ ಮಾನವ ಜಾತಿಗೂ ಏನು ವ್ಯತ್ಯಾಸವುಳಿಯಿತು? ಭುಟ್ಟೋ ಮಹಾಶಯರು ಯುದ್ಧ ಪ್ರಜೋದಿಸುವಲ್ಲಿ ತೋರಿಸುವ ಮುತ್ಸದ್ದಿತನ ಶಾಂತಿ ಪ್ರೇರಕವಲ್ಲ; ಅದು ಸರ್ವ ನಾಶಕ್ಕೆ ನಾಂದಿಯೂದೀತು. ವಂಗಬಂಧು ಮುಜಿಬುರ್ ರೆಹಮಾನರೊಡನೆ ಉಭಯ ಸಮ್ಮತ ರಾಜ್ಯತೀಯ ಪರಿಹಾರಕ್ಕೆ ಅವರು ಪ್ರಯತ್ನಿಸಿದರೆ, ಪಾಕಿಸ್ತಾನಕ್ಕೆ ಚಿರಂತನವಾದ ಉಪಕಾರ ಮಾಡಿದಂತಾದೀತು.

●●

ಕಾರ್ಕಳದಲ್ಲಿ ಸಮ್ಮೇಳನ

(ಐದನೇ ಪುಟದಿಂದ)

ದೆನು. ಕಾಸರಗೋಡಿನ ಎಡನೀರುಹೈಸ್ಕೂಲಲ್ಲಿರುವ ಶ್ರೀ ಪಿ. ವೆಂಕಟರಾಜ ಪುಣಿಂಚತ್ತಾಯರು ತಮ್ಮ ಸಂಗ್ರಹದಲ್ಲಿದ್ದ ಇದು–ವರೆಗೆ –ಉಚ್ಚಟ್ಟಗದ ನನ್ನ ನೆರೆಯ ಮಯ್ಯವಟೆ ವೆಂಕಟರಮಣಯ್ಯನವರ ಕೃತಿಗಳಲ್ಲೊಂದಾದ ಕುಮಾರವಿಜಯ (ಶೂರ ಪದ್ಮಾಸುರ ಕಾಳಗ) ವೆಂಬ ಯಕ್ಷಗಾನ ಪ್ರಸಂಗದ ಹಸ್ತಪ್ರತಿಯನ್ನು ನನಗೆ ನೀಡಿದುದು ಅವಿಸ್ಮರಣೀಯವಾಗಿದೆ.

ಈ ಸಾ. ಸಮ್ಮೇಳನ ಕಾಲದಲ್ಲಿ, ತಂತಮ್ಮ ಪ್ರಕಟನೆಗಳ ಬಿಡುಗಡೆ ಗೊಳಿಸಿದವರು, ಕೆಲವರು. ಸಮ್ಮೇಳನದ ಸಮಿತಿಯವರೇ 'ದಿಬ್ಬಣ' ವೆಂಬ ಸಂಚಿಕೆಯನ್ನು ಪ್ರಕಟಿಸಿದ್ದಾರೆ. ಅದರಲ್ಲಿ ಈ ಸಮಿತಿ ಹಾಗೂ ಉಪಸಮಿತಿಗಳ ಹೆಸರಿನೆ. ಶ್ರೀ ಧರ್ಮಸ್ಥಳ ವೀರೇಂದ್ರ ಹೆಗ್ಗಡೆ, ಸಮ್ಮೇಳನಾಧ್ಯಕ್ಷರಾದ ಶ್ರೀ ರಾಜರತ್ನಂ, ಅವರ ಭಾವಚಿತ್ರಗಳಿವೆ. ಅದಾಗಿ ಸಮ್ಮಾನಿತರಲ್ಲಿ ಶ್ರೀ ರಂಜಾಳ ಗೋಪಾಲ ಶೆಣೈ, ಬಿ. ಪಿ. ಬಾಯಿರಿ, ಮುಂಡಾಜೆ ರಂಗನಾಥ ಭಟ್ಟ, ಟಿ. ಚಂದ್ರರಾಜ ಸೆಟ್ಟಿ, ಚಕ್ರಕೋಡಿ ನಾರಾಯಣ ಶಾಸ್ತ್ರಿ, ಕಾಂಚನ ವೆಂಕಟ ಸುಬ್ರಹ್ಮಣ್ಯಂ, ಪೊಳಲಿ ಶಂಕರ ನಾರಾಯಣ ಶಾಸ್ತ್ರಿ, ಪೊಲ್ಯ ದೇಜಪ್ಪ ಶೆಟ್ಟಿ, ಕಲ್ಲೆ ನಾರಾಯಣ ರಾವ್, ಸುರತ್ಕಲ್ಲು ವೆಂಕಟರಾಯಾಚಾರ್ಯ, ಕೆ. ಹೊನ್ನಯ್ಯ ಶೆಟ್ಟಿ, ಖಾಂಡೇಶ್ವರ ಗಣಪತಿರಾವ್, ಮತ್ತು ಉಗ್ರಾಣ ಮಂಗೇಶರಾಯರ ಚಿಕ್ಕ ಭಾವಚಿತ್ರಗಳಿವೆ. (ಶ್ರೀ ಬಿ. ಶಂಕರ ಭಟ್ಟರು ತುಂಬ ಅಸೌಖ್ಯದವರಿದ್ದು ಚಿತ್ರವೊದಗಿಲ್ಲವೆಂದು ಕೇಳುತ್ತದೆ. ಬಾಲ ಸಾಹಿತ್ಯ ಮಂಡಲದ ವತಿಯಲ್ಲಿ ಪಲವರ ಹೆಸರುಗಳಿರುವುದರಿಂದ ಕೊಂಡಿಲ್ಲವೇನೋ?) ಈ ಪದಿನೈದು ಮಂದಿಯ ಕಾರ್ಯಕಲಾಪಗಳ ತುಸ ಪರಿಚಯವು ಈ ಸಂಚಿಕೆಯ ಕೊನೆಯಲ್ಲಿ ಅಚ್ಚಾಗಿದೆ. (ಚಿತ್ರ ಹಾಗೂ ಪರಿಚಯಗಳೊಟ್ಟಿಗೆ ಇರಬಹುದಿತ್ತೆಂದು ವಾಚಕರೊಬ್ಬರು ಹೇಳಿದ್ದರು)

'ದಿಬ್ಬಣ'ದಲ್ಲಿರುವ ಲೇಖನಗಳು:

ಗ್ರಂಥಕರ್ತರ 'ಬಳಗ'ವೆಂಬ 50 ಪುಟದ ಸವಿವರ ಪರಿಚಯವನ್ನು ಶ್ರೀ ಟಿ. ಚಂದ್ರರಾಜ ಸೆಟ್ಟಿಯವರು ಬರೆದಿದ್ದಾರೆ. (ಈ ಬಗೆಗೆ ಇನ್ನು ಹಲವು ಹೆಸರು ನುಂದೆ ಸೇರಿಸಲೆಡೆಯಿದೆ.) 'ಕನ್ನಡ ಸಂಸ್ಥೆಗಳು' ಎಂಬ ಬಗೆಗೆ ಕೆಲವು ಮಾಹಿತಿಗಳು ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರ ಬರೆಹದಲ್ಲಿದೆ. ದ. ಕ. ಜಿಲ್ಲೆಯ ಪತ್ರಿಕೋದ್ಯಮದ ಬಗೆಗೆ ಶ್ರೀ ಸಂತೋಷ ಕುಮಾರ ಗುಲ್ವಾಡಿಯವರು ತುಸ ಸಂಕಲಿಸಿ ಬರೆದಿದ್ದಾರೆ. 'ತುಳುನಾಹಿತ್ಯ ಸಮೀಕ್ಷೆ' ಯನ್ನು ಶ್ರೀ ಬಿ. ಎ.ವಿವೇಕ ರೈಗಳು (15 ಪುಟದಷ್ಟು) ಬರೆದಿದ್ದಾರೆ ಕೊಂಕಣಿ ಭಾಷೆಯ ಬಗೆಗೆ ಶ್ರೀ ಬಿ. ಎ. ಬಾಳಿಗರು ಕೆಂಚಿತ್ತಾಗಿ ನಮೂದಿಸಿದ್ದಾರೆ. ಕನ್ನಡ ಕಾವ್ಯಕಲೆ ಯ ಬಗೆಗೆ ಶ್ರೀ ಗುಂಡ್ಮಿ ಚಂದ್ರಶೇಖರ ಪಿತಾಳರು (6 ಪುಟಗಳಲ್ಲಿ) ಈ ಪನ್ನಾತ್ರ ಬರೆದರು. 'ತುಳುನಾಡಿನ ಶಾಸನಗಳು', ಎಂಬುದಾಗಿ ಶ್ರೀ ಕೆ.ವಿ. ರಮೇಶರು 4 ಪುಟದ ಚಿಕ್ಕ ಲೇಖನ ಬರೆದರು. 'ಯಕ್ಷಗಾನ ಸಾಹಿತ್ಯ'ವೆಂಬುದರ ಮೇಲೆ ಶ್ರೀ ಎಸ್. ಜೆನ್ನಕೇಶವರು (7ಪುಟದಲ್ಲಿ ಸ್ವಲ್ಪತಃ ಬರೆದರು. 'ಸಣ್ಣಕತೆ'ಗಳ ವಿಚಾರದಲ್ಲಿ (8 ಪುಟಗಳಲ್ಲಿ) ಶ್ರೀ ಮುರಲೀಧರ ಉಪಾಧ್ಯಾಯರು ಚಿಕ್ಕದಾಗಿ ನಿರೂಪಿಸಿದ್ದಾರೆ. "ಪ್ರಬಂಧ, ಪ್ರವಾಸ, ಜೀವನ ಚರಿತೆ"ಗಳತುಸು ಸಮೀಕ್ಷೆ ಶ್ರೀ ಹೊ. ಸೀತಾರಾಮಾಚಾರ್ಯರ ಬರೆಹದಲ್ಲಿದೆ. 'ವಿಮರ್ಶೆ'ಯ ಬಗೆ ಶ್ರೀ ಎಂ. ರಾಜಗೋಪಾಲಾಚಾರ್ಯರ ಲೇಖದಲ್ಲಿ (5 ಪುಟ) ಕಿಂಚಿತ್ ಬಂದಿದೆ. 'ಕಾರ್ಕಳ ಮತ್ತು ಮೂಡುಬಿದರೆಯ ಐತಿಹಾಸಿಕ ಹಿನ್ನೆಲೆ'ಯಲ್ಲಿ ಶ್ರೀ ಪಿ. ಗುರುರಾಜ ಭಟ್ಟರು ಕೆಲವೋದು ವಿಚಾರಗಳನ್ನು (19 ಪುಟದಲ್ಲಿ) ಹೇಳಿದ್ದಾರೆ. 'ನಾಟಕ'ಗಳನ್ನು ಕುರಿತು ಶ್ರೀ ಎ. ವಿ. ನಾವಡರು (6 ಪುಟ ದಷ್ಟು) ಚಿಕ್ಕ ಲೇಖನದಲ್ಲಿ ಸೂಚಿಸಿದ್ದಾರೆ. "ಕಾದಂಬರಿ"ಗಳ ವಿಚಾರಕ್ಕೆ ಶ್ರೀ ಶೇಕರ ಇಡ್ಯ, ಇವರು (6ಪುಟದಲ್ಲಿ) ತುಸು ವಿವರಿಸಿದ್ದಾರೆ. 'ಸಂಶೋಧನ ರಂಗ' ದ ಬಗೆಗೆ ಶ್ರೀ ವೆಂಕಟರಾಯಾಚಾರ್ಯರು ಈ ಪನ್ನಾತ್ರವಾಗಿ (8 ಪುಟದಲ್ಲಿ) ಹೇಳಿದ್ದಾರೆ. 'ಭವ್ಯ ಜಲಪಾತ' ದದರ್ಶನವನ್ನು ಶ್ರೀ ಕೆ. ಎನ್ ಭಟ್ಟರು (4 ಪುಟದಲ್ಲಿ ಸ್ವಲ್ಪತಃ ಚಿತ್ರಿಸಿದ್ದಾರೆ.

ಇಂತಹ ಸಮೀಕ್ಷೆಗಳ ಬಗೆಗೆ 4–6 ತಿಂಗಳಾದರೂ ಮುಂದಾಗಿ ತೊಡಗಿದರೆ, ಅದಕ್ಕೆ ತಕ್ಕ ಸದವಕಾಶವಿದ್ದರೆ, ಸಾಕಷ್ಟು ವಿವರಗಳು ದೊರಕಲಡ್ಡಿಯಿಲ್ಲ. ಚಿಕ್ಕ ಕನ್ನಡಿಯಲ್ಲಿ ಆನೆಯನ್ನು ಪ್ರತಿಬಿಂಬಿಸಿದ ರೀತಿಯಲ್ಲಿದೆ; ಲೇಕಖರಲ್ಲಿ ಈ ಬಗೆಗೆ ತಕ್ಕ ಹೊಣೆಗಾರಿಕೆಯಿದೆಯೆಂದೂ ಕಾಣುತ್ತೇವೆ.

ಸಾಹಿತ್ಯ ಸಮ್ಮೇಳನದ ವರದಿ (ತಾ. 4–11–71ರಲ್ಲಿ) 'ಆಕಾಶವಾಣಿ'ಯಲ್ಲಿ ಅರೆ ಗಂಟೆಯಿತ್ತು. ನನ್ನ ಬಗೆಗೊಂಡ ಈ ಕೆಲವು ಮೂತುಗಳು ವಾಚಕರಿಗೆ ಇನ್ನೂ ಹೆಚ್ಚು ನೆನಹುಗೊಳಿಸಬಲ್ಲುವೆಂದು ಭಾವಿಸುವೆನು. ಇತಿ ಶಮ್!

ಕೆ. ವೆಂಕಟರಾಯಾಚಾರ್ಯ,
ಸುರತ್ಕಲ್ಲು

ಇಲೆಕ್ಟ್ರಾನಿಕ್ ಸಾಧನಗಳ ತಯಾರಿಕೆಯಲ್ಲಿ ಏರಿಕೆ

ಕಳೆದ ಆರುವರ್ಷಗಳಲ್ಲಿ ದೇಶದಲ್ಲಿ ತಯಾರಾಗುತ್ತಿರುವ ಇಲೆಕ್ಟ್ರಾನಿಕ್ ಸಾಧನೋಪಕರಣಗಳ ಉತ್ಪಾದನೆಯ ಮೌಲ್ಯ 175 ಕೋಟಿರೂಪಾಯಿ. ಕಳೆದ ವರ್ಷ ತಯಾರಾದ ಇಲೆಕ್ಟ್ರಾನಿಕ್ ಸಾಧನಗಳ ಮೌಲ್ಯ 138 ಕೋಟಿರೂಪಾಯಿ; ಬಿಡಿಭಾಗಗಳ ಪ್ರಮಾಣ 37 ಕೋಟಿರೂಪಾಯಿ. ಬಿಡಿಭಾಗಗಳ ವಿಭಾಗದಲ್ಲಿ ವಾಲ್ವುಸ್, ಟ್ರಾನ್ಸಿಸ್ಟರ್, ಕಾರ್ಬನ್‌ರೆಸಿಸ್ಟರ್; ಕೆಪಾಸಿಟರ್, ಲೌಡ್‌ಸ್ಪೀಕರ್, ಕಂಡೆನ್ಸರ್ ಮತ್ತು ಬ್ಯಾಂಡ್‌ಸ್ವಿಚ್‌ಗಳನ್ನು ತಯಾರಿಸಲಾಗುತ್ತಿದೆ.

ದೇಶದಲ್ಲಿ ಕಳೆದ ವರ್ಷ ತಯಾರಿಸಿದ 80 ಕೋಟಿರೂಪಾಯಿ ಮೌಲ್ಯದ ಇಲೆಕ್ಟ್ರಾನಿಕ್ ಸಾಧನಗಳಲ್ಲಿ ರೇಡಿಯೋ ಗ್ರಾಹಕಗಳು, ಟೆಲಿವಿಷನ್; ಟೇಪ್‌ರೆಕಾರ್ಡರ್, ರೆಕಾರ್ಡ್ ಚೇಂಜರ್ ಹಾಗೂ ಸ್ಟೀರಿಯೊ ಸಾಧನಗಳಿದ್ದುವು ರೇಡಿಯೋಗ್ರಾಹಕಗಳ ತಯಾರಿಕೆಯಲ್ಲಿ ಗಣನೀಯ ಪ್ರಗತಿಯಾಗಿದೆ. ಕಳೆದ ವರ್ಷ ಭಾರತದಲ್ಲಿ 32 ಲಕ್ಷ ರೇಡಿಯೊ ತಯಾರಿಸಲಾಯಿತು. ಈಗ್ಗೆ 5 ವರ್ಷಗಳ ಹಿಂದೆ ಕೇವಲ 6 ಲಕ್ಷ ರೇಡಿಯೊ ತಯಾರಿಸಲಾಗುತ್ತಿತ್ತು.

ಕಳೆದ ಆರುವರ್ಷಗಳ ಅವಧಿಯಲ್ಲಿ ಸರ್ಕಾರಿ ವಲಯದ ಟೆಲಿಫೋನ್ ಕಾರ್ಖಾನೆಯಲ್ಲಿ ಇಲೆಕ್ಟ್ರಾನಿಕ್ ಸಾಧನಗಳ ತಯಾರಿಕೆಯನ್ನು ದ್ವಿಗುಣಗೊಳಿಸಿದೆ. ಇದೇ ಅವಧಿಯಲ್ಲಿ ಬೆಂಗಳೂರಿನ ಭಾರತ ಇಲೆಕ್ಟ್ರಾನಿಕ್ಸ್ ಕಾರ್ಖಾನೆ ಹಾಗೂ ಹೈದರಾಬಾದಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ಇಲೆಕ್ಟ್ರಾನಿಕ್ ಸಾಧನಗಳ ತಯಾರಿಕೆ ಆರು ಪಟ್ಟು ಹೆಚ್ಚಿದೆ.

●●

ಗ್ರಾಹಕ ಸೇವಾಕೇಂದ್ರದ ಉದ್ಘಾಟನೆ

ದ. ಕ. ಜಿಲ್ಲಾ ಸಹಕಾರಿ ಕೃಷಿ ಅಭಿವೃದ್ಧಿ ಸಂಘ ಲಿಮಿಟೆಡ್‌ನ ಆಶ್ರಯದಲ್ಲಿ ಕೋಟದಲ್ಲಿ ಗ್ರಾಹಕರ ಸೇವಾಕೇಂದ್ರದ ಉದ್ಘಾಟನಾ ಸಮಾರಂಭವು ಕೋಟ ಸಹಕಾರೀ ವ್ಯಾವಸಾಯಿಕ ಬಾಂಕ್ ಲಿ.ನಿವರ ವಠಾರದಲ್ಲಿ ಕೆನರಾಬೇಂಕಿಂಗ್ ಕಾರ್ಪೋರೇಶನ ಚೇರ್‌ಮನ್ ಶ್ರೀ ಎಂ.ಆರ್. ಕಾಮತರ ಅಧ್ಯಕ್ಷತೆಯಲ್ಲಿ ಕಾರ್ ರಂದು ನೆರವೇರಿತು ಅರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಬಿ ನಾ. ರಾಯಣ ನಾಯಕರು ಸ್ವಾಗತಿಸಿದರು. ಹಾರ್ದಿಕೃಯ ಪ್ರಗತಿಪರ ರೈತ ಶ್ರೀ ಪಿ. ಆನಂದಕುಂದ ಹೆಗ್ಡೆಯವರು ಈ ಗ್ರಾಹಕ ಸೇವಾಕೇಂದ್ರ ಹಾಗೂ ಪವರ್ ಟ್ಲಿಲ್ಲರಿನ ಉದ್ಘಾಟನೆ ಗೈದರು.

ಅಧ್ಯಕ್ಷ ಶ್ರೀ ಕಾಮತರು ಭಾಷಣಮಾಡುತ್ತಾ ಕೃಷಿಕರಿಗೆ ಸಹಾಯಮಾಡುವ ಸಹಕಾರೀ ಸಂಸ್ಥೆಗಳಿಗೆ ರಿಸರ್ವ್ ಬ್ಯಾಂಕ್ ಬೇಕಾಬಷ್ಟು ಆರ್ಥಿಕ ಸಹಾಯ ನೀಡುವ ಭರವಸೆ ಯಿಟ್ಟಿರುವುದರಿಂದ ಸಹಕಾರಿ ಸಂಸ್ಥೆಗಳ ಕೃಷಿಕರಿಗೆ ಆರ್ಥಿಕ ಸಹಕಾರ ಮತ್ತಿತರ ಸೌಲಭ್ಯಗಳನ್ನು ನೀಡುವಾಗ ಸ್ವಲ್ಪ ಮಟ್ಟಿನ ತ್ಯಾಗಕ್ಕೂ ಸಿದ್ಧರಿರಬೇಕೆಂದು ನುಡಿದು ಜಿಲ್ಲೆಯಲ್ಲಿ ಮೊದಲನೆಯದಾಗಿತೆರೆಯುತ್ತಿರುವ ಈ ಕೇಂದ್ರದಿಂದ ಯೋಜನೆಯ ಸಂಪೂರ್ಣ ಉಪಯೋಗವನ್ನು ಹೊಂದಬೇಕೆಂದರು.

ಶ್ರೀ ಪಿ. ಆನಂದಕುಂದ ಹೆಗ್ಡೆಯವರು ಹೊಲದೊಡೆಯರಲ್ಲಿ ಪರಸ್ಪರ ಸಹಕಾರಿ ಮನೋಭಾವ ಅತ್ಯಗತ್ಯವೆಂದು ತಿಳಿಸಿ ಈ ಮನೋಭಾವ ಇಲ್ಲದೆ ಹೋದರೆ ಯೋಜನೆ ಯಶಸ್ವಿಯಾಗದು ಎಂದರು.

ಸಣ್ಣ ಹಿಡುವಳಿದಾರರು ಮತ್ತು ಕೃಷಿ ಕಾರ್ಮಿಕರ ಅಭಿವೃದ್ಧಿ ಯೋಜನಾಧಿಕಾರಿ ಶ್ರೀ ಕೆ. ಪಿ. ಜಗನ್ನಾಥರಾಯರು ಮಾತಾಡಿ ಉಡುಪಿ ಮತ್ತು ಕುಂದಾಪುರ ತಾಲೂಕಿನ ಇನ್ನೂ 10.12 ಕಡೆಗಳಲ್ಲಿ ಇಂಥ ಕೇಂದ್ರಗಳನ್ನು ತೆರೆಯಲಿದ್ದು ಅದರ ಯಶಸ್ಸಿಗೆ ಸಹಕರಿಸುವಂತೆ ಸ್ಥಳೀಯ ಸಂಸ್ಥೆಗಳನ್ನೂ ರೈತಾಪಿ ಜನರನ್ನೂ ಕೇಳಿಕೊಂಡರು.

ಸಿಂಡಿಕೇಟ್ ಬೇಂಕಿನ ಕೃಷಿ ವಿಭಾಗಾಧಿಕಾರಿ ಶ್ರೀ ಕೆ. ವಿ ಬೆಳರಾಯರು ಮತ್ತು ಶ್ರೀ ಬನ್ನಾಡಿ ಸುಬ್ಬಣ್ಣ ಹೆಗ್ಡೆಯವರು ಸೂತನಾಡಿದ ಬಳಿಕ ಕೋಟ ವ್ಯಾನಸಾಯಿಕ ಬ್ಯಾಂಕಿನ ಕಾರ್ಯದರ್ಶಿ ಶ್ರೀ ಬಿ. ಸಿ .ಹೊಳ್ಳರು ಧನ್ಯವಾದಗಳನ್ನರ್ಪಿಸಿದರು.

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನ್ನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಸೆನರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

Gram: VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರತಿದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಬಾಹ್ಯಪ್ರದರ್ಶನ ಯುಗವಲ್ಲವೆ?

(ನಾಲ್ಕನೇ ಪುಟದಿಂದ)

ಕಾರಣವೂ ಇಲ್ಲದೆ ಬೆಲೆಯೇರುತ್ತ ಹೋಗುವುದೆಂದರೆ....'

"ಸರಕಾರ ಇದನ್ನೆಲ್ಲ ನೋಡುತ್ತ ಪರಿಣಾಮಕಾರಿ ಕ್ರಮ ಕೈಕೊಳ್ಳದೆ...."

"ಮೂಕ ಪ್ರೇಕ್ಷಕನಾಗಿ ಕುಳಿತಿರುವುದೆಂದರೆ ಅದರ ಅಸಹಾಯಕತೆಯಲ್ಲದೆ ಮತ್ತಿತ್ತೇನು?"

'ಅಲ್ರಿ ಬಂಗ್ಲಾ ನಿರಾಶ್ರಿತರಿಂದಾಗಿ ನಮಗೆ ಹೊರಲಾರದ ಭಾರ ಬಿದ್ದಿದೆಯೆಂಬ ಭಾವನೆಯನ್ನು ಸರಕಾರ ಬಹಿರಂಗವಾಗಿ ಬಣ್ಣಿಸುತ್ತಿದೆ....'

'ಅಷ್ಟು ಮಾತ್ರವಲ್ಲ; ಭಾರತ-ಪಾಕ್ ಸ್ನಾನಗಳ ನಡುವೆ ಸಮರ ಭೀತಿಯನ್ನೂ ಅದು ಹುಟ್ಟಿಸುತ್ತಿದೆ. ಅದುದರಿಂದ ವ್ಯಾಪಾರಿ ವರ್ಗ ಇದರ ಸಂಪೂರ್ಣ ಪ್ರಯೋಜನ ಪಡೆಯಲು ಈಗಿಂದೀಗಲೇ ಸಿದ್ಧವಾಗಿದೆ. ಇನ್ನು ವಾರ್ ಫಂಡಿಗೆ ಅದು ಉದಾರವೇಣಿಗೆ ನೀಡಬೇಡವೆ?'

"ಹ್ಞೂಂ, ಅದಕ್ಕೆಂದೇ ಕೂಡಿಸಿಡೋದು ಅಲ್ವೆ?"

'ಮತ್ಯಾಕೆ? ದ್ವಿತೀಯ ಲೋಕ ಸಂಗ್ರಾಮ ಅದೆಷ್ಟು ಹುಟ್ಟ ವಾಪಾರಿಗಳನ್ನು ಮುಂಬಯಿಯ ಮಲಬಾರ್ ಹಿಲ್ಸ್‌ಗೆ ಕರೆದೊಯ್ದಿಲ್ಲ? ೧೯೬೫ರಲ್ಲಿನ ಭಾರತ-ಪಾಕ್ ಸಮರದ ವೇಳೆ ಅದೆಷ್ಟು ವ್ಯಾಪಾರಿಗಳು ಕಾಳ ಹಣ ಕೂಡಿಸಲಿಲ್ಲ?'

'ಅಂದ್ರೆ, ಇದಕ್ಕೆಲ್ಲ ಸರಕಾರವೇ ಹೊಣೆ ಅಲ್ಲವೆ?'

'ಸರಕಾರದ ಹೊಣೆ ಒಂದು ಬಗೆಯದ್ದಲ್ಲ; ಹಲವು ರೀತಿಯದು. ಕಳ್ಳ ಹಣವನ್ನು ಹುಡುಕಿ ತೆಗೆಯಲು ಅದು ಸಂಪೂರ್ಣ ಅಯಶಸ್ವಿಯಾಗಿದೆ.'

'ಅದು ಖರೇನ್ನಿ.....ತೆರಿಗೆ ತೆರಲು ಮಂತ್ರಿಗಳೇ ಮರೆಯುವಾಗ....'

'ಸಿಕ್ಕಿಬಿದ್ದ ಮೇಲೆ....'

'ಹ್ಞೂಂ....'

'ಕಳ್ಳ ದಾಸ್ತಾನುಗಳನ್ನು ತಡೆಯುವಲ್ಲಿ ಸರಕಾರ ಅಸಫಲವಾಗಿದೆ.'

'ಹ್ಞೂಂ....'

'ದೇಶದ ಉತ್ಪಾದನೆಯನ್ನು ಪೂರೈಕೆ ಮಾಡುವ ನೀತಿಯಲ್ಲೂ ಅದು ತಲೆಕೆಳಗಾಗಿದೆ....'

'ಆಯ್ತು....'

'ಸರಕಾರದ ಅಧಿಕಾರಿಗಳು—ಮಂತ್ರಿ—ಮಗಧರ ಐಶೋ ಆರಾಮ ಜೀವನ ದಿಂಪಾಗಿ ಕೋಟಿ ಕೋಟಿ ರೂಪಾಯಿಗಳು ಅಪವ್ಯಯವಾಗುತ್ತಿದೆ....'

'ಹ್ಞೂಂ....ಶ್ರೀ ಸಾಮಾನ್ಯನಿನ್ನೂ ಸಾದಚಾರಿಯಾಗಿರುವಾಗ ರಾಷ್ಟ್ರಪತಿಗಳಿಗೆ ಎರಡು ಲಕ್ಷ ಬೆಲೆಬಾಳುವ ಕಾರು ಬೇಕು..'

'ಹ್ಞೂಂ....ಆದರೆ ಅದವರ ಉಪಯೋಗಕ್ಕಲ್ಲವಂತೆ; ಗಣ್ಯ ಅತಿಥಿಗಳಿಗಂತೆ....'

'ಸರೀನ್ನಿ ಶ್ರೀ ಕೃಷ್ಣನನ್ನು ಸ್ವಾಗತಿಸಲು ಕುಚೇಲನಿಗೆ ತನ್ನ ಕೈಗಳು ಸಾಲವು; ಬಿರುದು—ಬಾವಲಿ—ಆನೆ—ಅಂಬಾರಿಗಳನ್ನು ಕಡತರ ಬೇಕು....'

'ಅದು ಮರ್ಯಾದೆ. ಆ ಕುಚೇಲನಿಗೇನು ಗೊತ್ತು ಶಿಷ್ಟ ವ್ಯವಹಾರಗಳು? ಆ ಪೊಟ್ಟು ಅವಲಕ್ಕಿಯ ಬದಲು ನಾಲ್ಕು ಮೂಸುಂಬಿ ಒಯ್ದಿದ್ದರೆ....'

'ಅಲ್ರಿ, ಆ ಅವಲಕ್ಕಿಯೇ ಅವನಿಗೆ ಸ್ವರ್ಗಭಾಗ್ಯ ತಂದಿತ್ತಿತು ನೋಡಿ....'

'ಮೂಸುಂಬಿ ಮತ್ತೂ ಹೆಚ್ಚಿನದನ್ನು....'

'ಸುಳ್ಳು ಸುಳ್ಳು....'

'ಯಾಕೆ?'

'ಅಲ್ರಿ, ಕೃಷ್ಣನಿಗೇನು ಅವಲಕ್ಕಿಗೆ ಕೊರತೆಯೇ? ಮೂಸುಂಬಿಗೆ ಅಭಾವವೆ?'

'ಇಲ್ಲಾನ್ನು....'

'ಅಲ್ಲಿರಬೇಕಾದ್ದು ಹೃದಯದ ಭಾವನೆ ತಾನ್ಕೆ?'

'ಹ್ಞೂಂ....ಆದರೂ ಇದು ವಿಜ್ಞಾನ ಯುಗ....'

'ಅಲ್ರಿ, ಇದು ಕಂಡಿತಕ್ಕೂ ವಿಜ್ಞಾನ ಯುಗವಲ್ಲ....'

'ಮತ್ತೇನ್ನಿ?'

'ಇದು ಪ್ರದರ್ಶನ ಯುಗ....'

'ಹ್ಞೂಂ... ಒಂದ್ರೀತೀಯಿಂದ ಹೌದೂನ್ನು....'

'ಹೇಗೆ? ಹೇಳಿ ನೋಡೋಣ....'

'ನೀನೇ ಹೇಳು—ನಾಮಕರಣಧೀರೆ..'

'ನೋಡಿ, ಎಲ್ಲ ನೋಡಿದ್ರೂ ಇಂದು ಪ್ರದರ್ಶನ—ಬಾಹ್ಯ ಪ್ರದರ್ಶನ ಮಾತ್ರ; ಹೊರಗೆ ಶೃಂಗಾರ-ಒಳಗೆ ಗೋಳಿಸೊಪ್ಪು. ಬಾಯಲ್ಲಿ ರಾಮ ನಾಮ, ಬಗಲಲ್ಲಿ ತಲವಾರು....'

'ಇದು ಮಂತ್ರಿಗಳಿಂದ ಹಿಡಿದು ಶ್ರೀಸಾಮಾನ್ಯನ ವರೆಗೂ ಬರೋಬರಿಮಾತು....'

'ಗಂಡಸಿಗೆ ಹೆಣ್ಣುಡೆ ಉಡಿಸಿ...'

'ಛೀ...ಛೀ...ಅದೆಲ್ಲ ಈಗ ಅಗತ್ಯವಿಲ್ಲ ಕಣೇ. ಇದು ಫ್ಯಾಶನ್ನು ಕಾಲ ಗಂಡಾರು—ಹೆಣ್ಣಾರು ತಿಳಿಯುವುದೇ ತ್ರಾಸದಾಯಕವಾಗಿರೋದು....'

'ಅದೂ ಪ್ರದರ್ಶನ ಅಲ್ವೆ? ಒಳಗಿನ ಗುಟ್ಟು ಶಿವನೇ ಬಲ್ಲ...'

'ಎಲ್ಲರೂ ತಾವು ಸಂಭಾವಿತರೆಂದೂ ತೋರಿಸಿಕೊಳ್ಳುತ್ತಾರೆ. ಎಲ್ಲ ಆಸಿಪ್ಪಗಳಿಗೂ ಉಳಿದವರೇ ಹೊಣೆಯೆಂದು ಬೊಟ್ಟು ಮಾಡುತ್ತಾರೆ...'

'ಸರಕಾರ ವ್ಯಾಪಾರಿಗಳನ್ನು; ವ್ಯಾಪಾರಿಗಳು ಸರಕಾರವನ್ನು ಪರಸ್ಪರ ದೂಷಿಸುತ್ತಾರೆ.'

ವ್ಯಾಪಾರಿಗಳು ಸರಕಾರದ ವಿರುದ್ಧ—ಸರಕಾರ ವ್ಯಾಪಾರಿಗಳ ವಿರುದ್ಧ ಅಸ್ತ್ರವೆತ್ತುತ್ತಾರೆ....'

'ತಿವಿದಂತೆ ಮಾಡುತ್ತಾರೆ ...'

'ಅಂದರೆ ಹುಸಿಕಾಳಗವಾಡುತ್ತಾರೆ....'

ಶ್ರೀ ಸಾಮಾನ್ಯರ ರಕ್ತವನ್ನು ಹೀರಿಬಿಡುತ್ತಾರೆ....'

ಹ್ಞೂಂ... ಸರಕಾರಕ್ಕೆ ತೆರಿಗೆ ಹೇರಲು ವ್ಯಾಪಾರಿಗಳಿಗೆ ಬೆಲೆಯೇರಿಸಲು ಇನ್ನು ವಸ್ತುಗಳುಳಿದಿಲ್ಲ....'

'ಅಲ್ರಿ ಇದು ಹೀಗೆಯೇ ನಡೆದರೆ ಎಲ್ಲಿಗೆ ಮುಟ್ಟ್ಯತೂಂತ....'

'ಎಲ್ಲೀಂತಂದ್ರೆ ಏನು? ಜನತೆ ಸಹಿಸಿಕೊಂಡಿರುವವರೆಗೆ ಹೀಗೆ ನಡೆಯುತ್ತದೆ. ಭಾರತೀಯರು ಸಹಿಷ್ಣುಗಳು. ಇವೆಲ್ಲವೂ ತಮ್ಮ ಪೂರ್ವಸಂಚಿತವೆಂದು ಅವರು ನಂಬುವುದನ್ನು ಬಿಟ್ಟು ದಬ್ಬಾಳಿಕೆ- ಸುಲಿಗೆಗಳ ವಿರುದ್ಧ ಕೈಯೆತ್ತಲೆಸಿದರೆ ಸಾಕು,

ವಿಜ್ಞಾನವಿಸ್ಮಯ—

ವ್ಯರ್ಥ ಬೆಳೆಯಿಂದ ಉತ್ತಮ ಮೇವು

ಗಡುಸಾದ, ದಪ್ಪನಾದ ಬೆಳೆ ಕಳಿಗಳನ್ನು ಅಧಿಕ ಒತ್ತಡದ ಹಬೆ ಸಂಸ್ಕರಣದ ವಿಧಾನವೊಂದಿಂದ ದನಕರುಗಳು, ಕುರಿಗಳು ಮೊದಲಾದ ಜಾನುವಾರುಗಳಿಗೆ ಜೀರ್ಣವಾಗಬಲ್ಲ ಮೇವಾಗಿ ಪರಿವರ್ತಿಸುವ ಸಾಧ್ಯತೆಯಿದೆಯೆಂದು ಅಮೆರಿಕನ್ ವ್ಯವಸಾಯ ಸಂಶೋಧನಾ ಇಲಾಖೆಯ ವಿಜ್ಞಾನಿಗಳು ವರದಿಮಾಡಿದ್ದಾರೆ.

ಕ್ಯಾಲಿಫೋರ್ನಿಯದ ಆಲ್ಬನಿಯಲ್ಲಿರುವ 'ವೆಸ್ಟರ್ನ್ ಯುಟಿಲೈಸೇಷನ್ ಲ್ಯಾಬರೇಟರಿ'ಯಲ್ಲಿ ಈ ವಿಷಯದಲ್ಲಿ ಇದುವರೆಗೆ ನಡೆದಿರುವ ಸಂಶೋಧನೆಯಿಂದ ವ್ಯಕ್ತಪಟ್ಟಿರುವ ಅಂಶಗಳುಪ್ರೋತ್ಸಾಹದಾಯಕವಾಗಿದ್ದರೂ, ಈ ಕಳಿಗಳು, ಅದರಲ್ಲೂ ಬತ್ತ ಮತ್ತು 'ರೈ' (ಸಣ್ಣ ಗೋಧಿ) ಹುಲ್ಲುಗಳು ಎಷ್ಟನ ಮಟ್ಟಿಗೆ ಜೀರ್ಣವಾಗಬಲ್ಲುವು ಎಂಬುದನ್ನು ಪ್ರಾಣಿಗಳಿಗೆ ಇವನ್ನು ತಿನ್ನಿಸಿ ಪರೀಕ್ಷೆಗಳನ್ನು ನಡೆಸಿ ನೋಡಬೇಕಾಗಿದೆ.

ಆಲ್ಬನಿಯಲ್ಲಿ ಒಬ್ಬ ರಾಸಾಯನಿಕ ಎಂಜಿನಿಯರ್ ಆದ ರಾಬರ್ಟ್ ಪಿ. ಗ್ರಹಾಂ ಅವರೊಂದಿಗೆ ಸಂಶೋಧನಾ ಕಾರ್ಯದ ಮುಖ್ಯಸ್ಥರಾಗಿರುವ ರಸಾಯನ ವಿಜ್ಞಾನಿ ಜಾರ್ಜ್ ಓ ಕೋಹ್ಲರು ಹೇಳುತ್ತಾರೆ.

"ಬತ್ತದ ಹುಲ್ಲು ಮತ್ತು ಅಂಥ ಇತರ ಗಟ್ಟಿಯಾದ ದಪ್ಪನೆ ಕಳೆಹುಲ್ಲುಗಳ 'ಸೆಲ್' ಗೋಡೆಗಳಲ್ಲಿನ 'ಸೆಲ್ಯುಲೋಸ್' ಮತ್ತು 'ಹೆಮಿ ಸೆಲ್ಯುಲೋಸ್' ವಸ್ತುಗಳು ಮೆಲಕು ಹಾಕುವ ಪ್ರಾಣಿಗಳಿಗೆ ಒಳ್ಳೆ ಆಹಾರವಾಗಬಲ್ಲ ಸಾಮರ್ಥ್ಯ ಹೊಂದಿವೆಯೆಂದು ಬಹು ದಿನಗಳಿಂದ ಗೊತ್ತಿದೆ. ಆದರೆ ಈ 'ಸೆಲ್' ಗೋಡೆಗಳ ರಚನೆಯಲ್ಲಿ ಸೆಲ್ಯುಲೋಸ್ ವಸ್ತುಗಳೊಂದಿಗೆ 'ಲಿಗ್ನಿನ್'ಎಂಬ ಜೀರ್ಣವಾಗದ ವಸ್ತುವೊಂದಿದೆ.

"ಈ ಹಬೆ ಸಂಸ್ಕರಣ ವಿಧಾನದಲ್ಲಿ ಈ ರಾಸಾಯನಿಕ ರಚನೆಯನ್ನು ಬದಲಾಯಿಸಿ ಸೆಲ್ಯುಲೋಸ್ ಭಾಗ ಕೈಗೆ ಸಿಗುವಂತೆ ಮಾಡಬೇಕೆಂದು ನಾವು ಉದ್ದೇಶಿಸಿದ್ದೇವೆ."

ಕೆಲವು ಉತ್ಪಾದನಾ ಪ್ರದೇಶಗಳಲ್ಲಿ ಬತ್ತ ಮತ್ತು 'ರೈ' ಹುಲ್ಲುಗಳ ವ್ಯರ್ಥ ವಸ್ತು ಸಮಸ್ಯೆ ತೀವ್ರವಾಗಿರುವುದರಿಂದ ಸದ್ಯಕ್ಕೆ ಸಂಶೋಧನೆ ಈ ಎರಡು ವಸ್ತುಗಳ ಮೇಲೆ ಕೇಂದ್ರೀಕೃತವಾಗಿದೆಯೆಂದು ಅವರು ನುಡಿದರು. ಅಮೆರಿಕವೊಂದರಲ್ಲೇ ವರ್ಷಕ್ಕೆ 20 ಕೋಟಿ ಟನ್‌ಗಳಿಗಿಂತ ಹೆಚ್ಚು ಇಂಥ ಹುಲ್ಲು ಮತ್ತು ಇತರ ದಾರುಮಯ ಬೆಳೆ ಕಳೆಗಳು ಉತ್ಪಾದನೆಯಾಗುತ್ತವೆ.

ಈ ವಿಧಾನದಲ್ಲಿ ಹುಲ್ಲನ್ನು ಮೂರು ನಾಲ್ಕು ನಿಮಿಷಗಳ ಅವಧಿಗೆ 300–400 ಪೌಂಡ್‌ಗಳ ಹಬೆ ಒತ್ತಡಕ್ಕೆ ಒಳಪಡಿಸಲಾಗುತ್ತದೆ. ಹೀಗೆ ಸಂಸ್ಕರಿಸಿದ ವಸ್ತುವಿನ ಜೀರ್ಣಕಾರಿ ಲಕ್ಷಣ ಎಷ್ಟು ಎಂಬುದನ್ನು ತಿಳಿಯಲು ಒಂದು ವಿಧಾನವನ್ನೂ ವಿಜ್ಞಾನಿಗಳು ಕಂಡುಹಿಡಿದಿದ್ದಾರೆ.

ಹಬೆ ಸಂಸ್ಕರಣಕ್ಕೆ ಮುಂಚೆ ಬತ್ತದ ಹುಲ್ಲಿನಲ್ಲಿ ಶೇಖಡ 34ರಷ್ಟು ಜೀರ್ಣಕಾರಿ ಅಂಶವಿದ್ದುದು ಸಂಸ್ಕರಣದನಂತರ ಶೇಖಡ 43ಕ್ಕೆ ಹೆಚ್ಚಿತು. ಹಬೆಯೊಡನೆ ಸೋಡಿಯಂ ಹೈಡ್ರಾಕ್ಸೈಡನ್ನು ಸೇರಿಸಿದಾಗ ಇದು ಶೇಖಡ 61ಕ್ಕೆ ಏರಿತು.

'ರೈ' ಹುಲ್ಲಿನಲ್ಲಿ ಇದು ಶೇಖಡ 40ರಿಂದ 49ಕ್ಕೆ ಆಮೇಲೆ 76ಕ್ಕೆ ಹೆಚ್ಚಿತು ಉದಾಹರಣೆಗೆ 'ಆಲ್ಫಾಲ್ಫ' (ಒಂದು ಬಗೆಯ ಕುದುರೆ ಮಸಾಲೆ ಸೊಪ್ಪು) ಹುಲ್ಲಿನಲ್ಲಿ ಜೀರ್ಣಕಾರೀ ಅಂಶ ಸರಾಸರಿ ಶೇಖಡ 55ರಷ್ಟಿರುತ್ತದೆ

"ಸಂಸ್ಕರಿಸಿದ ಪದಾರ್ಥಗಳನ್ನು ಪ್ರಾಣಿಗಳು ಅರಗಿಸಿಕೊಳ್ಳಬಲ್ಲವು ಎಂದು ಹೇಗೆ ಹೇಳುವುದೆಂದು ನಾವು ಈಗ ತಿಳಿಯಬೇಕಾಗಿದೆ. ಸಂಸ್ಕರಿಸಿದ ವ್ಯರ್ಥ ಪದಾರ್ಥದಿಂದ ದೊರೆತ ಶರ್ಕರಪಿಷ್ಟವನ್ನು ಸರಿದೂಗಿಸಲು ಏನಾದರೂಸಸಾರಜನಕವನ್ನು ಅದಕ್ಕೆ ಸೇರಿಸಬೇಕಾಗ ಬಹುದು" ಎಂದು ಕೋಹ್ಲರ್ ಹೇಳಿದರು.

●●

ಆತ್ಯುತ್ತಮ ರಾಜ್ಯ ಫುಟ್‌ಬಾಲ್ ತಂಡಕ್ಕೆ ಆಡಳಿತಗಾರ ಮೇಲು

ಂ ಂ ಂ

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 594/71

ಮಹಾಬಲ ಅತಾಳ — ಅರ್ಜಿದಾರ
ಮುತ್ತಣ್ಣ ಶೆಟ್ಟಿ ಕೂಡಾ — ಎದ್ರಿದಾರು

2ನೇ ಎದ್ರಿ ನಾರಾಯಣ ಶೆಟ್ಟಿ, ಪರಮೇಶ್ವರ ಹೆಂಗ್ಸಿನ ಮಗ, ಪಾಂಡಿ ಪೇಟ್ಟಿ ಕಂಪೌಂಡು, ಕೊಡಿಯೂಲಬೈಲ್, ಮಂಗಳೂರು-3 ಇವರಿಗೆ—

ಅರ್ಜಿದಾರರು 1970-71ನೇ ಸಾಲಿನ ಬಾಕಿಯ ವಸೂಲಿ ಬಗ್ಗೆ ದಾಖ್ಲು ಮಾಡಿದ ಅರ್ಜಿಯು 30.11.71ಕ್ಕೆ 2ನೇ ಎದ್ರಿಯ ಹಾಜರಾತಿ ಬಗ್ಗೆ ಇರುತ್ತದೆ.ನೀವು ತಾ 30.11.71 ಕ್ಕೆ ಬೆಳ್ತಂಗಡಿ ಮುನ್ಸಿಫ್ ಕೋರ್ಟಿನ ಮುಂದೆ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗಿ ಉದಾಹರಿಸ ತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತಕಂಡಂತೆ ಮುಂದುವರಿಸಲಾದೀತು.

[By order of Court]
ಪುಳು ನಾರಾಯಣ ಭಟ್ಟ
ಅರ್ಜಿದಾರರ ಕಡೆ ಎಡ್ವಕೇಟ್
ಬೆಳ್ತಂಗಡಿ, 18.11.1971.

ದಯವಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

READ &
ADVERTISE IN
NAVAYUGA WEEKLY

(ಮೂರನೇ ಪುಟದಿಂದ)

ರು ದೂರವಿಟ್ಟಿದ್ದಾರೆ. ಮೊನ್ನೆ ಮೊನ್ನೆ ಪುತ್ತೂರಲ್ಲಿ ಮಾತನಾಡುತಿದ್ದ ಶ್ರೀ ಚಂದ್ರಶೇಖರ್ ಅಡಳಿತ ಪಕ್ಷದ ನಾಯಕತ್ವವನ್ನು ಸ್ಪಷ್ಟ ಶಬ್ದಗಳಿಂದ ಖಂಡಿಸಿದ್ದಾರೆ, ಭಂಗಿಸಿದ್ದಾರೆ ಚುನಾವಣೆಯ ವೇಳೆ 'ಗರೀಬೀ ಹಟಾವೊ' ಎಂದು ಬೊಬ್ಬಿರಿದು ಜನತೆಯನ್ನು ಸಮ್ಮೋಹನಗೊಳಿಸಿ ತುಂಬಿ ತುಳುಕುವ ಬಹುಮತದಿಂದ ಗೆದ್ದು ಬಂದ ಇಂದಿರೇಟು ಸರಕಾರ ಬಡತನ ನಿರ್ಮೂಲನಕ್ಕೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲವೆಂದು ಹೇಳಿದ ಅವರು ನಾಯಕರ ಮೇಲೆ ವಚನ ಭ್ರಷ್ಟತೆಯ ಆರೋಪ ಹೊರಿಸಿದ್ದಾರೆ. ಸಚಿವರೂ ಉನ್ನತ ಅಧಿಕಾರಿಗಳೂ ವಿಲಾಸಮಯ ಜೀವನವನ್ನು ಬದುಕುತ್ತಿರುವಾಗ ಉಳಿದ ವರಿಗೆ ಮಿತವ್ಯಯದ ಪಾಠ ಹೇಳುವುದು ಅಪಹಾಸ್ಯವೆಂದವರು ಹೇಳಿದ್ದಾರೆ. ಸಚಿವರು ಮೊತ್ತನೊದಲಿಗೆ ವಿಲಾಸವನ್ನು ತ್ಯಾಗ ಮಾಡಿ ಜನತೆಗೆ ಮಿತವ್ಯಯದ ಮೇಲ್ಪಂತಿ ಕೊಡಬೇಕು ಎಂದವರು ಕರೆ ನೀಡಿದ್ದಾರೆ.

ಶ್ರೀ ಚಂದ್ರಶೇಖರರು ಪ್ರಾಮಾಣಿಕ ವ್ಯಕ್ತಿ. ಇವರಿಗೆ ಯಾವ ಅಧಿಕಾರ ಲಾಲಸೆಯೂ ಇಲ್ಲವಾದುದರಿಂದಲೇ ತನ್ನ ಸಮಾಜವಾದಿ ನೀತಿಯ ಬಗ್ಗೆ ಅವರು ಖಂಡ ತುಂಡವಾಗಿ ಉದ್ಘೋಷಿಸುತ್ತಾರೆ. ಶ್ರೀಯುತರ ಪರಿಚಯವಿರುವವರಿಗೆ ಅವರು ನಡೆದಂತೆ ನುಡಿಯುವ ಧೀರರೆಂದು ತಿಳಿಯುತ್ತದೆ. ಕೇಂದ್ರ ಚುನಾವಣಾ ಸಮಿತಿಗೆ ಪ್ರಧಾನಿಯವರ ಇಚ್ಛೆಗೆ ವಿರುದ್ಧವಾಗಿ ಚುನಾಯಿತರಾದ ಶ್ರೀಯುತರ ಗೆಲುವಿನ ಹಿಂದೆ ಇದ್ದುದು–ಉನ್ನತ ನಾಯಕರ ಕೃಪೆಯೆಲ್ಲ, ಶ್ರೀಸಾಮಾನ್ಯರ ಅನುಕಂಪ–ಸಹೃದಯತೆ. ಯಾವ ಹೆಂಗು–ದಾಕ್ಷಿಣ್ಯಗಳಿಗೂ ತಲೆಬಾಗದ ಚಂದ್ರಶೇಖರರು ಉನ್ನತ ನಾಯಕತ್ವವನ್ನು ಟೀಕಿಸುತ್ತಲೇ ಹೋದರೆ ಅವರ ಮೇಲೆ ಶಿಸ್ತಿನ ಕ್ರಮ ಕೈಗೊಂಡರೂ ಆಚ್ಚರಿಯಲ್ಲ ಇದರಿಂದ ಇಂದಿಕೇಟಿಗೆ ಹಾನಿಯೆಲ್ಲದೆ ಶ್ರೀ ಚಂದ್ರಶೇಖರರಿಗಿಲ್ಲ ಆದುದರಿಂದಲೇ ಶ್ರೀಯುತರ ಕಟುತ್ತಿಗಳನ್ನು ನಾಯಕತ್ವ ಅತ್ಯಂತ ಲಘುವಾಗಿ ಪರಿಗಣಿಸಿಕೊಂಡೇ ಬಂದಿದೆ.

●●

ಸುಂದರರಾಮ ಶೆಟ್ಟರಿಂದ ಲೀಲಾವತಿ ಮುನ್ಸಿ ಅವರಿಗೆ ಭೋಜನ ಸಮಾರಂಭ

ವಿಜಯಾ ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಎಂ. ಸುಂದರರಾಮ ಶೆಟ್ಟರು ತಾ. 12–11–71 ರಂದು ಮಂಗಳೂರಿನ ಮೋತಿ ಮಹಲಿನಲ್ಲಿ ಭಾರತೀಯ ವಿದ್ಯಾಭವನದ ಅಧ್ಯಕ್ಷೆಯಾದ ಶ್ರೀಮತಿ ಲೀಲಾವತಿ ಮುನ್ಸಿಯವರಿಗೆ ಗೌರವಾರ್ಥ ಭೋಜನ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಆರಂಭದಲ್ಲಿ ಶ್ರೀಮತಿ ಉಷಾ ರವೀಂದ್ರನಾಥ್ ಪೂಂಜ ಅವರು ಶ್ರೀಮತಿ ಮುನ್ಸಿಯವರಿಗೆ ಪುಷ್ಪಗುಚ್ಛವಿತ್ತು ಸ್ವಾಗತಿಸಿದ ಮೇಲೆ ಶ್ರೀ ಎಂ. ಸುಂದರರಾಮ ಶೆಟ್ಟರು ಸ್ವಾಗತ ಭಾಷಣ ಮಾಡುತ್ತಾ ಭಾರತೀಯ ವಿದ್ಯಾಭವನದ ಪ್ರಾಮುಖ್ಯತ್ಯೆಯ ಧೋರಣೆಗಳನ್ನು ವಿವರಿಸಿ ಕಾಲಧರ್ಮಕ್ಕೆ ಸರಿಯಾಗಿ ಸೇವಾಜವು ಪರಿವರ್ತನೆಯಾಗುವ ಪೂರ್ವದಲೇ ಪ್ಯಕ್ತಿಯೂ ತನ್ನ ನಡವಳಿಕೆಗಳನ್ನು ಸುಧಾರಿಸಿಕೊಳ್ಳಬೇಕು ರಾಷ್ಟ್ರದ ಸುಧಾರಣೆ ಕುಟುಂಬ ಸುಧಾರಣೆಯಿಂದಲೂ ಕುಟುಂಬದ ಸುಧಾರಣೆ ವ್ಯಕ್ತಿಯ ಸುಧಾರಣೆಯಿಂದಲೂ ಮಾತ್ರವೇ ಸಾಧ್ಯವಾದೀತು ಎಂದು ನುಡಿದ ಶ್ರೀ ಶೆಟ್ಟರು ವ್ಯಕ್ತಿಯ ಜೀವನವನ್ನು ಹಸನಾಗಿಸಿ ಸಾಂಸ್ಕೃತಿಕ ಸಮತೆಯನ್ನು ಸಾಧಿಸುವ ಕೆಲಸವನ್ನು ಕುಲಪತಿ ಮುನ್ಸಿಯವರು ಪ್ರಾರಂಭಿಸಿ ಭಾರತೀಯ ವಿದ್ಯಾಭವನವನ್ನು ಸ್ಥಾಪಿಸಿದರು. ಶ್ರೀಮತಿ ಮುನ್ಸಿಯವರು ಈ ಕೆಲಸವನ್ನು ನೆರವೇರಿಸುವ ಬಗ್ಗೆ ನಮ್ಮ ಜಿಲ್ಲೆಯ ಜನರಿಗೂ ಸಂದರ್ಭ ಸಾಧಿಸಿ ಕೊಟ್ಟಿದ್ದಕ್ಕೆ ಸಂತೋಷ ಸೂಚಿಸಿದರು.

ಶ್ರೀಮತಿ ಮುನ್ಸಿಯವರು ತನಗೆ ಮಂಗಳೂರಿನಲ್ಲಿ ದೊರೆತ ಗೌರವಾದರಗಳಿಗೂ ಮಂಗಳೂರಿನ ಜನರು ಭಾರತೀಯ ವಿದ್ಯಾಭವನದ ಕಾರ್ಯಕ್ರಮಗಳು ಜಯಶೀಲವಾಗಿ ಜರಗಲೆಂದು ಹಾರೈಸಿದ ಬಳಿಕ ನೃತ್ಯನಾಟಕ ಜರಗಿತು.

ಭಾರತೀಯ ವಿದ್ಯಾಭವನದ ಸಹಾಯಾರ್ಥ ನೃತ್ಯನಾಟಕ

ತಾ. 12.11.71ರಂದು ಮಂಗಳೂರು ಪುರ ಭವನದಲ್ಲಿ ಭಾರತೀಯ ವಿದ್ಯಾಭವನದ ಮಂಗಳೂರು ಕೇಂದ್ರದ ಸಹಾಯಾರ್ಥವಾಗಿ ಮದರಾಸಿನ ಸುಪ್ರಸಿದ್ಧ ಕಲಾಕ್ಷೇತ್ರದ ಕಲಾವಿದರಿಂದ 'ಶಬರಿ ಮೋಕ್ಷಂ' ಎಂಬ ನೃತ್ಯನಾಟಕ ಕಾರ್ಯಕ್ರಮವು ಯಶಸ್ವಿಯಾಗಿ ಜರಗಿತು. ಆರಂಭದಲ್ಲಿ ಜಿಲ್ಲಾಕೇಂದ್ರದ ಅಧ್ಯಕ್ಷ ಡಾ|| ಎಂ. ಪಿ. ಪೈಯವರು ಸ್ವಾಗತಿಸಿದರು. ಶ್ರೀ ವೇಜಾವರ ಶ್ರೀ ಪಾದಂಗಳವರು ತಮ್ಮ ಅನುಗ್ರಹ ಭಾಷಣದಲ್ಲಿ ನಮ್ಮ ಸಂಸ್ಕೃತಿಯ ಕುರಿತು ಮಾತಾಡಿದರು. ಮುಖ್ಯ ಅತಿಥಿ ಡಾ|| ಕೆ. ಶಿವರಾಮ ಕಾರಂತರು ಸಂಸ್ಕೃತ ಭಾಷಾಧ್ಯಯನದ ಆವಶ್ಯಕತೆಯನ್ನು ಪ್ರಸ್ತಾಪಿಸಿ ಶ್ರೀಮತಿ ರುಕ್ಮಿಣಿ ದೇವಿಯವರು 40 ವರುಷಗಳಿಂದ ಭರತನಾಟ್ಯದ ಪರಂಪರೆ ಉಳಿಯುವಂತೆ ಮಾಡಿದ ಪ್ರಯತ್ನವನ್ನೂ ಭಾರತೀಯ ವಿದ್ಯಾಭವನವು ನಮ್ಮ ಸಂಸ್ಕೃತಿಯನ್ನು ಪ್ರಚಾರಿಸಲು ಪಡುತ್ತಿರುವ ಕ್ರಮವನ್ನೂ ಕೊಂಡಾಡಿದರು. ಭವನದ ಅಧ್ಯಕ್ಷೆ ಶ್ರೀಮತಿ ಲೀಲಾವತಿ ಮುನ್ಸಿಯವರು ಇಲ್ಲಿಯ ಕೇಂದ್ರದ ಕಾರ್ಯಕ್ರಮಗಳು ಜಯಶೀಲವಾಗಿ ಜರಗಲೆಂಬ ಹಾರೈಸಿದರು. ಪ್ರೊ| ಆರ್. ಸತ್ಯನಾರಾಯಣ ಅವರು ಭಾರತೀಯ ವೈದ್ಯಶಾಸ್ತ್ರದಲ್ಲಿ ಶ್ರೀ ಧನ್ವಂತರಿಯ ಸ್ಥಾನ ಎಂಬ ಕುರಿತು ಉಪನ್ಯಾಸ ನೀಡಿದರು. ಆನಂತರ ಜರಗಿದ ಸಂಗೀತ ಕಚೇರಿಯಲ್ಲಿ ವಿದ್ವಾನ್ ಆರ್. ಎನ್. ವಿಶ್ವೇಶ್ವರನ್–(ವೀಜೆ) ವಿದ್ವಾನ್ ಎಸ್, ಮಹಾದೇವಪ್ಪ (ಪಟೇಲು) ವಿದ್ವಾನ್ ಟಿ. ಎಂ. ಪುಟ್ಟಸ್ವಾನುಯ್ಯ (ಮೃದಂಗ) ಅವರು ಪಾಲ್ಗೊಂಡಿದ್ದರು.

ಎಕ್ಕಡ್ಕ ಸರಕಾರಿ ಶಾಲೆಯ ಹೊಸ ಕಟ್ಟಡದ ಉದ್ಘಾಟನೆ

ಪುತ್ತೂರು ತಾಲೂಕಿನ ಕೊಳ್ತಿಗೆ ಗ್ರಾಮದ ಎಕ್ಕಡ್ಕ ಸರಕಾರಿ ಪ್ರಾಥಮಿಕ ಶಾಲಾ ಕಟ್ಟಡದ ಹೊಸ ವಿಭಾಗವನ್ನು ಜಿಲ್ಲಾ (ಉ) ಕಾಂಗ್ರೆಸ್ ಅಧ್ಯಕ್ಷ ಶ್ರೀ ಎ. ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಬೋಳಸಭಾ ಸದಸ್ಯ ಶ್ರೀ ಕೆ.ಕೆ. ಶೆಟ್ಟರು ಇತ್ತೀಚೆಗೆ ಉದ್ಘಾಟಿಸಿದರು.

ಪ್ರಾರಂಭದಲ್ಲಿ ಪಂಚಾಯತಿ ಅಧ್ಯಕ್ಷ ಶ್ರೀ ಕೆ. ಬಾಲಕೃಷ್ಣ ಗೌಡರು ಅತಿಥಿಗಳ ಪರಿಚಯ ಮಾಡಿಸಿ ಸಭಿಕರನ್ನು ಸ್ವಾಗತಿಸಿದರು. ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಸಹಕಾರವಿತ್ತವರನ್ನು ಸ್ಮರಿಸಿ ಆತ್ಮಧಿಕ ಧನಸಹಾಯವಿತ್ತು ಸಹಕರಿಸಿದ ಶ್ರೀ ಇಬ್ರಾಹಿಂರವರನ್ನು ಅಭಿನಂದಿಸಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ನೂರ್ ಮಹಮ್ಮದ್‌ರವರು ಶಾಲಾ ವರದಿವಾಚನ ಗೈದರು. ಸಮಾರಂಭದಲ್ಲಿ ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಬಿ. ಸಂಕಪ್ಪ ರೈ, ವಿವೇಕಾನಂದ ಕಾಲೇಜಿನ ಪ್ರಾಧ್ಯಾಪಕ ಶ್ರೀ ವಿ. ನಾರಾಯಣ, ಮೂಜಿ ಪಂಚಾಯತ್ ಅಧ್ಯಕ್ಷ ಶ್ರೀ ಪಿ. ವೆಂಕಪ್ಪ ಭಟ್ಟರೂ ಮಾತಾಡಿದರು ಶ್ರೀ ಬಿ. ಸಂಕಪ್ಪ ರೈಗಳು ಭೂರಹಿತ ಕುಟುಂಬಗಳಿಗೆ ಸಾಗುವಳಿ ಚೀಟಿಗಳನ್ನು ಹಂಚಿದರು

ಅನಂತರ ಉದ್ಘಾಟಕರು ಮತ್ತು ಅಧ್ಯಕ್ಷರು ಮಾತಾಡಿ ಶಾಲೆಗೆ ಶುಭಕೋರಿದರು.

ಹೆನ್ರಿ ಡಿ'ಸಿಲ್ವರ ನಿಧನ

ಉಡುಪಿ ನವಯುಗ ಸ್ಪಿನ್ನಿಂಗ್‌ನಲ್ಲಿ ಅನುಭವಿ ಕೆಲಸಗಾರರಾಗಿದ್ದ ಉದ್ಯಾವರದ ಬೊಳ್ಜೆ ಹೆನ್ರಿ ಡಿ' ಸಿಲ್ವರು ತಾ 14ರಂದು ತಮ್ಮ 54ನೆಯ ವಯಸ್ಸಿನಲ್ಲಿ ಹೃದಯಾಘಾತದಿಂದ ತಮ್ಮ ನಿವಾಸದಲ್ಲಿ ನಿಧನಗೊಂಡರು. ಇವರು ಬೇರೆ ಬೇರೆ ಕೊಂಕಣಿ ಪತ್ರಿಕೆಗಳಲ್ಲಿ ನಾಟಕ, ಕವಿತೆಗಳನ್ನು ಬರೆದು ಹೆಸರುವಾಸಿಯಾಗಿದ್ದರು. ಸುಮಾರು 30ಕ್ಕೂ ಹೆಚ್ಚು ಕೊಂಕಣಿ ನಾಟಕಗಳನ್ನು ಬರೆದು ನಿರ್ದೇಶಿಸಿ ಸ್ವಯ್ಯಾಕರಾಗಿದ್ದರು. ಚರ್ಚ್ ಸಂಗೀತದಲ್ಲಿ ಕೂಡಾ ವಿಶೇಷ ಶ್ರದ್ಧಾಸಕ್ತಿಯಿದ್ದು ಬೇರೆ ಬೇರೆ ಚರ್ಚ್‌ಗಳಿಂದ ಆಮಂತ್ರಿಸಲ್ಪಡುತ್ತಿದ್ದರು. ಇವರಿಗೆ ಪತ್ನಿ, 5ಗಂಡು ಮತ್ತು 2 ಹೆಣ್ಣು ಮಕ್ಕಳಿರುವರು.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

S. C. No. 40/71

M/s. ವೆಂಕಟೇಶ ಶುಕ್ರು ಪೈ ಅಂಡ್ ಸನ್ಸ್ —ವಾದಿರು

ಮತ್ತು

ಕೆ. ಶ್ರೀಪತಿ ಕಾಮತ್ —ಪ್ರತಿವಾದಿಯವರೊಳಗೆ

ಪ್ರತಿವಾದಿ— ಕೆ. ಶ್ರೀಪತಿ ಕಾಮತ್, ಕೆ. ಅನಂತ ಕಾಮತರ ಮಗ, ನಿತ್ಯನಿಧಿ ಡಿಪೊ ಜೆಟ್ಟು ಏಜಂಟ್, ಕೆನರಾ ಬ್ಯಾಂಕ್, ಮಲ್ಪೇಶ್ವರಮ್, ಬೆಂಗಳೂರು-3.

ವಾದಿರು ದಾಕ್ಲುಮಾಡಿದ ಮೇಲ್ಕಂಡ ದಾವೆಯು ತಾರೀಕು 6-12-71ಕ್ಕೆ ತಪ್ಪಿಗೆ ಯಿಟ್ಟಿದೆ. ಆ ದಿನ್ನ ಬೆಳಿಗ್ಗೆ ಕೋರ್ಟು ಮುಂದೆ ಹಾಜರಾಗಿ ಅದಾಹರಿಸುವರೆ ತಪ್ಪಿದ್ರೆ ನಿಂಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವುದು.

By Order of Court

Sd/-- V. G. Kedlaya,
M.A.,LL.B,
ವಾದಿರ ಕಡೆ ಅಡ್ವೋಕೇಟ್.

ಉಡ್ಪಿ, D. 7-11-71

ಓದಿರಿ! "ಗುಡಿ ಗೃಹಕೈರ್ಯ"

ಕನ್ನಡ ಪುಸ್ತಕ ಚಿಕ್ಕ ಬಂಡವಲಿನಲ್ಲಿ ನಿಮ್ಮ ಮನೆಯಲ್ಲಿ ಉದ್ಯೋಗ – ವ್ಯವಹಾರ ನಾಡಿ ನಿಮ್ಮ ಆದಾಯ ಬೆಳೆಸಿಕೊಳ್ಳಿರಿ. ಪುಟ 224 ಬೆಲೆ ರೂ. 10. 'ನೂತನ ಸಣ್ಣ ಉದ್ಯಮ' ಪುಟಗಳು 464, ಬೆಲೆ: ರೂ.16. ಅಂಚೆ ಕೆಕ್ಚ ರೂ.2-50.

Cottage Industry, (NU - 7) P B. No. 2262. Anguri Bagh Market, Delhi-6

In the Court of the II Additional Munsiff at Puttur, S K.

Mis. Petition No. 19/1970.

Between:—

Chennamma and others
—Petitioners.

Vs.

Beepathumma and others
—Respondents.

R 3 Kanjeebi.
W/o Ibrahim Beary
Nettanigemudnoor village,
Puttur Taluk, Post: Kavu. S.K.

Please take notice that the above Mis-Petition stands posted to 30--11--1971 for your appearance and you are hereby directed to appear before the Court on the said day at 10—30 a.m in person or through an Advocate failing which the case will proceed in your absence.

(By Order of Court)

U. P. Shivarama,
Advocate for Petitioner.
Puttur, S. K.

In the Court of the Munsiff at Puttur, South Kanara.

Ex. C. 181 of 1971
O. S. 477 of 1964

Between:—

Ummakke —Petitioner

Vs.

Pachu Hengsu and others
—Respondents

R 3 Kunhanna Rai,
S/o Korapolu Hengsu. Bava,
Nettanigemudnoor Village,
Puttur Taluk, Post: Karnoor.

Please take notice that the above execution petition stands posted to 22—11—1971 for your appearance and you are hereby directed to appear before the court on the said day at 10.30 a. m. in person or through an Advocate failing which the case will proceed in your absence.

(By Order of Court)

U. P. Shivarama,
Advocate, Puttur
Advocate for Petitioner,
Puttur. S. K.

ಉಡುಪಿ ಮುನ್ಸಿಫ್ ಕೋರ್ಟಿನಲ್ಲಿ

O S. No 73/1971

ಉಡ್ಪಿ ಶೀರೂರು ಮಠದ ಶ್ರೀ ಲಕ್ಷ್ಮೀವರ ತೀರ್ಥ ಸ್ವಾಮಿರು —ವಾದಿರು

ಮತ್ತು

ಅಪ್ಪಣ ಶೆಟ್ಟಿ ಕೂಡಾ —ಪ್ರತಿವಾದಿರು ಇವರೊಳಗೆ—

ಸಪ್ಲಿಮೆಂಟಲ್ 5ನೆ ಪ್ರತಿವಾದಿ–ಮುದ್ದು ಶೆಟ್ಟಿ, ಅಪ್ಪಣ ಶೆಟ್ಟಿ ಮನೆ, ಉಡ್ಪಿ ತಾಲೂಕು ಕುಕ್ಕೆಹಳ್ಳಿ ಗ್ರಾಮ—ಇವರಿಗೆ ತಿಳಿಸುವುದೇನೆಂದರೆ:—

ಮೇಲ್ಕಂಡ—ದಾವೆಯ—ಪ್ಲೈತ 1ನೆ ಪ್ರತಿವಾದಿ ಅಪ್ಪಣ ಶೆಟ್ಟಿಯ—ವಾಲ್ಮಿದಾರರಾಗಿ ನಿಂಮನ್ನು ಕೂಡ ಕಕ್ಷಿಯಲ್ಲಿ ಸೇರಿಸಬೇಕಾಗಿ ವಗೈರೆ ವಾದಿರು ಕೊಟ್ಟ ಅರ್ಜಿ ತಾ. 15.12.71 ಕ್ಕೆ ಯಿಟ್ಟಿದೆ. ಆ ಕುರಿತು ನಿಮಗೇನಾನ್ನೂ ಆಕ್ಷೇಪ ಹೇಳತ್ಕಮ್ಮದಾಯಿದ್ರೆ ಸದ್ರಿ ದಿನ್ನ ಹೂರ್ವಾಹ್ನ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಬೀರು ಮಾಡಿಕೊಳ್ಳತಕ್ಕದೆಂತ ಈ ನೋಟ್ಸು ತಿಳಿಸೋಣಾಗಿದೆ.

V. R. Kidyoor
Advocate for Plaintiff

ಉಡ್ಪಿ, 15.11.71.

'ಗಾಂಧಿಜಿಯ ಕೊಲೆ'

(ಎರಡನೇ ಪುಟದಿಂದ)

ಪೇಳಕೆಯನ್ನು ಸಮರ್ಥಿಸಿ ಕೊಳ್ಳಲು ಆ ರೋಪಿಗಳು ತಮ್ಮ ಪರ ಸಾಕ್ಷಿ ಕೋರಲಿಲ್ಲ. ಒಂದು ತಿಂಗಳ ಕಾಲ (1-12-48—30-12-48) ವಾದ–ಪ್ರತಿವಾದಗಳು ನಡೆದವು. ಲಾಯರುಗಳನ್ನಿಟ್ಟಿದ್ದರೂ ಗೋಡ್ಸೆ ಸ್ವತಃ ವಾದಿಸಿದ. ಸಾವರ್ಕರ್ ಪರವಾಗಿ ವಾಟ್ಸ್ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶ ಶ್ರೀ ಪಿ. ಆರ್. ದಾಸರು ವಾದಿಸಿದರು. ಆ ಕಾಲದ ಪ್ರತಿಭಾಸಂಪನ್ನರಾದ ಲಾಯರುಗಳು ಉಳಿಕೆ ಆರೋಪಿಗಳ ಪರ ಹಾಜರಾಗಿ ತಮ್ಮ ರಕ್ಷಣೆಗೆ ಶ್ರಮವಹಿಸಿದರು.

ಗೋಡ್ಸೆಯ ಪರವಾಗಿ ವಾದಿಸಲು ಒಳ್ಳೆಯ ಲಾಯರುಗಳಿದ್ದರು. ಸಾಕ್ಷಿಗಳ ಪಾಟೀ ಸವಾಲನ್ನು ಆ ವಕೀಲರೇ ಮಾಡಿದ್ದರು. ಹೀಗೆ ಲಾಯರುಗಳಿರುವಾಗ ಗೋಡ್ಸೆ ಏಕೆ ತಾನೇ ವಾದಿಸಲು ಮುಂದಾದ? ನ್ಯಾಯಾಧೀಶರು ಹೇಗೆ ಅನುಮತಿ ಕೊಟ್ಟರು? ಈ ಅಪಮಾನವನ್ನು ವಕೀಲರು ಹೇಗೆ ಸಹಿಸಿ ಕೊಂಡರು? ಮರ್ಯಾದೆಯಿಂದ ಏಕೆ ನಿವೃತ್ತರಾಗಲಿಲ್ಲ?

ಆರೋಪಿಗಳ ವಿಚಾರಣೆಯನ್ನು ನ್ಯಾಯಾಧೀಶರು ಪ್ರಾರಂಭಿಸುವುದು ಪ್ರಾಸಿಕ್ಯೂಷನ್ ಸಾಕ್ಷಿಗಳ ಹೇಳಿಕೆಗಳು ಮುಗಿದ ನಂತರ. ಆರೋಪಿಯ ಮೇಲೆ ಬಂದ ಸಾಕ್ಷಿದ ವಿವರಗಳನ್ನು ಕೊಟ್ಟು ಇದಕ್ಕೆ ನೀನೇನು ಹೇಳುತ್ತಿಯೂ ಎಂದು ಕೇಳುತ್ತಾರೆ ಈ ಹೇಳಿಕೆಗಳನ್ನು ಕ್ರಿಮಿನಲ್ ಪ್ರೊಸೀಜರ್ ಕೋಡಿನ 342ನೇ ವಿಧಿಯಂತೆ ತೆಗೆದುಕೊಳ್ಳಬೇಕು. ತನ್ನ ಮೇಲೆ ಬಂದ ಸಂದರ್ಭಗಳನ್ನು ಅಲ್ಲಗಳೆಯಲು, ಅಥವಾ ಸೂಕ್ತ ಸಮಜಾಯಿಷಿ ಕೊಡಲು ಆರೋಪಿಗೆ ಇದು ಹೇಳಿಮಾಡಿಸಿದ ಸಮಯ. ಲಿಖಿತ ಹೇಳಿಕೆಗಳನ್ನು ಹಾಜರು ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಇತ್ತೀಚೆಗೆ ಆದ ತಿದ್ದುಪಡಿಯಂತೆ ಆರೋಪಿಯೇ ಸಾಕ್ಷಿ ಕಟ್ಟೆ ಹತ್ತಿ ತನ್ನ ಪರವಾಗಿ ವಾಗ್ಮೂಲ ಕೊಡಬಹುದು. ಆಗ ಆರೋಪಿಯ ಪಾಟೀ ಸವಾಲು ಮಾಡುವ ಅಧಿಕಾರ ಸರಕಾರಿ ವಕೀಲರಿಗೆ ಸಿಗುತ್ತದೆ.

ಗೋಡ್ಸೆ ತಾನೇ ಗುಂಡಿಟ್ಟು ಗಾಂಧಿಜಿಯನ್ನು ಕೊಂದೆನೆಂಬುದಾಗಿ ತನ್ನ ವಾದದಲ್ಲಿ ಒಪ್ಪಿಕೊಂಡ. ಕೊಲೆಗೆ ಸಂಚು ನಡೆಯಿತೆಂಬುದನ್ನು ಅಲ್ಲಗಳೆದ. ಉಳಿಕೆಯವರು ಯಾವ ಪಾತ್ರವನ್ನೂ ವಹಿಸಿಲ್ಲ ಎಂದು ಸಾಧಿಸಿದ. ಆದರೆ ಅದರಿಂದ ಪ್ರಯೋಜನವಾಗಲಿಲ್ಲ. ಹೊಂದಿಕೊಳ್ಳದ ಹೇಳಿಕೆಗಳು ಕೆಲವರನ್ನು ಪೇಚಿನಲ್ಲಿ ಸಿಕ್ಕಿಸಿತು. ಪಾಟೀ ಸವಾಲು ನಡೆಸುವ ಕಾಲದಲ್ಲಿ ಅಜಾತುರ್ಯದಿಂದ ಕೇಳಿದ ಪ್ರಶ್ನೆಗಳಿಗೆ ಪಡೆದ ಅನಪೇಕ್ಷಿತ ಉತ್ತರ ಕೆಲವು ಆರೋಪಿಗಳನ್ನು ಕಷ್ಟಕ್ಕೆ ಗುರಿ ಮಾಡಿತು. ಈ ಪ್ರಶ್ನೋತ್ತರಗಳಿಂದ ಜನವರಿ 19/20, ಜನವರಿ 29/30ರಂದು ಗೋಪಾಲ ಗೋಡ್ಸೆ, ಕರಕರೆ, ಕಿಷ್ಟಯ್ಯ ಅಪರೋಕ್ಷವಾಗಿ ದೆಹಲಿಯಲ್ಲಿದ್ದರೆಂಬುದು ಸಿದ್ಧವಾಯಿತು. ಈ ಮೂರು ಜನ ಸಂಚಿಗೆ ಸೇರಿಲ್ಲ. ಅವರು ದೆಹಲಿಯಲ್ಲಿ ಇರಲೇ ಇಲ್ಲವೆಂಬುದು ಆರೋಪಿಗಳ ನಿಲುವು. ಇರಲಿಲ್ಲವೆಂದು ಹೇಳಿದರೆ ಸಾಲದು. ಅದನ್ನು ರುಜುವಾತುವ ಡಿನಬೇಕಾಗಿತ್ತು. ಅದಕ್ಕಾಗಿ ತಮ್ಮ ಪರ ಏಕೆ ಸಾಕ್ಷಿಗಳನ್ನು ಕರೆಸಲಿಲ್ಲ? ವಿಚಿತ್ರವಾಗಿ ಕಾಣುತ್ತಿದೆ. ಲಾಯರುಗಳು ಕರ್ತವ್ಯದಲ್ಲಿ ಜಾರಿ ಬಿದ್ದರೆನ್ನುವುದು ನಿಶ್ಚಳವಾಗಿ ಕಂಡು ಬರುತ್ತಿದೆ.

ಗಾಂಧಿಜಿ ಮುಸ್ಲಿಂ ಪಕ್ಷಪಾತಿಗಳು. ಅವರನ್ನು ರಕ್ಷಿಸಲು ಗಾಂಧಿಜಿ ಉಪವಾಸದ ಬೆದರಿಕೆ ಹಾಕಿದ್ದು, ಅದಕ್ಕೆ ಪ್ರತಿಭಟನೆ ಸೂಚಿಸಲು ದೆಹಲಿಗೆ ಬಂದುದಾಗಿ ತಿಳಿಸಿದ. ಶಾಂತ ಮೆರವಣಿಗೆ ನಡೆಸಲು ಸಾಕಷ್ಟು ಸಂಖ್ಯೆಯಲ್ಲಿ ಜನರನ್ನು ಸೇರಿಸುವುದು ಆಗಲಿಲ್ಲ ಅದನ್ನು ಕೈ ಬಿಟ್ಟಿವು. ಆಗ ನಾನೊಬ್ಬನೇ ಗಾಂಧಿಜಿಯನ್ನು ಕೊಲ್ಲುವ ನಿರ್ಧಾರಕ್ಕೆ ಬಂದೆ ಎಂದು ಗೋಡ್ಸೆ ಕೋರ್ಟಿಗೆ ಅರಿಕೆ ಮಾಡಿಕೊಂಡ. ಈ ವಾದ ನಿಜವಿರಬಾರದೆಂದಿಲ್ಲ. ಆದರೆ ಮೌನ ಮೆರವಣಿಗೆ ಹೊರಡಲು ಬಂದವರಿಗೆ ಪಿಸ್ತೂಲು, ಕೈ ಬಾಂಬು, ರಿವಾಲ್ವರುಗಳೇಕೆ? ಹೆಸರು ಮರೆಸಿಕೊಂಡು ರೈಲು ನಿಲ್ದಾಣಗಳಲ್ಲಿ, ಹೋಟೆಲುಗಳಲ್ಲಿ ಉಳಿದುಕೊಂಡುದೇಕೆ? ಮತ ಪ್ರದರ್ಶನ ಮುಖ್ಯ ಧ್ಯೇಯವಾಗಿದ್ದರೆ, ಅದನ್ನು ದೃಢ ಪಡಿಸಲು ತಮ್ಮ ಪರ ಸಾಕ್ಷಿಗಳನ್ನೇಕೆ ವಿಚಾರಿಸಲಿಲ್ಲ? ಒಂದೊಂದು ಸಂದರ್ಭವೂ ಆರೋಪಿಯರು ತಪ್ಪಿತಸ್ಥರೆಂದು ಕೂಗಿ ಹೇಳುತ್ತದೆ.

ಶ್ರೀ ಆತ್ಮಚರಣರು ಗೋಡ್ಸೆ–ಆಪ್ಟೆ, ಯರಿಗೆ ಮರಣ ದಂಡನೆಯನ್ನು ವಿಧಿಸಿದರು. ಶ್ರೀ ಸಾವರ್ಕರರನ್ನು ಸರಿಯೂದರು ಜುವಾತಿಲ್ಲವೆಂದು ಬಿಡುಗಡೆ ಮಾಡಿದರು. ಉಳಿಕೆಯವರಿಗೆ ಜೀವಾವಧಿ ಶಿಕ್ಷೆ ಕೊಟ್ಟರು. ಆದರೆ ಹೀರ್ಕಿನಲ್ಲಿ ಕಿಪ್ಪಯ್ಯಗೆ ವಿಧಿಸಿದ ಶಿಕ್ಷೆಯನ್ನು ನಾಲ್ಕು ವರ್ಷಕ್ಕೆ ಇಳಿಸುವಂತೆ ಕ್ರಿಮಿನಲ್ ಪ್ರೊಸೀಜರ್ ಕೋಡಿನ 401—402ರ ವಿಧಿಯಂತೆ ಸರಕಾರಕ್ಕೆ ಸಿಫಾರಸು ಮಾಡಿದರು.

ಶಿಕ್ಷೆಯ ವಿರುದ್ಧ ಎಲ್ಲ ಅವಕಾಶಗಳು ಪೂರ್ವ ಪಂಜಾಬಿನ ಹೈಕೋರ್ಟಿಗೆ ಅಫೀಲು ಮಾಡಿಕೊಂಡರು. ಆರೋಪಿಗಳ ಅಫೀಲು—ಕ್ರಿಮಿನಲ್ ಅಫೀಲು 66/48 –ನ್ಯಾಯಾಮೂರ್ತಿ ಭಂಡಾರಿ, ಪೋಸ್ಟ್ಲೆ ಅಜ್ರಾರಾಮರ ಸಮ್ಮುಖಕ್ಕೆ ತನಿಖೆಗೆ ಬಂತು. ಹೈಕೋರ್ಟಿನಲ್ಲಿಯೂ ಒಂದಿಷ್ಟು ನಾಟಕ ನಡೆಯಿತು. ಗೋಡ್ಸೆ ತನ್ನ ಅಫೀಲನ್ನು ತಾನೇ ಸಮರ್ಥಿಸಿಕೊಂಡ. ಅವನ ವಾದವನ್ನು ಕೇಳಲು ಕೋರ್ಟಿನಲ್ಲಿ ನೂಕು–ನುಗ್ಗಲು ಅವರಲ್ಲಿ ಹೆಚ್ಚಿನವರು ಹೆಂಗಳೆಯರು ಗೋಡ್ಸೆಯ ವಾಗ್ವಿಲಾಸಕ್ಕೆ ಮುಗ್ಧಾದ ಕನ್ಯೆಯೊಬ್ಬಳು ತಾನು ಕೈಯಾರೆ ಹೆಣೆದ ಸ್ವೆಟರನ್ನು ಅವನಿಗೆ ಕಾಣಿಕೆಯಾಗಿ ಕೊಟ್ಟಳೆಂತೆ. ಆತ ಕೃತಜ್ಞತೆಯಿಂದ ಅದನ್ನು ಸ್ವೀಕರಿಸಿದನಂತೆ. ಕೊರಳಿಗೆ ಉರುಳು ಬಿಗಿಯುವಂದು ಅದನ್ನು ಧರಿಸಿದ್ದನಂತೆ. ಆ ಹೆಣ್ಣು ಮಗಳು ಆಫೀಲಿನ ತೀರ್ಮಾನಕ್ಕೆ ಕುಳಿತ ನ್ಯಾಯ ಮೂರ್ತಿಗಳ ಮಗಳು.

ಹೈ ಕೋರ್ಟಿನ ಜಡ್ಜಿಗಳು ಪ್ರತ್ಯೇಕ–ಪ್ರತ್ಯೇಕ್ಷವಾಗಿಯೇ ತಮ್ಮ ತೀರ್ಪುಗಳನ್ನು ಬರೆದರು. ಡಾಕ್ಟರ್ ಪರಾಜುರೆ, ಶಂಕರ ಕಿಸ್ಟಯ್ಯರ ಬಿಡುಗಡೆಯಾಯಿತು–ನ್ಯಾ. ಭಂಡಾರಿಗಳು ಗೋಪಾಲ ಗೋಡ್ಸೆಗೆ ದಯೂ ಭಿಕ್ಷೆ ದಯಪಾಲಿಸಬಹುದೆಂದು ಶಿಫಾರಸು ಮಾಡಿದರೆ, ನ್ಯಾ. ಅಜ್ರಾರಾಮರು ಮದನಲಾಲನ ಪರವಾಗಿ ಶಿಫಾರಸು ಮಾಡಿದರು. ಶ್ರೀ ಪೋಸ್ಟ ಆರೋಪಿಗಳಿಗೆ ವಿಧಿಸಿರುವ ಶಿಕ್ಷೆ ಸಮರ್ಪಕ ಎಂದು ಅಭಿಪ್ರಾಯ ಪಟ್ಟರು.

ಹೈ ಕೋರ್ಟಿನ ತೀರ್ಪಿನ ವಿರುದ್ಧ ಪ್ರಿವಿ ಕೌನ್ಸಿಲಿಗೆ ಅಫೀಲು ಹಾಕಿಕೊಳ್ಳುವ ಪ್ರಯತ್ನ ನಡೆಯಿತು. ವಿಶೇಷ ಅನುಮತಿಗಾಗಿ ಆ ಕೋರ್ಟನ್ನು ಪ್ರಾರ್ಥಿಸಲಾಯಿತು. ಪ್ರಿವಿ ಕೌನ್ಸಿಲಿನ ಅಧಿಕಾರ ವ್ಯಾಪ್ತಿ ಅನ್ಯರಲ್ಲಿಯೇ ಭಾರತದ ಫೆಡರಲ್ ಕೋರ್ಟಿಗೆ ಹೊರಟು ಹೋಗುವ ಕಾಲ ತೀರ ಹತ್ತಿರಕ್ಕೆ ಬಂದಿತ್ತು. ಆದ್ದರಿಂದ ಪ್ರಿವಿ ಕೌನ್ಸಿಲ್ ವಿಶೇಷ ಅನುಮತಿ ಕೊಡಲು ನಿರಾಕರಿಸಿತು.

ಆರೋಪಿಗಳ ಈ ಪ್ರಯತ್ನ ವಿಫಲವಾದ ನೇಲೆ, ಬಚಾವಾಗಿ ಕೊಳ್ಳಲು ಅವರಿಗೆ ಬೇರೆ ದಾರಿಗಳಿರಲಿಲ್ಲ. ಗೋಡ್ಸೆ ಆಪ್ಟೆಯರು ಪ್ರಾಣ ಭಿಕ್ಷೆಯನ್ನು ಯೊಚಿಸಿದರು. ಆಪ್ಟೆಯ ಹೆಂಡತಿ ಚಂಪಾ ತಾಯಿ ಕುಂಕುಮ ಭಾಗ್ಯ ಉಳಿಸಿ ಎಂದು ಬೇಡಿದಳು. ಗಾಂಧಿಜಿಯ ಕಿರಿಯ ಮಗ ರಾಜಾ ಜಿಯವರ ಅಳಿಯ ಶ್ರೀ ದೇವದಾಸ ಗಾಂಧಿಯವರು ತಮ್ಮ ವರ್ಚಸ್ಸನ್ನು ಸರಕಾರದ ಮೇಲೆ ಹೇರಿದರು ಆದರೆ ಸರಕಾರ ಮಣಿಯಲಿಲ್ಲ. ಅದಕ್ಕೆ ಬಂದ ಅಪಖ್ಯಾತಿ ತಪ್ಪಿದರೆ ಸಾಕೆನಿಸಿತ್ತು.

ಬದುಕಿದ್ದಾಗ ಕಟುಕರಂತೆ ವರ್ತಿಸಿದ ಆಪ್ಟೆ—ಗೋಡ್ಸೆಯರನ್ನು ಯಾರು ಕ್ಷಮಿಸುತ್ತಾರೆ?

1949ರ ಸಪ್ಟೆಂಬರ್ ತಿಂಗಳಲ್ಲಿ ಗೋಡ್ಸೆ—ಆಪ್ಟೆಯರನ್ನು ಅಂಬಾಲಾ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು.

(ಆಧಾರಿತ)

●●

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ–ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಿಸು ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C 518/1971

N. ವಸಂತ ನೂಥನ ಹೆಬ್ಬಾರ್
—ಅರ್ಜಿದಾರ.

ಜಾಬು ಮೇರೆ, ತಾತ್ಕಾಡಿ ಪೆರ್ನ ಮೇರನ ಮಗ ಬೆಳ್ತಂಗಡಿ ತಾಲ್ಲೂ ತೋಟತ್ತಾಡಿ ಗ್ರಾಮದಲ್ಲಿ —ಎದ್ರಿ.

ಎದ್ರಿಗೆ ಈ ಮೂಲಕ ತಿಳಿಸುವುದೇನೆಂದರೆ

ಅರ್ಜಿದಾರನು ನಿಂಮ ಮೇಲೆ 1969–70ನೇ ವರುಷದ ಗೇಣಿ ಬಾಕಿ ಮೊಡಿದ ಮೇಲ್ಕಂಡ ನ್ಯಾಯಪರಣೆಯು ತಾ. 27–11–71ಕ್ಕೆ ಇಟ್ಟಿರುವುದರಿಂದ, ಆನ್ವೆ ನಿಂಮ ಅಕ್ಕೀಪಡೆ ಇದ್ರೆ ಸದ್ರಿ ದಿನ್ವ ಮೇಲ್ಕಂಡ ಕೋರ್ಟು ಮುಂದೆ ಬೆಳಿಗ್ಗೆ 11ಗಂಟೆಗೆ ಸರಿಯೂಗಿ ಹಾಜರಾಗಿ ಉಚಿತರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂಕ ಈ ಮೂಲಕ ತಿಳಿಸೋಣಾಗಿಯದೆ.

(Sd) B. Ishwara Bhat
Advocate for Petitioner

ಪುತ್ತೂರು, ತಾ. 6–11–71

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

R. R. C. 245/71

ಕಮಲಾಕ್ಷ ಯೂನ ನಾಸುದೇನ ಪೈ
—ಅರ್ಜಿದಾರ.

ಆರಾಣ ಪೂಜಾರಿ ಕೂಡಾ —ಎದ್ರಿರು.

1ನೇ ಎದ್ರಿ–ಅಂಗು ಪೂಜಾರಿ, ಮುಪ್ಪರ ಸೂಜಾರಿ ಮಗ. ಬೆಳ್ತಂಗಡಿ ತಾಲ್ಲು ಪುತ್ತಿಲ ಗ್ರಾಮದಲ್ಲಿ–ಇವರಿಗೆ ಕೋರ್ಟು ಯ್ತುಂ ಪ್ರಕಾರ ತಿಳಿಸುವುದೇನೆಂದ್ರೆ

1969—70ನೇ ವರುಷದ ಗೇಣಿ ಬಾಕಿ ಬಗ್ಗೆ ಅರ್ಜಿದಾರರು ನೀವು ಕೂಡಾ 2ಜನರ ಮೇರೆ ಪಾಕ್ಲು ಮೂಡಿದ ಮೇಲಿನ ಗೇಣಿ ನ್ಯಾಯಪರ್ಣೆಯು ತಾ 27—11—71ಕ್ಕೆ ಯಿಟ್ಟಿರುವುದರಿಂದ ಆಪ್ಕೆ ಅಕ್ಕೀಪಡೆ ಇದ್ರೆ ಸದ್ರಿ ದಿನ್ವ ಬೆಳಿಗ್ಗೆ 11 ಗಂಟೆಗೆ ಸರಿಯೂಗಿ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉಚಿತರಿಸಿಕೊಳ್ಳತಕ್ಕದ್ದು. ತಪ್ಪುದ್ರೆ ನಿಂಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿದೆ.

(Sd) B. Ishwara Bhat
Advocate for Petitioner

ಪುತ್ತೂರು, 6—11—71

ನವಯುಗ

ಹೊನ್ನ ಹಬ್ಬದ ನಿಧಿಗೆ

ಉದಾರ ಸಹಾಯ ನೂಡಿರಿ

ಹೊನ್ನ ಹಬ್ಬದ ವಿಶೇಷ ಸಂಚಿಕೆಗೆ ಜಾಹೀರಾತು ಕೊಟ್ಟು ಸಹಕರಿಸಿರಿ.

ಹನ್ನೊಂದು:

NAVAYUGA 18-11-1971

Registered with the Registrar of News Papers for India under No. R. N. 3546/'57

REGD. No B. G. 176
LICENCE No. 33
Licensed to Post without Prepayment

ಶ್ರೀ ಸಾಮಾನ್ಯನ ಸಂಸತ್ತಿನಲ್ಲಿ

ಈ ಅಜ್ಞಾನ ತೊಲಗಲಿ!

ಇತ್ತೀಚೆಗೆ ದೆಹಲಿಯಲ್ಲಿ ತೆಗೆದ ಜನಗಣತಿಯೊಂದರಲ್ಲಿ ದೆಹಲಿ ನಗರವೊಂದರಲ್ಲಿಯೇ ಎರಡೂವರೆ ಲಕ್ಷಕ್ಕೂ ಮಿಕ್ಕಿ ನಿರಕ್ಷರಿಗಳಿದ್ದಾರೆಂದು ತಿಳಿಯಿತು. ಇದೇ ಲೆಕ್ಕಾಚಾರದಲ್ಲಿ ಗುಣಿಸಿದರೆ ಸಮಗ್ರ ಭಾರತದಲ್ಲಿ ಮೂವತ್ತೈದು ಕೋಟಿಗೂ ಮಿಕ್ಕಿ ಅಕ್ಷರಸ್ಥರು ಇರಲೇಬೇಕು. 1947ರಲ್ಲಿ ಭಾರತದಲ್ಲಿ ಶೇಕಡ ಹದಿನೈದು ಮಂದಿ ಮಾತ್ರ ಅಕ್ಷರಸ್ಥರಾಗಿದ್ದರೆ ಈಗ ಮೂವತ್ತು ಮಂದಿಗೆ ವಿದ್ಯಾಲಾಭವಿದೆ. ನಮ್ಮ ಸರಕಾರ ಪ್ರತಿ ವಿದ್ಯಾರ್ಥಿಗೂ ತಲಾ ಕೇವಲ ಇಪ್ಪತ್ತೈದು ರೂಪಾಯಿ ವ್ಯಯಿಸುತ್ತಿದೆ. ನಮ್ಮಲ್ಲಿ ಸುಮಾರು 76 ಮಿಲಿಯನ್ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಮೂವತ್ತು ರಾಷ್ಟ್ರೀಯ ಪ್ರಯೋಗಾಲಯಗಳು, 135 ಎಂಜಿನಿಯರಿಂಗ್ ಕಾಲೇಜ್‌ಗಳು-ಮೂರೂವರೆ ಸಾವಿರ ಕಾಲೇಜುಗಳು, ಎಪ್ಪತ್ತಮೂರು ವಿಶ್ವ ವಿದ್ಯಾನಿಲಯಗಳು ಭಾರತದಲ್ಲಿವೆ.

ಆದರೆ ನಮ್ಮ ಅಜ್ಞಾನ ತೊಲಗಿಲ್ಲ. ನಮ್ಮಷ್ಟು ನಿರಕ್ಷರಕುಕ್ಷಿಗಳು, ಅಕ್ಷರವರಿಯದ ಪಾತಕಿಗಳು ಇನ್ನೊಂದು ದೇಶದಲ್ಲಿಲ್ಲ. ಪ್ರತಿಯೊಂದು ದೇಶಗಳವರೂ ವಿದ್ಯೆಗಾಗಿ, ವಿದ್ಯಾರ್ಥಿಗಳಿಗಾಗಿ ಸಾವಿರಾರು ರೂಪಾಯಿ ವ್ಯಯಿಸಿ, ಜನತೆಯನ್ನು ವಿದ್ಯೆಯಲ್ಲಿ ಸುಸಂಸ್ಕೃತರಾಗಿಸಲು ಹೆಣಗುತ್ತಿದ್ದರೆ. ಅದು ನಮಗೆ ನಾಚಿಗೆಯೂಗುವುದಿಲ್ಲ. ಈ ವಿದ್ಯೆಗಾಗಿ ನಾವು ಹಂಬಲಿಸದೆ ಕೇವಲ ಆ ಸಂಸ್ಕೃತರಂತೆ ಹತಾಶೋ, ಚುಂಬನ-ನಗ್ನತೆ, ಮುಷ್ಕರಗಳಲ್ಲಿ ಶೇಷಾಯುಷ್ಯವನ್ನು ತೇಯುತ್ತಿದ್ದೇನೆ.

ಶಂಕರ, ರಾಮಾನುಜ, ವಿದ್ಯಾರಣ್ಯ, ಪಂಪ, ಲಕುಮಿಪತಿ, ಜನ್ನ, ರಾಘವ, ಮಧುಸೂಧನರವರತರಿಸಿದ ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ- ಎಂಬ ಅಪೂರ್ವ ಸುವರ್ಣೇತಿಹಾಸದ, ವಿದ್ಯಾ ಪ್ರಾಥಿಮೆಯ ಕವಿವರರನ್ನು ನಾವು ಏಕೆ ಮರೆತ್ತಿದ್ದೇವೆ? ಇಂದು ಬಂಗ್ಲಾದೇಶದ ಸಮಸ್ಯೆಯಲ್ಲಿ ಸರಕಾರ ಅಷ್ಟೆಡ್ಡೆ ತಾಳಿದೆ. ಬಡ ಭಾರತೀಯ-ಅವರ ವೆಚ್ಚಕ್ಕಾಗಿ ವ್ಯಯಿಸುವ ಕೋಟಿ ಕೋಟಿ ರೂಪಾಯಿಯನ್ನು ತನ್ನ ಬಾಗಿ ಬೆಂಡಾದ ಬೆನ್ನೆಲುಬಿನಲ್ಲಿ ಹೊರಬೇಕು. ಅದೇ ಹಣವನ್ನು ವ್ಯಯಿಸಿ ಬಡ ಭಾರತೀಯ ಮುಂದೆ ಬರಬೇಕು, ಸುಸಂಸ್ಕೃತನಾಗಬೇಕೆಂಬ ಇಚ್ಛೆ ಈ ಸರಕಾರಕ್ಕಿದೆಯೇ?

ಉತ್ತರ ಭಾರತದಲ್ಲಿ ಅನೇಕ ಬಿ. ಎ. ಪದವೀಧರರು ರಿಕ್ಷಾವಾಲರಾಗಿದ್ದಾರೆ. ಚಪ್ಪಲಿ ಹೊಲಿಯುತ್ತಿದ್ದಾರೆ. ಕಳೆದ ವರ್ಷ ಕಲ್ಕತ್ತದ ಕಾರ್ಪೊರೇಷನ್ ಕಛೇರಿ ತನ್ನ ಪೇದೆ ಹುದ್ದೆಗಾಗಿ ಅಭ್ಯರ್ಥಿಗಳನ್ನು ಕರೆದಿದ್ದಾಗ ಒಂದು ಸಾವಿರ ಮಂದಿ ಬಿ. ಎ. ಗ್ರಾಜುಯೇಟ್‌ಗಳಿಂದ ಉಮೇದ್ವಾರಿಕೆಯ ಅರ್ಜಿಗಳು ಬಂದಿದ್ದುವು. ಏಕೆ? ಕಷ್ಟ ಪಟ್ಟು ವಿದ್ಯೆಕಲಿತರೂ ತಕ್ಕಸ್ಥಳ ಅದಕ್ಕಿಲ್ಲ.

ಹೋದ ವರ್ಷ ದೇಶಬಂಧು ಚಿತ್ತರಂಜನ ದಾಸರ ಪುಣ್ಯ ದಿನಕ್ಕೆಂದು ದೇಶದಾದ್ಯಂತ ಕಛೇರಿಗಳಿಗೆ ರಜೆ ಕೊಟ್ಟಿದ್ದರು. ಅನೇಕ ಉನ್ನತ ಅಧಿಕಾರಿಗಳಿಗೆ ಆ ರಜೆಯೂ ನಿಮಿತ್ತವೆಂದೇ ಗೊತ್ತಿರಲಿಲ್ಲವಂತೆ. ಮೊನ್ನೆ ಆಗ್ರಾದ ಅನಿಲ ಕುಮಾರ ತಾಂಡನ್ ಸುಸಂಸ್ಕೃತನಾದ ತನ್ನ ಮಿತ್ರನ ಮನೆಗೆ ಹೋಗಿದ್ದ. ಅಲ್ಲಿ ಸಿನಿಮಾ ನಟಿಯರ ಫೋಟೋಗಳ ಮಧ್ಯೆಯಿದ್ದ ಕವಿ ರವೀಂದ್ರನಾಥ್ ಠಾಕೂರರ ಫೋಟೋವನ್ನು ಕಂಡು, "ನಿನಗೆ ಠಾಕೂರ್ ಅಂದರೆ ಪ್ರೀತಿಯೇ?" ಎಂದು ತಾಂಡನ್ ಕೇಳಿದ. ಆಗ ಆ ಮಿತ್ರ 'ಯಾವ ಠಾಕೂರ್" ಎಂದ. ಆ ಫೋಟೋವನ್ನು ತೋರಿಸಿ, ಕವಿ ಠಾಕೂರರ ಅಗಾಧ ಮಹಿಮೆಯನ್ನು ವರ್ಣಿಸಿ; ತಾಂಡನ್ ಮಿತ್ರನ ಪರಿಣಾಮವನ್ನು ನಿರೀಕ್ಷಿಸಿದ.

"ಅವರು ಕವಿಯೇ, ನಾನರಿಯೆನಪ್ಪ! ಆವರ ಗಡ್ಡ ಕಂಡು, ವಿನೋದವೆನ್ನಿಸಿ ಆ ಫೋಟೋ ಮನೆಯಲ್ಲಿ ತಂದಿಟ್ಟೆ" ಎಂದ ಆ ಸುಸಂಸ್ಕೃತ ಮನುಷ್ಯ ವಿಶ್ವಕವಿ, ನೋಬಲ್ ಪ್ರಶಸ್ತಿವಿಜೇತ ಠಾಕೂರ್ ಯಾರೆಂದು ಆ ವಿದ್ಯಾವಂತ ಅರಿಯ ಪಾಪ.

—ಇದು ಭಾರತದ ಅಜ್ಞಾನದ ಒಂದು ಉದಾಹರಣೆ ಸಾಕಷ್ಟು ವಿದ್ಯೆ ಹಾಗೂ ಪ್ರೋತ್ಸಾಹ, ಸೌಕರ್ಯಗಳೊಂದಿಗೆ ಕಡಿಮೆ ಪುಸ್ತಕಗಳ ನೆಚ್ಚದ ಅನುಕೂಲ-ವಿದ್ಯಾಲಯಗಳು ನಮ್ಮಲ್ಲಿಲ್ಲ.

ವಿದೇಶಗಳಲ್ಲಿ ವಿದ್ಯಾರ್ಥಿಗಳು ಸಾಕಷ್ಟು ಜ್ಞಾನ ಸಂಪಾದಿಸುತ್ತಾರೆ. ದೊಂಬಿ ದಾಂಧಲೆಗಳಲ್ಲಿ, ಅಲ್ಲ ನಲ್ಲದ ಹುಳುಕುಗಳಲ್ಲಿ ತಲೆಹಾಕಿ ದೇಶವನ್ನು ಕಲುಷಿತ ಗೊಳಿಸಿ, ಚಾರಿತ್ರ್ಯಕ್ಕೆ ಮೂಲಿನ್ಯ ತಂದುಕೊಳ್ಳುವುದಿಲ್ಲ. ಬ್ರಿಟನ್ನಿನ ಬರ್ಮಿಂಗ್‌ಹ್ಯಾಮ್ ನ ಶಾಲೆ ಹಾಗೂ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಬುದ್ಧಿಪೂರ್ವಕವಾಗಿ ಬಿಡುವಿನ ವೇಳೆಯನ್ನು ಸನೂಜ ಸೇವೆಯಲ್ಲಿ ಕಳೆಯುತ್ತಾರೆ. ಪ್ರತಿ ಬಿಡುವಿನ ಕಾಲದಲ್ಲೂ ಎರಡು ಸಹಸ್ರ ವಿದ್ಯಾರ್ಥಿಗಳಿಂದೊಂದೂ ತುಕಡಿಗಳೂ ಹತ್ತು ಲಕ್ಷ ಜನರಿಗೆ ಅನುಕೂಲವಾಗಲೆಂದು ಮನೆಗಳ ತಳಂಕರಣ, ಕ್ರೀಡಾಂಗಣ ನಿರ್ಮಾಣ, ಕಲಾಕೇಂದ್ರ ಇತ್ಯಾದಿ ಸಹಾಯಗಳಿಂದ ಪ್ರತಿ ಸಾರಿಗೂ ಸರಕಾರಕ್ಕೆ 15,100 ಪೌಂಡು ಹಣ ಉಳಿಸುತ್ತಾರೆ.

ನಾವು ಇನ್ನೊಬ್ಬರ ಮೊದರಿಯೊಗಲೂಯತ್ನಿಸುತ್ತಿಲ್ಲ ಹಿದ್ಯೆ ನಮಗೆ ಬೇಡ. ನಮ್ಮ ಸರಕಾರ ಈ ವ್ಯವಸ್ಥೆಯನ್ನು ಗಮನಿಸಿದರೆ ಭಾರತೀಯರು ಮುಂದುವರೆಯಬಹುದು ಅಮೇರಿಕದಲ್ಲಿ ಶ್ರೀ -ಪುರುಷರು ಸಮಾನ ವಿದ್ಯಾವಂತರಾಗಿ ಶೇ. 99 ಮಂದಿಯೂ ಸುಸಂಸ್ಕೃತರಾಗಿದ್ದಾರೆ ಭಾರತೀಯರ ಘೋರಣೆಯೂ ಹಾಗಲ್ಲ. 'ನನ್ನಪ್ಪ ವಿದ್ಯೆ ಕಲಿತಿಲ್ಲ; ನಾನು ಶಾಲೆಗೆ ಹೋಗಿಲ್ಲ; ನನ್ನ ಮಗನಿಗೆ ಏಕೆ ಬರಹ?' ಎಂಬ ಅಜ್ಞಾನೀ ಘೋರಣೆಯ ಪರಂಪರೆಯನ್ನೇ ರಕ್ತಗತವಾಗಿಸಿದ್ದಾರಲ್ಲದೆ ವಿದ್ಯೆಯ ಮೌಲ್ಯ, ಸಾಧನೆ ಅರಿಯಲು ಯತ್ನಿಸಿಲ್ಲ. ಈ ಅಜ್ಞಾನ ತೊಲಗಬೇಕು. ಆಂದರೆ ಸರ್ವಮಂಗಳವಾಗುತ್ತದೆ. —ಪೆ.ರಾಮಕೃಷ್ಣ ಶಾಸ್ತ್ರಿ.

ಉಡುಪಿ

ಸಿವಿಲ್ ಜಡ್ಜರ ಕೋರ್ಟಿನಲ್ಲಿ

S. C. No. 44/71

ಅಬ್ದುಲ್ ರಹಿಮಾನ್ ಸಾಹೇಬ — ವಾದಿ
ಮತ್ತು
ಇಸ್ಮಾಯಿಲ್ ಸಾಹೇಬ —ಪ್ರತಿವಾದಿ

ಇವರಿಗೆ

ನೋಟೀಸು:-

ಪ್ರತಿವಾದಿ ಇಸ್ಮಾಯಿಲ್ ಸಾಹೇಬರಿಗೆ ತಿಮ್ಮಣ್ಣಕುದ್ರು ಉಮ್ಮರ್ ಸಾಹೇಬರ ಮಗ ಪಡು ತೋಸ್ಸೆ ಗ್ರಾಮ, ಕೆಮ್ಮಣ್ಣು ಪೋಸ್ಟ್.

ಮೇಲಿನ ವ್ಯಾಜ್ಯವು ನಿಮ್ಮ ಹಾಜರಾತಿಯ ಬಗ್ಗೆ ತಾ. 26.11.71ರಂದು ಪೂರ್ವಾಹ್ನ 11 ಗಂಟೆಗೆ ಇಟ್ಟದ್ದು ಆ ದಿನ ಸ್ವತಹ ಯಾ ವಕೀಲರ ಮುಖಾಂತರ ಸದ್ರಿ ಕೋರ್ಟಿನಲ್ಲಿ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು.

ಕೋರ್ಟು ಹುಕುಂ ಮೇರೆಗೆ

ಪಿ.ಎನ್. ಕೃಷ್ಣಮೂರ್ತಿರಾವ್,
ಬಿ.ಎ.ಎಲ್.ಎಲ್.ಬಿ.,
ವಾದಿಯ ಕಡೆ ಎಡ್ವೊಕೇಟ್

ಸ್ಥಳ-ಉಡುಪಿ. ತಾ. 8.11.1971.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ **English Made Easy**

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ: ರೂ. 2--00

Letter Writing Made Easy **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ ಬೆಲೆ : ರೂ. 1—50

ಗೀತೆಯ ಕೈಗನ್ನಡಿ **ಭಗವದ್ಗೀತೆಯ ಸಮೂಲ ಭಾಷಾಂತರ**

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಸಮೂಲ ಅನುವಾದ. 450 ಪುಟಗಳ ಸುಂದರ ಕೈಹೊತ್ತಗೆ ಬೆಲೆ: ರೂ. 2-00

ಮನೆ-ಮದ್ದು **Home Remedies**

ಡಾ| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆರಿಗೆ ವಿಜ್ಞಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಸಂಗ್ರಾಹ್ಯ ಪುಸ್ತಕ. ಬೆಲೆ: ರೂ. 2-00

ವಿ. ಪಿ. ಮಾಡುವುದಿಲ್ಲ ಪುಸ್ತಕದ ಬೆಲೆಯೊಂದಿಗೆ 60 ಪೈಸೆ ಆಂಟೆ ಪೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ನೂಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಹಾಲುಕೋಟಿ, ಉಡುಪಿ.

In the Court of the Munsiff of Udipi

O. S. No. 235/1971

Between

John Baptist Saldhana —Plaintiff

and

Magdalina Rebello Bai & others —Defendants

Notice to

Salvedor Rebello (D 2)
Isidore Rebello (D 4)
Subestian Rebello (D5)

All residing in St. Lawrence Club Pinto House, Hoines Road, V G. Bombay—27.

Please note that the above case has been posted for your appearance on 6—12—71 at 11 A.M. In case you fail to appear either personally or through your advocate on the said date, the case will be decided in your absence.

By the Court-order

P.N. Krishnamoorthy Rao, *B.A, LL.B.*,
Advocate for the Plaintiff

Place: Udipi
Date: 8-11-1971

Edited, Printed & Published by K. H. Shetty at the Navayuga Press, Udipi, S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಸಂಪುಟ ೫೧
ಸಂಚಿಕೆ ೧೨

Vol. 51
No. 12

ಪ್ರತಿ ಗುರುವಾರ ಪ್ರಕಟಿವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, 25—11—1971

ವಿಶ್ವಸಂಸ್ಥೆಯ ದುರ್ಬಲ ಸಂಕಲೆ

ಮದಗಜವನ್ನು ಬಂಧಿಸೀತೆ?

ಕೆಂಪು ಚೀನಾಕ್ಕೆ ವಿಶ್ವ ಸಂಸ್ಥೆಯಲ್ಲಿ ಪ್ರವೇಶ– ಜಗತ್ತಿನ ಏವರ್‌ಲ್ಲೊಬ್ಬನಿಗೆ ನೀಡಿದ ಮನ್ನಣೆ. ತನಗೆ ಸಿಕ್ಕ ಈ ಮನ್ನಣೆಗೆ ಚೀನಾ ಅಭ್ಯೈಸ್ಯಾದ ದೇಶಗಳಿಗೆ ಕೃತಜ್ಞ ವಾಗ ಬೇಕು; ಭಾರತಕ್ಕಂತೂ ಅದು ತಲೆ ಬಾಗಲೇ ಬೇಕು.

ಕೆಂಪು ಚೀನಾವನ್ನು ಜನತಾ ಚೀನ ವೆಂದು ಮನ್ನಿಸಿ ವಿಶ್ವಸಂಸ್ಥೆಯಲ್ಲಿನ ಅದರ ಹಕ್ಕನ್ನು ಮೊತ್ತ ಮೊದಲಿಗೆ ಪ್ರತಿನಾದಿಸಿದ್ದು ರಶ್ಯ. ಮುಂದೆ ಅದನ್ನು ಪದೇ ಪದೇ ಎತ್ತಿಕೊಟ್ಟದ್ದು ಭಾರತ, ಪಂ. ನೆಹರುರವರ ವಿಶ್ವವಂದ್ಯ ದೂರದೃಷ್ಟಿಯನ್ನು ಅಮೆರಿಕೆಯು ಬಹಳ ತಡವಾಗಿ ಮನವರಿಕೆ ಮಾಡಿಕೊಂಡಿತು. ಈ ಇಪ್ಪತ್ತು ವರ್ಷಗಳಲ್ಲಿ ಭಾರತ-ಚೀನಾ ಸಂಬಂಧ ಏಕರೀತಿಯಲ್ಲಿರಲಿಲ್ಲ. ಭಾರತದ ನೀಫಾ–ಲಡಕಗಳಲ್ಲಿ ಆಕ್ರಮಣ ಮಾಡಿದ ಕೆಂಪು ಚೀನಾ ಭಾರತ ತನ್ನ ಮೇಲಿಟ್ಟು ಬಂದಿದ್ದ ವಿಶ್ವಾಸಕ್ಕೆರಡು ಬಗೆಯಿತು.

ಮುಂದೆ ಪಾಕಿಸ್ತಾನವು ಕಾಶ್ಮೀರ–ಪಂಜಾಬಗಳಲ್ಲಿ ನಡೆಸಿದ ಆಕ್ರಮಣದ ವೇಳೆಯೂ ಅದರ ಸಹಾನುಭೂತಿ ಪಾಕಿಸ್ತಾನದ ಮೇಲೆಯೇ ಇತ್ತು. ೧೯೬೨ರಲ್ಲಿ ಚೀನಾ–ಭಾರತಗಳ ನಡುವಣ ರಾಯಭಾರಿ ಸಂಬಂಧ ಕಡಿದು ಹೋಯ್ತು. ಇದಕ್ಕೆ ಚೀನಾದ ಅಪ್ರಚೋದಿತ ದಾಳಿಯೇ ಕಾರಣವಾಗಿತ್ತು. ಆದರೂ ಸಂಪೂರ್ಣ ಸಂಬಂಧ ಕಡಿದು ಹೋಗಲಿಲ್ಲ.

ಚಾರ್ಜ್ –ಡಿ– ಅಫೇರ್ ಸಂಬಂಧವಿದಿಗೂ ಉಳಿದು ಬಂದಿದೆ. ಇದರಿಂದ ಉಭಯ ಪಕ್ಷಗಳಿಗೆ ಯಾವ ಲಾಭವೂ ಆದಂತಿಲ್ಲ.

ಈಗ ಇದೇ ಸಂಬಂಧವನ್ನು ಮತ್ತೆ ರಾಜ್ಯ ತಾಂತ್ರಿಕ ಮಟ್ಟಕ್ಕೆ ಏರಿಸುವ ಇರಾದೆಯನ್ನು ವಿದೇಶ ಸಚಿವ ಸ್ವರ್ಣಸಿಂಗರು ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಗಾಂಧಿಯವರಿಗೂ ಇದು ಇಷ್ಟವೆನಿಸಿದೆ. ಇದಕ್ಕೆ ಅನುಕೂಲವಾದ ಸ್ಪಂದನೆಯೆ ಪೀಕಿಂಗಿನಿಂದ ಬರುತ್ತದೆ—

ಭಾರತ—ಚೀನ ರಾಯಭಾರಿ ಸಂಬಂಧ ಕಡಿದುಕೊಳ್ಳಲು ಕಾರಣವೇನು?

ಕೆಂಪು ಚೀನಾ ನಮ್ಮ ಅಂತಾರಾಷ್ಟ್ರೀಯ ಗಡಿಯನ್ನು –ಮೈಕ್ಮಮಹೋನ ರೇಖೆ ಉಲ್ಲಂಘಿಸಿದೆ; ವಿವಾದ ಪರಿಹಾರ ಸಂಬಂಧ ಮುಂದಿಡಲಾಗಿದ್ದ 'ಕೊಲಂಬೋ ಸಲಹೆ' ಗಳನ್ನು ತಿರಸ್ಕರಿಸಿದೆ. ಮತ್ತೆ ಯುದ್ಧವೆಂಬುದು ನಡೆಯಲಿಲ್ಲ; ಗಡಿಯಲ್ಲಿ ಗುಂಡಿನ ಚಕಮಕಿ ನಡೆಯಲಿಲ್ಲ ಎಂದ ಮಾತ್ರಕ್ಕೆ ನಿವಾದ ಪರಿಹಾರವಾಗಲಿಲ್ಲ.

ಭಾರತದ ಒಂದೊಂದಂಗುಲ ಭೂಮಿಯನ್ನೂ ಆಕ್ರಮಣ ವಿನೋಚನೆಗೊಳಿಸದೆ ದೀರ್ಘಾವಳಿಯೂಜರಣೆ ಮಾಡುವುದಿಲ್ಲವೆಂದು ದೀಕ್ಷೆ ತೊಟ್ಟವರೇನು ಮಾಡಿದರು? 'ಆಕ್ರಮಣದ ಕತೆ' ಹಳೆಯದಾಗುತ್ತ ಬಂದಂತೆ, ದೀರ್ಘಾವಳಿಯ ಸಂಭ್ರಮ ಬೆಳೆಯುತ್ತ ಹೋಯಿತೆ?

'ಸಂಧಾನಕ್ಕೆ ನಾವು ಸದಾ ಸಿದ್ಧರು' ಎಂದರು. ಪಂ. ನೆಹರು: ಆದನ್ನೇ ಪುನರುಚ್ಚರಿಸಿದರು ಶಾಸ್ತ್ರಿ ಮತ್ತು ಗಾಂಧಿಯವರು ಸಂಧಾನದ ಬಾಗಿಲುಗಳು ಎಂದಿಗೂ ತೆರೆದಿವೆ ಎಂದರು ಶಾಂತಿಪ್ರಿಯರೆಲ್ಲರೂ.

ಸಂಧಾನದ ಮಾತು ಮುಂದೆ ಬರಲಿಲ್ಲ. ಯುದ್ಧವೂ ಮುಂದುವರಿಯಲಿಲ್ಲ.

ಆ ಮೇಲಿನ ದಿನಗಳಲ್ಲಿ ಪಾಕ್–ಚೀನಾ ಒಂದಾದುವು ಭಾರತ ವಿರೋಧಿಗಳನ್ನು ತನ್ನ ಮಿತ್ರನನ್ನಾಗಿಸುವ ತಂತ್ರಕ್ಕೆ ಪೀಕಿಂಗ್ ಇಳಿದದ್ದು ಜಗಜ್ಜಾಹಿರವಲ್ಲವೇನು? ಪಾಕ್ ಆಕ್ರಮಣದ ವೇಳೆ ಲಡಕ್–ನೀಫಾ ಗಡಿಗಳಲ್ಲಿ ಮಿಲಿಟರಿ ಪಥಚಲನ ಮಾಡಿಸಿ, ನಮ್ಮ ಮೇಲೆ ಹಾಕಿದ ಬೆವರಿಕೆಯನ್ನು ನಾವು ಮರೆಯಬಲ್ಲೆವೇನು?

ನವದೆಹಲಿ–ಪೀಕಿಂಗುಗಳ ನಡುವಣ ಸಂಬಂಧವನ್ನು ಸುಧಾರಿಸುವುದು ಅಗತ್ಯವೆಂಬುದು ನಿಜ. ಆದರೆ, ಅದಕ್ಕೆ ಅನುಕೂಲವಾದ ವಾತಾವರಣ ನಿರ್ಮಾಣವಾಗಿದೆಯೆ?

ನೈಕಮಹೋನ ರೇಖೆಯನ್ನದು ಮನ್ನಿಸಿದೆಯೆ? ಮನ್ನಿಸುವ ಆಶಯವನ್ನಾದರೂ ಹೊಂದಿದೆಯೇ?

ಕೊಲಂಬೋ ಸಲಹೆಗಳನ್ನು ಒಪ್ಪಿಕೊಳ್ಳುವ ಇರಾದೆಯನ್ನಾದು ವ್ಯಕ್ತಪಡಿಸಿದೆಯೆ?

ಅಥವಾ ಸೀಮಾ ವಿವಾದವನ್ನು ಪರಿಹರಿಸಲು ಬೇರಾವ ಹೊಸ ಸೂತ್ರವನ್ನಾದರೂ ಅದು ಮುಂದಿಟ್ಟಿದೆಯೆ?

ಭಾರತವೇ ಆಕ್ರಮಣ ಮಾಡಿದೆಯೆಂಬ ಅದರ ಹಳೆಯ ನರಿ ನೀತಿಯಲ್ಲಿ ತಿಲಾಂಶ ವಾದರೂ ಪರಿವರ್ತನೆಯಾಗಿದೆಯೆ?

ಆದಾವುದೂ ಆದಂತಿಲ್ಲ. ಇಂದಿಗೂ ಚೀನಾದ ನಖದಲ್ಲಿ ಭಾರತದ ಪವಿತ್ರನೆಲವಿದೆ. ಮೈಕ್ಮಮಹೋನ ರೇಖೆಯು ದಕ್ಷಿಣದಲ್ಲಿ ಆಗಲು ಕೀದಾದ ಉದ್ದನೆಯ ಪಟ್ಟಿಯೊಂದರ ಮೇಲೆ ಚೀನಾ ಆಕ್ರಮವಾಗಿ ತನ್ನ ಪ್ರಭುತ್ವವನ್ನು ಜಮೂಯಿಸಿದೆ. ಪಾಕಿಸ್ತಾನ ಬಳುವಳಿಯಾಗಿ ಕೊಟ್ಟ ಲಡಕದ ಬಹು ಭಾಗವಿದೆ.

ಇಲ್ಲಿ ಜನ ವಸತಿಯಿಲ್ಲದಿರ ಬಹುದು; ಹುಲ್ಲೂ ಬೆಳೆಯದಿರ ಬಹುದು; ಆದರೆ, ಈ ಕಾರಣದಿಂದ ಅದು ನಮಗೆ ಬೇಡವಾಗಿಲ್ಲ; ಅಲ್ಲಿ ನಮ್ಮ ದೇಶದ ಪವಿತ್ರ ಮಣ್ಣಿದೆ; ಹಿಮವಾದರೂ ಬಿದ್ದಿದೆ.

ಸರ್ದಾರ್ ಸ್ವರ್ಣಸಿಂಗ ಲುವಾಡ ಇತ್ತೀಚಿಗಿನ ವರ್ಷಗಳಲ್ಲಿ ಭಾರತ ಮತ್ತು ಚೀನಾಗಳ ಸಂಬಂಧ ಮಾಮೂಲಿ ಸ್ಥಿತಿಗೆ ಬರುತ್ತಿದೆ (?) ಎರಡು ದೇಶಗಳೂ ಸ್ಥಿರವಾಗಿ ರಾಜ್ಯ ತಾಂತ್ರಿಕ ಕಛೇರಿಗಳನ್ನು ನಡೆಸಿಕೊಂಡು ಹೋಗುವುದು ಅಪೇಕ್ಷಣೀಯ. ಇದರಿಂದ ಅಂತಾರಾಷ್ಟ್ರೀಯ ವಿಷಯಗಳು ಮತ್ತು ಪರಸ್ಪರ ಹಿತಾಸಕ್ತಿಯ ವಿಷಯಗಳ ಬಗ್ಗೆ ದ್ವಿಪಕ್ಷೀಯ ಸಮಾಲೋಚನೆಗೆ ಅನುಕೂಲವಾಗುತ್ತದೆ.

ಮುಂದಿಂದು ಸರ್ದಾರ್ ಹೇಳಿದರು– ಬಿಕ್ಕಟ್ಟುಗಳ ನಿವಾರಣೆಗೆ ಮತ್ತು ವಿಶ್ವ ಶಾಂತಿಗೆ ಚೀನಾ ಮಹತ್ವದ ಪಾತ್ರ ವಹಿಸುವ ಹೊಣೆ ಚೀನಾದ ಮೇಲೆ ಬಿದ್ದಿದೆ—ಏಕೆಂದರೆ, ಅದು ವಿಶ್ವಸಂಸ್ಥೆಯ ಸದಸ್ಯತ್ವವನ್ನು ಪಡೆದಿದೆ.

ಸರ್ದಾರರ ಆಶಯವೇನೋ ಉತ್ತಮ. ಅಂತಾರಾಷ್ಟ್ರೀಯ ವಿಷಯಗಳ ಬಗ್ಗೆ ಚೀನೀ ಪ್ರತಿಕ್ರಿಯೆಗಳನ್ನು ನಾವು ಬೇರೆ ಮೂಲಗಳಿಂದ ತಿಳಿದುಕೊಳ್ಳುವುದು ಸಾಧ್ಯವಿದೆ. ಪರಸ್ಪರ ಹಿತಸಂಬಂಧಗಳ ಬಗ್ಗೆ ,ದ್ವಿಪಕ್ಷೀಯ ಮಾತುಕತೆಗಳು ನಡೆಯಬೇಕಾದರೆ, ಮಾತ್ರ ಇಂತಹ ಕಛೇರಿಗಳು ಉಪಯುಕ್ತವಾಗಬಹುದು.

ಚೀನಾ—ಭಾರತಗಳ ನಡುವಣ ಸೀಮಾವಿವಾದವೇ ಸರಸ್ಪರ ಹಿತಾಸಕ್ತಿಗೆ ಭಾಷಕವಾಗಿ ಬಂದದ್ದು. ಈ ಭಾದೆಯನ್ನು ಮೊದಲಿಗೆ ಗುಂಡು ಹಾರಿಸಿ ತಂದು ಹಾಕಿದ್ದು ಕೆಂಪು ಚೀನಾ. ಬಾಯಲ್ಲಿ ರಾಮನಾಮ ಜಪಿಸಿ ಬೆನ್ನಿಗೆ ಇರಿಯುವ ಸಾಹಸ ತೋರಿಸಿದ್ದು ಚೀನಾ.

ವಿಶ್ವಸಂಸ್ಥೆಯ ಸದಸ್ಯತ್ವ ಪಡೆದ ನೂತ್ರಕ್ಕೆ ಅದರ ನೀತಿ–ನಿಲುಮೆ ಬದಲಾಗುವುದೆಂಬುದಕ್ಕೇನು ಪುರಾವೆ? ಹೊಣೆಗಾರಿಕೆಯನ್ನುವುದು ಸೂಸಿಸಿಕ, ಇದೆಯೆಂದು ತಿಳಿದುಕೊಂಡರೆ ಇದೆ; ಇಲ್ಲವೆಂದರೆ ಇಲ್ಲ.

ಪಾಕಿಸ್ತಾನದಂತಹ ಪುಟ್ಟರಾಷ್ಟ್ರವೊಂದು ವಿಶ್ವಸಂಸ್ಥೆಯ ಗೊತ್ತುವಳಿಗಳನ್ನು ತಿರಸ್ಕರಿಸುತ್ತ ಎರಡು ದಶಕಗಳಗೂ ಮಿಕ್ಕಿದ ಕಾಲ ಕಾಶ್ಮೀರದಲ್ಲಿ ಆಕ್ರಮಣ ಮಾಡಿಕುಳಿತಿದೆ. ಅದರ ರೋಮವಲುಗಾಡಿಸುವುದಕ್ಕೂ ವಿಶ್ವ ಸಂಸ್ಥೆ ಶಕ್ತವಂತವಾಗಿಲ್ಲ.

ಕೆಂಪು ಚೀನಾ ಒರಟು ನೀತಿ ತಳೆದರೆ ವಿಶ್ವಸಂಸ್ಥೆಯೇನು ಮಾಡೀತು?

ಎಲ್ಲಿಡೆ ಹರಡಿರುವ ಗುಂಪುಗಾರಿಕೆ ವಿಶ್ವ ಸಂಸ್ಥೆಯಲ್ಲೂ ಇದೆ. ಚೀನಾದ ಪ್ರವೇಶದಿಂದ ಮತ್ತೆತ್ತಂದು ಗುಂಪು ಹೆಚ್ಚಬಹುದು. ಅಧವಾ ಈಗಿರುವ ಒಂದು ಗುಂಪಿಗೆ ಹೊಸ ಸಮರ್ಥ ನಾಯಕತ್ವ ದೊರೆಯ ಬಹುದು. ಸೋವಿಯತ್ತಿನ ನಾಯಕತ್ವದ ಪ್ರಭಾವ ತುಸು ಮಸುಳಿಸ ಬಹುದು.

ಪಾಕ್ ನಿಯೋಗವೊಂದು ಪೀಕಿಂಗಿಗೆ ಭೆಟ್ಟಿ ನೀಡಿ, ಮಿಲಿಟರಿ ನೆರವು ಯಾಚಿಸಿದ್ದರಿಂದ, ಪಾಕಿಸ್ತಾನದ ನಿಲುಮೆಯನ್ನು ಪೀಕಿಂಗು ಸಮರ್ಥಿಸಿದ್ದರಿಂದ ಭಾರತಕ್ಕೆ ಆಶ್ಚರ್ಯವಾಗಲಿಲ್ಲವಾದರೂ ಎದೆಯಲ್ಲಿ ಭಯ.

ಒಂದೊಮ್ಮೆ ಭಾರತ–ಪಾಕ್ ಸಮರ ನಡೆದರೆ?

ಭಾರತಕ್ಕೆ ರಶ್ಯ ನೆರವು ನೀಡುತ್ತದೆ ನಿಜ. ಅವೆರಿಕೆ ಪಿಂಡಿಯನ್ನು ಬಿಟ್ಟು ಹಾಕೀತೆ? ಮೂಪೋ ಯೂಹ್ಯಾಖಾನರ ಬೆಂಗೋಲಾಗಿ ನಿಂತರೆ?

ವಿಶ್ವ ಸಂಗ್ರಾಮ–ಭೀಕರ ಸಂಗ್ರಾಮ ಸುನಿಶ್ಚಿತ.

ಭಾರತ–ಪಾಕ್‌ಗಳು ಪರಸ್ಪರ ಯುದ್ಧ ಮಾಡುವಂತಹ ಪ್ರಮೇಯವೇ ಇಲ್ಲ. ಪಾಕ್ ಏಕಾಕಿಯಾಗಿ ಯುದ್ಧ ಮಾಡ ಬಯಸುವುದಿಲ್ಲ.

ಪೀಕಿಂಗು ರಾವಲ್ಪಿಂಡಿಗೆ ಸ್ಪಷ್ಟ ಆಶ್ವಾಸನೆ ನೀಡುವುದಕ್ಕೆ ಮೊದಲೇ ಅದು ಮಾಡಿಸ್ದ ವಿಶ್ವಾಸ ದ್ರೋಹವನ್ನು ಹಳೆಯಕತೆಯೆಂದು ಮರೆತು ಬಿಟ್ಟು ಸ್ನೇಹಹಸ್ತ ನೀಡುವುದು ರಾಜ್ಯನೀತಿ ನಿಜ. ಕೆಲವೊಮ್ಮೆ ಇದರಿಂದ ತುಂಬ ಸಹಾಯವಾಗುತ್ತದೆ

ಪೀಕಿಂಗು ನವದೆಹಲಿಗೆ ನೆರವು ನೀಡುವುದು ಬೇಡ, 'ಭಾರತವು ಆಕ್ರಮಣಶೀಲ'ವೆಂಬ ತನ್ನ ನೀತಿಯನ್ನು ಬದಲಿಸ ಬೇಕೆಂದೇನೂ ಇಲ್ಲ. ಪೀಕಿಂಗ್ ರಾವಲ್ಪಿಂಡಿಗೆ ನೆರವಾಗದಿದ್ದರೆ ಅಷ್ಟೇ ನಮಗೆ ಸಾಕು.

ಸರ್ದಾರ ಸಿಂಗರು ವ್ಯಕ್ತಪಡಿಸಿದ ಭಾವನೆಗಳಿಗೆ ಅರ್ಥವಿಷ್ಟೆ. ಹಿಂದೀ–ಚೀನೀ ಭಾಯಿ ಭಾಯಿ ಎಂದು ಉಗ್ಗಡಿಸಿದ ಚೌ - ಎನ್ - ಲಾಯ್ ವಿಶ್ವಸಂಸ್ಥಾ ಪ್ರವೇಶ ಸಿದ್ಧಿಯಿಂದ ವೃಥಾರೋಷ ಹೊರಿಸುವ, ಪಿಡುಗು ಸೃಷ್ಟಿಸುವ ತಮ್ಮ ಹಳೆಯ ನೀತಿಯನ್ನು ಬದಲಾಯಿಸುವರೆ?

ವಿಶ್ವದ ಬಹುತೇಕ ರಾಷ್ಟ್ರಗಳು ತಮ್ಮ ಹೊಣೆಗಾರಿಕೆಯನ್ನು ಮನವರಿಕೆ ಮಾಡಿಕೊಳ್ಳಲಿಲ್ಲವೆಂದು ಪ್ರಧಾನಿ ಗಾಂಧಿಯವರು ಅತ್ಯಂತ ವಿಷಾದ ವ್ಯಕ್ತಪಡಿಸಿದರು.

(ಹನ್ನೆರಡನೆ ಪುಟ ನೋಡಿರಿ)

'ಗಾಂಧಿಜಿಯ ಕೊಲೆ'

(ಭಾಗ ಹತ್ತು)

ಬರೆದವರು: ಶ್ರೀ ಬಿ. ಕೃಷ್ಣ ಭಟ್, ಎಡ್ವಕೇಟ್, ಭದ್ರಾವತಿ

ತಮ್ಮ ತೀರ್ಪಿನಲ್ಲಿ ಸೆಷನ್ಸ್ ನ್ಯಾಯಾಧೀಶ ಶ್ರೀ ಆತ್ಮಚರಣರು 'ಜನವರಿ 20 ರಂದು ಜನವರಿ 30ರ ಅವಧಿಯಲ್ಲಿ ಪೋಲಿಸರು ತನಿಖೆಯ ಕೆಲಸವನ್ನು ಚುರುಕಾಗಿ ನಡೆಸಿಲ್ಲವೆಂದು ಆಕ್ಷೇಪಿಸಿದರು. ಈ ಕರ್ತವ್ಯ ವಿಮುಖತೆಯನ್ನು ಸರಕಾರದ ಗಮನಕ್ಕೆ ತರುವುದು ಸೂಕ್ತ ಎಂಬ ಅಭಿಪ್ರಾಯ ಕೊಟ್ಟರು. 20—1—48ರಲ್ಲಿ ಬಂಧನದಲ್ಲಿದ್ದ ಮದನ್‌ಲಾಲ ಪೋಲಿಸರಿಗೆ ತನ್ನ ಕೃತ್ಯಕ್ಕೆ ಸಂಬಂಧಿಸಿದ ಹಿನ್ನೆಲೆಯನ್ನು ವಿವರವಾಗಿ ತಿಳಿಸಿದ್ದ. 21-1-48 ರಂದು ಡಾಕ್ಟರ್ ಜೈನರು ಮುಂಬಯಿ ಪೋಲಿಸರಿಗೊಂದು ಹೇಳಿಕೆ ಕೊಟ್ಟಿದ್ದರು. ಈ ಎರಡು ಹೇಳಿಕೆಗಳು ಕೈಗತವಾಗುವುದೇ ತಡ. ದೆಹಲಿ-ಮುಂಬಯಿ ಪೋಲಿಸರ ಮಧ್ಯೆ ಸಂಪರ್ಕ ಉಂಟಾಯಿತು. ಆದರೆ ಆದರ ಲಾಭವನ್ನು ಪೋಲಿಸರು ಬಳಸಿಕೊಂಡಂತೆ ಕಾಣುವುದಿಲ್ಲ. ಇವೆರಡು ಹೇಳಿಕೆಗಳು ಸಿಕ್ಕಿದ ತಕ್ಷಣ ಪೋಲಿಸರು ಬಿಗಿಯಾಗಿ ವರ್ತಿಸಿದ್ದರೆ ಚರಿತ್ರೆಯ ಅತಿದೊಡ್ಡ ನುರಂತವನ್ನು ತಪ್ಪಿಸ ಬಹುದಿತ್ತು'.

ಸಿನ್ಹೂದ ತಂಪು ಹವೆಯಲ್ಲಿ ಕುಳಿತ ಪೂರ್ವ ಪಂಜಾಬಿನ ಹೈಕೋರ್ಟು ಈ ಅಭಿಪ್ರಾಯಕ್ಕೆ ಬುಡವಿಲ್ಲ. ಇದು ಏಕಪಕ್ಷೀಯ ತೀರ್ಮಾನವೆಂಬ ಅಭಿಪ್ರಾಯಕ್ಕೆ ಬಂದಿತು. ಮೂಲ ಕೋರ್ಟಿನ ಜಡ್ಜರ ಮತಿನ ಹಿಂದಿದ್ದ ಸತ್ಯ ಈಗ ಬೀದಿಯ ಮಾತಾಗಿದೆ. ಗಾಂಧಿಜಿಯ ಕೊಲೆಯಾಗಿ ಎರಡು ದಶಕಗಳು ಸಂದಿವೆ. ಆದರೆ ಸತ್ಯ ಇನ್ನೂ ಹೊರ ಬಂದಿಲ್ಲ. ವಿಚಾರಣೆಯ ಕಾಲದಲ್ಲೂ ಸತ್ಯವನ್ನು ಬಚ್ಚಿಡಲಾಗುತ್ತಿದೆ ಎಂದು ಶಂಕಿಸಿದವರಿಗೆ ಕೊರತೆಯಿಲ್ಲ. ಶಂಕೆಯು ಈ ಬೇರುಗಳು ಆಳಕ್ಕಿಳಿಯಲು ಕೆಲವು ಅನುದ್ದೇಶಿತ ಪ್ರಕಟಣೆಗಳು ಪುಟ ಕೊಟ್ಟವೆ. 1956ರಲ್ಲಿ ಪ್ರಕಟವಾದ ಶ್ರೀ ವಿ. ಪಿ. ಮೆನನ್ನರ 'ಸಂಸ್ಥಾನಗಳ ವಿಲೀನ' ಎನ್ನುವ ಪುಸ್ತಕ ಈ ನಿಟ್ಟಿನಲ್ಲಿ ಮಹತ್ವದ್ದು. ಅವರು ಕೇಂದ್ರ ಸರಕಾರದಲ್ಲಿ ಈ ವಿಭಾಗದ ಕಾರ್ಯದರ್ಶಿಗಳು. ಸ್ವೀರ್ಗೀಯ ಸರದಾರರ ಆಪ್ತರು.

ಈ ಪುಸ್ತಕದಲ್ಲಿ ಅಳ್ವಾರ್ ಹಾಗೂ ಭರತಪುರ ಸಂಸ್ಥಾನಗಳ ವಿಲೀನೀಕರಣದ ಕತೆಯನ್ನು ಅವರು ನಿರೂಪಿಸಿದ್ದಾರೆ. ಹಿನ್ನೆಲೆಯನ್ನು ಕೊಟ್ಟಿದ್ದಾರೆ. ಗಾಂಧಿಜಿಯ ಕೊಲೆಯಲ್ಲಿ ಈ ಸಂಸ್ಥಾನಿಕರ ಕೈವಾಡವಿತ್ತೆಂಬ ವದಂತಿ ಆಗ ದಟ್ಟವಾಗಿ ಹರಡಿತ್ತು. ರಾಷ್ಟ್ರೀಯ ಸ್ವಯಂಸೇವಕರ ತರಬೇತಿ ಕೇಂದ್ರ, ಸರಕಾರದ ಆಶ್ರಯದಲ್ಲಿ ಅಲ್ಲಿ ನಡೆಯುತ್ತಿತ್ತು. ಗಾಂಧಿಜಿಯ ಕೊಲೆಗೆ ಕಾರಣರಾದ ಕೆಲವರಿಗೆ ಅಳ್ವಾರ್ ಆಶ್ರಯ ಕೊಟ್ಟಿತ್ತು. ಹಿಂದು ಮಹಾಸಭೆಯ ಅಧ್ಯಕ್ಷರಾಗಿದ್ದ ಡಾಕ್ಟರ್ ಯನ್.ಬಿ. ಖರೆಯವರು ಅಲ್ಲಿನ ಮುಖ್ಯಮಂತ್ರಿಗಳು. ಡಾಕ್ಟರ್ ಖರೆಯವರ ಪಕ್ಷಪಾತದಿಂದಾಗಿ ಅಳ್ವಾರ್ ಜಾತೀಯ ಗಲಭೆಯ ಹೊಸ್ತಿಲಲ್ಲಿ ನಿಂತಿತ್ತು. ಆದಕ್ಕಾಗಿ ಕೇಂದ್ರ ಸರಕಾರ ಅಳ್ವಾರಿನ ಆಡಳಿತವನ್ನು ಕೈಗೆ ತೆಗೆದು ಕೊಳ್ಳಲು ನಿರ್ಧರಿಸಿತು. ಆಪಾದನೆಗಳ ವಿಚಾರಣೆ ಮುಗಿಯುವ ವರೆಗೆ ಅಳ್ವಾರಿನ ಮಹಾರಾಜರು, ಡಾಕ್ಟರ್ ಖರೆ ದೆಹಲಿ ಬಿಟ್ಟು ಹೋಗ ಬಾರದೆಂದು ಆಜ್ಞೆ ಹೊರಡಿಸಲಾಯಿತು. 7—2—48ರಂದು ಕೇಂದ್ರದ ಈ ಆಜ್ಞೆಯನ್ನು ಅಳ್ವಾರಿನ ಮಹಾರಾಜರಿಗೆ ಶ್ರೀ ಮೆನನ್ನರೇ ಜಾರಿ ಮಾಡಿದರು. ರಾಜರು ಈ ಆಜ್ಞೆಯಿಂದ ದಿಗಿಲು ಗೊಂಡರು. ಡಾಕ್ಟರ್ ಖರೆಯವರನ್ನು ಅಧಿಕಾರದಿಂದ ನಿವೃತ್ತಿಗೊಳಿಸಲು ಸಿದ್ಧರಾದರು.

ಆಶ್ಚರ್ಯದ ಸಂಗತಿಯೆಂದರೆ ಗಾಂಧಿಜಿಯ ಕೊಲೆಗಾರರನ್ನು ಕೆಂಪು ಕೋಟೆಯಲ್ಲಿ ವಿಚಾರಣೆಗೆ ತಂದು ನಿಲ್ಲಿಸುವುದಕ್ಕೂ ಮೊದಲು ಅಳ್ವಾರ್—ಭರತಪುರ ಮಹಾರಾಜರುಗಳನ್ನು ನಿರ್ದೋಷಿಗಳೆಂದು ತಮ್ಮ ಮೇಲಿದ್ದ ಆರೋಪಗಳನ್ನು ಗೃಹಶಾಖೆ ಹಿಂತೆಗೆದು ಕೊಂಡಿತು. ಆದರೆ ಯಾರು ಈ ವಿಚಾರಣೆಯನ್ನು ನಡೆಸಿದರು? ಅವರ ಮೇಲೆ ಬಂದ ದೂರುಗಳೇನು? ಅದಕ್ಕೆ ಸಂಗ್ರಹಿಸಿದ ಸಾಕ್ಷಿಗಳೇನು? ಪರ—ವಿರೋಧ ಬಂದ ಪುರಾವೆಗಳು ಯಾವುವು? ಇದನ್ನು ಶ್ರೀ ಮೆನನ್ನರು ಬಹಿರಂಗ ಪಡಿಸಿಲ್ಲ. ಬಯಲಿಗೆ ತರುವುದು ಕರ್ತವ್ಯವಿತ್ತು. ಸುಳ್ಳು ಆರೋಪಗಳನ್ನು ಈ ರಾಜರುಗಳ ಮೇಲೆ ಹೊರಿಸಿ, ಅವರ ಮತ್ತು ಮುಖ್ಯಮಂತ್ರಿ ಡಾ. ಖರೆಯವರ ಚಾರಿತ್ರ್ಯದ ವಧೆ ಮಾಡಿ, ಆ ರಾಜ್ಯಗಳನ್ನು ಕಬಳಿಸುವುದು ಕೇಂದ್ರಕ್ಕೆ ಬೇಕಾಗಿತ್ತೇ? ಅಥವಾ ಅವರ ಮೇಲೆ ಬಂದ ಗುರುತರವಾದ ಆರೋಪಗಳನ್ನು ಬಚ್ಚಿಡಲು, ಅಧಿಕಾರದ ಹಸ್ತಾಂತರವನ್ನು ಲಂಚವಾಗಿ ಸ್ವೀಕರಿಸಿತೇ? ಗಾಂಧಿಜಿಯ ಹತ್ಯೆಯನ್ನು ಕೇಂದ್ರ ಸರಕಾರ ತನ್ನ ಲಾಭಕ್ಕೆ ಬಳಸಿ ಕೊಂಡಿತೇ?

ತನಿಖೆಯ ಕಾಲದಲ್ಲಿ ಮುಖ್ಯ ಡಾಖಲೆಗಳು ಕಾಣೆಯಾದುವು ಎಂದು ಮುಂಬಯಿಯ ಶಾಸಕರು ವಿಧಾನ ಸಭೆಯಲ್ಲಿ ಆಕ್ಷೇಪಿಸಿದರು. ಆದರೆ ಇದರಿಂದ ಕೇಂದ್ರ ಗೃಹ ಶಾಖೆಯ ಮೇಲಿರುವ ನಂಬಿಗೆ ಹೆಚ್ಚಲಿಲ್ಲ. ಗಾಂಧಿಜಿಯನ್ನು ಕೊಲ್ಲಲು ಉಪಯೋಗಿಸಿದ ಪಿಸ್ತೂಲನ್ನು ಒದಗಿಸಿದ ಡಾಕ್ಟರ್ ಪರಚುರೆಯನ್ನು ಹೈ ಕೋರ್ಟು ಬಿಡುಗಡೆ ಮಾಡಿತು. ಗೋಪಾಲ ಗೋಡ್ಸೆಯ ಪಾತ್ರ ಇದಕ್ಕಿಂತ ತೀರ ವಿಭಿನ್ನವಾಗಿತ್ತು. ಒಳಸಂಚಿನಲ್ಲಿ ಅವನ ಪಾತ್ರ ವಿದ್ದಂತೆ ಕಾಣುವುದಿಲ್ಲ. ಆತನಿಂದ ಯಾವ ಹೊಲೆಗೆಲಸವೂ ನಡೆದಿಲ್ಲ. ನಾಥೂರಾಮ ಗೋಡ್ಸೆಯ ತಮ್ಮನಾಗಿ ಹುಟ್ಟಿದುದೇ ಅವನ ಅಪರಾಧ. ಅಣ್ಣನಲ್ಲಿ, ಅಣ್ಣನ ಸ್ನೇಹಿತ ಆಪ್ಟೆಯಲ್ಲಿ, ಅವನಿಗಿದ್ದ ಅನನ್ಯ ಭಾವನೇ ಅವನಿಗೆ ಮುಳುವಾಯಿತು. ಅವನ ವಿರುದ್ಧ ಬಂದ ಸಾಕ್ಷಿಯನ್ನು ಜಾಲಾಡಿದ ಪ್ರೀವ್ಹೆನ್ಸ್ಯಾಯೂಲಯ ಅವನಿಗೆದಯೆದಯ ಪಾಲಿಸಲು ಶಿಫಾರಾಸು ಮಾಡಿತು. ಸರಕಾರ ಈ ಶಿಫಾರಸನ್ನು ಕಣ್ಣೆತ್ತಿಯೂ ನೋಡಲಿಲ್ಲ. ಅದು ಕಾಲವನ್ನು ತಳ್ಳುತ್ತ ಬಂತು. ಗೋವಾಲ ಗೋಡ್ಸೆ ಜೈಲಿನಲ್ಲಿ ಕೊಳೆಯುತ್ತ ಬಿದ್ದ. ಆದರ್ಶ ಕೈದಿಯಾಗಿ ಜೈಲಿನಲ್ಲಿ ದಿನ ಕಳೆದ. ಹನ್ನೆರಡು ವರ್ಷಗಳನ್ನು ತಳ್ಳಿದ. ಅವನಿಗೆ ಜೈಲಿನ ನಿಯಮದಂತೆ ರಿಯಾಯಿತಿ ದೊರಕಿತು. ಅದರ ಮೊತ್ತ 2963 ದಿನಗಳು- 8ವರ್ಷ 63 ದಿನಗಳು. ಜೈಲುವಾಸಿಯಂತೆ ಆತ 1961ರ ಜನವರಿಯ ಅಂತ್ಯಕ್ಕೆ 20 ವರ್ಷಗಳ ಶಿಕ್ಷೆಯನ್ನು ಅನುಭವಿಸಿದ್ದ. ಪೂರ್ಣಾವಧಿಯ ಶಿಕ್ಷೆಯನ್ನು ಮುಗಿಸಿದ್ದರೂ ಆತನ ಬಿಡುಗಡೆಗೆ ಸರಕಾರ ಆಜ್ಞೆ ಹೊರಡಿಸಲಿಲ್ಲ. ಅದು ಕಾರಣ ಆತ ತನ್ನನ್ನು ಅಕ್ರಮವಾಗಿ ಸರಕಾರ ಬಂಧನದಲ್ಲಿಟ್ಟಿದೆ ಎಂದು ಆತ ಸುಪ್ರೀಂ ಕೋರ್ಟಿಗೆ ಅರ್ಜಿ ಸಲ್ಲಿಸಿದ.

ಅವನ ಅರ್ಜಿಯನ್ನು ಸುಪ್ರೀಂ ಕೋರ್ಟು ತಳ್ಳಿ ಹಾಕಿತು. ಜೀವಾವಧಿ ಶಿಕ್ಷೆ ಎಂದರೆ 20 ವರ್ಷವೆಂದು ಪರಿಗಣಿಸುವುದು ಹೇಗೆ-? ಜೀವಾವಧಿ ಎಂದರೆ ಬದುಕಿರುವ ಪರ್ಯಂತ ಎಂದೇ ಅರ್ಥ.ಇದು ಸುಪ್ರೀಂಕೋರ್ಟಿನ ಪಂಚಾನನರುಕೊಟ್ಟವ್ಯಾಖ್ಯೆ. ಅರ್ಜಿಯನ್ನು ತಳ್ಳಿ ಹಾಕಿದ ನ್ಯಾಯಮೂರ್ತಿಗಳು, ರಿಯಾಯಿತಿ ತೋರಿಸುವುದು-ಬಿಡುವುದು ಸರಕಾರಕ್ಕೆ ಸೇರಿದ್ದೆಂದು ಸೂಚಿಸದೆ ಬಿಡಲಿಲ್ಲ.

ಆದರೆ ಅವನ ದುರದೃಷ್ಟ ಪಂಡಿತ ನೆಹರು ಇನ್ನೂ ಬದುಕಿದ್ದರು-ಅವರು ಬದುಕಿರುವಷ್ಟು ದಿನ ಕೇಂದ್ರ-ಪ್ರಾಂತ ಸರಕಾರಗಳು ಸುಪ್ರೀಂ ಕೋರ್ಟಿನ ಶಿಫಾರಸನ್ನು ಕಣ್ಣೆತ್ತಿ ನೋಡಲಿಲ್ಲ.

ಗೋಪಾಲ ಗೋಡ್ಸೆಯ ಕೈ ಹಿಡಿದವಳ ವೃತ್ತಾಂತವಿರಬೇಕು. ಎರಡು ಘಟನೆಗಳು ಅವನನ್ನು ಉಳಿಸಿದವು. ಒಂದು ಪಂಡಿತ ನೆಹರುಗಳ ಸಾವು; ಇನ್ನೊಂದು ಕಮಾಂಡರ್ ನಾನಾವತಿ ಪ್ರಕರಣ. ಗೋಡ್ಸೆಯಂತೆ ನಾನಾವತಿಗೂ ಜೀವಾವಧಿ ಶಿಕ್ಷೆಯಾಗಿತ್ತು. ಆತ ತನ್ನ ಸುರಸುಂದರಿ ಹೆಂಡತಿ ಸಿಲ್ವಿಯಾಳ ಜಾರ ಅಹುಜನನ್ನು ಗುಂಡಿಟ್ಟು ಕೊಂದ ತಪ್ಪಿಗೆ ಶಿಕ್ಷೆತನಾಗಿದ್ದ. ಆತ ಶ್ರೀಮಂತ ಪಾರಸೀ ಕುಟುಂಬಕ್ಕೆ ಸೇರಿದವನು. ನೌಕಾ ಬಲದಲ್ಲಿ ಉನ್ನತ ಅಧಿಕಾರದಲ್ಲಿದ್ದವನು. ಕುಳಿತರೆ, ನಿಂತರೆ ನೆಹರೂ ಕುಟುಂಬವನ್ನು ಹೊಗಳಿ, ಬೇಳೆ ಬೇಯಿಸಿ ಕೊಳ್ಳುವ 'ಬ್ಲಿಟ್ಸ್'ಬಳಗ ಅವನ ಬೆಂಬಲಕ್ಕೆ ನಿಂತಿತು. ನಾನಾವತಿಯ ಬಿಡುಗಡೆಗೆ ಆಜ್ಞೆ ಹೊರಡಿಸಿದ ಸರಕಾರಕ್ಕೆ ಆದರ್ಶ ಕೈದಿಯಾಗಿ 25 ವರ್ಷಗಳನ್ನು ಜೈಲಿನಲ್ಲಿ ಕಳೆದ ಗೋಪಾಲ ಗೋಡ್ಸೆಯನ್ನು ಬಂಧನದಲ್ಲಿ ಇಟ್ಟುಕೊಳ್ಳುವುದು ಸಾಧ್ಯವಾಗಲಿಲ್ಲ.

ಪುಣೆಯ ಪತ್ರಿಕೋದ್ಯಮಿ ಶ್ರೀ ಜ. ವಿ. ಕೇತಕರ್—ಲೋಕ ಮಾನ್ಯರ ಮೊಮ್ಮಗ—ಗೋಡ್ಸೆಯ ಗೌರವಾರ್ಥ ಒಂದು ಸತ್ಯನಾರಾಯಣ ಪೂಜೆಯನ್ನು ಮಾಡಿಸಿದರು. ಹತ್ತು ಜನ ಬಂಧು ಬಾಂಧವರನ್ನು ಮನೆಗೆ ಆಹ್ವಾನಿಸಿದರು. ಅಂದು ಅವರು ಒಂದು ಹೇಳಿಕೆ ಕೊಟ್ಟರು. ಆ ಹೇಳಿಕೆ ಗಾಂಧಿಜಿಯ ಕೊಲೆಯನ್ನು ಪುನಃ ಸೃಷ್ಟಿಸಿ ಕೊಳ್ಳುವಂತೆ ಮಾಡಿತು. ಅವರು ಅಂದು 'ಗಾಂಧಿಜಿಯ ಕೊಲೆಯ ಯತ್ನ ನಡೆದಿದೆ. ಅದರ ಸುಳಿವು ನನಗೆ ಸಿಕ್ಕಿದೆ. ಅವನ್ನು ಕೊಲೆಗೆ ಆರು ತಿಂಗಳ ಹಿಂದೆ ಮುಂಬಯಿಯ ಗೃಹ ಸಚಿವ ಮುರಾರ್ಜಿಯವರಿಗೆ ಬರಹ ಮೂಲಕ ತಿಳಿಸಿದೆ. ಈ ವರ್ತಮಾನವನ್ನು ರಿಜಿಸ್ಟ್ರಿ ನಿಶಿರವಾನಿಸಿದ್ದೆ' ಎಂದು ತಿಳಿಸಿದರು.

ಆಗ ಸಾರ್ವಜನಿಕ ಅಭಿಪ್ರಾಯಕ್ಕೆ ತಲೆ ಬಾಗಿ ಕೇಂದ್ರ ಸರಕಾರ 25-3-65ರ

(ಹನ್ನೊಂದನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದೆ ದಶಾಲಾ (ಪೆವೆಟ್) ಲಿಮಿಟೆಡ್,
ವಲ್ಲೆ
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಹನುಮಂತನ ಬಾಲದಂತೆ ಬೆಳೆಯುತ್ತ ಹೋಗುತ್ತಿರುವ ಸಚಿವ ಸಂಪುಟಗಳ ಪ್ರಮಾಣ ಅಧಿಕಾರ ಸಂರಕ್ಷಣೆಗೆ ಅನುಕೂಲವಾಗಿದೆಯೆಂಬುದು ಇದುವರೆಗಿನ ಅನುಭವ. ಆದರೆ, ಇದರಿಂದ ದೇಶದ ರಾಜ್ಯಕೀಯವು ಅಭದ್ರತೆಯಿಂದ ಮತ್ತೂ ಅಭದ್ರತೆಯತ್ತ ಜಾರುತ್ತಿದೆಯೆಂಬುದಕ್ಕೆ ಕಳೆದ ಐದು ವರ್ಷಗಳ ಅನುಭವ ಸಾಕ್ಷಿ. ಪಕ್ಷಾಂತರದ ಪಿಡುಗು ಬಲಿತು ಮಹಾಮಾರಿಯಾಗಲು ಅಧಿಕಾರದ ಲಾಲಸೆಯೇ ಪ್ರೇರಕ ಶಕ್ತಿಯೆಂಬುದನ್ನು ಅಲ್ಲಗಳೆಯಲಾಗದು. ಉತ್ತರ ಪ್ರದೇಶದಲ್ಲಿ ಕಮಲಾಪತಿ ತ್ರಿಪಾಠಿಯವರು ಈ ಇಳಿವಯಸ್ಸಿನಲ್ಲೂ ನವತರುಣರನ್ನೂ ನಾಚಿಸಿ ಪಕ್ಷಾಂತರ ಕ್ರಮಕ್ಕೆ ಉಪಕ್ರಮಿಸಿದ್ದರಿಂದಲೇ ಇಂದು ಮುಖ್ಯಮಂತ್ರಿಯ ಗದ್ದುಗೆಗೇರುವುದು ಸಾಧ್ಯವಾಯ್ತು. ಅವರ ಸಂಪುಟದ ಸಚಿವರಲ್ಲಿ ಸಚಿವ ಸ್ಥಾನದ ಪ್ರಲೋಭನೆಗಾಗಿಯೇ ಪಕ್ಷ ನಿಷ್ಠೆ ಬದಲಾಯಿಸಿದವರೂ ಇದ್ದಾರೆ. ಗಾಳಿ ಬಂದತ್ತ ತೂರಿಕೊಳ್ಳುವ ಪಕ್ಷಾಂತರ ಪೀಡೆಯಿಂದಾಗಿಯೇ ದೇಶದ ವಿವಿಧ ರಾಜ್ಯಗಳಲ್ಲಿನ ಜನಪ್ರಿಯ ಸರಕಾರಗಳು ಉರುಳಿ ರಾಷ್ಟ್ರಪತಿ ಆಡಳಿತವು ಬಂತು.

ಕೇಂದ್ರದಲ್ಲಿ ಅಧಿಕಾರದಲ್ಲಿರುವವರಿಗೆ ಪಕ್ಷಾಂತರವನ್ನು ತಡೆಗಟ್ಟುವುದು ಅಗತ್ಯವೆಂದು ಉಳಿದ ಪಕ್ಷಗಳು ಬಹುಕಾಲದಿಂದಲೂ ಹೇಳುತ್ತಿದ್ದುವು ಅಧಿಕಾರಾರೂಢ ಪಕ್ಷವೂ ಸಂಸತ್ತಿನ ಹೊರಗಡೆ ಆಪನ್ನು ಬೆಂಬಲಿಸಿತ್ತು. ಆದರೆ, ಈ ಸಲಹೆಗೆ ಕಾಯದೆಯ ಸ್ವರೂಪ ನೀಡಲು ಅದು ಮಿನಮೇಷವೆಣಿಸುತಿತ್ತು. ಅಷ್ಟು ಮಾತ್ರವಲ್ಲ, ಅವಿಭಜಿತ ಕಾಂಗ್ರೆಸ್‌ನಿಂದ ತಾನು ಸಿಡಿದು ಬಂದ ಬಳಿಕ ಎಲ್ಲೆಂದರಲ್ಲಿ, ಹೇಗೆಂದರೆ ಹಾಗೆ, ಪಕ್ಷಾಂತರದ ಬಿರುಗಾಳಿಗೆ ಇದು ಉತ್ತೇಜನ ನೀಡಿದ್ದುಂಟು. ಲೋಕ ಸಭೆಗೆ ನಡೆದ ಮಧ್ಯಾವಧಿ ಚುನಾವಣೆಗಳಲ್ಲಿ ತನ್ನ ರೊಟ್ಟಿ ತುಪ್ಪಕ್ಕೆ ಜಾರಿಬಿದ್ದ ಬಳಿಕ, ಸಾಮೂಹಿಕ ಪಕ್ಷಾಂತರವು ಸಿಧಾನವಾಯಿತು. ಆದರೂ ತನ್ನ ಮಿಸೆಯಿನ್ನೂ ಹೊರಗುಳಿದಿಡೆ ಇಂದಿಕೇಟು ನಾನಾ ರೀತಿಯಿಂದದನ್ನು ಒಳಗೂಡಲು ಪ್ರಯತ್ನಿಸಿದ್ದುಂಟು, ಕೆಲವೆಡೆ ಯಶ-ಇನ್ನು ಕೆಲವೆಡೆ ಅಪಯಶಗಳಿಸಿದ್ದುಂಟು. ಇದೀಗ, ಇಂದಿಕೇಟೂ ಪಕ್ಷಾಂತರ ನಿಷೇಧವನ್ನು ಕಾಯದೆ ರೀತ್ಯಾ ಅನುಷ್ಠಾನಕ್ಕೆ ತರಲು ಮನಸ್ಸು ಮಾಡಿದೆಯೆಂದರೆ, ಅವರ ಬಕೋದರ ತುಂಬಿ ಅಜೀರ್ಣವಾಗಿದೆಯೆಂದೇ ಅರ್ಥ.

ಆಡಳಿತ ಸುಧಾರಣಾ ಆಯೋಗವು ವರದಿನೀಡಿ ಸಣ್ಣಪ್ರಮಾಣದ ಸಚಿವಸಂಸುಟಗಳಿರಬೇಕೆಂದು ಸಲಹೆ ಮಾಡಿ ಬಹಳ ದಿನಗಳುರುಳಿದವು. ಇದನ್ನು ಅನುಷ್ಠಾನಕ್ಕೆ ತರುತ್ತಿದ್ದರೆ, ಅದೆಷ್ಟೋ ಮಿತವ್ಯಯವು ಸರಕಾರಿ ವಲಯದಲ್ಲಿ ಸಾಧ್ಯವಾಗುತ್ತಿತ್ತು. ಒಬ್ಬೊಬ್ಬ ಕೇಂದ್ರ ಸಚಿವರು ವರ್ಷಕ್ಕೆ ಐವಾರು ಲಕ್ಷರೂಪಾಯಿಗಳನ್ನು ಪೋಲು ಮಾಡುತ್ತಿದ್ದಾರೆಂಬುದು ರುಜುವಾತಾಗಿದೆ. ರಾಜ್ಯಗಳ ಸಚಿವರೂ ಇವರನ್ನು ಬಿಟ್ಟು ಹಾಕುವುದು ಅಸಾಧ್ಯ—ಇದು ಪ್ರತ್ಯಕ್ಷ ಪೋಲು. ಇನ್ನು ಪರೋಕ್ಷವಾಗಿ ವ್ಯಯವಾಗುವ ಮೊತ್ತ ಇದರ ಹತ್ತಾರು ಪಟ್ಟು. ಆದರೆ ಆಡಳಿತ ಪಕ್ಷಕ್ಕೆ ಅಧಿಕಾರ ರಕ್ಷಣೆಗೆ, ಅಧಿಕಾರಲಾಲಸೆಗಳಿಗೆ ಸರಕಾರ

ಸಂಪಾದಕೀಯ

ಪಕ್ಷಾಂತರ ನಿಷೇಧ—ಸಂಪುಟ ಗಾತ್ರಕ್ಕೆ ಮಿತಿ

ಭಕ್ಷಣೆಗೆ ಪಕ್ಷಾಂತರವೊಂದು ಕಾಮಧೇನುವಾಗಿದೆ. ಈ ಕಾಮಧೇನುವಿನ ಹಾಲೆಲ್ಲವನ್ನೂ ಹೀರಿಯೂದ ಬಳಿಕ ಇಂಡಿಕೇಟು ಪಕ್ಷಾಂತರವನ್ನು ಕಾಯದೆಬಾಹಿರವೆಂದು ಸಾರಲು ಮುಂದೆ ಬಂದಿರುವುದು ಗಮನೀಯವೇ.

ಅಧಿಕಾರವನ್ನು ಪಡೆಯಲು ಪಡೆದ ಅಧಿಕಾರವನ್ನು ಉಳಿಸಿಕೊಳ್ಳಲು, ತಂತಮ್ಮೊಳಗಿನ ಒಳಗುಂಪುಗಳನ್ನು ತೃಪ್ತಿಪಡಿಸಲು ಸಚಿವ ಪದವಿಯ ಮೂಲಕ ಬಹು ಪ್ರಯೋಜನಕಾರಿಯೆಂದು ಸಿದ್ಧವಾಗಿದೆ. ರಾಜ್ಯಕೀಯವನ್ನೇ ತಮ್ಮ ಜಾಯಮಾನವನ್ನಾಗಿ ಮಾಡಿಕೊಂಡು ಅದರಿಂದಲೇ ಉದರಂಭರಣ ಮಾಡತೊಡಗಿರುವ ಸ್ವಾರ್ಥಸಾಧಕರು ಇದರಿಂದ ಮಹಾಸಿದ್ಧಿ ಪಡೆದು ಕೊಂಡಿದ್ದಾರೆ.ಇದರಿಂದಾಗಿ ಪ್ರಜಾಸತ್ತೆಯು ಮುಖಕ್ಕೆ ಕಡುಗಪ್ಪು ಬಳಿದಿದ್ದಾರೆ. ನಾನಾ ಪ್ರಕಾರದ ಆಕೆ- ಆಮಿಷಗಳಿಗೆ ಬಲಿಯಾಗಿರುವ ರಾಜ್ಯಕೀಯ ವ್ಯಕ್ತಿಗಳು ಅಶಕ್ತರಿಗೆಲ್ಲ ಊರುಗೋಲಾಗಿ ನಿಂತಿದ್ದಾರೆ— ಪ್ರಜಾಸತ್ತೆಯನ್ನು ಸರಕಯಾತನೆಗೆ ತಳ್ಳಿದ್ದಾರೆ. ಗುಂಪುಗುಳಿತನವನ್ನು ಹೆಚ್ಚಿಸಿದ್ದಾರೆ. ಆಡಳಿತದಲ್ಲಿ ಭ್ರಷ್ಟಾಚಾರವನ್ನು ಪ್ರಚೋದಿಸಿದ್ದಾರೆ. ರಾಜ್ಯ–ರಾಜ್ಯಗಳಲ್ಲಿ ರಾಜ್ಯಕೀಯ ಅಭದ್ರತೆಗೆ ನಾಂದಿ ಹಾಡಿದ್ದಾರೆ. ಅಂಗಿ ಕಳಚುವಂತೆ ಪಕ್ಷವನ್ನು ತ್ಯಜಿಸಿ ರಾಜ್ಯಕೀಯ ಸುಭಗತನಕ್ಕೆ ಅಪಹಾಸ್ಯ ಮಾಡಿದ್ದಾರೆ. ಈ ಅನಾಹುತಗಳಿಗೊಂದು ಕೊನೆ ಬರುವುದಾದರೆ, ಅದು ನಿಜಕ್ಕೂ ಸ್ವಾಗತಾರ್ಹವೇ; ಎಂದೋ ಆಗ ಬೇಕಾಗಿದ್ದ ಕಾರ್ಯವೇ.

ಪಕ್ಷಾಂತರ ನಿಷೇಧಕ್ಕೆ ರೂಪುಗೊಳ್ಳುವ ಕಾಯದೆಯ ಸ್ವರೂಪವಿನ್ನೂ ಆಡಳಿತ ಪಕ್ಷದ ಗರ್ಭದಲ್ಲಿ ಆಡಗಿದೆ. ಆದರೂ ಇಲ್ಲಿ ಒಂದೆರಡು ಸಲಹೆ ನೀಡುವುದು ಅಪ್ರಾಸಂಗಿಕವಾಗಲಾರದು. ಪಕ್ಷಾಂತರಗೊಂದ ವ್ಯಕ್ತಿಗೆ ಹೊಸ ಪಕ್ಷದಲ್ಲಿ ಕೆಲವು ಕಾಲ ಪಾದರೂ ಯಾವುದೇ ಸಂದರ್ಭದಲ್ಲಿಯೂ ಯಾವುದೇ ಅಧಿಕಾರ ದೊರೆಯುವಂತಾಗಬಾರದು; ಸರಕಾರದಲ್ಲಿ ಸ್ಥಾನ ಸಿಗುವಂತಾಗಬಾರದು. ಅಥವಾ ಸರಕಾರ ನೇಮಿಸುವ ಯಾವುದೇ ಸಮಿತಿ-ಮಂಡಳಿ ಇತ್ಯಾದಿಗಳಲ್ಲಿ ಲಾಭಕರವೆನಿಸಿದ ಸ್ಥಾನ ಲಭ್ಯವಾಗಬಾರದು. ಪಕ್ಷಾಂತರಗೊಂಡ ವ್ಯಕ್ತಿಯು ಶಾಸಕನಿದ್ದರೆ, ಪಕ್ಷಾಂತರಗೊಂಡನೆಯೇ ಆತನ ಶಾಸಕತನವು ತಾನಾಗಿ ರದ್ದಾಗುವಂತಾಗಬೇಕು. ಸಚಿವರೇ ಪಕ್ಷಾಂತರಗೊಂಡರೆ ಅವರು ಸಚಿವ ಸಂಪುಟದಲ್ಲಿ ಶಾಸಕ ಸಂಖ್ಯೆಯ ಸೇ. ೧೧ ರಷ್ಟು ಮಾತ್ರ ಸಚಿವ ಸಂಖ್ಯೆಯಿರಬೇಕೆನ್ನುವುದೂ ಹೆಚ್ಚಾಯಿತೆನಿಸುತ್ತದೆ. ಆಡಳಿತ ಪಕ್ಷದ ಒಟ್ಟು ಶಾಸಕರ ಸೇ. ೧೧ರಷ್ಟು ಇದ್ದರೆ, ಇಮು ಸಾಕೆನಿಸುತ್ತದೆ. "ಚಿಕ್ಕ ಸಂಸಾರ ಸುಖ ಶಾಂತಿಗಳಿಗೆ ಆಗರ"ವೆಂದು ಸಾರುವ ಸರಕಾರಗಳು 'ಚಿಕ್ಕ ಸರಕಾರ' ದಿಂದಲೇ ಪ್ರಜೆಗಳಿಗೆ ಸುಖ ಶಾಂತಿಗಳನ್ನು ತಂದೀಯಲು ದೃಢ ಮನಸ್ಸು ಮಾಡಬೇಕು. ಮೊನ್ನೆ ಮೊನ್ನೆಯವರೆಗೂ ತಮಿಳುನಾಡು (ಮದರಾಸು) ಸರಕಾರದಲ್ಲಿ ಹತ್ತಕ್ಕಿಂತಲೂ ಕಡಿಮೆ ಮಂತ್ರಿಗಳಿದ್ದರು. ಮದರಾಸಿನ ಆಡಳಿತ ದಕ್ಷತೆಗೆ ಮತ್ತೊಂದು ಹೆಸರಾಗಿತ್ತು. ದೃತರಾಷ್ಟ್ರನ ನೂರು ಮಕ್ಕಳಿಗಿಂತ ಪಾಂಡುವಿನ ಐವರು ಕುಮಾರರು ಇತಿಹಾಸ ಸ್ಥಾಪಿಸುವಲ್ಲಿ ಸಮರ್ಥರಾದರು. 'ಸೇವೆ'ಯೆಂದು ಹೇಳಿಕೊಂಡು ಸ್ವಾರ್ಥ ಸಾಧಿಸುವ ಕುರುಡು ಮತ್ತು ಸ್ವೈರ ರಾಜ್ಯಕೀಯಕ್ಕೊಂದು ಕೊನೆಯಾಗದೆ ಹೋದರೆ, ನಮ್ಮ ಭವಿಷ್ಯ ಅಂಧಕಾರಮಯವಾಗುತ್ತದೆ. ಆದುದರಿಂದ ಪ್ರತ್ಯೇಕ ರಾಜ್ಯಕೀಯ ಪಕ್ಷವೂ ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನಿಂದ ವರ್ತಿಸುವಂತೆ ಮುತುವರ್ಜಿ ವಹಿಸಬೇಕು. ದೇಶವಾಸಿಗಳನ್ನು ರಾಜ್ಯಕೀಯ ವ್ಯಕ್ತಿಗಳ ಅಧಿಕಾರದಿಟ್ಟೆಗಳಿಂದ ಸಂರಕ್ಷಿಸಬೇಕು.

ಸಾಹುಕಾರ್ ಚೆನ್ನಯ್ಯ

ಮೈಸೂರು ಕಾಂಗ್ರೆಸಿನ ಒಂದು ಕಾಲದ ಜೀವನಾಡಿಯಾಗಿದ್ದ ಧೀಮಂತ ವ್ಯಕ್ತಿ ಸಾಹುಕಾರ್ ಚೆನ್ನಯ್ಯ. ತಾರುಣ್ಯದ ಹೊಸ್ತಿಲಲ್ಲೇ, ತನ್ನ ೨೨ನೆಯ ವಯಸ್ಸಿನಲ್ಲೇ, ಇವರ ಆಸಕ್ತಿ ರಾಜ್ಯಕೀಯದತ್ತ ಪರಿದಿತ್ತು. ಕಾಂಗ್ರೆಸ್‌ನ ಚಳುವಳಿಯಿಂದ ಪ್ರೇರಣೆ ಪಡೆದ ಇವರು ಬ್ರಿಟಿಷರ ವಿರುದ್ಧ ಹೋರಾಡಿದರು. ಮೈಸೂರಿನ ರಾಜಸತ್ತೆಯ ವಿರುದ್ಧ ಧ್ವನಿಯೇರಿಸಿದರು. ಇದರಿಂದ ಹಲವು ಬಾರಿ ಕಾರಾಗೃಹವಾಸವನ್ನೂ ಅವರು ಅನುಭವಿಸಿದರು. ಹಳೆಯ ಮೈಸೂರಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟುವಲ್ಲಿ, ಬೆಳೆಸುವಲ್ಲಿ ಸಾಹುಕಾರ ಚೆನ್ನಯ್ಯನವರ ಪಾತ್ರ ಮಹತ್ವಪೂರ್ಣವಾದದ್ದು. ಕರ್ನಾಟಕ ರಾಜ್ಯ ಸ್ಥಾಪನೆಯೊದ ಬಳಿಕ, ರಾಜ್ಯದ ಕಾಂಗ್ರೆಸಿನಲ್ಲಿನ ಹಳೆಯ ಎರಡು ಬಣಗಳು ಒಂದರೊಡನೊಂದು ಹೊಂದಿಕೊಂಡುಹೋಗಲು ನಿರಾಕರಿಸಿದಾಗ, ಅಧಿಕಾರಕ್ಕಾಗಿ ಹೋರಾಟ ನಡೆದಾಗ, ಚೆನ್ನಯ್ಯನವರ ಪಾತ್ರ ಕಡಿಮೆ ಮಹತ್ವದ್ದಾಗಿರಲಿಲ್ಲ. ೧೯೬೦–೬೬ರ ಅವಧಿಯಲ್ಲಿ ಅವರು ರಾಜ್ಯ ವಿಧಾನ ಪರಿಷತ್ತಿನ ಸದಸ್ಯತನವನ್ನು ಗಿಟ್ಟಿಸಿಕೊಂಡರು. ಆವರಿಗೂ ವ್ಯಾದೇಶಿಕ ಕಾಂಗ್ರೆಸ್‌ಗೂ ಭಿನ್ನ ಮತ ನಿವಾರಣೆಯಾಗಲಿಲ್ಲ. ಶ್ರೀ ಚೆನ್ನಯ್ಯನವರೊಡನೆ ರಾಜ್ಯಕೀಯದಲ್ಲಿ ದುಡಿದವರು ಅದೆಷ್ಟೋ ಜನ ಏನೇನೋ ಆಗಿ ಹೋದರು. ಆದರೆ, ಚೆನ್ನಯ್ಯನವರನ್ನು ಯಾರೂ ಹೆಚ್ಚಾಗಿ ಹೊತ್ತುಕೊಳ್ಳಲಿಲ್ಲ. ಇದರಿಂದ ಅತೃಪ್ತಗೊಂಡ ಸಾಹುಕಾರರು ಮತ್ತೊಬ್ಬ ಅತೃಪ್ತ ಶ್ರೀ ಟಿ. ಸುಬ್ರಹ್ಮಣ್ಯಂರನ್ನು ಕೂಡಿಕೊಂಡು ಜನತಾ ಪಕ್ಷವನ್ನು ಕಟ್ಟಿದರು. ಈ ಪಕ್ಷವು ೧೯೬೭ರ ಚುನಾವಣೆಯಲ್ಲಿ ಬೆರಳೆಣಿಕೆಯ ಸ್ಥಾನಗಳಿಸಿ ತೃಪ್ತವಾಗಬೇಕಾಯ್ತು. ಮುಂದೆ ಕಾಂಗ್ರೆಸ್ ಮಹಾ ವಿಘಟನಾನಂತರ, ಶ್ರೀ ಎಸ್ಸೆನ್‌ರ ವಿರೋಧಿಗಳೆಲ್ಲ ಇಂಡಿಕೇಟು ಸೇರಿದವೇಳೆ, ಜನತಾ ಪಕ್ಷದ ಶಾಸಕರೆಲ್ಲರೂ ಇಂಡಿಕೇಟ್ ಸೇರಿದಾಗ, ಸಾಹುಕಾರ ಚೆನ್ನಯ್ಯನವರೂ ಅವರನ್ನು ಅನುಸರಿಸಿದರು. ಮೈಸೂರಿನ ರಾಜ್ಯಕೀಯದಲ್ಲಿ ಅಯುಷ್ಯತೇದ ಶ್ರೀಯುತರು ಇದೇ ತಾ. ೨೦ರಂದು ಮುಂಜಾನೆ ತಮ್ಮ ಕೊನೆಯುಸಿರೆಳೆದರು. ಅವರಿಗೆ ೬೯ ವರ್ಷ ವಯಸ್ಸಾಗಿತ್ತು. ದಿವಂಗತರಿಂದ ಮೈಸೂರಿಗೆ ಸಾಕಷ್ಟು ಸೇವೆ ಸಂದಿದೆ; ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲೆಂದು ಬೇಡುವುದು ಕನ್ನಡಿಗರ ಕರ್ತವ್ಯವಾಗಿದೆ. ●

ಶ್ರೀಮತಿ ಮುನಶಿ ಸಾರ್ವಕೆ

ಭಾರತೀಯ ವಿದ್ಯಾಭವನದ ಅಧ್ಯಕ್ಷೆ ಶ್ರೀಮತಿ ಲೀಲಾವತಿ ಮುನಶಿಯವರು ತಾ ೧೭ರಂದು ಮಂಗಳೂರಿಗೆ ಆಗಮಿಸಿದರು. ಆಗ, ಭವನದ ಮಂಗಳೂರು ಕೇಂದ್ರದವರು ಅವರನ್ನು ಸಮರಂಭವೊಂದರಲ್ಲಿ ಗೌರವಿಸಿದರು. ಶ್ರೀಮತಿ ಮುನಶಿಯವರು ಮಂಗಳೂರಿನ ಬಗ್ಗೆ ಪ್ರಶಂಸೆಯ ನುಡಿಮುತ್ತಾಡಿ, "ಇಲ್ಲಿನ ಜನತೆ ಸಮರ್ಥರು. ರಾಜ್ಯಕೀಯ, ಆರ್ಥಿಕ, ಸಾಮಾಜಿಕ, ಧಾರ್ಮಿಕ ಮತ್ತು ಶಿಕ್ಷಣ ರಂಗಗಳಲ್ಲಿ ಉತ್ತಮ ಕಾರ್ಯಕರ್ತರನ್ನು ದೇಶಕ್ಕೆ ನೀಡಿದವರು. ಅದಿಯಂದಲೂ ಸಂಸ್ಕೃತಿಯ ಮೇಲೆ ಅಭಿಮಾನವಿಟ್ಟವರು" ಎಂದು ಹೇಳಿ, "ಮಂಗಳೂರು ನಗರ ತನ್ನ ಸೌಂದರ್ಯ—ವೈಶಿಷ್ಟ್ಯಗಳನ್ನು ಉಳಿಸಿಕೊಂಡು ಬೆಳೆದು ಬರಲೆಂದು ಹಾರೈಸುವುದು.

ಆರಂಭದಲ್ಲಿ ಭವನದ ಮಂಗಳೂರು ಕೇಂದ್ರದ ಚಟುವಟಿಕೆಗಳನ್ನು ಅಧ್ಯಕ್ಷೆ ಡಾ। ಎಂ. ಪಿ. ಪೈಯವರು ವಿವರಿಸಿದರು. ಸಮರಂಭದಲ್ಲಿ ಉಪಸ್ಥಿತರಿದ್ದ ಭವನದ ಕಾರ್ಯದರ್ಶಿ ಶ್ರೀ ಎಸ್. ರಾಮಕೃಷ್ಣನ್ ಮತ್ತು ಶ್ರೀ ಪುತ್ತೂರು ಕೃಷ್ಣಮೂರ್ತಿಯವರು ಮಂಗಳೂರು ಕೇಂದ್ರದ ಪ್ರಗತಿಯ ಬಗ್ಗೆ ಆಭಿನಂದನೆ ಸಲ್ಲಿಸಿದರು. ಕೇಂದ್ರದ ಉಪಾಧ್ಯಕ್ಷೆ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರು ಧನ್ಯವಾದವಿತ್ತರು. ವಿಜಯಾ ಬ್ಯಾಂಕಿನ ಅಧ್ಯಕ್ಷ ಶ್ರೀ ಎಂ. ಸುಂದರರಾಯ ಶೆಟ್ಟರೂ ಈ ಗೌರವ ಸಮರಂಭದಲ್ಲಿ ಉಪಸ್ಥಿತರಿದ್ದರು.

ಉಡ್ಪಿ ಶಿವಿಲ್ ಜಡ್ಜರ ಕೋರ್ಟಿನಲ್ಲಿ
S. C 73/71
ಸಿಂಡಿಕೇಟ್ ಬೇಂಕ್, ಮಣಿಪಾಲ್ —ವಾದಿ,
ಮತ್ತು
ಕೆ ಆಬ್ದುಲ್ ರಜಕ್ ಕೊಡಾ--ಪ್ರತಿವಾದಿರು.
ಯಿವರೊಳಗೆ
D ೨. ಅಮೊನ್ ಸಾಹೇಬು. ಅಬ್ಬಾಸ್ ಸಾಹೇಬರ ಮಗ. ಕೊಪರೇಟಿವ್ ಮಿಲ್ಕು ಸಪ್ಲ್ಯಾ— ಉಡ್ಪಿ ಕಸಬಾ. D ೩. ಅಬ್ದುಲ್ ಖಾದರ್. ಸಯ್ಯದ ಫೀರು ಸಾಹೇಬರ ಮಗ. ಉಡ್ಪಿ ಕಸಬಾ ಫಡೆಯೂಡಿ.
ಯಿವರೀಗೆ ಯಿ ಮೂಲ್ಕ ತಿಳಿಯಪಡಿಸುವ ದೇನೆಂದ್ರೆ.

ವಾದಿ ಬೇಂಕಿಗೆ ಪ್ರತಿವಾದಿರು ತಾ. 13-8-19 ತಿರಲ್ಲು ರೂ. 800/-ಕ್ಕೆ ಬರಕಟ್ಟ ಡಿಮಾಂಡ್ ನೋಟಿನ ಬಾಕಿ ಅಸಲು ಬಡ್ಡಿ ವಗ್ಗೆರೆ ಕೇಳಿ ವಾದಿ ಬೇಂಕಿನವರು ಮಾಡಿದ ಮೇಲಿನ ದಾವೆಯು 2-8ನೇ ಪ್ರತಿವಾದಿರ ಆಪ್ಪೆರು ನೋಟ್ಸಿನ ಬಗ್ಗೆ ತಾ. 16-12-71ಕ್ಕೆ ಯಿ ಜೋಣಾಗಿಯದೆ ಮತ್ತು ಸದ್ರಿಯವರ ಉದಾಪರಣೆಯಿದ್ದಲ್ಲಿ ಸದ್ರಿ ದಿನ್ಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಚ್ಯಾಹೀರು ಮಾಡಿಕೊಳ್ಳ ತಕ್ಕದ್ದು ಎಂಬ ಸಂಗ್ತಿ ಯಿಮೂಲ್ಕ ತಿಳಿಸೋಣಾಗುತ್ತದೆ.

B. Krishna Bhat
Advocate for Plaintiff
Udipi. 18—11—71

ಕವಲುದಾರಿ ಕೆಂಪುದೀಪ—

ಜೋಡೆತ್ತಿನ ಯುಗ ಮುಗಿದೇ ಹೋಯ್ತು

ಜೋಡೆತ್ತು ಅವಿಭಜಿತ ಕಾಂಗ್ರೇಸ್‌ನ ಚುನಾವಣಾ ಚಿಹ್ನೆ. ಕಾಂಗ್ರೆಸ್ಸು ತುಂಡಾದ ಮೇಲೆ ಈ ಚಿಹ್ನೆಗೆ ಎರಡೂ ತುಂಡುಗಳಿಂದ ಬೇಡಿಕೆ.

ತಮ್ಮದೇ ನಿಜವಾದ ಕಾಂಗ್ರೆಸ್ಸು ಆದುದರಿಂದ ತಮಗೇ ಆದು ಸೇರಬೇಕು—ಇದು ಇಕ್ಕಡೆಯವರ ಸಮರ್ಥನೆ.

ಇಂಡಿಕೇಟಿನ ಹಿಂದೆ ಎಂಪಿ ಎಮ್ಮೆಲ್ಯೆಗಳ ಕ್ಯೂ ಬಹಳಷ್ಟು ನಿಂತಿದ್ದುದರಿಂದ ಅದೇ ಕಾಂಗ್ರೆಸ್ಸು ಎಂದೂ ಅದಕ್ಕೆ ಜೋಡೆತ್ತಿನ ಚಿಹ್ನೆಯೆಂದೂ ಸೇನ್ ವರ್ಮ-ಮುಖ್ಯ ಚುನಾವಣಾಧಿಕಾರಿ-ತೀರ್ಮಾನಿಸಿತ್ತರು.

ಇದು ಸಿಂಡಿಕೇಟಿನ ಕಿವಿಗೆ ಕಾದ ಸೀಸ ವೆರೆಯಿತು. ಇದು ಚುನಾವಣಾಧಿಕಾರಿಯ ನಿರ್ಣಯದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ದೂರಿತ್ತಿತು.

ಅಲ್ಲಿಯ ನಿರ್ಣಯ ಮೊನ್ನೆತಾನೇ ಹೊರಬಿತ್ತು. 'ಕಾರ್ಯಕಾರಿ ಸಮಿತಿಯಲ್ಲಿ ಒಂದು ಹೆಚ್ಚಿನ ಬಹುಮತವಿದೆಯೆಂಬ ಕಾರಣದಿಂದ ಹೆಚ್ಚಿನ ಶಾಸಕರು ಇಂಡಿಕೇಟಿನ ಹಿಂದಿದ್ದರೆಂಬುದನ್ನು ಅಲ್ಲಿಗಳೆಯಲಾಗದು. ಚುನಾವಣಾ ಚಿಹ್ನೆಯ ಸಂಬಂಧ ಮುಖ್ಯ ಚುನಾವಣಾಧಿಕಾರಿಗಳು ನೀಡಿದ ನಿರ್ಣಯ ನ್ಯಾಯಬದ್ಧ. ಆದರೆ—

ಈ ನಿರ್ಣಯ ಚುನಾವಣಾ ಚಿಹ್ನೆಗೆ ಮಾತ್ರ ಅನ್ವಯವಾಗುತ್ತದೆ. ಆಸ್ತಿ-ಪಾಸ್ತಿಗಳ ಸಂಬಂಧದಲ್ಲಿ ಇದೇನನ್ನೂ ಹೇಳುವುದಿಲ್ಲ. ಚುನಾವಣಾ ಚಿಹ್ನೆಯು ಆಸ್ತಿಯಾಗುವುದಿಲ್ಲ ಅಥವಾ ಆಸ್ತಿಯ ಸ್ವರೂಪದ್ದೂ ಆಗುವುದಿಲ್ಲ. ಆಸ್ತಿ ಪಾಸ್ತಿಗಳ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ತೀರ್ಮಾನಿಸಿಕೊಳ್ಳಬೇಕು.

ಸರ್ವೋಚ್ಚ ನ್ಯಾಯಾಲಯದ ನಿರ್ಣಯವು ಚುನಾವಣಾ ಚಿಹ್ನೆಗೆ ಮಾತ್ರ ಪರಿಸೀಮಿತ. ಜಂತರ್-ಮಂತರ್ ಅಥವಾ ಮತ್ತಾವುದೇ ಊರಿನಲ್ಲಿರುವ ಅವಿಭಜಿತ ಕಾಂಗ್ರೇಸಿನ ಆಸ್ತಿ-ಪಾಸ್ತಿಗಳಿಗೆ ಇದು ಅನ್ವಯವಾಗುವುದಿಲ್ಲ.

ಸಿಂಡಿಕೇಟಿನಿಂದ ಚುನಾವಣಾ ಚಿಹ್ನೆ ಜಾರಿಹೋಯಿತು. ಹಾಗೆಯೇ ಆಸ್ತಿ-ಪಾಸ್ತಿಗಳೂ ಜಾರಿ ಹೋಗುವುದಕ್ಕೆ ಮೊದಲು ಆದಾಗಿಯೇ ಇಂಡಿಕೇಟಿಗೆ ಒಪ್ಪಿಸಬೇಕು-ಇದು ಹಿರಿ-ಕಿರಿ-ಮರಿ-ಹೆಮ್ಮರಿ ಇಂಡಿಕೇಟಿಗರ ಕರೆ.

ಅಷ್ಟು ಸುಲಭದಲ್ಲಿ ಬಿಟ್ಟುಕೊಡಲು ಸಿಂಡಿಕೇಟಿಗರು ಏಕೆ ತಯಾರಾದಾರು? ಚಿಹ್ನೆಗೆಂದು ಬಹಳಷ್ಟು ಹೋರಾಡಿದವರು ಆಸ್ತಿಯನ್ನು ಕೈಬಿಡಲೇಕೆ ಮುಂದಾಗುತ್ತಾರೆ?

ಪಾಕ್ ಯೂಹ್ಖಾನರಿಗೆ ಸಮರೋತ್ಸಾಹ. ಇಂಡಿಕೇಟಿನ ಮಹಾ ಸಜ್ಜನತ್ರಯರಿಗೆ ವಿಜಯೋನ್ಮಾದ.

ಈ ಉನ್ಮಾದದಿಂದಲೇ ಅವರು ಜಂತರ್-ಮಂತರಿಗೆ ಮುತ್ತಿಗೆ ಹಾಕಿದರು ಸಿಂಡಿಕೇಟಧ್ಯಕ್ಷ ಶ್ರೀ ಸಾದಿಕ್ ಅಲಿಯವರನ್ನು ತನ್ನ ಕಛೇರಿಯಿಂದ ಹೊತ್ತು ತಂದು ಮುಂದಿನ ಮೈದಾನದಲ್ಲಿರಿಸಿದರು. ಜಂತರ್-ಮಂತರ್ ನ ಮೇಲೆ ತಮ್ಮ ಹತೋಟಿಯೆಂದು ಸಾರಿದರು.

ಅಂದರೆ, ಜಂತರ್-ಮಂತರ್‌ನ ಮೇಲೆ ಬಲಾತ್ಕಾರವಾಗಿ ಆಕ್ರಮಣ ನೂಡಿದರು. ಈ ರೀತಿ ಆಸ್ತಿ ಪಾಸ್ತಿಗಳನ್ನು ವಶಪಡಿಸುವುದಿಲ್ಲವೆಂದು ಹಿರಿಯ ಇಂಡಿಕೇಟಿಗರು ಬಹಳ ಹಿಂದೆ ನೀಡಿದ್ದ ಆಶ್ವಾಸನೆಯನ್ನು ಗಾಳಿಗೆ ತೂರಿದರು.

ಶ್ರೀ ಅಲಿ ಈ ಅನ್ಯಾಯದ ವಿರುದ್ಧ ನಿರಶನ ವ್ರತಕ್ಕೆ ತೊಡಗಿದರು. ಮುಂದೆ ಮೆಜಸ್ಟೈಟರ ಆಜ್ಞೆಯಂತೆ ಜಂತರ್-ಮಂತರ್‌ಗೆ ಬೀಗ ಮುದ್ರೆಯಾಯ್ತು. ಸಾದಿಕ್ ನಿರಶನ ಮುಕ್ತಾಯವಾಯ್ತು.

ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿಯೂ ಇಂಡಿಕೇಟಿಗರು ಸಿಂಡಿಕೇಟಿಗೆ ಎಚ್ಚರಿಕೆ ನೀಡಿದ್ದಾರೆ. "ಒಳ್ಳೆ ಮೊತಿನಿಂದ ಕಾಂಗ್ರೆಸ್ ಭವನವನ್ನು ನಮ್ಮ ಕೈಗಳಿಗೊಪ್ಪಿಸಿ ಬಿಡಿ. ಇಲ್ಲವಾದರೆ ತಾಂಟಿಗೆ ತೆಗೆದು ಕೊಳ್ಳುವುತ್ತೇವೆ" ಯಾವುದೇ ವಿವಾದವನ್ನು ಜನರು ತಂತಮ್ಮೊಳಗೆ ಇತ್ಯರ್ಥ ಮಾಡಿಕೊಳ್ಳುದಾವರೆ, ಕಾಯದೆ ಕಾನೂನನ್ನು ತಮ್ಮ ಕೈಯಲ್ಲೇ ತೆಗೆದು ಕೊಳ್ಳುವುದಾದರೆ, ನ್ಯಾಯಾಲಯಗಳಿಗೇನು ಕೆಲಸ?

ವಿವಾದಗಳನ್ನು ಮೇಜಿನ ಸುತ್ತ ಕುಳಿತು ಚರ್ಚಿಸಿ ತೀರ್ಮಾನಿಸಿಕೊಳ್ಳಬೇಕು ಎಂದು ಹೇಳುವ 'ಇಂಡಿಕೇಟು ಕಾಂಗ್ರೆಸ್' ಈ ರೀತಿ ಆಕ್ರಮಣ ಮನೋವೃತ್ತಿ ತೋರುವುದು ಆದರ ಘನತೆಗೆ ತಕ್ಕುದಲ್ಲ.

ಮುಖಾಮುಖಿ ಭೇಟಿಯಿಂದ ತೀರ್ಮಾನವಾಗುವ ವಿವಾದ ಇದಲ್ಲ. ಅದು ಆ ಘಟ್ಟವನ್ನು ಏರಿ ನಿಂತಿದೆ.

ಆದುದರಿಂದ ನ್ಯಾಯಾಲಯಕ್ಕೆ ಹೋಗಬೇಕು; ಅದನ್ನು ಬಿಟ್ಟು ವಿಜಯೋನ್ಮಾದ-ಉತ್ಸಾಹಗಳಿಂದ ತಮ್ಮನ್ನು ತಾವೇ ನುರಿತು ಆಕ್ರಮಣ ಮನೋವೃತ್ತಿ ತೋರುವುದೆಂದರೆ, ಶ್ರೀಸಾಮಾನ್ಯರೂ ವಿವಾದಗಳನ್ನು ತೀರ್ಮಾನಿಸಲು ನ್ಯಾಯ--ಕಾನೂನುಗಳನ್ನು ತಮ್ಮ ಕೈಯಲ್ಲೇ ತೆಗೆದುಕೊಂಡರೆ ದೇಶವಿಡಿ ಪಚ್ಚಮ ಬಂಗಾಳವಾಗದುಳಿದೀತೆ?

ನಾಯಕರೆನಿಸಿಕೊಂಡವರನ್ನು ಇತರರೂ ಅನುಸರಿಸುವುದು ಅನೂಚಾನವಾಗಿ ನಡೆದು ಬಂದ ಸಂಪ್ರದಾಯ. ಹಿರಿ ಇಂಡಿಕೇಟ್ ನಾಯಕಮಣಿಗಳನ್ನೇ ಮರಿ ಇಂಡಿಕೇಟ್ ನಾಯಕಮಣಿಗಳೂ ಅನುಸರಿಸತೊಡಗಿದರೆ, ನ್ಯಾಯ ಕಾನೂನುಗಳೆಲ್ಲಿ ಉಳಿದಾವು?

ಆನೆ ನಡೆದದ್ದೇ ದಾರಿ; ದೊಡ್ಡವರು ತಪ್ಪು ಮಾಡಿದರೂ ಅದನ್ನು ಆಡಿಕೊಳ್ಳುವರಿಲ್ಲ-ಇದು ನಿಜ.

ಗುಲಾಬಿಗೆ ಸುಂದರ—ಸುಕೋಮಲ-ಸುಗಂಧಮಯ ಹೂವನ್ನು ನೀಡಿದ ಭಗವಂತನೇ ಕಠೋರ ಕರ್ಕಶ ಮುಳ್ಳನ್ನೂ ಕೊಟ್ಟಿದ್ದಾನೆ ಇದನ್ನು ದೂರುವ ಆಡಿಕೊಳ್ಳುವ ಗೊಡವೆ ಯಾರೂ ಇಟ್ಟು ಕೊಂಡಿಲ್ಲ.

ಇದು ಭಗವಂತನ ಲೀಲೆ ಎಂದು ತೃಪ್ತಿ ಪಡುತ್ತಾರೆ ಜನರು

ಇಂಡಿಕೇಟಿನ ಹಿಂದೆ ಅಪಾರ ಶಾಸಕರ ಜಾಲ ಹರಡಿದ್ದು ನಿಜ-ಅವರು ಯಾವ ಆಶಯದಿಂದ ಹಿಂದೆ ನಿಂತರು ಎಂಬ ವಿಚಾರ ಬೇರೆ-ಈ ವರ್ತಾರಂಭದಲ್ಲಿ ಧೈರ್ಯ ವಿಜಯ ಗಳಿಸಿದ್ದರೆಂಬುದೂ ಸತ್ಯ.

ಅವರು ಮಾಡಿದ್ದೆಲ್ಲ ನ್ಯಾಯವಾಗುವುದಾದರೆ ಗೆದ್ದವರದ್ದೇ ಸತ್ಯವೆಂದು ಒಪ್ಪಿಕೊಳ್ಳಬೇಕಾಗುತ್ತದೆ.

ಇದನ್ನು ಒಪ್ಪುವುದಾದರೆ, ದೊಣ್ಣೆಯಿರುವವರು ಮಾತ್ರ ಬದುಕುವ ಅಧಿಕಾರ ಹೊಂದಿದವರೆಂದು ಘೋಷಿಸಬೇಕಾಗುತ್ತದೆ.

ಪ್ರಜಾಪ್ರಭುತ್ವ—ಪ್ರಜಾ ಸ್ವಾತಂತ್ರ್ಯ ಒಂದು ಗುಂಪಿನ ಸ್ವೈರ ವೃತ್ತಿಗೆ ಪರಮೋಪಕವಾಗುವುದಾದರೆ, ಲೋಕ ತಂತ್ರವೆಂಬ ಹೆಸರು ಅದಕ್ಕೆ ಅಭಾಸಕರವಾಗುತ್ತದೆ

ಇಂಡಿಕೇಟು ಆಕಳು—ಕರು ಚಿಹ್ನೆಯನ್ನು ಬಳಸಿ ಅದ್ಭುತ ವಿಜಯ ಗಳಿಸಿದ್ದು ಇನ್ನೀಗ ಅದು ಜೋಡೆತ್ತಿನ ಚಿಹ್ನೆಯನ್ನು ಉಪಯೋಗಿಸುವುದಿಲ್ಲ

ನ್ಯಾಯಾಲಯವು ತನಗೆ ಸೇರಿನ್ದೆಂಬ ಚಿಹ್ನೆಯನ್ನು ನಾಶ ಮಾಡಲು ಅದು ಚುನಾವಣಾಧಿಕಾರಿಗಳಿಗೆ ಮನವಿಮಾಡಿಕೊಳ್ಳುತ್ತದೆ.

ಅಂದರೆ, ಜೋಡೆತ್ತಿನ ಯುಗ ಮುಗಿಯಿತು.

ಜೋಡೆತ್ತಿನ ಗುರುತಿಗೊಂದು ಅರ್ಥವಿತ್ತು—ಕೇಂದ್ರ—ರಾಜ್ಯಗಳನ್ನು ಜೋಡಿಸುತ್ತುಗಳು ಸಂಕೇತಿಸುತ್ತವೆ. ಇವೆರಡರ ಸಂಬಂಧ ನೊಗ. ಇವೆರಡೂ ಏಕಸಮವಾಗಿ ಮುಂದುವರಿಯ ಬೇಕೆನ್ನುವ, ಹೆಗಲಿಗೆ ಹೆಗಲು ನೀಡಿ ದೇಶವನ್ನು ಹಸನು ಮಾಡಬೇಕೆನ್ನುವ ಸದಾಶಯ.

ಇನ್ನೀಗ ಆಕಳು—ಕರುವಿನ ಯುಗ ಆರಂಭವಾಗಿದೆ. ಆಕಳು-ಕರುಗಳೂ ಕೇಂದ್ರ—ರಾಜ್ಯಗಳನ್ನು ಸಂಕೇತಿಸುತ್ತವೆ.

ಜೋಡೆತ್ತಿಗೂ ಆಕಳು—ಕರುವಿಗೂ ಒಂದು ಅಂತರ.

ಜೋಡೆತ್ತುಗಳು ಒಂದನ್ನೊಂದು ಹೊದಿಕೊಂಡು ನಡೆಯುತ್ತವೆ.

ಆಕಳು ಕರುವಿಗೆ ಹಾಲೂಡುತ್ತದೆ, ಕರು ಆಕಳ ಹಾಲು ಹೀರುತ್ತದೆ. ಒಂದು ದಾನ—ಇನ್ನೊಂದು ದಾನಪಾತ್ರ. ಕೊಡುವ ಕೈ ಮೇಲು, ಕೊಳ್ಳುವ ಕೈ ಕೆಳಗು

'ಬಲಿಷ್ಠ ಕೇಂದ್ರ—ದುರ್ಬಲ ರಾಜ್ಯ' ತತ್ವದ ಸಂಕೇತವಿದೆ?

●●

ಭಾರತೀಯ ಕ್ಷಯರೋಗ ನಿರೋಧ ಸಮಿತಿ, ನವದೆಹಲಿ

22ನೆಯ ಟಿ ಬಿ ಮೊಹರು ಮಾರಾಟ ಚಳವಳಿ

ಕ್ಷಯರೋಗದ ಕ್ರಿಮಿಗಳನ್ನು ನಾಶಪಡಿಸಲಾದೀತೆ?

ಕ್ಷಯರೋಗದ ಅಣು ಮೈಕ್ರೊಸ್ಕೋಪಿನ ಮೂಲಕವಲ್ಲದೆ ಕಾಣಿಸದು. ಕಫವನ್ನು ಕುದಿಸುವುದರಿಂದ ಮತ್ತು ಬಟ್ಟೆಬರೆಗಳನ್ನು (ಹೊದಿಕೆ, ತಲೆದಿಂಬಿನ ಕವರ್, ಕರವಸ್ತ್ರ ಇತ್ಯಾದಿ) ಅತಿ ಶಾಖಕೊಟ್ಟು ಹವೆಯಿಂದ ಸುಲಭವಾಗಿ ಕೊಲ್ಲಬಹುದು. ಸೂರ್ಯನ ನೇರ ಪ್ರಕಾಶವು ಅಣುಗಳನ್ನು ಶೀಘ್ರ ನಾಶಪಡಿಸುತ್ತದೆ. ಅಣು ಕೆಲವು ನೇಳೆ ಕತ್ತಲೆಯಲ್ಲಿ ತೇವ ಮತ್ತು ಹೊಲಸಾದ ವಾತಾವರಣದಲ್ಲಿ ದಿನಗಟ್ಟಲೆ ಜೀವ ದಿಂದಿರುತ್ತದೆ. ಅದರ ಮುಖ್ಯ ಸೋಂಕಣೆಯ ಮೂಲವೆಂದರೆ ಕ್ಷಯರೋಗಿಯ ಕೆಮ್ಮು ಮತ್ತು ಉಗುಳು. ಇದು ವಿಶೇಷತಃ ಸಣ್ಣ ಮಕ್ಕಳು ಯಾರ ಆರೈಕೆಯಲ್ಲಿ ದ್ದಾರೆ-ಉದಾಹರಣೆಗಾಗಿ ತಂದೆ ತಾಯಿಗಳು, ಅಜ್ಜ ಅಜ್ಜಿಯರು, ಉಪಾಧ್ಯಾಯರು, ನರ್ಸುಗಳು ಮತ್ತು ಇತರರಲ್ಲಿ ಈ ರೋಗದ ಚಿಹ್ನೆಗಳಿದ್ದರೆ ಮಕ್ಕಳಿಗೆ ತುಂಬಾ ಅಪಾಯಕಾರಿ. ಅವರು ಕ್ರಮವಾದ ವೈದ್ಯಕೀಯ ಪರೀಕ್ಷೆಯನ್ನು ಮುಖ್ಯವಾಗಿ ಕೆಮ್ಮು ಇದ್ದರೆ ಮಾಡಿಸಿಕೊಳ್ಳಬೇಕು.

ಸಮೀಪದ ಕ್ಲಿನಿಕನ್ನು ಸಂದರ್ಶಿಸಿರಿ ಮತ್ತು
ವೈದ್ಯಕೀಯ ಪರೀಕ್ಷೆ ಮಾಡಿಸಿಕೊಳ್ಳಿರಿ



ಟಿ ಬಿ ಮೊಹರುಗಳನ್ನು ಪಡಕೊಳ್ಳುವುದರ ಮೂಲಕ ನಿಮ್ಮ ರಾಜ್ಯದ ಕ್ಷಯರೋಗ ನಿರೋಧ ಸಮಿತಿಗೆ ಸಹಾಯ ಮಾಡಿರಿ. ಮೊಹರು ಮಾರಾಟದ ಸಂಗ್ರಹವು ಅದರ ಕೈಗಳನ್ನು ಬಲಪಡಿಸಲು ಸಹಾಯ ಮಾಡುತ್ತದೆ. ಇದರಿಂದ ನಿಮ್ಮ ರಾಜ್ಯದ ಟಿ ಬಿ ಸಮಿತಿಯು ಕ್ಷಯರೋಗದಿಂದ ಬಳಲುವವರಿಗೆ ಸಹಾಯ ಮಾಡುತ್ತದೆ. ಒಂದು ಮೊಹರಿನ ಬೆಲೆ ಬರೇ 10 ಪೈಸೆ ಮಾತ್ರ.

ಮೊಹರುಗಳು ಸಿಗುವ ಸ್ಥಳಗಳು: ದ. ಕ. ಜಿಲ್ಲಾ ಟಿ ಬಿ ಎಸೋಸಿಯೇಷನ್, ಮಂಗಳೂರು, ಟಿ ಬಿ ಆಸ್ಪತ್ರೆಗಳು, ಟಿ ಬಿ ಕ್ಲಿನಿಕ್‌ಗಳು ಮತ್ತು ಇತರ ಏಜನ್ಸಿಗಳು.

ಸ್ಥಳದಾನಿಗಳು:
Metallica Works Private Ltd., Bombay

ಸ್ಕೌಟ್ ಮತ್ತು ಗೈಡ್ ಸಪ್ತಾಹ

ಸ್ಕೌಟ್ ಮತ್ತು ಗೈಡ್ ಸಪ್ತಾಹದ ಆಂಗವಾಗಿ ಉಡುಪಿ ಮೊರ್ಡರ್ನ್ ಪ್ರೈಮರಿ ಶಾಲಾ ಆವಾರದಲ್ಲಿ ತಾ.೨೧ರಂದು ಶ್ರೀಕೃಷ್ಣ ಮತ್ತು ವಿಶೇಷಾನಂದ ಕಬ್ಸ್ ದಳಗಳಿಗೆ ದೀಕ್ಷೆ ಕೊಡುವ ಸಮಾರಂಭವು ಶ್ರೀ ಎ. ಜೆ. ಆಲ್ಬೆಯವರ ಅಧ್ಯಕ್ಷತೆಯಲ್ಲಿ ಯಥಾನಿಧಿಯಾಗಿ ಜರಗಿತು. ಶ್ರೀ ಕೆ. ಜನಾರ್ಧನ ರಾಯರಿಂದ ಸ್ವಾಗತ, ಶ್ರೀ ಪಿ. ಶ್ರೀಪತಿ ರಾವ್, ಶ್ರೀ ಮು. ಗೋಪಾಲಕೃಷ್ಣ ರಾವ್ ಇವರಿಂದ ಸಂದರ್ಭೋಚಿತ ಭಾಷಣಗಳಾದುವು. ಅಧ್ಯಕ್ಷರ ಭಾಷಣದ ಬಳಿಕ ಶ್ರೀ ನಾರಾಯಣ ಭಟ್ಟರು ಧನ್ಯವಾದವಿತ್ತರು.

"ಪ್ರಾವ್ದ" ವರ್ಣಿಸುತ್ತದೆ—

ಮಿಲಿಯಗಟ್ಟಲೆ ಜನರ ದುರಂತ ದುಸ್ಥಿತಿ

.....ಅವರು ಸಾಲುಗಟ್ಟಿಕೊಂಡು ಕಳೆಗುಂದಿ, ಮೌನವಾಗಿ ನಡೆದುಬರುತ್ತಲೇ ಇರುತ್ತಾರೆ. ಬರಿಗಾಲುಗಳಿಂದ ಕೆಸರನ್ನು ತುಳಿಯುತ್ತಿರುವ ಶಬ್ದ ಮಾತ್ರ ಅಷ್ಟೇ ಕೇಳಿಸುತ್ತದೆ. ತೀರಾ ಬಳಲಿರುವ ಮಕ್ಕಳು, ರೋಗಿಷ್ಠರು, ಮುದುಕರು ಮುಂತಾನವರನ್ನು, ನಡೆಯ ಬಲ್ಲವರು ಎತ್ತಿಕೊಂಡಿರುತ್ತಾರೆ. ಮಳೆಯ ವಿರುದ್ಧ ರಕ್ಷಿಸಿಕೊಳ್ಳಲು ಅವರು ತಮ್ಮ ತಲೆಗಳಿಗೆ ಚಿಂದಿ ಬಟ್ಟೆಗಳನ್ನು ಕಟ್ಟಿಕೊಂಡಿರುತ್ತಾರೆ. ಕೆಲವರು ತಮ್ಮ ಕೈಗಳಲ್ಲಿಯೇ ಊಟದ ಡಬ್ಬಿಗಳನ್ನೂ ತರುತ್ತಾರೆ. ಈ ಜನಜಂಗುಳಿಯ ಮೌನವನ್ನು ಆಗಾಗ್ಗೆ ಯಾವುದಾದರೂ ಮಗುವಿನ ರೋದನೆಯು ಭೇದಿಸುತ್ತಿರುತ್ತದೆ. ಈ ಪ್ರಯಾಣಿಕರಲ್ಲಿನೇಕರ ಪಾದಗಳು ಗಾಯಗೊಂಡು, ರಕ್ತ ಹರಿಯುತ್ತಿರುತ್ತದೆ. ಅವರಲ್ಲಿ ಅನೇಕ ಮಂದಿ ರೋಗಿಷ್ಟರಿಗೆ ಸಾಂತಿ-ಭೇದಿ (ಕಾಲರಾ). ಆವರು ಮಾರ್ಗದಲ್ಲಿಯೇ ಸಾಯುತ್ತಿರುವಾಗ, ಹಾಗೆ ಮಡಿದವರನ್ನು ಹೂತಿಡುವವರು ಯಾರೂ ಇರರು. ರಣಹದ್ದುಗಳೂ, ಕಾಗೆಗಳೂ ಹೊಸ ಹೆಣಕ್ಕಾಗಿ ಕಾಯುತ್ತ ಈ ರಸ್ತೆಗಳ ಮೇಲೆ ಹಾರಾಡುತ್ತಿರುತ್ತವೆ. ಕೊಳೆತು ನಾತ ಬಡಿಯುತ್ತಿರುವ ಹೆಣಗಳ ಬಳಿಯಲ್ಲಿ ನಡೆದುಹೋಗುತ್ತಿರುವಾಗ ಜನರು ತಮ್ಮ ಬಟ್ಟೆಗಳಿಂದ ಮೂಗುಗಳನ್ನು ಮುಚ್ಚಿಕೊಳ್ಳುತ್ತಿರುತ್ತಾರೆ. ಈ ಮನುಷ್ಯ ಪ್ರವಾಹವು ಹಗಲಾಗಲೀ, ರಾತ್ರೆಯಾಗಲೀ ಎಂದೂ ನಿಲ್ಲದೆ ಸಾಗುತ್ತಲೇ ಇರುತ್ತದೆ.

'ಟೈಂ' ಪತ್ರಿಕೆಯ ಸುದ್ದಿಗಾರರು ಪೂರ್ವ ಪಾಕಿಸ್ತಾನ ಮತ್ತು ಭಾರತ ದೇಶಗಳ ನಡುವಣ ಗಡಿಯಲ್ಲಿ ಕಂಡುದನ್ನು ವಿವರಿಸಿರುವುದು ಹೀಗೆಯೇ. ಅವರು ಬರೆದಿರುವುದೆಲ್ಲವೂ ಪೂರ್ವ ಪಾಕಿಸ್ತಾನದಿಂದ ಬರುತ್ತಿರುವ ನಿರಾಶ್ರಿತ ಜನರ ವಿಷಯವೇ.

ಈಗ ಅನೇಕ ತಿಂಗಳುಗಳಿಂದಲೂ ಪ್ರತಿದಿನವೂ ನಿರಂತರವಾಗಿ ಹತ್ತಾರು ಸಾವಿರ ಜನ ನಿರಾಶ್ರಿತರು ಭಾರತಕ್ಕೆ ಬರುತ್ತಲೇ ಇದ್ದಾರೆ. ಕೆಲವು ದಿನಗಳ ಹಿಂದೆ ಭಾರತದ ಭೂಪ್ರದೇಶವನ್ನು ತಲಪಿದ್ದ ನಿರಾಶ್ರಿತರ ಸಂಖ್ಯೆಯು ತೊಂಬತ್ತು ಲಕ್ಷವಾಗಿತ್ತು. ಈಗ ಆದು ಕೋಟಿ ಸಂಖ್ಯೆಯನ್ನು ವಿೂರಿರಬಹುದು. ಆವರಲ್ಲಿ ಅನೇಕ ಜನರು— ಸುಮಾರು ಎಪ್ಪತ್ತು ಲಕ್ಷ ಮಂದಿ, ಪಶ್ಚಿಮ ಬಂಗಾಲ ರಾಜ್ಯದಲ್ಲಿ ವಸತಿ ಪಡೆದಿದ್ದಾರೆ. ಸುಮಾರು ಹದಿನೈದು ಲಕ್ಷ ಜನರಿಗೆ ತ್ರಿಪುರ ಒಕ್ಕೂಟ ಪ್ರದೇಶಲ್ಲಿಯೂ, ಮಿಕ್ಕವರಿಗೆ ಮೇಘಾಲಯ, ಅಸ್ಸಾಮ್ ಮತ್ತು ಬಿಹಾರ ರಾಜ್ಯಗಳಲ್ಲಿಯೂ ವಸತಿ ವ್ಯವಸ್ಥೆಯನ್ನು ಮಾಡಲಾಗಿದೆ.

ಭಾರತದ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ವರದಿಗಳು ತಿಳಿಸುವ ಪ್ರಕಾರ, ಪೂರ್ವ ಪಾಕಿಸ್ತಾನದ ನಿರಾಶ್ರಿತರಿಗಾಗಿ ದೇಶದಲ್ಲಿ ಸುಮಾರು ಆರುಸೂರು ಶಿಬಿರಗಳನ್ನು, ವಸತಿಗಳನ್ನು ಒದಗಿಸಲಾಗಿದೆ. ಈ ಶಿಬಿರಗಳಲ್ಲಿ ಅತ್ಯಂತ ತೀವ್ರ ಪರಿಸ್ಥಿತಿಯುಂಟಾಗಿದೆ. ಜನಸಂದಣಿ ಹೆಚ್ಚಿ, ವೈದ್ಯಕೀಯ ಸಿಬ್ಬಂದಿಯು ಕೊರತೆ, ಕೊಳೆಕು ಪರಿಸ್ಥಿತಿ, ಆಹಾರದ ಕೊರತೆ ತತ್ಪರಿಣಾಮವಾಗಿ ಅನೇಕ ಮಂದಿ ನಿರಾಶ್ರಿತರು ಸಾಂಕ್ರಾಮಿಕ ರೋಗಗಳಿಗೂ, ಮರಣಕ್ಕೂ ತುತ್ತು.

ಶಿಬಿರಗಳಲ್ಲಿ ಬಾಳುತ್ತಿರುವವರಿಗೆ ಮಳೆಗಾಲವು ನೈಸರ್ಗಿಕ ಉಪದ್ರವ. 'ಟೈಂ' ಪತ್ರಿಕೆಯ ಸುದ್ದಿಗಾರರು ತಿಳಿಸಿರುವ ಪ್ರಕಾರ, ಈ ಮಳೆಗಾಲದಲ್ಲಿ ಅನೇಕ ಶಿಬಿರಗಳು ಕೆಸರಿನ ಕೆರೆಗಳಾಗಿ ಮಾರ್ಪಟ್ಟುವು.

ಕರೀಮ್ ನಗರಕ್ಕೆ ಅನತಿದೂರದ ನಿರಾಶ್ರಿತ ಶಿಬಿರವೊಂದಕ್ಕೆ ಭೇಟಿಕೊಟ್ಟಿದ್ದ ಸುದ್ದಿಗಾರರೊಬ್ಬರು ತಮ್ಮ ಸ್ವಾನುಭವನನ್ನು "ಲಫಿಗಾರೊ" ಪತ್ರಿಕೆಯಲ್ಲಿ ವಿವರಿಸಿದ್ದಾರೆ. ವಸತಿಯ ಅಭಾವದಿಂದ ಅಲ್ಲಿ 64,000 ಜನರಿಗೆ ಸಾಧ್ಯವಾದ ಹೈನು ಕೃಷಿಕ್ಷೇತ್ರದಲ್ಲಿ ತಾತ್ಕಾಲಿಕ ವಸತಿ ವ್ಯವಸ್ಥೆ ಮಾಡಲಾಗಿದೆಯೆಂದೂ, ಆಲ್ಲಿನ ಜಾವಣಿಯ ಕೆಳಗಡೆ ನಗಣಿಯಿಂದ ಸಾರಿಸಲಾದ ಸಿಮೆಂಟು ನೆಲದ ಮೇಲೆ ಪ್ರತಿಚಾವಣಿಯ ಕೆಳಗೂ ಐದು ಸಾವಿರ ಜನರು ಮಲಗುತ್ತಾರೆಂದೂ ತಿಳಿಸಿದ್ದಾರೆ. ಪ್ರತಿ ದಿನವೂ ಸಾಂತಿ-ಭೇದಿಯಿಂದ ಇಪ್ಪತ್ತು ಜನರು ಇಲ್ಲಿ ಸಾಯುತ್ತಾರೆಂದು ಈ ಶಿಬಿರದ ಮೇಲ್ವಿಚಾರಕರಾದ ನಿವೃತ್ತಾಧಿಕಾರಿ ಬಾರ್ವ ಅವರು ತಿಳಿಸಿದ್ದಾರೆ. "ನಮಗೆ ಆಹಾರ, ಔಷಧಗಳು ಕಂಬಳಿಗಳು—ಇವೆಲ್ಲದರ ಕೊರತೆ ಇದೆ. ಈ ಶಿಬಿರಕ್ಕೆಲ್ಲ ಮೂರೇ ಮಂದಿ ಡಾಕ್ಟರುಗಳಿದ್ದಾರೆ"—ಎಂದು ಅವರು ತಿಳಿಸಿದ್ದಾರೆ.

ಶಿಬಿರಗಳಲ್ಲಿ ನಿರಾಶ್ರಿತರ ಪರಿಸ್ಥಿತಿಯು ಹೀಗೆ ತುಂಬಾ ವಿಷಾದಕರವಾಗಿದೆಯೂದರೂ ಅವರು ಎಲ್ಲಿಂದ ಓಡಿ ಬಂದಿದ್ದಾರೆಯೋ ಅಲ್ಲಿ ಪರಿಸ್ಥಿತಿಗಳು ಇನ್ನೂ ಭಯಂಕರವಾಗಿದೆಯೆಂದು 'ಟೈಂ' ಪತ್ರಿಕೆಯು ಬರೆದಿದೆ. ಪಾಕಿಸ್ತಾನಿ ಸೈನಿಕರಿಂದ ತಮ್ಮ ಜನರ ಮೇಲೆ ನಡೆಯುತ್ತಿರುವ ಭಯಂಕರವಾದ ಕೊಲೆ, ಹಿಂಸೆ ಮತ್ತು ಇನ್ನಿತರ ಕ್ರೂರ ಜರ್ಮೆಗಳ ನೆನಪು ಅವರಲ್ಲಿನ್ನೂ ಹೊಸದಾಗಿಯೇ ಉಳಿದಿದೆ.

ಹಿಂದೂಗಳು ಮಾತ್ರವಷ್ಟೇ ಅಲ್ಲದೆ, ಪಾಕಿಸ್ತಾನಿ ಸೈನಿಕರ ಮತೀಯರೇ ಆದ ಮುಸ್ಲಿಮರೂ ಅಲ್ಲಿ ಪಾಸವಿಕ ಅತ್ಯಾಚಾರಗಳಿಗೆ ಗುರಿಯಾಗಿದ್ದಾರೆಂದು ಭಾರತದ 'ಹಿಂದೂಸ್ತಾನ್ ಟೈಂಸ್' ಪತ್ರಿಕೆಯು ವರದಿಮಾಡಿದೆ.

ಸೋವಿಯೆತ್ ಸರಕಾರವು ಮಾನವೀಯ ವಿಚಾರಗಳಿಂದ ಮಾರ್ಗದರ್ಶನ ಪಡೆದು, ವಿಪತ್ಕರ ಪರಿಸ್ಥಿತಿಗೆ ಗುರಿಯಾಗಿದ್ದ ಲಕ್ಷಗಟ್ಟಲೆ ಸಂಖ್ಯೆಯ ಪೂರ್ವ ಪಾಕಿಸ್ತಾನ ನಿರಾಶ್ರಿತರಿಗೆ ಆಹಾರವಸ್ತ್ರಾದಿಗಳಿಸಿದೆಯೆಂಬುದೂ, ಹಾಗೆ ನಿರಂತರವಾಗಿ ಒದಗಿಸುತ್ತಲೇ ಇರುತ್ತದೆಯೆಂಬುದೂ ಸುವಿದಿತ ವಿಷಯವೇ. ಇತ್ತೀಚೆಗೆ 'ರಜ್ವೋಲ್ನಯಿ' ಎಂಬ ಸೋವಿಯೇತ್ ಮೋಟರು-ನೌಕೆಯು ಪೂರ್ವ ಪಾಕಿಸ್ತಾನದ ನಿರಾಶ್ರಿತುಗಾಗಿ ಆಕ್ಕಿಯ ಹೊಸ ಕಂತಿನೊಂದಿಗೆ ಕಲಕತ್ತಾ ಬಂದರಿಗೆ ಆಗಮಿಸಿತು. ಸೋವಿಯೆತ್ ಒಕ್ಕೂಟದಿಂದ ಬಂದ ಆಹಾರದ 'ಪಾರ್ಸೆಲು'ಗಳನ್ನು ಭಾರತೀಯ 'ರೆಡ್‌ಕ್ರಾಸ್' ಸಂಸ್ಥೆಯ ಪ್ರತಿನಿಧಿಗಳಿಗೆ ಒಪ್ಪಿಸುವ ಸಮಾರಂಭವು ಕಲಕತ್ತೆಯಲ್ಲಿ ಆಕ್ಟೋಬರ್ ದಿನಾಂಕ 2ರಂದು ನಡೆಯಿತೆಂದು ಭಾರತದ 'ಪೇಟ್ರಿಯಿಟ್' ಪತ್ರಿಕೆಯು ವರದಿಮಾಡಿದೆ. ಅಕ್ಕಿ, ಸಕ್ಕರೆ ಮತ್ತು ಬಟ್ಟೆಗಳನ್ನು ನಿರಾಶ್ರಿತರಿಗೆ ಹಂಚಲಾಗುವುದು. ಬಾಲಘಾರ್ವನಾಯ ನಿರೋಧಕ ಲಸಿಕೆಯನ್ನೂ ಸಹ ಭಾರಿ ಪ್ರಮಾಣದಲ್ಲಿ ಸೋವಿಯೆತ್ ಒಕ್ಕೂಟದಿಂದ ರವಾನಿಸಲಾಗಿದೆ.

ನಿರಾಶ್ರಿತರ ಪಾಡನ್ನು ಉಸಶಮನಗೊಳಿಸುವುದಕ್ಕಾಗಿ, ಭಾರತ ಸರಕಾರವು ಅನೇಕ ಕಾರ್ಯೂಚರಣೆಗಳನ್ನು ಕೈಗೊಂಡಿದೆ. ಪ್ರಚಲಿತ ವಿತ್ತ ವರ್ಷದಲ್ಲಿ ಈ ನಿರಾಶ್ರಿತರ ನಿರ್ವಹಣೆಯು ಸಲುವಾಗಿ 100 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ನಿಗದಿಗೊಳಿಸಲಾಗಿದೆ. ಆದರೆ ಈಗಿನ ಪ್ರಮಾಣದಲ್ಲಿ— ಪ್ರತಿದಿನವೂ ಸುಮಾರು ಮೂವತ್ತು ಸಾವಿರ ಜನರು!—ನಿರಾಶ್ರಿತರು ಭಾರತವನ್ನು ಪ್ರವೇಶಿಸುತ್ತಿರುತ್ತಾರಾದ ಪಕ್ಷದಲ್ಲಿ, ಮುಂದಿನ ಆರು ತಿಂಗಳುಗಳ ಕಾಲಕ್ಕೆ ಮಾತ್ರವೇ ಸುಮಾರು 400 ಕೋಟಿ ರೂಪಾಯಿಗಳ ಆವಶ್ಯಕತೆಯುಂಟಾಗುತ್ತದೆಯೆಂದು ಭಾರತ ಸರಕಾರದ ಸುದ್ದಿ—ಸಮಾಚಾರ ಕಾರ್ಯಾಲಯವು ವರದಿ ಮಾಡಿದೆ.

ಪೂರ್ವ ಪಾಕಿಸ್ತಾನದಿಂದ ಬಂದ ಮಿಲಿಯಗಟ್ಟಲೆ ಜನ ನಿರಾಶ್ರಿತರು ನಿಜವಾಗಿಯೂ ಅತ್ಯಂತ ದುರವಸ್ಥೆಯ ಬಾಳಿಗೆ ಸಿಕ್ಕಿದ್ದಾರೆ. ಅವರ ಈ ದುರವಸ್ಥೆಯು, ಜಗತ್ತಿನ ಪ್ರಗತಿಶೀಲ ಸಾರ್ವಜನಿಕರಿಗೆಲ್ಲರಿಗೂ ಕಳವಳಕ್ಕೆ ಕಾರಣವಾಗದಿರಲಾರದು. ಮಿಲಿಯಗಟ್ಟಲೆ ನಾಗರಿಕರು ತಮ್ಮ ಆಸ್ತಿ ಪಾಸ್ತಿಗಳನ್ನು, ಭೂಮಿ ಕಾಣಿಗಳನ್ನೂ ತ್ಯಜಿಸಿ, ನೆರೆನಾಡಿನಲ್ಲಿ ಆಶ್ರಯವನ್ನರಸುವಂತೆ ಅವರನ್ನು ಬಲತ್ಕಾರಕ್ಕೆ ಗುರಿಪಡಿಸಿದ ಪಾಕಿಸ್ತಾನಿ ಆಡಳಿತ ಪಲಯಗಳ ಚರ್ಯೆಗಳು ಎಲ್ಲ ಕಡೆಯೂ ಕ್ರೋಧವನ್ನು ಕೆರಳಿಸಿದೆ. ಈ ಕಾರ್ಯೂಚರಣೆಗಳನ್ನು ಯಾವ ರೀತಿಯಿಂದಲೂ ಸಮರ್ಥಿಸಲಾಗದು. ಮಿಲಿಯಗಟ್ಟಲೆ ನಿರಪರಾಧಿ ಜನರು ಇಂದು ಅನುಭವಿಸುತ್ತಿರುವ ತೊಂದರೆ, ದುರವಸ್ಥೆಗಳ ಬಗೆಗೆ ಜಗತ್ತಿನ ಜನತೆಯು ಉದಾಸೀನರಾಗಿ ಉಳಿದಿರಬಾರದು. ನಿರಾಶ್ರಿತರು ತಮ್ಮ ಸ್ವಸ್ಥಳಗಳಿಗೆ ವಾಪಾಸು ಹೋಗಲು ಅನುಕೂಲವಾಗುವಂತೆ ಪರಿಣಾಮಕಾರಿ ಚರ್ಯೆಗಳನ್ನು ಪಾಕಿಸ್ತಾನಿ ಆಡಳಿತ ಪಲಯಗಳು ಕೂಡಲೆ ಕೈಗೊಳ್ಳಬೇಕೆಂದೂ, ನಿರಾಶ್ರಿತರು ತಮ್ಮ ಸ್ವದೇಶದಲ್ಲಿ ತಮ್ಮ ಶಾಂತಿಯುತವಾದ ನೆಮ್ಮದಿಯ ಜೀವನವನ್ನೂ, ಕೆಲಸ ಕಾರ್ಯಗಳನ್ನೂ ನಡೆಸಿಕೊಂಡಿರಲು ಅದು ಅವರಿಗೆ ಯೋಗ್ಯವಾದ ಭರವಸೆಯನ್ನು ನೀಡಬೇಕೆಂದೂ ಜಗತ್ತಿನ ಜನತೆಯು ನಿರೀಕ್ಷಿಸಬೇಕು.

● ●

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
137 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೇಯರ್‌ಮೆನ್.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ
H. R. C. No 48/1971

ಶಾರದಾ ಬ್ಯಾ —ಅರ್ಜಿದಾರಳು
ಮತ್ತು
ಸುಂದರ ಶೆಟ್ಟಿ ಕೂಡ 2ಜನರು—ಎದ್ರಿರುಯವರೊಳಗೆ

2ನೆ ಎದ್ರಿ ಡೆನ್ನಿಸ್ ಪುರ್ಟಾಡೋ
ರುಜಾರಿಯೋ ಪುರ್ಟಾಡರ ಮಗ
ತೆಂಕನಿಡಿಯೂರು ಗ್ರಾಮದ ತೊಟ್ಟಮಿನಲ್ಲಿ
ರ್ವರಿಗೆ ತಿಳಿಯಪಡಿಸುವುದು. ಅರ್ಜಿದಾರಳು
ಕಟ್ಟಡ ಸ್ವಾಧೀನತೆಗೆ ಮಾಡಿದ ಮೇಲಿನ ಅರ್ಜಿಯು ತಾ. 16-12-71ಕ್ಕೆ ಯಿಟ್ಟರುವುದರಿಂದ
ನಿನಾದರೂ ಆಕ್ಷೇಪ ಇದ್ರೆ ಆ ದಿವ್ಸ 11ಗಂಟೆಗೆ
ಕೋರ್ಟಿನಲ್ಲಿ ಹಾಜರಾಗಿ ಹೇಳಿಕೊಳ್ಳತಕ್ಕದ್ದು.
ಇಲ್ಲವಾದ್ರೆ ನಂಬ್ರ— ವಿಕಪಕ್ಷವಾಗಿ ತೀರ್ಮಾನಿಸಲಾಗುವುದು.

(ಕೋರ್ಟು ಹ್ಕುಂ ಪ್ರಕಾರ)
B. Yogishwara Holla
Advocate for Petitioner,
ಉಡುಪಿ, 18—11—71.

FORM—A

THE PUTTUR CO-OPERATIVE TOWN BANK LTD. No. 181 PUTTUR (S. K.)

BALANCE SHEET AS ON 30th JUNE, 1971

30-6-1970	CAPITAL AND LIABILITIES		30-6-1971		30-6-1970	PROPERTY AND ASSETS		30-6-1971
Rs. Ps.			Rs. Ps.	Rs. Ps.	Rs. Ps.			Rs. Ps.
	1. CAPITAL:—					1. CASH		
	(i) Authorised Capital					In hand, and with Reserve Bank, State Bank of India, State Co-op. Bank and Central Co-op. Banks	...	64,255 - 45
	49,900 A. Class Shares of Rs. 10/- each							
	4,000 B. Class Shares of Rs. 0-25 each				51,360 - 17			
	Rs. 5,00,000					2. BALANCE WITH OTHER BANKS		
	(ii) Subscribed and paid up Capital	)			313 - 37	(i) Current Deposits ...	...	310 - 99
	18999 A. Class shares of Rs. 10/- each	)			12,299 - 40	(ii) Savings Bank Deposits	...	404 - 38
	2257 B. Class shares of Rs. 0-25 each	)...		1,90,554 - 25		(iii) Fixed Deposits in Central Co-op.		
1,76,284 - 50	of the above held by the individuals	)			85,450 - 00	Bank, Mangalore ...	...	85,450 - 00
	2. RESERVE FUND & OTHER RESERVES					(iv) Fixed deposits in Central Co-op. Bank		
76,865 - 60	(i) Statutory Reserve ...	...	81,707 - 36		3,14,250 - 00	Puttur Branch ...	...	3,06,750 - 00
—	(ii) Agricultural credit stabilisation fund	...	—		50,028 - 51	(v) Reserve fund in Central Co-op. Bank	...	38,457 - 10
14,606 - 68	(iii) Building fund ...	...	14,606 - 68			3. MONEY AT CALL AND SHORT NOTICE ...	...	—
1,500 - 26	(iv) Dividend Equalisation Fund	...	1,500 - 26		—	4. INVESTMENTS		
—	(v) Special bad debt reserve	...	—			(i) In Central and State Govt. Securities		
1,300 - 00	(vi) Bad & doubtful debts reserve	...	1,300 - 00			(at book value) ..	...	36,564 - 00
7,012 - 00	(b) — do — Provision made	...	9,000 - 00			Face value 37,400		
—	(vii) Investments depreciation reserve	...	—		41,544 - 00	Market value 37,417 - 20		
	(viii) Other funds & reserves					(ii) Other trustee Securities	...	992 - 50
2,600 - 00	(a) Gratuity fund; Provision made	...	4,633 - 00			(iii) Shares in Co-op. Institutions	...	6,100 — 00
	(b) Diamond Jubilee Celebration fund;				992 - 50			
	Provision made ...	...	3,000 - 00		6,100 - 00			
712 - 30	(c) Employees Relief fund	...	712 - 30					
27 - 94	(d) Common Good fund	...	29 - 39					
17,737 - 00	(e) Reserve for buildings (Recoupment fund)...		17,737 - 00	1,34,225 - 99	—	5. INVESTMENTS OUT OF THE PRINCIPAL SUBSIDIARY STATE PARTNERSHIP FUND	...	—
—	3. PRINCIPAL SUBSIDIARY STATE PARTNERSHIP FUND ACCOUNT	...		—		6. ADVANCES		
	4. DEPOSITS AND OTHER ACCOUNTS					(i) Short term loans, cash credit overdrafts, and bills, discounted of which secured against ...	...	3,42,848 - 00
8,25,226 - 20	(i) Fixed Deposits (Individuals)	...	7,26,182 - 00		3,54,779 - 00	(a) Govt. and other approved Securities	...	—
—	(b) — do — Matured...	...	16,390 - 00		—	(b) Other tangible securities Rs. 52,936		
16,350 - 00	(c) Other Societies ...	...	19,750 - 00			Of the advance amount due from		
—	(d) Other deposits ...	...	2,07,123 - 53			Individuals Rs, 3,42,848 —		
1,18,056 - 79	(ii) Savings Bank deposits (Individuals)	...	1,19,600 - 43			Of the advances amount overdue		
3,378 - 78	(b) — do — Socs. ...	...	2,290 - 83			Rs. 53,793. considered Bad &		
10,019 - 48	(iii) Current Deposits (Individuals)	...	9,955 - 95			doubtful of Recovery Rs. 8039/-		
11,769 - 21	(b) — do — Societies ...	...	24,477 - 64	11,25,770 - 38				
	5. BORROWINGS					(ii) Medium term loans		
	From the Central Co. op. Bank				3,96,427 - 00	Of which secured against	...	5,90,843 - 00
	on the security of fixed deposits	...		18,000 - 00	—	(a) Govt. and other approved securities	...	—
	6. BILLS FOR COLLECTION BEING BILLS RECEIVABLE					(b) Other tangible securities Rs. 5,89,722		
—	As per contra ...	...		—		Of the advances amount due from		
						Individuals Rs. 5,90,843		
—	7. BRANCH ADJUSTMENTS	...		—		Of the advances amount overdue		
—	8. OVERDUE INTEREST RESERVE	...		—		Rs. 26,808. considered bad and		
						doubtful of recovery Rs. 961/-		
19,059 - 09	9. INTEREST PAYABLE	...		22,665 - 25	—	7. INTEREST RECEIVABLE	...	—
	10. OTHER LIABILITIES					8. BILLS RECEIVABLE BEING BILLS FOR COLLECTION	...	—
6,488 - 27	(i) Unclaimed Dividend	...		6,039 - 20	—	9. BRANCH ADJUSTMENTS	...	—
2,886 - 68	(ii) Suspense ...	...		2,875 - 53		10. PREMISES		
1,467 - 00	(iii) Sundries (Library grant)	...		1,467 - 00		(i) Furniture ...	...	—
1,000 - 00	(iv) Audit Charges ...	...		1,500 - 00		(ii) Library ...	...	1,467 - 00
—	(v) Establishment Charges due	...		—	1,467 - 00	(iii) Security Deposit in Mysore State		
18,737 - 38	Profit and Loss A/c	...		25,080 - 98		Electricity Board ...	...	95 - 00
—	12. CONTINGENT LIABILITIES	...		—	95 - 00	(iv) Income tax paid in advance	...	561 - 00
					713 - 00	13. NON-BANKING ASSETS		
						Acquired in satisfaction of claims	...	—
					—	14. PROFIT AND LOSS	...	—
					—			
13,49,258 - 94	Total		15,46,519 - 96		13,49,258 - 94	Total		15,46,519 - 96

(Sd) C. Mascarenhas, Secretary — (Sd) H. Sitharama Bhat, Director — (Sd) B. Prabhakar Rao, Director — (Sd) B. Rammohan Rao, President

AUDITOR'S CERTIFICATE

Certified that I have examined the above Balance Sheet of the Puttur Co-Operative Town Bank Ltd. No. 181, Puttur South Kanara as on 30—6—1971 with the Books and Accounts of the Bank and obtained all the required information and explanations. I am of opinion that the above Balance Sheet exhibits a true and correct state of affairs of the Bank as on 30—6—1971 subject to audit notes given separately.

Place: Puttur. S. K.
Date: 23—8—1971

(Sd) **B. Devappa Naik**
Senior Grade Auditor
Under M. C. S. R. 441 Puttur. S. K.

FORM—B

PROFIT AND LOSS ACCOUNT FOR THE YEAR ENDED 30TH JUNE 1971

30-6-1970	EXPENDITURE		30-6-1971	30-6-1970	INCOME		30-6-1971
Rs. Ps.			Rs. Ps.	Rs. Ps.			Rs. Ps.
55,521 - 56	1. Interest on Deposits, Borrowings etc.	...	66,433 - 81	99,217 - 61	1. Interest and Discount ...	...	1,25,630 - 05
23,052 - 11	2. Salaries and allowances and Provident fund	...	24,884 - 54	24 - 84	2. Commission, Exchange & Brokerage	...	32 - 89
	3. Directors' and local committee members			—	3. Subsidies and donations ...	...	—
—	fees and allowances ...	...	—		4. Income from non-banking assets and Profit from sale		
849 - 40	4. Rent, Taxes, Insurance, Lighting etc.	...	1,000 - 33	3,326 - 00	of dealing with such assets ...	...	2,989 - 00
—	5. Law charges ...	...	—	1,814 - 34	5. Other receipts ...	...	1,486 - 67
527 - 45	6. Postage, telegrams, and Telephone charges	...	646 - 55		6. Amount recovered from out of the		
1,384 - 08	7. Audit cost... ...	...	1,268 - 16	2,033 - 00	Provision made for bad & doubtful Loans	...	2,341 - 00
577 - 14	8. Depreciation on and repairs to property	...	1,178 - 71				
1,567 - 33	9. Stationery, Printing and advertisement etc.	...	1,300 - 75				
—	10. Loss from sale of or dealing with non-banking asset	...	—				
	11. Other expenditures including						
1,617 - 36	(a) Commission, Incidental charges, Meeting expenses etc. ...	...	1,303 - 78				
3,172 - 00	(b) Provision for bad & doubtful loans	...	4,329 - 00				
—	Provision for gratuity ...	...	2,033 - 00				
—	Provision for Diamond Jubilee Celebration	...	3,000 - 00				
18,137 - 38	Balance of Profit ...	...	25,080 - 98				
1,06,415 - 79	Total		1,32,459 - 61	1,06,415 - 79	Total		1,32,459 - 61

(Sd) C. Mascarenhas, Secretary — (Sd) H. Stiharama Bhat, Director — (Sd) B. Prabhakar Rao, Director — (Sd) B. Rammohan Rao, President

Certified that the above Profit and Loss Account shows a true Balance of Profit for the period covered by such account.

Place: Puttur. S. K.
Date: 23—8—1971.

(Sd) **B. Devappa Naik**
Senior Grade Auditor
Under M. C. S. R. 441 Puttur. S. K.

ಶ್ರೀಸಾಮಾನ್ಯನ ಸತ್ವ ಪರೀಕ್ಷೆ

ಭಾರತದಲ್ಲಿ ಇಂದು ಶ್ರೀಸಾಮಾನ್ಯನ ಚಳವಳಿಯ ಉಪಟಳ ಸಾಮಾನ್ಯವೇ ಆಗಿದೆ. ಸರಕಾರದ ಕಣ್ಣಿಗೆ ಹಿಡಿದ ಕೆಲಬು ಕೀಳಲು ಚಳವಳಿಯ ಮರಳು ಪೇಪರಿನಿಂದ ತಿಕ್ಕುವುದೊಂದೇ ದಾರಿಯೆಂದು ನಾವು ತಿಳಿದಿದ್ದರದು ತಪ್ಪು. ನೀರಿನೊಳಗಿಟ್ಟ ಬೆಣ್ಣೆಯನ್ನು ತೆಗೆದು, ಕೆಂಡದ ಮೇಲಿಟ್ಟ ಪಾತ್ರೆಗೆ ನಾವು ಹಾಕಿದರೇನೇ ಅದು ತುಪ್ಪವಾದೀತಲ್ಲದೆ ಬೆಣ್ಣೆ ನೀರೊಳಗೆ, ಬೆಂಕಿ ಒಲೆಯೊಳಗಾದರೆ ಅದಕ್ಕೆಂದಿಗೂ ಬಿಸಿ ತಗುಲದು.

ನಮ್ಮಲ್ಲಿರುವ ಹತ್ತು ಹಲವು ಸಂಘಗಳು, ಪಕ್ಷಗಳು ಒಂದಿಲ್ಲೊಂದು ಚಳವಳಿಯ ಮಂತ್ರವನ್ನು ಸಂಘಟಿಸುತ್ತಲೇ ಇವೆ. ಆಹಾರ ಕ್ರಯ ಏರಿಕೆಯ ವಿರುದ್ಧ ಧರಣಿ, ಬಂಗ್ಲಾ ಸಮಸ್ಯೆ ಇತ್ಯರ್ಥದ ತನಕ ನಿರಶನ ಸತ್ಯಾಗ್ರಹ ಇತ್ಯಾದಿತ್ಯಾದಿ ಜನ ಜಾಗೃತಿ ನಿಮಿತ್ತದ ಮೆರವಣಿಗೆಗಳು, ಒತ್ತಾಯಗಳು ದೈನಂದಿನ ದೃಶ್ಯವಾಗಿವೆ.

ಸರಕಾರವೆ ಧುರೀಣರ ದೃಷ್ಟಿಯಲ್ಲಿ ಈ ಚಳವಳಿ ತೀರಾ ಸಾಮಾನ್ಯವೆನಿಸಿ, ಇದೊಂದು ಮೂಢ ಜನರ ಗೊಡ್ಡು ನಂಬಿಕೆಯೆಂದು ಅದು ಅರಿತಿದೆ. ಜನ ಸಾಮಾನ್ಯರ ಬೆಕ್ಕಿನ ತಲೆಯಲ್ಲಿ ಆಶ್ವಾಸನೆಯ ಬೆಣ್ಣೆ ಮೆತ್ತಿದರೆ ಬಡ ಬೆಕ್ಕು ಕೈಯಿಂದ ಉಜ್ಜಿ ಉಜ್ಜಿ ಅದನ್ನೇ ನೆಕ್ಕುತ್ತಿರುವುದೆಂದು ಇವರು ನಂಬಿದ್ದಾರೆ. ತಾವು ಪವಿತ್ರ ಭಾರತದ ಸರಕಾರದಲ್ಲಿದ್ದೇನೆ, ಪ್ರಜೆಗಳ ಹಕ್ಕು ಬಾಧ್ಯತೆಯ ಭವಿಷ್ಯ ತಮ್ಮ ಕೈಯಲ್ಲಿದೆಯೆಂದು ಅರಿತೂ ಆ ಮಹಾಶಯರು ಮಂಗಾಟವಾಡುತ್ತಿದ್ದಾರೆ.

ಗೋಸುಂಬೆಯಂತೆ ಕ್ಷಣೇ ಕ್ಷಣೇ ಒಂದೊಂದು ಬಣ್ಣ ತಾಳುವ ಈ ಸರಕಾರದಿಂದಾಗಿ ಅನೇಕ ದಾಂಧಲೆಗಳಿಗೆ ಶ್ರೀಸಾಮಾನ್ಯ ಭಗೀರಥನಂತೆ ಬೊಗಸೆಯೊಡ್ಡಬೇಕಾಗಿದೆ. ದಿನ ನಿತ್ಯ ಬಳಸುವ ಬೆಂಕಿ, ನೀರು, ದೀಪಗಳಿಗೆ ಸರಕಾರಕ್ಕೆ ಅತ ಆತ್ಯಧಿಕ ಬೆಲೆಯೊಂದಿಗೆ ಬೆಲೆಗಿಂತ ಮೂರು ವಾಲು ಹಿರಿದಾದ ತೆರಿಗೆಯನ್ನು ಸುರಿಯುತ್ತಾನೆ. ಸ್ವಾತಂತ್ರ್ಯಾನಂತರ ತೀವ್ರವಾಗಿ ಏರುತ್ತಿರುವ ಬೆಲೆಯೇರಿಕೆಯನ್ನು ಹತೋಟಿಗೆ ತರಲು ಲಾಭಬಡುಕ ರಾಜಕಾರಣಿಗಳು ಎಂದಿಗೂ ಯತ್ನಿಸಿಲ್ಲ. ವಿದ್ಯುದ್ದೀಪ ಪ್ರತಿ ನಾಗರಿಕನಿಗೂ ಬೇಡ. ಮನೆಯಲ್ಲಿ ಒಂದು ಚಿಮಣಿ ಬುಡ್ಡಿ ಉರಿಸಿಡುವ ಹಕ್ಕು ಜನನಿಗಿಲ್ಲವೇ? ಮೂನ ಮುಚ್ಚುವಷ್ಟು ಬಟ್ಟೆ ಉಡದೆ ಕುಣಿಯಲು ವ್ರತಿಯೊಬ್ಬನೂ ಆಧುನಿಕ ಭಾರತದ ಹಿಪ್ಪಿಯೂಗಲೇ ಸಿನಿಮೂ ಸ್ಟಾರಾಗಲೇ ಇನ್ನೂ ಆಗಿಲ್ಲ. ಅದಕ್ಕೂ ಕೂರ ಮಟ್ಟ ತೆರಿಗೆ ತೆರಬೇಕೇಕೆ? ಸಮಾಜ ಸುಧಾರಣೆಯ ದಾಖಲೆಯ ಭಾರೀ ಹೊತ್ತಿಗೆಗಳನ್ನು ಸರಕಾರ ಪ್ರಕಟಿಸಿ, ಶಾಲೆಗಳು, ಆಸ್ಪತ್ರೆಗಳು ಎಂದೆಲ್ಲ ತನ್ನ ಕೆಲಸ ಕಾರ್ಯಗಳನ್ನು ವಿವರಿಸುತ್ತದೆ. ಸರಕಾರಿ ಆಸ್ಪತ್ರೆಗಳಲ್ಲಿ ನಬ್ಬಾಳಿಕೆ, ದರ್ಪ, ಲಂಚದ ಹೆಬ್ಬಯಕೆ ರೋಗಿಗಳ ಅನ್ನಾಹಾರಗಳನ್ನು ಭಕ್ಷಿಸುವ ಸಿಬ್ಬಂದಿಯವರು ಇವೆಲ್ಲಾ ಸರಕಾರದ ಸಾಧನೆಗಳ ಕುರುಹುಗಳೇನು? ಶ್ರೀಸಾಮಾನ್ಯನಿಗೆ ಬರೆಯಿಡುವುದರಲ್ಲೇ ಸರಕಾರ ಮುಗ್ನವಾಗಿದೆ. ಅಕ್ರಮ ಗಂಧ, ಚಿನ್ನ ನಾಗಾಟದಿಂದ ಕಾಳಸಂತೆ ವ್ಯಾಪಾರಿಗಳು ಕೋಟ್ಯಧೀಶರಾಗುತ್ತಿದ್ದರೂ ಅದನ್ನು ಹದ್ದು ಬಸ್ತಿನಲ್ಲಿಡಲಾರದ ಈ ಸರಕಾರಕ್ಕೆ ಏಕೆ ಆಡಳಿತ ಬೇಕು? ಆಡಳಿತವರಿಯದ ಹಾಮಹೋರರೇ ಅದರಲ್ಲಿದ್ದಾರೆ.

ಬಂಗ್ಲಾ ಸಮಸ್ಯೆಯನ್ನು ನಾವು ತೀವ್ರವಾಗಿ ಪ್ರತಿಭಟಿಸುತಿದ್ದರೂ ಸರಕಾರ ಈ ಬಿಕ್ಕಟ್ಟನ್ನು ಪರಿಹರಿಸಲು ಯತ್ನಿಸಿಲ್ಲ. 9.೫ ಲಕ್ಷಕ್ಕೆಂತಲೂ ಮಿಗಿಲಾಗಿ ಭಾರತಕ್ಕೆ ಬಂದಿರುವ ಬಂಗ್ಲಾ ನಿರಾಶ್ರಿತರ ಉದರಂಭರಣಾರ್ಥವಾಗಿ ಅಂಚೆ ಇಲಾಖೆಯು ಕೂಪಾಹಸಿದ ಹೆಬ್ಬುಲಿಯಂತೆ ಮುಂದೆ ಬಂದು ಶ್ರೀಸಾಮಾನ್ಯನ ಬಯಕೆಗಳನ್ನು ಆಗಿಯ ತೊಡಗಿದೆ. ಪ್ರತಿ ಅಂಚೆ ವಸ್ತುವಿಗೂ ಐದು ವೈಸೆಯಂತೆ ಏರಿಸಿ ತೆರಿಗೆಗಳ ಭಾರದಿಂದ ಕೊಳೆಯುತ್ತಿರುವ ನಾಗರಿಕನನ್ನು ಧನ್ಯ (?) ನಾಗಿರಿಸಿದೆ.

ಇಂದು ವಿದೇಶದಿಂದ ಭಾರತ ಕೋಟ್ಯಾಂತರ ರೂಪಾಯಿ ಸಾಲ ಎತ್ತಿದೆ. ಸಾರ್ವಜನಿಕರಿಗೆ ಅದರಿಂದಾವ ಲಾಭವೋ? ಬೇರೆ ಕೆಲವರಿಗೆ ದುಡಿತಾವಕಾಶವಿಲ್ಲ. ದುಡಿದರೆ ಯೋಗ್ಯ ಸಂಬಳವಿಲ್ಲ ಬಂದ ಸಂಬಳ ಕ್ಕೆಂತ ಆಹಾರ ಧಾನ್ಯ ತುಟ್ಟಿಯಾಗಿದೆ. ಅದು ಕ್ರಾಂತಿಯ ಕೆಚ್ಚು ಹಚ್ಚುವ ಕುರುಹು. ಅಸ್ಸಾಮಾಣಿಕ ಧುರೀಣರಲ್ಲಿ ಲಂಚವೊಂದೇ ಜೀವಾಳವಾಗಿದೆ. ಈ ಜೆಗೆ ರಾಷ್ಟ್ರಪತಿಭವನಕ್ಕೆ ವಿದೇಶದಿಂದ ಮರ್ಸಿಡೆಸ್ ಕಾರೊಂದನ್ನು ವಿದೇಶಿ ಅತಿಥಿಗಳ ಸಲುವಾಗಿ ತರಿಸಲಾಯಿತು. ಇದಕ್ಕೆ ಬೆಲೆ ಎರಡು ಲಕ್ಷ ರೂಪಾಯಿಗೂ ಮಿಗಿಲು. ಬೆಲೆಯ ಮೂರು ಪಟ್ಟು ತೆರಿಗೆ ಹೊಟ್ಟೆಗೆ ಹಿಟ್ಟಿಲ್ಲದ ಬಡ ಭಾರತದಲ್ಲಿ ಜುಟ್ಟಿಗೆ ಚಿನ್ನದ ಮಲ್ಲಿಗೆ ಮುಡಿಯಲೇ ಬೇಕಿತ್ತೇನು?

ಭಾರತದಲ್ಲಿ ಸಕ್ಕರೆಗೆ ಬೆಲೆ ಕೆಲೋ ಗ್ರಾಮಿಗೆ ಎರಡು ರೂಪಾಯಿಗೂ ಮಿಗಿಲು. ಇದೇ ಸಕ್ಕರೆ ವಿದೇಶಗಳಿಗೆ ರಫ್ತಾದರೆ ಅಲ್ಲಿ ಬರೀ ಆರುವತ್ತೈದು ಪೈಸೆಗೆ ಮಾರಾಟವಾಗುತ್ತದೆ ಕೀರ್ತಿ ಕಾಮಕ್ಕೆ ಬಲಿಯಾದ ಭಾರತ ಮೂವತ್ತು ಪೈಸೆಗಿಂತಲೂ ಕಮ್ಮಿ ಬೆಲೆಗೆ ಅಲ್ಲಿಗೆ ರಫ್ತು ಮಾಡುತ್ತದೆ ಬೆಲೆಯೇರಿಕೆಯ ದೃಷ್ಟಿಯಿಂದ ಸಕ್ಕರೆ ತಿನ್ನಬೇಕೆಂಬ ಆಸೆಯಿದ್ದರೂ—ಬೆಲ್ಲವನ್ನೇ ಬಳಸುವವರು ಅದೆಷ್ಟೋ ಮಂದಿ. ಅಂಥಾದ್ದರಲ್ಲಿ ವಿದೇಶಗಳಿಗೆ ಕೊಡುವ ಕ್ರಯದಲ್ಲಿಯೇ ಅವರಿಗೂ ಸಕ್ಕರೆ ಕೊಡುವಂತಾದರೆ ಆ ದಟ್ಟ ದರಿದ್ರರ ಕುಟುಂಬ ಒಂದು ದಿನವಾದರೂ ಸವಿದು ಉಣ್ಣಲಾರದೇನು?

ನಮ್ಮ ತಾಳ್ಮೆಗೂ ಒಂದು ಮಿತಿಯಿದೆ. ಅದನ್ನು ದಿನವೂ ಒರೆಗೆ ಹಚ್ಚುತ್ತಿದ್ದರೆ ಆಳುವವರು ಆಳಕ್ಕಿಳಿಯುವ ದಿನ ದೂರವೇ ನಿಲ್ಲ. ಪ್ರತಿಯೊಂದಕ್ಕೂ ಬೆಲೆಯೇರಿಕೆ; ಶ್ರೀಸಾಮಾನ್ಯರಲಿ ಹಣದ ಕೊರತೆ—ತಂತಾನೇ ಅವನನ್ನು ಕ್ರಾಂತಿಯ ಅಗ್ನಿ ಕುಂಡಕ್ಕೆ ನೂಕುತ್ತದೆ ಸಾಮವಾದದ ಚಳವಳಿ, ಮುಷ್ಕರ, ಸತ್ಯಾಗ್ರಹಗಳಿಗೆ ಬೆಲೆ ಕೊಟ್ಟು ಹತ್ತು ಸಮಸ್ತರ ಕೋರಿಕೆಯನ್ನು ಈಡೇರಿಸಿದರೇನೇ ಆಳುವ ಮಕ್ಕಳು ಉಳಿದು ಕೊಂಡಾರು. ಕರ್ಪೂರಕ್ಕೂ ಬೆಂಕಿಗೂ ಸಂಬಂಧ ಹತ್ತಿರ. ಕರ್ಪೂರದಂತ ಶ್ರೀಸಾಮಾನ್ಯನ ಸಹನೆಯನ್ನು ಪರೀಕ್ಷಿಸ ಲಾರಂಭಿಸಿದರೆ ಧೂರ್ತ ರಾಜಕಾರಣಿಗಳಿಗೆ ದಂಡವೇ ಮದ್ದಾಗುವುದಲ್ಲದೆ ಅನ್ನ ನೀರು ಬಿಟ್ಟು ಹೆಣಗುವ ಈ ಚಳವಳಿಯ ಭೂತ ಪೀಡೆಯಾಗಿ ಕಾಡದಿರದು.

ಪ. ರಾಮಕೃಷ್ಣ ಶಾಸ್ತ್ರಿ.

●●

ಬೆಳ್ತಂಗಡಿ ಮುನ್ಸಿಫ್ ಕೋರ್ಟಿನಲ್ಲಿ

Ex. C. 149/1970
in S. C. 82/1971

ನೀಯಯ್ಯ ಪೂಜಾರಿ —ಅರ್ಜಿದಾರ.

ಮತ್ತು

1. ಮೋನಮ್ಮ, ಪೆರ್ಸು ಪೂಜಾರಿ ಮಗಳು 2. ಶಿನಪ್ಪ ಪೂಜಾರಿ 1ನೇ ಎದ್ರಿಯ ನುನ. ಬೆಳ್ತಂಗಡಿ ತಾಲ್ಲು ತೆಂಕಕಾರೆಂದೂರು ಗ್ರಾಮದ ಮೇಗಿನ ಮುಂಡೇಲು ಎಂಬಲ್ಲಿ —ಎದ್ರಿರು.

ಇವರಿಗೆ ಕೋರ್ಟ್ ಹ್ಕುಂ ಪ್ರಕಾರ ತಿಳಿಸುವುದೇನೆಂದ್ರೆ

ಮೇಲ್ಕಾಣಿದ ಅಮ್ಲಜ್ಞಾರಿಯಲ್ಲಿ ಅರ್ಜಿದಾರರು ದಾಕ್ಲು ಮಾಡಿದ ಸ್ತಿರ ಆಸ್ತಿ ಯೇಲಂ ಇಸ್ತಿಹಾರಿನ ಶರತುಗಳನ್ನು ನಿರ್ಣಯಿಸುವ ಬಗ್ಗೂ. ಅರ್ಜಿದಾರಗೆ ಯೇಲಂ ಸಮಯ ದರ್ಕಾಸ್ತಿಗೆ ನಿಲ್ಲುವರೆ ಪರ್ಮಿಶನ್ ಕೊಡಿಸಬೇಕಾಗಿ ಕೂಡಾ ಮಾಡಿದ ಅರ್ಜಿ, ಮತ್ತು ಮೇಲಿನ ಅಮ್ಲಜ್ಞಾರಿ ಕೂಡಾ ತಾ. 2—12—71ಕ್ಕೆ ಯಿಟ್ಟರುವುದರಿಂದ ಅದ್ದೆ ನಿಮ್ಮದೇನಾದರೂ ಆಕ್ಷೇಪಣೆಗಳಿದ್ರೆ ಸದ್ರಿ ದಿವ್ಸ ಬೆಳಿಗ್ಗೆ 11 ಗಂಟೆಗೆ ಸರಿಯೂಗಿ ಮೇಲ್ಕಂಡ ಕೋರ್ಟ್ ಮುಂದೆಹಾಜರಾಗಿ ಉದಪರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದು ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ.

(Sd) B. Ishwar Bhat
Advocate for Petitioner.

ಬೆಳ್ತಂಗಡಿ, ತಾ 18—11—71

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಡೈಮಂಡ್ ಜ್ಯುವೆಲ್ಲರಿ

ಧರ್ಮಸ್ಥಳ ಸರ್ವಧರ್ಮ ಸಮ್ಮೇಳನ

ಶ್ರೀ ಕ್ಷೇತ್ರದ ಲಕ್ಷದೀಪೋತ್ಸವದ ಅಂಗವಾಗಿ ತಾ. 16ರಂದು ಜರಗಿದ ಸರ್ವಧರ್ಮಸಮ್ಮೇಳನವನ್ನು ಬೆಂಗಳೂರಿನ ಮಹಾಬೋಧಿ ಸೊಸ್ಯಾಟಿಯ ಆಚಾರ್ಯ ಬುದ್ಧ ರಕ್ಷಿತ ತೇರಾ ಅವರ ಅಧ್ಯಕ್ಷತೆಯಲ್ಲಿ ಸುಪ್ರೀಂ ಕೋರ್ಟಿನ ನೂತನ ಶ್ರೀಷ್ಮ ನ್ಯಾಯಾಧೀಶ ಶ್ರೀ ಕೋಕಾ ಸುಬ್ಬರಾಯರು ಉದ್ಘಾಟಿಸಿದರು.

ಶ್ರೀ ಬಿ. ಎಸ್. ರಾಮೂಚಾರ್‌ರಿಂದ ಪ್ರಾರ್ಥನೆಯಾದ ಬಳಿಕ ಶ್ರೀ ವೀರೇಂದ್ರ ಹೆಗ್ಗಡೆಯವರು ಸ್ವಾಗತಿಸಿದರು. ಶ್ರೀ ಸುರೇಂದ್ರ ಕುಮಾರ್ ಸಮೂರಂಭಕ್ಕೆ ಶುಭಕೋರಿ ಬಂದ ಸಂದೇಶಗಳನ್ನೋದಿದರು. ಶ್ರೀ ಪರಮಪೂಜ್ಯ ಭಾಸ್ಕರಂ ಶೇಷಾಚಾರ್ಯರು ಆಶೀರ್ವಚನಗೈದರು.

ಶ್ರೀ ಸುಬ್ಬರಾಯರು ಉದ್ಘಾಟಿಸುತ್ತಾ, ಧಾರ್ಮಿಕ ನೈತಿಕ ಮೌಲ್ಯಗಳೇ ಪ್ರಜಾಪ್ರಭುತ್ವವನ್ನು ಉಳಿಸಬಲ್ಲುವು. ಆದರೆ ಸ್ವಾತಂತ್ರ್ಯಕ್ಕೆ ದೊರೆತ ಬಳಿಕ ನಾವು ಸಂತರ ಉಪದೇಶಗಳನ್ನು ಕಡೆಗಣಿಸುತ್ತಿದ್ದೇವಲ್ಲದೆ ಅವರ ಸಹಿಷ್ಣುತೆಗೆ ಅಪಾರ್ಥಕಳಿಸುತ್ತಿದ್ದೇವೆ ಎಂದರು ವಿಷಾದಿಸಿದರು. ಅವರು ಮುಂದುವರಿದು ಹಕ್ಕು ಮತ್ತು ಭಾವೈತೆಗಳು ಒಂದೇ ನಾಣ್ಯದ ಎರಡು ಮುಖಗಳು. ಸಂವಿಧಾನ ಇತ್ತಿರುವ ವಾಕ್ ಸ್ವಾತಂತ್ರ್ಯವನ್ನು ಅನುಭವಿಸುತ್ತಿರುವ ನಾವು ಬೇರೆಯವರ ವಾಕ್ ಸ್ವಾತಂತ್ರ್ಯವನ್ನು ಮನ್ನಿಸಬೇಕು ಇತರರ ಪಕ್ಕುಗಳನ್ನು ಗೌರವಿಸ ಬೇಕೆಂದರು. ದೇಶದಲ್ಲೀಗ ಚಾರಿತ್ರಿಕ ಸತನಪೂಂಟಾಗಿದೆಯೆಂದು ವಿನರಿಸಿದ ಅವರು ರಾಜಕೀಯದಲ್ಲಿ ಪ್ರಜಾತಂತ್ರವು ಅತ್ಯುತ್ತಮವಾಪುದೆಂದೂ ಕಾನೂನು ಅದರ ಅವಿಭಾಜ್ಯ ಅಂಗವೆಂದೂ ನಿವರಿಸಿದರು.

ಶ್ರೀ ಬುದ್ಧ ರಕ್ಷಿತ ತೇರಾ ಅವರು ನೂತಾಡುತ್ತಾ, ಆಧ್ಯಾತ್ಮಿಕ ಮೌಲ್ಯಗಳ ರಕ್ಷಣೆಯಿಂದ ಮಾತ್ರವೇ ಭಾವೈಕ್ಯ ಸಾಧ್ಯವಾದುದರಿಂದ ಅದರ ರಕ್ಷಣೆಗೆ ಪ್ರಾಮಾಣಿಕ ಪ್ರಯತ್ನ ನಡೆಯ ಬೇಕೆಂದರು.

ಈ ಸಂದರ್ಭದಲ್ಲಿ ಶ್ರೀ ಆ ನ.ಕೃ. ಮತ್ತು ಶ್ರೀ ಕೆ. ಎಸ್. ಧರಣೇಂದ್ರಯ್ಯ ಅವರುಗಳ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು

ಶ್ರೀ ಸ್ವಾಮಿ ಸೋಸುನಾಥನಂದಜೀ, ಶ್ರೀ ಎಸ್. ಪಿ. ಪಾಟೀಲ್, ಮತ್ತು ರೆ! ಫಾ! ಎಗ್ನೊಸ್‌ರವರು ವಿವಿಧ ಧರ್ಮುಗಳ ಬಗ್ಗೆ ಉಪನ್ಯಾಸ ವಿತ್ತರು

ಶ್ರೀ ವೀರೇಂದ್ರ ಹೆಗ್ಗಡೆಯವರು ಮುಖ್ಯ ಅತಿಥಿಗಳಿಗೆ ಗಂಧದ ಕರಂಡಕದಲ್ಲಿ ಮಾನಪತ್ರ ವಿತ್ತು ಸನ್ಮಾನಿಸಿದರು. ಬಳಿಕ ಮಹಾರಾಜಪುರಂ ಸಂತಾನಂ ಅವರಿಂದ ಸಂಗೀತ ಕಾರ್ಯಕ್ರಮ ವಿತ್ತು.

ಅಂತ್ಯದಲ್ಲಿ ಉಜಿರೆ ಶ್ರೀ ಮಂಜುನಾಥೇಶ್ವರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಪ್ರಭಾಕರ್ ಅವರು ಧನ್ಯವಾದಗಳನ್ನರ್ಪಿಸಿದರು.

ಧರ್ಮಸ್ಥಳ ಸಾಹಿತ್ಯ ಸಮ್ಮೇಳನ

ಇದೇ ತಾ. 17ರಂದು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಲಕ್ಷ ದೀಪೋತ್ಸವದ ಅಂಗವಾಗಿ ಏರ್ಪಡಿಸಿದ ಸಾಹಿತ್ಯ ಸಮ್ಮೇಳನವನ್ನು ಪ್ರೊ! ವಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಡಾ! ಜಿ. ಎಸ್. ಶಿವರುದ್ರಪ್ಪನವರು ಉದ್ಘಾಟಿಸಿದರು ಆರಂಭದಲ್ಲಿ ಶ್ರೀ ಬಿ. ಎಸ್. ರಾಮೂಚಾರ್ ಅವರು ಪ್ರಾರ್ಥನಾ ಗೀತ ಹಾಡಿದರು. ಶ್ರೀ ವೀರೇಂದ್ರ ಹೆಗ್ಗಡೆಯವರು ಸ್ವಾಗತಿಸಿ ಮುಖ್ಯ ಅತಿಥಿಗಳಾದ ಡಾ! ಶಿವರುದ್ರಪ್ಪ ಮತ್ತು ಪ್ರೊ! ಸೀತಾರಾಮಯ್ಯ ಅವರನ್ನು ಗಂಧದ ಕರಂಡಕದಲ್ಲಿ ಮಾನಪತ್ರವಿತ್ತು ಸನ್ಮಾನಿಸಿದರು. ಸಮಾರಂಭದಲ್ಲಿ ಶ್ರೀ ಆ.ನ.ಕೃಷ್ಣರಾವ್ ಹಾಗೂ ಶ್ರೀ ಕೆ. ಎಸ್. ಧರಣೇಂದ್ರಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು ಪ್ರೊ! ಎಸ್. ವಿ. ಪರಮೇಶ್ವರ ಭಟ್ಟರು ಶ್ರೀ ಕೆ. ಎಸ್. ಧರಣೇಂದ್ರಯ್ಯನವರ ಸ್ಮಾರಕ ಗ್ರಂಥವನ್ನು ಬಿಡುಗಡೆ ಗೊಳಿಸಿದರು.

ಡಾ! ಜಿ. ಎಸ್. ಶಿವರುದ್ರಪ್ಪನವರು ತಮ್ಮ ಭಾಷಣದಲ್ಲಿ ಒಂದು ದೇಶದ ಕಾಲಧರ್ಮವನ್ನು ಅದೇ ಎಂದು ಖಚಿತವಾಗಿ ಹೇಳುವುದು ಕಷ್ಟ. ಇಂದಿನ ಜಗತ್ತಿನಲ್ಲಿ ವಿಶಾಲ ಭಾರತದ ಅಸಿಯ ಬದುಕಿನ ಅತ್ಯೋಲ ಕಲ್ಲೋಲಗಳು ಭಾರತೀಯ ಸಾದ ಕವಿಯ ಸಂವೇದನೆಯ ವಸ್ತುವಾಗುತ್ತಿದೆ. ಪ್ರತಿಯೊಬ್ಬ ಕವಿ ಒಂದು ನಿರ್ದಿಷ್ಟ ಕಾಲಮಾನದಲ್ಲಿ ಬಮಳುವ ಕವಿಯಾಪುದರಿಂದ ಸೂಕ್ಷ್ಮ ಸಂವೇದನೆಯುಳ್ಳವನು ಕೇಂದ್ರಬಿಂದುವಾಗಿ ಕಾಲಧರ್ಮವನ್ನು ಕೃತಿಗಳ ಮೂಲಕ ಪ್ರತಿನಿಧಿಸುತ್ತಾನೆ ಎಂದು ವಿವೇಚಿಸಿ ವಿಚಾರ ಭೇದಗಳು, ಒಂದು ಪರಿಸರವು ವೈಚಾರಿಕ ಪ್ರಗತಿಯಲ್ಲಿ ಪರಸ್ಪರ ಹೊರಕ ಹೊರತು ಒಂದು ಮತ್ತೊಂದಕ್ಕಿಂತ ಕನಿಷ್ಠವೋ ಶ್ರೇಷ್ಠವೋ ಎಂಬ ಸ್ಪರ್ಧೆಗೆ ಅವಕಾಶವಾಪುದೆಂದು ಅವರು ಅಭಿಪ್ರಾಯ ಪಟ್ಟರು.

ಬೆಂಗಳೂರಿನ ಡಾ! ಚಿದಾನಂದ ಮೂರ್ತಿ, ಮೈಸೂರಿನ ಪ್ರೊ! ಶಂಕರ್, ಶ್ರೀ ಚೆನ್ನಯ್ಯ, ಶ್ರೀ ಎಚ್. ಕೆ. ಲಕ್ಕಪ್ಪ ಗೌಡ, ಪ್ರೊ! ಎಸ್. ವಿ. ಪರಮೇಶ್ವರ ಭಟ್ಟ ಮತ್ತು ಶ್ರೀಮತಿ ಕಮಲಾ ಹಂ. ಪ. ನಾ. ಅವರುಗಳು ಕವಿಯ ಮತ್ತು ಕಾಲಧರ್ಮದ ಕುರಿತು ಮಾತಾಡಿದರು.

ಈ ಸಂದರ್ಭದಲ್ಲಿ ಶ್ರೀ ವೀರೇಂದ್ರ ಹೆಗ್ಗಡೆಯವರು ದಿ! ಆ ನ ಕೃ. ಅವರ ಕುಟುಂಬದವರಿಗೆ ರೂ. 1001ರ ಕೊಡುಗೆಯನ್ನರ್ಪಿಸಿದರು ಕೊಡುಗೆಯನ್ನು ಆ ನ ಕೃ. ಅವರ ಪುತ್ರಿ ಕುಮೂರಿ ಲೈಲಾ ಅವರು ಸ್ವೀಕರಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ವಿ. ಸೀತಾರಾಮಯ್ಯನವರು ಮಾತಾಡುತ್ತಾ ಕಾತ್ಯಾಲಕ ಬದಲಾವಣೆಗಳಿಗೆ ಸಾಹಿತ್ಯವು ಹೊಂದಿಕೊಳ್ಳಬೇಕಾದ ಕ್ರಮವೆ ಮೂಸವೀಯ ಮೌಲ್ಯಗಳು ಪ್ರಕೃತಿಗು ಸಹಜ ಹಾಗೂ ಭಾವನಾತ್ಮಕ ಕ್ರಿಯೆಗಳಿಂದ ಮೇಲಿರಬೇಕೆಂದು ಹೇಳಿ ವೇದಕಾಲದಿಂದ ಇಂದಿನ ತನಕ ಸಾಹಿತ್ಯದಲ್ಲಾದ ಬೆಳವಣಿಗೆಯನ್ನು ಅವರು ವಿನರಿಸಿದರು.

ಶ್ರವಣ ಬೆಳಗೊಳದ ಶ್ರೀ ಗೋಮಟೇಶ್ವರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಜಿ. ಬ್ರಹ್ಮಪ್ಪ ಅವರು ದಿ! ಆ ನ.ಕೃ ರ ಕುರಿತು ನೂಕಾಡಿದರು. ಶ್ರೀ ಸ್ವಾಮಿದಾಸ್ ಮೂಕಾಡಿದ ಬಳಿಕ ಶ್ರೀ ಎಸ್. ಪ್ರಭಾಕರ್ ಅವರು ಧನ್ಯವಾದ ಅರ್ಪಿಸಿದರು.

ಬೆಂಗಳೂರಿನ ಶ್ರೀ ಎಸ್. ಹಸುಮಂತರಾಜು ಮತ್ತು ಬಳಗದವರಿಂದ ಕಾಸ್ಯವಾಜನ, ಶ್ರೀ ವಿ. ರಾಘವೆಂದ್ರಸ್ ಅವರಿಂದ ಸಂಗೀತ ಕಚೇರಿ, ಪುತ್ತೂರಿನ ನಾಟ್ಯಾಲಯದವರಿಂದ ನೃತ್ಯ ಕಾರ್ಯಕ್ರಮ, ವಿಳಬಿನ್ ಗಣೇಶನ್‌ರಿಂದ ಮಿಮಿಕ್ರಿ ಹಾಗೂ ಭದ್ರಾವತಿಯ ಶ್ರೀ ಅರೋಗ್ಯಸ್ವಾಮಿಯವರಿಂದ ಗಾಂಧೀಪ್ರತಿಮೆಯ ಅಭಿನಯ ಮೊದಲಾದ ಕಾರ್ಯಕ್ರಮಗಳಿದ್ದವು.

ಲಾವಣಿ ಹಾಗೂ ಗೀಗೀ ಪದಗಳ ಸ್ಪರ್ಧೆ

ಹೈದರಾಬಾದ್ ಕರ್ನಾಟಕದ ಪ್ರಖ್ಯಾತ ಯಾದಗಿರಿಯ ವಿಶ್ವ ಕಲ್ಯಾಣ ಟ್ರಸ್ಟ್‌ನವರು, ನಶಿಸಿ ಹೋಗುತ್ತಿರುವ ಆದರೆ ಮತ್ತು ಅನಚ್ಚೆಗೆ ಗುರಿಯಾಗಿ ಹೋಗುತ್ತಿರುವ ನಮ್ಮ ಕನ್ನಡ ಸಾಹಿತ್ಯದಲ್ಲಿ ಪ್ರಮುಖ ಸ್ಥಾನಪಡೆದಿರುವ, ಲಾವಣಿ ಮತ್ತು ಗೀಗೀ ಪದಗಳನ್ನು ಮನರ್‌ಚೇತನ ಗೊಳಿಸುವ ದೃಷ್ಟಿಯಿಂದ ಆದರ ಸ್ಪರ್ಧೆಯೊಂದನ್ನು ದಶಂಬರ ಎರಡನೆ ವಾರದಲ್ಲಿ ಏರ್ಪಡಿಸಿದ್ದಾರೆ.

ತಲೆ ತಲಾಂತರದಿಂದ ಆಡುತ್ತ ಬಂದ ಹಾಡುಗಳೇ ಲಾವಣಿ ಚೀಪದ ಮೇಳದವರ ಬಂಡವಾಳವಾಗಬಾರದು. ಆವರ ರೆಜನಾಶಕ್ತಿಯನ್ನು ಪರೀಕ್ಷಿಸಬೇಕು ಎಂಬ ಉದ್ದೇಶದಿಂದ 1) ಮಹಾತ್ಮಾ ಗಾಂಧಿಯವರು, 2) ಮಹಾತ್ಮಾ ಗಾಂಧಿಯವರು, 3) ನೇತಾಜಿ ಸುಭಾಶ್ಚಂದ್ರ ಬೋಸರು, 4) ಯಾವುದೇ ರಾಷ್ಟ್ರೀಯ ಕ್ರಾಂತಿಕಾರಿ ನಿಚಾರ ಎಂಬ ನಾಲ್ಕು ವಿಷಯಗಳನ್ನು ಕೊಡಲಾಗಿದೆ. ಸ್ಪರ್ಧೆಯ ಮೇಳಗಳು ಯಾವುದಾದರೂ ಎರಡು ವಿಷಯಗಳನ್ನು ಆರಿಸಿಕೊಳ್ಳಬಹುದು. ಪ್ರಥಮದಿ ಬಹುಮಾನಗಳಲ್ಲದೆ ಸ್ಥಳೀಯ ಪ್ರತಿಭೆಯ ಮೇಳವೆಂದು ಗೋಚರಿಸುವುದಕ್ಕೆ ದೊಡ್ಡ ಮೊತ್ತದ ಬಹುಮಾನವಿದೆ. ಇದೇ ತಿಂಗಳಾಂತ್ಯದೊಳಗೆ ಮೇಳದವರು ಸ್ಪರ್ಧೆಯಲ್ಲಿ ಭಾಗವಹಿಸುವ ಕಮ್ಮೆ ಎಲ್ಲ ಜೊತೆಗಾರರ ಹೆಸರುಗಳನ್ನು ಕೊಡಬೇಕು. ಪತ್ರವ್ಯವಹಾರಕ್ಕೆ ವಿಳಾಸ ಇಂತಿದೆ— ಬಿ. ಮಹಾದೇವಪ್ಪ, ಸಂಪಾದಕ, 'ವಿಶ್ವಕಲ್ಯಾಣ' ವಾರಪತ್ರಿಕೆ, ಯಾದಗಿರಿ,(ಜಿಲ್ಲಾ ಕಲ್ಬುರ್ಗಿ.)

ಜನಸಾಮಾನ್ಯರಲ್ಲಿ ಬ್ಯಾಂಕಿಂಗ್ ಪ್ರವೃತ್ತಿ ಬೆಳೆಸಿದಲ್ಲಿ ಮಾತ್ರ ರಾಷ್ಟ್ರೀಕರಣದ ಉದ್ದೇಶ ಫಲಿಸೀತು —ಡಿ. ವೀರೇಂದ್ರ ಹೆಗ್ಗಡೆ

ಧರ್ಮಸ್ಥಳ, ನವಂಬರ್ 11: ರಾಷ್ಟ್ರೀಕೃತ ಬ್ಯಾಂಕುಗಳು ಕಳೆದ ಎರಡು ವರ್ಷಗಳಲ್ಲಿ ಗ್ರಾಮೂಕರ ಪ್ರದೇಶಗಳಲ್ಲಿ ಶಾಖಾ ವಿಸ್ತರಣೆಯ ಮೂಲಕ ಜನಸಾಮಾನ್ಯರಲ್ಲಿ ಉಳಿತಾಯದ ಪರಿಣಾಮವನ್ನು ಬೆಳೆಸಲು ಪ್ರಯತ್ನಿಸುತ್ತಿರುವುದು ಸ್ತುತ್ಯಾರ್ಹ. ಕೇವಲ ಶಾಖೆಗಳ ವಿಸ್ತರಣೆಯ ನೂಲಕ ಜನಸಾಮಾನ್ಯರಿಗೆ ಬ್ಯಾಂಕಿಂಗ್‌ನ ಪರಿಚಯ ಮಾಡಿಕೊಡಲು ಮತ್ತು ಬ್ಯಾಂಕುಗಳ ಉಪಯುಕ್ತತೆಯನ್ನು ಮನಗಾಣಿಸಲು ಸಾಧ್ಯವಾಗದು. ಹಳ್ಳಿಪಲಯಗಳಲ್ಲಿ ಬ್ಯಾಂಕಿನ ಶಾಖೆ ಗಳಿದ್ದರೂ ಆವುಗಳ ಸೇವಾವಲಯದಿಂದ ಹೊರಗುಳಿದಿರುವ ಲಕ್ಷಾಂತರ ಮಂದಿ ಜನರಿಗೆ ಬ್ಯಾಂಕಿಂಗ್‌ನ ಬಗ್ಗೆ ತಿಳಿಹೇಳಲು ಜಾತ್ರೆಯಂಥ ವೀಕ್ಷಪ ಸಂದರ್ಭಗಳಲ್ಲಿ ಬ್ಯಾಂಕುಗಳು ಪ್ರದರ್ಶನಗಳನ್ನು ಏರ್ಪಡಿಸಿ ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು. ಜನಸಾಮಾನ್ಯರಿಗೆ ಪರಿಚಯವಿರದ ಬ್ಯಾಂಕಿಂಗ್‌ನ ಸೇವಾಸೌಲಭ್ಯಗಳ ಬಗ್ಗೆ ಸರಳ ರೀತಿಯಲ್ಲಿ ಮಾಹಿತಿಕೊಟ್ಟು ಅವರನ್ನು ಬ್ಯಾಂಕಿಂಗ್‌ನ ಕಕ್ಷೆಗೆ ತರಲು ಇಂಥ ಪ್ರದರ್ಶನಗಳನ್ನು ಸರ್ಪಡಿಸುವುದರಿಂದ ರಾಷ್ಟ್ರೀಕರಣದ ಉದ್ದೇಶಕ್ಕೆ ಪುಷ್ಟಿ ದೊರೆತಂತಾಗುವುದು" ಎಂದು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ನಿನ್ನೆ ಇಲ್ಲಿ ನುಡಿದರು.

ಶ್ರೀ ಹೆಗ್ಗಡೆಯವರು ನಿನ್ನೆಯಿಂದ ಇಲ್ಲಿ ಆರಂಭವಾದ ಲಕ್ಷದೀಪೋತ್ಸವ ಜಾತ್ರೆಯಲ್ಲಿ ಸಿಂಡಿಕೇಟ್ ಬ್ಯಾಂಕಿನವರು ಏರ್ಪಡಿಸಿದ ಪ್ರದರ್ಶನ ಸ್ಟಾಲನ್ನು ಉದ್ಘಾಟಿಸುತ್ತಾ ಮಾತನಾಡುತ್ತಿದ್ದರು.

ಶ್ರೀ ಭಾಸ್ಕರಂ ಶೇಷಾಚಾರ್ಯರು ಅನುಗ್ರಹ ಭಾಷಣ ಮಾಡಿದರು.

ದೀಪವನ್ನು ಶ್ರೀ ಹೆಗ್ಗಡೆಯವರಿಂದ ಹೊತ್ತಿಸುವ ಸಾಂಕೇತಿಕ ಉದ್ಘಾಟನೆಯ ಬಳಿಕ ಸಿಂಡಿಕೇಟ್ ಬ್ಯಾಂಕಿನ ಬೆಳ್ತಂಗಡಿ ಶಾಖೆಯ ಮೆನೇಜರ್ ಶ್ರೀ ಎಸ್. ಆರ್. ರಾಜಾ ಅವರು ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ಮೇಲಿನ ಶಾಖೆಯ ಅಸಿಸ್ಟಾಂಟ್ ಮೆನೇಜರ್ ಶ್ರೀ ಸುಧಾಕರ ಕಾಮತರು ಆಭಾರ ಸೂಚಿಸಿದರು.

ಮಲ್ಪೆಯಲ್ಲಿ ಪ್ರವಾಸಿ ಕೇಂದ್ರವೆ?

ಕೇಂದ್ರ ಸರಕಾರದ ರಾಜ್ಯ ಸಚಿವೆ ಡಾ! ಸರೋಜಿನಿ ಮಹಿಷಿಯವರು ಇತ್ತೀಚೆಗೆ ಉಡುಪಿ-ಮಲ್ಪೆ- ಬಾರ್ಕೂರುಗಳನ್ನು ಸಂದರ್ಶಿಸಿದರು. ಜಿಲ್ಲೆಯ ಕರಾವಳಿಯಲ್ಲಿ ಪ್ರವಾಸಿ ಕೇಂದ್ರವನ್ನು ನಿರ್ಮಿಸುವ ಬಗ್ಗೆ ಪರಿಶೀಲನೆ ನಡೆಸುವುದೇ ಸಚಿವೆಯರ ಭೇಟ್ಟಿಯ ಉದ್ದೇಶವೆನ್ನಲಾಗಿದೆ. ಡಾ! ಸಹಿಷಿಯರು ಮಲ್ಪೆ ಬಳಿಯ ಸೈಂಟ್ ಮೇರೀಸ್ ದ್ವೀಪಕ್ಕೂ ಭೇಟ್ಟಿ ನೀಡಿದರು. ತಾಲೂಕು ಬೋರ್ಡು ಸದಸ್ಯೆ ಶ್ರೀಮತಿ ಮನೋರಮಾ ಮಧ್ವರಾಜ ಮತ್ತು ಟಿ. ರಮೇಶ ಪೈ ಮತ್ತಿತರರು ಸಚಿವೆಯರನ್ನು ಕೂಡಿಕೊಂಡಿದ್ದರು.

ಸಮುದ್ರ ಮಧ್ಯದ ಕುಮರಿಪಂದ ಪ್ರಕೃತಿ ವೀಕ್ಷಿಸಿದ ಸಚಿವೆಯರು ಪ್ರಭಾವಿತರಾದಂತೆ ಕಂಡಿತು. ಅಲ್ಲಿ ಸಿಹಿ ನೀರು ದೊರೆತೀತೇ ಎಂಬ ಪ್ರಶ್ನೆ ಅವರನ್ನು ಕಾಡಿತು ದೊರೆತೀತು ಎಂಬ ವಿಶ್ವಾಸವನ್ನು ಎಕ್ಸಿಕ್ಯೂಟಿವ್ ಇಂಜನಿಯರರು ನೀಡಿದರು.

ಮಲ್ಪೆಯಲ್ಲಿ ಪ್ರವಾಸಿ ಕೇಂದ್ರಕ್ಕೆಂದು ಸೂಸಲಿಟ್ಟ ಸ್ಥಳವನ್ನು ಸಚಿವೆಯರು ನೋಡಿದರು. ಆ ಸ್ಥಳವನ್ನು ಈಗಾಗಲೇ ಯಾರು ಯಾರೋ ಆಕ್ರಮಣ ಮಾಡಿ ಗುಡಿಸಲು ಕಟ್ಟಿ ಕೃಷೀತ್ಪಾದಿಗಳನ್ನು ನೂಡಿರುವುದನ್ನು ಗಮನಿಸಿದರು. ಈ ಸರಕಾರಿ ಸ್ಥಳವನ್ನು ಬಿಟ್ಟು ಬಾಸಗಿ ಸ್ಥಳವನ್ನು ಪರಪಡಿಸುವುದು ಆಪ್ರಾಯೋಗಿಕವೆಂದೂ ಆಕ್ರಮಣಕಾರರಿಗೆ ಅವರು ನಾಟದ ತೆಂಗಿನ ಮರಗಳ ಬಗ್ಗೆ ಪರಿಹಾರ ಕೊಡಬಹುದೋ ಎಂಬುದನ್ನು ಪರಿಶೀಲಿಸುವ ಭರವಸೆ ನೀಡಿದರು.

ಮೂಸ್ಯ ಸಚಿವೆಯರು ಇತಿಹಾಸ ತಜ್ಞ ಡಾ! ಪಿ. ಗುರುರಾಜ ಭಟ್ಟರನ್ನು ಕೂಡಿಕೊಂಡು, ತುಳುನಾಡಿನ ಗತವೈಭವದ ಬಾಕುಕೂರನ್ನು ಸಂದರ್ಶಿಸಿದರು. ಅಲ್ಲಿನ ಶಿಲ್ಪಕಲೆ— ಶಾಸನ— ಮುಂದಿರ-ಕೋಟೆಯ ಅವಶೇಷಗಳು ಮೊದಲಾದುವನ್ನು ಕಣ್ಣಾರೆ ಕಂಡರು. ಡಾ! ಭಟ್ಟರು ಬಾರಕೂರಿನ ಭಗ್ನಾವಶೇಷಗಳನ್ನು ಸಚಿವೆಯರಿಗೆ ವಿವರಿಸಿದರು.

ಶಿರ್ವ ರೋಟರಿ ಸಭೆಯಲ್ಲಿ ಸನ್ಮಾನ

ತಾ. 5-11-71ರಂದು ರೋಟರಿ ಅಧ್ಯಕ್ಷ ನಿಕ್ಸನ್ ಸಲ್ಡಾನ್ನರ ಅಧ್ಯಕ್ಷತೆಯಲ್ಲಿ ಶಿರ್ವದಲ್ಲಿ ವಿದ್ಯಾಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮೊನ್ಸಿ ಇನೂರ್ ಯೆಚ್ ಗೊನಾಲ್ವಿಸ್ ಮತ್ತು ಶ್ರೀ ಕೆ. ನುಪ್ಪು ಶೆಟ್ಟರನ್ನು ಗೌರವಿಸಲಾಯಿತು.

ಸಾಸ್ತಾಹಿಕ ಸಭೆಗೆ ವಿಶೇಷ ಅತಿಥಿಗಳಾಗಿ ಆಗಮಿಸಿದ ರೋಟರಿ ಡಿಸ್ಟ್ರಿಕ್ಟ್ 318ರ ನಿಯೋಜಿತ ಗವರ್ನರ್ ಆದ ರೋಟೆರಿಯನ್ ಡಾ. ಯಂ. ಡಿ. ಅಡಪ ಇವರ ಪರಿಚಯವನ್ನು ರೋಟೇರಿಯನ್ ಬಿ. ಜಯರಾಮ ಶೆಟ್ಟರು ಮಾಡಿದರು. ಸಂದರ್ಶಕ ರೋಟರಿ ಸದಸ್ಯರ ಪರಿಚಯವನ್ನು ಕಾರ್ಯದರ್ಶಿ ರೊ. ಡಾ. ಪೆಂಳಟ್ಕಳ್ಳಿಯರು ಮಾಡಿದರು.

ರೆವರೆಂಡ್ ಗೊನ್ಸಾಲ್ವಿಸರಿಗೆ ಉಡುಗೊರೆ ಸಹಿತ ಮಾನಪತ್ರವನ್ನೂ ಶ್ರೀ ಮುದ್ದು ಶೆಟ್ಟರಿಗೆ ಶಾಲು ಸಹಿತ ಮಾನಪತ್ರವನ್ನೂ ರೋಟೇರಿಯನ್ ಡಾ! ಅಡಪರು ನೀಡಿದರು.

ಪ್ರಧಾನ ಅತಿಥಿಗಳಾದ ರೋಟೆರಿಯನ್ ಡಾ! ಅಡಪರು ಸನ್ಮಾನಿತರಾದ ಈರ್ವರನ್ನು ಅವರು ವ್ಯಕ್ತಿಗಳಲ್ಲ ಎಂದೂ ಸಂಸ್ಥೆಗಳೆಂದೂ ಕೊಂಡಾಡಿದರು. ಹಿಂದುಳಿದ ಶಿರ್ವ ಕ್ಷೇತ್ರದ ಬೆಳವಣಿಗೆಗೆ ನಿರಂತರವಾಗಿ ಶ್ರಮಿಸಿದ ಇವರು ನಿಸ್ವಾರ್ಥ ಜೀವಿಗಳೆಂದೂ ಅವರನ್ನು ಗುರುತಿಸಿ ಗೌರವಿಸಿದ ಶಿರ್ವ ರೋಟರಿ ಕ್ಲಬ್ ಬಹು ದೊಡ್ಡ ಯೋಜನೆಯನ್ನು ಸಾಧಿಸಿದೆ ಎಂದು ಹೇಳಿದರು. ಅಧ್ಯಕ್ಷ ಭಾಷಣದ ನಂತರ ಶ್ರೀ ಜಿ. ಯಂ. ದತ್ತೇಗರು ಧನ್ಯವಾದವಿತ್ತರು.

●●

Gram: VISHVA Tel: 28111 & 28112

When at Bangalore

Stay at

HOTEL NATARAJA

Restaurant. Boarding & Lodging

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಗೇಹರಾಜ್ಯದಲ್ಲಿ

ಅರುವತ್ತು ಕೇಳಿದರೆ ಅರಾದರೂ ಸಿಕ್ಕೀತು

'ಆಲ್ರಿ, ಚುನಾವಣೆಗಳು ಹತ್ರ ಬಂತೂಂತಾಯ್ತು....'

'ಹ್ಞೂಂ. ಫೆಬ್ರವರಿ ಮೂರನೇ ವಾರದ ಲ್ಲೀಂತ ಸದ್ಯದ ತಿಳುವಳಿಕೆ....'

'ಅದ್ಯಾಕೆ ಸದ್ಯ ಅಂತೀರಿ?'

'ಅಲ್ವೆ, ಪರಿಸ್ಥಿತಿ ಇದೇ ರೀತಿ ಉಳಿದರೆ ಫೆಬ್ರವರೀಲಿ ಆಗುತ್ತೆ....ಇಲ್ಲವಾದರೆ ಮುಂದೆ ಹೋಗಲೂ ಬಹುದು....'

'ಇಂದ್ರೆ, ನೀವನ್ನೋದು ಯುದ್ಧ ನಡೆದ್ರೆ ಅಂತ....'

ಹೌದು. ಹೇಗನ್ನೋದು? ಸಮರ ಪ್ರಜೋನನೆ ಗಳಿಗೆಗಳಿಗೂ ಮಿತಿಮೀರುತ್ತಿರುವಾಗ, ಯುದ್ಧ ತಾಗುವುದಿಲ್ಲಾಂತ ಹೇಳುವುದು ಹೇಗೆ?'

'ಅದು ಹೌದೂನ್ನಿ. ಅದೇನೋ ಪಾಕಿನ ಮಿತ್ರರೆಲ್ಲ ಒಂದೇ ಸಮನೆ ಯೂಹ್ಯಾಖಾನರಿಗೆ ಪತ್ರ ಬರೆಯ ತೊಡಗಿದ್ದಾರಂತೆ....'

'ಹ್ಞೂಂ. ಎಂತಾದರೂ ನೂಡಿ ಯೂಹ್ಯಾಖಾನರ ಸಮರೋತ್ಸಾಹಕ್ಕೆ ತಣ್ಣೀರೆರಚಲು ಅವರ ಪ್ರಯತ್ನ....'

'ಅಲ್ರಿ, ಯೂಹ್ಯಾಖಾನರು ಭಾರತ ದೊಡನೆ ಮೂತುಕತೆಗೆ ಸಿದ್ಧರಾಗಿದ್ದಾರಲ್ಲಾ....'

'ಅದು ಹಳೆಯಕತೆ. ಆದರೆ, ಭಾರತ ದೊಡನೆ ಮೂತಾಡುವ ಅಗತ್ಯವೇ ಇಲ್ಲ. ಅವರು ಬಂಗ್ಲಾದ ಪ್ರತಿನಿಧಿಗಳೊಡನೆ ಮೂತುಕತೆಗೆ ತೊಡಗಬೇಕು...'

'ಅದಕ್ಕೇನು? ಅವಾಮಿ ಲೀಗಿನ ಸದಸ್ಯರ ಶಾಸಕತನವನ್ನು ಯೂಹ್ಯಾ ರದ್ದು ಮೂಡಿ, ಉಪಚುನಾವಣೆಗಳನ್ನು ನಡೆಸಿ, ತಮ್ಮ ಹಸ್ತಕರು ಅವಿರೋಧವಾಗಿ ಚುನಾಯಿತರಾದರೆಂದು ಸಾರಿದ್ದಾರೆ. ಇನ್ನು ಉಪಚುನಾವಣೆಗಳೆಲ್ಲ ಮುಕ್ತಾಯಗೊಂಡನೆಂದರೆ ಯೂಹ್ಯಾ ಹಸ್ತಕರದ್ದೇ ಬಹುಮತವಾಗಿ ಬಹುದು; ಆಗ ಮೂತುಕತೆಗೆ ತೊಡಗ ಬಹುದು....'

'ಆದರೆ ನೋಡು, ಇದರಿಂದ ಪರಿಸ್ಥಿತಿ ಶಾಂತವಾಗುವುದಿಲ್ಲ....'

'ಯಾಕೆ?'

'ಈ ಉಪ ಚುನಾವಣೆಗಳನ್ನು ಬಂಗಾ ಜನತೆ ಬಹಿಷ್ಕರಿಸಿದೆ. ಬಂಗ್ಲಾದ ನಿಜವಾದ ಪ್ರತಿನಿಧಿಗಳು ಅಂದರೆ, ಅವಾಮಿ ಲೀಗಿನ ಚುನಾಯಿತ ಸದಸ್ಯರು; ವಂಗ ಬಂದು ಶೇಕಮುಜಿಬುರ್ ರೆಹಮಾನರ ಬೆಂಬಲಿಗರು....'

'ನೋಡಿ , ಇದೇ ತಾಪತ್ರಯದ್ದು....'

'ಏಕೆ?'

'ಭಾರತ ಪಾಕುಗಳ ನಡುವೆ. ಇದೊಂದು ಹೊಸ ವಿವಾದ....'

'ಇದರಲ್ಲಿ ವಿವಾದವೇನು ಬಂತು? ಯೂಹ್ಯಾಖಾನರು ಈ ಪರಿಸ್ಥಿತಿಯನ್ನು ತಾವಾಗಿಯೇ ತಂದು ಕೊಂಡಿದ್ದಾರೆ....'

'ಅದು ಹೌದೂನ್ನಿ, ಆದ್ರೂ ಜಗತ್ತಿನ ಮುಂಪೆ ಮೂತುಗತೆಗೆ ಸಿದ್ಧವೆಂದು ಹೇಳಿ ತಮ್ಮ ಹಠತ್ಯಾಗ ಬುದ್ಧಿಯನ್ನು ಬಹಿರಂಗ ಪಡಿಸಬಹುದಲ್ಲಾ?'

'ಅಲ್ವೆ, ಇದರಿಂದ ಪ್ರಸಂಗ ಮತ್ತಷ್ಟು ಬಿಗಡಾಯಿಸುತ್ತದೆ....'

'ಆಗ ಯುದ್ಧವೇ ಅನಿವಾರ್ಯವಾಗಬಹುದು....'

'ಅದು ಹೇಗನ್ನುವುದು? ಆದರೂ ಆಗಬಹುದು. ಇಲ್ಲಿ, ಪಾಕಿಸ್ತಾನದ ಮಿತ್ರರ ಹೊಣೆಗಾರಿಕೆ ಹೆಚ್ಚಿದೆ. ಅವರು ತಿಳಿ ಹೇಳಬೇಕು; ಇವರು ತಲೆವಾಗಬೇಕು....'

'ಅದು ಸಾಧ್ಯವೆನಿಸುವುದಿಲ್ಲ....'

'ಅಷ್ಟು ನಿರಾಶವಾಗಬೇಕಾಗಿಲ್ಲ. ಅಮೆರಿಕೆ ಶಸ್ತ್ರಾಸ್ತ್ರ ನೆರವನ್ನು ಖಡಾ ಖಂಡಿತವಾಗಿ ನಿಲ್ಲಿಸಿದರೆ, ಚೀನಾ ತನ್ನ ಹೊಸ ಹೊಣೆಗಾರಿಕೆಯನ್ನು ಮುತ್ಸದ್ದಿತನದಿಂದ ಹೊತ್ತುಕೊಂಡರೆ, ಎಲ್ಲವೂ ಸರಿಯಾಗುವುದು.'

'ಅದು ಹೇಗೆ?'

'ಏಕಾಕಿಯಾಗಿ ಯೂಹ್ಯಾಖಾನರು ಭಾರತದೊಡನೆ ಯುದ್ಧ ಮಾಡುವ ಸಾಹಸ ತೋರಿಸಲಾರರು.?

'ನಿಜಾನ್ನಿ, ಅದಕ್ಕೇ ಯುದ್ಧ ಘೋಷಣೆಗೆ ಮೊದಲೇ ಸಾಕಷ್ಟು ಸೈನಿಕ ಶಕ್ತಿಯನ್ನು ಕೂಡಹಾಕುವುದೇ ಅವರ ಇರಾದೆ.'

'ಅದು ಸರಿ. ಆದರೂ ಅವರ ಆಶಯ ಸಂಪೂರ್ಣ ಈಡೇರುವಂತಿಲ್ಲ.

'ಏಕೆ?'

'ಭಾರತವೀಟಾರಿ ತುಸು ಬೇಗನೇ ಎಚ್ಚರವಾಗಿದೆ.'

'ಅದು ಹೌದು. ಆದುದರಿಂದಲೇ ಯೂಹ್ಯಾಖಾನರ ಮುಖ ಕಾಂತಿಗುಂದಿದೆ.'

'ಅಷ್ಟು ಮಾತ್ರವಲ್ಲ, ಬಂಗ್ಲಾದ ಮುಕ್ತಿವಾಹಿನಿಯು ಯೂಹ್ಯಾರ ದೈತ್ಯ ಶಕ್ತಿದ ಮನದಲ್ಲಿ ಯಶಗಳಿಸುತ್ತ ಬರುತ್ತಿದೆ....'

'ಅಲ್ರಿ, ಏನಾದ ತನಗೆ ತಾನೇ ಪರಿಹಾರಗೊಂಡರೆ ಎಷ್ಟು ಒಳ್ಳೆಯದಿತ್ತು?'

'ಅದು ಹಾಗಾದೀತೆ? ಆದರೂ ಆಗಬಹುದೂನ್ನುವುದು....'

'ಆಗದೆಯೂ ಹೋಗ ಬಹುದು. ಮತ್ತೆ ನೋಡಿ, ರಾಜ್ಯದ ಇಂಡಿಕೇಟನಲ್ಲೊಂದು ಇಂಡಿಕೇಟು ಹುಟ್ಟಿ ಕೊಂಡಿದೆಯಂತಲ್ಲ?'

'ಇಂಡಿಕೇಟಿನಲ್ಲಿ ಇಂಡಿಕೇಟು ಹುಟ್ಟುವುದೆಂದರೇನೆ? ಸಿಂಡಿಕೇಟಾದರೂ ಹುಟ್ಟಬಹುದು....'

'ಊಹ್ಞೂಂ....ಹಾಗಲ್ಲ, ಇಂಡಿಕೇಟು ಸಿಂಡಿಕೇಟಾಗಿ, ಆದರಿಂದ ಮತ್ತೊಂದು ಇಂಡಿಕೇಟು....'

'ಹ್ಞೂಂ....ಯಾವುದಾದರೂ ಒಂದು ಕೇಟೂನ್ನು. ಯಾಕೆ?'

'ಅಲ್ರಿ, ನಮ್ಮ ರಾಜ್ಯದ ಯುವಕ ಇಂಡಿಕೇಟಿಗರು ವಿಧಾನ ಸಭಾ ಚುನಾವಣೆಗಳಲ್ಲಿ ಸೇ. ೬೦ರಷ್ಟು ಸ್ಥಾನಗಳನ್ನು ಬೇಡಿದ್ದಾರೆ....'

'ಬೇಡುವವರಿಗೇನು? ಅಬರಿಂದ ಬಾಯಿ ಹರಿಯುವುದಿಲ್ಲ. ನೋಡು.'

'ಬರಿದೆ ಬೇಡಿದ್ದು ಮಾತ್ರವೆಲ್ಲ.'

'ಮತ್ತೆ?'

'ಬೆದರಿಕೆಯನ್ನೂ ಹಾಕಿದ್ದಾರೆ....'

'ಏನೂಂತ?'

"ಒಂಬೊಮ್ಮೆ ತಮ್ಮ ಬೇಡಿಕೆ ಈಡೇರದೆ ಹೋದರೆ, ಎಲ್ಲಾ ಸ್ಥಾನಗಳಿಗೂ ತಮ್ಮ ಅಭ್ಯರ್ಥಿಯನ್ನ ನಿಲ್ಲಿಸಲಾಗುವುದೆಂದು..."

"ಭಲೇ ಭೇಷಾಯ್ತು. ಆದ್ರೆ ನೋಡು, ಇವರ ಬೇಡಿಕೆ ಈಡೇರುವುದಿಲ್ಲ....'

"ಯಾಕೆ ಹಾಗಂತೀರಿ?"

'ಅಲ್ವೆ, ಚುನಾವಣಾ ಸಮಿತಿಯಲ್ಲಿ ಯುವಕರಿಗೆ ಪ್ರಾತಿನಿಧ್ಯವೇ ಇಲ್ಲದಿರುವಾಗ...."

"ಅದೊಂದು ಹೌದು. ಆದರೂ ನೋಡಿ. ಅದಕ್ಕೇ ಬೆದರಿಕೆ ಹಾಕಿರೋದು...."

"ಅಲ್ವೆ, ಅವರ ಬೇಡಿಕೆ ವಿಲಕ್ಷಣವಾದದ್ದು; ಬೆದರಿಕೆ ಅನಪೇಕ್ಷಣೀಯವಾದದ್ದು...."

"ಯಾಕೆ ಹಾಗಂತೀರಿ?"

"ನೋಡಮ್ಮ, ಎಲ್ಲರೂ ಇಂಡಿಕೇಟಿಗರು ಆಂತಾದ ಮೇಲೆ ಅದರಲ್ಲಿ ಅವರಿಗಿಷ್ಟು ಇವರಿಗಿಷ್ಟು ಎಂಬ ಪಾಲೇನು ಬಂತು?"

'ಅದು ಹೇಗಾಗುತ್ತೆ? ಇಂಡಿಕೇಟು ಹುಟ್ಟಿದ್ದೇ ಹಾಗೆ ನೋಡಿ; ತನ್ನ ಕುದುರೆಗೆ ಮೂರೇ ಕಾಲು ಎಂಬ ನಿಂಬ ನೀತಿಯಿಂದ....'

'ಅದೆಲ್ಲ ಹಳೆಯ ಕತೆಯಾಯ್ತು.'

'ಅದಕ್ಕೇ ಈಗ ಹೊಸ ಸ್ವರೂಪ ನೀಡಲು ಈ ಬೇಡಿಕೆ ಬೆದರಿಕೆ. ಇಂಡಿಕೇಟನ್ನು ಸಿಂಡಿಕೇಟ್ ದ ಸೆಕೆಂಡ್ ಎಂದು ಕರೆದು, ಹೊಸತೊಂದು ಇಂಡಿಕೇಟನ್ನು ನಿರ್ಮಿಸಿಕೊಂಡದ್ದು....'

ಹ್ಞೂಂ....ಆಗಲಿ, ಮರುಗಿದರೆ ಮೂತ್ರ ಮಗುವಿಗೆ ಮೊಲೆ ಹಾಲು ಇಲ್ಲವಾದರೆ ಇಲ್ಲ. ಇವರು ಅರುವತ್ತು ಬೇಡಿದರೆ ಕೊನೆಗೆ ಆರಾದರೂ ದೊರೆಯಬಹುದು. ಮತ್ತೊಂದು ಭೀತಿ....'

'ಏನು?'

'ಅಲ್ವೆ, ಇವರು ಅರುವತ್ತು ಕೇಳಿದ್ದನ್ನು ನೋಡಿ ಎಲ್ಲರೂ ಯುವಕರೇ ಆದರೆ....?

'ಆಗ ಭಾರೀ ತಮಾಶೆಯಾಗಿರುತ್ತೆ....'

'ನೋಡು,, ಸಂಸತ್ತಿನಲ್ಲಿ ಸುಗ್ರೀವಾಜ್ಞೆಗಳ ಬಗ್ಗೆ ಭಾರೀ ಕೋಲಾಹಲವೆದ್ದಿತಂತೆ....'

'ಏನು?'

'ಅಲ್ಲ, ಸರ್ಕಾರ ಕೂತದ್ದಕ್ಕೆ ನಿಂತದ್ದಕ್ಕೆಲ್ಲ ಸುಗ್ರೀವಾಜ್ಞೆ, ಹೊರಡಿಸಿ, ಸುಗ್ರೀವಾಜ್ಞೆಯ ಗಾಂಭೀರ್ಯವನ್ನೇ ಕಳೆದು ಹಾಕಿದೆಯೆಂತ....'

'ಅದು ಹೌದೂನ್ನಿ. ಸಂಸತ್ತು ಅಧಿವೇಶನದಲ್ಲಿ ಇಲ್ಲದಾಗ, ಅತ್ಯಂತ ಆವಶ್ಯಕವೆನಿಸಿದರೆ ಮಾತ್ರ ಸುಗ್ರೀವಾಜ್ಞೆ ಹೊರಡಿಸುವುದು ಸತ್ ಸಂಪ್ರದಾಯ. ನಮ್ಮಲ್ಲೂ ಆ ಸಂಪ್ರದಾಯವೊಂದಿತ್ತು.'

'ಅದು ಎಂದೊ ಮುಗಿದು ಹೋಯ್ತೂನ್ನು. ಈಗೀಗ ಸರಕಾರಕ್ಕೆ ಸುಗ್ರೀವಾಜ್ಞೆ ಹೊರಡಿಸುವುದೇ ಲಾಭದಾಯಕವಾದಂತಿದೆ.....'

'ಅಲ್ಲವೇ ಮತ್ತೆ ನ್ಯಾಯ ಅನ್ಯಾಯಗಳ ಎಲ್ಲಿ ಮುಟ್ಟಿದೆ ತನಗೆ ಬೇಕಾದಂತೆ ಅಧಿಕಾರವನ್ನು ಬಳಸಿಕೊಳ್ಳಲು ಇದಕ್ಕಿಂತ ಹೆಚ್ಚಿನ ಅವಕಾಶ ಮತ್ತೆಲ್ಲಿದೆ?'

'ಆದರೆ ನೋಡು, ಸ್ವತಃ ಲೋಕ ಸಭಾ ಪತಿ ಧಿಲ್ಲಾನರೇ ಸರಕಾರದ ವರ್ತನೆಯಿಂದ ಬೇಸರಗೊಂಡಿದ್ದಾರಂತೆ....'

'ಅವರು ಬೇಸರಗೊಂಡರೇನು? ಬಹುಮತ ಸರಕಾರದ ಕೈಯಲ್ಲಿದೆ. ಅದು ಆಡಿಸುತ್ತದೆ; ನಾವು ಆಡುತ್ತೇನೆ....'

'ಅಲ್ವೆ, ಅತ್ಯವಸರದಿಂದ ಸುಗ್ರೀವಾಜ್ಞೆ ಯಾಕಾದರೂ ಹೊರಡಿಸಬೇಕು?'

'ಇದೊಳ್ಳೆ ಮೂತು....'

'ಯಾಕೆ?'

'ನೋಡಿ, ಮಸೂದೆ ಮೂಲಕ ಸಂಪತ್ತಿನ ಮುಂದೆ ತರುವುದಕ್ಕೆ ಮೊದಲು ಸರಕಾರಿಪಕ್ಷದಲ್ಲಿ ಸವೂಲೋಚನೆ ಮಾಡಬೇಕು; ಆಲ್ಲಿಯೂ ಒಡಕು ದನಿಕೇಳಬಹುದು ಇದನ್ನು ಮತ್ತು ತಡವಾಗುವುದನ್ನು ತಪಿಸಲು....'.

'ಇರಬಹುದೂನ್ನು, ಆದರೂ ಪ್ರಜಾಸತ್ತೆಯಲ್ಲಿ ಸುಗ್ರೀವಾಜ್ಞೆಗಳು ಸರ್ವಾಧಿಕಾರ ಪ್ರದರ್ಶಿಸುವುದಿಲ್ಲವೆ?'

'ಏನಾಯ್ತು? ಪ್ರಧಾನಿ ಹೇಳಿದನ್ನು ಸಚಿವ ಸಂಪುಟ ವಿರೋಧಿಸುವುದು ಹೇಗೆ ಸಾಧ್ಯ? ಸಂಪುಟದ ನಿರ್ಣಯವನ್ನು ರಾಷ್ಟ್ರಪತಿ ತಿರಸ್ಕರಿಸುವುದು ಹೇಗೆ ಸಾಧ್ಯ?'

'ಅದೇ....ಎಲ್ಲೆಲ್ಲಿಯೂ ಅಧಿಕಾರದ ದುರುಪಯೋಗ, ಪ್ರಜಾಸತ್ತೆಯ ಹೆಸರಲ್ಲಿ ಸರ್ವಾಧಿಕಾರ....'

'ಅದೇನೇ ಇರಲಿ....'

'ಇರಲಿ ಯೂರು ಬೇಡಾಂತಾರೆ?'

'ಅಂದ್ರೂ ಕೇಳೋರ್ಯಾರು?'

'ಯೂರೂ ಇಲ್ವೇ?'

'ಇದ್ದಾರೇನ್ನಿ....'

'ಯೂರು?'

'ನಾ....'

— ಗೋರಾ

ಅಳದು ಆಳದುಹೋಗುವ ಮಕ್ಕಳೇ ತಕೆ? ತಿಳಿದು ತಿಳಿದು ಬುದ್ಧಿ ಹೇಳದ ಗುರುವೇತಕೆ?

ಂ ಂ ಂ

ನಮ್ಮ ಒಂದು ತಪ್ಪನ್ನು ತಿದ್ದಿಕೊಳ್ಳುವುದಕ್ಕಿಂತ ನೂರಾರು ಸದ್ಗುಣಗಳಿಂದ ನಮ್ಮನ್ನು ಸಿಂಗರಿಸಿಕೊಳ್ಳುವುದು ಹೆಚ್ಚು ಸುಲಭ.

ಂ ಂ ಂ

ಅನ್ನ, ಉದಕ, ಊಟವೀಯೋದ್ಯ ಮಣ್ಣು, ಬಣ್ಣ ಬಂಗಾರ ಬೊಕ್ಕಸವೆಲ್ಲ ಮಣ್ಣು.

ಂ ಂ ಂ

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

'ಗಾಂಧಿಜಿಯ ಕೊಲೆ'

(ಎರಡನೇ ಪುಟದಿಂದ)

ಲ್ಲಿ ಈಗಿನ ಉಪರಾಷ್ಟ್ರಪತಿ ಗೋಪಾಲ ಸ್ವರೂಪ ಪಾಠಕರ ಅಧ್ಯಕ್ಷತೆಯಲ್ಲಿ ಒಂದು ಆಯೋಗವನ್ನು ನೇಮಿಸಿತು. ಆದರೆ ಅವರಿಂದ ಕೆಲಸ ನಿರ್ವಹಿಸುವುದು ಆಗಲಿಲ್ಲ. ಅಧ್ಯಕ್ಷತೆ ವಹಿಸಿದ ತರುಣದಲ್ಲಿ ವಿಶ್ವ ಸಂಸ್ಥೆಯ ಸಭೆಗೆ ಹೊರಟು ಜೋಗಬೇಕಾಗಿ ಬಂತು. ಪ್ರಧಾನಿಗಳು—ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ—ಈ ಮಧ್ಯೆ ವಿಧಿವಶರಾದರು. ವಿಶ್ವ ಸಂಸ್ಥೆಯಿಂದ ಹಿಂದಿರುಗಿದ ಶ್ರೀ ಪಾಠಕರು ಇಂದಿರಾ ಸಚಿವ ಸಂಪುಟ ಸೇರಿದರು. ಅನಂತರ ಮೈಸೂರಿನ ರಾಜ್ಯಪಾಲರಾದರು. ಆ ಸ್ಥಾನದಿಂದ ಉಪರಾಷ್ಟ್ರಪತಿಯಾಗಿ ದೆಹಲಿಗೆ ಜಿಗಿದರು.

ಆವರಿಗೆ ನಿರ್ವಹಿಸಿದ ಕೆಲಸ ಈ ಕಾರಣದಿಂದ ನಡೆಯಲಿಲ್ಲ. ತನ್ಮಧ್ಯೆ ಸುಪ್ರೀಂ ಕೋರ್ಟಿನ ನಿವೃತ್ತ ನ್ಯಾಯಾಧೀಶ ಶ್ರೀ ಕಪೂರರ ಅಧ್ಯಕ್ಷತೆಯಲ್ಲಿ 1966ರಲ್ಲಿ ಬೇರೊಂದು ಆಯೋಗ ರಚಿಸಲ್ಪಟ್ಟಿತು. ದೇಶಾದ್ಯಂತ ಹಬ್ಬಿದ ಗಾಂಧಿಜಿಯ ಕೊಲೆಯ ಸುಳಿವು ಕೊಡಬಲ್ಲ ಮುಖ್ಯರು ಮಣ್ಣು ಕಂಡ ಮೇಲೆ ತನಿಖೆಯಿಂದ ಏನು ಪ್ರಯೋಜನ? ಆಯೋಗದ ಈ ಆಮೆಯ ನಡಿಗೆ ಯಾರಿಗೂ ಮರ್ಯಾದೆ ತರುವುದಿಲ್ಲ. ಈಗಾಗಲೇ ಆಯೋಗವು ತೆಗೆದು ಕೊಂಡಿರುವ ಹೇಳಿಕೆಗಳು, ಕೊಲೆಯಲ್ಲಿ ದೊಡ್ಡವರ ಹಸ್ತಕ್ಷೇಪವಿರುವುದನ್ನು ಖಚಿತ ಪಡಿಸಿದೆ. ಆಗಿನ ಮುಂಬಯಿ ಪ್ರಾಂತದ ರಕ್ಷಣಾ ಶಾಖೆಯ ಮುಖ್ಯಾಧಿಕಾರಿಯನ್ನ್. ಯಂ ಕಂಟೆಯವರ ಹೇಳಿಕೆಯಿಂದ ಗಾಂಧಿಜಿಯ ಕೊಲೆಯೊಗುವ ತನಕ ಅವರಿಗೆ ಡಾ. ಜೈನರು ಕೊಟ್ಟ ವರ್ತಮಾನದ ಆರಿವೇ ಇಗಲಿಲ್ಲವೆಂಬುದು ಗೊತ್ತಾಗುತ್ತದೆ. ದೆಹಲಿಯ ಇಬ್ಬರು ಹಿರಿಯ ಪೋಲಿಸ್ ಅಧಿಕಾರಿಗಳು ಮುಂಬಯಿ ಪೋಲಿಸರು ತನಿಕೆಗೆ ಅಡ್ಡಿಯೊವರು ಎಂದು ತಿಳಿಸಿದ್ದಾರೆ.

ಮೈಗಂಟಿಕೊಂಡ ಈ ಕೊಲೆಯ ಹೊಲೆಯಿಂದ ನಮಗೆ ವಿಮೋಚನೆಯಿಲ್ಲ. ಮನಸ್ಸಿಗೆ ನೆಮ್ಮದಿಯಿಲ್ಲ.

ಂ ಂ ಂ

ಹೋದ ಶತಮಾನದ—ಇದರಲ್ಲಿಯೂ ಆ ಶತಮಾನದ ಪೂರ್ವಾರ್ಧದಲ್ಲಿ ಬದುಕಿ ಬಾಳಿದ—ಜನರ ಕಲ್ಪನೆಗಳು ಆದರ್ಶಗಳು ಈ ತಲೆಮಾರಿನ ಜನರಿಗಿಂತ ತೀರ ವಿಭಿನ್ನವಾದುವು. ಶ್ರೀಮಂತಿಕೆ, ದೊಡ್ಡಸ್ತಿಕೆಗಳನ್ನು ಅಳೆಯುವ, ಆ ದಿನಗಳ ಅಳತೆಗೋಲೂ ಈಗ ಬಳಕೆಯಲ್ಲಿಲ್ಲ. ಆವನ್ನು ಬಳಸುವಂತೆಯೂ ಇಲ್ಲ.

ಮದುವೆ ಮಾಡಿಕೊಂಡ ಹೆಂಗಸರ ಸಂಖ್ಯೆ, ಅಥವಾ ಇಟ್ಟುಕೊಂಡ ಸ್ತ್ರೀಯರ ಪ್ರಮಾಣ ಅದನ್ನು ಅವಲಂಬಿಸಿತ್ತು. ಜನರ ವರ್ಚಸ್ಸನ್ನು, ವ್ಯಕ್ತಿತ್ವ, ದೊಡ್ಡಸ್ತಿಕೆ ಇದು ತೀರ ವಿಚಿತ್ರವಾದ ಮಾನದಂಡ ಆದರೂ ನಿಜ.

ಗಾಂಧಿಜಿಯ ಹಿರಿಯರು ವೈಶ್ಯರು. ಅನುಕೂಲವಂತರು. ಪರಂಪರೆಯಿಂದ ಬಂದ ದಿವಾನಗಿರಿ ಬೇರೆ. ಈ ಅಧಿಕಾರ ದೆವಲತ್ತುಗಳಿಗೇ ವಾರಸುದಾರರಾಗಿಯೇ ಹುಟ್ಟಿದರು ಗಾಂಧಿಜಿ. ಗಾಂಧಿಜಿಯ ತಾಯಿಗೆ ಮೂರು ಮಂದಿ ಸವತಿಯರಿದ್ದರು. ಆವರ ತಾಯಿ, ತಂದೆಯ ನಾಲ್ಕನೆಯ ಹೆಂಡತಿ. ತಂದೆಯ ನಾಲ್ಕನೆಯ ಹೆಂಡತಿಯಲ್ಲಿ ಹುಟ್ಟಿದ ಮೂರನೆಯ ಮಗ ಗಾಂಧೀಜಿ.

ಆವರು ಜನಿಸಿದ್ದು, ಬೆಳೆದದ್ದು ಇತರ ರಂತೆಯೇ—ಪತ್ತರೊಡನೆ ಹನ್ನೊಂದು ಎನ್ನುವಂತೆ. ಕಲಿಕೆ–ಕರ್ಣ ಕುಂಡಲಗಳೊಡನೆ ಹುಟ್ಟಲಿಲ್ಲ. ಸುತ್ತನ್ನು ಜನರು ಸೂಕ್ಷ್ಮವಾಗಿ ಅಭ್ಯಸಿಸಿದರು. ಬೌದ್ಧಿಕವಾಗಿ, ಮಾನಸಿಕವಾಗಿ ಬೆಳೆಯಲು ಪ್ರಯತ್ನಿಸಿದರು. ಸತತ ಸಾಧನೆ ನಡೆಸಿದರು. ಬುದ್ಧಿ ಬಲ, ದೇಹ ಬಲ ಎರಡನ್ನೂ ಬದಿಗಿರಿಸಿ, ಆತ್ಮ ಬಲವನ್ನು ಹೆಚ್ಚಾಗಿ ನೆಚ್ಚಿದರು. ಅಂತರಂಗದ ತುಡಿತಗಳೇ ಅವರಿಗೆ ಬದುಕಿನಲ್ಲಿ ದಾರಿ ದೀಪವಾಯಿತು.

ಹರೆಯದ ಹೊಸ್ತಿಲು ಮೆಟ್ಟುವುದಕ್ಕೂ ಮೊದಲು ಮದುವೆಯೊದರು ಹೆಂಡತಿಯನ್ನು ಮನೆಯಲ್ಲಿಯೇ ಉಳಿಯಗೊಟ್ಟು ಸೀಮೆಗೆ ಹೊರಟು ಹೋದರು. ಹೇರಳ ಹಣ ಸುರಿಸಿ, ಬ್ಯಾರಿಸ್ಟರ್ ಆದರು. ತಾಯಿ ನಾಡಿಗೆ ಹಿಂತಿರುಗಿದರು; ವೃತ್ತಿಗೆ ಕಾಲಿಟ್ಟರು. ಅಂದಿನ ದಿನಗಳಲ್ಲಿ ಈ ವೃತ್ತಿಗೆ ಇದ್ದ ಮರ್ಯಾದೆ, ಸ್ಥಾನ–ಮಾನ, ಆದಾಯ ಯಾರನಾಲಿಗೆಯಲ್ಲೂ ಸೀರು ತರುವಂತ ಹದು. ಈ ವೃತ್ತಿ ಅವರನ್ನು ಆಕರ್ಷಿಸಲಿಲ್ಲ. ಕೈಗೆ ಬಂದ ಮೊದಲ ಕೇಸನ್ನು, ಫೀಜು ಸಹಿತ ಬೇರೊಬ್ಬರಿಗೆ ವಹಿಸಿದರು. ತಮ್ಮ ಕಕ್ಷಿಯ ಪರ ವಾದಿಸಲೆಂದು ಎದ್ದು ನಿಂತಾಗ ಎದೆ ಕಂಪಿಸಿತು. ನಿಂತ ನೆಲ ಕುಸಿಯುವಂತೆ ಕಂಡಿತು. ಇದು ತನಗೆ ಪೇಳಿ ಸಿದ್ದಲ್ಲವೆಂದು ವೃತ್ತಿಗೆ ಶರಣು ಹೊಡೆದರು.

ನೆಂಟರು, ಬಂಧುಗಳು ಒತ್ತಾಯಿಸಿದರು. ಅನುಕೂಲ ವಾತಾವರಣ ನಿರ್ಮಿಸುವ ಭರವಸೆ ಕೊಟ್ಟರು ದಕ್ಷಿಣ ಆಫ್ರಿಕೆಯಲ್ಲಿ ನೆಲೆಸಿದ ಭಾರತೀಯರು ಆವರನ್ನು ಅಲ್ಲಿಗೆ ಆಹ್ವಾನಿಸಿದರು. 1893ರಲ್ಲಿ ಗಾಂಧಿಜಿ ಆಫ್ರಿಕೆಗೆ ಹೋದರು.

ಅಲ್ಲಿ ಬಿಳಿಯ ಜನ, ಭಾರತೀಯರನ್ನು ನಡೆಸಿಕೊಳ್ಳುತ್ತಿದ್ದ ರೀತಿಯನ್ನು ಕಂಡು ಮರುಗಿದರು ಆವರ ಕೋಚನೀಯ ಸ್ಥಿತಿಯನ್ನು ಕಂಡು ರೊಚ್ಚಿಗೆದ್ದರು ಆದನ್ನು ಪ್ರತಿಭಟಿಸಿದರು ಅಸಹಾಯಕರಾಗಿದ್ದ ಜನ ಸಹಾಯಕರಾದರು. ಮೂಕ ಸಂಕಟ ಮೂರ್ತಸ್ವರೂಪ ತಳೆಯಿತು. ಜನತೆಯ ಮೂಕ ಕೋಕದ ಕಾವು ಅನ್ಯರನ್ನು ತಟ್ಟಿತು. ಆ ಕಾವಿನಿಂದ ಜನರ ಮೈ ಬಿಸಿಯಾಯಿತು; ಹೊಸ ಜೀವ ಸಂಚಾರವಾಯಿತು. ಶಾಂತಿಯುತ, ಸಾಮುದಾಯಿಕ ಚಳುವಳಿ ಮೈ ತಳೆಯಿತು. ಈ ಸಂಬಂಧ ಗಾಂಧೀಜಿ ಮೂರು ಬಾರಿ ಸೆರೆಮನೆಗೆ ಹೋದರು.

ವಾದವನ್ನು ವೃತ್ತಿಯಾಗಿ ಅಪ್ಪಿ ಕೊಂಡರು ಗಾಂಧೀಜಿ. ಹೀಗೆ ವಾದಿಸಿದ್ದಕ್ಕೆ ಆ ಕಕ್ಷಿ ತನ್ನ ಜೊಕ್ಕಸ ಬಿಚ್ಚುತ್ತಾನೆ.. ರೊಕ್ಕ ಪಡೆದು ವಾದಿಸುವಲ್ಲಿ ಗಾಂಧೀಜಿ ಹಿಂಜರಿದರು.; ಹಿಂದಲೇಟು ಹಾಕಿದರು. ತಪ್ಪಿಗೆ ಉನ್ಯಾಯವೆಂದು ಕಂಡುದನ್ನು ಎತ್ತಿ ಆಡುವಲ್ಲಿ ಎತ್ತಿದ ಕೈ ಎನಿಸಿದರು.

ಈ ಶಾಂತಿ ಸಮರ ಅಶಾಂತಿಯ ದಳ್ಳುರಿಯನ್ನು ಹರಡಿತು. ಬಿಳಿಯರಲ್ಲಿ ಹುದುಗಿದ್ದ ವರ್ಣ ದ್ವೇಷ ಬೆಳಕಿಗೆ ಬಂತು. ಜಾಗತಿಕ ಜನಶಕ್ತಿಗೆ ಉಗ್ರ ಪ್ರತಿಭಟನೆಗೆ ವಾರಿ ಮೂಡಿ ಕೊಟ್ಟಿತು ಪ್ರಪಂಚದ ಸಹಾನುಭೂತಿಗೆ ಎಡೆ ಮೂಡಿಕೊಟ್ಟಿತು.

ಗಾಂಧೀಜಿ ಈ ಪ್ರಯೋಗದಲ್ಲಿ ಯಶಸ್ವಿಗಳಾದರು. ಈ ಯಶಸ್ಸು ಆವರಿಗೆ ಕೀರ್ತಿಯನ್ನು ತಂದಿತು. ಹೋಗುತ್ತ ಬರಿಗೈಯಲ್ಲಿ ಆಫ್ರಿಕೆಗೆ ಹೋಗಿದ್ದರು–ತಮ್ಮ ಆ ವೈಫಲ್ಯ ಪರೀಕ್ಷೆಗೆ. ಹಿಂದಿರುಗುತ್ತಾ ಕೀರ್ತಿಯ ಅಖಂಡ ಸಂಪತ್ತಿನ ಹೊರೆ ಹೊತ್ತು ಕೊಂಡೇ ತಾಯ್ನೆಲದಲ್ಲಿ ಕಾಲಿಟ್ಟರು.

ಆವರು ಆಫ್ರಿಕೆಗೆ ಪಯಣ ಹೊರಟದ್ದು 1893ರಲ್ಲಿ. ಮರಳಿ ಬಂದುದು 1915ರಲ್ಲಿ. ಈ ಅವಧಿಯಲ್ಲಿ ಹೊಸ ತಲೆಮಾರು ತಲೆಯೆತ್ತಲಾರಂಭಿಸಿತ್ತು. ಜನತೆಯ ದೃಷ್ಟಿ ಪಲ್ಲಟವಾಗಿತ್ತು.

ಆಫ್ರಿಕೆಯಲ್ಲಿ ಆವರು ಸಾಧಿಸಿದ್ದನ್ನು ತಿಳಿದ ಭಾರತದ ಮುಗ್ಧ ಜನ ಈ ಚರಿತ್ರಾರ್ಹ ಪುರಷನನ್ನು ಅದ್ದೂರಿಯಿಂದ ಸ್ವಾಗತಿಸಿತು. ಹೋದೆಡೆಯೆಲ್ಲಾ ಹಬ್ಬದ ಸಂಭ್ರಮ.

ಅಂತಹ ಒಂದು ಸಮಾರಂಭ ಮುಂಬಯಿಯಲ್ಲಿ ನಡೆಯಿತು. ಕೀರ್ತಿಶೇಷ ಮಜಮ್ಮದಾಲಿ ಜಿನ್ನಾ ಅಂದಿನ ಸಮಾರಂಭದ ಅಧ್ಯಕ್ಷರು ಆ ದಿನಗಳಲ್ಲಿ ದಿ ಜಿನ್ನಾ ಉಜ್ವಲ ರಾಷ್ಟ್ರೀಯ ವಾದಿಗಳು. ಮುಂಬಯಿ ಪ್ರಾಂತ್ಯದ 'ಹೋಂ ರೋಲ್' ಲೀಗಿನ ಅಧ್ಯಕ್ಷರು.

ಬೊಗಲುಗಚ್ಚೆ. ಬಿಳಿಯ ಉದ್ದನೆಯ ಕೋಟು, ಕಪ್ಪೇವಾಡ ಶೈಲಿಯ ಮುಂಡಾಸ ಸುತ್ತಿದ ವ್ಯಕ್ತಿಯನ್ನು ಜನ ಕುತೂಹಲದಿಂದ ನೋಡಿದರು ಆಸಕ್ತಿಯಿಂದ ಆಲಿಸಿದರು. ಆ ಕಾಲದ ನಾಯಕರಲ್ಲಿ ಕಂಡು ಬಾರದ ವಿಶೇಷತೆಯನ್ನು ಗುರುತಿಸಿದರು. ಆವರದು ಆಕರ್ಷಕ ವ್ಯಕ್ತಿತ್ವವಲ್ಲ. ಪ್ರಕಾಂಡ ಪಾಂಡಿತ್ಯ ಮೊದಲೇ ಇರಲಿಲ್ಲ. ನೋಡಲು ಮಾತ್ರವಲ್ಲ; ಮಾತಿನಲ್ಲಿಯೂ ಆಷ್ಟೆ ಹೇಳುವ ವಾಗ್ವಿಲಾಸ, ವಾಗಾಡಂಬರವಿರಲಿಲ್ಲ. ಕುಳಿತು ಕೇಳುವ ಜನರನ್ನು ಬೆರಗುಗೊಳಿಸುವ ವಾಗ್ಝರಿ ಇರಲಿಲ್ಲ.ತೀರ ಸೌಮ್ಯ. ಜಿನ್ನಾ, ಶಾಸ್ತ್ರಿ, ಲಜಪತ ರೈ, ಚಿತ್ತರಂಜನರನ್ನು ಕೇಳಿದ ಜನಕ್ಕೆ ಕಳಪೆಯೆಂದು ಕಂಡಿರ ಬೇಕು. ಮಾತಿನಲ್ಲಿ ಅಲಂಕಾರ ಇರಲಿಲ್ಲ. ಬೇಡದ ವಿವರಣೆಗಳಿಲ್ಲ, ಉತ್ಪ್ರೇಕ್ಷೆಯ ಸುಳಿವು ಇಲ್ಲ. ಬಳಸುತ್ತಿದ್ದುದು ಬಹು ಸುಲಭವಾದ ಭಾಷೆ, ಶುದ್ಧ, ಸರಳ ಹಿಂದಿ.

ಹೋದೆಡೆಯೆಲ್ಲ ತನ್ನ ಗುರು ಗೋಖಲೆಯೆಂದು ಹೇಳುತ್ತ ಬಂದರು. ಸ್ವಂತ ಎನ್ನುವುದು ಇಲ್ಲವೇನೋ ಎನ್ನುವಷ್ಟು, ನಿರಾಳ; ನಿರಾಡಂಬರ. ಆ ದಿನಗಳಲ್ಲಿ ಭಾರತೀಯ ಕ್ಷಿತಿಜದ ಪ್ರತಿಭಾನ್ವಿತ ನಕ್ಷತ್ರ ಲೋಕಮಾನ್ಯ ಬಾಲ ಗಂಗಾಧರ ತಿಲಕರಿಗಿಂತ, ರೀತಿ, ಮಾತು, ವಿಧಿ, ವಿಧಾನಗಳಲ್ಲಿ ಬೆಲೆಯೇ ಇರುವಂತೆ ಭಾಸವಾಗುತ್ತಿತ್ತು. ತಿಲಕರಿಂದ ಪ್ರಭಾವಿತರಾದವರು ಸುಲಭವಾಗಿ ಆವರನ್ನು ನಾಯಕರಾಗಿ ಸ್ವೀಕರಿಸಲು ಸಿದ್ಧರಾಗಲಿಲ್ಲ.

ಉತ್ಸಾಹದಿಂದ ಆವರನ್ನು ಕಾಣ ಬರುವವರ ಸಂಖ್ಯೆ ಹೆಚ್ಚಿತು. ಕವಿಗೊಟ್ಟು ಕೇಳುವವರ ಪ್ರಮಾಣ ಬೆಳೆಯಿತು. ಈ ಸರಳ ನಡತೆ, ನೇರ ಮಾತು, ಕೊನೆ ಕೊನೆಯಲ್ಲಿ ಜನತೆಯ ಮೇಲೆ ತನ್ನ ಚಚ್ಚನ್ನೊತ್ತಿತು. ದೀನ-ದರಿದ್ರರ, ದುಃಖ-ನೈರಾಸ್ಯಗಳನ್ನು ಮೊದಲು ದೂರ ಮಾಡಿ ಎಂದು ಅನುಯಾಯಿಗಳಿಗೆ ಅವರು ಮೊದಲು ಹೇಳುತ್ತ ಬಂದರು. ಈ ನಿಷ್ಠುರ ಸತ್ಯದ ಪ್ರತಿವಾದಕರು ನಾಡಿನ ನಾಲ್ದೆಸೆಯಲ್ಲಿ ಹುಟ್ಟಿಕೊಂಡರು. ಅದು ಗಾಂಧಿಜಿಯ ಮೊತ್ತಾಗದೆ ನಾಡಿನ ಮೊತ್ತಾಯಿತು

ಗೋಖಲೆ, ತಿಲಕರ ನಾಯಿಂದ ತೆರವಾದ ಸ್ಥಾನ ಸಹಜವಾಗಿಯೇ ಗಾಂಧಿಜಿಗೆ ಲಭಿಸಿತು. ಅಲ್ಲಿಂದೀಚ್ಗಿನ ಮೂರು ದಶಕಗಳ ಭಾರತದ ಚರಿತ್ರೆಯೆನ್ನುವುದು ಗಾಂಧಿಜಿಯ ಜೀವಿತದೊಡನೆ ಹಾಸು ಹೊಕ್ಕಾಗಿದೆ. ಭಾರತ ಎಂದರೆ ಗಾಂಧಿಜಿ, ಗಾಂಧಿಜಿ ಎಂದರೆ ಭಾರತ.

ಸಾವು ಎಲ್ಲರಿಗೆ ಬರುತ್ತದೆ. ಆದರೆ ಗಾಂಧಿಜಿಯ ಸಾವು—ಬೇಡಿದರೂ ಸಿಗದಂತಹ ಸಾವು—ಈ ರೀತಿಯ ಸಾವು ಕೆಲವರಿಗೇ ಮಿಸಲು. ಆಸೆ—ಭಯಗಳನ್ನು ಮೆಟ್ಟಿ ನಿಂತವರ ಪಾಲಿಗೆ ದಕ್ಕುವ ಮೆಟ್ಟಲು. ಈ ರೀತಿಯ ಸಾವಿಗೆ ಅವರು ಆರ್ಹರಲ್ಲ. ಅವರಿಗೆ ಸಲ್ಲಲೂ ಬಾರದಿತ್ತು. ಆದರೆ ಮೂರ್ಖ ಜನತೆ, ಇಂತಹ ಅತಿಮಾನವ ಶಕ್ತಿಗೇ ಹುಡುಕಿ ಹುಡುಕಿ ಈ ಸಾವನ್ನು ತಂದು ಕೊಡುತ್ತಿದೆ. ಚರಿತ್ರೆಯ ಪುಟಗಳೆಲ್ಲ ಆದರಿಂದ ತುಂಬಿ ಹೋಗಿವೆ.

ಸೀಸರ್, ಲಿಂಕನ್, ಲಿಯೂಖಿಲ್, ಕೆನೆಡಿ, ಲೂಥರ್‌ಕಿಂಗ್—ಈ ಸಾಲಿಗೆ ಸೇರಿದವರು, ಸೇರಿ ಆಮರರಾದವರು.

(ಆಧಾರಿತ)

ಹನ್ನೊಂದು

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303 Grams: HOST SATKAR
2 72304

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

NAVAYUGA 25-11-1971

Registered with the Registrar of News Papers for India under No. R. N. 3546/'57

REGD. No B. G. 176
LICENCE No. 33
Licensed to Post without Prepayment

ತಲೆಯ ಹಾಗೆ ಬಾಲ

ಇದೊಂದು ನೂತನ. ಯಾಕೆ ಆರೀತಿ ಹೇಳುತ್ತಾರೆಂಬುದು ಗೊತ್ತಿರಲಿಲ್ಲ. ಹಾವಿನ ವಿಷಯದಲ್ಲಿ ಕೂಡಾ ಹಾಗೆ ಇರುವದಿಲ್ಲ. ತಲೆಗೂ ಬಾಲಕ್ಕೂ ವ್ಯತ್ಯಾಸ ಇದೆ. ಒಂದು ಜಾತಿಯ ಹಾವನ್ನು ಹಾವಾಡಿಗರು ಹಿಡಿದು ತಂದು ಇಬ್ಬಾಯಿಯ ಹಾವೆಂದು ತೋರಿಸಿ ಹಣ ಕೇಳುವದುಂಟು. ಈ ಇಬ್ಬಾಯಿಯ ಹಾವಿನಿಂದಾಗಿ ಆ ಹೆಸರು ಬಂದಿರಬಹುದೇ? ಬಂದಿರ ಬಹುದು. ಆದರೆ, ಸಾರ್ಥಕಗೊಳಿಸಿದ್ದು ಬೇರೆ.

ಬೆಳಗಾಂವಿನಲ್ಲಿ ಹೊಸ ಕಾಂಗ್ರೆಸ್ಸಿನ ಹೊಸ ರೀತಿಯ ಹೊಸ ರಾಜಕೀಯ ಸಭೆಯೊಂದು ಸೇರಿತು ಅದರಲ್ಲಿ ಕರ್ನಾಟಕ ಹೊಸ ಕಾಂಗ್ರೆಸ್ಸಿನ ಕಲಿ—ನಾಯಕರುಗಳು ಕಲೆತಿದ್ದರು; ಮಧ್ಯದ ಮಂತ್ರಿಗಳೂ ಇದ್ದರು, ಮಾಜಿ ಮಂತ್ರಿಗಳೂ ಇದ್ದರು, ಮುಂದಕ್ಕೆ ಮಂತ್ರಿಗಳಾಗುವ ಕನಸು ಕಾಣುತ್ತಿರುವವರೂ ಇದ್ದರು, ಪ್ರದೇಶ ಸಮಿತಿಯ ಅಧ್ಯಕ್ಷರೂ ಇದ್ದರೂ.

ಅಲ್ಲಿ ಹೊಸ ಕಾಂಗ್ರೆಸ್ಸಿಗೆ ಹೊಸತಾಗಿ ಬಂದಿದ್ದನು. ಶಿವಪ್ಪ (ಸಂಸತ್ ಸದಸ್ಯ) ನವರು ಒಂದು ಠರಾವನ್ನು ಮಂಡಿಸಲು ಎದ್ದು ನಿಂತರು. ಹಳೆಯ ಕಾಂಗ್ರೆಸ್ಸ್, ಪ್ರಸವಾ, ಸಂಸೋಪಾ, ಸ್ವತಂತ್ರ ಮತ್ತು ಜನಸಂಘಗಳಿಂದ ಮೊನ್ನೆಯ ಲೋಕ ಸಭಾ ಚುನಾವಣೆಯ ನಂತರ ಹೊಸ ಕಾಂಗ್ರೆಸ್ಸಿಗೆ ಹೊಸತಾಗಿ ಸೇರಿದವರಿಗೆ ನಾಳೆಯ ವಿಧಾನ ಸಭಾ ಚುನಾವಣೆಯ ಸಮಯ ಸ್ಥಳಕೊಡಬಾರದು, ಹಕ್ಕಪತ್ರದಲ್ಲಿ ಪದವಿಕೊಡಬಾರದೆಂಬುದು ಪ್ರಸವಾದಿಂದ ಲೋಕ ಸಭಾ ಚುನಾವಣೆಗಿಂತ ಮೊದಲೇ ಹೊಸ ಕಾಂಗ್ರೆಸ್ಸಿಗೆ ಸೇರಿದ್ದ ಶಿವಪ್ಪನವರ ಠರಾವು. ಈಗ ಸಂಸೋಪಾ-ಪ್ರಸವಾ ಇಲ್ಲ. ಹಾಗಾದರೆ ನೇರ ಸೋಪಾದಿಂದ ಬಂದವರಿಗೆ, ಮುಸ್ಲಿಂ ಲೀಗಿನವರಿಗೆ ಟಿಕೇಟು ಕೊಡಬಹುದೇನೆಂದು ಅಲ್ಲಿ ಯಾರೂ ಕೇಳಲಿಲ್ಲ. ಶಿವಪೂಜೆಯ ನಡುವೆ ಕರಡಿ ಬರುವದೇ? ಕರಡಿಯಲ್ಲ ದ್ರೇಗನ್ ಬಂತು ಅಲ್ಲಿ.

ಠರಾವನ್ನು ಮಂಡಿಸಲು ಶಿವಪ್ಪನವರು ಸಿದ್ಧವಾಗಿ ಎದ್ದು ನಿಂತರು. ಅವರೊಡನೆ ತ್ರಿದ್ವಾಗ ಮಧ್ಯ ಉಪಮಂತ್ರಿ ಶಂಕರಾನಂದರವರಿಗೆ ಆನಂದವಾಗಲಿಲ್ಲ. ಆವರದಕ್ಕೆ ಅಡ್ಡ ಬಂದರು ಅದುವೇ ಸೂಜನೆ ಇರಬಹುದು. ಕಾರ್ಯದರ್ಶಿಗಳು ಕಾಲಿನ ಮೇಲೆ ನಿಂತರು, ವೇದಿಕೆಯ ಮೇಲಿದ್ದವರು ಶಿವಪ್ಪನವರಿಗೆ ಮುತ್ತಿಗೆ ಹಾಕಿದರು. ಮೇಲಿದ್ದವರು ಹೀಗೆ ಮೊಡುತ್ತಿರುವಾಗ ಕೆಳಗಿದ್ದವರು ಕೇಳಿಯಲ್ಲಿ ಭಾಗವಹಿಸದೆ ಗುಮ್ಮನಂತೆ ಭಾಗವಹಿಸದಿರಲು ಆದೇನು ಬೆಳಗಾಂವ್ಯೋ, ಅಥವಾ ಕಾರ್ಕಳವ್ಯೋ, ವೇಣೂರೋ, ಶ್ರವಣಬೆಳಗೊಳವ್ಯೋ? ಶಿವಪ್ಪನವರು ಉಸ್ಸಪ್ಪವೆಂದು ಕುಳಿತುಬಿಟ್ಟರು

ಪ್ರದೇಶ ಕಾಂಗ್ರೆಸ್ಸ್ ಸಮಿತಿಯ (ಹೊ) ಅಧ್ಯಕ್ಷ ದೇವರಾಜ ಅರಸರು ಧ್ವನಿಮರ್ದಕದ ಮುಂದಕ್ಕೆ ಬಂದು ಠರಾವನ್ನು ಓದುವಂತೆ ಶಿವಪ್ಪನವರಿಗೆ ಅಪ್ಪಣೆಕೊಟ್ಟರು. ಅರಸರ ಆಣತಿಗೆಮರಾಗಿ ಅಡುವವನ್ಯಾರು? ಆನಂದದಿಂದ ಶಂಕರಾನಂದರು ಎದ್ದು ನಿಂತು, ಠರಾವಿನಲ್ಲಿದ್ದ ವಿಷಯ ಗೊತ್ತಿಲ್ಲದೆ ತಾನು ರಾದ್ಧಾಂತ ನೂಡಿದುದಾಗಿ ಎಲ್ಲರಿಗೂ ತಿಳಿಸಿದರು. ಡಾ| ಇಂದಿರಾಗಾಂಧಿಯವರ ಮಂತ್ರಿಯವರಿಗೆ ವಿಷಯ ತಿಳಿಸದೆ ಇದ್ದದ್ದು ಶಿವಪ್ಪನವರ ತಪ್ಪಲ್ಲವೇನು? ವಿಷಯ ತಿಳಿದುಕೊಳ್ಳದೆನೇ ಅಡ್ಡ ಬರುವದು ಯಾವ ಸಂಪ್ರದಾಯವೆಂದು ಸಂಪ್ರದಾಯ ವಿರೋಧಿ ಮಧ್ಯಮಂತ್ರಿಯವರನ್ನು ಯಾರೂ ಕೇಳಬಾರದು. ಅದುವೇ ಹೊಸ ಸಂಪ್ರದಾಯ. ವೇದಿಕೆಯ ಮೇಲಿದ್ದ ಹಿರಿಯರು ಹೀಗೆ ಕಿರಿಕಿರಿ ಮಾಡುತ್ತಿರುವಾಗ ಕೆಳಗಿದ್ದ ಕಿರಿಯರು ಸುಮ್ಮಗಿದ್ದಲ್ಲಿ ಬಿಸಿರಕ್ತದ ಬೆಲೆ ಏನು? ಅವರೂ ಆರಂಭಿಸಿದರು. ಎಲ್ಲರೂ ಸೇರಿಕೊಂಡರು. ಕೆಲವರು ಮಂಟಪದತ್ತ, ಕೆಲವರು ಮಹಿಳೆಯರತ್ತ, ಕೆಲವರು ವೇದಿಕೆಯತ್ತ, ಕೆಲವರು ವೇಣಿಯರತ್ತ, ಕೆಲವರು ಧ್ವನಿವರ್ಧಕದತ್ತ, ಕೆಲವರು ಛಣಿಗಳತ್ತ ಹೀಗೆ ತಮಗಿಷ್ಟ ಬಂದಂತೆ ವರ್ತಿಸಿದರು.

ನೂಕು—ನುಗ್ಗಲಾಟ,ಗೊಂದಲ,ಗಲಭೆ, ಗುದ್ದಾಟ, ಬಂಡಾಯ ವಗೈರೆ ಇಲ್ಲದೆ ಸಾಧಾರಣವಾಗಿ ಅದ್ಯಾವ ಕಾಂಗ್ರೆಸ್ಸ್ ಸಭೆ ಸಮೂಸ್ಸವಾಗಿದೆ ಅಥವಾ ಸಮೂಸ್ತಗೊಳಿಸಲ್ಪಟ್ಟಿದೆ? ದೊಡ್ಡ ದೊಡ್ಡ ಧುರೀಣರು ಸೇರಿದಲ್ಲಿ ಅದು ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿದೆ. ಪುಟ್ಟ ಪುಡಾರಿಗಳಿರುವಲ್ಲಿ ಪುಟ್ಟ ಪ್ರಮಾಣದಲ್ಲಿ ನಡೆಯುತ್ತದೆ. ಇಲ್ಲದಿದ್ದಲ್ಲಿ ಆ ಹೆಸರಾದರೂ ಏತಕ್ಕೆ? ಆದುದರಿಂದಲೇ ಇರಬೇಕು, ಇಬ್ಬಣದವರೂ ಅದೇ ಹೆಸರಿಗಾಗಿ ಕಚ್ಚಾಡುತ್ತಿರುವದು! ಇವೆಲ್ಲಾ ಕಾಂಗ್ರೆಸ್ಸ್ ಕೂಟದಲ್ಲಿ ಹೊಸತಿರುವದಿಲ್ಲ. ಇದರಿಂದ ತಲೆಯಂತೆ ಬಾಲವೆನ್ನಲು ಬರುತ್ತದೆ ಏನು?

ನವಸ್ರದೇಶ ಕಾಂಗ್ರೆಸ್ಸಿಗರ ಸಭೆ ಮುಗಿದ ಮೇಲೆ ಬೆಳಗಾಂವಿಗೆ ಡಾ| ಇಂದಿರಾ ಗಾಂಧಿಯವರು ಬಂದಿಳಿದರು. ಅವರು ಒಂದು ಸಭೆಯಲ್ಲಿ, ನೇಶದ ಗಡಿಯಲ್ಲಿ ಘಟಿಸುತ್ತಿರುವ ಗಡಿಬಿಡಿಯ ಕುರಿತು ಘಂಟಾಘೋಷವಾಗಿ ವಿವರಿಸಿ, ನಮ್ಮಲ್ಲಿ ಒಕ್ಕಟ್ಟಿರ ಬೇಕೆಂದು ತಿಳಿಯ ಹೇಳಿ. ನಾವು ಶಾಂತಿಪ್ರಿಯರೆಂಬುದನ್ನು ಜ್ಞಾಪಕಪಡಿಸಿದರು. ಅವರು ಅಲ್ಲಿ ನಡೆದಿಬ್ಬ ಕಾಂಗ್ರೆಸ್ಸ್ ಕೂಟದ ವಿಷಯ ಹೇಳಿದ್ದರೋ, ನಿಜವಾಗಿ ಪಾಕಿಸ್ತಾನದ ಪಿತೂರಿಯ ಕುರಿತು ಪ್ರಪ್ರಪ್ರ

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಸಂಪುಟ ೫೧
ಸಂಚಿಕೆ ೧೩

Vol. 51
No. 13

ಉಡುಪಿ, 2—12—1971

ಚಾರುಚಯನ

ಸಂಘಟನೆಯಿಲ್ಲದ ಚುನಾವಣೆ ಗೆದ್ದೀತೆ?

ಅವಿಭಜಿತ ಕಾಂಗ್ರೆಸ್ಸು ನೊಗ ಹೊತ್ತ ಜೋಡೆತ್ತುಗಳನ್ನು ತನ್ನ ಚುನಾವಣಾ ಚಿಹ್ನೆಯಾಗಿ ಇಟ್ಟುಕೊಂಡಿತ್ತು.

ಕಾಂಗ್ರೆಸ್ ತುಕುಡಿಗಳಾದ ಮೇಲೆ ಈ ಸಂಕೇತದ ಬಗ್ಗೆ ವಿವಾದವುಂಟಾಯ್ತು. ಬಹುಜನ ಬಾಸಕರು ಇಂದಿಕೇಟಿನ ಹೆಬ್ಬೆಸ್ತಿರುವುದರಿಂದ ಚಿಹ್ನೆಯು ಇಂದಿಕೇಟಿಗೇ ಸೇರಿದ್ದೆಂದು ಚುನಾವಣಾ ಕಮಿಶನರ್ ತೀರ್ಪು ನೀಡಿದರು.

ಇದನ್ನು ಪ್ರತಿಭಟಿಸಿ ಸಿಂಡಿಕೇಟು ಸರ್ವೋಚ್ಚ ನ್ಯಾಯಾಲಯದ ಮರೆ ಹೋಯಿತು. ಮರೆ ಹೋದದ್ದೇನೋ ಸರಿಯೇ; ಆದರೆ ಅಲ್ಲಿಯೂ ಸಿಂಡಿಕೇಟಿಗೆ ಮುಖಭಂಗವಾಯ್ತು.

ತಾನೇ ನಿಜವಾದ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು ಎಂದೂ ಇನ್ನೊಂದು ಗುಂಪು ಪಕ್ಷತ್ಯಾಗಿಗಳ ಸಮೂಹವೆಂದೂ ಹೇಳಿಕೊಂಡು ಬಂದ ಸಿಂಡಿಕೇಟಿಗೆ ಇದು ಬೊಕ್ಕೆಯ ಮೇಲೆ ಬರೆಯಿತ್ತಂತಾಯ್ತು.

ಇನ್ನುಳಿದುದು ಆಸ್ತಿ—ಪಾಸ್ತಿಯ ವಿಚಾರ. ಕಾಂಗ್ರೆಸ್ಸಿನ ಆಸ್ತಿ ಪಾಸ್ತಿಗಳು ಕಾಂಗ್ರೆಸ್ಸಿಗೇ ಸೇರಬೇಕು—ಇದು ನಿಸ್ಸಂದೇಹ.

ಎರಡು ಕಾಂಗ್ರೆಸ್ಸುಗಳಲ್ಲಿ ಯಾವುದಾದರೂ ಒಂದು ಮಾತ್ರವೇ ಕಾಂಗ್ರೆಸ್ಸಾಗಬೇಕಾದ್ದಾದ್ದರಿಂದ ಇದು ನ್ಯಾಯ. ಕಾಂಗ್ರೆಸ್ಸು ಯಾವುದು ಎಂದು ತೀರ್ಮಾನ ಮಾಡಿ ಆಸ್ತಿ ಪಾಸ್ತಿಗಳ ವಿಲೇವಾರಿಯಾಗಬೇಕೆಂದಿದ್ದರೆ, ಮತ್ತೆ ನಾಗರಿಕ ನ್ಯಾಯಾಲಯವನ್ನು ಶರಣು ಹೋಗಬೇಕು.

ಸದ್ಯ ಹೆಚ್ಚಿನ ಆಸ್ತಿಪಾಸ್ತಿಗಳು ಸಿಂಡಿಕೇಟಿನ ಕೈಗಳಲ್ಲೇ ಇರುವುದರಿಂದ ಮುಂದುವರಿಯಬೇಕಾದ್ದು ಇಂದಿಕೇಟು.

ಇಂದಿಕೇಟಿಗರು ಮುಂದೂ ಸರಿದರು. ಕಛೇರಿಯ ನೌಕರರು ಕೇಳಿಕೊಂಡರೆಂದು ಜಂತರ್‌ಮಂತರನ್ನು ನುಗ್ಗಿದರು. ಸಿಂಡಿಕೇಟಿನ ಅಧ್ಯಕ್ಷರನ್ನು ಕಾರ್ಯಾಲಯದಿಂದ ಹೊತ್ತು ಮೈದಾನದಲ್ಲಿ ಕೂಡಿಸಿದರು.

ಜನತೆಗೊಂದೆತ್ತನು ಪಾಠವನ್ನು ಕಲಿಸಿದರು. ಮಜದೂರರು ಕಾರ್ಖಾನೆಯ ಒಡೆತನವನ್ನು ಮೂರನೆಯವರಿಗೆ ಕೊಟ್ಟು ಬಿಡಬಹುದು. ಸರಕಾರಿ ಕಛೇರಿಗಳ ಮೂಲಿಕತ್ವವನ್ನು ನೌಕರರು ಯಾರಿಗಾದರೂ ದಾನ ಮಾಡಬಹುದು. ಬಾಡಿಗೆದಾರರು ಮನೆಯನ್ನು ಯಾರು ಯಾರಿಗೋ ಮಾರಿ ಬಿಡಬಹುದು.

ನಾಗರಿಕರ ಸಂರಕ್ಷಣೆಗೆಂದು ಅವರ ಬೇಡಿಕೆಯೆಂದು ಆಕ್ರಮಣ ಬುದ್ಧಿ ತೋರಿಸಿದವರಲ್ಲಿ ಪ್ರಬಲರು ಆಗ್ರಗಣ್ಯರು..ಸರ್ವಾಧಿಕಾರ ಮನೋವೃತ್ತಿಯಲ್ಲಿ ಅವರನ್ನೂ ಇಂದಿಕೇಟಿಗರು ಮೆಟ್ಟಿನಿಂತರು.

ಇದೀಗ ಸಿಂಡಿಕೇಟು ತನ್ನ ಬಗ್ಗೆ ಬಹಳ ಚಿಂತಿತವಾಗಬೇಕಾಗಿದೆ. ನ್ಯಾಯಾಲಯವು ಜೋಡೆತ್ತಿನ ಚಿಹ್ನೆಯನ್ನು ಇಂದಿಕೇಟಿಗೆ ಕೊಟ್ಟುದರಿಂದ ಇದು ಮತ್ತಷ್ಟು ಹೆಚ್ಚಿದೆ.

ಚುನಾವಣಾ ಚಿಹ್ನೆಗಳಲ್ಲಿ ಸಂಕೇತವನ್ನು ಕಾಯ್ದುರಿಸಬೇಕಾದರೆ. ಉದು ತನ್ನ ಹೆಸರನ್ನು ಬದಲಾಯಿಸಬೇಕೆಂದು ಚುನಾವಣಾ ಆಯೋಗ ಸಲಹೆ ನೀಡಿದೆ.

ತನ್ನ ಹೆಸರನ್ನಾದು ಬದಲಾಯಿಸಲು ಒಪ್ಪಿದೆ—ಹೇಗೆ?

'ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸು (ಸಂಸ್ಥಾ).

ಈ ಬದಲಾವಣೆಯನ್ನು ಚುನಾವಣಾ ಆಯೋಗವು ಒಪ್ಪಿಕೊಳ್ಳುವುದೆ?

ಪಕ್ಷದ ಹೆಸರನ್ನು ಬದಲಾಯಿಸಲು ಆಯೋಗಕ್ಕೆ ಸಲಹೆ ನೀಡಲು ಅಧಿಕಾರವಿದೆಯೆ? ಈ ಬಗ್ಗೆ ಮತ್ತೆ ನ್ಯಾಯಾಲಯವು ನಿರ್ಧರಿಸಬೇಕು.

ಇಂತಹ ಸಲಹೆ ನೀಡಲು ಕಾರಣವೇನು? ಎರಡೂ ತುಕುಡಿಗಳು ಕಾಂಗ್ರೆಸ್ಸು ಎಂದು ತಮ್ಮನ್ನು ಕರೆದು ಕೊಳ್ಳುವುದರಿಂದ ಜನತೆಯಲ್ಲಿ ಅನಪೇಕ್ಷಿತ ಗೊಂದಲವುಂಟಾಗುವುದೆಂದು.

ಇದೇ ಗೊಂದಲದ ನಡುವೆ ಭಾರೀ ಚುನಾವಣೆಯೊಂದು ನಡೆದು ಹೋಯ್ತು. ಮುಂದೆಯೂ ಏಕೆ ನಡೆಯಬಾರದು? ಎಲ್ಲಿಯ ವರೆಗೆ? ನಿಜವಾದ ಕಾಂಗ್ರೆಸ್ಸು ಯಾವುದೆಂದು ತೀರ್ಮಾನವಾಗುವವರೆಗೆ.

ಆ ತೀರ್ಮಾನವಾಗಿದೆಯೆನ್ನುತ್ತಾರೆ ಇಂದಿಕೇಟಿಗರು. ಈ ವರ್ಷಾದಿಯಲ್ಲಿ ಶ್ರೀಮತಿ ಇಂದಿರಾಗಾಂಧಿ ಪಕ್ಷಕ್ಕೆ ತುಂಬಿ ತುಳುಕಾಡುವ ಮತ ನೀಡಿ ಅದೇ ಕಾಂಗ್ರೆಸ್ಸೆಂದು ಜನ ಒಪ್ಪಿದ್ದಾರೆ. ನ್ಯಾಯಾಲಯದಲ್ಲಿಯೂ ಅವರಿಗೆ ಪಕ್ಷಕ್ಕೇ ಚುನಾವಣಾ ಚಿಹ್ನೆ ದೊರೆತಿದೆ.

ಜನತೆಯು ತೀರ್ಮಾನಕ್ಕೆ ಬಿಡುವುದಾದರೆ ಯಾವುದು ನಿಜವಾದ ಕಾಂಗ್ರೆಸ್ಸು ಎಂದೇ ಒಂದು ಚುನಾವಣೆ ನಡೆಸಬೇಕಾದೀತು —ಇಲ್ಲಿ ನೂರಾರು ತಾಂತ್ರಿಕ ಅಡೆತಡೆಗಳು ತಲೆ ಹಾಕುತ್ತವೆ. ನ್ಯಾಯಾಲಯವು ತನ್ನ ನಿರ್ಣಯ ಚುನಾವಣಾ ಚಿಹ್ನೆಗೆ ಮಾತ್ರ ಸಂಬಂಧಿಸಿದ್ದೆಂದು ಸಾರಿಬಿಟ್ಟಿದೆ.

ನಿಜವಾದ ಕಾಂಗ್ರೆಸ್ಸು ಯಾವುದು ಎಂಬುದು ನಿರ್ಣಯಕ್ಕೆ ಬಾಕಿ ಉಳಿದಿದೆ. ನ್ಯಾಯಾಲಯದ ತೀರ್ಮಾನ ಉಭಯ ಪಕ್ಷೀಯರಿಗೂ ಬಂಧಸಕಾರಿ.

ತಾನು ಪಡೆದ ಸಂಕೇತವನ್ನು ತಾನು ಬಳಸುವುದಿಲ್ಲವೆಂದೂ ಅದನ್ನು ಕೆತ್ತು ಹಾಕಬೇಕೆಂದೂ ಇಂಡಿಕೇಟು ಚುನಾವಣಾ ಆಯೋಗವನ್ನು ಹೇಳಿಕೊಂಡಿದೆ. ತನಗೆ ದನ—ಕರುಗಳೇ ಇರಲೆಂದು ಸೂಚಿಸಿದೆ.

ಸಿಂಡಿಕೇಟು ಚರಖವಲ್ಲಿ ನೂಲುವ ಮಹಿಳೆಯೇ ತನಗೆ ಬೇಕೆಂದಿದೆ. ಇದನ್ನು ಪಡೆಯಬೇಕಾದರೆ, ಅದರ ಬದಲಾವ ಹೆಸರು ಆಯೋಗಕ್ಕೆ ಸಮ್ಮತವಾಗಬೇಕು.

ಕೆಲವು ರಾಜ್ಯ ವಿಧಾನಸಭೆಗಳಿಗೆ ಚುನಾವಣೆಗಳು ಇನ್ನು ನೂರು ದಿನಗಳೊಳಗೆ ಮುಗಿಯಬಲಿವೆ.

ಅವನ್ನು ಎದುರಿಸಲು ಈಗಿಂದೀಗಲೇ ಅಣಿಯಾಗಬೇಕು. ಇನ್ನೊಂದು ತಿಂಗಳೊಳಗೆ ಎಲ್ಲವೂ ನಿರ್ಧರವಾಗಬೇಕು.

ಸಿಂಡಿಕೇಟು ತನಗೆ ಬಿದ್ದ ಹೊಡೆತದಿಂದ ಚೇತರಿಸ ಬೇಕು. ಈಗ್ಗೆ ಒಂದು ವರ್ಷದಿಂದ ಅದರ ಬವಣೆ ಅವರ್ಣನೀಯ.

ಈ ನಡುವೆ ಹಲವಾರು ಸಿಂಡಿಕೇಟಿಗರ ಧೈರ್ಯವೂ ಉಡುಗಿ ಹೋದಂತಿದೆ. ಪೆಟ್ಟು ತಿಂದೂ ತಿಂದೂ ಅವರು ಸೋತು ಹೋಗಿದ್ದಾರೆ. ತಮಗೆ ಕುರುಡು ಕಾಂಚಾಣದ ಬೆಲೆಯೂ ಇಲ್ಲವೇ ಎಂದವರು ನೊಂದಿದ್ದಾರೆ.

ರಾಜ್ಯಕೀಯವನ್ನು ಜಾಯಮಾನವಾಗಿ ರಿಸಿಕೊಂಡವರಲ್ಲಿ ಕೆಲವರು ತೂಗುಯ್ಯಾಲೆಯಲ್ಲಿದ್ದಾರೆ. ತಮ್ಮ ಲಾಭ ಎಲ್ಲದೆಯೆಂದು ಹಣಕಿ ಇಣಿಕಿ ನೋಡುತ್ತಿದ್ದಾರೆ.

ಚುನಾವಣೆಗಳು ಹತ್ತಿರ—ಅತಿ ಹತ್ತಿರ ಬರುತ್ತಿರುವಂತೆ ಇವರು ಯಾವಪಾರದೊಂದೇ ಕಡೆಗೆ ಇಳಿದು ಬಿಡಬೇಕು. ಭವಿಷ್ಯವನ್ನು ಅನಿರ್ದಿಷ್ಟವಾಗಿ ಅಡೆಪ್ಪಬದಿನ ತಳ್ಳಲು ಸಾಧ್ಯ?

ಸಿಂಡಿಕೇಟಿನ ಗಂಡು ಭೂಮಿಯೆಂಬುದೊಂದಿದ್ದರೆ, ಅದು ಕರ್ನಾಟಕ ಉತ್ತರ ಪ್ರದೇಶ, ಗುಜರಾತಗಳಲ್ಲಿ ಅದರ ಅಸ್ತಿತ್ವ ವಿದ್ದರೂ ಪಕ್ಷನಾಯಕರ ವ್ಯಕ್ತಿಗತ ಚರಿತ್ರದಿಂದ ಅದು ಕಲುಷಿತವಾಗಿದೆ.

ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿತನ ಬಿಟ್ಟಮೇಲೆ ಪ್ರಾದೇಶಿಕ ಅಧ್ಯಕ್ಷತೆ ವಹಿಸಿದರು. ಇಡಿಯ ರಾಜ್ಯವನ್ನು ಸುತ್ತಾಡಿದರು. ತಮ್ಮ ಬಗ್ಗೆ ಜನತೆಯಲ್ಲಿ ಅಭಿಮಾನವಿರುವುದನ್ನು ಕಂಡುಕೊಂಡರು.

ಈ ಅಭಿಮಾನ ಶ್ರೀ ಪಾಟೀಲರ ವ್ಯಕ್ತಿಗತ ಚರಿತ್ರದಿಂದ ಬಂದುದೇ ಪಕ್ಷದ ನೆಲೆಯಿಂದ ಬಂದುದೆ?

ಕೊನೆಯಗಳಿಗೆಯಲ್ಲಿ ಸಿಂಡಿಕೇಟಿನ ನಾಯಕ—ಮಹಾನಾಯಕರೆಲ್ಲ ಇಂದಿಕೇಟು ಸೇರಿದ್ದರಿಂದ ಜನಾಯಕತೆಯೂದುದು ಸಹಜವೇ.

ಹೊಸತಾಗಿ ನಾಯಕತ್ವವನ್ನು ರೂಪಿಸಿ, ಬೆಳೆಸಿ, ಸಂಘಟಿಸಲು ದೀರ್ಘಕಾಲ ಬೇಕು; ನಿಸ್ವಾರ್ಥ ಕಾರ್ಯಕರ್ತರೂ ಬೇಕು.

"ಉಳಿದವರೇ ಸಾಕು; ನಮ್ಮ ಮೇಲೆ ಜನಕ್ಕೆ ನಂಬಿಕೆಯಿದೆ" ಎಂಬುವಿಶ್ವಾಸವಿಡುವುದು ಅತಿರೇಕವೆಂದು ಹಿಂದಿನ ಚುನಾವಣೆಗಳು ಸಾರಿ ಹೇಳಿವೆ.

ಪಕ್ಷದ ವಿವಾದಗಳನ್ನು ಬದಿಗೊತ್ತಿ, ತಮ್ಮ ಪಕ್ಷದ ನೀತಿಗಳಿಗನುಸಾರ ನಡೆದು, ಆ ನೀತಿಗಳನ್ನು ಜನತೆಗೆ ತಿಳಿಹೇಳುವ, ಅವರ ಒಲವನ್ನು ಗಳಿಸುವ ಕಾರ್ಯ ಬೇಕು.

ತಮ್ಮ ರೊಟ್ಟಿಯನ್ನು ತುಪ್ಪಕ್ಕೆ ಬೀಳಿಸುವುದಕ್ಕಾಗಿ ಹೊಂಚು ಹಾಕುತ್ತಿರುವ ವೀರಸಾದಿಕರಂತಹವರಿಂದ ಪಕ್ಷವಿಲ್ಲವೆಯುವುದಿಲ್ಲ.

ರಾಜ್ಯದ ಸಿಂಡಿಕೇಟು ತನ್ನ ಭವಿಷ್ಯವನ್ನು ಕಡಾಕಂಡಿತವಾಗಿ ನಿರ್ಧರಿಸುವ ಸಮಯವೀಗ ಸ್ಪಾಪ್ತವಾಗಿದೆ.

'ಕಾಂಗ್ರೆಸ್ಸು' ಯಾವುದೇ ಇದ್ದರೂ ತಮ್ಮ ಪರಿಸ್ಥಿತಿ ಸೀಗೆಯೆಳಗಣ ಬಾಳೆಯಂತಾಗಿದೆಯೆಂದವರು ಒಪ್ಪಿಕೊಳ್ಳಲೇಬೇಕು.

ಇಂಡಿಕೇಟಿನಲ್ಲಿ ವಿಲೀನಗೊಳ್ಳಬೇಕೆಂದು ಹೇಳುವವರೂ ಅದರಲ್ಲಿ ಕೆಲವರಿದ್ದಾರೆ. ಪ್ರತ್ಯೇಕ ರಾಜ್ಯಪಕ್ಷವಾಗಿ ರೂಪುಗೊಳ್ಳಬೇಕೆಂದೂ ಬಯಸುವವರೂ ಇದ್ದಾರೆ.

ವಿಲೀನೀಕರಣದ ಪ್ರಶ್ನೆ ಬೇರತ್ತಾಗುವುದು ಸಾಧ್ಯವೆ? ಇದುವರೆಗೆ ಪರಸ್ಪರ ದೂಷಿಸಿಕೊಂಡವರು ಕೈ ಮಿಲಾಯಿಸುವುದೆಂದರೆ, ನಿಷ್ಠಾವಂತ ಕಾರ್ಯಕರ್ತರಿಗೆ ಮರಣವೇದನೆಯಾಗದೆ?

ಪ್ರತ್ಯೇಕ ರಾಜ್ಯ ಪಕ್ಷವಾದರೆ: ಕೇಂದ್ರದೊಡನೆ ಹಣಾ ಹಣಿ— ತಮಿಳುನಾಡಿನಂತೆ....

ಸದ್ಯ ವಿದೇಶ ಸಂಚಾರದಲ್ಲಿರುವ ಶ್ರೀ ಪಾಟೀಲರು ಮರಳಿ ಬಂದೊಡನೆಯೇ ಇತ್ಯರ್ಥವಾಗಬೇಕಾದ ಯಕ್ಷಪ್ರಶ್ನೆಯಿದು.

ಅಖಿಲಭಾರತ ಮಟ್ಟದಲ್ಲಿ ಸಿಂಡಿಕೇಟು ನಾಯಕತ್ವ ಅಡೆಪ್ಪಟ್ಟ ದುರ್ಬಲವಾಗಿದೆಯೆಂಬುದು ಈ ಬಗೆಯ ಅನಿರ್ಧಿಷ್ಟತೆ ಸಾರಿಹೇಳುತ್ತದೆ

(ಹನ್ನೆರಡನೇ ಪುಟ ನೋಡಿ)

'ಗಾಂಧಿಜಿಯ ಕೊಲೆ'

(ಕೊನೆಯ ಭಾಗ – ಮೂರು ದಾಖಲೆಗಳು)

ಬರೆದವರು: ಶ್ರೀ ಬಿ. ಕೃಷ್ಣ ಭಟ್, ಎಡ್ವಕೇಟ್, ಭದ್ರಾವತಿ

30–1–48ರಂದು ಗೋಡ್ಸೆ ರೈಲ್ವೇ ತಂಗು ತಾಣದ ಕೋಣೆಯಿಂದ ಹೊರ ಬಿದ್ದು, ತನ್ನ ಫೋಟೋ ತೆಗೆಸಿಕೊಂಡ ಎಂಬುದನ್ನು ಈ ಹಿಂದೆ ತಿಳಿಸಿದೆ. ಮನೋರಮೆಯ ಕೈಯಲ್ಲಿ ಹಿಂದೂ ಮಹಾಸಭೆಯ ಕಛೇರಿಗೆ ತನ್ನ ಹೆಸರಲ್ಲಿ ಮುಂಬಯಿಯಿಂದ ತಂತಿ ಕಳುಹಿಸುವಂತೆ, ಆಪ್ಟೆ ಏರ್ಪಡಿಸಿದ್ದನ್ನು ಹಿಂದೆ ಸೂಚಿಸಿದೆ. ಆದನ್ನು ಕೇಳಿದ ಗೋಡ್ಸೆ, ಆಪ್ಟೆಯನ್ನು ಶರಾಟೆಗೆ ತೆಗೆದುಕೊಂಡ ಎಂಬುದನ್ನು ಹೇಳಿಯೂಗಿದೆ.

ಆಪ್ಟೆಯನ್ನುಳಿಸಲು ಗೋಡ್ಸೆ ಜನವರಿ ಮೂವತ್ತರಂದು ಮತ್ತೊಂದು ಹಂಚಿಕೆ ತೆಗೆದ. ಗೋಡ್ಸೆ, ಆಪ್ಟೆಯ ಪುಣೆಯ ವಿಳಾಸಕ್ಕೆ ಅಂದು ಒಂದು ಪತ್ರ ಬರೆದು ಅಂಚೆಗೆ ಹಾಕಿದ. ಆ ಕಾಗದ ವಿಚಾರಣೆಯ ಕಾಲದಲ್ಲಿ ಡಿಫೆನ್ಸ್ ಪರ ದಾಖಲೆಯಾಗಿ ಅಂಗೀಕರಿಸಲ್ಪಟ್ಟಿತು ಗಾಂಧಿಜಿಯ ಕೊಲೆಗೆ ಸಂಚು ನಡೆಯಲಿಲ್ಲ. ಉಳಿಕೆ ಆರೋಪಿಗಳು ಯಾವ ಪಾತ್ರವನ್ನೂ ವಹಿಸಲಿಲ್ಲ. ಆದಕ್ಕೆ ತಾನೊಬ್ಬನೇ ಉತ್ತರ ವಾದಿ ಎಂದು ಗೋಡ್ಸೆ ಕೋರ್ಟಿನಲ್ಲಿ ವಾದಿಸಿದನಷ್ಟೆ! ಆ ವಾದಕ್ಕೆ ಪುಷ್ಟಿ ಕೊಡಲು ಈ ಕಾಗದವನ್ನು ಉಪಯೋಗಿಸಲಾಯಿತು. ಈ ದಾಖಲೆಯ ಕ್ರಮ ಸಂಖ್ಯೆ Ex ರ|115 ಮತ್ತು ರ|116. ಅದರ ಒಕ್ಕಣಿ ಹೀಗಿದೆ:—

ದೆಹಲಿ, 30–1–'48

ಶ್ರೀ ನಾನಾರಾವ್ ಆಪ್ಟೆಯರಿಗೆ ನಾಥೂರಾಮನಪ್ರಣಾಮಗಳು. ಇದುನನ್ನ ವಿಶೇಷ ಪ್ರಾರ್ಥನೆ. ಮಹತ್ವದ ಸಂಗತಿಯನ್ನು ನಿಮಗೆ ಈ ಪತ್ರ ಮುಖೇನ ತಿಳಿಸಬೇಕಾಗಿದೆ. ಇನ್ನೆರಡು ದಿನಗಳಲ್ಲಿ ಈ ಕಾಗದ ನಿಮ್ಮ ಕೈ ಸೇರುತ್ತದೆ. ನೀವು, ನಮ್ಮ ಸಂಗಡಿಗರು ಕಾಗದ ಓದಿ ಆಶ್ಚರ್ಯ ಪಡಬಹುದು.

ಪ್ರದರ್ಶನ ನಡೆಸುವ ಸಲುವಾಗಿ ಪುಣೆ—ಮುಂಬಯಿಗಳಿಂದ ಸ್ವಯಂ ಸೇವಕರನ್ನು ತರುವ ಕೆಲಸವನ್ನು ಬಿಟ್ಟುಬಿಡಬೇಕು. ಈ ನಿಟ್ಟಿನಲ್ಲಿ ನಮ್ಮ ಹಿಂದಿನ ಪ್ರಯತ್ನಗಳು, ಹಣದ ಅಭಾವದಿಂದ ಯಾ ಜನರ ಅಭಾವದಿಂದ ವಿಫಲವಾಯಿತು. ಸ್ನೇಹಿತನೊಬ್ಬನ ಅಜಾಗರೂಕತೆಯ ಕಾರ್ಯದಿಂದ ನಾವು ಮತ ಪ್ರದರ್ಶನದ ಕೆಲಸವನ್ನು ಕೈಬಿಡಬೇಕಾಗಿದೆ.

ನಾನು ದೆಹಲಿಯಲ್ಲಿ ನಡೆಸಿದ ಪ್ರಯತ್ನಗಳು ಫಲಿಸಿಲ್ಲ. ನನ್ನಿಂದ ಇದು ತನಕ ಒಂದು ತಂಡವನ್ನು ಕಟ್ಟುವುದು ಆಗಿಲ್ಲ. ಆಗುವಂತೆಯೂ ಕಾಣುವುದಿಲ್ಲ. ನೀವು ನಿಮ್ಮ ಸಾಹಸವನ್ನು ನಿಲ್ಲಿಸಿ. ಆದರಿಂದ ಸಮಯ—ಹಣ ಎರಡೂ ಉಳಿಯುತ್ತೆ.

ನಾನು ಉದ್ವಿಗ್ನಗೊಂಡಿದ್ದೇನೆ. ಈಗ ಒಂದು ನಿರ್ಧಾರಕ್ಕೆ ಬಂದಿದ್ದೇನೆ. ಬೇರೆಯವರ ನೆರವು ಇಲ್ಲದೆ ಸಾಧಿಸುತ್ತೇನೆ. ಅದೇ ನೆಂಬುದು ನಿಮಗೆ ಇನ್ನೆರಡು ದಿನಗಳಲ್ಲಿ ತಿಳಿದೀತು.

ಶಾಂತಿಯುತ ಪ್ರದರ್ಶನದಿಂದ ಪ್ರಯೋಜನವಿಲ್ಲ. ಪಾಂಚಗನಿ, ದೆಹಲಿಗಳಲ್ಲಿ ನಡೆಸಿದ ಪ್ರದರ್ಶನಗಳಿಂದ ಏನು ಸಾಧಿತವಾಗಿದೆ? ಅನ್ಯರ ಸಹಾಯವಿಲ್ಲದೆ ನಾನು ಒಬ್ಬನೇ ಈಗ ಕೆಲಸವನ್ನು ಪೂರೈಸ ಬೇಕಾಗಿದೆ.

ಇಂದು ತೆಗೆಸಿದ ಫೋಟೋ ಒಂದನ್ನು ಕಾಗದದ ಜೊತೆಗಿರಿಸಿದ್ದೇನೆ. ಅದನ್ನು ಜತನದಿಂದ ಇಟ್ಟುಕೊಳ್ಳುವುದು. ಫೋಟೋದ ಪ್ರತಿಗಳು ಬೇರೆಯವರಿಗೂ ಹೋಗಿದೆ.

ನಿಮ್ಮ,
ನಾಥೂರಾಮ. ವಿ. ಗೋಡ್ಸೆ (ಸಹಿ)
30–1–48

ಕರವರಿನ ಮೇಲಿದ್ದ ವಿಳಾಸ.
ದೈನಿಕ "ಹಿಂದೂ ರಾಷ್ಟ್ರ",
ಪೋಸ್ಟ್ ಬಾಕ್ಸ್ ನಂ. 503 ಲಕ್ಷ್ಮೀ ರೋಡು ಪುಣೆ-2.

ಕಮ್ಮ ಹಿರಿಮೆಯನ್ನು ತೋರಿಸಿ ಕೊಳ್ಳಲು, ತಮ್ಮ ಹೇಳಿಕೆಯ ಜೊತೆಯಲ್ಲಿ ಶ್ರೀ ಸಾವರ್ಕರರು ಹಾಜರು ಪಡಿಸಿದ ಅನೇಕ ಪತ್ರಗಳಲ್ಲಿ ಒಂದನ್ನು ಕೆಳಗೆ ಕೊಟ್ಟಿದೆ. ಈ ಪತ್ರ ಆವರಿಗೆ ಅನುಕೂಲ ವಾದ್ದಲ್ಲ. ಅದನ್ನೇಕೆ ಹಾಜರು ಪಡಿಸಿದರೋ ಅರ್ಥವಾಗುವುದಿಲ್ಲ. ಅವರ ಲಾಯರುಗಳೇಕೆ ಹಾಜರು ಮಾಡಲು ಸಲಹೆ ಕೊಟ್ಟರೋ ತಿಳಿಯಲು ಬರುವುದಿಲ್ಲ. ಅದು ಶ್ರೀ ಸಾವರ್ಕರರಿಗೆ 12–1–48ರಂದು ಹಿಂದೂ ಮಹಾಸಭೆಯ, ಮಹಾ ಕೋಸಲ ಶಾಖೆಯ ಕಛೇರಿಯಿಂದ ಅದರ ಅಧ್ಯಕ್ಷ ಶ್ರೀ ರಾಮಕೃಷ್ಣ ಪಾಂಡೆಯವರು ಬರೆದ ಕಾಗದ. ಹಿಂದಿಯಲ್ಲಿ ಬರೆದ ಆ ಕಾಗದದ ಕನ್ನಡ ಅನುವಾದವನ್ನು ಕೆಳಗೆ ಕೊಟ್ಟಿದೆ. ಡಿಫೆನ್ಸ್ ಪರ ತೆಗೆದು ಕೊಂಡ ಈ ದಾಖಲೆಯ ಕ್ರಮಸಂಖ್ಯೆ 83/D

ವಿಲಾಸಪುರ. ಮಧ್ಯಪ್ರಾಂತ
12–1–1948

ಪರಮ ಪೂಜನೀಯ ತಾತ್ಯಾ ಸಾಹೇಬರಿಗೆ—

ಅಭಿನಂದನೆಗಳು. 10–1–48 ರಂದು ನಾನು ಶ್ರೀ ದ್ವಾರಕಾ ಪ್ರಸಾದ ಮಿಶ್ರ ಶ್ರೀ ರವಿಶಂಕರ ಶುಕ್ಲ ಅವರನ್ನು ಸಾಗರದಲ್ಲಿ ಭೆಟ್ಟಿಯಾದೆ. ಅವರಿಬ್ಬರಿಗೂ ನಿಮ್ಮನ್ನು ಭೆಟ್ಟಿಯಾಗಬೇಕೆಂಬ ಆಸೆ. ಅವರು ನಿಮ್ಮನ್ನು ಕಾಣಲು ಆತುರ ಪಡುತ್ತಿದ್ದಾರೆ. ನಿಮ್ಮ—ಅವರ ಮಾತು—ಕತೆಯಾದ ಮೇಲೆ ನೀವು ಸರದಾರ ಪಟೇಲರನ್ನು ಕಂಡು ಮಾತನಾಡುವುದು ಒಳ್ಳೆಯದೆಂದು ಅಭಿಪ್ರಾಯ ಪಟ್ಟದ್ದಾರೆ. ನಿಮ್ಮ—ಸರದಾರರ ಸಮಾಗಮ ಅವರ ದೃಷ್ಟಿಯಿಂದ ಅತಿ ಮುಖ್ಯ. ಆವರೊಡನೆ ಚರ್ಚಿಸಿದ ನಂತರ ಹಿಂದು ಮಹಾಸಭೆಯ ಮುಂದಿನ ಧೋರಣೆಯನ್ನು ನಿರ್ಧರಿಸುವುದು ವಿಹಿತವೆಂಬುದು ಅವರ ಅಭಿಮತ. ನಿಮ್ಮ ಅನುಕೂಲ ನೋಡಿಕೊಂಡು ಅವರಿಬ್ಬರನ್ನು ಆಗತ್ಯ ಭೆಟ್ಟಿಯಾಗಿ.

ನಿಮ್ಮ,
ರಾಮಕೃಷ್ಣ ಪಾಂಡ್ಯ

ಮೂರನೆಯ ಕಾಗದ ರಾಮಚಂದ್ರ ದಿಗಂಬರ ಬಾಡ್ಗೆ (ಅಪ್ರೂವರ್) ಶ್ರೀ ವಿನಾಯಕ ದಾಮೋದರ ಸಾವರ್ಕರರಿಗೆ ಕಳುಹಿಸಿದ ಪತ್ರ. ಅದನ್ನು ಆತ 29–5–43ರಲ್ಲಿ ಬರೆದ. ಪುಣೆಯ ಹಿಂದು ಸಂಘಟನ ನಿಧಿಯ ಪ್ರಚಾರಕನಾಗಿ, ಆತ ಆದನ್ನು ಬರೆದಿದ್ದ. ತನ್ನ ಪ್ರಚಾರದ ವಿವರಗಳನ್ನು ಆತ ಆ ಕಾಗದದಲ್ಲಿ ಕಾಣಿಸಿದ್ದ. ಆ ವಿವರದ ವರದಿ ಹೀಗಿದೆ.

ಪುಣೆ 29—'—43

ವಂದೇ ಮಾತರಂ.

ಹಿಂದೂ ರಾಷ್ಟ್ರಸತಿ, ಸ್ವಾತಂತ್ರ್ಯ ವೀರ ಬ್ಯಾರಿಸ್ಟರ್ ತಾತ್ಯಾ ರಾವ್ ಸಾವರ್ಕರರಿಗೆ

ನಿಮ್ಮ ನಮ್ರ ಸೇವಕ ಪುಣೆಯ ಹಿಂದೂ ಸಂಘಟನ ನಿಧಿಯ ಪ್ರಚಾರಕ ಒಪ್ಪಿಸಿನ ವರದಿ—

ಮಥುರೆಯ ಅಧಿವೇಶನದಲ್ಲಿ ಆದ ತೀರ್ಮಾನದಂತೆ ಆಯುಧಗಳ ವಿತರಣೆಯನ್ನು ನಡೆಸಿದ್ದೇನೆ. ಹೈತಿಹಿಂದುವಿಗೂ, ಚೂರಿ, ಚಾಕು, ಭರ್ಚಿಹಾಗೂ ಇತರ ಆಯುಧಗಳನ್ನೂ ಪೂರೈಸಿದ್ದೇನೆ. ಸರಬರಾಜು ಮಾಡಿದ ಆಯುಧಗಳ ಆಳತೆ 9'' ಇಂಚು ಇದೆ.

5–1–43 ರಿಂದ 29–5–43ರ ವರೆಗೆ ಮಹಾರಾಷ್ಟ್ರದ ಅನೇಕ ಹಳ್ಳಿಗಳನ್ನೂ, ಮುಖ್ಯ ನಗರಗಳನ್ನೂ ಸಂದರ್ಶಿಸಿ 10,523.00 ರೂಪಾಯಿಗಳ ಬೆಲೆಯ 4505 ಆಯುಧಗಳನ್ನು ಮಾರಾಟ ಮಾಡಿರುತ್ತೆ.

ವಿವರ ಇಂತಿದೆ –

ಆಯುಧಗಳು	ಸಂಖ್ಯೆ	ಬೆಲೆ
ಭರ್ಚಿಗಳು	2100	7500.0.0
ಚಾಕುಗಳು	425	1467.8.0
ವ್ಯಾಘ್ರನಖಗಳು	1150	865.8.0
ಕೊಡಲಿಗಳು	90	135.0.0
ಹಿತ್ತಾಳೆಯ ಕೆಲವು ಆಯುಧಗಳು	740	555.0 0
	4505	10,523.0 0

ಈ ಆಯುಧಗಳ ತಯಾರಿಕೆಯನ್ನು ಪುಣೆಯ ಎರಡು ಕಾರ್ಖಾನಗಾರಗಳಿಗೆ ವಹಿಸಿದ್ದು, ಅವುಗಳನ್ನು ತಯಾರಿಸುವ ವಿಧಾನವನ್ನೂ ತಿಳಿಸಿದ್ದೇನೆ. ಆ ಕಾರ್ಖಾನಗಾರ ದೊಡ್ಡ ಪ್ರಮಾಣದಲ್ಲಿ ಆವುಗಳನ್ನು ತಯಾರಿಸಿದ್ದು, ಆವುಗಳನ್ನು ನಾನು ಆವರಿಂದ ಕೊಂಡು ಮಾರುತಿದ್ದೇನೆ.

ಈ ಮಾರಾಟದ ವ್ಯವಸ್ಥೆಯನ್ನು ನಾನು ಈಗ ಚುರುಕುಗೊಳಿಸಬೇಕಾಗಿದೆ. ನನಗೆ ಈಗ ಹಣದ ಆಡಚಣೆಯುಂಟಾಗಿದೆ. ಆದ್ದರಿಂದ ಹಿಂದೂ ರಾಷ್ಟ್ರ ನಿಧಿಯಿಂದ ರೂ. 1000.00 ವನ್ನು ಮುಂಗಡವಾಗಿ ಕೊಟ್ಟಲ್ಲಿ ತುಂಬ ಅನುಕೂಲ. ಹಣವನ್ನು ಬೇಗನೆ ಹಿಂದಿರುಗಿಸುವೆ. ಹೆಚ್ಚಿನ ವಿವರ ಬೇಕಾದಲ್ಲಿ ಶ್ರೀ ಜಿ. ವಿ. ಕೇತಕರ, ಎಂ. ಪಿ. ಕುಲಕರ್ಣಿಯವರಲ್ಲಿ ವಿಚಾರಿಸಿಕೊಳ್ಳಿ.

(ಹನ್ನೊಂದನೇ ಪುಟ ನೋಡಿರಿ)

ಅಮೃತಾಂಜನ

● ತಲೆ ನಿಡಿತ ● ಮೈ ನೋವು
● ಉಳುಕು ● ಕೆಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ವಿಷದೌಷಧಶಾಲಾ (ಪೈವೇಟ್) ಲಿಮಿಟೆಡ್,
ವತಿಯಿಂದ
ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು:
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ: 51
ಸಂಚಿಕೆ: 13

ಸಂಸ್ಥಾಪಕರು:
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟ

ಮುದ್ರಕರು:
ನವಯುಗ ಪ್ರೆಸ್
ಉಡುಪಿ

ಫೋನ್: 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦-೭೫

ಚಿಕ್ಕ ಚೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಬೇರಿಗೇ ಗೆದ್ದಲು ಹಿಡಿದರೆ ಗೆಲ್ಲು ಹಸುರಾಗುಳಿದೀತೆ?

ಚುನಾವಣೆಗಳಿಗೆ ದೂರವಿಲ್ಲವೆಂಬುದೀಗ ಹೊರಪಟ್ಟಿದೆ. ದೇಶದ ರಾಜ್ಯಕೀಯ ವಾತಾವರಣ ಇದೇರೀತಿ ಮುಂದುವರಿದರೆ, ಮುಂದಿನ ಫೆಬ್ರುವರಿಯ ಮಧ್ಯಾವಧಿಯಲ್ಲಿ ಚುನಾವಣೆಗಳು ನಡೆಯುವುದು ಖಂಡಿತವೇ? ಆದುದರಿಂದಲೇ ವಿವಿಧ ಪಕ್ಷಗಳು ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸುತ್ತಿವೆ. ತಾವು ಇಂತಿಷ್ಟು ಸ್ಥಾನ ಸ್ಪರ್ಧಿಸುತ್ತೇವೆಂದು ಹೇಳತೊಡಗಿವೆ. ಸಿಂಡಿಕೇಟು ತನ್ನ ಪಕ್ಷದ ಅಭ್ಯರ್ಥಿಗಳನ್ನು ಆರಿಸುವಲ್ಲಿ ಬಹಳಷ್ಟು ಆಸಕ್ತವಾವಂತಿದೆ. ದಶಂಬರ ಮಧ್ಯಾವಧಿಯೊಳಗೇನೇ ತನ್ನ ಕಿರುಬಯೊಳುಗಳ ಆಯ್ಕೆ ಮುಗಿಯಬೇಕು ಎಂಬುದು ಅದರ ಇಂಗಿತ. ಎಲ್ಲ ಪಕ್ಷಗಳೂ ತಂತಮ್ಮ ಹುರಿಯಾಳುಗಳು ಎಲ್ಲೆಲ್ಲಿ ಯಾರು ಎಂದು ಸಾಮಾನ್ಯವಾಗಿ ಮನಸ್ಸಿನಲ್ಲಿ ದೃಢಪಡಿಸಿಕೊಂಡಿವೆ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೇ ಮುಖ್ಯ ಗುರಿಯಾಗಿರುವಂತೆ ಅರ್ಥಾರ್ಥಿಗಳಿಗೆ ಚುನಾವಣೆಗಳಲ್ಲಿ ಗೆಲ್ಲುವುದೇ ಪ್ರಮುಖೋದ್ದೇಶವಾಗಿದೆ ಆದುದರಿಂದ ತಮ್ಮೆದುರು ನಿಲ್ಲಬಹುದಾದ ವ್ಯಕ್ತಿಗಳನ್ನು ನೋಡಿ ಅಥವಾ ಊಹಿಸಿ ಕೊನೆಯ ಗಳಿಗೆಯಲ್ಲಿ ಅಂತಿಮ ಪಟ್ಟಿ ಸಿದ್ಧವಾಗುವುದು ಸಹಜವೇ.

ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ, ನಿಜಕ್ಕೂ ಇಲ್ಲಿನ ರಾಜ್ಯಕೀಯ ಡೋಲಾಯಮಾನವಾಗಿದೆ. ಕಳೆದ ಲೋಕಸಭಾ ಚುನಾವಣೆಗಳ ವೇಳೆ ಇಂಡಿಕೇಟು ಎಲ್ಲಾ ಇಪ್ಪತ್ತೈದು ಸ್ಥಾನಗಳನ್ನೂ ಹಾರಿಸಿಕೊಂಡು ಹೋದದ್ದು ಅತ್ಯಂತ ವಿಚಿತ್ರ. ಇದರಿಂದಾಗಿಯೇ ಇಲ್ಲಿನ ಸಿಂಡಿಕೇಟಿನ ಘಟಾನುಘಟಿಗಳು ಪಕ್ಷಾಂತರಗೊಂಡದ್ದು ಶ್ರೀ ವೀರೇಂದ್ರ ಪಾಟೀಲರ ಸರಕಾರ ಉರುಳಿದ್ದು, ಆ ನಂತರವೂ ಅಲ್ಲಲ್ಲಿ ಪಕ್ಷಾಂತರವು ಮುಂದುವರಿದದ್ದು ಸರ್ವವೇದ್ಯ. ಈ ಸೋಲಿಗೆ ಸಿಂಡಿಕೇಟು ತಮ್ಮ 'ಮೈತ್ರಿ ಕೂಟ'ವೇ ಕಾರಣವೆಂದು ಹೇಳಿದರೂ ಇದೇ ಕಾರಣವನ್ನು ಜನಸಂಘ, ಸ್ವತಂತ್ರ, ಮೊದಲಾದ ಪಕ್ಷಗಳೂ ಹೇಳುತ್ತವೆ. ಅದೇನಿದ್ದರೂ ಸೋಲನ್ನು ಸೋಲೆಂದು ಒಪ್ಪಿಕೊಳ್ಳಲೇ ಬೇಕು. 'ಇನ್ನು ಮುಂದೆ ಮೈತ್ರಿಯಿಲ್ಲ'ವೆಂಬ ನಿರ್ಧಾರಕ್ಕೆ ಎಲ್ಲರೂ ಬಂದಿದ್ದಾರೆ. ಆದುದರಿಂದ ಪರಿಣಾಮ ತುಸು ಬದಲಾಗದೆ ಉಳಿಯಲಾರದು ಎಂಬುದು ನಿಶ್ಚಿತ ರಾಜ್ಯದಲ್ಲಿ ಪ್ರಮುಖ ಸ್ಪರ್ಧೆಯಿರುವುದು ಸಿಂಡಿಕೇಟು— ಇಂಡಿಕೇಟುಗಳಲ್ಲಿ— ಎಂಬುದೊಂದು ಕಲ್ಪನೆ. ಇದರಲ್ಲಿ ಸತ್ಯಾಂಶವಿದೆಯೇ ಎಂಬುದು ಪರಿಶೀಲನಾರ್ಹ. ಸಿಂಡಿಕೇಟಿನಿಂದಬೇರೆಬೇರೆಯೆಪದಿಂದ ಹೊರ ಹೋದವರೆಲ್ಲರೂ ಈಗ ಇಂಡಿಕೇಟಿನಲ್ಲಿ ಸ್ಥಾನ ಪಡೆದ್ದಾರೆ. ಅನಿರಿಗಂತಹ ಸ್ಥಾನ ಕೊಡಲು ನಿರಾಳರಿಸುತಿದ್ದ ಶ್ರೀ ದೇವರಾಜ ಅರಸರು ಉದ್ದೇಶ್ಯಪೂರ್ವಕವಾಗಿಯೇ ವಿದೇಶ ಯಾತ್ರೆಗೆ ಹೋದಂತೆನಿಸುತ್ತದೆ. ಅವರು ಮರಳಿ ಬರುವುದರೊಳಗೆ ಇಂಡಿಕೇಟಿನ ಬಲವನ್ನು ದೈತ್ಯ ಬಲವಾಗಿ ಶ್ರೀಗಳಾದ ಪಾಟೀಲ—ಸಿದ್ಧವೀರಪ್ಪನವರು ರೂಪಿಸಿಡುತ್ತಾರೆ. ಸದ್ಯ ಗೆಲುವಿನ ಹುಮ್ಮಸ್ಸು ಇನ್ನೂ ಬಿಸಿಯೇರಿಗಿಯೇ ಇರುವುದರಿಂದ ಇಂಡಿಕೇಟಿನ ಅಭ್ಯರ್ಥಿಗಳು ಬರಿಯ ಇಂದಿರಾ ಜಪದಿಂದಲೇ ಗೆಲ್ಲುವುದು ಸಾಧ್ಯವಾದೀತೆ? ಇಂಡಿಕೇಟು ನೀಡಿದ ಭರವಸೆಗಳನ್ನು ಈಡೇರಿಸುವಲ್ಲಿ ಆಶಕ್ತವಾದರೂ ಬಂಗ್ಲಾ ಸಮಸ್ಯೆಯನ್ನು ಪರ್ವತ ಮಾಡಿ ತೋರಿಸುತ್ತಿರುವುದರಿಂದ, ಅಲ್ಲಿನ ನಿರಾಶ್ರಿತರ ಉದ್ದರಣೆಗೆಂದು ಅಧಿಕಾರ ಹೊರಿಸಿ ಇದರ ಬೆಪ್ಪು ಎಲ್ಲರಿಗೂ ತಗಲುವಂತೆ ಮಾಡಿದ್ದರಿಂದ ತನ್ನ ಅಸಮರ್ಥತೆಯನ್ನೂ ಅಕರ್ಮಣ್ಯತೆಯನ್ನೂ ಮುಚ್ಚಿಡಲು ಅದಕ್ಕೆ ಸಾಧ್ಯವಾಗಬಹುದೇ?

ಇದಕ್ಕಿಂತ ಹೆಚ್ಚಿನ ಆತಂಕ ರಾಜ್ಯದ ಸಿಂಡಿಕೇಟಿಗಿದೆ. ಮಾಜಿ ಮುಖ್ಯ ಸಚಿವ ಶ್ರೀ ವೀರೇಂದ್ರ ಪಾಟೀಲರು ಮತ್ತವರ ಸಹಾಯಕರಾದ ಶ್ರೀ ರಾಮಕೃಷ್ಣ ಹೆಗ್ಗಡೆ ಅಥವಾ ಶ್ರೀ ಕೆ.ವಿ. ಶಂಕರೇಗೌಡ ನೊದಲಾದವರು ಉತ್ತಮ ಮಟ್ಟದ ಕಾರ್ಯಕರ್ತರೆಂಬುದು ದಿಟ. ಅವರಮೇಲೆ ವ್ಯಕ್ತಿಗತವಾಗಿ, ಕನ್ನಡಿಗರಿಗೆ ಅನುಕಂಪವಿರುವುದೂ ಸತ್ಯ. ಆದರೆ, 'ಸಿಂಡಿಕೇಟು' ಎಂದರೆ ಅದೇನೋ ದುರ್ಭಾವನೆಯು ಜನ ಮನದಲ್ಲಿ ನಾಟಿರುವುದು, ಅದು ಮೈತ್ರಿಕೂಟದಲ್ಲಿ ಸೇರಿಕೊಂಡ ಕಹಿ ಅನುಭವವನ್ನೂ ದೂರವಾವಂತನಿಸುವುದಿಲ್ಲ. ಆದರ ಮೇಲೆ ಜೋಡಿಪ್ತಿನ ಚಿಹ್ನೆಗೆ ಇಂಡಿಕೇಟೇ ಉತ್ತರಾಧಿಕಾರಿ ಎಂಬ ನಿರ್ಣಯ, ಪಕ್ಷದ ಹೆಸರನ್ನು ಬಲಿಸಬೇಕೆಂಬ ಚುನಾವಣಾ ಆಯೋಗದ ಸಲಹೆ-ಇವುಗಳಿಂದ ಸಿಂಡಿಕೇಟು ಜರ್ಜರವಾಗತೊಡಗಿದೆ. ಇಷ್ಟು ಮಾತ್ರವಲ್ಲದೆ, ಆದರ ಹಿರಿಯ ನಾಯಕರಲ್ಲೇ ಸೈದ್ಧಾಂತಿಕ ಭಿನ್ನಾಭಿಪ್ರಾಯವಿದ್ದು ಇವುಗಳ ನಿವಾರಣೆಗೆ ಯಾರೂ ಪ್ರಯತ್ನ ನಡೆಸುವಂತಿಲ್ಲವುದಿಲ್ಲ. ಸಾಂವಿಧಾನಿಕ ಬಲ ತಮ್ಮ ಕೈಗಳಲ್ಲಿದೆ ಎಂದು ಸಾರಾಡಿದ್ದರಿಂದಲೇ ಕಾಂಗ್ರೆಸ್ಸು ತುಕುಡಿಯಾಯ್ತು; ಇನ್ನೀಗ ಅದೇ ಕಾರಣದಿಂದ ಸಿಂಡಿಕೇಟು ಮತ್ತಷ್ಟು ಕ್ಷೀಣಿಸಲೂ ಬಹುದು. ಆಗ, ರಾಜ್ಯದ ಸಿಂಡಿಕೇಟಿನ ಶಕ್ತಿ ಹೆಚ್ಚುವುದೆಂತು ಸಾಧ್ಯ? ಸರಿಯೂದ ಸಂಘಟನೆ, ತಪ್ಪೊಪ್ಪಿಗೆ ಮತ್ತು ತಮ್ಮ ಮುಂದಿನ ಕ್ರಮಗಳ ಬಗ್ಗೆ ಅಚಲ ನಿಲುವು-ಇವುಗಳಿಂದ ಕಳೆದುಕೊಂಡುದನ್ನು ಮತ್ತೆ ಪಡೆಯಲೂ ಬಹುದು. ಆದರೆ, ಸದ್ಯ ಸಿಂಡಿಕೇಟು ಇದೆಷ್ಟೇ ಸ್ಥಾನಗಳಿಗೆ ಸ್ಪರ್ಧಿಸಿದರೂ ೫೦-೬೦ ಸೀಟು ಗೆಲ್ಲುವುದೂ ಕಠಿನವಾಗಬಹುದೆಂಬ ಸಂದೇಹ ಅದರ ಕಾರ್ಯಕರ್ತರಿಗಿದೆಯೆಂದಾಗ, ಅದು ಅಷ್ಟೊಂದು ಹೀನ ಸ್ಥಿತಿಯಲ್ಲಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಹೀಗಿರುವಾಗ ಇಲ್ಲಿನ ಸ್ಪರ್ಧೆ ಇಂಡಿಕೇಟು-ಸಿಂಡಿಕೇಟುಗಳ ನಡುವೆಯೆಂದು ವರ್ಣಿಸುವುದು ಆಭಾಸವಾಗಿಯೇ ತೋರುತ್ತದೆ.

ಪಕ್ಷದ ಸಂಘಟನೆಯಲ್ಲಿ ಇಂಡಿಕೇಟೂ ಯಶಸಗಳಿಸಿದೆಯೆಂದು ಹೇಳುವಂತಿಲ್ಲ. ಅದರ ಯುವ ಘಟಕದಲ್ಲಿ ತೀವ್ರ ಅಶಾಂತಿ-ಅಸಮಾಧಾನಗಳು ಮೂಡಿರುವುದು ಜಗಜ್ಜನಿತ. ಮುಂಬರುವ ಚುನಾವಣೆಗಳಲ್ಲಿ ಸೇಕಡಾ ಅರುವತ್ತರಷ್ಟು ಟಿಕೇಟುಗಳನ್ನು ತಮಗೆ ನೀಡಬೇಕೆಂದು ಅವರು ಕೇಳಿದ್ದಾರೆ. ಚುನಾವಣಾ ಸಮಿತಿಯಲ್ಲಿ ತಮಗೆ ಪ್ರಾತಿನಿಧ್ಯವಿಲ್ಲದ್ದರಿಂದ ಅವರು ನೊಂದಿದ್ದಾರೆ. ಮೊನ್ನೆ ಮೊನ್ನೆ ಪಕ್ಷದ ಕಛೇರಿಯನ್ನೇ ಆಕ್ರಮಿಸಿದ್ದಾರೆ. ಈ ಒಳತೋಟಿಗೆ ಹಳೆಯ ರಾಜ್ಯಕೀಯ ಹುಲಿಗಳೆಲ್ಲ ಬೇರೆ ಬೇರೆ ಆಶೆ-ಆಮಿಷಗಳಿಂದ ಪಕ್ಷಾಂತರಗೊಂಡು ಇಂಡಿಕೇಟಿಗೆ ಸೇರಿದ್ದು, ಇದರಿಂದ ಅಧಿಕಾರ ಸ್ಥಾನಗಳೆಲ್ಲವೂ ಅವರಿಗೇ ಸಿಗಲಾಗಿಯೂ ಸನ್ನಿವೇಶ ಬಂದದ್ದು ಕಾರಣ. ಶ್ರೀ ಚಂದ್ರಶೇಖರಂತಹ ನಾಯಕರು ಕೇಂದ್ರ ಸರಕಾರವನ್ನೇ ಖಂಡತುಂಡವಾಗಿ ಖಂಡಿಸುವಷ್ಟು ಮುಂದೆ ಹೋಗಿದ್ದಾರೆ. ಆದರೆ, ಇಂಡಿಕೇಟಿನ ಕೈಯಲ್ಲೀಗ ಅಧಿಕಾರವಿದೆ; ಅದು ಯಾರನ್ನೂ ಹೇಗೂ ಸಮೂಹಾನಗೊಳಿಸ ಬಲ್ಲುದು. ಅಧಿಕಾರ ಕಳೆದುಕೊಂಡ ಸಿಂಡಿಕೇಟಿಗೆ ಕಾಯಕಲ್ಪ ಚಿಕಿತ್ಸೆಯಾಗದೆ ಹೋದರೆ, ಅದಕ್ಕೆ ಭವಿಷ್ಯವೆಂಬುದೇ ಇಲ್ಲವಾಗುತ್ತದೆ. ಶ್ರೀ ವೀರೇಂದ್ರ ಪಾಟೀಲರು ವಿದೇಶದಿಂದ ಮರಳಿ ಬಂದ ಬಳಿಕ ಕೇಂದ್ರ ಮಟ್ಟದಲ್ಲಿಯೇ ಈ ಚಿಕಿತ್ಸೆಗೆ ತೊಡಗಬೇಕು. ಬೇರಿಗೇ ಗೆದ್ದಲು ಹಿಡಿದಿದ್ದರೆ, ಮರದ ಗೆಲ್ಲು ಬಹುದಿನ ಹಸುರಾಗಿರುವುದು ಸಾಧ್ಯವಿಲ್ಲ.

ಅಘೋಷಿತ ಸಮರ

ದಂಡಿನಾಳಿಕೆಯ ಅಧ್ಯಕ್ಷ ಯೂಹ್ಯಾಖಾನರು ಭಾರತದೊಡನೆ ಇಷ್ಟರಲ್ಲೇ ಯುದ್ಧಕ್ಕೆ ತೊಡಗಿದ್ದಾರೆ, ಇದು ಅಘೋಷಿತವಿದ್ದರೂ ಘೋಷಿತ ಯುದ್ಧಕ್ಕಿಂತ ಭೀಕರವಾಗಿದೆ. ವಾಸ್ತವಿಕವಾಗಿ ಭಾರತದ ವಾಯುಪ್ರದೇಶವನ್ನು ಪಾಕ್ ವಿಮಾನಗಳು ಉಲ್ಲಂಘಿಸಿದ್ದು ಆಕ್ರಮಣವೇ. ಅವನ್ನು ಭಾರತ ಹೊಡೆದುರುಳಿಸಿದ್ದರಿಂದ ಭಾರತವೇ ಯುದ್ಧಘಾರಂಭಿಸಿದೆಯೆಂದಿದೆ ಪಾಕು. ಯೂಹ್ಯಾಖಾನರೂ ಅವರ ಅನುಯಾಯಿಗಳೂ, ಬೆಂಬಲಿಗರೂ ಅದೇನೇ ಹೇಳುತ್ತಬಂದರೂ ಭಾರತ ತಾನಾಗಿ ಸಮರವಾರಂಭಿಸುವುದಿಲ್ಲ. ಆದರೆ, ಸ್ವದೇಶ ರಕ್ಷಣೆಯಿಂದ ತದು ವಿಮುಖವಾಗುವುದೂ ಸಾಧ್ಯವಿಲ್ಲ. ಆದುದರಿಂದಲೇ ಗಡಿಯುದ್ದಕ್ಕೂ ನಮ್ಮ ಸೇನೆ ಸಜ್ಜಾಗಿ ನಿಂತಿದೆ. ಆತ್ಮರಕ್ಷಣೆಗೆ ಯಾವುದೇ ಕ್ರಮ ಕೈಕೊಳ್ಳುವುದಕ್ಕೆ ಅದು ಅಜ್ಞೆ ಪಡೆದಿದೆ. ಯೂಹ್ಯಾಖಾನರು ಬಂಗ್ಲಾ ಸಮಸ್ಯೆಯನ್ನು ರಾಜ್ಯಕೀಯವಾಗಿ ಕೀರ್ಮಾನಿಸಲು ಸಿದ್ಧರಿಲ್ಲ. ಇವರವನ್ನು ಭಾರತ-ಪಾಕ್ ಸಮಸ್ಯೆಯೆಂದೇ ಹೇಳುತ್ತ ಬಂದಿದ್ದಾರೆ; ಒಂದು ಕೋಟಿಗೂ ಮಿಕ್ಕಿದ ನಿರಾಶ್ರಿತರ ಸಂಖ್ಯೆಯನ್ನು ಇಪ್ಪತ್ತು ಸಾವಿರಕ್ಕೆ ಹೆಚ್ಚಿಲ್ಲವೆಂದು ಪ್ರಚಾರ ಮಾಡುತ್ತ ಬಂದಿದ್ದಾರೆ; ಇದನ್ನು ಅಮೆರಿಕೆ-ಬ್ರಿಟನ್ನುಗಳೂ ಕಣ್ಣಿದ್ದೂ ಕುರುಡರಂತೆ ನಂಬಿವೆ. 'ಭಾರತವು ಪಾಕಿಸ್ತಾನದ ಮೇಲೆ ಧಾಳಿ ನಡೆಸಿವೆ' ಎಂಬುದರ ತಿರುಬೊಜ್ಜೆಯನ್ನು ಅವು ನಂಬಿದಂತೆ ನಟಿಸತೊಡಗಿವೆ. ಅಧ್ಯಕ್ಷ ಯೂಹ್ಯಾಖಾನರು ಭಾರತದ ಮೇಲೆ ಸಮರ ಘೋಷಿಸಿದೆ ಹೋದರೆ ಅದು ಸ್ವಸಂಚದ ಮತ್ತೊಂದು ಆಶ್ಚರ್ಯದ ಸಂಗತಿಯೂಗುವುದು. ಯುದ್ಧದ ಪರಿಣಾಮ? ಭೀಕರವೆಂದು ಮಾತ್ರ ಹೇಳಲೇ ಬೇಕಾಗುತ್ತದೆ. ●

ಗೇಹರಾಜ್ಯದಲ್ಲಿ

ಕೊಳಚೆ ನೀರೆಲ್ಲಾ ಹಳ್ಳ ಸೇರಿದೇಲೆ...

"ಕೇಳಿದೈನೇ. ಯೂಹ್ಯಾಖಾನರು ತುರ್ತು ಸರಿಸ್ಥಿತಿ ಘೋಷಿಸಿದ್ರಂತೆ ..."

'ಇಲ್ಲ. ಮತ್ತವರು ಮೂಡುವುದಾದರೂ ಏನು? ನಮ್ಮ ದೇಶವನ್ನು ಹೇಗಾದರೂ ಯುದ್ಧಕ್ಕೆ ಆಹ್ವಾನಿಸಲೇ ಬೇಕೆಂಬ ಅವರ ಹೆಬ್ಬಯಕೆ ನೀರಿನ ಮೇಲಿನ ಹೋಮವಾದಾಗ ...'

'ಹ್ಞೂಂ ... ಅಷ್ಟು ಮಾತ್ರವಲ್ಲ, ಬಂಗ್ಲಾದೇಶದಲ್ಲಿ ಮುಕ್ತಿವಾಹಿನಿ ವಿಜಯ ಪಥವೆಲ್ಲಿದೆಯಂತೆ. ನಮ್ಮ ಗಡಿಯಾಚೆಯ ಯೂಹ್ಯಾರ ಸೇಬರಜೆಟ್ಟುಗಳು ನಿರ್ನಾಮವಾಗುವಂತ, ಆಲ್ವೆ, ಅದಕ್ಕೆ ಮುನ್ನಾದಿನವೇ ನಮ್ಮ ಗಡಿಯ ಮೇಲೆ ಆಕ್ರಮಣ ಸಿದ್ಧವಾಗಿದ್ದ ೧೩ ಪಾಕ್ ಟ್ಯಾಂಕುಗಳು ಭಗ್ನಗೊಂಡನಂತೆ. ಭಾರತವೇ ತನ್ನ ಮೇಲೆ ಆಕ್ರಮಣನೂಡಿದೆಯೆಂದು ಪಾಕಿಸ್ತಾನಿ ನಿರೀಹ ವ್ರಜೆಗಳಿಗೂ ವಿಶಾಲ ವಿಶ್ವಕ್ಕೂ ಮಂಕುಬೂದಿಯೆರಚಲು ಯೂಹ್ಯಾ ಪ್ರಯತ್ನಿಸಿದಂತಿದೆ....'

'ನೋಡಿ, ಸಿಂಗಾಪೂರದ ಪ್ರಧಾನಿಯವರು ಭಾರತದ ತಾಳ್ಮೆಯನ್ನು ಪ್ರಶಂಸಿಸಿದ್ದಾರಂತೆ....'

'ಪ್ರಶಂಸಿಸದೇನೆ? ತಾನು ಸನೆಮ ವರಿಗೆ ಸುಖ ನೀಡುವ ಗಂಧವನ್ನು ಯಾರು ತಾನೇ ಮೆಚ್ಚುವುದಿಲ್ಲ?'

'ಹಾಗೆ ಹೇಳಬೇಡಿ. ಶೀತ ಆದವನಿಗೆ ಗಂಧವೇನು, ಚಂದನವೇನು?'

'ಅದು ಖರೇನ್ನು. ಅಮೆರಿಕೆಯಂಥ ಬೃಹತ್ ದೇಶಗಳು ಶೀತವಾದವರಂತೆ ವರ್ತಿಸತೊಡಗಿರುವಾಗ....'

'ಅದು ಬಿಡಿ. ನೋಡಿ ಯೂಹ್ಯಾಖಾನರು ಯುದ್ಧವನ್ನೇ ಮುಂದುವರಿಸಲಿದ್ದಾರೆ, ಚೀನಾದ ಒತ್ತಾಸೆಯೂ ಅವರಿಗಿದೆ. ಟರ್ಕಿ ಮೊದಲಾದ ಕೆಲವು ಜಾತೀಯ ರಾಷ್ಟ್ರಗಳ ಬೆಂಬಲವೂ ಅವರಿಗಿದೆ ...'

'ಇದ ಬಹುದು ಅಂತೂ ಭವಿಷ್ಯ ತೀವ್ರವಾಗಿದೆಯೆಂಬುದಂತೂ ನಿಸ್ಸಂದೇಹ....'

'ನೋಡಿ, ಮೊನ್ನೆ ಮೊನ್ನೆ ಬಂಗ್ಲಾ ನಿರಾಶ್ರಿತರ ಪರಿಹಾರಕ್ಕೆಂದು ಸರ್‌ಚಾರ್ಜು ವಿಧಿಸಿಕಲ್ಲಾ ಕೇಂದ್ರ ಸರ್ಕಾರ?'

"ಹೌಹ್ಞಂ, ವಿವಿಧ ರಾಜ್ಯ ಸರಕಾರಗಳೂ ಕೆಲವೊಂದು ಕೋಟಿ ಆದಾಯ ಬರುವಂತೆ ಅಧಿಭಾರ ಹೇರಲಿವೆ...."

'ಇದರಿಂದ ಪ್ರತಿವ್ರಜೆಗೂ ಬಂಗ್ಲಾದ ಬೆಪ್ಪು ತಾಗಿದಂತಾಯ್ತಲ್ಲಾ?'

'ಹ್ಞೂಂ....'

'ಆದರೆ ನೋಡಿ, ಜಮ್ಮು ಕಾಶ್ಮೀರ ರಾಜ್ಯಕ್ಕೆ ಕೇಂದ್ರದ ಹೊಸ ಅಧಿಭಾರ ಲಗಾವಾಗುತ್ತಾದಿಲ್ಲವಂತೆ. ಅಂಜೆ ವಸ್ತುಗಳ ಮಟ್ಟಿಗೆ ...'

'ಅದು ಯಾರಂದರು?'

"ಅಂಜೆ ಕಂತಿ ಇಲಾಖೆ ಪರಿಪತ್ರ ಹೊರಡಿಸಿತ್ತಂತೆ; ಅದರಲ್ಲಿ ಈ ಸ್ಪಷ್ಟನೆಯಿತ್ತಂತೆ ..."

'ಅದೂ ಸರೀನ್ನು....'

'ಯಾಕೆ?'

'ಯಾಕೆ ಅಂದ್ರೆ, ಜಮ್ಮು ಮತ್ತು ಕಾಶ್ಮೀರ ಭಾರತದ ಅವಿಭಾಜ್ಯ ಅಂಗವೆಂದೂ ವೇದಿಕೆಯ ಮೇಲೆ ನಾರುತ್ತಲೇ ಬಂದ ನಮ್ಮ ದಿಲ್ಲಿ ಸರ್ಕಾರಕ್ಕೆ ಅದು ಭಾರತದಲ್ಲಿ ಸಂಪೂರ್ಣ ವಿಲೀನವಾಗಿದೆಯೇ ಇಲ್ಲವೇ ಎಂಬ ಸಂದೇಹವು ಒಮ್ಮೊಮ್ಮೆ ಕಾಡುತ್ತಿದೆ ..'

'ಹಾಗೆಂದರೆ?'

'ಹಾಗೆಂದರೆ ಹಾಗೇನೇ ಕಾಶ್ಮೀರಿಗಳ ಮನ ನೋಯಿಸದೆ ತವರನ್ನು ಒಲಿಸಿಕೊಳ್ಳುವ ತಂತ್ರವಿದು ನೋಡು. ರಾಷ್ಟ್ರದಲ್ಲಿ ವಿಷಮ ಪರಿಸ್ಥಿತಿ ಘೋಷಿಸಿದರೂ ಅದು ಕಾಶ್ಮೀರಕ್ಕೆ ಅನ್ವಯವಾಗುವುದಿಲ್ಲವೆಂದ ಬಳಿಕ ಇದೇನು ಮಹಾ?'

'ಅಲ್ರಿ, ಇದು ಸಮಾನತೆ ಹೇಗಾದೀತು? ಸಮಾಜವಾದ ಹೇಗಾದೀತು?"

"ಅದು ಡಿಲ್ಲೀಶ್ವರರಿಗೇ ಗೊತ್ತು. ನಮ್ಮ ಸಂವಿಧಾನವೇ ಜಮ್ಮು ಕಾಶ್ಮೀರಕ್ಕೆ ಕೆಲ ಪೊಂದು ವಿಶಿಷ್ಟ ಸ್ಥಾನಮಾನಗಳನ್ನು ನೀಡಿರುವಾಗ .."

'ಅಲ್ರಿ, ಮೂಲಭೂತ ಹಕ್ಕುಗಳನ್ನೇ ಮೊಟಕು ಮಾಡಲು ಅಧಿಕಾರ ಹೊಂದಿದ ಸಾರ್ವಭೌಮ ಸಂಸತ್ತು ಎಲ್ಲ ರಾಜ್ಯಗಳ ಸ್ಥಾನಮಾನಗಳನ್ನೂ ಸಮಾನಗೊಳಿಸಲು ಅಧಿಕಾರ ಹೊಂದಿಲ್ಲವೇನು?'

'ಹೊಂದಿದೇನ್ನು. ಆದರೂ ಭಯ.'

'ಏದೇಕೋ....'

'ಕಾಶ್ಮೀರಿಗಳೆಲ್ಲಿ ರೊಚ್ಚೆಳುತ್ತಾರೋ ಆಂತ ..'

'ಅಲ್ರಿ ಇದೀಗ ಛಲೇ ಭೇಷು ...'

'ಏನು?'

'ನಮ್ಮಿ ದೇಶದಲ್ಲಿ ಎಲ್ಲವೂ ಎರಡೆರಡು-ದ್ವೈತ..'

"ಏನು?'

'ನೋಡಿ, ಹಿಂದುಗಳಿಗೊಂದು ಕಾನೂನು, ಉಳಿದವರಿಗೆ ಬೇರೊಂದು ತಮಿಳುನಾಡಿನ ಹಿಂದೂ ದೇವರಿಗೆ ತಮಿಳಲ್ಲೇ ಅರ್ಚನೆ—ಪೂಜೆ—ಅಲ್ಲಿನ ಮುಸ್ಲಿಂ—ಕ್ರೈಸ್ತ ದೇವರಿಗೆ ಅವರದ್ದೇ ಭಾಷೆಯಲ್ಲಿ ಭಾರತದ ಎಲ್ಲ ರಾಜ್ಯಗಳಿಗೊಂದು ಕಾನೂನು ಜಮ್ಮು ಕಾಶ್ಮೀರಕ್ಕೆ ಇನ್ನೊಂದು....ಇದು ಆಲ್ಪ ಸಂಖ್ಯಾತರು, ಹಿಂದುಳಿದವರು, ಪರಿಶಿಷ್ಟ ಜನಾಂಗಗಳು-ಇವರಿಗೆಲ್ಲ ಬೇರೆಯೇ ಸಂರಕ್ಷಣೆಯಿದೆಯಲ್ಲಾ ...'

'ಏನು ಮಾಡೋದು? ಎಲ್ಲ ಆರಂಭ ಮಾಡುವಾಗ ಮಾನವತೆ—ಆ ಮೇಲೆ ಅಧಿಕಾರ....'

'ಅಲ್ರಿ, ಸಾರ್ವಜನಿಕೋಪಯೋಗಕ್ಕೆಂದು ವಶಪಡಿಸುವ ಭೂಮಿಗೆ ಮಾರುಕಟ್ಟೆ ದರದಲ್ಲಿ ಪರಿಹಾರ ಕೊಡಬೇಕಾಗಿಲ್ಲವೆಂದು ಹೇಳುವ ಸಂವಿಧಾನ ತಿದ್ದುಪಡಿಗೆ ಇಂಡಿಕೇಟಿನಲ್ಲೇ ವಿರೋಧವಿದೆಯಂತಲ್ಲಾ?'

'ವಿರೋಧ ಹಾಗಲ್ಲ ಕಣೇ 'ಗರಿಷ್ಠ ಮಿತಿಗಿಂತ ಹೆಚ್ಚಿಗಿರುವ ಭೂಮಿಗೆ' ಎಂಬ ತಿದ್ದುಪಡಿ ಕಷ್ಟ...'

'ಅಲ್ರಿ, ಮಂತ್ರಿಗಳು ಸಂವಿಧಾನ ತಿದ್ದುಪಡಿಯೊದರೂ ಗರಿಷ್ಠ ಮಿತಿಯೊಳಗಿನ ಭೂಮಿಗೆ ಮಾರುಕಟ್ಟೆಬೆರದಲ್ಲೇ ಪರಿಹಾರ ನೀಡುತ್ತೇನೆಂದು ಭರವಸೆ ನೀಡಿದರೂ ಕೇಳಲಿಲ್ಲವಂತೆ ...'

'ಹೇಗನ್ನೋದು? ಕೊಟ್ಟ ಭರವಸೆಯನ್ನು ಉಳಿಸಿಕೊಳ್ಳುವ ಇರಾದೆ ಸರಕಾರಕ್ಕಿಲ್ಲವೆಂದು ಅವರಿಗೂ ಗೊತ್ತು.'

'ಯಾಕೆ ಹಾಗಂತೀರಿ '

'ರಾಜ—ಮಹಾರಾಜರೊಡನೆ ಮಾತಿಕೊಂಡ ಒಡಂಬಡಿಕೆ, ಸಂವಿಧಾನ ಜಾರಿಗೆ ನೀಡಿದ ಅಧಿಕಾರ-ಸೌಲಭ್ಯ ಎಲ್ಲವನ್ನೂ ಕಿತ್ತುಕೊಳ್ಳ ಬಯಸುವಂತೆ ಸಂವಿಧಾನವನ್ನೇ ತಿದ್ದುಪಡಿಮಾಡ ಹೊರಟ ಸರಕಾರದ ಬರಿಯ ಬಾಯ್ಮಾತಿನ ಭರವಸೆಯಿಂದೇನಾಗುತ್ತದೆ?'

'ಅಲ್ರಿ, ವ್ರಧಾನಿ ಗಾಂಧಿ ಅಂದೆದ್ದನ್ನೆಲ್ಲಾ ಒಪ್ಪಿಸಿಕೊಳ್ಳುತಿದ್ದವರಿಗೆ ಇದೀಗ ಏನಾಯ್ತಿಂತ?'

'ಆಗೋನೇನು? ಆಕೆಯ ತನುಯೂಯಿಗಳ ನಂಬ್ಯೆ ಹೆಚ್ಚಿತು. ಕೊಳಚೆ ನೀರೆಲ್ಲ ಹಳ್ಳ ಸೇರಿದ ಮೇಲೆ ನಾರುವುದನು ನೋಡಲೇ ಬೇಕು ...'

'ಹೌದೂಂತೇನೆ. ನೋಡಿ ನಮ್ಮ ರಾಜ್ಯದಲ್ಲೂ ಹಾಗೇನೇ ಆಂತೆ. ಯಾರು ಬೇಕಾದರೂ ಪಕ್ಷಸೇರಬಹುದು; ಬಯಸಿದರೆ ಸಕ್ರಿಯ ಸದಸ್ಯನೂ ಆಗ ಬಹುದು ಎಂದು ಆರ್. ಎಂ. ಪಾಟೀಲ— ಸಿದ್ಧವೀರಪ್ಪನವರು ಎಲ್ಲರನ್ನೂ ಎರಡೂ ಕೈಗಳಿಂದ ಸ್ವಾಗತಿಸಿದ್ದಾರಂತೆ "

'ಮತ್ತಿನ್ನೇನು? ಆಗ ಮತ್ತೊಂದು ಸರಕಾರಿ ಕಾಲೇಜು ನಡೆಯುತ್ತದೆ.'

'ಹ್ಞೂಂ .'

'ಮೊದಲು ಮೂಡಿದ ಕಿವಿಗಿಂತ ಮುಂದೆ ಮೂಡಿದ ಕೊಂಬುಗಳೇ ಗಟ್ಟಿತಾನೆ?'

'ಹ್ಞೂಂ....'

'ನಿಷ್ಕಾಮಂತರನ್ನು ಬದಿಗೆ ಸರಿಸಿ, ಅಧಿಕಾರಲಾಲಸಿ ಬಾಲಂಗೋಷಿಗಳು ತಮ್ಮ ತಾಂಡವಕ್ಕೆ ತೊಡಗುತ್ತವೆ.'

'ಅದು ಹೌದೊನ್ನಿ ಈಗಾಗಲೆ ದೂರದರಿದ "ಗರೀಬೀ ಹಟಾವೊ" ಸಮಾಜವಾದ ಬಜಾವೊ" ಮೂಲೆ ಗುಂಪಾಗಿ ಮತ್ತೆ ಹಿಂದಿನ ಬಿಂದುವಿಗೇ ಬಂದು ನಿಲ್ಲುತ್ತದೆ.'

'ಅದು ಸರೀನ್ನು.'

'ಅಲ್ರಿ, ಇವರಿಂದ ಬಿಡುಗಡೆ?'

'ಬಿಡುಗಡೆ? ಅದು ಯಾಕೆ ಬೇಕು?'

'ಬಂಧನದಲ್ಲೇ ನೋಜುಗಾಣುವುದು ನಮ್ಮ ಜಾಯಮಾನವೇ?'

'ಇದುವರೆಗೂ ಹಾಗೇ ನಡೆದು ಬಂದಿದೆ ಮುಂದೆಯೂ ಬರಬಹುದು....'

'ಹ್ಞೂಂ...'

'ಏನು?'

'ಏನಿಲ್ಲ ಬಿಡಿ....'

—ಗೋರಾ.

ನಿಮ್ಮ ಅಮೂಲ್ಯ ವಸ್ತು, ಒಡವೆಗಳನ್ನು ಸಂರಕ್ಷಿಸಲು ಕಾವಲು ನಾಯಿ ಬೇಕೇ?



ಮನಸೆಳೆಯುವಂತಿರುವ ನಿಮ್ಮ ಬೆಳೆಬಾಳುವ ವಸ್ತು, ಒಡವೆಗಳು ಸುಭದ್ರವಾಗಿರಲು ಸಾಧ್ಯವೇ. ಇಲ್ಲ ಸಿಂಡಿಕೇಟ್ ಬ್ಯಾಂಕಿನ ಸೇಫ್ ಡಿಪಾಸಿಟ್ ಲಾಕರ್‌ಗಳು ಕಾವಲು ನಾಯಿಯಂತೆ ನಿಮ್ಮ ಅಮೂಲ್ಯ ವಸ್ತುಗಳನು ಸದಾ ಸುರಕ್ಷಿತವಾಗಿಯೂ ಸಂರಕ್ಷಿತವಾಗಿಯೂ ಇರಿಸುತ್ತವೆ.

ಬ್ಯಾಂಕು ತನ್ನ ೪೧ಕ್ಕಿಂತಲೂ ಹೆಚ್ಚಿನ ಶಾಖೆಗಳಲ್ಲಿ ಸೇಫ್ ಡಿಪಾಸಿಟ್ ಲಾಕರ್‌ಗಳ ಸೌಲಭ್ಯವನ್ನು ಒದಗಿಸಿದೆ. ಸಿಂಡಿಕೇಟ್ ಬ್ಯಾಂಕಿನ ಸೇಫ್ ಡಿಪಾಸಿಟ್ ಲಾಕರ್‌ಗಳ ವ್ರಯೋಜನವನ್ನು ಪಡೆದು ನಿಮ್ಮ ವಸ್ತು, ಒಡವೆ ಮತ್ತು ಅಮೂಲ್ಯ ದಾಖಲೆಗಳಿಗೆ ರಕ್ಷಣೆ ಹಾಗೂ ಭದ್ರತೆಯನ್ನು ನೀಡಿರಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಫ್ ಡಿಪಾಸಿಟ್ ಲಾಕರ್ ಸೌಲಭ್ಯವನ್ನು ಹೊಂದಿರುವ ನಮ್ಮ ಬ್ಯಾಂಕಿನ ಶಾಖೆಗಳು:

ಕುಂದಾಪುರ ● ಮಣಿಪಾಲ ● ಮಂಗಳೂರು-ಹಂಪನಕಟ್ಟಾ

ಪುತ್ತೂರು ● ಉಡುಪಿ-ಲೋಕಲ್ ಆಫೀಸು

ದಕ್ಷ, ಸ್ವಾವಲಾಣಿಕ ಬ್ಯಾಂಕಿಂಗ್ ಸೇವೆಗೆ

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಛೇರಿ: ಮಣಿಪಾಲ

ಕೆ. ಕೆ. ಪೈ
ಕಸ್ತೂರಿಯನ್

ಪಾಕ್ ರಣೋತ್ಸಾಹದ ರಹಸ್ಯ

ಲೇಖಕರು: ಕರ್ನಲ್ ಆರ್. ರಾಮರಾವ್,
ರಕ್ಷಣಾಬಲದ ಅಧ್ಯಯನ ಹಾಗೂ ವಿಶ್ಲೇಷಣಾ ಸಂಸ್ಥೆಯ ನಿವೃತ್ತ ಅಧಿಕಾರಿಗಳು, ನವದೆಹಲಿ

ಕಳೆದ ಆರು ತಿಂಗಳುಗಳಿಂದ - ಅದರಲ್ಲೂ ಕಳೆದ ನಾಲ್ಕು ವಾರಗಳಿಂದ ಪಾಕಿಸ್ತಾನದ ಮುಖಂಡರು ಯುದ್ಧಾಸಕ್ತರಾಗಿದ್ದು ಪದೇ ಪದೇ ಯುದ್ಧದ ಮಾತನಾಡುತ್ತಿದ್ದಾರೆ. ಜ: ಯಾಹ್ಯಾಖಾನರಿಂದ ಮೊದಲುಗೊಂಡು ಸೇನೆಯ ಸಿಪಾಯಿಯವರೆಗೆ ಎಲ್ಲರಿಗೂ ಭಾರತದೊಂದಿಗೆ ಯುದ್ಧ ಮಾಡುವ ಚಪಲ. ಅವರು ಆಡಿದಂತೆ ಮೊದಲೂ ತೊಡಗಿದ್ದಾರೆ. ಗುಜರಾತಿನಿಂದ ಕಾಶ್ಮೀರದವರೆಗೆ ಪಶ್ಚಿಮಗಡಿಯುದ್ಧಕ್ಕೂ ಪಾಕಿಸ್ತಾನಿ ಸೇನೆಯ ಚಲನವಲನ ಬಿರುಸಾಗಿದೆ. ಪಶ್ಚಿಮಗಡಿಯಲ್ಲಿರುವ ಪಾಕಿಸ್ತಾನಿ ಸೇನೆಯು ಶೇ. 80ರಷ್ಟು ಮಂದಿ ಮುಂಚೂಣಿ ತಾಣ್ಯಗಳಲ್ಲಿ ಸಜ್ಜಾಗಿದ್ದಾರೆ. ವೀಸಲು ಸೈನಿಕರನ್ನು ವಾಪಸು ಕರೆಸಿಕೊಂಡಿರುವುದು, ಸೇನಾಧಿಕಾರಿಗಳ ಹಾಗೂ ಸೈನಿಕ ನಿವೃತ್ತಿಯನ್ನು ಮುಂದೂಡಿರುವುದು, ಗಡಿಪ್ರದೇಶದಲ್ಲಿರುವ ಪಾಕ್ ನಿವಾಸಿಗಳನ್ನು ಬೇರೆ ಸುರಕ್ಷಿತಸ್ಥಳಕ್ಕೆ ಕಳುಹಿಸಿರುವುದು, ಇತ್ಯಾದಿ ಕ್ರಮಗಳು ಪಾಕಿಸ್ತಾನದ ಯುದ್ಧ ಸಿದ್ಧತೆ ಯಾವ ಹಂತದಲ್ಲಿದೆ, ಎಂಬುದನ್ನು ಸೂಚಿಸಿವೆ. ಭಾರತದ ಮೇಲೆ ಆಕ್ರಮಣಮಾಡಲು ಪಾಕಿಸ್ತಾನ ಸರ್ವಸಿದ್ಧತೆಯನ್ನೂ ಮಾಡಿಕೊಂಡಿದ್ದು ಯಾವದಿನ ಆಕ್ರಮಣ ಆರಂಭಿಸ ಬೇಕೆಂಬುದು ಮಾತ್ರ ಈಗ ನಿರ್ಧಾರವಾಗಬೇಕಾಗಿದೆ. ಯುದ್ಧಕ್ಕೂ ಪೂರ್ವಭಾವಿಯಾಗಿ ಪಾಕಿಸ್ತಾನ ತನ್ನ ಪ್ರಜೆಗಳನ್ನು ಮಾನಸಿಕವಾಗಿ ಅಣಿಗೊಳಿಸುತ್ತಿದೆ. 'ಭಾರತ ದ್ವೇಷ'ದ ಕಿಡಿಯನ್ನು ಹೊತ್ತಿಸುತ್ತಿದೆ.

ವರ್ತಕರು ಲಾಹೋರ ಮತ್ತು ಸಿಯಾಲಕೋಟ ನಗರಗಳನ್ನು ತ್ಯಜಿಸಿ ಬೇರೆ ಸುರಕ್ಷಿತ ಸ್ಥಳಗಳಿಗೆಹೋಗಲಾರಂಭಿಸಿದ್ದಾರೆ. ಮುಂಬರುವ ಅಪಾಯವನ್ನು ಗ್ರಹಿಸಿಯೇ ಪಾಕಿಸ್ತಾನದ ಗೂಢಚಾರರ ಪಡೆ ಈ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. ಇರಾನ್ ಭೇಟಿಯನ್ನು ಹೆತಾತ್ ಮೊಟಕುಗೊಳಿಸಿ ಯಾಹ್ಯಾಖಾನರು ರಾಜಧಾನಿಗೆ ಹಿಂತಿರುಗಿ ಬಂದಿರುವುದು ಈ ಭೀತಿಯನ್ನು ಇನ್ನಷ್ಟು ಹೆಚ್ಚಿಸಿದೆಯಲ್ಲದೆ, ಅಪಾಯದ ಮುನ್ಸೂಚನೆಯಾಗಿದೆ.

ಇಂತಹ ಒಂದು ವಿಷಮ-ಪ್ರಸಂಗದಲ್ಲಿ ನಮಗೆ ಇಷ್ಟವಿಲ್ಲದಿದ್ದರೂ ನಮ್ಮ ಮೇಲೆ ಆಕ್ರಮಣ ನಡೆದು - ನಾವು ಹೋರಾಡ ಬೇಕಾವ ಸನ್ನಿವೇಶ ಒದಗಿಬಂದರೆ, ಸರ್ಕಾರ ನಮ್ಮ ರಕ್ಷಣಾ ದಳಗಳನ್ನು ಬಲಪಡಿಸಲು ಹಾಗೂ ಯೋಧರು ಸಮರಕ್ಕೆ ಸಿದ್ಧರಾಗಿರಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ಈಗ ಕೈಗೊಳ್ಳಬೇಕಾಗಿದೆ.

ಪಾಕಿಸ್ತಾನದ ಆಶ್ರಯದಾತರಲ್ಲಿ, ಕೆಲವರಾದರೂ ಅಧ್ಯಕ್ಷ ಯಾಹ್ಯಾಖಾನರಿಗೆ ಸಂಯಮದಿಂದ ವರ್ತಿಸಲು ಬುದ್ಧಿವಾದ ಹೇಳಿರಬಹುದು. ಯುದ್ಧವನ್ನುಳಿದು ಅನ್ಯಮಾರ್ಗವನ್ನು ಅನುಸರಿಲು ಯಾಹ್ಯಾ ಎಷ್ಟರಮಟ್ಟಿಗೆ ಸ್ವತಂತ್ರರಾಗಿದ್ದಾರೆ? ಭಾರತದೊಂದಿಗೆ ಶಾಂತಿಯುತ ಸಹಜೀವನ ನಡೆಸುವ ಕಾರ್ಯನೀತಿಯನ್ನು ಅನುಷ್ಠಾನಕ್ಕೆ ತರುವ ಸ್ಥಿತಿಯಲ್ಲಿದ್ದಾರೆಯೆ? ಎಂಬುದು ಮುಖ್ಯ.

ಜ: ಯಾಹ್ಯಾಖಾನರು ಸ್ವಪ್ರೇರಣೆಯಿಂದ, ಅಥವಾ ತಾವೇ ನಿರ್ಮಿಸಿರುವ ಒಂದು ಪರಿಸ್ಥಿತಿಯಲ್ಲಿ ಆಂತರಿಕ ಒತ್ತಡಗಳ ಪ್ರಜ್ಞೋದನೆಯಿಂದ ಭಾರತದ ಮೇಲೆ ಇಪ್ಪರಲ್ಲೇ ಪೂರ್ಣಪ್ರಮಾಣದ ಆಕ್ರಮಣವನ್ನು ಆರಂಭಿಸಬಹುದೆಂದು, ಉಪಖಂಡದಲ್ಲಿ ಶಾಂತಿಪ್ರಿಯರೆಲ್ಲರೂ ವಿನಂಜನೆಗೆ ಈಡಾಗಿದ್ದಾರೆ.

'ಪಾಕಿಸ್ತಾನ ನಮ್ಮ ಮೇಲೆ ಆಕ್ರಮಣ ನೊಡಿದರೆ, ನಮ್ಮ ರಕ್ಷಣಾಬಲದವರು ಆಕ್ರಮಣಕಾರಿಗೆ ತಕ್ಕ ಉತ್ತರವನ್ನು ಕೊಡುತ್ತಾರೆ'ಎಂದು ರಕ್ಷಣಾಮಂತ್ರಿ ಶ್ರೀ ಜಗಜೀವನರಾಂ ಅವರು ಇತ್ತೀಚೆಗೆ ದೇಶಕ್ಕೆ ಭರವಸೆ ನೀಡಿದಾಗ ಅವರ ಮನಸ್ಸಿನಲ್ಲಿ ಪರಿಸ್ಥಿತಿಯ ಸ್ಪಷ್ಟಚಿತ್ರ ಮೂಡಿರಲೇಬೇಕು.

ಸಮರದ ಇತಿಮಿತಿಗಳು

ಹಿಂದಿನಂತೆ ಈ ಸಲವೂ ಪಾಕಿಸ್ತಾನ ನಮ್ಮನ್ನು ಯುದ್ಧಕ್ಕೆ ಎಳೆದರೆ ಆಗ ಎರಡೂ ದೇಶಗಳ ಸೈನ್ಯಗಳು ಕೆಲವೊಂದು ಅಡಚಣೆಗಳನ್ನು ಎದುರಿಸಿ ಯುದ್ಧ ಮಾಡಬೇಕಾಗುತ್ತದೆ. ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಪೂರ್ಣ ಪ್ರಮಾಣದ ಸಮರ ಅಲ್ಪಾವಧಿಯವರೆಗೆ ಮಾತ್ರ ನಡೆಯುವುದೆಂದು ಊಹಿಸಬಹುದು. ಭಾರತ—ಪಾಕಿಸ್ತಾನಗಳ ನಡುವೆ ನಡೆಯಬಹುದಾದ ಯುದ್ಧದ ಫಲಶ್ರುತಿ ಮಾತ್ರ ಅನೇಕ ಸಂಗತಿಗಳನ್ನು ಅವಲಂಬಿಸಿದೆ. ಮೊದಲನೆಯದಾಗಿ ಯುದ್ಧಪೂರ್ವ ಯೋಜನೆ ಹಾಗೂ ಸಮರ ಸನ್ನಾಹ ಪಾಕಿಸ್ತಾನದ ಆಡಳಿತಗಾರರು ಭಾರತದ ಮೇಲೆ ಆಕ್ರಮಣವೂ ಪಡಬೇಕೆಂದೇ ನಿರಂತರವಾಗಿ ಯೋಜನೆಯೂ ಮಾಡುತ್ತ ಬಂದಿದ್ದಾರೆ. ಈ ಒಂದು ಗುರಿಸಾಧನೆಗಾಗಿಯೇ ಅವರು ಸಮಗ್ರಸಂಪನ್ಮೂಲಗಳನ್ನು ಸೇನಾಬಲದ ಸಂವರ್ಧನೆಗಾಗಿಯೇ ವೆಚ್ಚಮಾಡುತ್ತಿದ್ದಾರೆ. ಬಂಗ್ಲಾದೇಶದ ಸನುಸ್ಲೆಯಿಂದಾಗಿ ಪಾಕ್‌ಆಡಳಿತಗಾರರಿಗೆ ತಮ್ಮ ಸೇನೆಯಲ್ಲಿ ಬಂಗಾಳಿಗಳ ನಿವಾರಣೆಯ ಹೊಸ ಸಮಸ್ಯೆಯನ್ನು ಎದುರಿಸಬೇಕಾಗಿದೆ. ನೌಕಾ ಮತ್ತು ವಿಮಾನದ ಒಟ್ಟು ಸೈನಿಕರಲ್ಲಿ ಮೂರರಲ್ಲೊಂದು ಭಾಗದಷ್ಟು ಬಂಗಾಳಿಗಳು. ಈಗ ಅವರ ಸ್ಥಳದಲ್ಲಿ ಪಾಕಿಸ್ತಾನಿಗಳನ್ನು ನಿಯಮಿಸಬೇಕಾಗಿದೆ. ಬಂಗ್ಲಾದೇಶವಲ್ಲಿನ ಕ್ರಾಂತಿಯನ್ನು ದಮನಮಾಡಲು ರವಾನಿಸಲಾಗಿರುವ ಸೇನೆಗೆ ಬದಲಾಗಿ ಎರಡು-ಮೂರು ಡಿವಿಷನ್‌ಗಳಷ್ಟು ಹೊಸ ಸೈನಿಕರನ್ನು ಭರತಿ ಮಾಡಿಕೊಳ್ಳಬೇಕಾಗಿದೆ. ಪಾಕಿಸ್ತಾನ ಸಿಬ್ಬಂದಿಯು ಈ ಕೊರತೆಯನ್ನು ಈ ಹೊತ್ತಿಗಾಗಲೇ ನಿವಾರಿಸಿಕೊಂಡಿರಬಹುದು.

ಸೇನಾಬಲಗಳ ಸಾಮರ್ಥ್ಯ ಯುದ್ಧದ ಫಲಶ್ರುತಿಯನ್ನು ನಿರ್ಣಯಿಸುವ ಎರಡನೆಯ ಮುಖ್ಯಅಂಶ. 1965ರಲ್ಲಿ ಪಾಕಿಸ್ತಾನ ನಮ್ಮ ದೇಶದ ವಿರುದ್ಧ ಯುದ್ಧವನ್ನು ಆರಂಭಿಸಿದಾಗ ಎಳು ಡಿವಿಷನ್‌ಗಳಷ್ಟು ಸೇನೆಯನ್ನು ಬಳಸಿತು. ಈ ಯುದ್ಧದಲ್ಲಿ ತೊಡಗಿದ ನಮ್ಮ ಯೋಧರ ಸಂಖ್ಯೆಯು ಬಹುಮಟ್ಟಿಗೆ ಅಷ್ಟೇ ಅಥವಾ ಕೊಂಚ ಹೆಚ್ಚು ಎನ್ನಬಹುದು. ಈಗ ಪಾಕಿಸ್ತಾನ ಪಶ್ಚಿಮ ವಿಭಾಗದಲ್ಲಿ ಕಾಲ್ದಳದ ಹತ್ತು ಡಿವಿಷನ್‌ಗಳನ್ನು, ಎರಡು ಸಶಸ್ತ್ರ ಡಿವಿಷನ್‌ಗಳನ್ನು ಮತ್ತು ಒಂದು ಸಶಸ್ತ್ರ ಬ್ರಿಗೇಡನ್ನು ಯುದ್ಧಕ್ಕೆ ಳಲುಹಿಸಲಾಗಿದೆ. ಪೂರ್ವರಣರಂಗದಲ್ಲಿ ಅಷ್ಟೇ ಪರಿಣಾಮಕಾರಿಯಾದ ಕಾಲ್ದಳದ ಎರಡು ಅಥವಾ ಮೂರು ಡಿವಿಷನ್‌ಗಳನ್ನೂ, ಒಂದು ಸಶಸ್ತ್ರ ಬ್ರಿಗೇಡನ್ನು ಬಳಸಲಿದೆ.

ಪಾಕಿಸ್ತಾನದ ಸೇನಾಬಲದಲ್ಲಿ ಇಂದು 1110ರಿಂದ 1200ಟ್ಯಾಂಕುಗಳಿವೆ. ಈ ಪೈಕಿ ಅಮೇರಿಕದ 500 ಎಂ—47 ಮತ್ತು ಎಂ—48 ಪೇಟನ್ ಟ್ಯಾಂಕುಗಳು, ಅಮೇರಿಕನ್ ಮೂಲದ ಸುಮಾರು 200 ಲಘುಟ್ಯಾಂಕುಗಳು, ರಷ್ಯಾದ 250, ಟಿ—55ಟ್ಯಾಂಕುಗಳು, ಚೀನಾದ 210 ಟಿ—59 ಟ್ಯಾಂಕುಗಳಿವೆ. ಚೀನ ರಷ್ಯನ್ ಟ್ಯಾಂಕುಗಳು ಹಾಗೂ ಕನಿಷ್ಠಪಕ್ಷ 100 ಪೇಟನ್ ಟ್ಯಾಂಕುಗಳು, ಪಾಕಿಸ್ತಾನದ ಸೇನಾಬಲವನ್ನು 1965ರ ನಂತರ ಸೇರಿವೆ. ಪಾಕಿಸ್ತಾನ 1965ರ ನಂತರ ತನ್ನ ವಿಮಾನ ಪಡೆಗಾಗಿ ಚೀನಾದಿಂದ 130—ಮಿಗ್—19ಫೈಟರ್ ಬಾಂಬರ್‌ಗಳನ್ನು ಮತ್ತು 16 ಐ.ಎಲ್—28 ಬಾಂಬರುಗಳನ್ನು ಪಡೆದಿದೆ. ಫ್ರಾನ್ಸಿನಿಂದ 86 ಮಿರೇಜ್-5 ಫೈಟರುಗಳನ್ನೂ, ಇರಾನ್' ಮೂಲಕ ಅಮೇರಿಕದ 90ಎಫ್—86 ಸೇಬರ್‌ಜೆಟ್ ವಿಮಾನಗಳನ್ನೂ ಪಡೆದಿದೆ. ಇದಲ್ಲದೆ ಪಾಕಿಸ್ತಾನವು ಅನೇಕ ದೇಶಗಳಿಂದ, ಹೆಲಿಕಾಪ್ಟರುಗಳನ್ನೂ ಸಾರಿಗೆ ವಿಮಾನಗಳನ್ನೂ ಲಘು ವಿಮಾನಗಳನ್ನೂ ಕೊಂಡಿದೆ. ಈ ಹೊಸ ವಿಮಾನಪಡೆಗೆ 1965ರ ಕದನದಲ್ಲಿ ಬದುಕಿ—ಉಳಿದ 262 ವಿಮಾನಗಳನ್ನೂ ಸೇರಿಸಬೇಕು ಪಾಕಿಸ್ತಾನದ ವಿಮಾನ ಪಡೆಯಲ್ಲಿ ಈಗ 32—ಬಿ—37 ಬಾಂಬರುಗಳು, 10—ಎಫ್—104 ಸ್ಟಾರ್ ಫೈಟರ್‌ಗಳು 32 ಎಫ್—86 ಸೇಬರ್‌ಜೆಟ್ ಫೈಟರುಗಳು, ಹಾಗೂ 80ಟ್ರೇನರ್ ವಿಮಾನಗಳಿವೆ.

ಭಾರತದ ರಕ್ಷಣಾಬಲದ ಅಭಿವೃದ್ಧಿ

ಪಾಕಿಸ್ತಾನದ ಸವಾಲನ್ನು ಎದುರಿಸಲು ಭಾರತ 1965ರ ನಂತರ ತನ್ನ ರಕ್ಷಣಾ ಬಲವನ್ನು ಗಮನಾರ್ಹವಾಗಿ ಅಭಿವೃದ್ಧಿಗೊಳಿಸಿದೆ. ವಿಜಯಂತ್ ಟ್ಯಾಂಕ್‌ಗಳ ನಮ್ಮ ಸೈಸ್ತ್ರ ಪಡೆಯನ್ನು ಸೇರಿವೆ. ತ್ವರಿತ ಆವಶ್ಯಕತೆಗಳನ್ನು ಪೂರೈಸಲೆಂದೇ ಮಿತ್ರರಾಷ್ಟ್ರಗಳಿಂದ ನಾವು ಅನೇಕ ಮಧ್ಯಮ ಹಾಗೂ ಲಘು ಪ್ರಮಾಣದ ಟ್ಯಾಂಕ್‌ಗಳನ್ನು ಪಡೆದಿದ್ದೇವೆ. ಈ ಎಲ್ಲಾ ಕ್ರಮಗಳಿಂದಾಗಿ ನಮ್ಮ ಭೂಸೇನಾ ಹೋರಾಟದ ಸಾಮರ್ಥ್ಯ ಬಹಳಷ್ಟು ಸುಧಾರಿಸಿದೆ. ಪಶ್ಚಿಮ ಗಡಿಯಲ್ಲಿ ಅದರ ಸಂಚಾರವೂ ಸು

(ಎಂಟನೆ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
137 ಶಾಖೆಗಳಿಂದ ಹಬ್ಬರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಕೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಆತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.
ಎನ್. ಸುಂದರ್‌ರಾಮ್ ಶೆಟ್ಟಿ,
ಚೇಯರ್‌ಮೆನ್.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex.C. 506/1971. O.S. 100/68.

ಗಣೇಶ ಪಯ್ಯನಾಭ ಫಡ್ಕೆ ಕೂಡಾ —ಅರ್ಜಿದಾರರು.

ಭಡೆ ಪರಮಗಾಮ ಭಟ್ಟ ಕೂಡಾ —ಎದ್ರಿರು.

1ನೇ ಎದ್ರಿ—ಭಡೆ ಪರಮಾನು ಭಟ್ಟ. ಭಡೆ ನಾರಾಯಣ ಭಟ್ಟರ ಮಗ. ಬೆಳ್ತಂಗಡಿ ತಾಲ್ಲು ಶಿಬಾಜೆ ಗ್ರಾಮದವನ್ನಲ್ಲಿ. ಇವರಿಗೆ ತಿಳಿಸುವುದೇನೆಂದರೆ—

ಮೇಲ್ಕಂಡ ಡಿಕ್ರಿಯನ್ನು 1ನೇ ಅರ್ಜಿದಾರನು 2ನೇ ಅರ್ಜಿದಾರ ನಾರಾಯಣ ಗೌಡಲೆಯವರೀಗೆ ಪರಾಭಾರೆ ಮಾಡಿರುವುದರಿಂದ, ಸದ್ರಿ ಡಿಕ್ರಿ ಮೇಲೆ ಅರ್ಜದಾರರು ನಿಮ್ಮ ಮೇಲೆ ಕೂಡಾ ಮಾಡಿದ ಮೇಲಿನ ಅನ್ಲ್ಜಾರಿಯು ತಾ. 16-12-71ಕ್ಕೆ ಇಟ್ಟಿರುವದರಿಂದ ಆದ್ದೆ ನಿಮ್ಮಮೇನಾದರೂ ಆಕ್ಷೇಪಣೆಗಳಿದ್ದೆ ಸದ್ರಿ ದಿನ್ನೆ ಮೇಲ್ಕಂಡ ಕೋರ್ಟು ಮುಂದೆ ನೀವು ಸ್ವತಹ ನ ವಕೀಲರ ದ್ವಾರಾ ಹಾಜರಾಗಿ (ಬೆಳಿಗ್ಗೆ 11 ಗಂಟೆಗೆ ಸರಿಯಾಗಿ) ಉದಾಪಹುಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯದೆ.

(Sd) B. Ishwara Bhat.
Advocate for Petitioners.

ಪುತ್ತೂರು, ತಾ. 23-11-71.

ನೂರು ಜನರ ನೂರು ನೂರು ಸಲಹೆ

'ಗರೀಬೀ ಹಟಾವೋ' ಘೋಷಿಸಿ ಬಹುಮತ ಗಳಿಸಿ ಮತ್ತೆ ಪ್ರಧಾನಿಯೂಡ ಶ್ರೀಮತಿ ಗಾಂಧಿಯವರು ಇದೀಗ ಬಹಳ ಸ್ಪಷ್ಟ ಭಯಾನಕ ಪರಿಸ್ಥಿಯನ್ನೆದುರಿಸುತ್ತಿದ್ದಾರೆ. ಬಂಗ್ಲಾ ಸಮಸ್ಯೆಯಲ್ಲಿ ಸಿಕ್ಕು ಹಾಕಿಕೊಂಡ ಆಕೆ ಭಾರತವನ್ನೂ ಆದರ ಶ್ರೀಯೋಭಿವೃದ್ಧಿಯನ್ನೂ ಮರೆತಿದ್ದಾರೆಂದು ಆಕೆಯ ವಿರೋಧಿಗಳು ಪ್ರಚಾರ ಮಾಡತೊಡಗಿದ್ದಾರೆ. ಸ್ವತಃ ಗೃಹಮಂತ್ರಿಯಾಗಿರುವ ಪ್ರಧಾನಿಯವರಿಗೆ ತನ್ನ ಖಾತೆಯನ್ನು ಮಾತ್ರವೇ ನೋಡಿಕೊಂಡು ತೃಪ್ತರಾಗುವುದು ಸಾಧ್ಯವಾಗುತ್ತಿಲ್ಲ. ದೇಶದ ಎಲ್ಲ ಆಗುಹೋಗುಗಳನ್ನೂ ಸೂಕ್ಷ್ಮವಾಗಿ ಗಮನಿಸಿ, ನೀತಿ ನಿರೂಪಿಸುವ ಗುರುತರ ಹೊಣೆಗಾರಿಕೆಯೂ ಆಕೆಯ ಮೇಲಿದೆಯೆಂಬುದನ್ನೂ ಅಲ್ಲಗಳೆಯುವುದೆಂತು?

ಶ್ರೀಮತಿ ಗಾಂಧಿಯವರು ಮತ್ತೊಮ್ಮೆ ಅಧಿಕಾರಕ್ಕೆ ಬಂದುದೇ ತಡ, ಬಂಗ್ಲಾ ನಿರಾಶ್ರಿತರು ಇಲ್ಲಿಗೆ ಓಡಿ ಬರಲಾರಂಭಿಸಿದರು. ಮಾನವತೆಯನ್ನು ಗುತ್ತಿಗೆಗೆ ಕೊಂಡು, ಬಂಗ್ಲಾ ದೇಶಿಯರಿಗೆ ಸಂಸತ್ತು ಸಹಾನುತಾಪ ತೋರಿಸಿತು. ನಿದ್ರೆ ಬಂದವನಿಗೆ ಹಾಸಿಗೆ ಹಾಸಿಕೊಟ್ಟತು. ಅಂದಿನಿಂದ ಇಂದಿಗೆ ಒಂದು ಕೋಟಿಗೂ ಮಿಕ್ಕಿ ಅಧಿಕೃತ ನಿರಾಶ್ರಿತರು—ಮನೆಮಠಾತ್ಯಾದಿ ಕಳೆದು ಕೊಂಡವರು—ಪ್ರಾಣ ಮಾತ್ರ ಜೊತ್ತು ತಂದವರು—ಬಂದರು. ಇಲ್ಲಿ ಮೊದಲೇ ಶಾಂತಪವಾಡುತ್ತಿದ್ದ ಬಡತನದಲ್ಲೂ ಆರಸುತನದ ಉಪಚಾರ ಪಡೆಯತೊಡಗಿದರು. ಒಂದು ಕೋಟಿ ನಿರಾಶ್ರಿತರು—ಒಪ್ಪೊತ್ತಿಗೂ ಗತಿಯಿಲ್ಲದ ಗರೀಬರ ದೇಶದಲ್ಲಿ ಅವರಿಗೆ ರಾಜೋಪಚಾರ,—ಯುದ್ಧದ ಭೀಷಣ ವಾತಾವರಣ ನಿರ್ಮಾಣ— ಇವುಗಳಿಂದ ಕೃತಕ ಅಭಾವ-ಬೆಲೆಯೇರಿಕೆ. ನಿರಾಶ್ರಿತ ಪರಿಹಾರ ಅಧಿಭಾರ ಬೇರೆ—ಇವುಗಳಿಂದ ಗರೀಬಿ ಹಟಾವ್ ಆಗಲಿಲ್ಲ. ಗರೀಬರು ಮತ್ತಷ್ಟು ಗರೀಬರಾದರು.; ಅಮೀರರು ಇನ್ನಷ್ಟು ಅಮೀರರಾದರು. ಪ್ರಧಾನಿ ಗಾಂಧಿಯವರಿಂದ ಗರೀಬಿಯನ್ನು ದೂರ ಮಾಡುವುದು ಸಾಧ್ಯವಾಗಲಿಲ್ಲ.

ಮುಂದಿನ ವಿಧಾನ ಸಭಾ ಚುನಾವಣೆಗಳಲ್ಲಿ ಗೆಲ್ಲಲಿನ್ನೊಂದು ವಿಜಯ ಮಂತ್ರ ಬೇಕು. ಆದಕ್ಕೆಂದೇ ಆಕೆ ಮತ್ತೆ ಹಳೆಯ ಗರೀಬೀ ಹಟಾವೋ ಮಂತ್ರವನ್ನು ಸ್ಮರಿಸಿಕೊಳ್ಳತೊಡಗಿದ್ದಾರೆ. ಇದು ಬರಿಯ ಘೋಷಣೆಯಲ್ಲವೆಂದೂ ಕೋಟ್ಯಂತರ ಭಾರತೀಯರ ಆಶೋತ್ತರಗಳೆಂದೂ ಅವರು ವಿವರಣೆ ನೀಡುತ್ತಾರೆ; ಗರೀಬಿಯನ್ನು ಇದಷ್ಟು ಜಾಗ್ರತೆಯೂಗಿ ಹೊಡೆದಟ್ಟುವುದಾಗಿ ಭರವಸೆನೀಡಿ, ತಮ್ಮ ಅಸಪಥತೆಯ ಕಲಂಕವನ್ನು ಬಂಗ್ಲಾ ಸಮಸ್ಯೆಯ ಮುಖಕ್ಕೆ ಬಳಿಯುತ್ತಾರೆ. ಶ್ರೀಮತಿ ಗಾಂಧಿಯವರು ಯೋಚಿಸಿದೊಂದು; ನಡೆದದ್ದು ಮತ್ತೊಂದು. ಆಕೆಯಿಂದು ಆಂತರಿಕ ಕ್ಷೋಭೆಗಿಂತಲೂ ಬಾಹ್ಯ ಪೀಡೆಯತ್ತ ಹೆಚ್ಚು ಗಮನ ಕೊಡಬೇಕಾಗಿದೆ. ಅನೆಮರಿಕೆ—ಚೀನಾಗಳು ಪಾಕಿಸ್ತಾನಕ್ಕೆ ಒತ್ತಾಸೆ ನೀಡುವುದನ್ನು, ಭಾರತವನ್ನು ಬರಿದೆ ಸಮರಕ್ಕೆ ಎಳೆಯುತ್ತಿರುವುದನ್ನು, ಬಂಗ್ಲಾ ನಿರಾಶ್ರಿತರನ್ನು ಅವರ ದೇಶಕ್ಕೆ ಹೋಗಗೊಡದ ಯಾಹ್ಯಾ ನೀತಿಯನ್ನು ಅವರು ಎಂಟೆದೆಯಿಂದ ಎದುರಿಸಿದ್ದಾರೆ. ಆದುದರಿಂದಲೇ 'ಗರೀಬೀ ಹಟಾವೋ'ಗೆ ವಿರಾಮವಿತ್ತಿದ್ದಾರೆ. ಎರಡೂ ಕಾರ್ಯಗಳನ್ನು ಏಕಕಾಲದಲ್ಲಿ ಮಾಡುವುದಕ್ಕೆ ಆಕೆ ಸವ್ಯಸಾಚಿಯಲ್ಲ ತಾನೆ?

o o o

ಕಗ್ಗಾಡಿನಲ್ಲಿ ಹುಲಿಯ ಮುಂದೆ ಬಂದು ನಿಂತವನಿಗೆ ದಾರಿತೋರದಿರುವುದು ಸಹಜ. ಆಗ ಆತನಿಗೆ ಆಕಾಶದಲ್ಲಿ ನಿಂತು ನೂರು ದೇವತೆಗಳು ಸಾವಿರ ದಾರಿ ತೋರಿಸಿ ಪ್ರಾಣಾಪಾಯದಿಂದ ಉಳಿಯಲು ಸಲಹೆ ನೀಡಿದರೆ, ಆ ಬಡಪಾಯಿಯ ಗತಿಯೇನಾಗಬೇಕು? ಪಾಕಿಸ್ತಾನದ ಮಿಲಿಟರಿ ಅಧ್ಯಕ್ಷ ಯಾಹ್ಯಾಖಾನರ ಕತೆ ಅದಕ್ಕಿಂತ ಬೇರೆಯಾಗಿಲ್ಲ. ತುಪ್ಪವನ್ನು ಬಾಯಿಗೆ ಬಸಿದುಕೊಂಡಿದ್ದಾರೆ; ಅದು ಬಿಸಿಯೆಂದು ಮೊದಲಿಗೆ ತಿಳಿಯದೇ ಹೋಯಿತೆಂದೀಗ ಪರಿತಪಿಸಿದರೆ ಪ್ರಯೋಜನವಿಲ್ಲ. ಮನೆಗೆ ಬೆಂಕಿಯಿತ್ತು ನೀರರಸುವವನ ಪಾಡು ಅವರದ್ದು ಎಂದು ಹೇಳುವುದು ಸರಿಯೇ; ಅದರೂ ಪರಿಮಳ ಸೂಸುವ ಕಸ್ತೂರಿ ತನ್ನ ನಾಭಿಯಲ್ಲೇ ಇದೆಯೆಂಬುದನ್ನು ತಿಳಿಯದ ಅವರ ಮೌಢ್ಯಕ್ಕಾಗಿ ವ್ಯಥೆ ಪಡಬೇಕಾಗಿದೆ.

ಮಾಜಿ ವಿದೇಶ ಸಚಿವ ಭುಟ್ಟೋರವರ ಆಳವನ್ನು ಮುಳುಗಿ ನೋಡಿದ್ದೇನೆಂದುಕೊಂಡ ಯಾಹ್ಯಾಖಾನರು ಆವರೆಗೆ ಮೂಯೂ ಜಿಂಕೆಯೆಂದು ಅರಿತುಕೊಂಡಿದ್ದಾರೆ. ಬಂಗ್ಲಾದಲ್ಲಿ ಶೇಕ ಮುಜಿಬುರ ರೆಹಮಾನರ ವಿರುದ್ಧ ಕಾರ್ಯಾಚರಣೆಗೆ ಪ್ರೇರಕ ಶಕ್ತಿಯಾಗಿ ನಿಂತಿದ್ದ ಭುಟ್ಟೋ ಈಗ ಯಾಹ್ಯಾಖಾನರನ್ನೇ ಎದುರಿಸಿ ಪಶ್ಚಿಮ ಪಾಕಿಸ್ತಾನದಲ್ಲಿ ಕ್ಷೋಭೆಯೆಬ್ಬಿಸಹೊರಟಿದ್ದಾರೆ. ಯಾಹ್ಯಾ ಕೇಳಿ ಕೊಂಡೊಡನೆಯೇ ತನ್ನ ನಾಯಕತ್ವದಲ್ಲಿ ಪೀಕಿಂಗಿಗೆ ಪಾಕ್ ನಿಯೋಗವನ್ನು ಒಯ್ದು ಮಿಲಿಟರಿ ನೆರವಿನ ಬಗೆಗೆ ಮಾತುಕತೆ ನಡೆಸಿಬಂದವರಿದ್ದಾರೆ. ಪಾಕಿಸ್ತಾನದಲ್ಲಿ ಮಿಲಿಟರಿ ಆಡಳಿತ ಕೊನೆಗೊಳಿಸಬೇಕು; ಜನತಾ ಸರಕಾರ ರಚನೆಯಾಗಬೇಕು ಎಂಬುದನ್ನು ಘೋಷಿಸುತ್ತಿದ್ದಾರೆ. ಇನ್ನೊಂದೆರಡು ತಿಂಗಳ ಕಾಲ ಭಾರತ ಸಂಯಮ ತೋರಿಸಬೇಕೆಂದೂ ಅಷ್ಟರಲ್ಲೇ ಪಾಕಿಸ್ತಾನದಲ್ಲಿ ಜನಪ್ರಿಯ ಸರಕಾರ ಸ್ಥಾಪಿತವಾಗುವುದೆಂದೂ ಆಗ ಸಮಸ್ಯೆಯನ್ನು ಶಾಂತಿಯುತವಾಗಿ ಪರಿಹರಿಸಿಕೊಳ್ಳಬಹುದೆಂದೂ ಕರೆನೀಡಿದ್ದಾರೆ. ಭಾರತ ವಿದ್ವೇಷಿ ಪಾಕಿಸ್ತಾನಿಗಳಲ್ಲಿ ಅಗ್ರಗಣ್ಯರಾದ ಭುಟ್ಟೋ ಶಾಂತಿ ಪ್ರಯತ್ನಗಳೇನು ಎಂಬುದು ಆರುವರ್ಷಗಳಿಗೆ ಮೊದಲೇ ಗೊತ್ತು.

ಭುಟ್ಟೋ ಮಹಾಶಯರು ಸಮಗ್ರ ಪಾಕಿಸ್ತಾನದ ಅಧಿಕಾರ ಸೂಕ್ತವನ್ನು ತನ್ನ ಕೈಗಳಿಗೆ ಸೆಳೆದುಕೊಳ್ಳುವ ತಂತ್ರ ಹೂಡಿ, ಯಾಹ್ಯಾರ ಕೈಯೆಳಗೆ ಸಿಕ್ಕ ಹಾಕೆಕೊಡಿರುವಂತೆ ನಟಿಸಿ, ಕಣ್ಣುಮುಚ್ಚಾಲೆಯಾಡುತ್ತಿರುವಾಗ, ಇನ್ನೊಬ್ಬ ಪಾಕ್ ಮಹತ್ವಾಕಾಂಕ್ಷಿ ನೂರಲ್ ಅಮೀನರು ಯಾಹ್ಯಾರ ಮುಂದೆ ದೈತ್ಯದರ್ಶನ ತೋರಿಸುತ್ತಿದ್ದಾರೆ. ಪೂರ್ವಪಾಕಿಸ್ತಾನದ ಏಕಮೇವ ಜನತಾ ಪ್ರತಿನಿಧಿಯೆಂದು ಹೇಳಿಕೊಳ್ಳುವ ಈ ಅಮೀನ್ ಜನಪ್ರಿಯ ಸರಕಾರದ ಸೂತ್ರಧಾರತನ ಪೂರ್ವಪಾಕಿಸ್ತಾನಿಯೊಬ್ಬನಿಗೆ ಕೊಡದೇ ಹೋದರೆ, ಪಾಕಿಸ್ತಾನವು ಛಿದ್ರ ಛಿದ್ರವಾಗಿ ಹೋಗುವುದೆಂದು ಬೆದರಿಕೆ ಹಾಕಿದ್ದಾರೆ. ಪೂರ್ವಪಾಕಿಸ್ತಾನಿಗೆ ಪ್ರಧಾನಿ ಪದ ನೀಡದಿದ್ದರೆ, ಅಲ್ಲಿನ ಜನತೆ ಬಂಡೇಳುವುದು, ಸ್ವತಂತ್ರವಾಗುವುದು; ಇದರ ದುಷ್ಪರಿಣಾಮ ಪಶ್ಚಿಮದ ಮೇಲೂ ಬಿದ್ದು ಅದೂ ಹೋಳು ಹೋಳಾಗುವುದು—ರಕ್ತ ರಂಜಿತವಾಗುವುದು—ಯೋಚನೆಗೇ ಭೀಕರವಾದ ಈ ದುರಂತ ನಡೆದೇ ಹೋದರೆ? ನೂರಲ್ ಅಮೀನರ ದೃಷ್ಟಿಯಲ್ಲಿ ಅಧಿಕಾರ ಗ್ರಹಣಕ್ಕೆ ಯೋಗ್ಯ ಪೂರ್ವ ಪಾಕಿಸ್ತಾನಿ ಪ್ರತಿನಿಧಿ ಅವರೊಬ್ಬರೇ ಎಂಬುದು ಪ್ರಶ್ನಾತೀತ.

ಹೀಗೆ ದೇಶದ ಒಳಗಿಂದ—ಹೊರಗಿಂದ ನೂರು ಜನರು ನೂರು ನೂರು ಸಲಹೆ ನೀಡುತ್ತ ಬಂದುದರಿಂದಲೇ ಎಲ್ಲರನ್ನೂ ಮೆಟ್ಟಿಸುತ್ತ ಬಂದುದರಿಂದಲೇ ಪಾಕಿಸ್ತಾನದ ಗತಿ ಈ ಮಟ್ಟಕ್ಕೆ ಬಂದುನಿಂತಿದೆ. ಸ್ವದೇಶೀಯ ವಿರೋಧಿಗಳನ್ನು ತನ್ನ ಮಿತ್ರನನ್ನಾಗಿಸಿಕೊಳ್ಳಬೇಕಾದರೆ, ಅವರಿಗಿರುವ ಏಕಮಾತ್ರ ಉಪಾಯವೆಂದರೆ, ಭಾರತದ ವಿರುದ್ಧ ಸಮರ ಘೋಷಿಸುವುದು. ಯಾಹ್ಯಾಖಾನರು ದಂಡು ನಡೆಸುವುದರಲ್ಲಿಯಾ ಯಶಪಡೆಯಲಿಲ್ಲ; ರಾಜ್ಯ ನಡೆಸುವುದರಲ್ಲಿಯೂ ಕೀರ್ತಿಗಳಿಸಲಿಲ್ಲ. ಸದ್ಯ ಅವರು ಬಂಗ್ಲಾಜನತೆಯ ಮುಂದೆ ತಲೆಬಾಗಬೇಕು; ಇಲ್ಲ ಅಧಿಕಾರ ತ್ಯಜಿಸಬೇಕು; ಅಥವಾ ಪಾಕಿಸ್ತಾನವನ್ನು ಮತ್ತಷ್ಟು ಪ್ರಪಾತಕ್ಕೆ ದೂಡಿ ಬಿಡಬೇಕು.

o o o

ಕೊನೆಗೂ ವಿಶ್ವಸಂಸ್ಥೆಯಲ್ಲಿ ತನ್ನಿಚ್ಛೆಯಂತೆಯೇ ಪ್ರವೇಶ ಪಡೆದ ಕೆಂಪು ಚೀನಾ ತನ್ನ ಪ್ರತಿನಿಧಿಗಳನ್ನು ಕಳಿಸಿಕೊಟ್ಟತು. ಬೃಹತ್ ದೇಶವೊಂದು ವಿಶ್ವಸಂಸ್ಥೆಯಿಂದ ಹೊರಗುಳಿದದ್ದು ಅನ್ಯಾಯವೆಂದು ನಂಬಿದ್ದವರಿಗೆ ಚೀನಾ ಪ್ರವೇಶ ಸಂತೋಷವ ಸಿದ್ಧಿಯಾಯಿತು. ಅದು ತನ್ನ ನೀತಿಯನ್ನು ಹೊಸತಾಗಿ ಬಂದ ಹೆಚ್ಚಿನ ಹೊಣೆಗಾರಿಕೆಗೆ ತಕ್ಕಂತೆ ರೂಪಿಸಿಕೊಳ್ಳುವುದೆಂದು ಆಶಿಸಿದ್ದವರಿಗೆ ಹೂಹಾವೋ ರೆವರ ಮೊತ್ತ ಮೊದಲ ಭಾಷಣವೇ ನಿರಾಶೆಯನ್ನುಂಟು ಮಾಡಿತು.

ಸಂದರ್ಭ ಪೂರ್ವಬಂಗಾಳದ ನಿರಾಶ್ರಿತರ ಸಂಬಂಧದ ಚರ್ಚೆ. ಹೆಚ್ಚಿನ ಪ್ರತಿನಿಧಿಗಳು ಭಾರತದ ಪರ ಸಹಾನುಭೂತಿ ತೋರಿಸಿದ್ದರು. ಚೀನಾದ ಪ್ರತಿನಿಧಿಯೆದ್ದು ಭಾಷಣಕ್ಕೆ ತೊಡಗಿದರು. ಅವರ ಭಾಷಣ ಸಂಕ್ಷಿಪ್ತವಾಗಿತ್ತು; ಆದರೆ, ಖಂಡ ತುಂಡವಾಗಿಯೂ ಇತ್ತು. "ಭಾರತವು ಪಾಕಿಸ್ತಾನದ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ನಡೆಸುತ್ತಿದೆ; ಅಲ್ಲಿ ಬುಡ ಮೇಲು ಮಾಡುವ ಚಟುವಟಿಕೆಗಳಲ್ಲಿ ವ್ಯಸ್ತವಾಗಿದೆ. ಭಾರತವು ಟಿಬೇಟ್ ನಿರಾಶ್ರಿತರ ಸಮಸ್ಯೆಯೊಂದನ್ನು ನಿರ್ಮಿಸಿಕೊಂಡು, ಅಲ್ಲಿ ಬಂಡಾಯವನ್ನು ಎಬ್ಬಿಸಿತ್ತು.. ಇದೇ ರೀತಿ ಚೀನಾದ ಆಂತರಿಕ ವಿಷಯದಲ್ಲಿ ಹಸ್ತಕ್ಷೇಪ ನಡೆಸಿತ್ತು. ಆದರೆ, ಭಾರತವನ್ನು ಆಗ ಚೀನಾವು ನುಚ್ಚು ನೂರು ಮಾಡಿತು. ಪಾಕಿಸ್ತಾನದ ಆಂತರಿಕ ವ್ಯವಹಾರಗಳಲ್ಲಿ ಭಾರತದ ಹಸ್ತಕ್ಷೇಪ ನಿಲ್ಲಬೇಕು; ಪಾಕ್ ರಾಷ್ಟ್ರಾಭಿ

Gram : VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging

107 Police Road, City Market,

BANGALORE - 2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ನಿಮಗೆ ಬೇಕಾಗುವ

ಸುಲಕ್ಷಣವಾದ, ನೀಲಿಪ್ರಕಾಶದ, ಕಲೆಗಳಿಲ್ಲದ,

ಉತ್ತಮ ವಜ್ರಗಳು

ಕೊಲಿಟಿಯಲ್ಲಿ, ಸ್ಯಾಜಿನಲ್ಲಿ, ಕ್ರಯದಲ್ಲಿ ಸರಿಹೋಲಿಸಿ

ಈಗಿನ ನ್ಯಾಯ ಬೆಲೆಗೆ ಧರ್ಮಕಾಂತಾ ಕೆರೆಟು ತೂಕದಲ್ಲಿ

ಮುಂಥಾಗಿ ನಮ್ಮಿಂದ ಪಡೆಯಬಹುದು.

ವಾಸುದೇವ ಪೈಸ್ ಜುವೆಲ್ಲರೀಸ್

ರಥಬೀದಿ—ಉಡುಪಿ, ದ. ಕ.

ಎಲ್ಲರೂ ಹೇಳುತ್ತಾರೆ-

ನಿರಾಶ್ರಿತರ ಆಶ್ರಯದಾತ-ಭಾರತ

ಈ ವೇಳೆಗೆ ಒಂದು ಕೋಟಿ ಪೂರ್ವ ಬಂಗಾಳದ ನಿರಾಶ್ರಿತರು ಭಾರತಕ್ಕೆ ವಲಸೆ ಬಂದಿದ್ದಾರೆ. ಇವರಲ್ಲಿ ೮೫ ಲಕ್ಷ ಮಂದಿ ನಿರಾಶ್ರಿತ ಶಿಬಿರಗಳಲ್ಲಿ ಮತ್ತು ೧೫ ಲಕ್ಷ ಮಂದಿ ತಮ್ಮ ಬಂಧು ಬಳಗ ಹಾಗೂ ಮಿತ್ರರಲ್ಲಿ ಆಶ್ರಯ ಹೊಂದಿದ್ದಾರೆ ಎಂಬುದಾಗಿ ಅಂಕಿ ಅಂಶಗಳು ತಿಳಿಸಿವೆ.

ಪೂರ್ವಪಾಕಿಸ್ತಾನದ ಮಿಲಿಟರಿ ಸರ್ಕಾರ ಪಶ್ಚಿಮ ಬಂಗಾಳದ ಮುಗ್ಧ ಜನತೆಯ ಮೇಲೆ ನಡೆಸಿದ ನರಹತ್ಯೆ, ಮಾನವೀಯ ಹಕ್ಕುಗಳ ದಮನ ಮತ್ತು ಪ್ರಜಾಸತ್ತೆಯ ಮೂಲಭೂತ ಹಕ್ಕುಗಳ ಉಲ್ಲಂಘನೆ; ಇವು ನಿರಾಶ್ರಿತರ ವಲಸೆಗೆ ಮುಖ್ಯಕಾರಣಗಳು. ಪ್ರತಿನಿತ್ಯ ೩೦,೦೦೦ ದಿಂದ ೪೫,೦೦೦ ಮಂದಿ ನಿರಾಶ್ರಿತರು ಭಾರತ ಗಡಿಯೊಳಕ್ಕೆ ಬರುತ್ತಲೇ ಇದ್ದಾರೆ. ಪೂರ್ವ ಪಾಕಿಸ್ತಾನವು ನಡೆಸಿದ, ನಡೆಸುತ್ತಿರುವ ಮಾನವ ಹತ್ಯಾಕಾಂಡಕ್ಕೆ ಇದೊಂದು ಪ್ರತ್ಯಕ್ಷ ನಿದರ್ಶನ. ಮುಸ್ಲಿಂರಲ್ಲದ ಜನಾಂಗ ಮುಖ್ಯವಾಗಿ ಹಿಂದೂಗಳನ್ನು ದೇಶದಿಂದ ಓಡಿಸುವುದು, ಬಂಗಾಳಿ ಮುಸ್ಲಿಂರನ್ನು ಕೊನೆಗಾಣಿಸುವುದು ಹಾಗೂ 'ನಿಜವಾದ' ಪಾಕಿಸ್ತಾನೀಯರನ್ನು ಮಾತ್ರ ಪೂರ್ವ ಬಂಗಾಳದಲ್ಲಿ ಉಳಿಸುವುದು ಪಾಕಿಸ್ತಾನ ಮಿಲಿಟರಿ ಸರ್ಕಾರದ ಧ್ಯೇಯವಾಗಿದೆ. ಬಂಗಾಳಿ ರಾಷ್ಟ್ರೀಯತೆಯನ್ನೇ ನಿರ್ಮೂಲ ಮಾಡುವುದು ಅವರ ಗುರಿ. ಜಾತ್ಯತೀತತೆಯ ಆದರ್ಶಕ್ಕೆ ಅವರಲ್ಲಿ ಗೌರವವಿದ್ದಂತಿಲ್ಲ. ಪ್ರಜಾಸತ್ತಾತ್ಮಕ ಸರ್ಕಾರವನ್ನು ಅಳಿಸಿ ಮಿಲಿಟರಿ ಸರ್ಕಾರವನ್ನು ಪುನಃಸ್ಥಾಪಿಸುವುದು ಅವರ ಭಂಡನೀತಿಯೂಗಿದೆ. ಈ ಸಂದರ್ಭದಲ್ಲಿ ಟೋಕಿಯೋದ 'ಆಸಾಹಿ ಈವಿನಿಂಗ್ ನ್ಯೂಸ್' (21—9—71) ಪತ್ರಿಕೆಯು ಸಂಪಾದಕೀಯದಲ್ಲಿ ಮೂಡಿರುವ ಟೀಕೆಯನ್ನು ಇಲ್ಲಿ ಸ್ಮರಿಸಬಹುದು. ಶಾಂತಿಕಾಲದಲ್ಲಿ ಅದೂ ಕೇವಲ ಆರು ತಿಂಗಳಲ್ಲಿ ನಿರಾಶ್ರಿತರ ಇಷ್ಟೊಂದು ದೊಡ್ಡ ವಲಸೆ ಹೋಗಿರುವುದು ಇಡಿ ಇತಿಹಾಸದಲ್ಲೇ ಇದು ಪ್ರಥಮ ಬಾರಿ, ಎಂದು ಆ ಪತ್ರಿಕೆ ಟೀಕೆ ಮಾಡಿದೆ.

ಪಾಕಿಸ್ತಾನದ ಹಿರಿಯ ಪತ್ರಿಕೋದ್ಯಮಿಗಳಾದ ಶ್ರೀ ಅಂತೋನಿಮ್ಯಾಸ್ಕರ್ನಾಸ್ ಅವರು ಪಶ್ಚಿಮ ಬಂಗಾಳದಲ್ಲಿ ನಡೆದ ಸುವ್ಯವಸ್ಥಿತ ವಿಧಾನದ ನರಹತ್ಯೆ ಬಗ್ಗೆ ತಮ್ಮ "ರೇಪ್ ಆಫ್ ಬಂಗ್ಲಾದೇಶ್" ಪುಸ್ತಕದಲ್ಲಿ ಬರೆಯುತ್ತಾ "ಪಶ್ಚಿಮ ಬಂಗಾಳದಲ್ಲಿ ಪಾಕಿಸ್ತಾನಿಯರು ನಡೆಸಿದ ನರಹತ್ಯೆ ಒಂದು ಕುಲವನ್ನೇ ನಾಶಮಾಡುವ ಯತ್ನ. ಪಶ್ಚಿಮ ಬಂಗಾಳದ ರೆಜಿಮೆಂಟ್ ಪೋಲೀಸ್ ರೈಫಲ್, ಇತ್ಯಾದಿ ವಿಭಾಗಗಳಲ್ಲಿರುವ ಯೋಧರು ಹಿಂದುಗಳು, ಅವಾಮಿಲೀಗ್ ಪಕ್ಷದ ಸದಸ್ಯರು ಮತ್ತು ಆ ಪಕ್ಷದ ಬೆಂಬಲಿಗರು, ವಿದ್ಯಾರ್ಥಿಗಳು ಬಂಗಾಳಿ ಪ್ರಾಜ್ಞರು, ಮುಖ್ಯವಾಗಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರು ಅಧ್ಯಾಪಕರು ಮತ್ತು ಸೇನಾಧಿಕಾರಿಗಳು ಇವರೇ ಮೊದಲಾದವರನ್ನು ಕೊನೆಗಾಣಿಸುವುದು ಪಾಕಿಸ್ತಾನ ಮಿಲಿಟರಿ ಅಧಿಕಾರಿಗಳ ಗುರಿ. ಬಂಗಾಳಿ ಮಿಲಿಟರಿಯೋಧರು ಮತ್ತು ಪೋಲೀಸ್ ಸಿಬ್ಬಂದಿಯನ್ನು ಬೇಟೆಯಾಡಿದರು. ೨೦ ಲಕ್ಷ ಜನತೆಯನ್ನು ಕೊಂದರೂ ಚಿಂತೆಯಿಲ್ಲ ಪೂರ್ವ ಬಂಗಾಳವನ್ನು ತಮ್ಮ ಅಧಿಕಾರದಿಂದ ಬಿಟ್ಟು ಕೊಡೆವು ಎಂಬುದು ಮಿಲಿಟರಿ ಸರ್ಕಾರವು ನಿರ್ಧರಿಸಿದೆ ಎಂದು ನನಗೆ ಕೊಮಿಲ್ಲಾ ಗಿಟಿನೆಯ ಮಿಲಿಟರಿ ವಿಭಾಗದಿಂದ ತಿಳಿಯಿತು; ಎಂಬುದಾಗಿ ಮ್ಯಾಸ್ಕರ್ನಾಸ್ ಬರೆದಿದ್ದಾರೆ ಇದೇ ಅಕ್ಟೋಬರ್ 2ರ "ವಾಷಿಂಗ್‌ಟನ್ ಡೈಲಿ ನ್ಯೂಸ್" ಪತ್ರಿಕೆ ಈ ರೀತಿ ಅಭಿಪ್ರಾಯ ವ್ಯಕ್ತಪಡಿಸಿದೆ.

ಇತ್ತೀಚೆಗೆ ವಿಶ್ವಬ್ಯಾಂಕ್ ತಂಡ ನಡೆಸಿದ ಅಧ್ಯಯನ ಪ್ರಕಾರ ನಿರಾಶ್ರಿತರಿಗಾಗಿ ಭಾರತ 1971—72ರ ಹಣಕಾಸಿನ ಸಾಲಿನಲ್ಲಿ 70 ಕೋಟಿ ರೂ.ಗಳನ್ನು ವೆಚ್ಚ ಮಾಡಬೇಕಾಗಿದೆ. ನಿರಾಶ್ರಿತರ ಪರಿಹಾರ ನಿಧಿಗೆ ವಿದೇಶಗಳಿಂದ 20 ಕೋಟಿ ರೂ. ಬರುವ ನಿರೀಕ್ಷೆಯಿದೆ ನಿರೀಕ್ಷೆ ನಿಜವಾದರೂ ಅಂದರೆ ವಿದೇಶಗಳಿಂದ ನಿರೀಕ್ಷಿಸಲಾಗಿರುವ ನೆರವು ಪೂರ್ಣ ದೊರೆತರೂ, ಭಾರತಕ್ಕೆ 30 ಕೋಟಿ ರೂ.ಗಳ ಹೊರೆ ಬೀಳುವುದು. ಭಾರತ ತನ್ನ ಅಭಿವೃದ್ಧಿಗಾಗಿ ಹೊರದೇಶಗಳಿಂದ ಪಡೆಯುವ ಒಟ್ಟು ನೆರವಿಗಿಂತ ನಿರಾಶ್ರಿತರಿಗಾಗಿ ತಾನು ವೆಚ್ಚ ಮಾಡುವ ಮೊತ್ತ ಹೆಚ್ಚಿದೆ. 1971ರ ಸೆಪ್ಟೆಂಬರ್ ವೇಳೆಗೆ ಪಶ್ಚಿಮ ಬಂಗಾಳ, ಅಸ್ಸಾಂ, ಮೇಘಾಲಯ ತ್ರಿಪುರ ಮತ್ತು ಬಿಹಾರಗಳಲ್ಲಿ ನಿರಾಶ್ರಿತರಿಗಾಗಿ ಭಾರತ ಸರ್ಕಾರ 1000 ಡಾಖಲೆ ಕೇಂದ್ರಗಳನ್ನು ಸ್ಥಾಪಿಸಿದೆ, ಈ ಕೇಂದ್ರಗಳಲ್ಲಿ ನಿರಾಶ್ರಿತರಿಗೆ ವೈದ್ಯಕೀಯ ಮತ್ತಿತರ ಅಗತ್ಯ ವಸ್ತುಗಳನ್ನು ಹಂಚುವ ವ್ಯವಸ್ಥೆಯನ್ನುಮಾಡಿದೆ. ನಿರಾಶ್ರಿತರ ಯೋಗಕ್ಷೇಮ ವಿಚಾರಗಳಲ್ಲಿ ಸರ್ಕಾರ ಪೂರ್ಣ ಜವಾಬ್ದಾರಿವಹಿಸಿದೆ. ಪ್ರತಿ ನಿರಾಶ್ರಿತರಿಗೆ ದಿನಕ್ಕೆ 3ರೂ. ನಂತೆ ಈಗಾಗಲೇ 120ಕೋಟಿರೂ.ಗಳನ್ನುವೆಚ್ಚ ಮಾಡಿದೆ. ಪ್ರಸ್ತುತದಲ್ಲಿ ದಿನಕ್ಕೆ 30,000 ರಿಂದ 40,000 ವರೆಗೆ ನಿರಾಶ್ರಿತರು ಭಾರತದೊಳಕ್ಕೆ ಬರುತ್ತಿದ್ದು ಅವರ ಒಟ್ಟು ಸಂಖ್ಯೆ 1.2ಕೋಟಿಗೇರಬಹುದೆಂದು ಅಂದಾಜಿದೆ. ಗಡಿರಾಜ್ಯಗಳ ಮುಖ್ಯಮಂತ್ರಿಗಳು ನಿರಾಶ್ರಿತರ ಆಗಮನದಿಂದಾಗಿ ತಮ್ಮ ಜನತೆ ಎದುರಿಸುತ್ತಿರುವ ಸಮಸ್ಯೆಗಳನ್ನು ಕೇಂದ್ರಸರ್ಕಾರದ ಗಮನಕ್ಕೆ ತಂದು ಆಬಗ್ಗೆ ಕ್ರಮಕೈಗೊಳ್ಳಲು ವನವಿಮಾಡಿಕೊಂಡಿದ್ದಾರೆ ಎಂದು "ವಾಷಿಂಗ್‌ಟನ್ ಡೈಲಿ" ಹೇಳಿದೆ.

ಪೂರ್ವ ಬಂಗಾಳದಲ್ಲಿ ನರಹತ್ಯೆ ನಡೆಸಿದ ದಿದ್ದಲ್ಲಿ ಭಾರತಕ್ಕೆ ನಿರಾಶ್ರಿತರು ವಲಸೆ ಬರುತ್ತಲೇ ಇರಲಿಲ್ಲ. ಈ ಸಮಸ್ಯೆಯನ್ನು ಅಂದರೆ ಬಂಗ್ಲಾ ಸಮಸ್ಯೆಯನ್ನು ಯಾವುದಾದರೊಂದು ರಾಜಕೀಯ ಇತ್ಯರ್ಥದಿಂದ ಕೊನೆಗಾಣಿಸಬೇಕು ಎಂಬುದಾಗಿ ಆ ಪತ್ರಿಕೆ ಅಭಿಪ್ರಾಯಪಟ್ಟಿವೆ. ●●

'ಚಲಿಸುತ್ತಿರುವ' ಉತ್ತರಧ್ರುವ

ಉತ್ತರ ಧ್ರುವವೆಲ್ಲಿದೆ?

ಈ ಪ್ರಶ್ನೆಗೆ ಉತ್ತರವು ಸರಳವಾಗಿರಬೇಕೆಂದು ಯಾರಾದರೂ ಭಾವಿಸಬಹುದು. 'ಏಕೆಂದರೆ ಭೂಮಿಯ ಸರಿಭ್ರಮಣದ ಕಲ್ಪಿತ ಅಕ್ಷವೊಡನೆ ಭೂಮಿಯ ಮೇಲ್ಮೈ ಸಂಧಿಸುವ ಬಿಂದುಗಳೇ ಭೌಗೋಳಿಕ ಧ್ರುವಗಳೆಂದು ಹೇಳಲಾಗುತ್ತದೆ.

ಆದರೆ ಉತ್ತರ ಧ್ರುವವು ನಿರಂತರವಾಗಿ ಚಲಿಸುತ್ತಿದೆ. ಅದು ಮೂರು ದಿಶೆಗಳಲ್ಲಿ ಚಲಿಸುತ್ತಿದೆ. ಅದರ ಮೂರು ಚಲನೆಗಳಲ್ಲಿ ಒಂದಕ್ಕೆ 14 ತಿಂಗಳು ಬೇಕಾಗುತ್ತದೆ. ಅದು ಸುಮಾರು 20 ಅಡಿ ದೂರದಷ್ಟು ಮಾತ್ರ. ಅದರ ಎರಡನೆಯ ಪರ್ಯಟನೆಗೆ ಸರಿಯಾಗಿ ಒಂದು ವರ್ಷಕಾಲ ಬೇಕಾಗುತ್ತದೆ. ಈ ಪರ್ಯಟನೆಯ ದೂರ 13 ಅಡಿ ಮಾತ್ರವೇ. ಈ ಪರ್ಯಟನೆಗಳ ತರುವಾಯ ಧ್ರುವವು ತನ್ನ ಮೊದಲಿನ ಸಾನಕ್ಕೆ ವಾಪಸು ಬರುತ್ತದೆ. ಆದರ ಈ ಚಲನೆಗಳು ಸುರುಳಿಯಂತೆ ಸುತ್ತಿ ಬಿಚ್ಚಿಕೊಳ್ಳುತ್ತಿರುವಂತೆ ಭಾಸವಾಗುತ್ತವೆ.

ಉತ್ತರ ಧ್ರುವದ ವರ್ತನೆಯು ಹೀಗೇಕೆ ಇರುತ್ತದೆ? ಆದರೆ ಮೊದಲನೆಯ ಚಲನೆಯು ಭೂಮಿಯ ತೂಗಾಟದಿಂದ ಉಂಟಾಗುತ್ತದೆ. ಎರಡನೆಯ ಚಲನೆಯು ಖಂಡಗಳ ಮೇಲೆ ಗಾಳಿ, ಹಿಮದ ಹಳುಕು ಮತ್ತು ನೀರ್ಗಲ್ಲು—ಇವುಗಳ ವಿವಾಲ ಸ್ತರಗಳ ಒತ್ತಡದಲ್ಲಿ ಉಂಟಾಗುವ ಮತು ವ್ಯತ್ಯಾಸಗಳಿಂದ ಉಂಟಾಗುತ್ತದೆ.

ಆದರ ಮೂರನೆಯ ಚಲನೆಯು ನಿರಂತರವಾದುದು. ಅದು ಭೂಮಿಯ ಹೊರ ಸನರನ ಚಲನೆಯಿಂದ ಉಂಟಾಗುತ್ತದೆ. ಅದು ನಮ್ಮ ಗ್ರಹದ ಒಳಭಾಗದ ಅಗ್ನಿಕೋಷ್ಣಾವರಣದ ಮೇಲೆ ಗನುನಾರ್ಹವಾಗಪಂತೆಯೂದರೂ 'ಏಕಪ್ರಕಾರವಾಗಿ ವರ್ಷಕ್ಕೆ 4.4-5.2 ಅಂಗುಲಗಳಷ್ಟು ವೇಗದಲ್ಲಿ ಜಾರುತ್ತದೆ.

ಉತ್ತರ ಧ್ರುವದ ಸ್ಥಾನನವನ್ನು ನಿರ್ಣಯಿಸಲು ವಿಜ್ಞಾನಿಗಳು 1903ರಲ್ಲಿದ್ದ ಆದರ ಸ್ಥಾನನವನ್ನು ಆದರ ಕೇಂದ್ರ ಬಿಂದುವೆಂದು ಪರಿಗಣಿಸಲು ಒಪ್ಪಿದ್ದಾರೆ. ಭೂಪ್ರದೇಶದ ಮತ್ತು ಭೂ ಗಣಿತಶಾಸ್ತ್ರೀಯ ಸರ್ವೇಕ್ಷಣೆಗಳಿಗೂ, ನಿಷ್ಪಚ್ಚಪವಾದ ನಕ್ಷೆಗಳ ತಯಾರಿಕೆಗೂ, ಉತ್ತರ ಧ್ರುವದ ಸ್ಥಾನ ನಿರ್ಣಯವು ಅವಶ್ಯಕವಾಗುತ್ತದೆ.

●●

ಕಾರ್ಕಳ ಸಮ್ಮೇಳನದ ಆಯವ್ಯಯ ಪರಿಶೀಲನೆ

ಕಾರ್ಕಳದಲ್ಲಿ ಜರಗಿದ ದ ಕ ಜಿಲ್ಲಾ ಸಾಹಿತ್ಯ ಸಮ್ಮೇಳನದ ಆಯವ್ಯಯಗಳ ಪರಿಶೀಲನ ಸಹಿತ ಇತರ ವಿಷಯಗಳ ಚರ್ಚೆಗಾಗಿ ತಾ. 21—11—71ರಂದು ಸ್ವಾಗತ ಸಮಿತಿಯ ಸಭೆಯೊಂದು ಜರಗಿತು. ಆರಂಭದಲ್ಲಿ ಕಾರ್ಯದರ್ಶಿ ಶ್ರೀ ಎಂ. ರಾಮಚಂದ್ರರವರು ಸ್ವಾಗತಿಸಿ ಸಭೆಯ ಕಾರ್ಯ ಕಲಾಪಗಳೇನು ಎಂಬುದನ್ನು ವಿವರಿಸಿದರು. ಕೋಶಾಧಿಕಾರಿ ಶ್ರೀ ಪಿ. ಎನ್. ನರಸಿಂಹ ಮೂರ್ತಿಯವರು ಆಯವ್ಯಯಗಳ ವಿವರಗಳನ್ನು ನೀಡುತ್ತಾ, ಬೇರೆ ಬೇರೆ ವಿಧದಲ್ಲಿ ರೂ. ಇಪ್ಪತ್ತು ಸಾವಿರ ಚಿಲ್ಲರೆ ಸಂಗ್ರಹವಾಗಿದೆಯೆಂದೂ ಒಟ್ಟು ವೆಚ್ಚವೂ ಅಷ್ಟೇ ಆಗುತ್ತದೆಂದೂ ತಿಳಿಸಿದರು.

ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಸಮ್ಮೇಳನದ ನಿರ್ವಹಣೆಯ ಬಗ್ಗೆ ಸಂತೋಷ ವ್ಯಕ್ತಪಡಿಸಿ ಆದರ ಯಶಸ್ವಿಗಾಗಿ ದುಡಿದವರೆಲ್ಲರನ್ನು ಅಭಿನಂದಿಸಿದರಲ್ಲದೆ ಈ ಸಮ್ಮೇಳನದಿಂದ ಚಿಲ್ಲೆಯಲ್ಲಿ ಒಂದು ಒಳ್ಳೆಯ ಪರಂಪರೆ ಬೆಳೆಯುವಂತಾಯಿತೆಂದು ಆವರು ಅಭಿಪ್ರಾಯಪಟ್ಟರು

ಶ್ರೀಗಳಾದ ಬಿ. ಎಂ. ಇದಿನಬ್ಬ, ಏರ್ಯ ಲಕ್ಷ್ಮೀನಾರಾಯಣ ಅಳ್ವ, ಕಯ್ಯಾರ ಕಿಞ್ಞಣ್ಣ ರೈ ಮತ್ತು ಪ್ರೊ। ಎಸ್. ವಿ. ಪರಮೇಶ್ವರ ಭಟ್ಟರು ಸಮ್ಮೇಳನ ಯಶಸ್ವಿಯೂದುದಕ್ಕೆ ಮೆಚ್ಚುಗೆ ಸೂಚಿಸಿದರು. ಇದೇ ಸಂದರ್ಭದಲ್ಲಿ ಸಮ್ಮೇಳನದ ಸಮಗ್ರ ವಿವರಗಳನ್ನೊಳಗೊಂಡ ಬಾಸಿಗ ಪುಸ್ತಕದ ಮುದ್ರಣಕ್ಕೆ ಬೇಕಾಗಬಹುದಾದ ಸುಮಾರು ೨½ ಸಾವಿರ ರೂಪಾಯಿ ವೆಚ್ಚವನ್ನು ಡಾ। ಟಿ. ಎಂ. ಎ. ಪೈ ಮತ್ತು ಶ್ರೀ ಬಿ. ಮಂಜುನಾಥ ಪೈ ಅವರು ಸಹಿಸುವುದಾಗಿ ಸಾರಿದರು.

ಆಂತ್ಯದಲ್ಲಿ ಶ್ರೀ ಎಂ. ರಾಮಚಂದ್ರರವರು ಧನ್ಯವಾದಗಳನ್ನು ಅರ್ಪಿಸಿದರು.

ಮೊನಿಗೇ ಎದ್ದಿರುವ ಸಮಸ್ಯೆಯ ಪರಿಹಾರಕ್ಕೆ ಮುಂದೆ ಬರಬೇಕು. ಪೂರ್ವಬಂಗಾಳದ ನಿರಾಶ್ರಿತರ ಸಂಬಂಧದಲ್ಲಿ ತನ್ನ ಸಹಾನುಭೂತಿ ಪಾಕ್ ಸರಕಾರವ ಕಡೆಗೇ ಹೊರತು ಭಾರತದ ಪರವಾಗಿಲ್ಲ."

ಪ್ರಧಾನೋರವರ ಭಾಷಣದಲ್ಲಿ ಹೊಸ ಸಂಗತಿಯೇನೂ ಇರುವುದಿಲ್ಲ. ತಮ್ಮ ಹಿಂದಿನ ಹೇಳಿಕೆಗಳನ್ನು ಪುನರುಚ್ಚರಿಸಲು ನಿಶ್ವಸಂಸ್ಥೆಯ ವೇದಿಕೆಯನ್ನು ಬಳಸಿಕೊಂಡರೆಂಬುದು ಮಾತ್ರವನಾರ್ಹ ಟಿಟೇಟನಲ್ಲಿ ಕೆಂಪುಚೀನಾ ಕೈಕೊಂಡ 'ಶುದ್ಧೀಕರಣ ಕಾರ್ಯ' ಮತ್ತು ಈ ಬಗ್ಗೆ ಭಾರತದ ನಿಲುವು ಜಗಜ್ಜನಿತ. ಚೀನೀ ಸರ್ವಾಧಿಕಾರದ ವಿರುದ್ಧ ಎದೆಗೊಡಲಾರದೆ ಓಡಿ ಬಂದ ನಿರಾಶ್ರಿತರಿಗೆ ಭಾರತ ಆಶ್ರಯ ವಿತ್ತದ್ದು ಚೀನ ಮುತ್ತದರಿ ಬಾಲ ಬಡಕರನ್ನುಳಿದು ಉಳಿದವರಿಗೆಲ್ಲ ಗೊತ್ತು. ಇದೇ ಥಾಟಿಯ ಚೀನಾದ ರಾಗ ಅದರ ಇಂದಿನ ಘನಸ್ಥಿಕೆಗೆ ಶಕ್ಯವಲ್ಲ. ಅಪರಾಧಿಯನ್ನು ಅಪರಾಧಿಯೆಂದು ಹೆಸರಿಸುವ ಕೆಚ್ಚಿದೆ ಬೇಡ, ನಿರಪರಾಧಿಯನ್ನು ನಿರಪರಾಧಿಯೆನ್ನುವಷ್ಟಾದರೂ ಸೌಜನ್ಯವಿರಬೇಡವೆ ? ●

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಕೇಶವಿನ ವಿನ್ಯಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಆಗ್ಫಾ ಕೊಡಕ್, ಆಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಪಾಕ್ ರಣೋತ್ಸಾಹದ ರಹಸ್ಯ

(ಐದನೇ ಪುಟದಿಂದ)

ಗಮವಾಗಿದೆ. 1963ರ ಬಳಿಕ ಸೇನಾಬಲದ ಅಭಿವೃದ್ಧಿ ಆರಂಭವಾಯಿತು. ಈಗ ನಮ್ಮ ಸೇನೆಯಲ್ಲಿ 850,000 ಮಂದಿ ಯೋಧರಿದ್ದಾರೆ. ಈ ಸೇನಾಬಲ ದೇಶದ ಪೂರ್ವ ಹಾಗೂ ಉತ್ತರ ಸೀಮೆಗಳನ್ನು ಮತ್ತು ಬಂಗ್ಲಾದೇಶದ ಗಡಿಯನ್ನು ರಕ್ಷಿಸಲು ಹಾಗೂ ಪಶ್ಚಿಮದ ಗಡಿಯಲ್ಲಿ ಸಾಕಷ್ಟು ಸೈನಿಕರನ್ನು ಜಮೂಯಿಸಲು ಸಾಕಾಗುತ್ತದೆ.

ವಿಮಾನಬಲ ನಮ್ಮ ಭೂಸೇನೆಯ ಬೆಂಬಲಕ್ಕಿದೆ ಸಾಕಷ್ಟು ಸಂಖ್ಯೆಯಲ್ಲಿ ಫೈಟರ್ ಬಾಂಬರುಗಳು, ಮಿಗ್—21 ವಿಮಾನವ್ಯೂಹಭೇದಕ ವಿಮಾನಗಳು ಈಗ ನಮ್ಮ ವಿಮಾನ ಪಡೆಯಲಿದ್ದು ಅದರ ಹೋರಾಟ ಸಾಮರ್ಥ್ಯ ಗಮನಾರ್ಹವಾಗಿ ಹೆಚ್ಚಿದೆ. ಇದಕ್ಕೆ ಉತ್ತಮ ಸಂಪರ್ಕವ್ಯವಸ್ಥೆಯ ಹಿನ್ನೆಲೆಯಿದೆ.

ಭಾರತ ಮತ್ತು ಪಾಕಿಸ್ತಾನ ಯುದ್ಧ ನಡೆದ ಪ್ರಸಂಗದಲ್ಲಿ ನಮ್ಮ ನೌಕಾಬಲ ನಿರ್ಣಾಯಕ ಪಾತ್ರವನ್ನು ವಹಿಸಲಾರದಾದರೂ ಉಪಯುಕ್ತ ರೀತಿಯಲ್ಲಿ ಸೇವೆಸಲ್ಲಿಸುವುದು. ಇದಕ್ಕೆ ಭೌಗೋಳಿಕ ಹಾಗೂ ಇತರ ಕಾರಣಗಳುಂಟು. ನೌಕಾಬಲದ ಯುದ್ಧ ನಡೆದರೆ ಪರಿಸ್ಥಿತಿ ನಮಗೆ ಅನುಕೂಲಕರವಿದೆ. ಪಾಕಿಸ್ತಾನ ತನ್ನ ನೌಕಾಬಲಕ್ಕೆ ಅತ್ಯಾಧುನಿಕವಾದ ಸಬ್‌ಮೆರಿನ್‌ಗಳನ್ನು, ಗೂಢಚಾರ್ಯನೌಕೆಗಳನ್ನು ಹೊಂದಿದ್ದರೂ ಪಾಕ್ ನೌಕಾಬಲ ನಮ್ಮ ಕರಾವಳಿಯಲ್ಲಿ ದಾಳಿನಡೆಸಿದರೆ, ನಮ್ಮ ನೌಕಾಪಡೆ ಅದಕ್ಕೆ ತಕ್ಕ ಉತ್ತರ ಕೊಡುವ ಸ್ಥಿತಿಯಲ್ಲಿವೆ.

ಸೈನ್ಯದಳವನ್ನು ಸಾಗಿಸುವ ಮತ್ತು ಬೀಡು ಬಿಡುವ ಕಲೆ ಯುದ್ಧ ಫಲಿತಾಂಶವನ್ನು ನಿರ್ಣಯಿಸುವ ಮೂರನೆಯ ಮುಖ್ಯ ಸಂಗತಿಯೂಗಿದೆ. ಯುದ್ಧ ಪ್ರಾರಂಭವಾದರೆ ಆಗ ಉಭಯ ಪಕ್ಷಗಳು ಅಂದು ತಮ್ಮ ಬಳಿಯಲ್ಲಿರುವ ಶಸ್ತ್ರಾಸ್ತ್ರಗಳನ್ನು ಸಾಧನ ಸಾಮಗ್ರಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಯುದ್ಧಮೂಡಬೇಕಾಗುತ್ತದೆ. ಏಕೆಂದರೆ ಒಮ್ಮೆಯುದ್ಧವ್ಯಾರಂಭವಾಯಿತೆಂದರೆ ಪರಕೀಯ ನೆರವು ಬರುವ ಸಂಭವಕಡಿಮೆ. ಬಂದರೂ ಘಟನಾವಳಿಯ ಮೇಲೆ ಅವು ಪರಿಣಾಮ ಬೀರವು. ಈ ಒಂದು ದೃಷ್ಟಿಯಿಂದ ದೇಶದ ಆಂತರಿಕ ಸಂಪನ್ಮೂಲಗಳಿಂದಲೇ ಸರಬರಾಜು ಸ್ಥಿತಿಯನ್ನು ಸುಭದ್ರಮಾಡಬೇಕಾಗುತ್ತದೆ. ಇದನ್ನು ಲಕ್ಷ್ಯದಲ್ಲಿಟ್ಟುಕೊಂಡರೆ ಪಶ್ಚಿಮಗಡಿಯಲ್ಲಿನ ನಮ್ಮ ಸೇನೆಗಳಿಗೆ ಪರಿಸ್ಥಿತಿ ತುಂಬ ಅನುಕೂಲಕರವಾಗಿದೆ ಬಲಿಷ್ಠವಾದ ರಕ್ಷಣಾ ಕೇಂದ್ರಗಳೇ ಇಂತಹ ಒಂದು ವಿಶ್ವಾಸಕ್ಕೆ ಕಾರಣವಾಗಿವೆ. ಯುದ್ಧ ಆರಂಭವಾದರೆ ಈಗ ಬಂಗ್ಲಾದೇಶದಲ್ಲಿ ವೈಮಾನಿಕರ ನೆರವಿನಿಂದಲೇ ಜೀವ ಹಿಡಿದುಕೊಂಡಿರುವ ಪಾಕ್ ಸೈನಿಕರು, ಪಶ್ಚಿಮದ ಸಂಪರ್ಕ ಕಳೆದುಕೊಳ್ಳುತ್ತಾರೆ, ಮಾತ್ರವಲ್ಲ ಅವರ ಕಥೆ ಮುಗಿಯುತ್ತದೆ. ಪಾಕಿಸ್ತಾನದ ಆಡಳಿತಗಾರರಿಗೆ ಇದುಗೊತ್ತಿಲ್ಲವೆಂತಲ್ಲ. ಇಂತಹ ಒಂದು ಹಿನ್ನೆಲೆಯಲ್ಲಿ ಪಾಕಿಸ್ತಾನ ಯುದ್ಧ ಆರಂಭಿಸಿದರೆ, ಬಂಗ್ಲಾದೇಶವನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಅವರಿಗೆ ಆಸಾಧ್ಯವಾಗಿದೆಯೆಂಬುದು ಸ್ಪಷ್ಟವಾಗುತ್ತದೆ. ಮಾತ್ರವಲ್ಲ, ಬಂಗ್ಲಾದೇಶದಲ್ಲಿನ ತಮ್ಮ ಸೈನಿಕರನ್ನು ಉಳಿಸಿಕೊಳ್ಳುವ ಆಶೆಯನ್ನು ಅವರು ಕೈಬಿಡಬೇಕಾಗುತ್ತದೆ.

ತರಬೇತಿ ಮತ್ತು ನಾಯಕರು

ತರಬೇತಿ ಮತ್ತು ನಾಯಕತ್ವದಂತಹ ಸೈನಿಕ ಅಂಶಗಳೂ ನಿರ್ಣಾಯಕವಾಗಬಲ್ಲವು. ಪಾಕಿಸ್ತಾನ 1965ರ ದುರಾಕ್ರಮಣದಿಂದ ಪಾಠಕಲಿತು ತನ್ನ ಸೈನಿಕರಿಗೆ ಸಾಕಷ್ಟು ತರಬೇತಿ ನೀಡಿರಬಹುದು. ವರ್ಷದ ಆರಂಭದಲ್ಲಿ ಪರಿಸ್ಥಿತಿ ಏನೇ ಇದ್ದರೂ ಬಂಗ್ಲಾದೇಶದ ಘಟನೆಗಳು ಇಡೀ ಪಾಕಿಸ್ತಾನೀ ಸೈನ್ಯದ ಮೇಲೆ ಹಾಗೂ ವ್ಯಕ್ತಿಗತವಾಗಿ ಪಾಕ್ ಸೈನಿಕನ ಮೇಲೆ ಗಂಭೀರ ಪರಿಣಾಮವನ್ನು ಬೀರಿ, ಪಾಕ್ ಸೈನ್ಯದ ಉನ್ನತಾಧಿಕಾರಿಗಳು ಯುದ್ಧದ ಕಾರ್ಯಾಚರಣೆಯನ್ನು ವ್ಯವಸ್ಥಿತವಾಗಿ ಆರಂಭಿಸಿದರೂ ಸೇನೆಯ ಕೆಳಮಟ್ಟದಲ್ಲಿ ಸಿಬ್ಬಂದಿ ಹೋರಾಟಕ್ಕೆ ಆಣಿಯೂಗಲು ಕೊಂಚ ಕಾಲಾವಕಾಶಬೇಕಾಗುತ್ತದೆ.

ಕೊನೆಯ ಹಾಗೂ ಅತ್ಯಂತ ಮಹತ್ವಪೂರ್ಣ ಅಂಶವೆಂದರೆ ಉನ್ನತ ಮಟ್ಟದಲ್ಲಿ ಯುದ್ಧದ ನಿರ್ದೇಶನ. ಪಾಕಿಸ್ತಾನದ ಮಿಲಿಟರಿ ಆಡಳಿತ, ಏಕಛತ್ರಾಧಿಪತ್ಯಕ್ಕೆ ಅಧೀನವಾಗಿಲ್ಲ. ಯೂಹ್ಯಾಖಾನರು ಅಧಿಕಾರವಹಿಸಿಕೊಂಡಿದಿನದಿಂದಲೇ ಕ್ರಾಂತಿ—ಪ್ರತಿಕ್ರಾಂತಿಯ ಭಯ ಅವರನ್ನು ಬೆಂಬಿಡದ ಭೂತದಂತೆ ಪೀಡಿಸುತ್ತಿದೆ. ಯೂಹ್ಯಾಖಾನರ ಈ ಭಯ, ಸೇನೆಯ ಕೆಲವು ಅಧಿಕಾರಿಗಳಲ್ಲೂ ಪ್ರತಿಬಿಂಬಿತವಾಗಿದೆ. ಯುದ್ಧದಲ್ಲಿ ಚೇತರಿಸಿಕೊಳ್ಳುವ ವೆಟ್ಟು ಬಿದ್ದ ಪ್ರಸಂಗದಲ್ಲಂತೂ ಈ ಭಯದಿಂದ ಯುದ್ಧದ ಗತಿಯೇ ಬದಲಾಗುತ್ತದೆ. ಒಂದು ವೇಳೆ ಜನರಲ್ ಯೂಹ್ಯಾಖಾನ್ ಹಾಗೂ ಅವರ ದಂಡನಾಯಕರು ಸೇನಾ ಮದದಿಂದ ನಮ್ಮ ಮೇಲೆ ಆಕ್ರಮಣಮಾಡಿದರೆ ನಮ್ಮ ರಕ್ಷಣಾ ಬಲ ಅವರಿಗೆ ಬುದ್ಧಿಕಲಿಸಲು ಸಜ್ಜಾಗಿ ನಿಂತಿದೆ.

(ಆಕಾಶವಾಣಿ ಸೌಜನ್ಯದಿಂದ)

●●

ಮಿತ ಹಿತ-ಹಿತ ಮಿತ

ತೂಗು ತಕ್ಕಡಿಗೆ ತೂಕ ಭಾರವೇ
ತೂಗುವುದೆ ಅದರ ಧರ್ಮ!
ತೂಕ ಭಾರದಲಿ ಸಾಮರಸ್ಯ ಸಮ
ತೊಲನ ತೂಕ ಮರ್ಮ!

ಕಲ್ಲು ಜಗ್ಗಿದರೆ ವಸ್ತು ಕುಗ್ಗಿದರೆ
ತೂಕ ಅಸ್ತ ವ್ಯಸ್ತ!
ಅಳತೆಯರಿಯದೆಯೆ ತೂಗ ಹತ್ತಿದರೆ
ಅಳೆದ ಕೆಲ್ಲ ವ್ಯರ್ಥ!

ಹೊರುವ ಭುಜವಲ್ಲಿ ಉಕ್ಕು ತುಂಬಿರಲು
ಹೊರಿಸ ಬಹುದು ಶಿಲೆಯ!
ಜರೆಗೆ ಜರ್ಝರಿತ ರೋಗ ಸಮ್ಮಿಳಿತ
ಎಡೆಗೆಲ್ಲಿ ಬಲವು ಗೆಲೆಯ?

ಭಾರ ಮಿತಿಯಿದಕೆ ಭೂಮಿ ಹೊರತಿಲ್ಲ
ಹಾಕು ಹಿಂದೆ ದೃಷ್ಟಿ
ಸಹನಶೀಲೆಯೂ ಮುನಿದಳಾಗಾಗ
ಮೀರೆ ಮೀರೆ ಸೃಷ್ಟಿ!

ದುಷ್ಟ ರಕ್ಕಸರ ಧರೆಗೆ ಇಳಿದಾಗ
ಆನಳ ಮೊರೆಗೆ ಅವತಾರ!
ಶಿಷ್ಟ ರಕ್ಷಣೆಗೆ ಮಿತಿಯ ಕಾಯಲಿಕೆ
ಪಂಚ ಭೂತ ಸಹಕಾರ!

ಸರ್ಪ ಸಂಕುಲದ ವಿಷದ ಪೊರಕದೊ
ಗರುಡ ಮಂತ್ರ ಪರಿಹಾರ!
ಕ್ಷಾತ್ರ ತೇಜವದು ಭಾರವಾದಾಗ
ಕೊಡಲಿಯಿಂದ ಸಂಹಾರ!

ಹಿತವೆ ಮಿತಿಯಿರಲು ಮಿತಿಗೂ ಹಿತವಿರಲು
ಜನ್ಮಪಲ್ಲೆ ಸಾರ್ಥಕ್ಯ!
ಸಂಖ್ಯೆ ಬೆಳಸಿದರೆ ಅಂಕೆ ತಪ್ಪಿದರೆ
ಸುಖಕೆ ಉಂಟೆ ಸಖ್ಯ?

ಹತ್ತು ತಲೆಯಿತ್ತು ಕೈಯೆ ಇಪ್ಪತ್ತು
ಧರ್ಮಕಲ್ಲ ಬಂತು ಕುತ್ತು?
ಒಂದೆ ಕೋಣೆಂಡ ಧರ್ಮದರಮನೆಗೆ
ತಂದಿತಲ್ಲ ಸಂಪತ್ತು?

ಕೊಳಚೆ ನೀರಿರುವ ಬತ್ತಿ ಹೋಗಲಿಸ
ನೂರು ಹಳ್ಳವೇಕೆಂದು?
ಒರತೆ ತುಂಬಿರುವ ಶುಭ್ರ ಸಲಿಲಮಯ
ಸಾಲದೇನು ಬಾವಿಯೊಂದು?

ಗಂಟು ದೊಡ್ಡದಿದೆ ಉಂಟದೇನಲ್ಲಿ?
ಆಡುವೆ ಮುಖ್ಯ ಪ್ರಶ್ನೆ!
ಉಪ್ಪುನೀರಿರಲು ಕುಡಿದು ತನಿಯುವುದೆ
ತೃಷಿತನವನ ತೃಪ್ತಿ?

ಹೊಟ್ಟೆಯಹುದಣ್ಣ ಉಣ್ಣ ಬದುಕಲಿಕೆ
ಉಣಲು ಬಹುಕ ಬೇಡ!
ಊಟದಲ್ಲಿ ನೀ ಮೂಗು ತುಂಬಿದರೆ
ಉದರ ಶೂಲೆ ನೋಡ!

ಎಣಿಕೆ ತಪ್ಪಿದರೆ ಎಣಿಸಿ ಪಲವೇನು?
ಎಣಿಕೆ ಹಿತಕೆ ಮಿತಕೆ!
ತೂಕ ತಪ್ಪದಿಹ ಆತ್ಮ ಸಂಯಮನೆ
ನಾಂದಿಯಹುದು ಸುಖಕೆ

ಭಾ.ಭ. ಮಜಿಬೈಲು

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0—75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ನವಯುಗದ
ಹೊಸ ಚಂದಾ ದರ
ಸಪ್ಟಂಬರದಿಂದ ರೂ. 12

ಪತ್ರಿಕೆಗೆ ಬಳಸುವ ಕಾಗದದ ಬೆಲೆ, ಸಾಗಾಟದ ದರ ಏರಿಕೆಯಿಂದಾಗಿಯೂ ಮುದ್ರಣಾದಿಗಳ ವೆಚ್ಚದ ಹೆಚ್ಚಳದಿಂದಾಗಿಯೂ ನವಯುಗದ ವಾರ್ಷಿಕ ಚಂದಾ ದರವನ್ನು ರೂ. 10 ರಿಂದ ರೂ. 12ಕ್ಕೆ ಅನಿವಾರ್ಯವಾಗಿ ಏರಿಸಬೇಕಾಗಿ ಬಂದಿದೆ. ಈ ಹೊಸ ಚಂದಾ ದರವು ಹೊಸ ಸಂಪುಟದಿಂದ ಅಂದರೆ ಇದೇ ಸಪ್ಟಂಬರದಿಂದ ಅನ್ವಯವಾಗುವುದು. ಚಂದಾದಾರರು ದಯಮಾಡಿ ಗಮನಿಸಿ, ಅದರಂತೆ ಚಂದಾ ಕಳಿಸಿ ಸಹಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

—ಮೆನೇಜರ್

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Ex. C. 756/1971 O.S. 531/68.

P. ಬಾಬು ರಾವ್ & Co. —ಅರ್ಜಿದಾರರು.

N. M. ಬಾಲಕೃಷ್ಣ ಗೌಡ, N. ಮುದ್ದಪ್ಪನವರ ಮಗ, 'Green Field' ಸುಳ್ಯ ತಾಲ್ಲೂ, ಅವರಾಡು ಗ್ರಾಮ —ಎದ್ರಿ ಇವರಿಗೆ ಕೋರ್ಟ್ ಹುಕುಂ ಪ್ರಕಾರ ತಿಳಿಸುವುದೇನೆಂದ್ರೆ,

ಅರ್ಜಿದಾರನು ಮೂಡಿದ್ದ ಮೇಲ್ಕಂಡ ಆಸ್ತಿ ಜ್ಯಾರಿಯಲ್ಲಿ ನಿಮ್ಮ ಬಾಬ್ತು ಅವರಾಡು ಗ್ರಾಮದ ಸ್ಥಿರಾಸ್ತಿಗಳನ್ನು ಜಪ್ತಿಪಡಿಸಿರುವುದರಿಂದ ನೀವು ಸದ್ರಿ ಕೋರ್ಟಿನಿಂದ ಯಾವುದೇ ಹುಕುಂ ಕೊಡುವ ತನಕ ಸದ್ರಿ ಆಸ್ತಿಗಳನ್ನು ಯಾವುದೇ ರೀತಿಯಿಂದಲೂ ಪರಭಾರೆ ಮಾಡದಂತೆ ನಿರ್ಬಂಧಿಸಲ್ಪಟ್ಟಿರುತ್ತೀರೆಂತಲೂ, ಸದ್ರಿ ಆಸ್ತಿ ಜ್ಯಾರಿಯು ತಾ. 16—12—71ಕ್ಕೆ ಇಟ್ಟಿರುತ್ತದೆಂತಲೂ, ಸದರಿ ಈ ಮೂಲಕ ತಿಳಿಸೋಣವಾಗಿರುತ್ತದೆ.

(Sd) B. Ishwara Bhat
Advocate for Petitioners

ಪುತ್ತೂರು, ತಾ. 22—11—71

HOTEL SATKAR

Boarding, Lodging & Restaurant

Behind Corporation Office.

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Are Nearby.

Large airy Rooms; Roof garden

Quiet, Calm Atmosphere

Personalised Service.

ಹೊಣೆಗಾರರೇ ಹೊಣೆಗೇಡಿಗಳಾದರೆ?

ಪಾಕಿಸ್ತಾನವು ಸಮರೋತ್ಸಾಹದಿಂದ ತುಂಬಿತುಳುಕಾಡುತ್ತಿದೆ. ತನ್ನ ಮೂಗುಳಿಸಿಕೊಳ್ಳಲು ದಂಡಿನಾಳಿಕೆಯ ಅಧ್ಯಕ್ಷ ಯೂಹ್ಯಾಖಾನರು ಏನು ಮಾಡುವುದಕ್ಕೂ ಸಿದ್ಧರು.

ಭಾರತ—ಪಾಕಿಸ್ತಾನಗಳ ಗಡಿಯಲ್ಲಿ ಮೊತ್ತಮೊದಲಿಗೆ ಸೇನೆ ಜಮಾಯಿಸಿ ತೊಡಗಿದವರು ಅವರು.

ಭಾರತದ ಗೃಡಿಯತ್ತ ಷೆಲ್ ಧಾಳಿಯನ್ನು ಆರಂಭ ಮಾಡಿದವರು ಅವರು. ಭಾರತದ ಭೂಭಾಗದಲ್ಲಿ ಅಲ್ಲಲ್ಲಿ ಪಾದಾರ್ಪಣ ಮಾಡುವಂತೆ ಪ್ರೇರೇಪಣೆ ನೀಡಿದವರು ಅವರೇ. ಭಾರತದ ವಾಯು ಪ್ರದೇಶವನ್ನು ಹೊಕ್ಕು ಉದ್ರೇಕಗೊಳಿಸಲು ಪ್ರಯತ್ನಿಸಿದ್ದೂ ಅವರೇ.

ಯೂಹ್ಯಾಖಾನರಿಗೆ ಈಗ ಯುದ್ಧ ಬೇಕು; ಅದನ್ನು ಭಾರತವೇ ಆರಂಭಿಸಬೇಕೆಂಬುದವರ ಮನೀಷೆ.

ಆದರೆ, ಅವರ ಆಶಯ ಈಡೇರುವುದಿಲ್ಲವೆಂದೇ ಹೇಳಬೇಕು. ಭಾರತ ತಾನಾಗಿಯೇ ಯುದ್ಧ ಘೋಷಿಸುವ ಸಂಭವ ಬಹಳ ಕಡಿಮೆ.

ನಮ್ಮ ಸೇನೆಯೂ ಗಡಿಯಲ್ಲಿ ಸಜ್ಜಾಗಿ ನಿಂತಿದೆ. ಯೂಹಾಗ ಬೇಕಾದರೆ ಆಗ ಶತ್ರುವನ್ನು ಎದುರಿಸಲು ಸಿದ್ಧವಾಗಿದೆ.

ಬಂಗ್ಲಾ ದೇಶದಲ್ಲಿ ಯೂಹ್ಯಾಖಾನರು ತೀವ್ರ ಏಟು ತಿನ್ನ ತೊಡಗಿದ್ದಾರೆ. ಅಲ್ಲಿನ ಮುಕ್ತಿವಾಹಿನಿಯ ಕೈಯಿಂದ ಮೇಲಾಗತೊಡಗಿದಂತಿದೆ.

ವಾಕ್ ಸೇನೆಯು ಮೇಲಿದು ವಿಜಯ ಸಾಧಿಸುತ್ತ ಬರುತ್ತಿದೆ. ಅಮೆರಿಕೆಯು ಪಾಕಿಗೆ ನೀಡಿದ ಟ್ಯಾಂಕರುಗಳನ್ನು ಮುಕ್ತಿ ಸೇನೆ ಧ್ವಂಸಮಾಡುವಲ್ಲಿ ಸಶಕ್ತವಾಗಿದೆ. ಸೈನ್ಯವನ್ನು ಮುಕ್ತವಾಹಿನಿಯು ಹಿಮ್ಮೆಟ್ಟಿಸತೊಡಗಿದೆ.

ವೀರ ಬಂಗ್ಲಾಯೋಧರು 'ಪಂಜಾಬಿ'ಗಳ ಏಕಸತ್ತೆಯ ವಿರುದ್ಧ ಸೆಟೆದು ನಿಂತಿದ್ದಾರೆ. ಅವರ ಸ್ವಾತಂತ್ರ್ಯ ಪ್ರೇಮ ವರ್ಣನಾತೀತ

ಇದೇ ವೇಳೆಯಲ್ಲಿ ಭಾರತದ ವಾಯು ಪ್ರದೇಶವನ್ನು ನಾಲ್ಕು ವಾಕ್ ಸೇಬರ್ ಜೆಟ್ಟು ವಿಮಾನಗಳು ಬಿರಿ ಬಂದುವು. ಯೂಹ್ಯಾಖಾನರು ಇದನ್ನೇಕೆ ಕಳಿಸಿದರೋ!

ಪ್ರಾಯಃ ಪ್ರಜೋದನೆ ನೀಡಲೆಂದೇ ಇರಬಹುದು. ಕಾಲುಕೆದರಿ ಸಮರಕ್ಕಾಹ್ವಾನಿಸುವುದು ವಾಕ್ ರಾಜ್ಯ ತಂತ್ರದ ಮರ್ಮ.

ಅತಿಕ್ರಮಣಕಾರರನ್ನು ಹೊಡೆದಟ್ಟಲು ಭಾರತೀಯ ಭೂ— ವಾಯು ಸೇನೆಗಳು ಸದಾ ಸಜ್ಜು.

ಸೇಬರ ಜೆಟ್ ವಿಮಾನಗಳನ್ನು ನಮ್ಮ ನಾಟ್ ವಿಮಾನಗಳು ಹಿಂಬಾಲಿಸಿದುವು. ಬೆಸ್ಸುಟ್ಟಿದವು; ಹೊಡೆದುರುಳಿಸಿದವು—ಮೂರನ್ನು. ಒಂದು, ಅದೆಂತೋ ಜಾಣಾತ್ಷ ತನದಿಂದ ತಪ್ಪಿಸಿಕೊಂಡು ಹೋಯ್ತು.

ಆ ವಿಮಾನಗಳ ಪೈಲೆಟರು ಬಂಧಿಯಾದರು. ಭಾರತದ ನಾಟ್ ವಿಮಾನಗಳ ಸಾಮರ್ಥ್ಯ ಮತ್ತೊಮ್ಮೆ ಬೆಳಕಿಗೆ ಬಂತು. ಭಾರತೀಯ ವಾಯು ಪಡೆಯ ಕೆಚ್ಚು ಪುನಃ ಬಹಿರಂಗವಾಯ್ತು.

ಯೂಹ್ಯಾಖಾನರು ಮೂಗಿಗೆ ಬೆರಳೇನಿಸಿದರು. ಬಂಗ್ಲಾದಲ್ಲಿ ತನ್ನ ವೈತ್ಯ ಪಡೆ ವಿಜಯ ನಿಮುಖವಾಗುತ್ತಿರುವುದನ್ನು ಕಂಡು ಅವರು ದಿಗ್ಮೂಢರಾದರು.

ಅಮೇರಿಕೆಯು ಉದಾರವಾಗಿ ನೀಡಿದ ಸೇಬರ ಜೆಟ್ಟುಗಳ ಭಗ್ನ ಕಳೇವರಗಳನ್ನು ಕಂಡು ಅವರ ಎದೆ ಹೊಡೆದುಕೊಳ್ಳ ತೊಡಗಿತು.

ತನ್ನ ಸೇನೆಯಲ್ಲಿ ಸೋಲಿನಿಂದುಂಟಾದ ಉದಾಸೀನತೆಯನ್ನು ದೂರ ಮಾಡುವುದು ಸಾಧ್ಯವೆ?

ಅವರು ಭಾರೀ ಪ್ರಯತ್ನ ಮಾಡಿದರು. ಭಾರತದಿಂದ ಆಕ್ರಮಣ ಭೀತಿ ಮಿತಿಮೀರಿದೆಯೆಂದು ಎಲ್ಲರನ್ನೂ ಹೆದರಿಸಿದರು

ಈ ಹೆದರಿಕೆಯನ್ನು ಸುತ್ತಮುತ್ತ ಪ್ರಭಾವ ಶಾಲಿಯೂಗಿರಿಸಲು ದೇಶದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿದರು.

ಭಾರತದ ವಿರುದ್ಧ ನಿರ್ಣಾಯಕ ಯುದ್ಧದ ಭೀತಿ ತಲೆದೋರಿದೆಯೆಂದು ಗಾಳಿಯಲ್ಲಿ ಮೈಗುದ್ದಿಸಿಕೊಂಡರು.

ಭಾರತ ಯುದ್ಧ ಘೋಷಿಸದಿದ್ದುದಿಲ್ಲವೆಂಬ ಅದೆನ್ನು ಜಾರಿ ವ್ಯಪ್ತ ಪಡಿಸಿದರೂ ಅವರಿಗೆ ಧೈರ್ಯವಿಲ್ಲ. ಏಂದರೆ ಅವರೇ ಸಮರ ಘೋಷಣೆಗೆ ತಕ್ಕ ಪರಿಸ್ಥಿತಿ ನಿರ್ಮಿಸುತ್ತಿದ್ದಾರೆ.

ಜಗತ್ತಿನ ಹಿರಿಯ ರಾಷ್ಟ್ರಗಳು ತಮ್ಮ ಜವಾಬ್ದಾರಿಯರಿತುಕೊಳ್ಳಬೇಕು. ಬಂಗ್ಲಾದಿಂದ ಬಂದಿರುವ ಕೋಟಿ ಸಂಖ್ಯೆಯ ನಿರಾಶ್ರಿತರು ತಮ್ಮ ದೇಶಕ್ಕೆ ಮರಳಿ ಹೋಗುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಈ ಹೊಣೆಗಾರಿಕೆಯನ್ನು ಪ್ರಮುಖ ರಾಷ್ಟ್ರಗಳು ನಿರ್ವಹಿಸಲು ತಪ್ಪಿದರೆ, ಆಗ ಭಾರತವೇ ಏಕ ಪಕ್ಷೀಯವಾಗಿ ಕ್ರಮ ಕೈಗೊಳ್ಳಬೇಕಾಬಹುದು.

ವಾಕಿಸ್ತಾನದ ಮಿತ್ರರು ಯೂಹ್ಯಾಖಾನರಿಗೆ ಬುದ್ಧಿ ಹೇಳಬೇಕು. ವಸ್ತುಸ್ಥಿತಿಗೆ ಮಣ್ಣೆರಚುವ ವ್ಯರ್ಥ ಸಾಹಸದಿಂದ ದೂರ ವುಳಿಯಬೇಕು.

ಬಂಗ್ಲಾ ನಿರಾಶ್ರಿತರ ಸಮಸ್ಯೆಗೆ ಭಾರತ—ಪಾಕಿಸ್ತಾನದ ವಿವಾದದ ಸ್ವರೂಪ ನೀಡುವ ಪ್ರಯತ್ನ ಒಂದೆಡೆ ನಡೆಯುತ್ತಿದೆ.

ಕೆಂಪು ಚೀನಾವು ಭಾರತದ ಹಸ್ತಕ್ಷೇಪವೆಂದು, ನಿರಾಶ್ರಿತರ ಸಮಸ್ಯೆಯನ್ನು ಭಾರತನೇ ಸೃಷ್ಟಿಸಿದೆಯೆಂದು ಹೇಳತೊಡಗಿದೆ.

ಹೊಣೆಗಾರ ದೇಶಗಳು ಹೊಣೆಗೇಡಿಗಳಾದರೇನು ಮಾಡ ಬೇಕು?

ಸತ್ಯದ ಮೇಲೆ ಮಣ್ಣೆರಚುವ ಅವುಗಳ ವಾಗಾಸವನ್ನು ಕೊಂಡಾಡಲೇ ಬೇಕು.

ವಿಶ್ವ ಸಂಸ್ಥೆಯೂ ವಾಕಿಸ್ತಾನದ ಕಿವಿ ಹಿಂಡುವುದನ್ನು ಬಿಟ್ಟು ಭಾರತವನ್ನೇಗಳು ಹಿಂದೆ ನರಿಯಲಿ ಎಂದು ಹೇಳ ತೊಡಗಿದರೆ ಹೇಗೆ?

ಆಂತರಾಷ್ಟ್ರೀಯ ಪ್ರಶ್ನೆಯನ್ನು ಎಡು ಸೇಶಗಳ ಪ್ರಶ್ನೆಯೆಂದು ಹೇಳುವುದು ಸತ್ಯಕ್ಕೆ ಅಪಚಾರ.

ಇಲ್ಲಿ ವಾಕಿಸ್ತಾನವು ಗಡಿಯಿಂದ ಮೊದಲು ಸೇನೆ ವಾಪಾಸು ತೆಗೆಯ ಬೇಕು. ಬಂಗ್ಲಾದಲ್ಲಿ ನಡೆಸಿದ ಉಪಚುನಾವಣೆಗಳನ್ನು ರದ್ದು ಮಾಡಬೇಕು. ಅವಾಮಿಲೀಗಿನ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು

ಇದಕ್ಕೆ ಯೂಹ್ಯಾಖಾನರು ಸಿದ್ಧರಿಲ್ಲ. ಅಂದರೆ. ಬಂಗ್ಲಾ ಪ್ರಶ್ನೆಗೆ ಶಾಂತಿಯುತ ರಾಜ್ಯಕೀಯ ಪರಿಹಾರದ ಬಾಗಿಲನ್ನು ಯೂಹ್ಯಾಖಾನರು ಮುಚ್ಚಿಸ್ಸಾರೆ

ಅದನ್ನು ತೆರೆಸುವಂತೆ ಮಾಡುವಲ್ಲಿ ವಾಕ್ ಮಿತ್ರರು ಅಶಕ್ತರಾಗಿದ್ದಾರೆ ಎಧವಾ ಅನಾಸಕ್ತರಾಗಿದ್ದಾರೆ.

ಯೂಹ್ಯಾಖಾನರು ಭಾರತನೊಂದಿಗೆ ಸಮರವನ್ನೇ ಬಯಸುವುದಾದರೆ ಮತ್ತೇನು ಮಾಡಲಾದೀತು?

ಒಂದು ಕೋಟಿಗೂ ಮಿರಿದ ನಿರಾಶ್ರಿತರ ಘೋಷಣೆಯನ್ನು ಮಾನವೀಯ ದೃಷ್ಟಿಯಿಂದ ಭಾರತ ವಾಡುತ್ತಿದೆ.

ಇದರಿಂದ ನಮ್ಮ ಆರ್ಥಿಕ ಪರಿಸ್ಥಿತಿ ಹದಗೆಡ ತೊಡಗಿದೆಯೆಂಬುದು ನಿರ್ವಿವಾದ. ಈ ಪರಿಸ್ಥಿತಿಯನ್ನೂ ಮಂದುವರಿಯುತ್ತ ಹೋದರೆ, ನಾವೆಲ್ಲರೂ ತಲೆಕೆಳಗಾಗ ಬೇಕಾದೀತು.

ಆದುದರಿಂದ ತಾಳ್ಮೆಯಿಕೆಗೂ ಒಂದು ಮಿತಿಬರ ಬೇಕು; ಬರುತ್ತದೆ. ಭಾರತ—ವಾಕಿಸ್ತಾನಗಳ ನಡುವೆ ನಿರ್ಣಾಯಕ ಸಮರ ನಡೆದೇ ತೀರ ಬೇಕೆಂದಿದ್ದರೆ, ಹಾಗೆ ಆಗಿಯೇ ತೀರುತ್ತದೆ.

ಇದಕ್ಕೆ ಉತ್ತರಿಸ ಬೇಕಾದವರು ಯೂಹ್ಯಾಖಾನರೇ. ತನ್ನ ಮೂಗುಳಿಸಿ ಹೋಗಿ ತನ್ನೊಡನೆ ವಾಕ್ ಪ್ರಜೆಗಳನ್ನೂ ಅವರು ನರಕಕ್ಕೊಯ್ಯುತ್ತಿರುವರೆ.

ಯುದ್ಧ ಯಾರಿಗೂ ಶ್ರೇಯಸ್ಕರವಲ್ಲ. ಆದರೆ, ಯೂಹ್ಯಾಖಾನರು ಯುದ್ಧದಲ್ಲಿಯೇ ತನ್ನ ಹಾಗೂ ವಾಕಿಸ್ತಾನದ ಘೋರ ಕಟ್ಟಲು ದೃಢ ಸಂಕಲ್ಪರೇ ಆಗುಳಿವರೆ, ಭಾರತೀಯರೆಲ್ಲರೂ ಬಳೆ ತೊಟ್ಟುಕೊಂಡವರಲ್ಲ.

ಕೆಡೆಗೆ ತೊಟ್ಟವರೂ ಸಮಯ ಬಂದಾಗ ಖಡುಗ ಹಿಡಿವ ಧೀರ—ಧೀರೆಯರೆ ಭಾರತವಿಮು ತಾನೆ?

ಜೈವು ಲೈನು ಯೋಜನೆಗೆ ಪ್ರತಿಭಟನೆ

ಸ್ಯಾನಸಲ್ ಮಿನರಲ್ ಡೆವಲಪ್‌ಮೆಂಟ್ ಕಾರ್ಪೊರೇಶನ್‌ನವರು ಕುದುರೆಮುಖದಲ್ಲಿ ಉತ್ಪಾದನೆಯೂಗುವ ಕಬ್ಬಿಣದ ಅದುರನ್ನು ಹೊರ ದೇಶಗಳಿಗೆ ರಫ್ತು ಮಾಡಲು ಸಮುದ್ರದ ಪತ್ತು ಸ್ಥಳ ಮೂರಬೆಲ್ಲಿ ಸಿಲ್ಲುವ ದೊಡ್ಡ ಹಡಗುಗಳಿಗೆ ಪೈಪ್ ಮುಖಾಂತರ ಸಾಗಿಸಲಿಕ್ಕಾಗಿ ಜನಸ್ಸಾನಿದಿ ವಸತಿಯೂಗಿರುವ ಬೈಕಂಪಾಡಿ, ಕುಳಾಯಿ ಮತ್ತು ಸಣಂಬೂರುಗಳಲ್ಲಿ ಕೈಗೊಂಡಿರುವ ಕಾರ್ಯಕ್ರಮ ಅಲ್ಲಿನ ಸುಮಾರು 12 ಸಾವಿರ ಮೀನುಗಾರರನ್ನು ನಿರ್ಗತಿಕರೆನ್ನಾಗಿ ಮಾಡುವುದರಿಂದ ಈ ಯೋಜನೆಯನ್ನು ಪ್ರತಿಭಟಿಸುವ ಬೃಹತ್ ಸಭೆಯೊಂದು ಮಂಗಳೂರಿಂದ 7 ಮೈಲು ದೂರದ ಕುಳಾಯಿಯಲ್ಲಿ ಕಳೆದ ತಾ 21 ರಂದು ಜರಗಿತು ಶ್ರೀ ಎಂ. ಮಧ್ವರಾಜ್‌ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀ ಮಾನಸ್ಯ ಕರ್ಕೇರರು ಸ್ವಾಗತಿಸಿದರು

ದ ಕ ಆ. ಕಾಂಗ್ರೆಸ್ ಅಧ್ಯಕ್ಷ ಶ್ರೀ ಶಂಕರ ಅಳ್ವರು ಸೂಚಾಡಿ. ಇಂಥ ಮೊದ್ದ ಕೆಲಸಗಳನ್ನು ಮಾಡುವಾಗ ಬಡವರಿಗೆ, ಪುಡಿಯುನರಿಗೆ ಅನ್ಯಾಯವಾಗದಂತೆ ನೋಡುಕೊಳ್ಳಬೇಕೆಂದು ತಿಳಿಸಿ ಇದರ ಪರಿಹಾರಕ್ಕಾಗಿ ತಾನು ಎಂಥ ಪ್ರಯತ್ನಕ್ಕೂ ಸಿದ್ಧನಾಗಿರುವುದಾಗಿ ಭರವಸೆ ಇತ್ತರು. ಬಳಿಕ ನಿರ್ಜರ್ತ ವಿಧಾನ ಸಭಾ ಸದಸ್ಯರಾದ ಶ್ರೀ ಪಿ. ವಿ. ನಾತಾಳರೊ, ಶ್ರೀ ಎಸ್. ಕೆ. ಅಮೀನರೂ ಈ ಬಗ್ಗೆ ಸೂಚಾಡಿದರು.

ಜಿಲ್ಲಾ ಆ. ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಬಿ. ಸುಬ್ಬಯ್ಯ ಶೆಟ್ಟರು ಸೂಚಾಡುತ್ತಾ ಇದು ಮೂನವತೆಯ ಪ್ರಶ್ನೆ. ಅಭಿವೃದ್ಧಿಯ ಹೆಸರಲ್ಲಿ ಬಡವರನ್ನು ಕಣ್ಣೀರಿಳಿಸುವುದು ಕರವಲ್ಲ. ಇದಕ್ಕೆ ಪರಿಹಾರವಾಗಿ ಪೈಪು ಲೈನನ್ನು ಬೇರೆ ಕಡೆಗೆ ಸಾಗಿಸುವ ಸಾಧ್ಯತೆಯನ್ನು ಪರಿಶೀಲಿಸಬೇಕೆಂದರು ಮಂಗಳೂರು ನಗರಸಭಾ ಸದಸ್ಯ ಶ್ರೀ ರಘುನಾಥ ಕೋಟ್ಯಂಕರರು ಈ ಯೋಜನೆಯನ್ನು ಪ್ರತಿಭಟಿಸುವೆ ಬೇಕೆಂದು ತಿಳಿಸಿದರು. ಎತ್ತೊಕೇಟ್ ಶ್ರೀ ಪಿ ಶ್ರೀನಿವಾಸರಾವ್‌ರವರು ಈ ಸಂಕಲ್ಪ ನಿವಾರಣಾ ಪ್ರಯತ್ನವಲ್ಲಿ ಎಲ್ಲರ ಸಹಕಾರ ಬೇರೆಯುವುದೆಂದು ತಿಳಿಸಿದರು

ಶ್ರೀ ಮಧ್ವರಾಜರು ಅಧ್ಯಕ್ಷೀಯ ಭಾಷಣ ಮಾಡುತ್ತಾ ಈಗ ಪಾರ್ಲಿಮೆಂಟು ನಡೆಯುತ್ತಿರುವುದರಿಂದ ಪೆಪಲಿಗೆ ನಿಯೋಗವೊಂದು ತೆರಳಿ ಸಂಬಂಧಿಸಿದ ಸಚಿವರೊಂದಿಗೆ ಚರ್ಚಿಸಿ ತಕ್ಕ ಪರಿಹಾರ ಪಡೆಯಲು ಪ್ರಯತ್ನಿಸ ಬೇಕೆಂದೂ ಪ್ರಯಾಣ ವೆಚ್ಚವನ್ನು ತಾನು ವಹಿಸುವುದಾಗಿಯೂ ಹೇಳಿದರು. ಮೀನುಗಾರರಲ್ಲಿ ಉಂಟಾದ ಜಾಗೃತಿಯ ಬಗ್ಗೆ ಅವರು ತೃಪ್ತಿ ಸೂಚಿಸಿದರು.

ನಿರ್ಣಯ ಸ್ವೀಕಾರದ ಸಭೆಯು ಶ್ರೀ ಎಂ. ದಾಸ್ ಟಿ. ಕೆರ್ಕೇರರ ಧನ್ಯವಾದಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

Kindly

Contribute generously

to the

NAVAYUGA

GOLDEN JUBILEE FUND 1971

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟರುಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಕೃಷಿಗೆ ನೆರವು-ವಿಚಾರಗೋಷ್ಠಿ

ಇದೇ ಕಳೆದ ತಾ. 23ರಂದು ಸಿಂಡಿಕೇಟ್ ಬ್ಯಾಂಕಿನ ಆಶ್ರಯದಲ್ಲಿ ಮೇಸಾಲವ ವ್ಯಾಪಿಲಿ ವ್ಯೆನಲ್ಲಿ ಜರಗಿದ "ಕಮರ್ಶಿಯಲ್ ಬ್ಯಾಂಕುಗಳು ಕೃಷಿ ಆರ್ಥಿಕ ನೆರವಿನಾಗಿ ಸಹಕಾರೀ ಸಂಸ್ಥೆಗಳಿಗೆ ನೀಡುವ ಆರ್ಥಿಕ ನೆರವು" ಎನ್ನುವ ವಿಚಾರಗೋಷ್ಠಿಯ ಉದ್ಘಾಟನೆಯನ್ನು ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಶ್ರೀ ಕೆ. ಕೆ. ಪೈಯವರ ಅಧ್ಯಕ್ಷತೆಯಲ್ಲಿ ರಿಸರ್ವ್ ಬ್ಯಾಂಕಿನ ಡಿ ಗವರ್ನರ್ ಡಾ। ಆರ್. ಕೆ. ಹಜಾರಿಯವರು ನೆರವೇರಿಸಿದರು. ಆರಂಭದಲ್ಲಿ ಸಿಂಡಿಕೇಟ್ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಎಚ್. ಎನ್. ಪೈಗಳು ಸ್ವಾಗತಿಸಿದರು.

ಡಾ। ಆರ್. ಕೆ. ಹಜಾರಿಯವರು ಉದ್ಘಾಟಿಸುತ್ತಾ, ಕೃಷಿಗೆ ನೆರವು ನೀಡುವಲ್ಲಿ ಸಹಕಾರೀ ಸಂಸ್ಥೆಗಳ ಪಾತ್ರ ಮುಖ್ಯವೆಂದು ತಿಳಿಸಿ ಈ ಸಂಸ್ಥೆಗಳ ಮೂಲಕ ನೆರವು ಪಡೆಯ ಬೇಕಾದರೆ ಕೃಷಿಕರು ಆ ಸಂಸ್ಥೆಯ ಸದಸ್ಯರಾಗಿರಬೇಕು. ಕಳೆದ ಎರಡು ವರ್ಷಗಳಲ್ಲಿ ರೇವಣಾತಿ ಸಾಲ ನೀಡಿಕೆ ಬ್ಯಾಂಕಿಂಗಿನ ನೈಜಹಾರಗಳ ವಿಶೇಷ ಪ್ರಗತಿಯೆಂಟಾಗಿದೆ ಎಂದು ನುಡಿದು ಕಮರ್ಶಿಯಲ್ ಬ್ಯಾಂಕುಗಳು ರೇವಣಿ ಹೆಚ್ಚಿಸಿಕೊಳ್ಳುವಲ್ಲಿ ಸಾಧಿಸಿವ ಪ್ರಗತಿಗೆ ಮೆಚ್ಚುಗೆ ಸೂಚಿಸಿ ಕೃಷಿಕರಿಗೆ ಸಹಕಾರೀ ಸಂಸ್ಥೆಗಳ ಮೂಲಕ ನೆರವು ನೀಡುವ ಈ ಯೋಜನೆಯನ್ನು ಸ್ವಾಗತಿಸಿದರು

ಡಾ। ಟಿ. ಎಂ. ಎ. ಪೈಗಳು ಈ ಸಂದರ್ಭದಲ್ಲಿ ಮೂತಾಡುತ್ತಾ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಸಹಕಾರೀ ಸಂಸ್ಥೆಗಳು ಒಳ್ಳೆಯ ರೀತಿಯಲ್ಲಿ ಕಾರ್ಯನೆಸಗುತಿದ್ದು ಬ್ಯಾಂಕುಗಳು ರೇವಣಾತಿದಾರರ ರಕ್ಷಣೆ ಮಾಡಬೇಕೆಂದು ತಿಳಿಸಿ ಕೃಷಿಗೆ ಪ್ರಾಧಾನ್ಯತೆ ನೀಡುವಲ್ಲಿ ಎಲ್ಲರೂ ಪ್ರಯತ್ನಿಸಬೇಕೆಂದು ಕೋರಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಕೆ. ಪೈಗಳವರು ಮೂತಾಡುತ್ತಾ, 44 ವರುಷಗಳಿಂದ ಪ್ರಥಮತ ಸಿಂಡಿಕೇಟ್ ಬ್ಯಾಂಕ್ ಕೃಷಿಗೆ ನೆರವು ನೀಡುತ್ತ ಬಂದಿರುವುದನ್ನು ಉಲ್ಲೇಖಿಸಿದರು. ಶ್ರೀ ಟಿ ಎ. ಪೈಗಳ ನೇತೃತ್ವದಲ್ಲಿ ಜಿಲ್ಲೆಯಲ್ಲಿ ವಿಸ್ತಾರಗೊಂಡ ಸಹಕಾರಿ ಚಳುವಳಿ ಇಂದು ಜಿಲ್ಲೆಯಲ್ಲಿ ಅತ್ಯುತ್ತಮ ಕಾರ್ಯನೆಸಗುತ್ತಿದೆಯೆಂದು ಅವರು ತಿಳಿಸಿ, ತಮ್ಮ ಬ್ಯಾಂಕಿನ ಕಾರ್ಯ ಚಟುವಟಿಕೆಗಳು ರಿಸರ್ವ್ ಬ್ಯಾಂಕಿನಿಂದ ಶ್ಲಾಘಿಸಲ್ಪಟ್ಟದ್ದಕ್ಕೆ ಮೆಚ್ಚುಗೆಯನ್ನು ಸ್ಮಕ್ತಪಡಿಸಿದರು.

ಅಂತ್ಯದಲ್ಲಿ ಸಿಂಡಿಕೇಟ್ ಎಗ್ಸಿಕ್ಯೂಟರ್ ಫೌಂಢೇಶನಿನ ಕಾರ್ಯದರ್ಶಿ ಶ್ರೀ ಕೆ. ವಿ. ಬೆಳೆರಾಯರು ಧನ್ಯವಾದಗಳನ್ನರ್ಪಿಸಿದರು.

ವಿಚಾರ ಗೋಷ್ಠಿಯಲ್ಲಿ ಭಾಗವಹಿಸಲು ಸುಮಾರು 13 ಬ್ಯಾಂಕುಗಳ ಪ್ರತಿನಿಧಿಗಳು, ಅಲ್ಲದೆ ಸಹಕಾರೀ ಇಲಾಖೆಯ ಅಧಿಕಾರಿಗಳೂ, ಕಾರ್ಯಕರ್ತರೂ, ಮೈಸೂರು ಸರಕಾರದ ಹಲವು ಅಧಿಕಾರಿಗಳೂ ಆಗಮಿಸಿದ್ದರು.

ಉಡುಪಿಯಲ್ಲಿ ಕೊಲ್ಲೂರು ಮಲ್ಲಪ್ಪ

ಉಡುಪಿ ಅಡಳಿತ ಕಾಂಗ್ರೆಸ್ ಕಾರ್ಯಕರ್ತರ ಸಭೆಯೊಂದು ತಾ 27ರಂದು ದ. ಕ. ಜಿಲ್ಲಾ ಆ. ಕಾಂಗ್ರೆಸಿನ ಅಧ್ಯಕ್ಷ ಶ್ರೀ ಎ ಶಂಕರ ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಉಡುಪಿ ಬ್ಲಾಕ್ ಆ.ಕಾಂಗ್ರೆಸ್‌ನ ಸಂಚಾಲಕ ಶ್ರೀ ಬಿ. ಯೋಗೀಶ್ವರ ಹೊಳ್ಳರು ಸ್ವಾಗತಿಸಿದ ಬಳಿಕ ಕಾರ್ಯದರ್ಶಿ ಶ್ರೀ ಪ್ರಭಾಕರ ಹೆಗ್ಡೆಯವರು ಕಾಂಗ್ರೆಸ್ಸಿನ ಚಟುವಟಿಕೆಗಳನ್ನು ವಿವರಿಸಿದರು.

ಆ ಕಾಂಗ್ರೆಸ್ ಸ್ಥಾಪನೆಯ ಹಾಗೂ ಕೇಂದ್ರ ಚುನಾವಣಾ ಸಮಿತಿಯ ಸದಸ್ಯ ಶ್ರೀ ಕೊಲ್ಲೂರು ಮಲ್ಲಪ್ಪನವರು ಕಾರ್ಯಕರ್ತರನ್ನುದ್ದೇಶಿಸಿ ಮೂತಾಡುತ್ತಾ, ನಮ್ಮ ಪಕ್ಷಕ್ಕೆ ಹೊಸತಾಗಿ ಬರುವವರ ಕುರಿತು ಸಂಶಯ ಸಲ್ಲದು, ಮುಂದೆ ಅವರು ನಮ್ಮ ಪಕ್ಷ ಸೇರಿದ ಬಳಿಕ ಅವರು ನಮ್ಮ ಕಾರ್ಯಕ್ರಮಗಳಲ್ಲಿ ತೋರುವಆಸಕ್ತಿ ಹಾಗೂ ಮುಂದೆ ಅವರ ಚರಿತ್ರೆಯನ್ನು ಜಾಗ್ರತೆಯಿಂದ ನಾವು ನೋಡಬೇಕು ಎಂದರು. ಜನಹಿತಕ್ಕಾಗಿ ಕೆಲಸಮಾಡುವಂತಹ ಕಾರ್ಯಕರ್ತರಿಗೆ ಪ್ರಥಮ ಕಾಶ್ಯತೆಯನ್ನೀಯಲಾಗುವುದೆಂದು ಅವರು ತಿಳಿಸಿದರು. ತೋಸಲೆಯನ್ನು ನಿಲ್ಲಿಸಲು ಕಾರ್ಯಕರ್ತರು ಮುಂದಾಗ ಬೇಕೆಂದ ಶ್ರೀ ಮಲ್ಲಪ್ಪನವರು ಇಂದಿರಾಗಾಂಧಿಯವರು ಬಡತನ ನಿರ್ಮೂಲನದ ಕಾರ್ಯ ಯೋಜನೆಗಳ ಮೇಲೆ ಜನ ವಿಶ್ವಾಸವಿಟ್ಟುದುದರಿಂದ ಶ್ರೀ ಸಾಮಾನ್ಯರು ನಮ್ಮ ಪಕ್ಷಕ್ಕೆ ಬೆಂಬಲವಿತ್ತಿದ್ದಾರೆ. ಆವರೇ ನಮ್ಮ ಪಕ್ಷದ ಜೀವಾಳ ಎಂದರು ಅಲ್ಪ ಸಂಖ್ಯಾಕರ ಕುರಿತು ಅವರು ಪ್ರಸ್ತಾಪಿಸಿ, ಕೊನೆಯದಾಗಿ ಅರ್ಹತೆ, ಯೋಗ್ಯತೆಯ ಮೇಲೆ ಟಿಕೇಟು ಕೊಡುವ ನಿರ್ಧಾರ ಕೈಗೊಳ್ಳುವುದಾಗಿ ನುಡಿದರು.

ಮೈಸೂರು ಅಡಳಿತ ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಸೂರ್ಯನಾರಾಯಣ ರಾಯರು ಮೂತನಾಡಿ ಸಂಸ್ಥೆಯನ್ನು ಸಂಘಟನಾತ್ಮಕ ರೀತಿಯಲ್ಲಿ ಮುಂದುನರಿಸಿದರೆ ಮಾತ್ರ ನಾಯಕತ್ವ ಬೆಳೆಯಬಹುದೆಂದು ತಿಳಿಸಿ ಕಾರ್ಯಕರ್ತರೇ ಪಕ್ಷದ ಜೀವಾಳ ಎಂದರು.

ಶ್ರೀ ಪಿ. ರಂಗನಾಥ ಶೆಣೈ, ಎಂ.ಪಿ ಯವರು ಧನ್ಯವಾದ ಸಮರ್ಪಿಸಿದರು.

ಉಡುಪಿಯಲ್ಲಿ ಎನ್.ಸಿ.ಸಿ. ಕವಾಯತು

23ನೇ ರಾಷ್ಟ್ರೀಯ ಎನ್. ಸಿ. ಸಿ. ದಿನಾಚರಣೆಯು ತಾ. 28ರಂದು ಉಡುಪಿಯ ಅಜ್ಜರಕಾಡು ಗಾಂಧಿ ಮೈದಾನದಲ್ಲಿ ವಿಜೃಂಭಣೆಯಿಂದ ನೆರವೇರಿತು ಎನ್.ಸಿ.ಸಿ. ಸೈನ್ಯ ಹಾಗೂ ನಾವಿಕ ದಳದವರು ಇದರಲ್ಲಿ ಭಾಗವಹಿಸಿದ್ದರು ಲೆಫ್ಟಿನೆಂಟ್ ಎಂ ಕೆ. ಕುಮಾರಾಜಯನರ ಮುಖಂಡತ್ವದಲ್ಲಿ ಸುಮಾರು 330ಮಂದಿ ಎನ್.ಸಿ.ಸಿ.ಯವರು ಇವರಲ್ಲಿ ಭಾಗವಹಿಸಿದ್ದರು.

ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಪ್ರಿನ್ಸಿಪಾಲ್ ಡಾ। ಪಿ ಗುರುರಾಜ ಭಟರ್ದು ಮುಖ್ಯ ಅತಿಥಿಗಳಾಗಿದ್ದು ಕವಾಯತನ್ನು ವೀಕ್ಷಿಸಿ ಗೌರವ ರಕ್ಷೆಯನ್ನು ಸ್ವೀಕರಿಸಿ ಎನ್.ಸಿ.ಸಿ ಯ ಮಹತ್ವದ ಕುರಿತು ಮೂತನಾಡಿದರು.

ವಿಜಯಾ ಬ್ಯಾಂಕಿನ ವಿಶೇಷ ಮಹಾಸಭೆ

ತಾ.29.11.71ರಂದು ವಿಜಯಾ ಬ್ಯಾಂಕಿನ ವಿಶೇಷ ಮಹಾಸಭೆಯೊಂದು ಮಂಗಳೂರಿನ ಮೋತಿಮಹಲಿನಲ್ಲಿ ಅಧ್ಯಕ್ಷ ಶ್ರೀ ಎಂ. ಸುಂದರರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಬಾಲ್ಡಿಯಲ್ಲಿದ್ದ ಮೆಮೊರಂಡಮ್ ಮತ್ತು ಆರ್ಟಿಕಲ್ಸ್ ಆಫ್ ಎಸೋಸಿಯೇಷನ್‌ನ ಬದಲಿಗೆ ಪರಿಷ್ಕೃತ ಆರ್ಟಿಕಲ್ಸ್ ಆಫ್ ಎಸೋಸಿಯೇಶನ್ ಸರ್ವಾನುಮತದಿಂದ ಮಂಜೂರಾಯ್ತು. ಅಲ್ಲದೆ ಬೆಯರ್‌ಸೇನರ ಚಾಲ್ತಿ ಪ್ರಯೂಣ ಭತ್ತೆಯು ಕೂಡಾ ಎಜಂಡದಲ್ಲಿದ್ದಂತೆ ಸರ್ವಾನುಮತದಿಂದ ಮಂಜೂರಾಯ್ತು.

ಮಂಗಳೂರಲ್ಲಿ "ಗಣೇಶ ಪ್ರಾಸಾದ" ಉದ್ಘಾಟನೆ

ಮಂಗಳೂರಿನ ಕೆ.ಎಸ್.ಆರ್. ರೋಡಿನಲ್ಲಿ ಶ್ರೀ ಶರವು ರಾಮಕೃಷ್ಣ ಶಾಸ್ತ್ರಿಯವರು ನೂತನವಾಗಿ ಕಟ್ಟಿಸಿದ 'ಗಣೇಶ್ ಪ್ರಾಸಾದ್' ಲಾಡ್ಜಿಂಗ್ ಹೌಸ್‌ನ್ನು ತಾ. 26 ರಂದು ಮದ್ರಾಸಿನ ವುಡ್‌ಲ್ಯಾಂಡ್ ಗ್ರೂಪ್ ಆಫ್ ಹೊಟೇಲ್ಸ್‌ನ ಸ್ಥಾಪಕ ಶ್ರೀ ಕೆ. ಕೃಷ್ಣರಾಯರು ಉದ್ಘಾಟಿಸಿದರು. ಸಮಾರಂಭವ ಡಾ। ಟಿ.ಎಂ ಎ. ಪೈಯವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು.

ಆರಂಭದಲ್ಲಿ ಎಡ್ವರ್ಟೈಸರ್ ಶ್ರೀ ಕೆ. ಬಾಲಕೃಷ್ಣರಾವ್‌ರವರು ಸ್ವಾಗತಿಸಿ ಆತಿಥಿಗಳ ಪರಿಚಯ ಮಾಡಿಸಿದರು.

ಶ್ರೀ ಕೆ. ಕೃಷ್ಣರಾವ್‌ರವರು ಉದ್ಘಾಟಿಸಿ ಈ ಗಣೇಶ ಪ್ರಾಸಾದದಲ್ಲಿ ಪ್ರವಾಸಿಗರಿಗೆ ಉತ್ತಮ ಸೌಕರ್ಯ ದೊರಕಿ ಇದರ ಕೀರ್ತಿ ಹಬ್ಬುವಂತಾಗಲೆಂದು ಹಾರೈಸಿದರು.

ಡಾ। ಟಿ ಎಂ ಎ ಪೈಗಳು ಭಾಷಣಮಾಡುತ್ತಾ, ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಿರುವ ಮಂಗಳೂರಿಗೆ ಇಂತಹ ಸೌಕರ್ಯಗಳು ಆಸಕ್ಯ ಎಂದು ತಿಳಿಸಿ ಶ್ರೀ ಶಾಸ್ತ್ರಿಯವರು ಪ್ರಾರಂಭಿಸಿದ ಈ ಹೊಸ ಉದ್ಯಮ ಪ್ರಗತಿ ಪಥದಲ್ಲಿ ಮುನ್ನಡೆಯ ಸಾರ್ಥಕವಾಗಲೆಂದು ಹಾರೈಸಿದರು.

ಈ ಸುಸಜ್ಜಿತ ಕಟ್ಟಡದ ನಿರ್ಮಾಣದಲ್ಲಿ ಶ್ರಮಿಸಿದವರಿಗೆ ಅಧ್ಯಕ್ಷರಿಂದ ಪಾರಿತೋಷಕಗಳನ್ನು ಕೊಡಿಸಿ ಗೌರವಿಸಲಾಯಿತು ಸನಮರಂಭಕ್ಕೆ ವಿಜಯೂ ಬೇಂಕಿನ ಚೆಯರ್‌ಮೇನ್ ಶ್ರೀ ಎಂ. ಸುಂದರರಾಮ ಶೆಟ್ಟರು ಮುಖ್ಯ ಆತಿಥಿಯಾಗಿ ಆಗಮಿಸಿದ್ದರು.

ಆಂತ್ಯದಲ್ಲಿ ಡಾ। ಗಣೇಶ್ ಶಾಸ್ತ್ರಿಯವರು ಧನ್ಯವಾದಗಳನ್ನು ಅರ್ಪಿಸಿದರು.

●●

ದೇಶದ ಆಸ್ತಿ- ಆನಂದ ಭವನ

ಅಲಹಾಬಾದಿನಲ್ಲಿರುವ "ಆನಂದ ಭವನ" ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಂಕೇತ. ಇದನ್ನು ದಿವಂಗತ ಪ್ರಧಾನ ಮಂತ್ರಿ ಜವಹರಲಾಲ್ ನೆಹರೂ ಅವರ ಜನ್ಮವರ್ಧಂತಿಯ ದಿನ ಅಂದರೆ ಇದೇ ನವೆಂಬರ್ 14ರಂದು ಸಾರ್ವಜನಿಕರಿಗಾಗಿ ತೆರೆಯಲಾಯಿತು ಆನಂದ ಭವನದ ಮುಂಭಾಗದಲ್ಲಿರುವ ಉದ್ಯಾನದಲ್ಲಿ ಮುದ್ದಿನ ಮಕ್ಕಳು ನೆರೆದು 82 ಗುಲಾಬಿ ಗಿಡಗಳನ್ನು ನೆಟ್ಟುಆನಂದ ಭವನವನ್ನು ಪ್ರವೇಶಿಸಿದರು. ಮಕ್ಕಳಿಗಾಗಿ ಜವಹರಲಾಲರು ಬರೆದಿರುವ "ನುಗಳಿಗೆ ತಂದೆ ಬರೆದ ಓಲೆಗಳು" ಪುಸ್ತಕದ ಆಧಾರದಮೇಲೆ ವಸ್ತುಪ್ರದರ್ಶನವನ್ನು ಏರ್ಪಡಿಸಲಾಯಿತು.

ಪ್ರಧಾನಮಂತ್ರಿ ಶ್ರೀಮತಿ ಇಂದಿರಾ ಗಾಂಧಿ ಹೇಳಿರುವಂತೆ ಆನಂದಭವನ ಕೇವಲ ಒಂದು ಭವ್ಯ ಕಟ್ಟಡವಲ್ಲ, ಇದು ನೆಹರೂ ಅವರ ಮನೆತನ ರಾಷ್ಟ್ರ ಸ್ವಾತಂತ್ರ್ಯಕ್ಕಾಗಿ ಸಲ್ಲಿಸಿರುವ ಸೇವೆಯ ಪ್ರತೀಕವಾಗಿದೆ. ನೆಹರೂ ಮನೆ-ನದವರು ಅನುಭವಿಸಿದ ಕಾರಾಗೃಹವಾಸ, ಪೋಲೀಸ್ ಇಲಾಖೆ ನಡೆಸಿದ ತನಿಕೆಗಳು ಹಾಗೂ ಬ್ರಿಟಿಷ್ ಸರ್ಕಾರದ ಅಕ್ರಮವಾಗಿ ಮುಟ್ಟುಗೋಲು ಹಾಕಿಕೊಂಡು ವಸ್ತುಗಳ ನೆನಪನ್ನು ಆನಂದ ಭವನ ತರುತ್ತದೆ.

ಶ್ರೀಮತಿ ಇಂದಿರಾಗಾಂಧಿಯವರು ರಾಷ್ಟ್ರದ ಜನತೆಗೆ ಈ ಭವನವನ್ನು ಉದಾರವಾಗಿ ದಾನಮಾಡಿದ್ದಾರೆ ಇಂತಹದೇ ಭವ್ಯ ಭವನವಾದ "ಸ್ವರಾಜ್ಯ ಭವನ"ವನ್ನು ಶ್ರೀಮತಿಗಾಂಧಿಯವರ ತಾತಂದಿರಾದ ಶ್ರೀ ಮೋತಿಲಾಲ ನೆಹರೂ ನೀಡಿದ್ದರು. ಈ ಭವನದ ಉಸ್ತುವಾರಿ ನೋಡಿಕೊಳ್ಳುವ ಶ್ರೀ ಜವಹರಲಾಲ್ ನೆಹರೂ ಸ್ಮಾರಕನಿಧಿ ಸಂಸ್ಥೆಯವರು ಅಲ್ಲಿರುವ ಸ್ಮಾರಕಗಳನ್ನು ರಕ್ಷಿಸುವುದಷ್ಟೇ ಅಲ್ಲದೆ ನೆಹರೂ ಅವರು ಬಳಸುತ್ತಿದ್ದ ವಸ್ತುಗಳನ್ನು ಸಂಗ್ರಹಿಸಲು ಕ್ರಮಕೈಗೊಂಡಿದ್ದಾರೆ

●●

ಭರತ ಭೂಮಿ

ಭವ್ಯ ದಿವ್ಯ ಭರತಖಂಡ
ನಮ್ಮ ನಾಡಿದು
ಶಾಂತಿ ಸೌಖ್ಯ ಬೀರಿ ನಿಂತ
ಹೊನ್ನ ಬೀಡಿದು.

ಗಂಗೆ ತುಂಗೆ ನದಿಗಳಲ್ಲಿ
ಮಿಂದ ನಾಡಿದು
ಪುಣ್ಯ ಜಲಧಿ ಬೆಳಗಿ ನಿಂತ
ಧರ್ಮ ಭೂಮಿದು

ಗಾಂಧಿ ನೆಹರು ಜನಿಸಿದಂತ
ಪೂಜ್ಯ ನಾಡಿದು
ಭೇದ ಭಾವ ತೊರೆದು ನಿಂತ
ಭವ್ಯ ಬೀಡಿದು

ಕಲಿಗಳೆಲ್ಲ ಹುಟ್ಟಿ ಬೆಳೆದ
ವೀರ ಭೂಮಿದು
ಕವಿಗಳೆಲ್ಲ ಹಾಡಿ ಒಲಿದ
ಕಾವ್ಯ ಬೀಡಿದು

ಸರ್ವ ಧರ್ಮ ಒಂದೆ ಎನುವ
ಭರತ ಭೂಮಿದು
ಸಮತೆಯಿಂದ ಬಾಳ್ವ ಜನರ
ಐಕ್ಯ ಗೂಡಿದು

ಲೇಖಕರು:- ಶ್ರೀ ಎಸ್.ಡಿ. ಶೆಟ್ಟಿ, ಮೂಲೂರು.

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿಶೇಷ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ

ನವಯುಗದ ನವೀಕರಣಕ್ಕಾಗಿ
ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ನೀಡಿರಿ!

READ & ADVERTISE IN NAVAYUGA WEEKLY

ಪಾಕ್ ಪತ್ರಿಕೆಗಳ ಪ್ರಚಾರ ವೈಖರಿ

ನಿರಂತರ ಭಾರತ ದೂಷಣೆ

ಪಾಕಿಸ್ತಾನದ ಪತ್ರಿಕೆಗಳಿಗೆ ದಿನಬೆಳಗಾದರೆ ಭಾರತವನ್ನು ಹಳಿಯುವುದೇ ಕೆಲಸ. ಭಾರತವನ್ನು "ದಮನ" ಮಾಡಿ ಎಂದು ಕೂಗುವುದೇ ಕಾಯಕ. ಇದನ್ನು ಬಿಟ್ಟರೆ ಬೇರೆ ಬಂಡವಾಳವಿಲ್ಲ. ಪತ್ರಿಕೆಗಳು ಈ ಅಪಪ್ರಚಾರದಿಂದ ಪ್ರಜೆಗಳ ಮನಸ್ಸನ್ನು ಕಲಕಿ ಅವರನ್ನು ಬೇಡದ ಯುದ್ಧಕ್ಕೆ ಪ್ರೇರೇಪಿಸುತ್ತಿವೆ. ಪ್ರಸ್ತುತ ಲೇಖನಮಾಲೆಯಲ್ಲಿ ಈ ಪತ್ರಿಕೆಗಳ ಪ್ರಚಾರ ವೈಖರಿಯ ಸಾರವನ್ನು ಸಂಗ್ರಹಿಸಿಕೊಡಲಾಗಿದೆ:-

'ನಮ್ಮ ನೆರೆಯ ರಾಷ್ಟ್ರವಾದ ಭಾರತ 1965ರ ಸಮರದಿಂದ ಪಾಠಕಲಿತಂತೆ ತೋರುವುದಿಲ್ಲ. ಭಾರತದೊಂದಿಗೆ ನೇರವಾಗಿ ಸಶಸ್ತ್ರ ಸಮರವನ್ನು ಆರಂಭಿಸುವುದೇ ಲೇಸು. ತನ್ನ ಹಿತಾಸಕ್ತಿ ಕಾಪಾಡಿಕೊಳ್ಳುವುದಕ್ಕಾದರೂ ಪಾಕಿಸ್ತಾನ ಈ ಯುದ್ಧವನ್ನು ಆರಂಭಿಸಬೇಕು"ಎಂದು ಜಮಾತ್-ಇ ಇಸ್ಲಾಮಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಮೌಲಾನಾ ಮಫ್ತಿ ಮಹಮ್ಮದ್ ಇತ್ತೀಚೆಗೆ ಲಾಹೋರಿನಲ್ಲಿ ಹೇಳಿದರು.

(ಪಾಕಿಸ್ತಾನ ಟೈಮ್ಸ್--30|8)

o o o

'ಭಾರತ ಪಾಕಿಸ್ತಾನದ ಯಾವುದೇ ಭಾಗವನ್ನು ಆಕ್ರಮಿಸಲು ಯತ್ನಿಸಿದರೆ ಆಗ ಪಾಕಿಸ್ತಾನ ಪೂರ್ಣಪ್ರಮಾಣದ ಸಮರವನ್ನು ಆರಂಭಿಸಲು ಹಿಂಜರಿಯದು ಹಾಗೇನಾದರೂ ಆದರೆ ಅದೇ ಅಂತಿಮಯುದ್ಧ" ಎಂದು ಅಧ್ಯಕ್ಷ ಯಹ್ಯಾಖಾನರು ಈಚೆಗೆ ಫ್ರೆಂಚ್ ಪತ್ರಿಕೆ "ಲಿ- ಫೆಗಾರೊ"ಕ್ಕೆ ನೀಡಿರುವ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

("ಜಂಗ್" ಕರಾಚಿ 3|9)

o o o

"ನಮ್ಮ ಸೇನೆ ಈಗ ಯುದ್ಧಕ್ಕೆ ಸಿದ್ಧ. ನಮಗೆ ಮುನ್ಸೂಚನೆಯ ಅಗತ್ಯವಿಲ್ಲ" ಎಂದು ದಂಡಿನಾಳ್ವಿಕೆ ಉಪಅಧಿಕಾರಿ ಬ್ರಿಗೇಡಿಯರ್ ಮಹಮ್ಮದ್ ಯುಸುಫ್ ಇತ್ತೀಚೆಗೆ, ಮುಲ್ತಾನಿನ ಸಭೆಯಲ್ಲಿ ಮೂತ ನಾಡುತ್ತ ಹೇಳಿದರು.

('ಜಂಗ್'--ಕರಾಚಿ 10|9)

o o o

"ಭಾರತದ ಆಕ್ರಮಣ ಯತ್ನವನ್ನು ಎದುರಿಸಲು ಪಾಕಿಸ್ತಾನ ಸಿದ್ಧವಿದೆ. ಪಾಕಿಸ್ತಾನದ ಒಂದು ತುಂಡು ಭೂಮಿಯನ್ನಾದರೂ ಭಾರತವು ಆಕ್ರಮಿಸಿದಲ್ಲಿ ಅದನ್ನು ಸೋಲಿಸಲಾಗುವುದಲ್ಲದೇ ಎಂದೆಂದೂ ತಲೆ ಎತ್ತದಂತೆ ದಮನಮಾಡಲಾಗುವುದೆ"ಂದು ಲೆ:ಜ: ರಜ್ಜಾನೆಗುರ್ ಇತ್ತೀಚೆಗೆ ಸುಕ್ಕುರಿನಲ್ಲಿ ಭಾಷಣಮಾಡುತ್ತ ಎಚ್ಚರಿಕೆ ನೀಡಿದರು.

(ಜಂಗ್--ಕರಾಚಿ 19|9)

"ಮುಂಬರುವ ಭಾರತ-ಪಾಕಿಸ್ತಾನ ಸಮರ ಎರಡೂ ದೇಶಗಳ ಮಟ್ಟಿಗೆ ಅಂತಿಮ ಯುದ್ಧವೇ ಸರಿ. ಈ ಬಾರಿ ಧಾರ್ಮಿಕ ತಳಹದಿಯ ಮೇಲೆ ಹೋರಾಟ ನಡೆಯುವುದು".

(ಡಾನ್--ಕರಾಚಿ 19|9)

o o o

"ಭಾರತ ಮಿಲಿಟರಿ ದೃಷ್ಟಿಯಿಂದ ಬಲಿಷ್ಠನಿದ್ದರೂ ಆ ಪಾಕಿಸ್ತಾನವನ್ನು ಸೋಲಿ

'ಗಾಂಧಿಜಿಯ ಕೊಲೆ'

(ಎರಡನೇ ಪುಟದಿಂದ)

29-5-'43.ದಿಗಂಬರ ರಾಮಚಂದ್ರಬಾಜ್ಪೈ ಮೊಕದ್ದಮೆಯಲ್ಲಿ ಈ ಕಾಗದದ ಕ್ರಮ ಸಂಖ್ಯೆ P|87. ಇದರಿಂದ ಬಾಜ್ಪೈ—ಶ್ರೀ ಸಾವರ್ಕರರೊಳಗಿನ ಸಂಬಂಧ ಎಷ್ಟು ದೀರ್ಘ ಕಾಲದ್ದು ಎನ್ನುವುದು ತಿಳಿದು ಬರುತ್ತದೆ.

ವಿಚಾರಣೆಯ ಕಾಲದಲ್ಲಿ ತಮ್ಮನ್ನು ಸಲು ವನ್ನು ಸಮರ್ಥಿಸಿಕೊಳ್ಳಲು ಶ್ರೀ ಸಾವರ್ಕರರು, ಬಾ ತೀರಿಕೊಂಡಾಗ, ಗಾಂಧಿಜಿಗೆ ಎಪ್ಪತ್ತೈದು ವರ್ಷಗಳು ತುಂಬಿವಾಗ,

---

ಸಲಾರದು ನಾವು ಒಗ್ಗಟ್ಟನ್ನಿಂದಿದ್ದರೆ ಭಾರತವನ್ನು ಇನ್ನೊಂದುಬಾರಿಯೂ ಖಂಡಿತವಾಗಿ ಸೋಲಿಸಬಹುದು' ಎಂದು ನಿವೃತ್ತ ಲೆ:ಜ: ಬಕ್ತಿಯಾರ ರಾಣಾ, ಸಭೆಯೊಂದರಲ್ಲಿ ಘೋಷಿಸಿದರು.

(ಇಮ್ರೋಜ್ ಲಾಹೋರ 24|9)

o o o

"ಭಾರತದ ಆಕ್ರಮಣವನ್ನು ಎದುರಿಸಲು ಪಾಕಿಸ್ತಾನ ಜನತಾಪಾರ್ಟಿ ಎಲ್ಲಾ ವಿಧದ ನೆರವು ನೀಡುವುದು."

(ಪಾಕಿಸ್ತಾನ ಟೈಮ್ಸ್ 24|9)

o o o

"ಭಾರತದ ವಿರುದ್ಧ 'ಜೇಹಾದ್' ಆರಂಭಿಸಲು ಜನತೆಯನ್ನು ಸೆಜ್ಜುಗೊಳಿಸಬೇಕೆ"ಂದು ಸಿಂಧ್ ಪ್ರಾಂತದ ಜಮಾತ್-ಇ-ಇಸ್ಲಾಮಿ ಪಕ್ಷದ ಅಮೀರ್ ಪಾಕಿಸ್ತಾನ್ ಸರ್ಕಾರಕ್ಕೆ ಕರೆಯುತ್ತಿದ್ದಾರೆ.

o o o

'ಪೂರ್ವ ಪಾಕಿಸ್ತಾನದ ಗಡಿಯಲ್ಲಿನ ಆಕ್ರಮಣದ ಕೃತ್ಯಗಳು ಯುದ್ಧದ ವಾತಾವರಣವನ್ನು ನಿರ್ಮಿಸಿವೆ. ಈ ವಾತಾವರಣವನ್ನು ನಿಯಂತ್ರಿಸಲು ಯತ್ನಿಸದಿದ್ದರೆ ವಿಶ್ವ ಸಮರಕ್ಕೆ ನಾಂದಿಯೂಗಬಹುದು' ಎಂದು ವಿಶ್ವ ಸಂಸ್ಥೆಯಲ್ಲಿ ಪಾಕಿಸ್ತಾನ ನಿಯೋಗದ ಮುಖಂಡ ಮೊಹಮ್ಮದ್ ಅಲಿ ಅವರು ನುಡಿದರು.

(ಪಾಕಿಸ್ತಾನ ಟೈಮ್ಸ್ ಲಾಹೋರ್ 7|10)

●●

ಶ್ರೀ ಮಹಮ್ಮದಾಲಿ ಜಿನ್ನಾ ಅವರ ಪ್ರಾಣಾಪಹಾರಕ್ಕೆ ಪ್ರಯತ್ನ ನಡೆದಾಗ ಕೊಟ್ಟ ಪತ್ರಿಕಾ ಹೇಳಿಕೆಗಳನ್ನು ದಾಖಲಾತಿಯೊಗಿ ಸ್ವೀಕರಿಸಲು ಪ್ರಾರ್ಥಿಸಿ ಕೊಂಡರು. ಅವರು ಆ ರೀತಿಯ ಹೇಳಿಕೆಗಳನ್ನು ಕೊಟ್ಟಲ್ಲವೆಂದು ಯಾರೂ ಹೇಳುವುದಿಲ್ಲ. ಆದರೆ ಮುಖ್ಯವಾದ ಪ್ರಶ್ನೆ—ಜನವರಿ 20ರಂದು ಪ್ರಾರ್ಥನಾ ಸಭೆಯಲ್ಲಿ ನಡೆದ ಘಟನೆಯನ್ನು ಏಕೆ ಖಂಡಿಸಲಿಲ್ಲ? ಖಂಡಿಸಿದ್ದರೆ ಅನುಯಾಯಿಗಳು ತಿರುಗಿಬೀಳಬಹುದೆಂಬ ಭಯನೇ? ಹೊರಗೊಂದು, ಒಳಗೊಂದು ಎಂದು ಜನ ಆಡಿಕೊಳ್ಳಬಹುದೆಂಬ ಅಂಜಿಕೆಯೇ?

30—1—48ರ ರಾತ್ರಿಯೇ ಗಾಂಧಿಜಿಯ ಹಂತಕ ಯಾರೆಂಬುದು ಜಗತ್ತಿಗೆ ತಿಳಿದು ಹೋಯಿತು. ಆ ಹಂತಕ ತನಗೆ ತೀರ ಆಪ್ತನಾದ ಗೋಡ್ಸೆಯೆಂಬುದು ಶ್ರೀ ಸಾವರ್ಕರರ ಗಮನಕ್ಕೆ ಖಂಡಿತ ಬಂದಿರಬೇಕು. ತಮ್ಮ ಅಸಮ್ಮತಿ, ಅಸಮಾಧಾನಗಳನ್ನು ಶ್ರೀ ಸಾವರ್ಕರರು ಏಕೆ ಹೇಳಿಕೆಯ ಮೂಲಕ ಪ್ರಕಟಿಸಲಿಲ್ಲ. ಬಳಿಕ ಕಾಲವೊನೆದಿಂದಿರಲು ಕಾರಣವೇನು? ಕೃಪ್ತಿಕರವಾದ ಉತ್ತರ ಅವರಿಂದ ಬಂದಿಲ್ಲ

ಗಾಂಧಿಜಿಯ ಕೊಲೆಯ ಸುದ್ದಿ ಕೇಳಿ ಜನ ರೊಚ್ಚಿಗೆದ್ದರು. ಕೊಡರುಗಾಲನ್ನು ತೊಡೆದು ಹಾಕಿದ ಧೀರನೆಂದು ಗೋಡ್ಸೆಯನ್ನು ಜನ ಬಾಚಿ ತಬ್ಬಿಕೊಳ್ಳಲಿಲ್ಲ. ಅಧಿಕಾರದಲ್ಲಿ ಕುಳಿತಿದ್ದ ಜನಕ್ಕೆ ಗಾಂಧಿಜಿ ಬೇಡವಾಗಿದ್ದರು. ಆದರೆ ಜನಕ್ಕೆ ಇನ್ನೂ ಆಸ್ತರಾಗಿಯೇ ಉಳಿದಿದ್ದರು. ತಮ್ಮ ಅಭಿಪ್ರಾಯವನ್ನು, ಜನತೆಯ ಅಭಿಪ್ರಾಯವೆಂದು ತಿಳಿದ ನಾಯಕವರ್ಗ ಒಮ್ಮಿಂದೊಮ್ಮೆಗೆ ಹರಿದ ಹೊನಲಿನಲ್ಲಿ ಕೊಚ್ಚಿ ಹೋಯಿತು. ಜನತೆಯ ಪ್ರತಿಕ್ರಿಯೆ, ನಿರೀಕ್ಷಿಸಿದ ಪ್ರತಿಕ್ರಿಯೆ ಆಗಲಿಲ್ಲ. ಆದ್ದರಿಂದ ಸಾವರ್ಕರ್ ಇಬ್ಬಂದಿಯಲ್ಲಿ ಸಿಕ್ಕಿ ಬಿದಿರಬೇಕು. ಶಿಷ್ಯರನ್ನು ಖಂಡಿಸುವಂತೆಯೂ ಇಲ್ಲ; ಖಂಡಿಸದಿದ್ದರೆ ವಿಧಿಯಿಲ್ಲ. ಬಹಳ ತಡವಾಗಿ ಅವರ ಹೇಳಿಕೆ ಬರಲು ಇದು ಕಾರಣವಾಗಿರಬೇಕು.

ಒಬ್ಬ ಆರೋಪಿಯ ಪರ-ಶಂಕರ ಕಿಷ್ಟಯ್ಯ-ಹೇಳುವ ಹೆಸರಿನ ಲಾಯರುಗಳು ಇರಲಿಲ್ಲ ಕಿಷ್ಟಯ್ಯ, ತಮ್ಮ ಜೊತೆಯಲ್ಲಿದ್ದ ತಮ್ಮ ವಿರುದ್ಧ ತಿರುಗಿ ಬಿದ್ದ ಬಂಡೆಯ ಸೇನಕ. ಆದ್ದರಿಂದ ಉಳಿದ ಆರೋಪಿಗಳು ಆತನನ್ನು ಉಳಿಸಿಕೊಳ್ಳಲು ಹೆಚ್ಚಿನ ಆಸಕ್ತಿ ತೋರಿಸಲಿಲ್ಲ. ಇದು ಎದ್ದು ಕಾಣುವ ವಿಚಾರ. ಉಳಿಕೆ ಆರೋಪಿಯರ ಪರ ದಿಗ್ದಂತಿಗಳ ಸಾಲೇ ಎದ್ದು ನಿಂತು ವಾದಿಸಿತು. ನಿರಾಶ್ರಿತನಾಗಿ ಬಂದ ಮದನಲಾಲನ ಪರ ಹಾಜರಾದ ವಕೀಲರು ಬಿಟ್ಟಿದುಡಿದರೇ?ತಿಂಗಳುಗಟ್ಟಲೆ ದುಡಿದ ಅವರಿಗೆ ಕಾಫಿಯ ವೆಚ್ಚವನ್ನು ಕೊಡಲೂ ಮದನ ಲಾಲನಲ್ಲಿ ಕಾಸಿರಲಿಲ್ಲ. ಆವನ ಬಗ್ಗೆ ಅನುಕಂಪ ತೋರಿಸಲು ಯಾವ ಕಾರಣವೂ ಇರಲಿಲ್ಲ.

ಗೋಡ್ಸೆ ಬಂಧುಗಳು ಶ್ರೀಮಂತರಲ್ಲ. ಗೋಪಾಲ ಗೋಡ್ಸೆ ಕಿರ್ಕಿಯಲ್ಲಿ ತಿಂಗಳಿಗೆ 200-00ರೂ ವಿನ ಸಂಬಳಧಲ್ಲಿ ಸಂಸಾರ ನಡೆಸುತಿದ್ದ. ಆವನಿಗೂ ಲಾಯರಿಗೆ ಫೀಜು ಕೊಡುವ ಆನುಕೂಲತೆಯಿರಲಿಲ್ಲ ಆರೋಪಿಗಳ ಪರ ವಕೀಲರನ್ನಿಡುವ ವ್ಯವಸ್ಥೆಯನ್ನು ಯಾರು ಮಾಡಿದರು? ಆ ಹಣ ಎಲ್ಲಿಂದ ಬಂತು? ಹಾಜರಾದ ವಕೀಲರಲ್ಲಿ ಕೆಲವರು ಹಿಂದೂ ಮಹಾ ಸಭೆಯ, ಆಧ್ಯಕ್ಷರು ಪದಾಧಿಕಾರಿಗಳು ಆರೋಪಿಗಳ ರಕ್ಷಣೆಯನ್ನು ತನ್ನ ಹೆಗಲ ಮೇಲೆ ಹಿಂದೂ ಮಹಾಸಭೆ ಹೊತ್ತು ಕೊಂಡಂತೆ ಕಾಣುತ್ತದೆ. ಇದು ದುರೂಹ್ಯವಾದ ಶಂಕೆಯಲ್ಲ

(ಅಧಾರಿತ)

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

Miscellaneous Case No. 61|1971.

ನಾರಾಯಣ ಉಪಾಧ್ಯಾಯ --ಅರ್ಜಿದಾರ.
ಚಿನ್ನಗೌಡ --ಎದ್ರಿ.

ಪುತ್ತೂರು ತಾಲ್ಲು ಕುಟ್ರುಪ್ಪಾಡಿ ಗ್ರಾಮದ ಮರದ ಬೈಲು ಎಂಬಲ್ಲಿರುವ ಅಣ್ಣು ಗೌಡರ ಮಗ ಚಿನ್ನ ಗೌಡರಿಗೆ—

ಅರ್ಜಿದಾರರು ಪುತ್ತೂರು ರೇಂಜ್ ಟ್ರಬ್ಯೂನಲ್‌ನ Resumption Petition 153|71ರ ಹುಕುಂ ಪ್ರಕಾರ ಆಸ್ತಿ ವಿಭಾಗ ಮಾಡಿಕೊಡಬೇಕೆಂತಲೂ ಸ್ವಾಧೀನತೆ ಬಗ್ಗೆ ಸರ್ಟಿಫಿಕೇಟು ಕೊಡ್ಸಿ ಕೊಡಬೇಕೆಂತಲೂ ಮೇಲ್ಕಾಣಿಸಿದ ಕೋರ್ಟಿನಲ್ಲಿ ದಾಖ್ಲು ಮಾಡಿದ ಮೇಲ್ಕಾಣಿಸಿದ ಅರ್ಜಿಯು ತಾ. 15—12—1971 ಕ್ಕೆ ನಿಮ್ಮ ಹಾಜರಾತಿಯ ಬಗ್ಗೆ ಇರುತ್ತದೆ. ನೀವು ತಾ. 15—12—1971ನೇ ದಿವ್ಸ ಬೆಳಗ್ಗೆ 11 ಗಂಟೆಗೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ಸ್ವತಹ ಯಾ ವಕೀಲರ ಮುಖಾಂತ್ರ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಕೋರ್ಟಿನವರಿಗೆ ಯುಕ್ತ ಕಂಡಂತೆ ಮುಂದುವರಿಸಲಾದೀತು.

(By Order of Court)
Pulu Narayana Bhat.
ಅರ್ಜಿದಾರರ ಕಡೆ ಎಡ್ವಕೇಟ್.

ಪುತ್ತೂರು, ದ.ಕ.22-11-1971.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD
High Class Boarding, Lodging & Restaurant
COONDAPUR, S. K.

ನವಯುಗ

ಹೊನ್ನ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ
ಹೊನ್ನ ಹಬ್ಬದ ವಿಶೇಷ ಸಂಚಿಕೆಗೆ
ಜಾಹೀರಾತು ಕೊಟ್ಟು ಸಹಕರಿಸಿರಿ.

NAVAYUGA 2–12–1971

Registered with the Registrar
of News Papers for India
under No R N 3546/'57

REGD. No B. G. 176
LICENCE No 33
Licensed to Post without Prepayment

ಪ್ರೊ। ಜಾನ್‌ರ ರಾಜೀನಾಮೆ ಪ್ರಸಂಗ

ಶಿಕ್ಷಣದಲ್ಲಿ ರಾಜಕೀಯದ ಕೈವಾಡ

ಗಂಡಸಿಗೇಕೆ ಗೌರಿ ದುಃಖ ಎಂಬ ಗಾದೆಯಿದೆ ಇದಕ್ಕೆ ಉದಾಹರಣೆ ಭಾರತದ ಅಧಿಕಾರಲಾಲಸೀ ರಾಜಕಾರಣಿಗಳೆಂಬುದು ನಗ್ನ ಸತ್ಯ ಈ ಧೂರ್ತ ರಾಜಕಾರಣಿಗಳ ದಮನ ಎಂದಾಗುತ್ತದೋ ಅಂದಿಗೆ ಭಾರತ ಚೇತರಿಸಿಕೊಳ್ಳುತ್ತದೆ ಶಿಕ್ಷಣ ಎಂದಿಗೂ ಶಿಕ್ಷಣವೇ ಹೊರತು ಅದನ್ನು ರಾಜಕೀಯವನ್ನಾಗಿ ಮಾಡಲು ಸಾಧ್ಯನಿಲ್ಲ ಹಿಂದಿನ ಕಾಶಿ, ನಲಂದ, ತಕ್ಷಶಿಲೆ ಮುಂತಾದ ವಿದ್ಯಾನಿಲಯಗಳಿಗೂ ರಾಜಕೀಯದ ಹೇತಿಗೂ ಬಂಧವಿರಲಿಲ್ಲ

ಪ್ರೊ। ವಿ. ವಿ. ಜಾನ್ ಅವರು ಭಾರತದ ಅತ್ಯಂತ ಗೌರವಾನ್ವಿತರಾದ ಶಿಕ್ಷಣತಜ್ಞರು ತಮ್ಮ ಜೀವನವನ್ನಿಡೀ ಶಿಕ್ಷಣಕ್ಕಾಗಿ ಬಳುವಳಿಯಾಗಿರಿಸಿದ, ಜೋಧ್‌ಪುರ ವಿಶ್ವವಿದ್ಯಾನಿಲಯದ ಉನ್ನತಕ್ಕಾಗಿ ಅಹೋರಾತ್ರಿ ದುಡಿದ ಶಿಕ್ಷಣ ತಪಸ್ವಿ ಇವರಿಗೆ ರಾಜಕಾರಣಿಗಳು ಕೊಟ್ಟ ಪ್ರತಿಫಲವೆಂದರೆ ಹೇಸೀ ಕೃತ್ಯದ ತುತ್ತ ತುದಿಯಲ್ಲಿ ಆ ನೆಲದಿಂದ ಅವರನ್ನು ಬಹಿಷ್ಕರಿಸಿದುದು ಅವರು ಮಾಡಿದ್ದ ಮಹಾಪರಾಧವೆಂದರೆ ಶಿಕ್ಷಣವನ್ನು ರಾಜಕೀಯವನ್ನಾಗಿ ಮಾಡದೆ, ಶುದ್ಧ ಶಿಕ್ಷಣವಾಗಿ ಮಾಡಲು ಯತ್ನಿಸಿದುದು ಇದು ಈ ಗೊಡ್ಡು ಪುಡಾರಿಗಳ ಆಕಾಂಕ್ಷೆಗೆ, ಕನಸಿಗೆ, ಸ್ವಚ್ಛಂದ ಜೀವನಕ್ಕೆ ಭವ್ಯ ಬದುಕಿಗೆ ಆತಂಕ ತಂದಿತಂತೆ!

ಜೋಧ್‌ಪುರ ವಿಶ್ವವಿದ್ಯಾನಿಲಯದ ಉಪಕುಲಪತಿ ಜಾನ್ ಶಿಕ್ಷಣ ತಪಸ್ವಿ, ರಾಜಕಾರಣಿಗಳ ಸ್ವಾರ್ಥಸಾಧನೆಗೆ ಅವರ ಸ್ಥೈರ್ಯ, ಸಮಾನತೆಗಳು ಬಲಿಯಾದುವು ಇವರ ವಿರುದ್ಧ ವಿದ್ಯಾರ್ಥಿಗಳನ್ನು ಎತ್ತಿ ಕಟ್ಟಿದರು ಒಂದು ಶಾಲೆಯಲ್ಲಿ ರಾಜ್ಯದ ಮುಖ್ಯ ಸಚಿವರ ಸನ್ಮಾನಾರ್ಥ ಏರ್ಪಡಿಸಿದ ಸಮಾರಂಭವೊಂದಕ್ಕೆ ಭಾಗವಹಿಸಲು ವಿ ವಿ ಜಾನ್ ಹೋಗಿದ್ದಾಗ ಇಂಗು ತಿಂದ ಮಂಗಗಳಾದ ವಿದ್ಯಾರ್ಥಿಗಳು ಅವರನ್ನು ಘೇರಾವ್ ಮಾಡಿದರು ಈ ಪ್ರಕರಣದ ತರುವಾಯ ಪ್ರೊ। ಜಾನ್ ಅವರು ಉಪಕುಲಪತಿ ಪದವಿಗೆ ರಾಜೀನಾಮೆ ಬರೆದು ಕೊಟ್ಟಿದ್ದಾರೆ.

ಈ ಪ್ರಕರಣ ಇಷ್ಟೇ ಇಲ್ಲ, ತೆರೆಯ ಮರೆಯ ಕೋಡಂಗಿ ಕುಣಿತಕ್ಕೆ ಮೈದಂಗ ಬಾರಿಸಲು ಯಾರೂ ಹೋಗಿಲ್ಲ ಕಾಮನ್ ವೆಲ್ತ್ ಉಪಕುಲಪತಿಗಳ ಸಮ್ಮೇಳನ ಸ್ಥಾನಾದಲ್ಲಿ ಸಮೂವೇಶಗೊಂಡಾಗ ಅದರಲ್ಲಿ ಪಾಲ್ಗೊಳ್ಳುವುದಕ್ಕೆ ವಿ ವಿ ಜಾನ್ ಹೊರಟಿದ್ದರು ಆಗ ಅವರ ವಿರುದ್ಧ ಎಂಜಿನಿಯರಿಂಗ್ ಕಾಲೇಜ್‌ನ ವಿದ್ಯಾರ್ಥಿಗಳು ಕರಿಯ ಬಾವುಟ ಪ್ರದರ್ಶಿಸಿದರಲ್ಲದೆ ಆ ಮಹಾಶಯರ ಗೃಹದ ಮೇಲೂ ಹಲ್ಲೆ ನಡೆಸಿ, ಹಿಂದಿನ ಒಂದೂವರೆ ವರುಷದಿಂದ ಅವರು ತಮ್ಮ ಡಾಕ್ಟರೇಟ್‌ಗಾಗಿ ದುಡಿಯುತ್ತಿದ್ದ ಸಂಶೋಧನಾತ್ಮಕ ಪ್ರಬಂಧವೊಂದನ್ನು ಸುಟ್ಟು ಹಾಕಿದರು ಭವ್ಯ ಭಾರತದ ಈ ಭಾವೀ ಶಿಕ್ಷಣ ತಜ್ಞರು ಗುರುವಿನ ಮೇಲೂ ಕೈ ಮಾಡುವುದಕ್ಕೆ ಕೊಟ್ಟ ಕಾರಣವೆಂದರೆ ಪ್ರೊವೆಸರರು ಎಂಜಿನಿಯರಿಂಗ್ ಕಾಲೇಜಿನ Time Table (ವೇಳಾಪಟ್ಟಿ)ಯನ್ನು ಬದಲಿಸಿದ್ದರೆಂಬುದು ಮಾತ್ರ

ಆದರೆ ಇದರ ಹಿನ್ನೆಲೆಯಲ್ಲಿ ಹೊಲಸು ರಾಜಕೀಯದ ಕರಾಳ ಕೈವಾಡ ಇತ್ತು ಶಿಕ್ಷಣದ ಮೇಲೂ ರಾಜಕೀಯಸ್ತರು ಆಕ್ರಮಿಸಿ, ಹೇಸೀ ರಾಜಕೀಯದ ಬಡಿದಾಟದ ದನ ಗಳಿಕಗಾಗಿ, ಅವರ ಅಸಹ್ಯ ರಾಜಕೀಯ ರಾಕ್ಷಸೀ ವಾಂಛೆಯನ್ನು ಮುಂದೆ ತರುವುದಕ್ಕಾಗಿ ಅದನ್ನು ಉಪಯೋಗಿಸಿಕೊಂಡು ನಮ್ಮ ಜನಾಂಗಕ್ಕೆ ಅಕ್ಷಮ್ಯ ಅಪರಾಧದ ಅಪವಾದ ಮೂಡಿದ್ದಾರೆ ಈ ಭ್ರಷ್ಟ ರಾಜಕಾರಣಿಗಳು ಶಿಕ್ಷಣ ವ್ಯವಸ್ಥೆಯೊಂದಿಗೆ ಯುವ ಜನಾಂಗಕ್ಕೆ ಹಾನಿ ತರುವಂದ ಪ್ರೊ|| ಜಾನ್ ಅವರ ಉಚ್ಚಾಟನೆಯ ತುಚ್ಛ ಕಾರ್ಯಕ್ಕೆ ಕೈ ಹಾಕಿದುದು ಭಾರತದ ಸಂಭಾವಿತ ಜನರಿಗೊಂದು ಸವಾಲಾಗಿದೆ

ಪ್ರೊ। ಜಾನ್ ಅವರನ್ನು ಘೇರಾಯಿಸಿದುದು ಕೇವಲ ನೂರೈವತ್ತು ಮಂದಿ ವಿದ್ಯಾರ್ಥಿಗಳೇ ಆದರೂ ಅವರು ಈ ಘೇರಾವಿನ ಕಾರಣದಿಂದ ಪದವಿಯನ್ನು ತ್ಯಜಿಸಿಲ್ಲ 1) ಇಂತಹ ಲಜ್ಜಾಸ್ಪದ ವಿಚಾರ ರಾಜ್ಯದ ಮುಖ್ಯ ಮಂತ್ರಿಗಳ ನೇತೃತ್ವದಲ್ಲಿ ನಡೆಯಿತು. 2) ಈ ಹೇಸೀ ಕೃತ್ಯವನ್ನು ಕಣ್ಣಾರೆ ಕಂಡೂ ಮುಖ್ಯ ಮಂತ್ರಿಗಳು ಮೌನವಾಗಿದ್ದರು. 3) ನಿಮಿಷದಲ್ಲಿ ಉದ್ರಿಕ್ತ ವಿದ್ಯಾರ್ಥಿಗಳನ್ನು ಚದುರಿಸಲು ಸಾಕಷ್ಟು ರಿಸರ್ವ್ ಪೋಲೀಸ್‌ದಳ, ಅಶ್ರುವಾಯು ಇಲ್ಲಿ ತ್ತು. 4) ವ್ಯಕ್ತಿಯೊಬ್ಬನ ಮೂನಕ್ಕಿಂತಲೂ ಹೆಚ್ಚಿನ ದಾಗಿ ರಾಜ್ಯದ ಶಿಕ್ಷಣಾಲಯವೊಂದರ ಮರ್ಯಾದೆ ಹೋಗುವುದಿದ್ದರೂ ಅದನ್ನು ಳಿಸಲು ಒಂದು ಬೆರಳನ್ನೂ ನಚಿವರಾಗಲೀ ಇತರ ಸಿಬ್ಬಂದಿಯವರಾಗಲೀ ಮೇಲೆತ್ತಲಿಲ್ಲ. ಇದರಿಂದ ರಾಜೀನಾಮೆ ಕೊಟ್ಟರುವುದು ಪ್ರೊ। ಜಾನ್‌ರವರ ಮಟ್ಟಿಗೇ ವ್ಯಕ್ತವಾಗುತ್ತಿದೆ ಈ ಹೇಯಕೃತ್ಯದಲ್ಲಿ ಕ್ಷುದ್ರ ರಾಜಕೀಯದ ಆಕಾಂಕ್ಷೆಗಳ ಕೈವಾಡ ಇದ್ದೇ ಇದೆ

ಆದರೆ ಪ್ರಾಮಾಣಿಕ ವಿದ್ಯಾರ್ಥಿಗಳು ಮತ್ತು ಪ್ರೊಫೆಸರರು ಪ್ರೊ। ಜಾನ್ ಅವರ ರಾಜೀನಾಮೆಯಿಂದ ಸರಕಾರದ ಮೇಲೂ ಜಿಗುಪ್ಸೆ ಹೊಂದಿವ್ವಾರೆ ಜಾನ್ ಬಗ್ಗೆ ಸಕಲರಲ್ಲೂ ಸಹೃದಯದ ಒಮ್ಮತಾಭಿಪ್ರಾಯವಿದೆ ಈ ಘೇರಾವ್ ಮಾಡಲು ಸ್ವಳೀಕ ರಾಜಕಾರಣಿಗಳು ಪೂರ್ವ ಸಿದ್ಧತೆ ಮಾಡಿದ್ದು ನಿಶ್ಚಿತವೆಂದು ಅಲ್ಲಿನ ಒಬ್ಬ ವಿದ್ಯಾರ್ಥಿ ಒಂದು ಪತ್ರಿಕೆಯಲ್ಲಿ ಬರೆದಿದ್ದಾನೆ ಶೈಕ್ಷಣಿಕ ಸುಧಾರಣೆಯಲ್ಲಿ ಅತ್ಯುತ್ಸಾಹ ಕೆಲಸಗಳನ್ನು ಮಾಡಿರುವ ಜಾನ್ ಅವರನ್ನು ತುಚ್ಛ ರೀತಿಯಲ್ಲಿ ಉಚ್ಚಾಟನೆ ಮಾಡಿದ ಈ ಧೂರ್ತರು ಪಶ್ಚಾತ್ತಾಪ ಹೊಂದುವ ದಿನ ದೂರವಿಲ್ಲವೆಂದು ಆತ ಹೇಳಿದ್ದಾನೆ

—ಪ. ಗಾನುಕೃಷ್ಣ ಶಾಸ್ತ್ರಿ

●●

(ಒಂದನೇ ಪುಟದಿಂದ)

ಸಿಂಡಿಕೇಟು ತನ್ನ ಪ್ರತ್ಯೇಕತೆಯನ್ನು ಉಳಿಸಿಕೊಂಡು ಸಬಲವಾಗಬೇಕೆಂದಿದ್ದರೆ, ಅದು ಅಧಿಕಾರದಾಸೆಯನ್ನು ಬಿಟ್ಟು ಸಂಘಟನೆಗೆ ಮಹತ್ವಕೊಡಬೇಕು

ಉನ್ನತ ನಾಯಕರು ಉತ್ಸವ ಮೂರ್ತಿಯಾಗಿ ಸ್ಥಾಪಿತ ಕಾರ್ಯಗಳಲ್ಲಿ ತೊಡಗುವುದನ್ನು ಬಿಟ್ಟು ನಿಸ್ವಾರ್ಥ ಕಾರ್ಯಕರ್ತರನ್ನು ರೂಪಿಸಿಕೊಳ್ಳಬೇಕು, ಸಾಮಾಜಿಕ ಮರ್ಯಾದರಾಗಬೇಕು

ಸಂಘಟನೆಯಿಲ್ಲದೆ ಚುನಾವಣೆಯೇನು ಗೆದ್ದಾರು?

●●

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ — **English Made Easy**

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ: ರೂ 2—00

Letter Writing Made Easy — **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ ಬೆಲೆ. ರೂ 1—50

ಗೀತೆಯ ಕೈಗನ್ನಡಿ — **ಭಗವದ್ಗೀತೆಯ ಸಮೂಲ ಭಾಷಾಂತರ**

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಸಮೂಲ ಅನುವಾದ 450 ಪುಟಗಳ ಸುಂದರ ಕೈಹೊತ್ತಗೆ ಬೆಲೆ. ರೂ 2-00

ಮನೆ-ಮದ್ದು — **Home Remedies**

ಡಾ। ವಿ ಆರ್ ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ ಇದರಲ್ಲಿ ಮಕ್ಕಳ ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ಸುಲಭ ವಿಧಾನಗಳಿವೆ ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ

ಸಂಗ್ರಾಹ್ಯ ಪುಸ್ತಕ ಬೆಲೆ: ರೂ 2-00

ವಿ ಸೂ ನಿ ಪಿ. ಮಾಡುವುದಿಲ್ಲ ಪುಸ್ತಕದ ಬೆಲೆಯೊಂದಿಗೆ 80 ಪೈಸೆ ಆಂಚೆ ವೆಚ್ಚ ಸೇರಿಸಿ ಮನಿಯರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಕಾಲುಕೋಟೆ, ಉಡುಪಿ.

ಕನ್ನಡ ಕುವರನಿಗೆ

ಕನ್ನಡದ ಸಿರಿಗುವರ
ಕಸ್ತೂರಿಯೊಗು
ಕನ್ನಡದ ವರಪುತ್ರ
ಕುಲದೀಪನಾಗು

ಕನ್ನಡವೆ ತಾಯ್ನುಡಿ
ಕನ್ನಡವೇ ಸಿರಿನಾಡು
ಕನ್ನಡವೆ ನಂ ನಾಡು
ಕನ್ನಡಕೆ ಹೋರಾಡು

ಕನ್ನಡದ ಕಲಿಯೊಗು
ಕನ್ನಡದ ದೊರೆಯೊಗು
ಕನ್ನಡದ ಕವಿಯೊಗು
ಕನ್ನಡದ ಕಂದಾ

ಕನ್ನಡದ ಉಸಿರಾಗು
ಕನ್ನಡವ ಒಸರಾಗು
ಕನ್ನಡದ ಸಿರಿಯೊಗು
ಕನ್ನಡದ ನಂದಾ

ಕನ್ನಡದ ಹುಲಿಯೊಗು
ಕನ್ನಡದ ಮಗುವಾಗು
ಕನ್ನಡಕೆ ಹಿತವಾಗು
ಕನ್ನಡದ ರನ್ನಾ

ಲೇಖಕರು.— ಶ್ರೀ ಎನ್.ಡಿ ಶೆಟ್ಟಿ, ಮೂಳೂರು.

ದಯಮಾಡಿ
ನಿನ್ನ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

Edited, Printed & Published by K. H. Shetty at the Navayuga Press, Udipi, S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಸಂಪುಟ ೫೧
ಸಂಚಿಕೆ ೧೪

Vol. 51
No. 14

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, 9—12—1971

ಚಾರುಚಂಯನ

ಯಾಹ್ಯಾರ ಮುರಿದ ಮೂಗಿಗೆ ಪ್ಲಾಸ್ಟಿಕ್ ಸರ್ಜರಿ ಬೇಕು

'ಇನ್ನು ಹತ್ತು ದಿನಗಳಲ್ಲೇ ಯುದ್ಧ ಸಂಭವನೀಯ' ಎಂದ ಪಾಕ್ ದಂಡಿನಾಳಿಕೆಯ ಅಸ್ವಸ್ಥತೆಯ ಯಾಹ್ಯಾಖಾನರು ಹೊರಗೆ ಡಹಿದ್ದೇನು?

ತನ್ನ ಯುದ್ಧಾಕಾಂಕ್ಷೆಯನ್ನೆ? ಸಮರೋತ್ಸಾಹವನ್ನೆ?

ತಾನು ಭಾರತದ ವಾಯುಪ್ರದೇಶಗಳನ್ನು ಉಲ್ಲಂಘಿಸಿ ಮೂಗು ಮುರಿಸಿಕೊಂಡ ಯಾಹ್ಯಾರು ಏನೆಂದು ಬೊಬ್ಬಿಡುತ್ತಾರೆ?

ಭಾರತ ಆಕ್ರಮಣ ಮಾಡಿಯೆಂದೆ?

ಭಾರತದ ಗಡಿಯಲ್ಲಿ ಷೆಲ್—ಬಾಂಬು—ಗುಂಡುಗಳಿಂದ ಆಕ್ರಮಣ ನಡೆಸಿ, ಭಾರತವೇ ತನ್ನನ್ನು ಘೇರಾಯಿಸಿದೆಯೆನ್ನುತ್ತಾರೆ.

ಬಂಗ್ಲಾದೇಶದೊಳಗಡೆ ಮುಕ್ತಿವಾಹಿನಿಯ ಕೈ ನೇಲಾದಂತೆ ಯಾಹ್ಯಾ ಭಾರತದ ಗಡಿಯಲ್ಲಿ ಅತ್ಯಂತ ಸೆನ್ಸೆಟಿಕ ಪರಿಸ್ಥಿತಿ ನಿರ್ಮಿಸಿ ಹೊರಟಿದ್ದಾರೆ.

ಬಂಗ್ಲಾದೇಶದ ಜನತೆಯನ್ನು ತಾನು ಸಂಗ್ರಹಿಸಿದ ಮಿಲಿಟರಿ ಶಕ್ತಿಯಿಂದ ದಮನಿಸಬಲ್ಲೆನೆಂದು ಯಾಹ್ಯಾಖಾನ್ ಇನ್ನೂ ನಂಬಿದ್ದರೆ, ಅದು ಶುದ್ಧಾಂಗ ಸುಳ್ಳು.

ಕಳೆದ ಏಳೆಂಟು ತಿಂಗಳುಗಳಿಗೆ ಮೊದಲು ಬಂಗ್ಲಾ ದೇಶೀಯ ಬೆಂಕೆಯು ಕೆಡಿಯ ರೂಪದಲ್ಲಿರುವಾಗಲೇ ಅದನ್ನು ನಂದಿಸಲು ಆಶಕ್ತರಾದ ಯಾಹ್ಯಾಖಾನರು ಈಗ ಕಾಳ್ಗಿಚ್ಚನ್ನು ಆರಿಸುತ್ತಾರೆನ್ನುವುದು ಹಾಸ್ಯಾಸ್ಪದ.

"ಪಾಕ್ ವಿಭಜನೆ ಅನಿವಾರ್ಯ; ಆದು ಸಂಧಾನದಿಂದಾಗುತ್ತದೋ ಸಂಗ್ರಾಮದಿಂದಾಗುತ್ತದೋ ನೋಡ ಬೇಕಷ್ಟೆ" ಎಂದ ರಾಜ್ಯಕೀಯ ತಂತ್ರಜ್ಞರು ತಮ್ಮ ಸಂದೇಹ ಪರಿಹರಿಸಿಕೊಳ್ಳಬಹುದು.

ಯಾಹ್ಯಾಖಾನರಿಗೆ ಬಂಗ್ಲಾದೇಶದ ಸಮಸ್ಯೆಯೇ ಇಲ್ಲವಂತೆ.

ಅವರ ಮುಂದೆ ಒಂದೇ ಪ್ರಶ್ನೆ—ಪಾಕ್—ಭಾರತಗಳ ಸಂಬಂಧ ಸರಿಪಡಿಸಲಾರದಷ್ಟು ಕೆಟ್ಟು ಹೋಗಿದೆ. ಆದುದರಿಂದ ಭಾರತದೊಡನೆ ಯುದ್ಧ ಅನಿವಾರ್ಯ.

ಯಾಹ್ಯಾಖಾನರು ಭಾರತದ ಮೇಲೆ ಯುದ್ಧವೇಕೆ ಘೋಷಿಸಬೇಕು?

ಭಾರತ ಅವರಿಗೇನು ಮಾಡಿದೆ?

ಬಂಗ್ಲಾನಿಂದ ಗತಿಗೇಡಿಗಳಾಗಿ ನಿರಾಶ್ರಿತರಾಗಿ ಅನಾಥರಾಗಿ ಓಡಿ ಬರುತ್ತಿರುವ ಹೆಂಗಸು—ಮಕ್ಕಳು—ಮುದುಕರಿಗೆ ಆಶ್ರಯ ನೀಡಿ ಅವರ ಪ್ರಾಣ ರಕ್ಷಣೆ ಮಾಡುತ್ತಿರುವುದು ಭಾರತದ ಅಪರಾಧವೆ?

ನಿರಾಶ್ರಿತರ ಶಿಬಿರದಲ್ಲಿ ಹರಡಿದ ರೋಗಗಳನ್ನು ಸೂಕ್ತ ವೈದ್ಯಕೀಯ ಸೇವೆಯೊಡಗಿಸಿ ಪ್ರಾಣವುಳಿಸಲು ಪ್ರಯತ್ನಿಸುತ್ತಿರುವುದು ಅಪರಾಧವೆ?

ಭಾರತೀಯ ರು ತಾವು ಜೆಚ್ಚಿನ ತೆರಿಗೆ ತೆತ್ತು, ತಮ್ಮ ಆರ್ಥಿಕ ಪ್ರಗತಿಯನ್ನು ತಡೆದು ಕೋಟಿ ಸಂಖ್ಯೆಯನ್ನೂ ಮೀರಿದ ಬಂಗ್ಲಾ ದೇಶೀಯ ನಿರಾಶ್ರಿತರನ್ನು ಮಾನವತಾ ಮನೋಭಾವದಿಂದ ನೋಡುತ್ತಿರುವುದು ಅಪರಾಧವೆ?

ಈ ನಿರಾಶ್ರಿತರಿಲ್ಲರೂ ಬಂಗ್ಲಾ ದೇಶಕ್ಕೆ ಮರಳುವಂತಾಗಬೇಕು; ಅದಕ್ಕೆ ತಕ್ಕ ನಿರ್ಭೀಕ ವಾತಾವರಣ ಅಲ್ಲಿ ನಿರ್ಮಾಣವಾಗಬೇಕೆಂದು ಹೇಳುವುದು ಅಪರಾಧವೆ?

ಅಥವಾ ನಿರಾಶ್ರಿತರ ಹೆಸರಿನಲ್ಲಿ ಭಾರತವು ಮೊದಲಿಗೆ ಯುದ್ಧ ಘೋಷಿಸದಿರುವುದೇ ಅದರ ಅಪರಾಧವೆ?

ಯಾಹ್ಯಾಖಾನರು ಬಂಗ್ಲಾ ನಿಶ್ಯಸ್ತ್ರನ್ನು ನಿರ್ನಾಮ ಮಾಡಲು ಎಂದೂ ನಿರ್ಧರಿಸಿದ್ದಾರೆ. ಕೈಲಾಗದ ಜಬಲರೆಲ್ಲರನ್ನೂ ಗತಿಗೆಡಿಸಿ ಬಂಗ್ಲಾ ಭ್ರಷ್ಟರನ್ನಾಗಿ ಮಾಡುವ ಪಣತೊಟ್ಟಿದ್ದಾರೆ.

ಯುವ ಜನಾಂಗವನ್ನು ತನ್ನ ನೈಸರ್ಗಿಕ ಶಕ್ತಿಯಿಂದ ನಾಮಾವಶೇಷ ಮಾಡಲು ಸಂಕಲ್ಪಿಸಿದ್ದಾರೆ.

ಸರ್ವಯಜ್ಞವನ್ನು ಮಾಡಿ ಜನಮೇಜಯನು ಸಾಪ ಭಾಜನನಾದನೋ ಇಲ್ಲವೋ ಇತಿಹಾಸಕಾರರಿಗೆ ಸಂಬುಗೆಯಿಲ್ಲ. ಯಾಹ್ಯಾಖಾನರು ನರಮೇಧ ಮಾಡಿ ಹೆಗ್ಗಳಿಕೆಗಳಿಸುತ್ತಿರುವುದನ್ನು ಕಣ್ಣಾರೆ ಕಂಡ ರೂನಂಬಲಾಗದ ಇತಿಹಾಸಕಾರರು ಇತಿಹಾಸದ ಹೆಸರಿಗೆ ಅಪಚಾರನೆಸಗುತಿದ್ದಾರೆ.

ತಾವು ಬರೆದದ್ದೇ ಇತಿಹಾಸವೆಂದವರು ನಂಬಿ, ಇಂದಿನ, ಮುಂದಿನ ಜನತೆಯನ್ನು ಮೋಸಗೊಳಿಸುತ್ತಾರೆ.

ಯಾಹ್ಯಾಖಾನರು ಬೃಹತ್ ದೇಶಗಳಿಗೆ ಮರೆಹೊಕ್ಕಿದ್ದಾರೆ. ತಮ್ಮ ಮಿತ್ರರಾಷ್ಟ್ರಗಳಿಂದ ನೆರವು ಯಾಚಿಸಿದ್ದಾರೆ..

ಯಾಕಾಗಿ?

ಭಾರತದ ವಿರುದ್ಧ ತನಗೆ ರಕ್ಷಣೆ ಬೇಕು ಎಂಬುದಕ್ಕಾಗಿ.

ಜೀನಾವೊಂದನ್ನು ಬಿಟ್ಟು ಉಳಿದಾವ ದೇಶವೂ ಭಾರತದ ಮೇಲೆ ವೈಫಾರೋಸ ತೊರಿಸಿಲ್ಲ. ಆದರೂ ನಿಜವಾದ ಅಪರಾಧಿ ಯಾರೆಂದು ಹೇಳಲು ಅವು ಮುಂದಾಗಿಲ್ಲ.

ಅವುಗಳ ವರ್ತನೆಯು ಭಾರತವನ್ನೇ ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಲು ಪ್ರೇರಕವಾವಂತಿದೆ.

ಭದ್ರತಾ ಸಮಿತಿಯ ಸಭೆಕರೆಯಲು ಕೆಲವು ಉತ್ಸುಕವಾಗಿವೆ.

ತಾಷ್ಕೆಂಟ್ ಮೂಪರಿಯ ಒಡಂಬಡಿಕೆ ಯಾಗಲೆಂದವು ಬಯಸುವಂತಿದೆ.

ವಿಶ್ವಸಂಸ್ಥೆಯೂ ಈಗ ತಾನೂ ಕಾಳಜಿ ವಹಿಸುತ್ತಿರುವಂತೆ ತೋರಿಸಿ ಹೊರಟಿದೆ.

ಭದ್ರತಾಸಮಿತಿಯೂ ಆಸಕ್ತವಾಗತೊಡಗಿದೆ.

ಆದರೆ, ಇವುಗಳ ಆಸಕ್ತಿ ಏಕಾಗಿ? ಭಾರತ—ಪಾಕ್ ಯುದ್ಧವನ್ನು ತಡೆಗಟ್ಟಲು.

ಈ ಯುದ್ಧದಲ್ಲಿ ಉತ್ಸಾಹ ತೋರುತ್ತಿರುವವರು ಭಾರತೀಯರಲ್ಲ. ಅಧ್ಯಕ್ಷ ಯಾಹ್ಯಾಖಾನರೆಂಬುದನ್ನೂ ಅವರು ನಂಬುವುದಿಲ್ಲ.

ಪಾಕಿಸ್ತಾನವು ನಿರಪರಾಧಿಯೆಂದೇ ಇವರೆಲ್ಲರೂ ಹೇಳುತ್ತ ಬಂದಿದ್ದಾರೆ. ಮತ್ತೆ ಭಾರತಕ್ಕೆ ನ್ಯಾಯವೆಲ್ಲಿಂದ ದೊರೆಯಬೇಕು?

ಭಾರತದೊಡನೆ ಯಾಹ್ಯಾಖಾನರು ಮಾತುಕತೆ ಏಕೆ ನಡೆಸಬೇಕು? ಒಡಂಬಡಿಕೆಯೇಕೆ?

ಸದ್ಯ ಪರಿಸ್ಥಿತಿಯನ್ನು ನಿರ್ಮಿಸಿದವರು ಯಾಹ್ಯಾಖಾನರು—ಬಂಗ್ಲಾ ನರಮೇಧ ವಾರಂಭಿಸಿ, ಇದನ್ನು ಅವರ ಏ ಪ್ರರು ತಿಳಿದುಕೊಂಡಿದ್ದಾರೆಯೆ? ವಿಶ್ವಸಂಸ್ಥೆ ಒಪ್ಪಿಕೊಳ್ಳಲು. ತಯಾರಿದೆಯೆ? ಭದ್ರತಾಸಮಿತಿ ಹೇಳುತ್ತದೆಯೆ?

ಈ ಮೊದಲೂ ಹೇಳಲಿಲ್ಲ. ಮುಂದೆಯೂ ಹೇಳುವುದಿಲ್ಲ.

ಯಾಹ್ಯಾಖಾನರ. ಬಂಗ್ಲಾ ದೇಶೀಯ ಚುನಾಯಿತ ನಾಯಕರೊಡನೆ ಗೌರವಯುತ ರಾಜ್ಯಕೀಯ ಒಡಂಬಡಿಕೆ ಮಾಡಿಕೊಳ್ಳಬೇಕು. ಆಗ ಮೋಡಗಳೆಲ್ಲ ಚೆದರಿ ಹೋಗುತ್ತವೆ.

ಇದಕ್ಕೆ ಯಾಹ್ಯಾ ತಯಾರಿದ್ದಾರೆಯೆ?

ಅವರ ಮಿತ್ರರು ಯಾಹ್ಯಾಖಾನರ ಮೇಲೆ ಒತ್ತಡ ಹೇರಲು ಸಿದ್ಧರಾಗಿದ್ದಾರೆಯೆ

ಬಂಗ್ಲಾ ಸಮಸ್ಯೆಗೂ ಭಾರತಕ್ಕೂ ಯಾವ ಸಂಬಂಧ?

ನಿರಾಶ್ರಿತರ ಯೋಗಕ್ಷೇಮ ನೋಡಿಕೊಳ್ಳಬೇಕಾಗಿ ಬಂದದ್ದು, ತನ್ಮೂಲಕ ತನ್ನ ಆರ್ಥಿಕ ವ್ಯವಸ್ಥೆಯನ್ನು ಕೆಡಿಸಿಕೊಳ್ಳಬೇಕಾಗಿ ಬಂದದ್ದು ಮಾತ್ರ.

ನಿರಾಶ್ರಿತರಿಲ್ಲಿ ಸ್ವದೇಶಕ್ಕೆ ಮರಳುವಂತಾದರೆ, ಬಂಪ ಪೀಡೆ ಮೂರವಾಗುತ್ತದೆ.

ಇದು ಭಾರತ—ಪಾಕ್ ಸಮಸ್ಯೆಯಲ್ಲಿ ಅಂತರಾಷ್ಟ್ರೀಯ ಸಮಸ್ಯೆ.

ಆವ.ದರಿಂದಲೇ ಪ್ರಧಾನಿ ಗಾಂಧಿ ಸ್ಪಷ್ಟವಾಗಿ ಹೇಳಿದ್ದಾರೆ—

ಈ ಸಮಸ್ಯೆಯನ್ನು ಭದ್ರತಾ ಸಮಿತಿ ಎತ್ತಿಕೊಳ್ಳಬೇಕಾದ್ದೇ ಇಲ್ಲ. ಈ ಹಿಂದೆಯೂ ಭಾರತಕ್ಕದ್ದು ನ್ಯಾಯವಾದ ಮೂದಿಲ್ಲ; ಈಗಲೂ ಮಾಡುವುದಿಲ್ಲ.

ನಿರಾಶ್ರಿತರ ಸ್ವಯಾಪ ಹರಿದು ಬರುತ್ತಿರುವಾಗ ಜಡ ಭರತನಂತೆ ವರ್ತಿಸಿದ ಭದ್ರತಾ ಸಮಿತಿ ಈಗ ಸಜೀವವಾಗುವ ಅಗತ್ಯವಿಲ್ಲ

ಯಾಹ್ಯಾಖಾನರ ಕಿವಿಹಿಂಡಿ ಬುದ್ಧಿ ಹೇಳಲಾಗದ ಬೃಹತ್ ರಾಷ್ಟ್ರಗಳು ಬಾಯುಮ್ಮುಚ್ಚಿ ಕುಳಿತು ಕೊಳ್ಳಲಿ.

ನಿಜವಾಗಿ ಭದ್ರತಾ ಮಂಡಳಿಗೂ ಬೃಹತ್ ರಾಷ್ಟ್ರಗಳಿಗೂ ಬಂಗ್ಲಾ ಸಮಸ್ಯೆಯಲ್ಲಿ ಆಸಕ್ತಿಯಿರುವುದಾದರೆ, ಪರಿಹಾರವನ್ನು ಅವರು ಬಯಸುವುದಾದರೆ, ತಮ್ಮ ಸೀತ ಕನ್ನಡಕಗಳನ್ನು ಬದಿಗಿಟ್ಟು ಸಹಜವನ್ನು ನೋಡಲಿ.

ಅದು ಅಸಾಧ್ಯ.

ಭಾರತವನ್ನು ಇದುವರೆಗೆ ನಂಬಿಸಿದಂತೆ ಈ ಬಾರಿಯೂ ನಂಬಿಸಬಹುದೆಂದು ಯಾರಾದರೂ ನಂಬಿದ್ದರೆ ಅದು ಸುಳ್ಳಾಗುತ್ತದೆ.

ಯಾಹ್ಯಾಖಾನರು ಯುದ್ಧವನ್ನೇ ಬಯಸುವುದಾದರೆ, ಭಾರತ ಅದಕ್ಕೂ ಸಿದ್ಧ. ಹಾಗಿದ್ದರೂ ಅದು ಅನಗತ್ಯವೆಂದೇ ಭಾರತದ ದೃಢ ನಿಲುವೆ.

ಆದರೆ ತುರ್ತು ಪರಿಸ್ಥಿತಿ ಘೋಷಿಸಿಕೊಂಡು, ಸಮರೋತ್ಸಾಹದಿಂದ ಜಿಗಿಯುತ್ತಿರುವ ಯಾಹ್ಯಾ ಕೇಳಬೇಕಲ್ಲಾ....

ತಮ್ಮ ಮೂಗು ತುರಿಸಿ ಕೊಂಡು ಅವರು ಅದರ ಅಲಂಕಾರ ಕೆಡಿಸಿಕೊಂಡಿದ್ದಾರೆ.

ಶೇಕ್ ಮುಜಿಬುರ್ ರೆಹಮಾನರೊಬ್ಬರೇ ಇದಕ್ಕೆ ಪ್ಲಾಸ್ಟಿಕ್ ಸರ್ಜರಿ ಮಾಡಲು ಸಮರ್ಥರು.

ವೈದ್ಯರಿಗೆ ತನ್ನ ಮೂಗು ತೋರಿಸುವುದಕ್ಕೆ ನಾಚಿಕೆ, ಅದು ಪೂರ್ಣ ಕೊಳೆತು ನಾರಿ ಹೋಗುತ್ತದೆ; ಕೊನೆಗೆ ಕಳಚಿಯೂ ಹೋಗುತ್ತದೆ. ಆದರ ಸೋಂಕು ದೇಹದ ಇತರಕಡೆಯೂ ಹರಡುವ ಭೀತಿಯಿದೆ.

ಸಣ್ಣ ಕಥೆ

ಬೆಲೆಯಿಲ್ಲದ ಬಾಳು

"ನಮಸ್ಕಾರ ಸ್ವಾಮಿ!" ಎಂಬ ಧ್ವನಿ ಕೇಳಿ ಪತ್ರಿಕೆಯನ್ನೋದುತ್ತಿದ್ದ ನಾನು ತಲೆ ಎತ್ತಿ ನೋಡಿ ಆಶ್ಚರ್ಯದಿಂದ ಸ್ತಂಭಿತನಾದೆ

ಮುಖ ಹುಣಿಬ ಗಡ್ಡ ಬೆಳೆಸಿಕೊಂಡು ಧೂಳಿನಿಂದ ಖಾವಿಬಣ್ಣಕ್ಕೆ ತಿರುಗಿದ ಉಡುಪುಸಿನಿಂದಲಂಕೃತನಾಗಿ ಕೃಶ ಕಾಯದ ನಿಸ್ತೇಜ ಮುಖದ ಸನ್ಯಾಸಿಯಂತೆ ಕಾಣಿಸುತ್ತಿರುವ ಈತ ದಾರಿ ತಪ್ಪಿ ಬಂದನೇ? ಅಥವಾ ಹುಚ್ಚನೇ?

"ನನ್ನ ಪರಿಚಯವಾಗಲಿಲ್ಲವೇ?" ಎನ್ನುತ್ತಾ ಅಲ್ಲೇ ಇದ್ದ ಕುರ್ಚಿಯಲ್ಲಿರಗಿ ನಸುನಕ್ಕ ಆತನನ್ನು ನಾನು ವಿಸ್ಮಯದಿಂದ ನೋಡುತಿದ್ದೆ.

ಧ್ವನಿಯನ್ನೆಲ್ಲೋ ಕೇಳಿದ ನೆನಪು. ಮುಖ ಮಾತ್ರ ಗಡ್ಡದಿಂದ ಮುಚ್ಚಲ್ಪಟ್ಟು ಅಲ್ಲಿ ಕಾಣಿಸುತ್ತಿರುವುದು ಆಳಕ್ಕಿಳಿದಿರುವ ಸಣ್ಣ ಸಣ್ಣ ಕಣ್ಣುಗಳು ಮಾತ್ರ. ವೇಷ ಭೂಷಣವಂತೂ ಕಪಟ ಸನ್ಯಾಸಿಯನ್ನು ನೆನಪಿಗೆ ತರುವಂತಿದೆ. ಯಾರಾಗಿರಬಹುದು?

"ಹಹ್ಹ! ನಾನಲ್ವೇ? ಶ್ರೀನಾಥ!" ಎಂದು ಆತ ಪುನಃ ನಕ್ಕು ವೀಳ್ಯದೆಲೆಯಿಂದ ಕೆಂಪಾಗಿ ಬಣ್ಣ ಗೆಟ್ಟ ಹಲ್ಲುಗಳನ್ನು ಪ್ರದರ್ಶಿಸಿದ

ಈಗ ನನಗೆ ಇನ್ನಷ್ಟು ಆಶ್ಚರ್ಯವಾಯಿತು

ಶ್ರೀನಾಥ!

ಆತನ ಪರಿಚಯ ನನಗೆ ಚೆನ್ನಾಗಿದೆ ಇತ್ತು. ಆದರೆ ಅಂದಿನ ಅವನ ವೇಷಕ್ಕೂ ಇಂದಿನದಕ್ಕೂ ಎಂತಹ ಅಂತರ! ಸುಮಾರು ನಾಲ್ಕು ವರ್ಷಗಳ ಹಿಂದೆ ನಮ್ಮೂರ ಶಾಲೆಯಲ್ಲಿ ಉಪಾಧ್ಯಾಯನಾಗಿ ತನ್ನ ವೇಷ ಭೂಷಣಗಳಿಂದ ಎಲ್ಲರ ಕಣ್ಮೆಳೆಯುತ್ತಿದ್ದ ಶೃಂಗಾರಪ್ರಿಯ ಶ್ರೀನಾಥನಿಗೂ ಮಲಿನ ವಸ್ತ್ರಧಾರಿಯೂಗಿ ಗಡ್ಡ ಬೆಳೆಸಿಕೊಂಡು ಬಳಲಿದ ಮುಖಹೊತ್ತ ಇವನಿಗೂ ಎಲ್ಲಿಯ ಸಂಬಂಧ? ಆದರೆ ಅಂದಿನ ಆ ಶ್ರೀನಾಥನೇ ಇಂದು ಈ ವೇಷದಲ್ಲಿ ಬಂದಿರುವನೆಂಬುದಕ್ಕೆ ಇನ್ಯಾವ ಸಂದೇಹವೂ ಖಂಡಿತ ಇಲ್ಲ. ದೇಹದಲ್ಲಿ ಕೃಶನಾಗಿ ವೇಷದಲ್ಲಿ ಬದಲಾಗಿ ಬಂದಿದ್ದರೂ ಆತನ ಸ್ವರ, ಮುಖದ ಪರಿಚಯ ಚೆನ್ನಾಗಿ ನೆನಪಿಗೆ ಬಂತು. ಸುಮಾರು ನಾಲ್ಕು ವರ್ಷಗಳ ಹಿಂದೆ ಮಡದಿಯೊಂದಿಗೆ ಬೆಂಗಳೂರಿಗೆ ಹೊರಟು ಹೋದ ಅವನನ್ನು ಪುನಃ ಸಂಧಿಸಿದ್ದು ಇಂದು ಈ ರೀತಿಯಲ್ಲಿ.

"ಏನಿದು? ಎಲ್ಲಿಂದ ಬಂದೆ? ಹೇಗಿದ್ದಿ?" ನಾನು ನನ್ನೆಲ್ಲ ಯೋಚನೆಗಳನ್ನೂ ಬದಿಗೊತ್ತಿ ಕುತೂಹಲದಿಂದ ವಿಚಾರಿಸಿದೆ.

'ಹೇಗಿದ್ದೇನೆ ಎಂಬುದನ್ನು ನೋಡಿಯೇ ತಿಳಿಯಬಹುದಲ್ವಾ? ನಾನು ಬೆಂಗಳೂರು ಬಿಟ್ಟು ಬಿಟ್ಟಿ. ಇನ್ನು ಅಲ್ಲಿಗೆ ಹೋಗುವುದೂ ಇಲ್ಲ.'

'ಓಹೋ. ಆದೇನು?'

'ಅದೆಲ್ಲ ದೊಡ್ಡ ಕತೆ. ಈಗ ಅವಸರದಲ್ಲಿ ಹೇಳಿ ಮುಗಿಸುವಂತಿಲ್ಲ ಇನ್ನೊಮ್ಮೆ ಯೂವಾಗಲಾದರೂ ಹೇಳ್ತೇನೆ. ಇನ್ನು ನಾನು ಸನ್ಯಾಸಿಯಾಗಿ ಬದುಕಬೇಕೆಂದು ನಿಶ್ಚಯಿಸಿದ್ದೇನೆ ಕೊನೆಯ ಬಾರಿ ಊರನ್ನು ನಿಮ್ಮನ್ನು ಎಲ್ಲ ನೋಡಿಕೊಂಡು ಹೋಗೋಣ ಅಂತ ಬಂದೆ' ಎಂದ ಆತನ ಮಾತು ಕೇಳಿ ನನಗೆ ನಗುಬಂದರೂ ಅನಿರ್ವಾಹವಾಗಿ ತಡೆ ಹಿಡಿದು ನುಡಿದೆ

'ಹೌದಾ? ಅದೇನು? ನಿನ್ನ ಹೆಂಡತಿ ?'

"ಅವಳಿಗೇನೂ ರೋಗ ಬರಲಿಲ್ಲ. ಸಾಯಲಿಲ್ಲ ಅವಳಿಂದಾಗಿಯೇ ನನಗೀ ಗತಿ ಬಂದದ್ದು ಆ ಪ್ರಾಣಿಯ ವಿಚಾರ ಕೇಳ್ಬೇಡ. ನಾನಿನ್ನೂ ಹೋಗಲೇ?" ಎಂದು ಎದ್ದು ನಿಂತು ಹೊರಟೇ ಬಿಟ್ಟ ಆತನನ್ನ ತಡೆಯುವ ಆಗತ್ಯ ಕಾಣಿಸಲಿಲ್ಲ. ನಾನು ವಿಸ್ಮಯದಿಂದ ಯೋಚಿಸುತ್ತಿದ್ದಂತೆಯೇ ಆತ ರಸ್ತೆಗಿಳಿದು ಜನರ ಮಧ್ಯೆ ಮರೆಯಾಗಿ ಬಿಟ್ಟ.

ಕೈಯಲ್ಲಿದ್ದ ಪತ್ರಿಕೆಯನ್ನು ಮೇಜಿನ ಮೇಲಿಟ್ಟು ಕುರ್ಚಿಯಲ್ಲೊರಗಿ ಕುಳಿತ ನನಗೆ ಶ್ರೀನಾಥನ ಬದುಕಿನ ಚಿತ್ರಗಳು ನೆನಪಾಗಿ ಮಿದುಳನ್ನು ಕೊರೆಯ ತೊಡಗಿದವು ಶ್ರೀನಾಥ ನನ್ನ ಸ್ನೇಹಿತನೇನೂ ಆಲ್ಲ ಆತ ನನ್ನನ್ನು ಸ್ನೇಹಿತನೆಂದು ಕರೆದುಕೊಳ್ಳಲು ನನ್ನ ಮನಸ್ಸು ಖಂಡಿತ ಸಿದ್ಧವಾಗಿಲ್ಲ. ಆದರೂ ಆವನ ಪರಿಚಯ ಮಾತ್ರ ಚೆನ್ನಾಗಿದೆ. ಆತನ ವಿಷಯಗಳೆಲ್ಲವೂ ನನಗೆ ಸರಿಯಾಗಿ ತಿಳಿದಿದೆ ಅವನೇನೋ ನನ್ನನ್ನು ಗೆಳೆಯನೆಂದೇ ತಿಳಿದುಕೊಂಡು ತನ್ನ ಅಭಿಪ್ರಾಯ ಭಾವನೆಗಳೆಲ್ಲವನ್ನೂ ಹೇಳಿಕೊಳ್ಳುತ್ತಿದ್ದರೂ ಅವುಗಳ ತೀವ್ರ ಭಿನ್ನಾಭಿಪ್ರಾಯಗಳು ನಾನು ಆತನ ಸ್ನೇಹವನ್ನೆಂದೂ ಸ್ವಾಗತಿಸಿರಲಿಲ್ಲ. ಒಂದೆರಡು ಬಾರಿ ಅವನ ಜೀವನದ ವೈಯಕ್ತಿಕ ವಿಷಯಗಳ ಬಗ್ಗೆ ತೀರಾ ಜಿಗುಪ್ಸೆ ಗೊಂಡು ಸಲಹೆ ನೀಡಲು ಯತ್ನಿಸಿ ವಿಫಲನಾಗಿ ಆ ಮೇಲೆಂದೂ ಅಂತಹ ವ್ಯರ್ಥ ಪ್ರಯತ್ನಕ್ಕೆ ಕೈಯಿಕ್ಕದೆ ನನ್ನಷ್ಟಕ್ಕೆ ನಾನಿದ್ದು ಬಿಟ್ಟಿದ್ದೆ

ಶ್ರೀನಾಥನ ನೆನಪು ಮರುಕಳಿಸುತ್ತಿದ್ದಂತೆ ಅದರೊಂದಿಗೇ ಅವನ ಕುಟುಂಬದ ಒಬ್ಬೊಬ್ಬರೇ ವ್ಯಕ್ತಿಗಳು ತೇಲಿ ಬಂದರು. ಶ್ರೀನಾಥನ ತಾಯಿ ಗಂಗಮ್ಮ ಪತಿಯಿಂದ ಯಾವ ಸುಖ ಸಂತೋಷ, ಸಂತೃಪ್ತಿಯನ್ನೂ ಕಾಣದೆ ಮಗ ಬೆಳೆದ ಮೇಲೆಯೇ ತನ್ನ ಸಕಲ ಸಂಕಷ್ಟಗಳ ನಿವಾರಣೆಯೆಂದು ಹೊಂಗನಸುಗಳನ್ನು ಹೆಣೆಯುತ್ತಾ ಬಾಳು ವೆಯಿಡೀ ಕಣ್ಣೀರಲ್ಲೇ ಕಳೆದ ಬಡಪಾಯಿ. ಮುಂಜಾನೆಯಿಂದ ಸಂಜೆಯವರೆಗೂ ಗಾಣದೆತ್ತಿನಂತೆ ದುಡಿದರೂ ಆಕೆಗೆ ಪತಿಯಿಂದ ದೊರೆಯುತ್ತಿದ್ದುದು ಬಯ್ಗಳು ಹೊಡೆತಗಳ ಉಡುಗೊರೆ. ಒಂದು ದಿನವೂ ಆಕೆ ತನ್ನ ಜೀವಮಾನದಲ್ಲಿ ಒಳ್ಳೆಯ ಮಾತನ್ನು ಕೇಳಿದವರಲ್ಲ. ಬಯಸಿದ ಒಡವೆ, ಒಡವೆ ವಸ್ತುಗಳಾಸೆ ಕೈಗೆಟುಕದ ಗಗನ ಕುಸುಮವೆಂದೇ ತಿಳಿದಿದ್ದರೂ ಜೊಚ್ಚಲು ಗಂಡು ಮಗುವನ್ನು ಕಂಡು ಸಂತಸದಿಂದ ಮುಖವನ್ನರಳಿಸಿ ಹಿಗ್ಗಿದರು ಮಗು ಬೆಳೆಯುತ್ತಾ ಬಂದಂತೆ ಆ ತಾಯಿ ತನ್ನ ದುಃಖವನ್ನೆಲ್ಲವನ್ನೂ ಮರೆತು ತನ್ನ ಆಸೆಗಳನ್ನೆಲ್ಲ ಮಗ ಬೆಳೆದ ಮೇಲೆ ತೀರಿಸುತ್ತಾನೆ ಎಂಬ ಕನಸಿನಿಂದ ಸಂತೃಪ್ತಿಗೊಂಡರು. ಹಳ್ಳಿಯ ಹೋಟೇಲಲ್ಲಿ ಸಂಪಾದಿಸಿದ ಹಣವೆಲ್ಲವನ್ನೂ ದುಂದು ವೆಚ್ಚದಲ್ಲೇ ಕಳೆಯುವ ನರಸಿಂಹಯ್ಯನಿಗೆ ಮನೆಯ ಯೋಚನೆ ಸ್ವಲ್ಪವೂ ಇರಲಿಲ್ಲ. ಮಡದಿಯ ಸುಖ, ದುಃಖ ವಿಚಾರಿಸುವಷ್ಟು ಸಮಯವಾಗಲೀ ಸಹನೆಯಾಗಲೀ ಮೊದಲೇ ಇರಲಿಲ್ಲ.

ಮಗ ಹೈಸ್ಕೂಲ್ ವಿದ್ಯಾಭ್ಯಾಸ ಮುಗಿಸಿದಾಗ ಗಂಗಮ್ಮನ ಹೆರ್ತ ಮೇರೆ ಮೀರಿತ್ತು. ಮತ್ತೆರಡು ವರ್ಷಗಳಲ್ಲಿ ಆತ ಶಿಕ್ಷಕರ ತರಬೇತಿ ಪಡೆದು ನಾಲ್ಕು ಮೈಲು ದೂರದ ಪೇಟೆಯ ಶಾಲೆಯೊಂದಲ್ಲಿ ಮೊಸ್ತರನಾಗಿ ಕೆಲಸಕ್ಕೆ ನೇರಿದಾಗ ತಾಯಿಯ ಸಂತೋಷ, ಸಂಭ್ರಮ ಹೇಳತೀರದು ಮುಂದೆ ಸಂಸಾರದ ಜವಾಬ್ದಾರಿಗೆ ಬುದ್ಧಿವಂತ, ವಿದ್ಯಾವಂತ ಮಗ ಹೆಗಲು ಕೊಡುತ್ತಾನೆ ಇನ್ನು ತಾನು ಸಂತೃಪ್ತಿಯ ಜೀವನ ನಡೆಸಿ ಎಲ್ಲರಂತೆ ತಲೆ ಎತ್ತಿ ಬಾಳಬಹುದು ಎಂದುಕೊಂಡರು ಅವರ ಕನಸು ನನಸಾಗಲಿಲ್ಲ. ಮುಂದೆ ಒಂದೇ ವರ್ಷದಲ್ಲಿ ಅವರ ಭೈಮೆ ಬಯಲಾಯಿತು ದುರಾಚಾರೀ ತಂದೆಯ ಮಗ ಶ್ರೀನಾಥನಿಗೆ ತಾಯಿಗಾಗಿ ಪರಿತಪಿಸುವ ಒಳ್ಳೆಯ ಹೃದಯವಿರಲಿಲ್ಲ ತಂದೆಯ ಸ್ವೇಚ್ಛಾ ಜೀವನವನ್ನು ಚಿಕ್ಕಂದಿನಿಂದಲೂ ಕಂಡು ಬೆಳೆದ ಹುಡುಗ ತನ್ನದೇ ಆದ ಆದರ್ಶ ಸಾಮ್ರಾಜ್ಯವನ್ನು ಮನಸ್ಸಿನಲ್ಲೇ ಸೃಷ್ಟಿಸಿ ಕೊಂಡಿದ್ದ ಆತನ ಕೈ ಸೇರುತ್ತಿದ್ದ ಇನ್ನೂರು ರುಪ್ಯ ಸಂಬಳ ಅವನ ಆಡಂಬರದ ಉಡುಗೆ ತೊಡುಗೆಗಳಿಗೆ, ಸಿನಿಮಾ, ಸಿಗರೇಟುಗಳಿಗೆ, ಅಲೆಪಾಟದ ಹುಚ್ಚುತನಕ್ಕೆ ಸಾಕಾಗುತ್ತಿರಲಿಲ್ಲ. ಎಂದ ಮೇಲೆ ಮನೆಗೆ ತಾಯಿಗೆ ಎಂದು ಉಳಿಸುವ ಮಾತು ದೂರವೇ ಉಳಿದು ಹೋದಾಗ ತಾಯಿಯ ಕಣ್ಣೀರು ಆರುವ ಪ್ರಸಂಗವೇ ಒದಗಲಿಲ್ಲ.

ಮುಂದೆ ಎರಡೇ ವರ್ಷಗಳಲ್ಲಿ ಬೆಂಗಳೂರು ನೋಡಲೆಂದು ರಜೆಯಲ್ಲಿ ಹೋದ ಶ್ರೀನಾಥ ತನ್ನ ಆಕರ್ಷಕ ವೇಷದಿಂದಾಗಿ ಶ್ರೀಮಂತ ಮೂವನನ್ನು ಗೊತ್ತುಮಾಡಿ ಕೊಂಡು ಬಂದಾಗ ಊರವರಿಗೆ ಆಶ್ಚರ್ಯವಾಯಿತು ಕೆಲವೇ ದಿನಗಳಲ್ಲಿ ಆತನ ಮದುವೆಯೂ ಬೆಂಗಳೂರಿನಲ್ಲಿಯೇ ನಡೆಯಿತು.

ಶ್ರೀನಾಥನ ಮಡದಿ ಶೋಭಾ ರೂಪಸಿ ಮಾತ್ರವಲ್ಲ ಅವಳ ಅಲಂಕಾರಪ್ರಿಯತೆ ಸಿನಿಮಾ ನಟಿಯರನ್ನೇ ನೆನಪಿಗೆ ತರುತ್ತಿತ್ತು ಆಕೆ ನಮ್ಮೂರಿನಲ್ಲಿ ಬಣ್ಣದ ಚಿಟ್ಟೆಯಂತೆ ಚಿತ್ರ ವಿಚಿತ್ರವಾಗಿ ಅಲಂಕರಿಸಿಕೊಂಡು ಹೊರಟರೆ ಎಲ್ಲರೂ ದಿಟ್ಟಿಸುತ್ತಾ ನಿಲ್ಲುವನವರೇ ಎಂದರೆ ಅತಿಶಯೋಕ್ತಿಯಾಗದು. ಅಂತಹ ಹುಡುಗಿಯನ್ನು ಕೈಹಿಡಿದ ಶ್ರೀನಾಥನಿಗೆ ಭೂಲೋಕವೇ ಸ್ವರ್ಗವೆಂದೆನಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ ಶೋಭಾಳನ್ನು ಮದುವೆಯಾದ ಮೇಲೆ ಆತ ತನ್ನ ಹಳ್ಳಿಯ ಮನೆಯನ್ನೇ ತ್ಯಜಿಸಿ ಶಾಲೆಯ ಹತ್ತಿರದ ಒಳ್ಳೆಯ ಮನೆಯೊಂದನ್ನು ಬಾಡಿಗೆಗೆ ಪಡೆದು ಸುಖ ಸಂತೃಪ್ತಿಯಿಂದ ಜೀವನ ನಡೆಸಲಾರಂಭಿಸಿದ

ಶ್ರೀನಾಥ ಸಂಪೂರ್ಣ ಸಂತೃಪ್ತ ಜೀವನವನ್ನು ನಡೆಸುತ್ತಿದ್ದನೋ ಇಲ್ಲವೋ ಅದನ್ನು ಸರಿಯಾಗಿ ನೋಡಲಾಗದಿದ್ದರೂ ಯಾವುದೋ ಕೆಲಸಕ್ಕಾಗಿ ಆತನ ಹಳ್ಳಿಗೆ ಹೋಗಿದ್ದಾಗ ಅವನ ತಾಯಿ ಗಂಗಮ್ಮನ ಸಂಕಷ್ಟಗಳನ್ನು ಕಣ್ಣಾರೆ ಕಂಡಿದ್ದೆ. ಆಕೆಯ ಪತಿ ಯಾವುದೋ ಸಣ್ಣ ಕಾರಣಕ್ಕಾಗಿ ಸಿಟ್ಟುಗೊಂಡು ಊರುಬಿಟ್ಟು ತೆರಳಿದವರ ಪತ್ತೆಯೇ ಇರಲಿಲ್ಲ ಮುಖ್ಯವಾಗಿ ಆವರಿಗೆ ಐದು ಮಕ್ಕಳ ಮಡದಿಯ ಸಂಸಾರದ ಹೊಣೆ ಹೊರಲಾರದಷ್ಟು ಭಾರವೆನಿಸಿತ್ತು. ಅದನ್ನು ಸುಲಭದಿಂದ ತಪ್ಪಿಸಿಕೊಳ್ಳಲು ಹಳ್ಳಿಯನ್ನೆ ತೊರೆದು ಬಿಟ್ಟರು.

ಗಂಗಮ್ಮ ಊರವರಲ್ಲಿರ ಕನಿಕರದ ವಸ್ತುವಾಗಿ. ನೆರೆಕರೆಯವರ ಕೆಲಸಗಳಿಗೆ ನೆರವಾಗಿ ಮಕ್ಕಳನ್ನು ಅರೆಹೊಟ್ಟೆಯಿಂದಲಾದರೂ ತೃಪ್ತಿಗೊಳಿಸಲು ಪ್ರಯತ್ನ ನಡೆಸಿ

(ಹಸ್ತಾಂದನೇ ಪುಟ ನೋಡಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
137 ಶಾಖೆಗಳಿಂದ ಹಬ್ಬಿರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಿಜಿಸ್ಟರ್ಡ್ ಆಫೀಸು:- ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.

ಎಮ್. ಸುಂದರ್‌ರಾಮ್ ಶೆಟ್ಟಿ,
ಜೆಯರ್‌ಮೆನ್.

ಆತ್ಮರಕ್ಷಣೆಯು ಆಕ್ರಮಣವಾಗುವುದಿಲ್ಲ

ಬಂಗ್ಲಾದೇಶದ ಸಮಸ್ಯೆಯ ಸಂಬಂಧದಲ್ಲಿ ಏನು ನಡೆಯ ಬಹುದೆಂಬ ನಿರೀಕ್ಷೆಯಿತ್ತೋ ಅದೀಗ ನಡೆದೇ ಹೋಯಿತು. ಪಾಕಿಸ್ತಾನದ ಮಿಲಿಟರಿ ಸರಕಾರವು ಪ್ರಜಾ ಪ್ರತಿನಿಧಿಗಳಿಗೆ ಅಧಿಕಾರವನ್ನು ಸಹಿಸಿಕೊಡುವುದಾಗಿ ನಂಬಿಸಿ, ಮೋಸಗೊಳಿಸಿ ತನ್ನ ಭದ್ರ ಮುಷ್ಟಿಯಲ್ಲಿ ಬಂಗ್ಲಾವನ್ನು ಆದುಮಿ ಹಿಡಿಯಲು, ಆದನ್ನು ಹಿಂಡಿ ಹಿಪ್ಪೆ ಮಾಡಲು ತನ್ನಬುದ್ಧಿ–ಸೈನಿಕ ಶಕ್ತಿಯನ್ನು ಒಳಸಿತು. ಬಂಗ್ಲಾ ಜನತೆಯಲ್ಲಿ ಸುಮಾರು ಒಂದು ಕೋಟಿಗೂ ಮಿಕ್ಕಿದವರನ್ನು ನಿರಾಶ್ರಿತರನ್ನಾಗಿ ಮಾಡಿ, ಅವರನ್ನು ನೆರೆಯ ಭಾರತಕ್ಕೆ ಓಡಿಹೋಗುವಂತೆ ಬಲಾತ್ಕರಿಸಿತು. ತನ್ನ ನರಮೇಧದ ಪೈಶಾಚಿಕ ತಾಂಡವದ ವಿರುದ್ಧ ಸೆಟೆದು ನಿಂತ ಬಂಗ್ಲಾ ದೇಶಿಯರನ್ನು ನಿರ್ನಾಮ ಮಾಡುವ ದೃಢ ಸಂಕಲ್ಪವನ್ನು ಪಾಕ್ ಸರಕಾರ ಮಾಡಿತ್ತು.

ಯೂಹ್ಯಾಖಾನರಿಗೆ ಭಾರತದೊಡನೆ ಆ ದೇಕೆ ಯುದ್ಧ ಬೇಕಾಯಿತೋ! ಬಂಗ್ಲಾ ನಿರಾಶ್ರಿತರ ಪುನರ್ವಸತಿಯೆಂದು ಭಾರತವೇ ಬಂಗ್ಲಾ ಪ್ರವೇಶ ಮಾಡ ಬಹುದೆಂದವರು ನಿರೀಕ್ಷೆಸಿ ನಿರೀಕ್ಷೆಸಿ ಸೋತರೆಂದು ತೋರುತ್ತದೆ. ಆದುದರಿಂದಲೇ ಭಾರತದ ಆಗರ್ತಲಾದ ಮೇಲೆ ಅವರು ಮೊದಲ ಧಾಳಿ ಮಾಡಿದರು ಆತ್ಮರಕ್ಷಣೆಗೆ ತೊಡಗಿದ ಭಾರತವು, ತನ್ನ ಮೇಲೆ ಆಕ್ರಮಣ ಮಾಡಿತೆಂದು ನೆಪವೊಡ್ಡಿ ಉತ್ತರಭಾರತದಹಲವಾರು ಮಿಲಿಟರಿ ಠಾಣೆಗಳ ಮೇಲೆ ಬಲವತ್ತರವಾದ ವಿಮಾನ ಧಾಳಿಯನ್ನು ಆರಂಭಿಸಿದರು. ಅಂದರೆ, ಬಂಗ್ಲಾ ಜನತೆಯೊಡನಿದ್ದ ತನ್ನ ಜಗಳವನ್ನೆವರು ಭಾರತದ ಮೇಲೆ ತಿರುಗಿಸಿದರು. ತನ್ನ ಮೇಲೆ ಹೇರಲಾದ ಸಮರಾಹ್ವಾನವನ್ನು ಭಾರತ ಆತ್ಮರಕ್ಷಣೆಗಾಗಿ ಸ್ವೀಕರಿಸಲೇ ಬೇಕಾಗಿ ಬಂದಿದೆ. ಭಾರತ ಸರಕಾರವು ಪಾಕಿನ ಸಮರೋತ್ಸಾಹಕ್ಕೆ ಸೂಕ್ತವಾದ ಪ್ರಮಾಣದಲ್ಲೇ ಉತ್ತರ ನೀಡಲು ತನ್ನ ಸೇನೆಗೆ ಆಜ್ಞಾಪಿಸಿದ್ದು ನ್ಯಾಯೋಚಿತವೇ. ಆದರಂತೆ ನಮ್ಮ ವೀರ ಯೋಧರು ಕರ್ತವ್ಯಪರಾಯಣರಾಗಿದ್ದಾರೆ.; ಯಶಸ್ವಿಗಳಿಸುತ್ತಿದ್ದಾರೆ. ಅವರಿಗೆ ಸಮಸ್ತ ಭಾರತೀಯರ ಹೃದಯಪೂರ್ವಕ ಶುಭಕಾಮನೆಗಳಿವೆ. ಸಕ್ಷ– ಸಂಗಡಗಳ ಭೇದವಿಲ್ಲದೆ ದೇಶವಿಡಿ ಏಕ ಪುರುಷನಂತೆ ಪಾಕ್ ದುರಾಕ್ರಮಣಕ್ಕೆ ಸೂಕ್ತ ಉತ್ತರ ನೀಡಿದ್ದಾರೆ.

ತಾನು ಆಕ್ರಮಣ ಮಾಡಿ, ಅವರ ಆರೋಪವನ್ನು ಭಾರತದ ಮೇಲೆ ಹೊರಿಸುವುದು ಪಾಕಿಸ್ತಾನದ ಜಾಯಮಾನಕ್ಕಂಟಿದ ರೋಗ. ಈ ನೊದಲಿನ ಮೂರು ಭಾರಿಯೂ ಅದು ಹೂಡಿದ ನಾಟಕವಿದೇ. ಅದರ ನಾಟಕಾಭಿನಯವನ್ನು ಅಪೆಂರಿಕೆಯು ಸತ್ಯವೆಂದು ಹಿಂದೆಯೂ ತಿಳಿದಿನೆ.; ಇಂದೂ ತಿಳಿಯುತ್ತದೆ. ಬಂಗ್ಲಾ ದೇಶದ ಸಮಸ್ಯೆಗೆ ರಾಜ್ಯಕೀಯ ಪರಿಹಾರವರಸಲು, ನಿರಾಶ್ರಿತರೆಲ್ಲರೂ ಸ್ವದೇಶಕ್ಕೆ ಮರಳುವಂತೆ ಶಾಂತ ವಾತಾವರಣ ನಿರ್ಮಿಸಲು ಯೂಹ್ಯಾಖಾನರಿಗೆ ಸೂಚಿಸಲು ಜಶಕ್ತರಾದ ಅಧ್ಯಕ್ಷ ನಿಕ್ಸನರು ಭಾರತಕ್ಕೆ ಬುದ್ಧಿ ಹೇಳುತ್ತಾರೆ; ಭದ್ರತಾ ಸಮಿತಿಯಲ್ಲಿ ಸಮರ ವಿರಾಮವಾಗಬೇಕು; ಉಭಯ ಸೇನೆಗಳು ವಾಪಸ್ಸಾಗಬೇಕೆಂದು ಕೇಳುತ್ತಾರೆ. ಭಾರತ–ಪಾಕಿಸ್ತಾನಗಳು ವಿವಾದವನ್ನು ಶಾಂತವಾಗಿ ಪರಿಹರಿಸಬೇಕೆಂದು ಸಲಹೆ ನೀಡುತ್ತಾರೆ. ಅವರ ಈ ಗೊತ್ತುವಳಿಯನ್ನು ನಾಗರಿಕ ರಾಷ್ಟ್ರಗಳು ಒಪ್ಪುತ್ತವೆ! ಆದರೆ ಯೂಹ್ಯಾಖಾನರು ಬಂಗ್ಲಾದ ನಾಯಕರೊಡನೆ ಮಾತುಕತೆ ನಡೆಸ ಬೇಕೆಂದವರು ಇಂದಿಗೂ ಒಪ್ಪವುದಿಲ್ಲ. ಸೋವಿಯತ್ತಿಂದೇ ವಸ್ತು ಸ್ಥಿತಿಯನ್ನು ತಿಳಿದುಕೊಂಡು ತನ್ನ ವಿಟೋಬಲದಿಂದ ಅಮೇರಿಕೆಯ ನಿರ್ಣಯವನ್ನು ಕಸವ ಬುಟ್ಟಿಗೆಸೆಯಿತು; ಆಕ್ರಮಣಕಾರರನ್ನೂ ಆಕ್ರಮಣಕ್ಕೊಳಗಾದವರನ್ನೂ ಏಕಶಮವಾಗಿ ಕಾಣುವ ಜಮೆರಿಕನ್ ನೀತಿ ನಮಗೇನೂ ಹೊಸತಲ್ಲ.

ಭಾರತ ಪಾಕಿಸ್ತಾನಗಳ ನಡುವೆ ಪೂರ್ಣ ಪ್ರಮಾಣದ ಯುದ್ಧ ನಡೆಯುತ್ತಿದೆ ಭಾರತಕ್ಕೆ ಪಾಕಿಸ್ತಾನದ ಒಂದಂಗುಲ ನೆಲದ ಮೇಲೆಯೂ ಆಸೆ ಇಲ್ಲ. ನಮ್ಮದು ಆತ್ಮರಕ್ಷಣೆಯ ಯುದ್ಧಕಂತ್ರ. ಆದುದರಿಂದ, ನಮ್ಮ ಸೇನೆ ಬಂಗ್ಲಾದೇಶವನ್ನು ಪ್ರವೇಶಿಸಿದೆ ಮುಕ್ತಿವಾಹಿನಿಗೆದು ಸಹಾಯ ಮಾಡುತ್ತಿದೆ. ಬಂಗ್ಲಾ ದೇಶದೊಳಗೆ ಹೊರಗಣಿಂದ ಶಸ್ತ್ರಾಸ್ತ್ರ ಸರಬರಾಜು ಆಗದಂತೆ ಎಚ್ಚರಿಕೆ ವಹಿಸುತ್ತಿದೆ. ಪಾಕಿನ ವಿಮಾನ ಧಾಳಿಗೆ ಪ್ರತಿಕ್ರಮವಾಗಿ, ಆತ್ಮರಕ್ಷಣೆಯ ದೃಷ್ಟಿಯಿಂದ, ಪಾಕ್ ಸೈನಿಕ ನೆಲೆಗಳನ್ನು ನಾಶ ಮಾಡಲು ಮುಂದುವರಿದಿದೆ. ಇದು ಅನಿವಾರ್ಯ ಪುತ್ತು ಆವಶ್ಯಕ. ಬಂಗ್ಲಾದೇಶದಲ್ಲಿ ಯೂಹ್ಯಾಖಾನರು ತಂದುಕೊಂಡ ಬಿಕ್ಕಟ್ಟು, ಮತ್ತವರು ಆರಂಭ ಮಾಡಿದ ಸಾಮೂಹಿಕ ನರಮೇಧ, ಇದರಿಂದ ನಿರಾಶ್ರಿತರ ಪ್ರವಾಹ ಹಾಗೂ ಭಾರತದ ಆರ್ಥ ವ್ಯವಸ್ಥೆಯ ಮೇಲೆ ಬೀರಿದ ದುಷ್ಪರಿಣಾಮಗಳನ್ನು ಭಾರತವು ಒಂದಲ್ಲ ಹಲವು ಬಾರಿ ನಾಗರಿಕ ಜಗತ್ತಿನ ಮುಂದೆ ತೋಡಿಕೊಂಡಿದೆ. ಕಳೆದ ತಿಂಗಳ ಆದಿಯಲ್ಲಿ ಸ್ವಯಂ ಪ್ರಧಾನಿಯವರೇ ಲಂಡನ್–ವಾಷಿಂಗಟನ್ನುಗಳನ್ನು ಭೆಟ್ಟಿಮಾಡಿ ಸಮಸ್ಯೆಯ ತೀವ್ರತೆಯನ್ನು ಮತ್ತೊಮ್ಮೆ ವಿಶದೀಕರಿಸಿದರು ಆದರೂ ಪಾಕ್ ಪಾಕೆದ ಗೀಟು ದಾಟಲು ಅವರೆಡೂ ಶಕ್ತವಾಗಲಿಲ್ಲ. ಆದುದರಿಂದ ಇದೀಗ ಭಾರತ–ಪಾಕ್‌ಗಳು ಹೋರಾಡುವಾಗ ಅವುಗಳ ಮಧ್ಯೆ ವಿದೇಶಗಳು ಪ್ರವೇಶಿಸಬಾರದು. ಹಾಗೆಂದರೆ, ಸಮಸ್ಯೆ ಬೇಗನೇ ಪರಿಹಾರಗೊಳ್ಳುತ್ತದೆ. ಅದು ಬಿಟ್ಟು ವಿದೇಶಗಳು ಪಾಕಿಸ್ತಾನಕ್ಕೆ ನೆರವು ನೀಡಲು ಮುಂದೆ ಬಂದರೆ, ಇದು ಉಪಖಂಡದ ಸಮರವಾಗಿ ಉಳಿಯುವುದಿಲ್ಲ; ಅದು ವಿಶ್ವ ಸಮರವಾಗಿ ಪರಿಣಮಿಸೀತು. ಬಂಗ್ಲಾದ ಪ್ರಜೆಗಳಿಗೆ ಮಾನವ ಸಹಜ ಅಧಿಕಾರವನ್ನು ಕೊಡಲು ಒಪ್ಪದ ಯೂಹ್ಯಾಖಾನರನ್ನು ಬೆಂಬಲಿಸುವವರನ್ನು ನಾಗರಿಕರೆಂದು ಕರೆಯುವುದಾದರೆ, ಪ್ರಜಾತಂತ್ರದ ಪ್ರಬಲ ಸಮರ್ಥಕರೆಂದು ಹೆಸರಿಸುವುದಾದರೆ, ನಾಗರಿಕತೆ–ಪ್ರಜಾತಂತ್ರಗಳೆಂಬ ಪದಗಳಿಗೆ ಹೊಸ ಅರ್ಥವನ್ನೇ ಬರೆಯಬೇಕಾಗುತ್ತದೆ. ಪಾಕಿಸ್ತಾನವು ಇನ್ನು ಮುಂದಾದರೂ ಭಾರತದೊಡನೆ ಉತ್ತಮ ನೆರೆಹೊರೆಯನ್ನು ಸ್ಥಾಪಿಸಲು ಮುಂದೆ ಬಂದೀತೆ? ಈ ಸಮರದ ಫಲ ಮತ್ತೊಂದು ತಾಷ್ಕೆಂಟ್ ಆಗಬಾರದು; ಪಾಕ್ ಅಪಪ್ರಚಾರಕಿಗಳಿಗೆ ಎಂದಿಗೂ ಮರೆಯದ ಪಾಠವಾಗ ಬೇಕು. ಇದಕ್ಕೆ ದೇಶಕ್ಕೆ ದೇಶವೇ ಸಿದ್ಧವಾಗಿ ನಿಂತಿದೆ.

ಯುವಕರ ಭಾವತೀವ್ರತೆ

ಇಂಡಿಕೇಟಿನ ಅಧ್ಯಕ್ಷ (ಪ್ರಾ) ಶ್ರೀ ದೇವರಾಜ ಅರಸರು ವಿದೇಶ ಸಂಚಾರದಿಂದ ಮರಳಲಿದ್ದಾರೆ ಎಂಬಷ್ಟರಲ್ಲಿ ಎರಡು ಪರ್ಥನೆಗಳು ನಡೆದು ಹೋದುವು ಮೊದಲನೆಯದಾಗಿ ಪಕ್ಷಾಂತರಿಗಳಿಗೆಲ್ಲ ಸಾಮೂಹಿಕವಾಗಿ ಪಕ್ಷದ ಸಕ್ರಿಯ ಸದಸ್ಯತನ ನೀಡುವ ನಿರ್ಣಯವನ್ನು ಕಾರ್ಯಕಾರಿ ಸಮಿತಿಮೂಡಿದ್ದು. ಎರಡನೆಯದಾಗಿ, ಪಕ್ಷೀಯ ಯುವಕರು ಈ ನಿರ್ಣಯದ ವಿರುದ್ಧ ಕಾರ್ಯಾಲಯವನ್ನು ತಮ್ಮ ವಶಪಡಿಸಿಕೊಂಡದ್ದು. ಶ್ರೀ ಅರಸರು ವಾಪಸಾದ ನಂತರ, ಏನೇನೋ ಸಮಜಾಯಿಷಿ ಹೇಳಿ ತಮ್ಮ ಕಾರ್ಯಾಲಯವನ್ನವರು ಹೊಕ್ಕರೂ ಪರಿಸ್ಥಿತಿ ಸಮತೋಲಕ್ಕೆ ಬರಲಾರದೆನಿಸುತ್ತದೆ. ರಾಜ್ಯಕೀಯ ಸ್ವಾರ್ಥ ಸಾಧಕರಿಗೆ ಸ್ವಾಗತ ನೀಡುವುದು ಅವಾಯ'ವೆಂಬ ಪವಿತ್ರಗುರಿಯಿಂದ ಈ ವಿರೋಧ ವ್ಯಕ್ತವಾದ್ದಾದರೆ ಅದು ಸ್ವಾಗತಾರ್ಹ ಶುಭ ಚಿಹ್ನೆ. ಆದರೆ ಯುವಕರ ಮನೋಧರ್ಮ ಈ ಉದ್ದೇಶದಿಂದ ಕೂಡಿದೆಯೆನ್ನುವುದಕ್ಕಿಂತಲೂ ತಾವು ಕ್ರಾಂತಿಪ್ರಿಯರೆಂಬ ಹೆಗ್ಗಳಿಕೆ ತೋರಿಸುವ ಪ್ರವೃತ್ತಿಯೇ ಬಲೀಯಸವಿತ್ತೆಂದು ಹೇಳಬೇಕಾಗುತ್ತದೆ. ಇಲ್ಲವಾದರೆ, ಇದೇ ಯುವಕರು ಸಿಂಡಿಕೇಟಿನ ಕಾರ್ಯಾಲಯವನ್ನು ಆಕ್ರಮಣಮಾಡಬೇಕಾಗಿರಲಿಲ್ಲ. ಅವರ ಸ್ಫೂರ್ತಿದಾತೆ ಶ್ರೀಮತಿ ಇಂದಿರಾಗಾಂಧಿಯವರು 'ಬಲಾತ್ಕಾರ ಪ್ರವೇಶ'ವನ್ನು ಮೆಚ್ಚದಿರುವಾಗ, ಈ ಆಕ್ರಮಣ ಪ್ರವೇಶವ ಗುರಿಯೇನು ಎಂಬುದು ತಿಳಿಯುವುದಿಲ್ಲ. ಯುವಕರಿಗೆ ಮೂರಲ್ಲೆರಡು ವಿಧಾನ ಸಭಾ ಸ್ಥಾನಗಳನ್ನು ಕೊಡಬೇಕೆಂಬ ಈ ಯುವಕರ ಭಾವತೀವ್ರತೆಯು ಎಲ್ಲರಿಗೂ ತಿಳಿಯುತ್ತದೆ; ಆದರೂ ತೀವ್ರ ಭಾವನೆಗಳಿಗೆ ಒಳಗಾಗಿ ಅನ್ಯಾಯವನ್ನು, ಆಕ್ರಮವನ್ನು ಅವರು ಅನುಸರಿಸುವುದಾದರೆ, ಕಾನೂನನ್ನು ತಮ್ಮ ಕೈಯಲ್ಲೆ ತೆಗೆದುಕೊಳ್ಳುವುದಾದರೆ, ಇದರ ಪರಿಣಾಮ ಭೀಕರವಾಗನುಳಿದೀತೆ? ಯುವಕರು ತಮ್ಮ ಅಸೀಮ ಶಕ್ತಿಯನ್ನು, ಕ್ರಾಂತಿಕಾರಿ ಮನೋಧರ್ಮವನ್ನು ರಚನಾತ್ಮಕ ಕಾರ್ಯಗಳಲ್ಲಿ ನಿಯೋಗಿಸಿದರೆ ಅವರಿಗೂ ದೇಶಕ್ಕೂ ನೆಮ್ಮದಿ ತರುತ್ತದೆ ವೈಧಾನಿಕ ಕ್ರಮಗಳಿಗೆ ಗೌರವ ಲಭಿಸುತ್ತದೆ.

●●

ಕೋಟೀಶ್ವರದಲ್ಲಿ ಗೀತಾ ಜಯಂತಿ

ಕೋಟೀಶ್ವರ ಸಂಸ್ಕೃತ ಪಾಠಶಾಲೆಯ ಸಂಸ್ಕೃತ ಭಾಷಾ ಪ್ರಚಾರಕ ಸಮಿತಿಯ ನೇತೃತ್ವದಲ್ಲಿ ತಾ 29.11.71ರಂದು ಗೀತಾ ಜಯಂತಿ ಸಮಾರಂಭವು ಭಂಡಾರ್‌ಕಾರ್ಸ್ ಕಾಲೇಜಿನ ಪ್ರಾಧ್ಯಾಪಕ ಶ್ರೀ ಹಯವದನ ರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯ ಕ್ರಮಗಳಿಂದ ಯಶಸ್ವಾಗಿ ನೆರವೇರಿತು. ಭಂಡಾರ್‌ಕಾರ್ಸ್ ಕಾಲೇಜಿನ ಪ್ರಾಧ್ಯಾಪಕ ಶ್ರೀ ನಾವಡರು ಗೀತೆಯ ಕುರಿತು ಮೂತನಾಡಿದ ಮೇಲೆ ನಿಯೋಜಿತ ಭಾಷಣಗಾರರಾದ ಭದ್ರಾವತಿಯ ವಕೀಲ್ ಬಡಕ್ಕಿಲ ಕೃಷ್ಣ ಭಟ್ಟರು ಗೀತೆಯ ತಿರುಳನ್ನು ವಿವರಿಸಿದರು. ಅಧ್ಯಕ್ಷರ ಭಾಷಣದ ನಂತರ ಪ್ರಸಾದ ವಿತರಣೆಯೊಯಿತು.

ಆರಂಭದಲ್ಲಿ ಸಂಚಾಲಕ ಕೆ. ವೆಂಕಟ್ಟಕೃಷ್ಣ ವರ್ಣ ಅವರು ಸ್ವಾಗತಿಸಿ ಅಂತ್ಯದಲ್ಲಿ ಧನ್ಯವಾದಗಳರ್ಪಿಸಿದರು. ವೇಪ ಘೋಷ ವರದಿ ವಾಚನಗಳಲ್ಲದೆ ಭದ್ರಾವತಿಯ ಕುಮಾರಿ ಕೋಭಾ ಅವರಿಂದ ದೇವರ ನಾಮ ಸಂಕೀರ್ತನೆ ನಡೆಯಿತು.

'ನವಯುಗ'ದ ಹೊನ್ನ ಹಬ್ಬದ ಸಿದ್ಧತೆ

1921ರಲ್ಲಿ ದಿ ಎ ಜಿ. ಶೆಟ್ಟರಿಂದ ಸ್ಥಾಪಿತವಾಗಿ ಹಲವು ಏಳುಬೀಳುಗಳ ನಡೆಗೆ ಶ್ರೀ ಕೆ. ಕೆ. ಶೆಟ್ಟಿ, ಶ್ರೀ ಎಂ.ವಿ. ಹೆಗ್ಡೆ, ಮೊದಲಾದವರ ಸಹಯೋಗದಿಂದ ನಾಡಿನ ವಾರಪತ್ರಿಕೆಗಳಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿ ಉಳಿಸಿಕೊಂಡು ಬಂದಿರುವ ನವಯುಗ ವಾರಪತ್ರಿಕೆಯ ಚಿನ್ನದ ಹಬ್ಬವನ್ನು 1972ನೇ ಎಪ್ರಿಲ್ ತಿಂಗಳಲ್ಲಿ ಆಚರಿಸಬೇಕೆಂದು ಯೋಚಿಸಲಾದ ವಿಷಯವನ್ನು ಸುವರ್ಣ ಮಹೋತ್ಸವ ಸಮಿತಿಯ ಅಧ್ಯಕ್ಷ ಶ್ರೀ ಎಂ. ಮಧ್ವರಾಜರು ತಾ. 1–12–71ರಂದು ತಮ್ಮ "ಸ್ವಾಗತಮ್" ನಿವಾಸದಲ್ಲಿ ಜರಗಿದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಆರಂಭದಲ್ಲಿ ಪತ್ರಿಕೆಯ ಸಂಚಾಲಕ ಸಂಪಾದಕ ಶ್ರೀ ಕೆ. ಹೊಸ್ಸಂಯ್ಯ ಶೆಟ್ಟರು ಮೂತನಾಡಿ :"ನವಯುಗ"ದ ಸ್ಥಾಪನೆ, ಬೆಳವಣಿಗೆ ಅದು ನಾಡಿಗೆ ಸಲ್ಲಿಸಿರುವ ಸೇವೆ ಮೊದಲಾದವನ್ನು ವಿವರಿಸಿ ಮುಂದಕ್ಕೂ ಆದರ ಉಳಿವಿಗಾಗಿ ಸುವರ್ಣೋತ್ಸವ ನಿಧಿಯನ್ನು ಸಂಗ್ರಹಿಸುವ ಯೋಜನೆ ಇದೆಯೆಂದರು.

ಶ್ರೀ ಮಧ್ವರಾಜರು ಮೂತನಾಡುತ್ತಾ, "ನವಯುಗ"ವು 50 ವರ್ಷಗಳ ಇರಂತರ ಸೇವೆ ಗೈದುದು ಹೆಮ್ಮೆಯ ವಿಚಾರವೆಂದೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅದು ಪ್ರಮುಖ ಪಾತ್ರವಹಿಸಿರುವುದೆಂದೂ, ಇದರ ಚಿನ್ನದ ಹಬ್ಬವನ್ನು ಯೋಗ್ಯರೀತಿಯಲ್ಲಿ ಜರಗಿಸಬೇಕೆಂದು ಈಗಾಗಲೇ ಸಮಿತಿಯೊಂದನ್ನು ರಚಿಸಲಾಗಿದೆಯೆಂದೂ ತಿಳಿಸಿದರು. ಸುವರ್ಣೋತ್ಸವ ಸಂದರ್ಭದಲ್ಲಿ ಸುಮಾರು 300 ಪುಟಗಳ ವಿಶಿಷ್ಟರೀತಿಯ ಸ್ಮರಣ ಸಂಚಿಕೆಯನ್ನು ಪ್ರಕಟಿಸಲಾಗುವುದೆಂದೂ ಇದಕ್ಕೆ ಪ್ರಸಿದ್ಧ ಕವಿಗಳಾದ ಶ್ರೀ ಕೈಯೂರ ಕಿಷ್ಣಾಣ್ಣ ರೈ ಯವರು ಆತಿಥಿ ಸಂಪಾದಕರಾಗಲು ಒಪ್ಪಿರುವರೆಂದೂ ಇದಕ್ಕೆ ಸಾರ್ವಜನಿಕರ ಸಹಕಾರ ಅವಶ್ಯಕವೆಂದರು. ಚಿನ್ನದ ಹಬ್ಬದ ಸಮಾರಂಭದ ಆಚರಣೆಗಾಗಿ ಈ ಕೆಳಗಿನ ಸಮಿತಿಯನ್ನು ರಚಿಸಲಾಗಿದೆ:

ಅಧ್ಯಕ್ಷರಾಗಿ ಶ್ರೀ ಎಂ. ಮಧ್ವರಾಜ್, ಉಪಾಧ್ಯಕ್ಷರುಗಳಾಗಿ ಶ್ರೀಗಳಾದ ಪಿ. ಎಸ್. ಆಚಾರ್ಯ, ಡಾ। ಬಿ.ಪಿ. ಶೆಟ್ಟಿ, ಎಂ ಸುಂದರ ರಾವು ಶೆಟ್ಟಿ, ಬಡಕ್ಕಿಲ ಕೃಷ್ಣ ಭಟ್, ಕೋಣಾಧಿಕಾರಿಯಾಗಿ ಶ್ರೀ ವಿ.ಕೆ. ಶೆಟ್ಟಿ, ಕಾರ್ಯದರ್ಶಿಗಳಾಗಿ ಕು.ಶಿ. ಹರಿದಾಸ ಭಟ್, ಎ.ಜೆ. ಆಲ್ವೆ, ಸದಸ್ಯರಾಗಿ ಡಾ। ಕೆ. ಎಂ. ರೈ, ಬಿ ನಾರಾಯಣ ನಾಯಕ್,ಡಾ। ಕೆ. ನಾಗಪ್ಪ ಆಳ್ವ, ಟಿ ರಮೇಶ ಪೈ, ಎನ್. ಮೋಹನದಾಸ ಆಚ್ಯುತಾಯ, ವಿದ್ವಾನ್ ಕಯ್ಕೂರ ಕಿಷ್ಣಾಣ್ಣ ರೈ, ಬಿ. ನಾರಾಯಣ ಶೇಕ, ವಿಯರ್ ಲಕ್ಷ್ಮೀನಾರಾಯಣ ಆಳ್ವ, ಡಾ। ವಿ.ಕೆ. ಮೂರ್ಲ, ಡಾ। ಕೆ ಬಾಳಪ್ಪ ಶೆಟ್ಟಿ, ಡಾ। ಪಿ. ಗುರುರಾಜ ಭಟ್.

ಪತ್ರಿಕಾ ಗೋಷ್ಠಿಯ ಅಂತ್ಯದಲ್ಲಿ ಸಮಿತಿಯ ಕಾರ್ಯದರ್ಶಿ ಶ್ರೀ ಎ ಜಿ. ಆಲ್ವೆಯವರು ಧನ್ಯವಾದಗಳನ್ನರ್ಪಿಸುತ್ತಾ ಸರ್ವರ ಸಹಕಾರ ಕೋರಿದರು. ●

ಮುಂದು

ಗೇಹರಾಜ್ಯದಲ್ಲಿ

ಹಗಲನ್ನೇ ಹಗಲೆನ್ನದ ಧೀಮರು

'ಏ, ನೋಡಿದ್ಯೇನೆ?'

'ಏನು?'

'ಮತ್ತಿನ್ನೇನೂಂತ? ಪಾಕಿಸ್ತಾನ ಭಾರತದ ಮೇಲೆ ಯುದ್ಧ ಘೋಷಿಸಿಯೇ ಬಿಟ್ಟಿತು.'

'ಯುದ್ಧ ಘೋಷಿಸಲಿಲ್ಲ. '

'ಇನ್ನು ಘೋಷಣೆ ಯಾಕೆ? ಮಾಡಲು ಆರಂಭಿಸಿದ ಮೇಲೆ .'

'ಅಂದ್ರೆ?'

'ಪಾಕಿಸ್ತಾನವು ಭಾರತದ ಮೇಲೆ ವಿಮಾನಗಳಿಂದ ಆಕ್ರಮಣ ಮಾಡಿತು, ಬಾಂಬು ಪಾಳಿ ನಡೆಸಿತು.'

'ಓ, ಹಾಗೆ ...ಅಲ್ಲ, ಎಲ್ಲಿ?'

'ಎಲ್ಲೀಂತೇನು? ರಾಜಸ್ಥಾನ, ಪಂಜಾಬಗಳ ನಮ್ಮ ಸೈನಿಕ ನೆಲೆಗಳ ಮೇಲೆ—ಆ ವೃತಸರ, ಸಿಯೊಲ್ ಕೋಟ್ .'

'ಓ ...'

'ಇವರು ಆಗ್ರಾದ ತನಕವೂ ಒಂದಿದ್ದಾರೆ .'

'ಅಂದರೆ ಯುದ್ಧಾರಂಭವಾಯಿತೆಂದೇ ಅರ್ಥ ಇದನ್ನು ಆರಂಭಿಸಿದವರು ಪಾಕಿಸ್ತಾನಿಗಳೆಂಬುದೂ ಹಗಲಿನಷ್ಟು ಸ್ಪಷ್ಟ .'

'ಹ್ಞೂಂ ಆಕ್ರಮಣ ಆರಂಭವಾದದ್ದು ಮೂರನೇ ತಾರೀಕು ಸಂಜೆ ಸಮಾರು ಐದೂವರೆ ತಾಸಿನ ಹೊತ್ತಿಗೆ '

'ಆಮೇಲೆ?'

'ಆಮೇಲೇನು? ನಮ್ಮ ವಿಮಾನ ಸೇನೆಯೂ ಸುಮ್ಮನುಳಿಯಲಿಲ್ಲಾನ್ನು.ಕೆಲವೊಂದು ವಿಮಾನಗಳನ್ನು ಕಡೆದುರುಳಿಸಲಾಯ್ತು ನಮ್ಮ ರಾಡಾರ್ ಕೇಂದ್ರವನ್ನು ಕೆಡಿಸಲು ಶತ್ರುಗಳು ಮಾಡಿದ ಮೊದಲ ಪ್ರಯತ್ನವನ್ನೇ ನಸ್ಪಗೊಳಿಸಲಾಯ್ತು ..'

'ಹ್ಞೂಂ ಅದು ಸರೀನ್ನಿ ನಾವು ಬಯಸದಿದ್ದರೂ ಕರೆಯದಿದ್ದರೂ ಯೂಹ್ಯಾಖಾನರು ಯುದ್ಧವನ್ನೇ ಆರಂಭಿಸಿದರು ..'

'ಕೆಲವು ದಿನಗಳ ಮೊದಲೇ ಅವರು ಹೇಳಿದ್ದಾರಲ್ಲ -ಹತ್ತು ದಿನಗಳೊಳಗೆ ಯುದ್ಧ ಸಂಭವವೆಂದು ಭಾರತ—ಪಾಕಿಸ್ತಾನಗಳ ಸಂಬಂಧ ರಿಪೇರಿ ಮಾಡಲಾಗದಷ್ಟು ಕೆಟ್ಟಿದೆ ಅಂತ

'ಅದ್ಯಾಕೆ ಹೇಳ್ತೀರಿ? ಜಯಪ್ರಕಾಶ ನಾರಾಯಣರು ಬಂಗ್ಲಾ ಪ್ರಶ್ನೆಗೆ ಯುದ್ಧವೊಂದೇ ಪರಿಹಾರವೆಂದು ಆರು ತಿಂಗಳಿಗೆ ಮೊದಲೇ ಹೇಳಿದ್ದಾರೆ.. .'

'ಹೌದೂನ್ನು. ಆದರೆ, ಇದನ್ನು ನಾವಾಗಿ ಆರಂಭಿಸಬಾರದು ನಮ್ಮದು ಆಕ್ರಮಣಕಾರ ದೇಶವಾಗಬಾರದು. ಆತ್ಮ ರಕ್ಷಣಾಕಾರ ದೇಶವಾಗಬೇಕೆಂದು ಬಯಸಿದೆವು '

'ಆಯ್ತಲ್ಲ, ಇನ್ನಾದರೂ ಆತ್ಮ ರಕ್ಷಣೆಯ ಹೆಸರಿನಲ್ಲಿ ಪಾಕಿಸ್ತಾನಕ್ಕೆ ಬುದ್ಧಿ ಕಲಿಸಿ ಬಿಡಬಹುದಲ್ಲಾ .'

'ಬಿಡದಿರುವುದು ಹೇಗೆ ಸಾಧ್ಯ?'

'ಅಲ್ರಿ, ಇದರಲ್ಲಿ ಅಮೇರಿಕದ ಪಾತ್ರವೇನು?'

'ಅದೇನನ್ನುವುದು? ಅದರ ದೃಷ್ಟಿಯಲ್ಲಿ ಭಾರತದ್ದೇ ಅಪರಾಧ ಭಾರತ ಸಮಸ್ಯಾ ಪರಿಹಾರಕ್ಕೆ ಸಹಾಯಕವಾಗುವ ಉಪಕ್ರಮಗಳನ್ನು ಒಪ್ಪುವುದಿಲ್ಲ ...'

'ಅವರ ಉಪಕ್ರಮವೆಂದರೆ?'

'ಗಡಿಯಿಂದ ಸೇನೆ ಹಿಂದೆ ಕರೆದುಕೊಳ್ಳುವುದು—ಮೂರನೆಯವರ ಮಧ್ಯಸ್ಥಿಕೆಗೆ ಗಡಿಯಲ್ಲಿ ಅವಕಾಶ ಕೊಡುವುದು .

'ಅಲ್ರಿ, ಗಡಿಯಲ್ಲಿ ಮಧ್ಯಸ್ಥಗಾರರು ಗೇನು ಕೆಲಸ? ಬಂಗ್ಲಾದಿಂದ ಬಂದ ಆನಾಥನನ್ನು ನಿಜವಾದ ಶರಣಾರ್ಥಿಗಳೇ ಅಲ್ಲವೇ ಎಂದು ಪರೀಕ್ಷಿಸುತ್ತಾರೆಯೇ ಅವರು? ಇದು ಭಾರತ— ಪಾಕ್ ಗಡಿ ವಿವಾದವೇ ಅಲ್ಲವಲ್ಲ?'

'ಅಲ್ವೆ, ನಿನಗಿರುವಷ್ಟಾದರೂ ಬುದ್ಧಿ ಸಿಕ್ಸಸ್ಥರಿಗಿದ್ದಿದ್ದರೆ, ಅವರು ಯೂಹ್ಯಾಖಾನರನ್ನು ಸರದಾರಿಗಾದರೂ ತರುತಿದ್ದರು, ಇಲ್ಲವೇ ಅವರ ತಳ್ಳಿಯನ್ನಾದರೂ ಬಿಟ್ಟುಬಿಡುತಿದ್ದರು. ..'

'ನಾಕು ಬಿಡೀಂದ್ರೆ . ನಿಕ್ಸನ್ನರಿಗೇನೂ ಬುದ್ಧಿಭ್ರಮೆಯೊಗಿಲ್ಲ .."

'ಮತ್ತವರಿಗೆ ಹಗಲನ್ನು ಹಗಲೆನ್ನಲು ಸಂಕೋಚವೇಕೆ?'

'ನೋಡಿ ನಿದ್ದೆ ಬಂದವರನ್ನು ಎಬ್ಬಿಸಬಹುದು; ಆದರೆ ನಿದ್ದೆ ಬಂದವರಂತೆ ನಟಿಸುವವರನ್ನು? ಹಾಗೇನೇ ಹಿಂದಿನಿಂದಲೂ ಅಮೆರಿಕೆ ಪಾಕಿಗಳ ಪಕ್ಷಪಾತಿ ಅಮೆರಿಕೆಯ ತಾಳಕ್ಕೆ ಸರಿಯಾಗಿ ಕುಣಿಯಲು ಭಾರತ ಇದುವರೆಗೂ ಸಿದ್ಧವಾಗಿಲ್ಲ .'

'ಅದು ಸರೀನ್ನು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರಗಳನ್ನು ಧಾರಾಳವಾಗಿ ಸರಬರಾಜು ಮಾಡುತ್ತಿದೆಯಂದು. ಬೇಕಾದರೆ ಹಿಂದಿನ ಒಪ್ಪಂದದಂತೆ ಎಂದೋ ಹಿಂದೆ ನೀಡಿದ ಲೈಲನ್ಸ್ ಎಂದೋ ಹಿಂದಿನ ತಾರೀಕು ಹಾಕಿ ವಿಪುಲ ಸೈನಿಕ ನೆರವು ನೀಡುತ್ತದೆ ಆ

(ಒಂಭತ್ತನೇ ಪುಟ ನೋಡಿರಿ)

ಪುತ್ತೂರು ಮುನ್ಸಿಫ್ ಕೋರ್ಟ್‌ನಲ್ಲಿ

Ex 835/70 O. S. 607/67

ಕೆ. ಈಶ್ವರ ಭಟ್ಟ —ಅರ್ಜಿದಾರ.

A.S. ಅಬ್ದುಲ್ ಕುಂಞ —ಎದ್ರಿ

ಸುಳ್ಯ ತಾಲೂಕು ಪಾಲ್ಚೂರು ಗ್ರಾಮದ ಮಮ್ಮುಂಞ ಬ್ಯಾರಿಗಳ ಮಗ A.S ಅಬ್ದುಲ್ ಕುಂಞಾಯನವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಅರ್ಜಿದಾರನು ನಿಮ್ಮ ಸ್ವಿರಾಸ್ತಿಯ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ 1971 ದಶಂಬರ ತಿಂಗಳು 15ನೇ ತಾರೀಕು ನಿಶ್ಚೈಸೋಣಾಗಿದೆಯೆಂತ ನಿಮಗೆ ಇದರಿಂದಖಿಳಿಸೋಣಾಗುತ್ತದೆ ಅಲ್ಲದೆ, ಅರ್ಜಿದಾರನು ಸ್ವಿರಾಸ್ತಿ ಏಲಂಗೆ ನಿಲ್ಲಲು, ಪರ್ಮಿಶನನ್ನು ಕೇಳಿಕೂಡ ಅರ್ಜಿ ಮಾಡಿರುತ್ತಾನೆ.

(By Order)

Venkatramana B. N.

Advocate for Petitioner.

ಪುತ್ತೂರು, 28-11-71.

ನೋಟೀಸು

ಪುತ್ತೂರು IInd ಎಡಿಶನಲ್ ಮುನ್ಸಿಫ್ ಕೋರ್ಟ್‌ನಲ್ಲಿ

Exc 334/70 (O. S. 313/50)

ರಾಮಕೃಷ್ಣಯ್ಯ —ಅರ್ಜಿದಾರ.

ಕುಂಞಮ್ಮ ಕೂಪಾ —ಎದ್ರಿರು

3ನೇಎದ್ರಿ:- ಗೋಪಾಲ-ವೀರಪ್ಪ ಗೌಡರ ಮಗ—ಕಡಿಯದ್ಕಾವರ ಗ್ರಾಮ, ಬೆಳ್ತಂಗಡಿ ತಾಲೂಕು.

ಸದ್ರಿ 3ನೇ ಎದ್ರಿಗೆ ಕೋರ್ಟು ಹ್ಯುಂ ಪ್ರಕಾರ ಈ ಮೂಲಕ ತಿಳಿಯ ಪಡ್ಸಿಸುವುದೇನೆಂದರೆ—

ನಿಮ್ಮ ಹಕ್ಕಿನ ಪುತ್ತೂರು ಕಸಬೆಯ ಸ್ವಿರಾಸ್ತಿ ಜಪ್ತಿ ಮಾಡಿದ ಬಾಬ್ತು ನಿಮ್ಮ ಪ್ರೋಹಿಬಿಟರಿ ಒರ್ಡರ ನೋಟೀಸಿನ ಬಗ್ಗೆ ತಾರೀಕು 3-1-72ಕ್ಕೆ ಇಟ್ಟಿರುತ್ತದೆ ಸದ್ರಿ-ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಪರಿಸಿತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ವಾ ಮಾಡಿಯುಕ್ತ ಕಂಡಂತೆ ತೀರ್ಮಾನಿಸಲಾಗುವುದು

Sd/- M. Rammohan Rao.

Advocate for Petitioner.

Puttur, 3-12-71.

WARNING

Registered and Renewed Trade Mark No.227,278.



IT IS HEREBY MADE KNOWN TO ALL TO WHOM IT MAY CONCERN that the Trade Mark represented above has been duly registered on All India Basis under the Trade and Merchandise Marks Act, 1958 under Registration No.227,278 in class 19 in respect of Tiles (not of metal); ridge tiles (not of metal) and bricks in the name of our below mentioned clients:

KARNATAKA INDUSTRIES
Post Box No 4, CHIKKANSAL ROAD.
COONDAPOOR, South Kanara

The aforesaid registration is absolute, being without any disclaimers, limitations or conditions and has also been renewed and is now in force.

Notice is hereby given that the use by any other person, firm or company of the above trade mark and / or any mark identical with or deceptively similar to the above trade mark upon or in relation to the goods enumerated above will constitute an infringement of our clients' exclusive statutory right to the use of the said trade mark under the above registration and our clients will forthwith institute appropriate proceedings, civil criminal or both against such person, firm or company and also recover exemplary damages and costs thereof.

L. R. SWAMI CO.,
Trade Mark and Patent Attorneys,
Teynampet, MADRAS—18.
Phone: 443629

Branches: Madhurai—1, Trichy—2, & Bangalare—2 A.

ಆರ್ಬಿಟ್ರೇಟರ ವಿ|| ಆರ್. ಜಿ. ಗಾಂವಕಾರ, ಬಿ ಎ., ಎಲ್‌ಎಲ್ ಬಿ ಇವರ ಪಂಚಾಯತ ಕೋರ್ಟ್‌ನಲ್ಲಿ

ಪಂಚಾಯತ ದಾವಾ ನಂ.

A B N/3750/1/69

ಅಘನಾಶಿನಿ ತೀರದ ಮೀನುಗಾರರ ಸಹಕಾರಿ ಸಂಘ ಲಿಮಿಟೆಡ್ - ಮೂಡಂಗಿ, ಹೊಸ್ಕ ತಡಪಿ, ಜಿಲ್ಲಾ—ಉತ್ತರ ಕನ್ನಡ —ವಾದಿ

ವಿರುದ್ಧ

೧—ಮಹಮ್ಮದ ಕುಟ್ಟಿ ಅಲ್ಲಿ ಪ್ರಾಯ 31 ಕುಂದಾಪುರ, ಕೋಡಿ-ಕುಂದಾಪುರ ದಕ್ಷಿಣ ಕನ್ನಡ.

೨:—ಫಕೀರಬ್ಬ ಕುಟ್ಟ ಅಲ್ಲಿ ಪ್ರಾಯ 32 ಕುಂದಾಪುರ, ಕೋಡಿ -ಕುಂದಾಪುರ ದಕ್ಷಿಣ ಕನ್ನಡ —ಪ್ರತಿವಾದಿರು

ದಾವಾ ಆಕಾರ ರೂಪಾಯಿ 2856.51

ಪ್ರತಿ ವಾದಿಯರಾದ ನಿಮಗೆ ಈ ಸಮನ್ಸು ಮೂಲಕ ತಿಳಿಸುವದೇನಂದರೆ:. ನಿಮ್ಮ ವಿರುದ್ಧ ಮೇಲೆ ಕಾಣಿಸಿದ ವಾದಿ ಸೊಸ್ಯಾಟಿಯವರು ನಮ್ಮ ಕೋರ್ಟ್‌ನಲ್ಲಿ ಪಂಚಾಯತ ದಾವಾ ನಂಬರ ABN/3750/1/69ನೇದನ್ನು ನಡಾಯಿರುತ್ತಾರೆ. ನಿಮಗೆ ಈ ಹಿಂದೆ ಎರಡು ಸಾರೆ ಟಪಾಲು ದ್ವಾರ ರಜಿಸ್ಟರ ಮಾಡಿ ಕಳಿಸಿದಾಗ್ಯೂ ಊರಲ್ಲಿ ಇಲ್ಲವೇನಾ ಪರತ ಬಂದಿರುತ್ತದೆ ಕಾರಣ ನಿಮಗೆ ಈ ರೀತಿ ಜಾಹೀರ ಸಮನ್ಸು ನೂಡಿಯದೆ

ಸದರ ದಾವೆಯನ್ನು ತಾರೀಕು 18-12-71 ನೇಗೆ ವಾದಿ ಸೊಸ್ಯಾಟಿ ಆಫೀಸ ಮೂಡಂಗಿಯಲ್ಲಿ ಫೂಟ್ 11 A M. ಕ್ಕೆ ವಿಚಾರಕ್ಕೆ ಇಟ್ಟಿರುತ್ತದೆ ನೀವು ಆ ದಿನಸ ನಮ್ಮ ಕೋರ್ಟ್‌ನಲ್ಲಿ ಬಂದು ಹಾಜರ ಆಗ ಬೇಕು. ಹಾಗೆ ಹಾಜರ ಆಗದೇ ಇದ್ದಲ್ಲಿ ನಿಮ್ಮ ವಿರುದ್ಧ ಸದರ ದಾವಾ ನಿಕಾಲೆಗುಲ್ಲಿ ತರಲಾಗುವದು

R. G. Gaonkar.

Arbitrater

ಮೂಡಂಗಿ, ತಾರೀಕು: 30—11—71.

ಗರೀಬರ ಪಕ್ಷಪಾತಿಗಳ ಮೇಲೆ

ಆಸಕ್ತ ಶಕ್ತಿಗಳ ಅನಪೇಕ್ಷಿತ ಪ್ರಭಾವ

ಬಡತನ ನಿವಾರಣೆಗಾಗಿ, ಸಮೂಜವಾದ ಪಟ್ಟು ನಿಟ್ಟಿನ ಅನುಷ್ಠಾನಕ್ಕಾಗಿ ಸಂವಿಧಾನ ತಿದ್ದುಪಡಿಯನ್ನು ಕೇಂದ್ರ ಸರಕಾರ ಮಾಡ ಹೊರಟಿದೆ. ಶ್ರೀಸಾಮಾನ್ಯನ ಪ್ರಗತಿ ಸಾಧನೆಗೆ ಸಂವಿಧಾನ ಅಡ್ಡಿ ಬರುವು ದಾದರೆ, ಅದನ್ನು ಬುಡುವೇಲು ಮಾಡುವುದು ಮಹಾಪರಾಧವಲ್ಲ. ಸಂವಿಧಾನವು ಪ್ರಜೆಗಳಿಗೆ ನೀಡಿರುವ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡು ಸಂಸತ್ತೇ ಸಾರ್ವಭೌಮ ಶಕ್ತಿ ಸಂಪನ್ನವೆನ್ನುವುದಕ್ಕೆ ಮೊದಲು ವಿರೋಧ ಬಂತು. ಚುನಾವಣೆಯೆನ್ನುವುದು ತೀರ ಆಭಾಸವಾಗಿ ನಡೆಯಬಹುದಾದ ನಾಟಕವೊಂದಾಗಿರುವಾಗ ಸಂಸತ್ತು ಯೋಗ್ಯತಾಸಂಪನ್ನರನ್ನೂ ತಜ್ಞರನ್ನೂ ಜನತೆಯ ಆಕೋತ್ತರಗಳನ್ನು ಪ್ರತಿಬಿಂಬಿಸುವವರನ್ನೂ ಒಳಗೊಂಡಿದೆಯೆಂಬುದು ತಪ್ಪಾದೀತು. ತನಗೆ ಬೇಕಾದಂತೆ ಮೂಲ ಭೂತ ಹಕ್ಕುಗಳನ್ನೂ ಪಂಸತ್ತು ಮೊಟಕು ಮಾಡಬಹುದು ಎಂದ ಮೇಲೆ ಪ್ರಜೆಗಳ ಸರಕಾರ ಹೊರಟುಹೋಯ್ತು; ಪ್ರಜಾಪ್ರತಿನಿಧಿಗಳೆಂದು ಕರೆದು ಕೊಳ್ಳುತ್ತಿರುವ ಸಾಮ್ರಾಜ್ಯ ಸ್ಥಾಪನೆಯೊಯ್ತು ಎನ್ನಬೇಕು.

ಇದೀಗ ಮತ್ತೊಂದು ತಿದ್ದುಪಡಿ ಮಸೂದೆಯ ಬಗ್ಗೆ ಚರ್ಚೆ ನಡೆಯುತ್ತಿದೆ ವಿರೋಧ ಪಕ್ಷಗಳು ದನುನೀಯ ನಿರ್ಬಲವಾಗಿರುವುದರಿಂದ, ಅವುಗಳ ಅಭಿಪ್ರಾಯಕ್ಕೆ ಕಾಸಿನ ಬೆಲೆಯೆಂಬುದಿಲ್ಲ. ಆದುದರಿಂದ ಸರಕಾರಿ ಪಕ್ಷದ ಅಭಿಮತವೇ ಮಹತ್ತ್ವ ಪೂರ್ಣವಾದದ್ದು. ಈ ತಿದ್ದುಪಡಿಯು ಸಾರ್ವಜನಿಕ ಉದ್ದೇಶಗಳಿಗಾಗಿ ಖಾಸಗಿ ಆಸ್ತಿಯನ್ನು ರಾಷ್ಟ್ರೀಕರಣಗೊಳಿಸಿದಾಗ ನೀಡುವ ಪರಿಹಾರಕ್ಕೆ ಸಂಬಂಧಿಸಿದ್ದು. ಹೀಗೆ ರಾಷ್ಟ್ರೀಕರಣಗೊಳಿಸುವಾಗ ಸರಕಾರವು ತಾನು ಗೊತ್ತು ಮಾಡಿದಷ್ಟು ಪರಿಹಾರ ಮಾತ್ರ ನೀಡಬೇಕು. ಮೂರುಕಟ್ಟಿ ದರದ ಪರಿಹಾರ ಬೇಡುವ ಅಧಿಕಾರ ಆಸ್ತಿವಂತರಿಗಿಲ್ಲ. ಈ ಪರಿಹಾರ ಸಂಬಂಧ ನ್ಯಾಯಾಲಯದಲ್ಲಿ ಪ್ರಶ್ನಿಸುವಂತೆಯೂ ಇಲ್ಲ.

ಆದರೆ, ವಿರೋಧ ಪಕ್ಷದಲ್ಲೇ ಈ ಬಗ್ಗೆ ಭಿನ್ನಮತ ವ್ಯಕ್ತವಾಯ್ತು. ಗರಿಷ್ಠ ಮಿತಿಗಿಂತ ಕಡಿಮೆ ಆಸ್ತಿವಂತರಿಗೆ ಮೂರುಕಟ್ಟಿದರದಲ್ಲಿ ಪರಿಹಾರ ನೀಡಲು ಸರಕಾರ ಸಮ್ಮತಿಸಿತು. ಸಂವಿಧಾನದ ೩೧ (ಸಿ) ವಿಧಿಯ ನ್ಯಾಯ ರೂಪುಗೊಳ್ಳುವ ಕಾನೂನುಗಳಿಗೆ ಸಂಸತ್ತಿನ ತಥವಾ ವಿಧಾನ ಮಂಡಳಗಳಲ್ಲಿ ಮೂರರಲ್ಲಿ ಎರಡಂಶ ಬಹುಮತ ಬೇಕು ಎಂಬುದನ್ನು ಸರಕಾರ ಯೋಚಿಸಿತು. ಧಾರ್ಮಿಕ ಅಲ್ಪ ಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಆಸ್ತಿಗಳಿಗೆ ಮೂರುಕಟ್ಟಿಯ ದರದಲ್ಲೇ ಪರಿಹಾರ ನೀಡಬೇಕೆಂಬುದನ್ನು ಸರಕಾರ ಒಪ್ಪಿಕೊಂಡಿತು. ಆದರೆ, ಈ ಅಧಿಕೃತ ತಿದ್ದುಪಡಿಗಳಿಗೆ ಯುವ ಕರು ತಮ್ಮ ತೀವ್ರ ವಿರೋಧವನ್ನು ವ್ಯಕ್ತ ಪಡಿಸಿದ್ದಾರೆ

ಈ ವಿರೋಧದಲ್ಲಿ ಅರ್ಥವಿಲ್ಲದಿಲ್ಲ ಮೂರರಲ್ಲೆರಡಂಶವು ಬಹುಮತ ಆಪೂರ್ವವಾದದ್ದು. ಅದನ್ನು ಸಂವಿಧಾನ ತಿದ್ದುಪಡಿಯಂತಹ ಮಹತ್ವ ಪ್ರಸಂಗಗಳ ಸೀಮೆಯಿಂದ ಹೊರತಂದು ಸಾಮಾನ್ಯ ಕಾನೂನುಗಳಿಗೂ ಲಾಗು ಮಾಡುವುದು ಒಳ್ಳೆಯದಲ್ಲ. ಇದರಿಂದ ಪ್ರಗತಿಪರ ಕಾನೂನುಗಳಿಗೆ ಅನಪೇಕ್ಷಿತ ತಡೆಯೂಗ ಬಹುದು. ಅತಂಕವೆನಿಸಿದ್ದ ಸಂವಿಧಾನವನ್ನು ತಿದ್ದುವ ಈ ತಿದ್ದುಪಡಿಯೇ ಮತ್ತೆ ತಡೆಯೂಗ ಬಹುದು. ಇನ್ನು ಒಂದು ರಾಜ್ಯದಲ್ಲಿನ ಧಾರ್ಮಿಕ ಅಲ್ಪ ಸಂಖ್ಯಾತರು ಇನ್ನೊಂದು ರಾಜ್ಯದಲ್ಲಿ ಬಹು ಸಂಖ್ಯಾಕರಾಗಿರುವುದು ಅಸಂಭವವಲ್ಲ. ರಾಷ್ಟ್ರೀಯ ಮಟ್ಟದಲ್ಲಿ ಬಹು ಮತೀಯ ಧರ್ಮಾಯರು ಹಿಂದುಗಳು ಮಾತ್ರ. ಧರ್ಮ ನಿರಪೇಕ್ಷ ರಾಷ್ಟ್ರದಲ್ಲಿ ಒಂದು ಧರ್ಮದ ಬಗ್ಗೆ ಮಲತಾಯಿ ಧೋರಣೆ ಆಸಾಧುವಾದುದು ಆದುದರಿಂದ ಎಲ್ಲ ಧಾರ್ಮಿಕರು ನಡೆಸುವ ಶಿಕ್ಷಣ ಸಂಸ್ಥೆಗಳಿಗೂ ಈ ತಿದ್ದುಪಡಿಯನ್ನು ಅನ್ವಯಿಸುವುದು ಅಪೇಕ್ಷಣೀಯ.

ಒಟ್ಟಿನಲ್ಲಿ, ಪ್ರಗತಿ-ಸಮೂಜವಾದದ ಹೆಸರಲ್ಲಿ ಗರೀಬೀ ಹಟಾವೋ ಘೋಷಣೆಯ ಬಲದಿಂದ ತುಂಬು ಬಹುಮತಪಡೆದ ಕೇಂದ್ರ ಸರಕಾರಿ ಪಕ್ಷದ ಮೇಲೆ ಕೆಲವೊಂದು ಆಶಕ್ತ ಶಕ್ತಿಗಳು ಪ್ರಭಾವ ಬೀರಿವೆಯೆಂಬುದು ನಿರ್ವಿವಾದ. ಈ ಶಕ್ತಿಗಳ ಮುಂದೆ ಮಣಿದು ಕಾನೂನುಗಳನ್ನು ನಿಷ್ಪ್ರಭಾವಿಯೂಗಿ ಮೂಡ ಹೋದರೆ, ಹಿಂದಿನ 'ಹಾವು ಸಾಯಬಾರದು-ಕೋಲು ಮುರಿಯಬಾರದು' ಎಂಬ ನೀತಿಯೇ ಪುನರಾವರ್ತಿತವಾಗುತ್ತದೆ. ಜನತೆಯ ಆಕೋತ್ತರಗಳು ನೀರು ಪಾಲಾಗುತ್ತವೆ; ಜನತೆ ತಾವೇ ಕ್ರಾಂತಿಯೇಳುವಂತಾಗುತ್ತದೆ. ಯುವ ಚಂದ್ರಶೇಖರರು ಈ ಮಾತನ್ನು ಬಹಳ ಹಿಂದೆಯೇ ಹೇಳಿದ್ದಾರೆ.

ಂ ಂ ಂ

ಬಂಗ್ಲಾ ದೇಶದಲ್ಲಿ ಮುಕ್ತಿವಾಹಿನಿಯ ಕೈ ಬಲವತ್ತರವಾಗುತ್ತ ಬಂದಂತೆ ಯಾಹ್ಯಾಖಾನರು ಕಬ್ಬಿಬ್ಬಾಗಿದ್ದಾರೆ. ಯೂವು ದೇ ರೀತಿಯ ಗೌರವಯುತ ಪರಿಹಾರಕೆ ಅವರು ವಸ್ತುತಃ ಸಿದ್ಧರಿರುವರಾದರೂ ಅವರ ಸೇನಾಧಿಕಾರಿಗಳೂ ಅವರ ನಂಬುಗಸ್ಥರೂ ಅವರ ಕೈ ತಡೆಯುತ್ತಿದ್ದಾರೆಂದು ವರದಿಗಳು ಬರುತ್ತಿವೆ. ಭಾರತದ ಮೇಲೆ ಹೇಗಾದರೂ ಸೇಡು ತೀರಿಸಿಕೊಳ್ಳಲೇ ಬೇಕೆಂಬ ರಾಕ್ಷಸೇಚ್ಛೆಯಿಂದ ತುಂಬಿರುವ ಮಾಜಿ ವಿದೇಶ ಸಚಿವ ಜುಲ್‌ಫಿಕ್ರ್ ಅಲಿ ಭುಟ್ಟೊ, ಈಗ ಚುನಾಯಿತ ಪ್ರತಿನಿಧಿಗಳಿಗೆ ಅಧಿಕಾರ ಒಪ್ಪಿಸುವುದಕ್ಕಿಂತ ಭಾರತ ದಮನಕ್ಕೆ ಅಗ್ರ ಪ್ರಾಶಸ್ತ್ಯ ನೀಡಿ ಸಮರ ಕೋಲಾಹಲಗೆಯ್ಯ ಹೊರಟಿದ್ದಾರೆ. ಕಂಡ ಕಂಡವರಿಗೆಲ್ಲ ಕೈಮಗಿದು ಯಾಹ್ಯಾಖಾನರು ತಪ್ಪನ್ನು ಈ ಬಂಗ್ಲಾ ಜಾಲದಿಂದ ಬಿಡುಗಡೆ ಮಾಡುವಂತೆ ಸೆರಗೊಡ್ಡಿ ಬೇಡ ಹೊರಟಿದ್ದಾರೆ.

ಇದರ ಪರಿಣಾಮವಾಗಿಯೇ ಇದೀಗ ತಾನೇ ಸಂಯುಕ್ತ ಅರಬ ಗಣರಾಜ್ಯವು ತನ್ನ ಮೌನವನ್ನು ಭೇದಿಸಿದೆ. ಸುಯೇಜಕಾಲುವೆಯ ರಾಷ್ಟ್ರೀಕರಣದ ವೇಳೆ ಭಾರತವು ನೀಡಿದ್ದ ನೈತಿಕ ಬಲವನ್ನು ಅದೆಂದೋ ಮರೆತು ಬಿಟ್ಟಿದೆ. ನಸ್ಸೇರರ ನಂತರ ಅಧಿಕಾರಕ್ಕೆ ಬಂದ ಸಾದತ್ತರಿಗೆ ತಮ್ಮ ಸ್ಥಾನವನ್ನು ಭದ್ರಪಡಿಸುವುದೇ ಮುಸ್ತರವಾಗಿದ್ದರೂ ಬಂಗ್ಲಾ ಸಮಸ್ಯೆಗೆ ಚತುರಂಶ ಶಾಂತಿಯೋಜನೆಯನ್ನು ರೂಪಿಸಿದ್ದಾರೆ. ಇದರಂತೆ, ಭಾರತ-ಪಾಕಿಸ್ತಾನಗಳಿಗೆ ಸಮ್ಮತವಾಗುವ ಅಂತಾರಾಷ್ಟ್ರೀಯ ಮಧ್ಯಸ್ಥಗಾರರೊಬ್ಬರು ನಿರಾಶ್ರಿತರು ತಾಯ್ನಾಡಿಗೆ ಮರಳುವಂತೆ ಮೂಡಬೇಕು. ಗಡಿ ಪ್ರದೇಶದಿಂದ ಇಕ್ಕೆಡೆಯ ಸೇನೆಗಳೂ ಹಿಂದೆ ಸರಿಯಬೇಕು. ಮುಕ್ತಿವಾಹಿನಿಗೆ ನೀಡುತ್ತಿರುವ ಸಹಾಯವನ್ನು ಭಾರತ ನಿಲ್ಲಿಸಬೇಕು ಮತ್ತು ನಾಲ್ಕನೆಯದಾಗಿ ಬಂಗ್ಲಾ ಸಮಸ್ಯೆಗೆ ರಾಜ್ಯಕೀಯ ಪರಿಹಾರ ಕಂಡುಹಿಡಿಯಬೇಕು.

ಸಮಸ್ಯೆಯ ಪರಿಹಾರಕ್ಕೆ ಅಗತ್ಯವಾದ -ಅನಗತ್ಯವಾದ ಅಂಶಗಳು ಈ ಯೋಜನೆಯಲ್ಲಿವೆಯೆಂಬುದು ನಿಜ. ಆದರೆ, ಅಗತ್ಯ ಅಂಶಗಳು ಅನುಕ್ರಮವಾಗಿಲ್ಲದಿರುವುದು ಗಮನೀಯ. ಬಂಗ್ಲಾ ಸಮಸ್ಯೆಗೆ ಪರಿಹಾರವು ರಾಜ್ಯಕೀಯವಾಗಿರುವುನು ಮೊದಲ

(ಎಂಟನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಕಾರಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದೆ ದಶಾಲಾ (ಪೆವೆಟ್) ಲಿಮಿಟೆಡ್.

ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 264/71.

ವಾದಿಯು:— ಮಹಾಲಕ್ಷ್ಮಿಯಮ್ಮ

ಪ್ರತಿವಾದಿಯು:— 1. ಬಿ. ಎ. ನಾರಾಯಣ ಉಪಾಧ್ಯ 2. ಬಿ. ಎ. ಸುಬ್ಬಣ್ಣ ಉಪಾಧ್ಯ 3. ಬಿ. ಎ. ರಾಮಚಂದ್ರ ಉಪಾಧ್ಯ, ಆಸಂತ ಕೃಷ್ಣ ಉಪಾಧ್ಯರ ಮಕ್ಕಳು.

2ನೇಯವರು ಗೋಪಾಡಿ ಗ್ರಾಮದಲ್ಲಿರುವವರು, 3ನೇಯವರು ಮೈಸೂರು ಜಗನ್ಮೋಹನ ಪ್ಯಾಲೇಸ್ ಎದುರು ರಾಜಭವನ ಹೋಟೆಲಲ್ಲಿರುವವರು.

2, 3ನೇ ಪ್ರತಿವಾದಿರಿಗೆ ತಿಳಿಯ ಪಡಿಸಿದ್ದು: ನಿಮ್ಮ ತಂದೆಯು ವಾದಿಗೆ ಬರಕೊಟ್ಟ ತಾ. 28-7-1959ರ ರಿಜಿಸ್ತ್ರಿ ಈಡು ಗಸ್ತಾನೇಜಿನ ಪ್ರಕಾರ ಆಕೆಗೆ ಬರತಕ್ಕದ್ದಾಗುವ ರೂ. 2320-80 ಮುಂದಿನ ಬಡ್ಡಿ, ಕೋರ್ಟು ಖರ್ಚು ಸಹಾ ಸದ್ರಿ ಸ್ತಿರಾಸ್ತಿ ಮೂರಾಟ ವಗೈರೆಯಿಂದ ವಸೂಲಿಗೆ ವಾದಿಯು ಮೇಲ್ಕಂಡ ದಾವಾ ಮೂಡಿದ್ದಾಗಿದ್ದು ತನಿಖಿ ಬಗ್ಗೆ ತಾ 21-1-72ಕ್ಕೆ ಇಟ್ಟಿರುತ್ತದೆ. ನಿಮಗೆ ಆ ಕುರಿತು ಅಕ್ಷೇಪಣೆಗಳಿದ್ದರೆ ಆ ದಿನ ಕೋರ್ಟು ಮುಂದೆ ಹಗಲು 11 ಗಂಟೆಗೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ಎಕ್ಸ್‌ಪಾರ್ಟಿಯಾಗಿ ದಾವಾ ತೀರ್ಮಾನಿಸಲಾಗುತ್ತದೆ.

(ಕೋರ್ಟು ದುಕುಂ ಪ್ರಕಾರ)

(ಸಹಿ) ಎ. ಎಸ್. ಎನ್. ಹೆಬ್ಬಾರ್,

ವಾದಿಳ ಎಪ್ಲೋಕೇಟ್

ಕುಂದಾಪುರ, 30-11-71.

ಉಡುಪಿ ಸಿವಿಲ್ ಜಡ್ಜರ ಕೋರ್ಟಿನಲ್ಲಿ

S. C. No. 50/71.

ಸಿಂಡಿಕೇಟ್ ಬ್ಯಾಂಕ್, ಮಣಿಪಾಳ—ವಾದಿರು.

ಮತ್ತು

ಜನಾರ್ಧನಾಚಾರ್ಯ ಕೂಡಾ —ಪ್ರತಿವಾದಿರು.

ಇವರೊಳಗೆ

2ನೇ ಪ್ರತಿವಾದಿ ಪದ್ಮನಾಭ ಆಚಾರ್ಯ— ಬಾಬುರಾಯ ಆಚಾರ್ಯರ ಮಗ — ಉಡುಪಿ ತಾಲ್ಲೂ ಬೆಳಪು ಗ್ರಾಮ. P. O. ಪಣಿಯೂರು.

2ನೇ ಪ್ರತಿವಾದಿಗೆ ತಿಳಿಯ ಸಿದಿಸುವುದೇನೆಂದರೆ:—

ವಾದಿರು ಸ್ಪ್ಲೆಂಟ್‌ಸಿನವ್ಯತ್ತಿಗಳಿಗೆ ನಿಂಮ ಕೋರಿಕೆ ಮೂಡಿದ ಮೇಲಿನ ದಾವೆಯು ತಾ 18-12-71ಕ್ಕೆ ಈ ಕೋರ್ಟಿನಲ್ಲಿ ನಿಂಮ ಹಾಜರಿ ಬಗ್ಗೆ ಯಿ ಬ್ಬರುವುದರಿಂದ ಸದ್ರಿ ದಾಕೆಯಲ್ಲಿ ಉದಾಪರಿಸುವುದಿದ್ದರೆ ಮೇಲಿನ ತಾರೀಕು ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ಹಾಜರಾಗಿ ಜವಾಹೀರು ನೂಡಿಕೊಳ್ಳುವುದು.

Y. C. S. Hegde.
Advocate for Plaintiff.

ಉಡುಪಿ, ತಾ. 25—11—71.

ಆಗಲುವಿಕೆಯ ಅಧಿಕಾರಕ್ಕಾಗಿ ಆಂದೋಲನ

ಭಾರತದಲ್ಲಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ರಾಜ್ಯಗಳಿಗೆ ಆಗಲುವಿಕೆಯ ಅಧಿಕಾರ ಇರಬೇಕೆಂದು ಆಂದೋಲನ ನಡೆಸುವದಾಗಿ ತಿಳಿಯಪಡಿಸಿರುತ್ತದೆ. ಆಂದೋಲನಕ್ಕೂ ಕಮ್ಯೂನಿಸ್ಟ್ ಪಾರ್ಟಿಗೂ ಕಗ್ಗಂಟು. ಆಂದೋಲನ ಇಲ್ಲದಿದ್ದರೆ ಅದೇನು ತಮಾಷೆ ಇದೆ? ಕೊಳದ ನೀರು ಶಾಂತವಾಗಿದ್ದರೆ ನೋಡಲು ಆ ದೇನು ಚಂಗವಿದೆ? ಸಮುದ್ರದಲ್ಲಿ ಬರುವಂತೆ ಅಲೆಗಳು ಅದರಲ್ಲಿ ಬರಲು ಸಾಧ್ಯವಿಲ್ಲ. ಹಾಗಿದ್ದರೂ ಮುಕ್ಯಕೆದುರಿಗೆ ಕೊಳದಲ್ಲೇ ಆಲೆ ಬರಿಸುತ್ತಾರೆ, ಕಮ್ಯೂನಿಸ್ಟರು. ತಾಂತ್ರ ಕೊಳದಲ್ಲಿ ಒಂದು ಕಲ್ಲು ಹಾಕಿ ಬಿಟ್ಟರಾಯಿತು. ಕಮ್ಯೂನಿಸ್ಟರು ಮಾಡುವ ಕೆಲಸ ಇದುನೇ. ಈಗ ಅದನ್ನೇ ರಾಷ್ಟ್ರ ಜೀವನದ ಮಟ್ಟಕ್ಕೆ ತರಬೇಕೆಂದು ಅವರು ಹವಣಿಸುತ್ತಿದ್ದಾರೆ.

ಕಮ್ಯೂನಿಸ್ಟರು ಮಾರ್ಕ್ಸ್‌ವಾದಿ, ಸಿಪಿಐ ವಾದಿ, ಕ್ರಾಂತಿವಾದಿ, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯೂವೆಂದು ಹಲವಾರು ವೇಷಗಳನ್ನು, ಮುಖವಾಡವನ್ನು ಹಾಕಿಕೊಂಡಿದ್ದಾರೆ. ಇವೆಲ್ಲವೂ ಕಾರ್ಯಸಾಧನೆಗಾಗಿ ಇವೆ. ಅದೆಂತಾದರೂ ಭಾರತವನ್ನು ಕೆಂಪುಮಾಡಬೇಕೆಂಬುದೇ ಅವರ ಅಭಿಪ್ರಾಯ. ಇವರೆಲ್ಲರಿಗೂ ಸ್ಫೂರ್ತಿದಾತರೆಂದರೆ ಮಾರ್ಕ್ಸ್, ಲೆನಿನ್, ಸ್ಟೆಲಿನರೇ ಇದ್ದಾರೆ. ಇವರೊಂದಿಗೆ ಕೆಲವರು ಮಾವನನ್ನು ಸೇರಿಸಿಕೊಳ್ಳುತ್ತಾರೆ. ಅಷ್ಟೇ, ಮಾರ್ಕ್ಸ್‌ನಿಂದ ಹರಿದು ಬಂದಿರುವ ಕಮ್ಯೂನಿಸಮಿಗೆ ಸ್ಟೆಲಿನಿಸ್ ರೂಪವನ್ನೀಯುತ್ತ ಒಂದು ರಾಷ್ಟ್ರವೆಂದರೆ ಅದಕ್ಕೆ ಒಂದು ಭಾಷೆ, ಭೂಮಿ ಇರಬೇಕೆಂದು ಹೇಳಿರುವನು. ಈ ದೃಷ್ಟಿಯಲ್ಲಿ ನೋಡುವಾಗ ಕರ್ನಾಟಕ ಒಂದು ರಾಷ್ಟ್ರ, ತಮಿಳುನಾಡು ಒಂದು ರಾಷ್ಟ್ರ, ಮಹಾರಾಷ್ಟ್ರ ಗುಜರಾತ ಮುಂತಾದುವು ಪ್ರತ್ಯೇಕ ರಾಷ್ಟ್ರಗಳಿವೆ. ಇದು ಪುಸ್ತಕದ ಬದನೆ ಕ್ಯಾ. ರಷ್ಯಾ ಅಡಳಿತದ ಒಳಗೆ ಹಲವಾರು ಭಾಷೆಗಳನ್ನಾಡುವವರಿದ್ದಾರೆ. ಅವರೆಲ್ಲರೂ ರಷ್ಯನ್ ಭಾಷೆಯನ್ನು ಕಲಿಯಲೇಬೇಕು. ಇವನ್ನು–ಹೆಸರಿಗೆ ಸೋವಿಯಟ್ ಸ್ಟೇಟ್ಸ್‌ಗಳೆನ್ನಲಾಗುತ್ತಿದೆ. ಇವು ಆಗಲುವಿಕೆಯ ಅಭಿವ್ಯಾಯವನ್ನು ತಳೆಯುವದು ಹಾಗಿರಲಿ, ಯೋಜನೆಯನ್ನು ಯಾರಾದರೊಬ್ಬನು ಮಾಡಿದರೂ ಸಾಕು, ಅವನ ಅಂತ್ಯವಾಯಿತೆಂದೇ ಅನ್ನಬೇಕು. ರಷ್ಯಾದ ಉಕ್ಕಿನ ಹಸ್ತ ಈ ರಾಜ್ಯಗಳನ್ನು ಮಾತ್ರ ತನ್ನ ಮುಷ್ಟಿಯೊಳಗೆ ಇಟ್ಟುಕೊಂಡಿರುವು ದೆಲ್ಲದೆ ಪೂರ್ವ ಜರ್ಮನಿ, ಪೋಲೇಂಡ್, ಹಂಗೇರಿ, ರೊಮೇನಿಯಾ ಮುಂತಾದ ದೇಶಗಳನ್ನು ನುಂಗಿ ನೀರು ಕುಡಿದು ಬಿಟ್ಟಿರುತ್ತದೆ. ರಷ್ಯಾದಂತೆ ಚೈನಾ ಕೂಡಾ ಆಸುಪಾಸಿನ ರಾಜ್ಯಗಳನ್ನು ಗುಳುಂಕರಿಸಿಕೊಂಡಿದೆಯಲ್ಲದೆ ತ್ರಿವಿಷ್ಟಪವನ್ನು ತಿಂದು ಜೀರ್ಣಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಇಂತಹ ನಾಯಕರಿಂದ, ರಾಷ್ಟ್ರಗಳಿಂದ ಮಾರ್ಗದರ್ಶನ, ಸ್ಫೂರ್ತಿ ಪಡೆಯುತ್ತಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟರು ಭಾರತದಲ್ಲಿ ಆಗಲುವಿಕೆಯ ಅಧಿಕಾರಕ್ಕಾಗಿ ಆಂದೋಲನ ನಡೆಸಲು ಮುಂದಾಗಿದ್ದಾರೆ

ಬ್ರಿಟಿಷರು ಭಾರತವನ್ನು ಬಿಟ್ಟುಹೋಗುವಾಗ ಅದನ್ನು ಹೋಳುಗಳನ್ನಾಗಿ ಮಾಡಿ ಹೋಗಿರುವುದಲ್ಲದೆ ಸಂವಿಧಾನ ರಚನಾಕಾರರು ಇದೊಂದು ರಾಷ್ಟ್ರವೆನ್ನುವ ಬದಲು ಸಂಯುಕ್ತರಾಜ್ಯ (ಯೂನಿಯನ್ ಆಫ್ ಸ್ಟೇಟ್ಸ್) ವೆನ್ನುವ ದಾರಿಗೆ ಬರುವಂತೆ ಮಾಡಿಟ್ಟು ಹೋದರು. ಆಗ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದ ಪಂಡಿತ ಜವಾಹರಲಾಲ ನೆಹೂಜಿಯವರು ಇಲ್ಲೊಂದು ಉತ್ತಮ ರಾಷ್ಟ್ರೀಯತೆಯಿದೆಯೆನ್ನುವುದನ್ನು ಒಪ್ಪಿಕೊಳ್ಳದೆ, ಅದಕ್ಕೆ ಜಾತೀಯತೆ–ಮತೀಯತೆ– ಕಮ್ಯೂನಲೇ ಸಮಿನ ಕಲಾಯಿ ಹಾಕಿ, ರಾಷ್ಟ್ರನಿರ್ಮಾಪಕನು ತಾನೆನ್ನುವಂತೆ ಅಭಿವ್ಯಾಯ ಜನತೆಯಲ್ಲುಂಟಾಗುವಂತೆ ಶ್ರಮಿಸಿದ್ದರು. ಈ ಹಿರಿಯಕ್ಕನ ಚಾಳಿ ಮನೆಮಕ್ಕಳಿಗೆ ಅಭ್ಯಾಸವಾಗಿ ಹೋಗಿದೆ. ಈ ರಾಜ್ಯಗಳು ಪ್ರತ್ಯೇಕತೆಯ ಬೇಡಿಕೆಯನ್ನು ಮುಂದಿಟ್ಟಲ್ಲಿ ಅವನ್ನು ಬೆದರಿಸಿ ಹಿಡಿತದಲ್ಲಿಟ್ಟುಕೊಳ್ಳುವದು ಮಾನವೀಯತೆಗೆ ವಿರುದ್ಧವಿದೆ. ಈ ಉದಾರ ಮನೋಭಾವನೆಗೆ ಪಾಕಿಸ್ತಾನಿಗಳು ಪ್ರಹಾರವನ್ನೀಯುತ್ತಿದ್ದರೂ ಬಲವಾದ ಆಘಾತವನ್ನುಂಟುಮಾಡಿದವರು ಚೈನಿ ಕಮ್ಯೂನಿಷ್ಟರು. ಆಕ್ರಮಣದ ಆಲೆ ಬಂದು ಅಪ್ಪಳಿಸಿದೊಡನೆ ದಡಗಟ್ಟಿಯಾಗಿರಬೇಕು, ಪತ್ಯೇಕ— ಪ್ರತ್ಯೇಕ ಹೊಯಿಗೆಯ ಕಣಗಳಾಗಿರಬಾರದೆಂಬ ಅಭಿಪ್ರಾಯ ತಲೆಯೆತ್ತಿತು. ಒಂದುಗೂಡುವಿಕೆ, ಒಕ್ಕಟ್ಟು, ಇಂಟಗ್ರೇಶನ್ ಇತ್ಯಾದಿ ಮಾತುಗಳು ಕೇಳಬಂದುವು. ಚೈನಿಕಮ್ಯೂನಿಸ್ಟರು ಅರ್ಧದಾರಿಯಲ್ಲೇ ನಿಂತುಬಿಟ್ಟರು....

ಆಲ್ ಇಂಡಿಯಾ ನೇಶನಲ್ ಕಾಂಗ್ರೆಸ್ಸಿನ 'ಒಕ್ಕೂಟ ರಾಜನೀತಿ'ಯ ಪೂರ್ಣ ದುರ್ಲಾಭ ಪಡೆಯಲು ದಕ್ಷಿಣದಲ್ಲಿ ದ್ರಾವಿಡ ಮುನ್ನೇಟ್ರ ಕಳ್ಗಗಂ, ಉತ್ತರದಲ್ಲಿ ಅಖಾಲಿದಳಗಳು ರಾಜಕೀಯ ರಂಗದಲ್ಲಿ ಪ್ರಯತ್ನಿಸುತ್ತಿರುವಾಗ ನಾಗಾಲೇಂಡ್, ಮಿಝೋಲೇಂಡ್‌ಗಳಿಗಾಗಿ ಭಿನ್ನರೀತಿಯ ಹೋರಾಟ ಆರಂಭವಾಯಿತು. ಕ್ರಿಸ್ತೀಯ ಪಾದ್ರಿಗಳು (ಮತ ಪ್ರಸಾರಕರು) ತಲೆಗೆ ಹಚ್ಚಿದ್ದ ಪ್ರತ್ಯೇಕ ತಮಿಳುನಾಡಿನ ಯೋಜನೆಯನ್ನೇ ದ್ರಾ.ಮು.ಕ ಕಣ್ಣಾ ಮುಂದಿಟ್ಟುಕೊಂಡು, ಉತ್ತರದ ಆರ್ಯರ ಅಂಕುಶದಿಂದ ತಪ್ಪಿಸಿಕೊಳ್ಳಲು ಅದು ಕಣದಲ್ಲಿಳಿಯಿತು. ಪ್ರತ್ಯೇಕ ಸಿಖ್ಖೀಸ್ಥಾನದ ಕನಸನ್ನು ಕಾಣುತ್ತ ಅಖಾಲಿ ದಳ ಕಣದಲ್ಲಿಳಿಯಿತು. ಪ್ರತ್ಯೇಕತಾ ಮನೋಭಾವನೆಯುಳ್ಳ ಸ್ಥಳೀಯ ಕಾಂಗ್ರೆಸ್ಸು ಪುಡಾರಿಗಳು ಅವಕ್ಕೆ ಆಶ್ರಯವನ್ನಿತ್ತು ಬೆನ್ನು ಚಪ್ಪರಿಸಿದುವು. ಒಂದಿಲ್ಲೊಂದು ರೂಪದಿಂದ ಇವು ವಿಧಾನ ಮಂಡಲದಲ್ಲಿ ಸ್ಥಳ ಪಡೆದು ಅಂಕುಶವನ್ನು ಕೈಗೆ ತೆಗೆದುಕೊಂಡುವು. ಇದರಲ್ಲಿ ದ್ರಾ. ಮು. ಕ. ಈಗಲೂ ಅಧಿಕಾರದಲ್ಲಿದೆ.

ಚೈನಿಯರಿತ್ತ ಪ್ರಹಾರದಿಂದಾಗಿ ಪ್ರತ್ಯೇಕತೆಯ ರಾಗವನ್ನು ಅದುಮಿ ಬಿಡಲು ಕೇಂದ್ರ ಸರಕಾರ ಅಧಿಕಾರದ ಕೈಯ್ಯನ್ನು ಮೇಲಕ್ಕೆತ್ತಿತು. ಒಡನೆ ದ್ರಾ ಮು. ಕ. ವು ತಾನು ಪ್ರತ್ಯೇಕತೆಯ ಲಕ್ಷ್ಯವನ್ನು ಬಿಟ್ಟು ಬಿಟ್ಟಿರುವದಾಗಿ ಸಾರಿತು. ದ್ರಾವಿಡ ರಾಷ್ಟ್ರದ ಬದಲು ಅದೂ ಇಂಡಿಯನ್ ರಾಷ್ಟ್ರವೆನ್ನಲಾರಂಭಿಸಿತು, ಇವೆಲ್ಲವುಗಳನ್ನು ಬುಟ್ಟಿಯಲ್ಲಿ ಹಾಕಿಕೊಳ್ಳಲು ಮುಸ್ಲಿಂಲೀಗಿನ ಸಹಾಯ ಬೇಕೆನಿಸಿತು ಕಾಂಗ್ರೆಸ್ಸಿಗೆ. ಅದು ಸೆಕ್ಯೂಲರಿಸಮಿನ ಸ್ವರವೆತ್ತಿತು. ಇದರ ದೃಷ್ಟಿಯಲ್ಲಿ ಸೆಕ್ಯೂಲರಿಸಮೆಂದರೆ ಹಿಂದಿನಿಂದ ಬಂದಿರುವಂತಹ ಈ ದೇಶದ ರಾಷ್ಟ್ರೀಯತೆಗೆ ಅಪಚಾರನೆಸಗುವದೇ ಇದೆ. ಅದು ಪ್ರಗತಿಯ ಲಕ್ಷಣವೆಂಬ ಭ್ರಮೆ ಅದನ್ನಾವರಿಸಿತ್ತು. ನೈಜ ರಾಷ್ಟ್ರೀಯತೆಯನ್ನು ಮೆಟ್ಟಿ ಒಕ್ಕೂಟ ರಾಷ್ಟ್ರೀಯತೆಯನ್ನು ನ್ಯಾಪಿಸುವದಾಗಿ ಅಧಿಕಾರದಲ್ಲಿರುವ ಕಾಂಗ್ರೆಸ್ಸು ಕೂಗಿ ಹೇಳಿತು. ಇದರಿಂದ ದ್ರಾ. ಮು. ಕ., ಅಖಾಲಿದಳ, ಮುಸ್ಲಿಂಲೀಗು, ನಾಗಾ ಕ್ರಿಸ್ತೀಯರಿಗೆ ಅಲ್ಲದೆ ಕಮ್ಯೂನಿಸ್ಟರಿಗೂ ಮಾಗು ಪಾಣಹಾಕಿ ತನ್ನಿಷ್ಟ ಬಂದಂತೆ ಕುಣಿಸಿಕೊಳ್ಳಬಹುದೆಂದು ಕಾಂಗ್ರೆಸ್ಸು ಭಾವಿಸಿಕೊಂಡಿತ್ತು. ಒಕ್ಕೂಟ–ಕೂಟದ ಮಾತಾಡುತ್ತಿದ್ದ ಕಾಂಗ್ರೆಸ್ಸೇ ಇಬ್ಭಾಗವಾಗಿ ಹೋಯಿತು. ದೇಶವನ್ನು ಎರಡು ಮಾಡಿದ ಪಕ್ಷ ಅನೂ ಇಬ್ಭಾಗವಾಗಿಹೋಯಿತು.

ಇವೆಲ್ಲವನ್ನೂ ಗಮನಿಸುತ್ತ ಬಂದವರು ಕಮ್ಯೂನಿಸ್ಟರು. ಭಾರತವನ್ನು ಇದ್ದಕ್ಕಿದ್ದಂತೆ ಕೆಂಪು ಗೊಳಿಸಲು ಆಗಾಧ್ಯವೆಂದಾದಲ್ಲಿ ಒಕ್ಕೂಟದ ಸ್ವರವೆತ್ತುತ್ತಿರುವ ಪಕ್ಷಗಳೊಂದಿಗೆ ಕೂಡಲು ಅವರು ನುಂಪಾದರು. ಅಖಂಡ ಭಾರತ, ಭಾರತ ಮಾತಾಕೀ ಜಯ, ಇಷ್ಟರುವದು ಒಂದೇ ರಾಷ್ಟ್ರವೆನ್ನುವವರನ್ನು ಜಾತೀಯವಾದಿಗಳು, ಮತೀಯವಾದಿಗಳೆಂದು ಕಮ್ಯೂನಿಸ್ಟರೂ ಜರೆದರು, ಮೂದಲಿಸಿದರು. ದ್ರಾ ಮು ಕ, ಅಖಾಲಿ ದಳಗಳೊಂದಿಗೆ ಕೈಮಿಲಾಯಿಸಿಕೊಂಡರು ಆಷ್ಟೇ ಅಲ್ಲ, ಕೆಂಪಣ್ಣನವರು ಗಾಂಧಿ ಟೊಪ್ಪಿ ಇಡಲೂ ಹಿಂಜರಿಯಲಿಲ್ಲ. ನೇರ ಮಂತ್ರಿಮಂಡಲಗಳೊಳಗೆ ನುಸುಳಿಕೊಂಡರು. ಹೀಗೇ ಕಾಲಿಡಲು ಸ್ಥಳಸಿಕ್ಕಿದೊಡನೆ ಪ್ರತ್ಯೇಕತೆಯ ಸ್ವರವನ್ನೆತ್ತಲಾರಂಭಿಸಿರುವ

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72303
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service

ಪುತ್ತೂರು II ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

O. S. 446/1971.

ನೇತ್ರಾವತಿ ಆಂದು — ವಾದಿ.

Vs.

ಸುಬ್ರಹ್ಮಣ್ಯ ಭಟ್ಟ, ವಿಷ್ಣು ಭಟ್ಟ ಮಗ. ಸುಳ್ಯ ತಾಲ್ಲು ಕುತ್ತಂಜ ಗ್ರಾಮದ ಖಾಲೆಸುಳಿ — ಪ್ರತಿವಾದಿ

ಇವರಿಗೆ—

ಮೇಲಿನ ದಾವೆಯ ವಾದಿಯು ನಿಮ ಮೇಲೆ ದಾವಾA ಶೆಡ್ಯೂಲು ಆಸ್ತಿಗೆ ಪ್ರವೇಶಿಸದಂತೆ ಶಾಶ್ವತ ಇಂಜಂಕ್ಷನ್ ಕೊಡಿಸಬೇಕೆಂತ ಮಾಡಿದ ಮೇಲಿನ ದಾವೆಯು ನಿಮ್ಮ ಕಾಜರಿ ಬಗ್ಗೆ ತಾ. 16–12–1971ಕ್ಕೆ ಇಟ್ಟಿದೆ. ಸದ್ರಿ ದಿವಸ ನೀವು ಸ್ವತಹ ವ ವಕೀಲರ ದ್ವಾರಾ ಹಾಜರಾಗಿ ಉಡಪಡಿಸ ತಕ್ಕದ್ದು. ತಪ್ಪಿದಲ್ಲಿ ನಿಮ ಗೈರು ಹಾಜರಿಯಿಂದ ಏಕ ಪಕ್ಷವಾಗಿ ತೀರ್ಮಾನಿಸಲಾದೀತು.

ಕೋರ್ಟು ಹ್ಕುಂ ಪ್ರಕಾರ.

Sd/- K. Rama Bhat.

Advocate for Plaintiff.

ಪುತ್ತೂರು, 26–11–71.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

I. A. I.

In O. S. 411/70

ನಾಗವೇಣಿ — ಅರ್ಜಿದಾರ

ಮತ್ತು

ಮಮ್ಮದ ಬ್ಯಾರಿ ಕೂಡಾ — ಎದ್ರಿರು

1ನೇ ಎದ್ರಿ ಮಮ್ಮದ ಬ್ಯಾರಿ 2ನೇ ಎದ್ರಿ ಬೀಪಾತುಮ್ಮ, 3ನೇ ಎದ್ರಿ ಆಲಿಮಮ್ಮ

1ನೇ ಮತ್ತು 2ನೇ ಎದ್ರಿಯರು ಮೈದು ಕುಂಞ ಬ್ಯಾರಿ ಮಕ್ಕಳು ಮತ್ತು 3ನೇಯವರು ಅವರ ವಿಧವೆ. ಎಲ್ಲರೂ ಕೊಳ್ತಿಗೆ ಗ್ರಾಮದ ಕುದ್ರೋಳಿ ಎಂಬಲ್ಲಿ.

ಮೇಲಿನ ಅರ್ಜಿದಾರರು ಪೈನಲ್ ಡಿಕ್ರಿ ಕುರಿತು ಮಾಡಿದ ಮೇಲಿನ ಅರ್ಜಿಯು ತಾ. 16–12–71ಕ್ಕೆ ನಿಮ್ಮ ಆಕ್ಷೇಪ ಪಗ್ಗೆರೆ ಹೇಳಲು ವ್ಯಾವೆ ಇರುತ್ತದೆ.

ಅದುದರಿಂದ ನೀವು ಆ ದಿವಸ ಬೆಳಿಗ್ಗೆ 11 ಗಂಟೆಗೆ ಹಾಜರಾಗಿ ಆಕ್ಷೇಪ ನಗ್ಗೆರೆಗಳಿದ್ದಲ್ಲಿ ತಿಳಿಸಬೇಕಾಗಿರುತ್ತದೆ. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಆಜ್ಞೆಯನ್ನು ಮುಂದುವರಿಸಲಾದೀತು ಎಂತ ನಿಮಗೆ ಈ ಮೂಲಕ ತಿಳಿಸಲಾಗಿರುತ್ತದೆ.

(By Order)

(Sd) K. T. Bhat

Advocate for Petitioner.

Puttur, S. K. 27—11—71.

ಚುನಾವಣಾ ವೇದಿಕೆಯ ಮೇಲೆ

ಘೋಷಣಾ ಭೈರವರ ಒಡ್ಡೋಲಗ

ಈ ವರ್ಷಾದಿಯಲ್ಲಿ ಲೋಕ ಸಭೆಗೆ ನಡೆದ ಮಧ್ಯಾವಧಿ ಚುನಾವಣೆಗಳು ದೇಶದ ರಾಜ್ಯಕೀಯ ರಂಗಕ್ಕೆ ಹೊಸತಿರುವೊಂದನ್ನು ನೀಡುತ್ತಲಿವೆಯೇ ಎಂಬ ಅನುಮಾನವೀಗ ಬಲವಾಗುತ್ತಿದೆ. ಅವು ಶ್ರೀಮತಿ ಗಾಂಧಿಯವರಿಗೆ ಅತ್ಯದ್ಭುತ ವಿಜಯವನ್ನು ತಂದುಕೊಟ್ಟು ಇತಿಹಾಸ ನಿರ್ಮಿಸಿದುವು. ಇಂದಿರಾ ವಿರೋಧಿ ಮೈತ್ರಿಕೂಟವನ್ನು ನಭೂತೋ ನಭವಿಷ್ಯತಿ ಎಂಬಂತೆ ಪರಾಜಿತಗೊಳಿಸಿ ಮಹಾಮಲ್ಲರ ಮುಖ ಭಂಗಮಾಡಿದುವು.

ಶ್ರೀಮತಿ ಗಾಂಧಿಯವರ ಗೆಲವಿಗೆ ಪ್ರೇರಕ ಶಕ್ತಿಯಾದದ್ದು ಗರೀಬೀ ಹಟಾವೋ ಘೋಷಣೆ. ಕಾದಿನೈದು ಪ್ರಮುಖ ಬ್ಯಾಂಕುಗಳ ರಾಷ್ಟ್ರೀಕರಣ ಮತ್ತು ರಾಜಧನ ರದ್ದತಿಯ ಪರಿಣಾಮಗಳ ಬಗೆಗೆ ಆದ್ದಾರಿಯ ಉದ್ದುಮೂ ಪ್ರಚಾರಗಳು ಇವಕ್ಕೆ ಪೋಷಕವಾದುವು. ತ್ವರಿತ ಪ್ರಗತಿಯ ಮನ ಸೆಳೆಯುವ ಘೋಷಣೆಗಳಿಂದ ಜನಪ್ರಭಾವಿತರಾದದ್ದು. ವೈತ್ರಿಕೂಟದ ಅಸಮರ್ಪಕ ಮತ್ತು ಅಸಮೂರ್ಥನಕರ ವರ್ತನೆಯಿಂದ ಮತದಾರರು ನೊಂದದ್ದು ಜಗಜ್ಜನಿತ.

ಭಾರತೀಯರಲ್ಲಿ ಬಡತನ ವಿರೋಧೀ ದೆಯೆಂದೂ ಅದನ್ನು ತೊಲಗಿಸಿ ಬಿಡುವುದು ಹರಿಶರ ಬ್ರಹ್ಮಾದಿಗಳಿಂದಲೂ ಕಠಿಣ ಸಾಧ್ಯವೆಂದು ರಾಜ್ಯಕಾರಣಿಗಳಿಗೆ ಗೊತ್ತು. ಆದರೂ ಜನರು ವಸ್ತು ಸ್ಥಿತಿಗಿಂತ ಕಲ್ಪನೆಗೆ ಹೆಚ್ಚು ಮಹತ್ವ ಕೊಡುತ್ತಾರೆ. ಘೋಷಣೆಗಳಿಂದ ಬಗೆಸಲ್ಪಟ್ಟ ಪ್ರಭಾವಿತರಾಗುತ್ತಾರೆ—ಎಂಬುದನ್ನು ಮೊತ್ತ ಮೊದಲು ಕಂಡು ಕೊಂಡ ಯುಗಪ್ರಷ್ಟಾರ ಮನೆಹರುಗಳೇ ಇವಡಿಯ ಕಾಂಗ್ರೆಸ್ ಅಧಿವೇಷನದಲ್ಲಿ ಇವರು ಸಮಾಜವಾದಿ ಮೂದರಿಯ ಸಮಾಜ ರಚನೆಯನ್ನು ಪಕ್ಷದ ಧ್ಯೇಯವೆಂದುಘೋಷಿಸಿ ಮುಂದಿನ ಒಂದೆರಡು ಚುನಾವಣೆಗಳಲ್ಲಿ ಮತಗಿಟ್ಟಿಸಲು ಸಶಕ್ತರಾದರು.

ಶ್ರೀಮತಿ ಗಾಂಧಿಯವರು ತನ್ನ ಪಕ್ಷದ ವರಿಷ್ಠರಿಗೇ ಎದುರಾಡಿದ್ದರಿಂದ; ಕಾಂಗ್ರೆಸ್ಸಿನ ಹೂರಣ ಹೊರಬಿತ್ತು. ಪಕ್ಷದ ಆಸಕ್ತ ವ್ಯಕ್ತಿಗಳು ಪ್ರಗತಿಪರ ಕಾರ್ಯಗಳಿಂದ ತಮ್ಮನ್ನು ವಿಮುಖ ಗೊಳಿಸುತ್ತಿದ್ದಾರೆ—ಎಂದು ಆಕೆ ನೆಟ್ಟಿದು ನಿಂತದ್ದಕ್ಕೆ ವಾಸ್ತವಿಕ ಸಮರ್ಥನೆಗಿಂತಲೂ ಕಾಲ್ಪನಿಕ ಸಮರ್ಥನೆಯೇ ಹೆಚ್ಚು. ತಾನು ಉದಾರಿಯೆಂದು, ತನ್ನ ವಿಚಾರ ಪವಿತ್ರವೆಂದು ಸಾರಲು ಆಕೆಯೊಂದು ವ್ಯೂಹ ಕಟ್ಟಿಕೊಂಡರು; ಆದರೆ ಸಫಲರಾದರು. ಪಕ್ಷವ ಅಶಕ್ತತೆ- ಅಸಾಮರ್ಥ್ಯಗಳೆಲ್ಲದರ ದೋಷವನ್ನೂ ಈ ವ್ಯೂಹ ಕಾರ್ಯಾಂಗದ ಮೇಲೆ ಹೊರಿಸಿ ಪಕ್ಷದ ಹಿಯರ ತಲೆ ಹೊರಿಸಲು ಶಕ್ತವಾಯ್ತು. ಇದು ದೈವ ಯೋಗ.

ಘೋಷಣೆಗೆ ಮರುಳಾಗುವ ಭಾರತೀಯ ಮನೋವೃತ್ತಿಯಿಂದ ಶ್ರೀಮತಿ ಗಾಂಧಿ ಬಹಳಷ್ಟು ಲಾಭ ಹೊಂದಿದರು. ಆದರೆ ತಮ್ಮ ಘೋಷಣೆಯನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಆಕೆಗೆಷ್ಟು ಆಸಕ್ತಿಯೆಂಬುದು ಇನ್ನೂ ಅವ್ಯಕ್ತವಾಗೇ ಇದೆ. ತನ್ನ ಆ ಸಫಲತೆಗೆ ಆಕೆ ಹಲವಾರು ಸಮಸ್ಯೆಗಳನ್ನು ಮುಂದೂಡ ಬಹುದು. ಸಂವಿಧಾನ ತಿದ್ದುಪಡಿಯ ಕಾರ್ಯ ಮೊದಲಾಗಬೇಕೆಂದು ಹೇಳಬಹುದು ಆದರೆ, ಮೂರಕಟ್ಟಿಯಲ್ಲಿ ಬೆಲೆಯೇರುತ್ತಲೇ ಹೋಗುತ್ತಿರುವುದನ್ನು ತಪ್ಪಿಯವುದಕ್ಕೂ ಸಂವಿಧಾನ ತಿದ್ದು ಪಡಿಯಾಗ ಬೇಕೆ? ಈ ಬಗ್ಗೆ ಪರಿಣಾಮಕಾರಿ ಕ್ರಮ ಕೈಕೊಳ್ಳುವುದರಲ್ಲಿ ಆಕೆ ಅಡೇಕೆ ಸಂಪೂರ್ಣ ವಿಫಲರಾಗಿದ್ದಾರೆ?—ಈ ಪ್ರಶ್ನೆಗೆ ಶ್ರೀ ಸಾಮಾನ್ಯ ಕೇಳಿದರೆ, ಅದಕ್ಕೂ ಆಕೆ ಪ್ರಗತಿ ವಿರೋಧಿ ಶಕ್ತಿಗಳನ್ನು ಬೊಟ್ಟು ಮಾಡುತ್ತಾರೆ ಆದರೆ, ದೇಶದಲ್ಲಿ ಪ್ರಗತಿ ವಿರೋಧಿಗಳೆಲ್ಲರೂ ಮಟ್ಟಸರಾಗಿ ಹೋಗಿ ದ್ದಾರೆಂಬುದನ್ನು ಆಕೆ ಒಪ್ಪಿಕೊಂಡು ಜನತೆ ತನ್ನನ್ನು ಬೆಂಬಲಿಸಿದ್ದಕ್ಕೆ ಏದೆಂದೊ ಕೈತಜ್ಞತೆ ವ್ಯಕ್ತಪಡಿಸಿದ್ದಾರೆ.

'ಘೋಷಣಾ ವಿಜಯ'ದ ತಂತ್ರವನ್ನು ಮನವರಿಕೆ ಮಾಡಿಕೊಂಡ ಇತರ ಪಕ್ಷಗಳು ಎಂದರೆ, ಸಿಂಡಿಕೇಟು ಮತ್ತು ಭಾರತೀಯ ಜನಸಂಘಗಳು. ಪರಸ್ಪರ ದೋಷಾರೋಪಣೆಯಲ್ಲ, ತೀವ್ರ ಭಿನ್ನಮತದಲ್ಲೇ ಹಣ್ಣಾಹಣೆಗೆ ತೊಡಗಿರುವ ಸಿಂಡಿಕೇಟಿನ ಆರ್ಥಿಕ ನೀತಿ ತೀವ್ರತರವಾದುದಾದರೂ ಅಲ್ಲಿನ ಹೊಡೆದಾಟ ನಿಂತಿಲ್ಲ. ಆದರೆ, ಜನಸಂಘದ ನಿಲುವು ಮಾತ್ರ ವರ್ಷದಿಂದ ವರ್ಷಕ್ಕೆ ಬದಲಾಗುತ್ತ ಬರುತ್ತಿರುವುದು ನೇಮ್ಯ ವಾಗುತ್ತದೆ. ಜನಸಂಘವು ಮುಂದಗಾಮಿ ಪಕ್ಷ. ಆದರ ಧ್ಯೇಯ—ಕಾರ್ಯ ನಿರೂಪಣೆಗಳೂ ಮುಂದವೇ. ಕಲ್ಲಿಕೋಟೆ, ಮುಂಬಯಿ ಮತ್ತು ಪಾಟ್ನಗಳ ಅಧಿವೇಶನದಲ್ಲಿ ಅದು ತನ್ನ ಮುಂದಗಾಮಿತನದಿಂದ ತಿರುಗಿ ತೀವ್ರಗಾಮಿಯೊಗಲು ಅಧಿಕಾಧಿಕ ಆಸಕ್ತಿ ವಹಿಸುತ್ತ ಬಂದಿರುವುದು ಜನರಿಗೆ ಅಪರಿಚಿತವಾಗಿ ಉಳಿದಿಲ್ಲ. ಸಮಾಜವಾದ, ಪ್ರಗತಿವಾದಗಳ ಬಗೆಗೂ ಅದು ಮೂತನಾಡತೊಡಗಿದ್ದುಂಟು. ಇವೆಲ್ಲಪುಗಳಿಗೂ ಕಲಶವಿಡುವಂತೆ ಮೊನ್ನೆ ಮೊನ್ನೆ ಫಾಜಿಯೂಬಾದದಲ್ಲಿ ನಡೆದ ಅಧಿವೇಶನದಲ್ಲಿ ತೀವ್ರ ತರದ ಆರ್ಥಿಕ ನೀತಿಯನ್ನಾದು ಸ್ವೀಕರಿಸಿ ತನ್ನನ್ನೂ ತೀವ್ರ ಗಾಮಿಗಳ ಸಾಲಿನಲ್ಲಿ ಸೇರಿಸಿಕೊಳ್ಳುವ ಪ್ರಯತ್ನ ನಡೆಸಿದೆ.

ಫಾಜಿಯೂಬಾದದ ಅಧಿವೇಶನದ ಗೊತ್ತುವಳಿಗಳು ಶ್ರೀಮತಿ ಗಾಂಧಿಯವರ ಪ್ರಗತಿವಾದವನ್ನೂ ಆಹ್ವಾನಿಸುತ್ತವೆಯೆಂದರೆ ಅತ್ಯುಕ್ತಿಯಲ್ಲ. ನಗರಗಳ ಆಸ್ತಿಯ ಮೇಲೆ ಮಿತಿ ಹೇರಿಕೆ, ಕೃಷಿ ಆದಾಯದ ಮೇಲೆ ತೆರಿಗೆ ವಿಧಿಸುವುದು, ವಿದೇಶೀ ಬ್ಯಾಂಕುಗಳ ರಾಷ್ಟ್ರೀಕರಣ, ಆವಶ್ಯಕತೆಗೆ ಳಿಗನುಸಾರವಾಗಿ ಕನಿಷ್ಠ ವೇತನ ಗೊತ್ತು ಮಾಡುವುದು, ಕನಿಷ್ಠ-ಗರಿಷ್ಠ ವೇತನಗಳ ನಡುವೆ ಒಂದಕ್ಕೆ ಇಪ್ಪತ್ತರ ದಾವೂರಶಯವನ್ನು ಆನುಷ್ಠಾನಕ್ಕೆ ತರುವುದು ಮೊದಲಾದುವು ಜನಸಂಘದ ಆರ್ಥನೀತಿಯಲ್ಲಿಂದು ಆಡಕವಾಗಿವೆ. ಇವುಗಳಲ್ಲಿ ಕೆಲವನ್ನು 'ಗರೀಬೀ ಹಟಾವೋ' ಘೋಷಣಕಾರರು ನಿರಾಕರಿಸಿದ್ದುಂಟು; ಕೆಲವುಗಳ ಬಗ್ಗೆ ಮಿನಮೇಷನೆಡೆಸುತ್ತಿರುವುದುಂಟು. ಹಾಗಿರುವಾಗ ಏಕಪಕ್ಷೀಯವಾಗಿ ಜನಸಂಘವು ತಳೆದ ಈ ಪ್ರಗತಿಪರ ಆರ್ಥಿಕ ನೀತಿಯು ಅವರನ್ನೂ ನಾಚಿಸಲೇಬೇಕು. 'ಮುಂದಗಾಮಿ' ಎಂದು ತನಗಂಟಿದ ಕರಿಪಟ್ಟಿಯನ್ನು ತೊಳೆದು ಬಿಳಿಮಾಡಲು ಜನಸಂಘದ ಫಾಜಿಯೂಬಾದ ಅಧಿವೇಶನವು ಬಹಳಷ್ಟು ಪ್ರಯತ್ನಿಸಿದೆಯೆಂಬುದು ಸ್ಪಷ್ಟ.

ಸಿಂಡಿಕೇಟು ಕೂಡ ತನ್ನ ಹಳೆಯ ನೀತಿಯಲ್ಲಿ ಬಹಳಷ್ಟು ಪರಿವರ್ತನೆಗೆ ಮುಂದೆ ಬಂದಿದೆ ಸ್ವತಂತ್ರ ಪಕ್ಷವೂ ತನ್ನ ನಿಲುಮೆಯನ್ನು ತುಸುವಾದರೂ ಬದಲಿಸಿಕೊಂಡರೆ ಆಶ್ಚರ್ಯವೇನಿಲ್ಲ. ಆಗ ಮುಂದಗಾಮಿ ಪಕ್ಷಗಳೇ ಇಲ್ಲವಾಗಿ ತೀವ್ರಗಾಮಿಗಳದೇ ಮೇಲುಗೈಯೂಗುತ್ತದೆ. ಆದರೆ, ಸದ್ಯ ಶ್ರೀಮತಿ ಗಾಂಧಿಯವರ ಪಕ್ಷದಲ್ಲೇ ತೀವ್ರವಾದಿಗಳು—ಮುಂದಗಾಮಿಗಳು ಹುಟ್ಟಿಕೊಂಡಂತೆ ಎಲ್ಲ ಪಕ್ಷಗಳಲ್ಲೂ ಮೂಡುವುದು ಅಸಂಭವವಲ್ಲ. ಭಾರದಂತಹ ದಟ್ಟದರಿದ್ರರ ನಾಡಿನಲ್ಲಿ ತೀವ್ರಗತಿಯ ಆರ್ಥಿಕ ನೀತಿಯು ಅನುಷ್ಠಾನಕ್ಕೆ ಬರಬೇಕಾದರೆ ಬಹಳ ಕಾಲಾವಕಾಶ ಬೇಕು ಆವರೆಗೆ ಘೋಷಣಭೈರವರ ಒಡ್ಡೋಲಗ ನಡೆಯುತ್ತಲೇ ಇರುತ್ತದೆ. ಎಲ್ಲರೂ ತಮ್ಮನ್ನು ತೀವ್ರವಾದಿಗಳೆಂದೇ ಹೇಳಿಕೊಳ್ಳುತ್ತಾರೆ. ಅವರ ಪ್ರಯೋಗಗಳಿಂದ-ಶ್ರೀಸಾಮಾನ್ಯನನ್ನು ಯಾರು ರಕ್ಷಿಸಬೇಕು?

ವಿಧಾನ ಸಭೆಗಳ ಚುನಾವಣೆಗಳು ನಿಕಟ ಬರುತ್ತಿರುವುದರಿಂದ, ತಮ್ಮ ತಮ್ಮ ಪಕ್ಷಗಳತ್ತ ಶ್ರೀಸಾಮಾನ್ಯರನ್ನು ಆಕರ್ಷಿಸುವಂತೆ ಕ್ರಮ ಕೈಗೊಳ್ಳುವುದು ರಾಜಕೀಯ ಪಕ್ಷಗಳಿಗೆ ಅನಿವಾರ್ಯವೇ. ಆದುದರಿಂದ ಜನ ಮೆಚ್ಚುವ ಹೊಸ ಹೊಸ ಘೋಷಣೆಗಳಿಗೆ ಅನಿವಾರ್ಯವಾಗಿ ಜನ್ಮ ಕೊಡಲೇ ಬೇಕಾಗುತ್ತದೆ. ಜನಸಂಘದ ತೀವ್ರತರ ಆಕರ್ಷಕ ನೀತಿಯೀದೆಲೆ ಎಂಥವನಾದರೂ ಆಕರ್ಷಿತನಾಗಲೇ ಬೇಕು. ಇವೆಲ್ಲ ಗಗನ ಕುಸುಮ, ಅವಾಸ್ತವಾದವೆಂದು ಆದೇ ನಿದ್ದರೂ ಶುದ್ಧ ಜಾತೀಯವೆಂದು ಅವರ ವಿರೋಧಿಗಳು ಹೊಸ ಬಗೆಯ ಪ್ರಚಾರಕ್ಕೆ ತೊಡಗಲೇ ಬೇಕಾಗುತ್ತದೆ.

ರು. ಇದಕ್ಕೆ ವೈಶಿಷ್ಟ್ಯವೂ ಇದೆ. ಅವರ ವರ್ಚಸ್ಸಿರುವದು ಬಂಗಾಳ– ಕೇರಳಗಳಲ್ಲಿ. ಬಂಗ್ಲಾ ದೇಶ ಅಸ್ತಿತ್ವಕ್ಕೆ ಬಂದು ಆಲ್ಲಿ ಜೈನಿ ಕಮ್ಯೂನಿಸ್ಟರ ಕೈವಾಡ ನಡೆಯಲಾರಂಭಿಸಿದೊಡನೆ ಪಶ್ಚಿಮ ಬಂಗಾಲದ ಕಮ್ಯೂನಿಸ್ಟರು ಪ್ರತ್ಯೇಕತೆ, ಸ್ವಾತಂತ್ರ್ಯ, ಬಿಡುಗಡೆಯ ಬೊಬ್ಬೆ ಹಾಕಿ ಒಂದೇ ಬಂಗಾಲ ಕ್ಕಾಗಿ ಹೆಣಗಾಡುವದು ಸಹಜವಿದೆ. ಆಲ್ಲಿ ಜೈನಿ ಸೈನ್ಯ ಬಂತೆಂದರೆ ಕ್ರಮಶಃ ಆ ಡ್ರೇಗನ್ ಆಡಿಯ ಮುಂದಿಡುವ ದರಲ್ಲಿ ಸಂದೇಹವಿಲ್ಲ. ಹಾಗೆನೇ ದಕ್ಷಿಣದಲ್ಲಿ ಆಯತ್ತವಾದ ಸ್ಥಳ ಕೇರಳ. ಈಗಾಗಲೇ ಅಲ್ಲಿ ಜಲಂತರ್ಗಾಮಿಗಳು ಬಂದು ಹೋಗುತ್ತಿವೆಯೆನ್ನಲಾಗುತ್ತಿದೆ. ಕೇರಳ ಪ್ರತ್ಯೇಕ ದೇಶವೆಂದಾದಲ್ಲಿ ಜೈನಿ ಸೇನೆ ಅಲ್ಲಿ ತಳವೂರಿತೆಂದರೆ ಬಂಗಾಲ-ಕೇರಳಗಳಲ್ಲಿದ್ದು ಉಳಿದ ಭಾರತವನ್ನು ನುಂಗಿಬಿಡಲು ಹೆಚ್ಚು ಸಮಯ ಬೇಕಾಗಲಿಕ್ಕಿಲ್ಲ.

ಇದನ್ನು ಗಮನದಲ್ಲಿಟ್ಟುಕೊಂಡೇ, ಈಗಿನ ಭಯಂಕರ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯು ಪ್ರತ್ಯೇಕತೆಯ ಸ್ವರವನ್ನೆತ್ತಿರುತ್ತದೆ. ಜಿದೆತ್ತಿರುವ 'ಅಗಲುವಿಕೆಯ ಅಧಿಕಾರ'ಕ್ಕೆದುರಾಗಿ ಕಾಂಗ್ರೆಸ್ಸಿನ ಸ್ವರವೆತ್ತಿದ್ದಲ್ಲಿ ಪಿಂಡಿಪಾನರು ಅದನ್ನೇ ಧ್ವನಿವರ್ಧಕದ ಮೂಲಕ ಪ್ರಸರಿಸಿ ಬಂಗ್ಲಾ ಚಳುವಳಿಯನ್ನು 'ಹತ್ತಿಕ್ಕ ಬಹುದು. ಕಾಂಗ್ರೆಸ್ಸಿ 'ಅಗಲುವಿಕೆಯ ಅಧಿಕಾರ'ಕ್ಕೆ ಅಸ್ತು ಅಂದಲ್ಲಿ ಬಂಗ್ಲಾ ದೇಶ ಸ್ಥಾಪನೆಯ ನಂತರ ತಮ್ಮ ದೇಶ ಘಾತುಕ ಚಟುವಟಿಕೆಗೆ ಮುಂದಾಗುತ್ತದೆ ಕಮ್ಯೂನಿಸ್ಟ್ ಪಾರ್ಟಿ.

ಈ ಬಾರಿ ಕಷ್ಟಕರವಾದುದೆಂದು ಕಮ್ಯೂನಿಸ್ಟರಿಗೆ ಗೊತ್ತು. ಆದುದರಿಂದಲೇ ಮುಖ ಉಳಿಸಿಕೊಳ್ಳಲು ಅವರು ಕೆಲವೊಮ್ಮೆ "ಭಾರತ ಒಂದು ದೇಶ"ವೆನ್ನುತ್ತಾರೆ ಅತ್ತ ತಿರುಗಿ 'ಯೂನಿಯನ್'ಎಂದು ಕಾಂಗ್ರೆಸ್ಸಿಗರನ್ನು ನೋಡಿ ಹೇಳುತ್ತಾರೆ. ಆದಕ್ಕೆ ವಿರುದ್ಧ ಸ್ವರ ಬರುವದೆಂತು? ಅಲ್ಲಿಂದ 'ಅಗಲುವಿಕೆ'ಯ ಆಲಗನ್ನು ಮುಂದಕ್ಕೆ ಜಾಚುತ್ತಾರೆ, ಇದುವೇ ಕಮ್ಯೂನಿಸ್ಟರ ರಾಜಕೀಯ ತಂತ್ರವಿದೆ.

—ಶಿವಕಂಕರ



ಆಸಕ್ತ ಶಕ್ತಿಗಳ ಅನಪೇಕ್ಷಿತ ಪ್ರಭಾವ

(ಐದನೇ ಪುಟದಿಂದ)

ನೆಯ ಅಂಶವಾಗಿರಬೇಕಿತ್ತು. ಇದೊಂದೇ ಸಾಧಿತವಾದರೆ, ಉಳಿದವೆಲ್ಲವೂ ತಾನೇ ತಾನಾಗಿ ಕಾರ್ಯಗತವಾಗುತ್ತವೆ. ರಾಜ್ಯ ಕೀಯ ಪರಿಹಾರ ಕಂಡುಹಿಡಿಯದ ಹೊರತು ಮಧ್ಯಸ್ಥರು ಮಾಡುವುದೇನನ್ನು? ಯೂಹ್ಯಾಖಾನರು ಇಂತಹ ಪರಿಹಾರ ಕಂಡುಹಿಡಿದ ಮೇಲೆ ಸಿರಾಶ್ರಿತರು ತಾವಾಗಿಯೇ ಬಂಗ್ಲಾಕ್ಕೆ ಮರಳುತ್ತಾರೆ. ಮುಕ್ತೆವಾಹಿನಿಗೆ ಭಾರತವು ನೈತಿಕ ಸಹಾಯವನ್ನೂಡುವುದು ಮಾತ್ರ; ಸೈನಿಕ ಸಹಾಯವಿಲ್ಲ. ಹಿಂದೆ ಚಿನೋ ರಿಕೆಯು ನೀಡಿದಂತಹ ಸಲಹೆಯನ್ನೇ ಈಗ ಸಂಯುಕ್ತ ಅರಬ ಗಣರಾಜ್ಯವೂ ನೀಡಿದಂತಿದೆ.

ಬಂಗ್ಲಾದೇಶದ ಚುನಾಯಿತ ಪ್ರತಿನಿಧಿಗಳ ಕೈಗೆ ಅಧಿಕಾರ ಒಪ್ಪಿಸುವುದು ಆಗತ್ಯ. ಚುನಾಯಿತ [ಪ್ರತಿನಿಧಿಗಳೆಂದರೆ, ಶೇಕಮುಬುಜಿರ್ ರಿಹಮೋನರ ಅವಾಮಿ ಲೀಗಿನ ಪ್ರತಿನಿಧಿಗಳೇ ಅವಾಮಿಲೀಗನ್ನೇ ಬಹಿಷ್ಕರಿಸಿದ ಯೂಹ್ಯಾಖಾನರು ಅದರ ನಾಯಕರಿಗೆ ಅಧಿಕಾರ ನೀಡುವರೆ? ಸೈನ್ಯಧಿಕಾರಿಗಳು ಶೇಕರನ್ನೇ ಮುಗಿಸುವ ಇರಾದೆಯಲ್ಲಿರುವಾಗ, ರಾಜ್ಯ ಕೀಯ ಪರಿಹಾರವನ್ನು ಅವರು ಹೇಗೆ ಹುಡುಕಲು ನೆರವಾಗುತ್ತಾರೆ? ಅರಬ ಜಗತ್ತು ಯೂಹ್ಯಾಖಾನರ ಕುರುಡು ನೀತಿಗೆ ಬೆಂಬಲ ನೀಡುತ್ತಿದೆಯೆಂಬುದಕ್ಕೆ ಸಾದತ್ ಯೋಜನೆ ಬೆಳಕು ಚೆಲ್ಲುತ್ತದೆ ಟರ್ಕಿಯಂತೂ ಅದೆಂದೋ ಯೂಹ್ಯಾ ಹಿಂದೆ ನಿಂತು ಬಿಟ್ಟಿದೆ.

ಸಾದತ್ತರು ತನ್ನ ಅನನ್ಯತೆಯ ಸಲಹೆಗಳನ್ನು ನೀಡಿ ಗೊಂದಲವನ್ನು ಹೆಚ್ಚಿಸುವುದಕ್ಕಿಂತ, ಕಾಲಹರಣ ಮಾಡುವುದಕ್ಕಿಂತ ದಿಟ್ಟತನದ ಘೋಷಣೆ ಮಾಡಬೇಕು. ಯೂಹ್ಯಾಖಾನರು ಬಂಗ್ಲಾ ಸಮಸ್ಯೆಗೆ ತಕ್ಷಣ ರಾಜ್ಯಕೀಯ ಪರಿಹಾರ ಕೈಗೊಳ್ಳಬೇಕು. ಬಂಗ್ಲಾ ನಿರಾಶ್ರಿತರು ಸ್ವದೇಶಕ್ಕೆ ಮರಳಬೇಕು. ಪಾಕ್ ಭಾರತಗಳು ತಮ್ಮ ಸೇನೆಯನ್ನು ಮರಳಿ ಕರೆದುಕೊಳ್ಳಬೇಕು. ರಷ್ಯ ಹೇಳುವಂತೆ ಈ ಬಗ್ಗೆ ಮೂರನೆಯವರ ಮಧ್ಯಸ್ಥಿಕೆ ಅನಗತ್ಯ–ಆದರೆ, ಹೀಗೆ ಹೇಳುವ ಆತ್ಮಬಲ ಸಾದತ್ತರಿಗಿದೆಯೆ? ●

ಅಭಿಪ್ರಾಯ—

ವ್ಯಕ್ತಿ ಸ್ವಾತಂತ್ರ್ಯ ಕಸಿತ ಯಾತಕ್ಕಾಗಿ?

ಪ್ರಜಾಪ್ರಭುತ್ವದ ಅಡಿಗಲ್ಲು ವ್ಯಕ್ತಿ ಸ್ವಾತಂತ್ರ್ಯ ನಮ್ಮ ಸಂವಿಧಾನದ 19ನೇ ಅನುಚ್ಛೇದದ ಪ್ರಕಾರ ವ್ಯಕ್ತಿಗೆ ಹತ್ತಾರು ಆದ್ಯ ಪ್ರಾಶಸ್ತ್ಯದ ಸ್ವಾತಂತ್ರ್ಯಗಳಿವೆ— ಅವುಗಳಲ್ಲಿ ಪಾರ್ಲಿಮೆಂಟರಿ ಪ್ರಜಾಸತ್ತೆಯ ಯಶಸ್ವಿಗೆ ಪ್ರಾಮುಖ್ಯವಾದ ಅಭಿಪ್ರಾಯ ಸ್ವಾತಂತ್ರ್ಯ ಮತ್ತು ವ್ಯಕ್ತಿ ದುಡಿಮೆ ಯಶಸ್ಸಿನ ಮೂಲಭೂತ ಹಕ್ಕಿನ ಸ್ವಾತಂತ್ರ್ಯಗಳು ಉಲ್ಲೇಖನೀಯ

ಇವೆರಡು ನಮ್ಮ ಪ್ರಜಾಧಾರಿತ ಕಟ್ಟಡದ ಭದ್ರ ಬುನಾದಿಯೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ

ಭಾರತ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಈ ಹಿರಿದಾದ ಭಾರತಪ್ರಜಾಸತ್ತೆ ಯಶಸ್ವಿಗಾಗಿ ಸುಗಮವಾಗಿ ದಾರಿ ಕ್ರಮಿಸುವುದು ಪ್ರಜೆಗಳನ್ನು ಅವಲಂಬಿಸಿದೆ. ಪ್ರಜೆಗಳಿಂದ ಪ್ರಜೆಗಳಿಗಾಗಿ ನಡೆಯುವ ರಾಷ್ಟ್ರ ಪ್ರಜಾಪ್ರಭುತ್ವ. ಪ್ರಜೆಯೇ ಇಲ್ಲಿನ ಪ್ರಜಾಪ್ರಭುತ್ವದೊರಾಜಕೀಯ ಡೈವರನೆಂದು.

ಪ್ರಜಾಹಕ್ಕಿನ ಪ್ರಜಾಪ್ರಭುತ್ವ ರಾಷ್ಟ್ರವಾದ ನಮ್ಮಲ್ಲಿ ಅತ್ಯಾಚಿನ ಮಧ್ಯಕಾಲೀನ ಚುನಾವಣೆ ನಂತರ ಆದುದೇನು—ತದ್ವಿರುದ್ಧ ಬರೇ ಗುಲ್ಲು ಸಿದ್ರೆಗೇಡುವೆಂಬಂತೆ. ನಮ್ಮ ಪ್ರಸಕ್ತ ಆಡಳಿತದ ಹೊಣೆ ಹೊತ್ತ ಇಂದಿರಾ ಸರ್ಕಾರ ಪ್ರಜೆಗಳ ಹೆಸರಿನಲ್ಲಿ ಪ್ರಜೆಗೆ ಸಂವಿಧಾನ ಕೊಟ್ಟ ಮೂಲ ಭೂತ ಹಕ್ಕಿನ ತಿದ್ದುಪಡಿ ಮಾಡಿದ್ದು. ಇದು ತರನೆ? ತರವಲ್ಲ ಹಿತವು ಅಲ್ಲ ಏಕೆಂದರೆ ಇದರ ಪರಿಣಾಮು ನಾಳಿನ ಗತಿ ನಾರಾಯಣನೆ ಬಲ್ಲ.

'ಮೂಲ ಭೂತ ಹಕ್ಕು' ಇದಕ್ಕೆ ಸಂವಿಧಾನ ಕಲ್ಪಿಸಿರುವ ವ್ಯವಸ್ಥೆಯನ್ನಿಷ್ಟು ಮಧಿಸೋಣ.

ಭಾರತದ ಸಂವಿಧಾನದಲ್ಲಿ ನಮಗೆ ತಿಳಿದಂತೆ ಏಳು ವಿಧದ ಮೂಲ ಭೂತ ಹಕ್ಕುಗಳಿವೆ.

ಅವಾವುವೆಂದರೆ, ಪ್ರತಿಯೊಬ್ಬನಿಗೂ ಸಮಾನತೆಗಾಗಿ ಪ್ರಯತ್ನಿಸುವ ಹಕ್ಕು. ಮನಬಂದಂತೆ ನಡೆಯುವ ಸ್ವಾತಂತ್ರ್ಯದ ಹಕ್ಕು. ತನಗೆ ಮನ ಬಂದ ಮತದಲ್ಲಿ ಇರುವ ಹಕ್ಕು. ತನ್ನ ಇಚ್ಛೆಗೆ ಒಗ್ಗಿದ ಸಂಸ್ಥೆ ಕಟ್ಟಿ ಮತ್ತು ಶಿಕ್ಷಣಕ್ಕೆ ಒಳಗಾಗುವ ಹಕ್ಕು ಮತ್ತು ತಾನು ನುತ್ತು ತನ್ನ ಹಿರಿಯರು ಗಳಿಸಿದ ಆಸ್ತಿ ಕಾಪಾಡುವ ಹಕ್ಕು–ಇವು ಆದ್ಯ–ಪ್ರಾಶಸ್ತ್ಯದ ಸಂವಿಧಾನ ನಿರ್ದೇಶನದ ಮೂಲಭೂತ ಹಕ್ಕುಗಳ ಅರ್ಥ ವಿವರಣೆ.

ನಮ್ಮ ಪ್ರಭುತ್ವ ಸಂಸನ್ನ ಪ್ರಜಾಸತ್ತಾತ್ಮಕ ಗಣರಾಜ್ಯಕ್ಕೆ ಮೂಲಭೂತ ಹಕ್ಕುಗಳು ಎಷ್ಟು ಅತ್ಯವಶ್ಯವೆಂದು ತಿಳಿದುಕೊಂಡಿವಷ್ಟೆ? ಈ ಹಕ್ಕುಗಳ ಕಸಿತ ಯಾವುದಕ್ಕಾಗಿ?

ನಮ್ಮ ಈ ಪ್ರಶ್ನೆಗೆ ಸರ್ಕಾರವೇನೊ ಹೇಳುತ್ತಿದೆ ನಮ್ಮದು ಸಮತಾವಾದದ ನೀತಿ ಅಂದರೆ ಸರ್ವರನ್ನು ಸರಿಸಮಾನ ಮಾಡುವ ನೀತಿ. ಈ ನೀತಿಗೆ ಮೂಲಭೂತ ಹಕ್ಕುಗಳು ತಡೆಯೊದುದರಿಂದ ಮೂಲ ಭೂತ ಹಕ್ಕುಗಳ ತಿದ್ದುಪಡಿಯೆಂದು-ಆದರೆ ಈ ಮಾತಿಗೆ ನಗಬೇಕೊ ಅಳಬೇಕೋ ಎಂದು ನಮಗರ್ಥವಾಗುವುದಿಲ್ಲ.— ಏಕೆಂದರೆವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕನ್ನು ಕಸಿದು ಸರ್ವರನ್ನು ಸರಿಸಮಾನ ಮಾಡುತ್ತೇವೆಂದು ಎಣಿಸುವುದು ತಳಕಟ್ಟಲ್ಲದೆ ಮನೆಯನ್ನು ಕಟ್ಟುತ್ತೇವೆಂದು ಹೇಳಿದಂತೆಯೆ ಸರಿ.

ಹೆಚ್ಚೇಕೆ ಇದು ದುಡಿಯಲಾರದ ಸಮಾಜ ರಚನೆಯು ನಾಂದಿಯೆಂದರೂ ಅತಿಶಯೋಕ್ತಿ ಮೂತಾಗಲಿಕ್ಕಿಲ್ಲ —ಏಕೆಂದರೆ ಯಾರಿಗಾಗಿ ಯಾರು ದುಡಿಯಬೇಕು. ಎಂಬ ಮಾತು ಇಲ್ಲಿಹುಟ್ಟುತ್ತದೆ ಮೂಲ ಭೂತ ಹಕ್ಕು ಇಲ್ಲದಿದ್ದರೆ

ಆರಕ್ಕಿಂತಲು ಹೆಚ್ಚಾಗಿ ಇದರಲ್ಲಿ ವ್ಯಧಿತ ವಿಷಯವೆಂದರೆ ವಿಶ್ವದಲ್ಲಿಯೇ ಘನಸ್ಥಿಕೆಯ ನಿಷ್ಪಕ್ಷಪಾತ ನ್ಯಾಯಾಲಯವೆಂದು ಹೆಸರು ಪಡೆದ ನಮ್ಮ ಸರ್ವೋಚ್ಚ ನ್ಯಾಯಾಲಯವು ಸಹಾ ಜನತೆಯ ಮೂಲ ಭೂತ ಹಕ್ಕುಗಳನ್ನು ಕಾಪಾಡಿಕೊಡದಂತೆ 368ನೇ ಕಲಂನ್ನು ಸರಕಾರ ತಿದ್ದುಪಡಿ ಮಾಡಿರುವುದು.

ಇಂತು ನಮ್ಮ ಈ ವ್ಯಥೆಯ ಸಮಥಾನಕ್ಕೆ ಪ್ರಸಕ್ತ ಆಡಳಿತವೇನೋ ಹೇಳುತ್ತಿದೆ. ನ್ಯಾಯಾಂಗಕ್ಕಿಂತಲು ಶಾಸಕಾಂಗ ಹಿರಿದು ಈ ಹಿರಿತನದ ತತ್ವ ಜಾರಿಮಾಡಲು ಪ್ರಗತಿಪರ ಧೋರಣೆ ಅನುಸರಿಸಲು ನ್ಯಾಯಾಂಗ ಮತ್ತು ಸಂವಿಧಾನ ನಿರ್ದೇಶಕ ತತ್ವ ಅಡ್ಡಿಯಾದುದರಿಂದ ಈ ತಿದ್ದುಪಡಿ ಮಾಡಬೇಕಾಯಿತು ಎಂದು.

ಈ ಅಂಬೋಣ ಸರಿಯೋ ತಪ್ಪೊ ಒಪ್ಪತಕ್ಕದ್ದೆ ಅಲ್ಲವೊಎಂಬುದಕ್ಕೆ ನಮ್ಮ ಸಂವಿಧಾನ ನಿರ್ದೇಶಕ ತತ್ವದ ಔಚಿತ್ಯವನ್ನಿಷ್ಟು ಮಧಿಸೋಣ.

ನಮ್ಮದು ಅಂದರೆ ಭಾರತದು ಬಹು ವಿಸ್ತೀರ್ಣತೆಯ ಬಹು ಸಂಖ್ಯೆ ಜನತೆಯ ವಿಶಾಲವಾದ ದೇಶ ಆ ವಿಶಾಲ ಪ್ರದೇಶದಲ್ಲಿ ವಿವಿಧ ಮನೋಭಾವನೆಯ ಹತ್ತಾರು ಪಕ್ಷಗಳು. ಈ ಹತ್ತಾರು ಪಕ್ಷಗಳಿಗೆ ಹತ್ತಾರು ಧ್ಯೇಯ ಧೋರಣೆಗಳು. ಅಂದರೆ ಒಂದು ಪಕ್ಷದ ಅಡಳಿತದ ರೀತಿ ನೀತಿಯಂತೆ ಇನ್ನೊಂದರ ಮತ್ತೊಂದರ ರೀತಿ ನೀತಿಯಿರುವುದಿಲ್ಲ ಅಲ್ಲದೆ ಐದು ವರ್ಷಕ್ಕೊಮ್ಮೆ ಮಹಾ ಚುನಾವಣೆ ಬೇರೆ. ಈ ಮಹಾ ಚುನಾವಣೆಯಲ್ಲಿ ಯಾವ ಪಕ್ಷಕ್ಕೆ ಬಹುಮತ ಬರುತ್ತದೆಯೊ ಅದರದ್ದೇ ಆಡಳಿತ ದೇಶದಲ್ಲಿ. ಚುನಾವಣೆಗೊಂದರಂತೆ ಆಡಳಿತ ಪಕ್ಷ ಬದಲಾದರೂ ಅದರಿಂದ ದೇಶದ ಪರಿಸ್ಥಿತಿ ಗಲಿಬಿಲಿಯೂಗದಂತೆ ಸಂವಿಧಾನವನ್ನು ನಿಟ್ಟಿದ್ದಾರೆ, ನಮ್ಮ ಸಂವಿಧಾನ ಮುತ್ಸದ್ಧಿಗಳು. ಹಾಗಿರುವಾಗ ನಮ್ಮ ಇಂದಿರಾ ಧುರೀಣತ್ವದ ಆಡಳಿತ ಕಾಂಗ್ರೆಸ್ ಪಕ್ಷವು ತನ್ನ ಪ್ರಗತಿಯ ಧೋರಣೆ ಸಮಾಜವಾದವೆಂದು ಇದನ್ನು ಬದಲಿಸಿದುದು ಸರಿಯೊದುದೆ? ಅವರು ಹೋಗುವ ಸೂರ್ಗದಲ್ಲಿಯೆ ನಾವೂ ಹೋಗನ ಆದರೆ ಪ್ರಗತಿಪರ ಬಡೋಣದ ಈ ಸರ್ಕಾರವಾದರೂ ಶಾಸನವನ್ನು ರಚಿಸುವುದು ಯಾವುದಕ್ಕಾಗಿ ಜನತೆಯ ಏಳಿಗೆಗಾಗಿ ಅಲ್ಲವೆ? ಹಾಗಾದರೆ ಈ ಒಳಿತಿನ ನಿರ್ದೇಶನವನ್ನು ನಮ್ಮ ಸಂವಿಧಾನ ಅಳವಡಿಸಿಕೊಳ್ಳಲಿಲ್ಲವೆ?

ನಿರ್ದೇಶಕ ತತ್ವ ಮುಂಜೆಯೆ ಹೇಳಿದೆ. ಸಾಮಾಜಿಕ ಆರ್ಥಿಕ, ರಾಜನೈತಿಕ ನ್ಯಾಯದ ಪ್ರಕಾರ ನಮ್ಮೀ ಸಮಾಜದ ವ್ಯವಸ್ಥೆಯಾಗಬೇಕೆಂದು. ಮತ್ತೆ ಈ ಹಿರಿಯ ತತ್ವದ ಸಂವಿಧಾನ ತಿದ್ದುಪಡಿ ಯಾವುದಕ್ಕಾಗಿ? ನಮ್ಮ ಹಿಂದಿನ ಮುತ್ಸದ್ಧಿಗಳು ರೂಪಿಸಿದ ಸಂವಿಧಾನ ರಾಜಮಾರ್ಗದಲ್ಲಿ ಹೋದರೆ ರಾಷ್ಟ್ರಕಲ್ಯಾಣವಾಗುತ್ತದೆ. ಜನತೆಯ ಜೀವನ ಮಟ್ಟದ ಕಲ್ಯಾಣವಾಗುತ್ತದೆ ಅದು ಬಿಟ್ಟು ಈಗ ಮಾಡಿದ ಪರಿಯೋ, ಬೇವನ್ನು ಬಿತ್ತಿ ಮಾವನ್ನು ಹಾರೈಸಿದಂತೆಯೆ ಸರಿ. ಇಂದು ಇಂದಿರಾಗಾಂ

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೊಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಪುತ್ತೂರು IInd ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 402/71

ಪುಟ್ಟ ಗೌಡ —ಅರ್ಜಿದಾರ.

ತುಂಗು ಸಹಾ —ಎದ್ರಿರು.

2ನೇ ಎದ್ರಿ:—ಶೇಷಪ್ಪ ಪೂಜಾರಿ, ಕರಿಯ ಪೂಜಾರಿ ಮಗ, ಆಲಂಕಾರು ಗ್ರಾಮ.

ಸದ್ರಿ 2ನೇ ಎದ್ರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ -

69–70ಕ್ಕೆ ನಿಮ್ಮಿಂದ ಕೂಡಾ ಬರಬೇಕಾದ ಗೇಣಿ ಬಾಕಿಗೆ ಮೂಡಿದ ಈ ಅರ್ಜಿ ತಾ. 17–12–71ಕ್ಕೆ ನಿಮ್ಮ ನೋಟಿಸಿನ ಬಗ್ಗೆ ಇಟ್ಟುರುತ್ತದೆ. ಸದ್ರಿ ದಿವಸ ಈ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ನೂಡಿ ಯುಕ್ತ ಕಾಡಂತೆ ತೀರ್ಮಾನಿಸಲಾಗುವುದು.

Sd|-M. Rammohan Rao
Advocate for Petitioner

Puttur 1-12-71.

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ

Exc. 705/71. O. S. 313/68.

M/s. Prabu & Co—ಅರ್ಜಿದಾರ.

ಎದ್ರಿ

A. ಲೋಕಯ್ಯ ಗೌಡ A. ವೀರಪ್ಪ ಗೌಡರ ಮಗ, ಯೇನೆಕಲ್ಲು ಗ್ರಾಮ, ಸುಳ್ಯ ತಾಲೂಕು P.O. Yenekallu, S.K.—ಎದ್ರಿ. ಇವರೀಗೆ—

ಮೇಲಿನ ವಾವೆಯಲ್ಲಿ ದಿಕ್ರಿ ಹೊಂದಿದವನಾದ ಅರ್ಜಿದಾರನು ಸ್ಥಿರಾಸ್ತಿ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸಲಿಕ್ಕೆ ತಾ.16–12–1971ಕ್ಕೆ ನಿಶ್ಚೈಸೋಣಾಗಿದೆಯೆಂತ ನಿಮಗೆ ಇದರಿಂದ ತಿಳಿಸೋಣಾಗುತ್ತದೆ.

(By Order of the Court)

(Sd) D. N. Bhat,
Advocate for Petitioner.

ಪುತ್ತೂರು, 23–11–71.

ಧಿ ಬಯಸುವದು ಏನನ್ನು? ಮನುಷ್ಯನ ವ್ಯಕ್ತಿತ್ವದ ಪರಿಪೂರ್ಣತೆಯ ಅಶೋತ್ತರದ ವಿಕಾಸವನ್ನು. ಈ ವಿಕಾಸವನ್ನು ಮೂಲ ಭೂತ ಹಕ್ಕುಗಳಿಂದ, ಸಾಧಿಸಲಾಗುವುದಿಲ್ಲವೆ?–ಸಾಧಿಸಲಾಗುವುದಿಲ್ಲವೆಂದು ಹೇಳುವುದಕ್ಕೆ ನಮ್ಮ ಇಂದಿರಾ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ–ಏಕೆಂದರೆ ವಿಶ್ವದಲ್ಲಿಯೆ ಏಳಿಗೆಯ ಪರಮಾವಧಿಯಲ್ಲಿರುವ ಅಮೆರಿಕದ ಸಂವಿಧಾನದಿಂದಲೆ ನಮ್ಮ ಮೂಲಭೂತ ಹಕ್ಕುಗಳ ಅಂಶ ಪ್ರತಿಬಿಂಬಿತವಾಗಿದೆ.

ಅಮೆರಿಕನ್‌ರಿಗೆ ಮೂಲಭೂತ ಹಕ್ಕುಗಳಿಂದ ರಾಷ್ಟ್ರ ಏಳಿಗೆ ಸಾಧ್ಯವಾಗಿರುವಾಗ ನಮಗೆ ಪ್ರಜೆಗಳ ಅಶೋತ್ತರದ ಮೂಲ ಭೂತ ಹಕ್ಕಿನಿಂದ ರಾಷ್ಟ್ರ ವಿಕಾಸ ಅರ್ಥಾತ್ ಜನತಾ ವಿಕಾಸ ಸಾಧಿಸಲು ಸಾಧ್ಯವಾಗಲಿಕ್ಕೆಇಲ್ಲವೆ?–

ಇನ್ನು ಮೂಲಭೂತ ಹಕ್ಕಿನಲ್ಲಿ ನ್ಯಾಯಾಂಗದ ಪಾತ್ರವನ್ನಿಷ್ಟು ನಿವೇದಿಸೋಣ ಸ್ವತಂತ್ರ ಭಾರತದ ಗಣರಾಜ್ಯದಲ್ಲಿ ಪ್ರಜೆಗಳಿಗೆ ಮೂಲಭೂತ ಹಕ್ಕುಗಳನ್ನು ಒದಗಿಸಿರುವ ಸಂವಿಧಾನವು ಆ ಮೂಲಭೂತ ಹಕ್ಕುಗಳಿಗೆ ಅಡ್ಡಿ ತಡೆ ಶಾಸಕಾಂಗದಿಂದಾಗಲಿ ಕಾರ್ಯಾಂಗದಿಂದಾಗಲಿ ಬಂದಲ್ಲಿ ಆಗ ಪ್ರಜೆಯು ಮೂಲಭೂತ ಸ್ವಾತಂತ್ರ್ಯದ ಹಕ್ಕನ್ನು ನ್ಯಾಯಾಂಗವು ಧರ್ಮದೇವತೆಯಾಗಿ ಕಾಪಾಡಿಕೊಡಬೇಕೆಂದು ನಿರ್ದೇಶಿಸಿದೆ — ಇಂತು ಈ ನಿರ್ದೇಶನವನ್ನು ಸಂವಿಧಾನವು ನ್ಯಾಯಾಂಗಕ್ಕೆ ಕೊಟ್ಟುದು ಯಾವುದಕ್ಕಾಗಿಯೆಂದು ವಿಶ್ಲೇಷಿಸೋಣ ಈ ನಿರ್ದೇಶನ ಕೊಟ್ಟುದು ಸ್ವತಂತ್ರ ಭಾರತದ ಪ್ರಜಾಪ್ರಭುತ್ವದಲ್ಲಿ ಚಿರಸ್ಥಾಯಿಯಾದ ಒಂದು ನ್ಯಾಯ ನೆಲೆ ನಲೆಂದು—ಇಂತು ಈ ಹಿರಿಮೆಯನ್ನು ನಮ್ಮ ಸಂವಿಧಾನವು ನ್ಯಾಯಾಂಗಕ್ಕೆ ಆದ್ಯ ಪ್ರಾಶಸ್ತ್ಯದಿಂದ ಕೊಟ್ಟರುವಾಗ ಆಡಳಿತ ಕಾಂಗ್ರೆಸ್ಸು ತನ್ನ ಧ್ಯೇಯಗಳಿಗೆ ನ್ಯಾಯಾಂಗದ ಧೋರಣೆ ಮಾರಕವೆಂದು ನ್ಯಾಯಾಲಯದ ಅಧಿಕಾರವನ್ನು ಮೊಟಕು ಮಾಡಿದ್ದು ತರವೆ? ಈ 22ವರ್ಷಗಳಿಂದಲೂ ಸ್ವತಂತ್ರ ಭಾರತದ ಗಣರಾಜ್ಯದ ಆಡಳಿತವೆಲ್ಲವು ಸಂವಿಧಾನಾತ್ಮಕವಾಗಿ ನ್ಯಾಯಾಂಗದ ಕೈ ಪಾತ್ರದಲ್ಲಿ ಶಾಸಕಾಂಗದೊಡಗೂಡಿ ನಡೆದಿದೆ ಯಾರಿಗೂ ಅನ್ಯಾಯವಾಗದಂತೆ. ಅಂತಿರುವಾಗ ನ್ಯಾಯಾಂಗವು ಅಧಿಕಾರವನ್ನು ಮೊಟಕು ಮಾಡುವಂತ ದುರ್ದೈವ ಇನ್ನೊಂದುಂಟೆ?

ಯಾವುದೇ ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಜನತೆಯ ಮೂಲಭೂತ ಹಕ್ಕುಗಳನ್ನು ಕಾಪಾಡಲು ನ್ಯಾಯಾಂಗಕ್ಕೆ ಅಧಿಕಾರವಿಲ್ಲವೋ ಅಂಥ ರಾಷ್ಟ್ರ ಪ್ರಜಾಪ್ರಭುತ್ವದ ಹೆಸರಿನಲ್ಲಿ ಸರ್ವಾಧಿಕಾರತ್ವದೆಡೆಗೆ ಸಾಗುತ್ತಿದೆಯೆಂದೆ ಅರ್ಥ.

–ಡೀ ಐ.ಎಚ್ ಶಾಂತಾರಾಮ ಶೆಟ್ಟಿ

● ●

ಹಗಲನ್ನೇ ಹಗಲೆನ್ನದ ಧೀಮರು

(ನಾಲ್ಕನೇ ಪುಟದಿಂದ)

ದರೆ, ಭಾರತಕ್ಕೆ ಮಾತ್ರ ಬಂದು....'

"ಹ್ಞೂಂ. ಹೌದ್ರಿ. ಅವರ ಗೋದಿ ತಿಂದು ಅವರಿಗೇ ಎದುರು ನಿಲ್ಲುವುದನ್ನು ಅವರು ಹೇಗೆ ಸಹಿಸಿಯಾರು?'

'ಅಲ್ಲ, ಅವ್ರು ಅನ್ಯಾಯವನ್ನು ನ್ಯಾಯವೆಂದು ಸಾಧಿಸುವುದಕ್ಕಾಗಿ ಪಾಕಿನ ಬೆನ್ನ ಹಿಂದೆ ನಿಂತಿದ್ದಾರಲ್ಲಾ....'

'ನಿಲ್ಲಲಿ ಬಿಡಿ. ಸಿರಿ ಗರಹೊಡೆದವರ ಹಣೆಬರಹವೇ ಹೀಗೆ. ಆದಿರಲಿ, ಈಗ ಅಮೆರಿಕೆಯಂತೂ ನಮಗೆ ಸಹಾನುಭೂತಿ ಸಹಕಾರ ತೋರಿಸುವುದಿಲ್ಲ ಅನ್ನಿ...'

'ಅದ್ಯಾಕೆ?'

'ಅಲ್ರಿ, ಭಾರತ ರಶ್ಯದೊಡನೆ ರಕ್ಷಣಾ ಒಡಂಬಡಿಕೆ ಮಾಡಕೊಂಡಿದೆಯಲ್ಲಾ?"

'ಅದ್ರೆ ನೋಡು, ಭಾರತವೇನೂ ರಶ್ಯವನ್ನು ನೇರಾಗಿ ಯುದ್ಧಕ್ಕೆ ಸೆಳೆಯಲಾರದು.'

'ಅದು ಇರಬಹುದು ಆದರೂ ನಮಗೆ ರಶ್ಯ ನೆರವು ನೀಡಿದರೆ, ಪಾಕಿಗೆ ಅಮೆರಿಕೆ ಚೀನಾಗಳು ನೀಡಲಾರವೆ?'

'ನೀಡದುಂಟೆ? ಅಮೆರಿಕೆಯೇನೋ ತಾನು ನಿಸ್ಪಕ್ಷಪಾತಿಯೆಂದು ತೋರಿಸುವ ಪ್ರಯತ್ನದಲ್ಲಿದೆ. ಪಾಕಿಗೆ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುವುದಿಲ್ಲವೆಂದು ಹೇಳಿದೆ. ಆದರೆ, ಚೀನಾದಿಂದ ನೆರವು ಹೊರಟಿನೆಯೆಂದು ಭಾರೀ ಸುದ್ದಿ....'

'ಅಲ್ರಿ, ಆಧ್ಯಕ್ಷ ನಿಕ್ಸನ್ನರಿಂದ ಸಂದೇಶವೊಂದು' ಬಂದ ಮರುಗಳಿಗೆಯಲ್ಲೇ ವಿಮಾನ ಥಾಳಿಗೆ ಯೂಹ್ಯಾ ತೊಡಗಿದ್ದನ್ನು ನೋಡುವಾಗ, ನಿಕ್ಸನ್ ಸಮರೋದ್ಯೋಗಕ್ಕೆ ಸಮ್ಮತಿ ವ್ಯಕ್ತಪಡಿಸಿದ್ದರೂ ಇರಬಹುದು...."

"ಅದು ಹಾಗೆ ಸಾಧ್ಯವಿಲ್ಲ. ಯೂಹ್ಯಾ ಖಾನನಿಗೆ ತಮ್ಮ ಮಾನವುಳಿಸಲು ಯುದ್ಧವೊಂದೇ ದಾರಿಯಾಗಿತ್ತು. ಆದುದರಿಂದ ನಮಗೆ ಯುದ್ಧ ಬೇಕೇ ಆದರೆ ಮಾಡಿ ಎಂದಿರಬಹುದು...."

'ಯೂರನ್ನು ನಂಬಿ?'

"ಅದಕ್ಕೇನಂತೆ, ಭಾರತದ ಸೈನಿಕ ಶಕ್ತಿಯನ್ನು ಪಾಕಿಗಳೇ ಎದುರಿಸಬೇಕಾದೀತು– ಅವರ ಗಳಸ್ಯ ಕಂಠಸ್ಯ ಮಿತ್ರರು ಅಲ್ಪಸ್ವಲ್ಪ ಸಹಾಯಮಾಡಿಯಾರು.'

'ರಶ್ಯ?'

'ರಶ್ಯ ರಣಕಣಕ್ಕಿಳಿಯುವ ಸಂಭವ ಕಡಿಮೆ. ಒಂದೊಮ್ಮೆ ಅದು ಇಳಿದರೆ, ಅಮೆರಿಕೆಯೂ ಸುಮ್ಮನುಳಿದೀತೆ?'

'ಅಲ್ರಿ, ಈ ಯುದ್ಧದ ಪರಿಣಾಮನೇ ನಾಗಬಹುದು?'

'ನಾಗರಿಕ ಜಗತ್ತು ಪಾಕ್–ಭಾರತಗನ್ನು ಅವುಗಳಷ್ಟಕ್ಕೇನೇ ಬಿಟ್ಟರೆ, ಬಹು ಬೇಗನೇ ತೀರ್ಮಾನವಾಗುತ್ತದೆ.'

'ಬೇಗನೇ ಎಂದರೆ?'

'ಯೂಹ್ಯಾಖಾನರು ಈ ಆರೇಳು ತಿಂಗಳುಗಳಲ್ಲಿ ಸಂಚಯಿಸಿದ ಸೈನಿಕ ಬಲ ಕರಗಿ ಹೋಗುವವರೆಗೆ....'

'ಇಲ್ಲವಾದರೆ?'

'ಮತ್ತೇನು, ವರ್ಷಗಟ್ಟಲೆ ಮುಂದುವರಿಯ ಬಹುದು...."

'ಭದ್ರತಾ ಸಮಿತಿಯೇನಾದರೂ ಮಧ್ಯಸ್ಥಿಕೆಗೆ ಮುಂದುಬಾರದೆ?'

'ಹ್ಞಹ್ಞ.... ಏನು ಮಧ್ಯಸ್ಥಿಕೆ? ಬಂಗ್ಲಾ ನಿರಾಶ್ರಿತರು ಸ್ವದೇಶಕ್ಕೆ ಮರಳುವಂತೆ ರಾಜ್ಯಕೀಯ ಪರಿಹಾರವನ್ನು ಯಾ ಹ್ಯಾಖಾನರಿಗೆ ಅದು ನಿರ್ದೇಶಿಸಲು ಶಕ್ತವಾದೀತೆ? ಹಗಲನ್ನೇ ಹಗಲೆನ್ನದ ಧೀಮರಿಂದೆ?'

'ಇದು ಸಾಧ್ಯವಿಲ್ಲ....'

'ಮತ್ತಾವ ರೀತಿಯ ಮಧ್ಯಸ್ಥಿಕೆ?'

'ಹ್ಞೂಂ ಆದೂ ಹೌದನ್ನಿ.'

'ಆದ್ದರಿಂದ ಯುದ್ಧ ತೀವ್ರವಾಗುವ ಸನ್ನಿವೇಶಗಳೇ ಹೆಚ್ಚು. ರಾಷ್ಟ್ರಪತಿಗಳು ಇಡಿಯ ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ. ಭಾರತ ರಕ್ಷಣಾ ಶಾಸನವನು ಸಂಸತ್ತು ಮುಂಜೂರು ಮಾಡಿದೆ?'

'ಮತ್ತೆ ಮೂಡುವುದೇನನ್ನು? ಮನೆ ನುಗ್ಗಿದ ಮೂರಯನ್ನು ಹೊರಗಟ್ಟಲೇ ಬೇಕು ತಾನೆ?'

'ಇಲ್ಲವೇ ಮತ್ತೆ? ದೇಶದ ಪ್ರತಿಯೊಬ್ಬ ನಾಗರಿಕನೂ ಸರಕಾರದ ಬೆನ್ನೆಹುರಿಯೂಗಿ ನಿಂತು ಸೈನ್ಯದ ಬೆಂಗೋಲಾಗಿ ಆಕ್ರಮಣಕಾರರನ್ನು ಹೊರಗಟ್ಟುವಲ್ಲಿ ದೃಢ ಸಂಕಲ್ಪ ನೂಡ ಬೇಕು....'

'ಇನ್ನು ಮುಂದೆ ಆದಾವ ಸಮಯದಲ್ಲೂ ಪಾಕಿಗಳು ದುರಾಕ್ರಮಣ ಮಾಡದಂತೆ ಅವರಿಗೆ ಸರಿಯೂಗಿಯೇ ಬುದ್ಧಿ ಕಲಿಸಬೇಕು....'

'ಬಾಯಲ್ಲಿ ಹೇಳುವುದು ಮಾತ್ರ ಸಾಲದು. ದೇಶಕ್ಕೊದಗಿ ಬಂದ ಈ ಅಪಾಯ ಪರಿಸ್ಥಿತಿಯಲ್ಲಿ ಸರ್ವತ್ಯಾಗಕ್ಕೂ ಸಿದ್ಧರಾಗಬೇಕು....'

'ಹೂಂರು?'

'ಮತ್ತಾರು? ನಾನು, ನೀನು, ಅವರಿವರೆನ್ನದೆಲ್ಲರೂ....'

'ಹ್ಞೂಂ ಇಡಿಯರಾಷ್ಟ್ರ ಏಕಪುರುಷನಂತೆ ಎದ್ದು ನಿಂತು ಶತ್ರು ದಮನಕ್ಕೆ ನಿರತವಾಗ ಬೇಕು....'

'ಹೌದು ಕಣೇ ಹೌದು....'

'ಏನು?'

'ಏನು ನಡೆಯುತ್ತಿದೆಯೋ ಅದು ಹೌದು'

'ಎದನ್ನೂ ಒಪ್ಪಿಕೊಳ್ಳದವರೂ ಈ ನಾಗರಿಕ ಜಗತ್ತಿನಲ್ಲಿ ಇದ್ದಾರಲ್ಲಾ....'

'ನಾನೂ ನೀನೂ ಅಲ್ಲವಲ್ಲಾ....'

'ಕಂಡಿತಕ್ಕೂ....'

'ಹ್ಞಹ್ಞ.... ....' —ಗೋರಾ

ಪುತ್ತೂರು ಪ್ರಿನ್ಸಿಪಾಲ್ ಮುನ್ಸಿಫ್ ಕೋರ್ಟಿನಲ್ಲಿ

P & S.C. 3/71

ಕೇಶವ ಭಟ್ ಕೂಡಾ—ಅರ್ಜಿದಾರ

ಸುಳ್ಯ ತಾಲ್ಲ್ಲು ಸುಳ್ಯ ಕಸಬಾ ಗ್ರಾಮದಲ್ಲಿರುವ ಅಂಗಾರ ಗೌಡರ ಮಗ ಮುದರ ಮೇರಪಿಗೆ—

ಪುತ್ತೂರು ಮುನ್ಸಿಫ್ ಕೋರ್ಟಿನಲ್ಲಿ ಸುಬ್ಬಮ್ಮ ಎಂಬವರು ಪಡೆದ O.S. 466/67ರ ದಾಮಯ ಡಿಕ್ರಿ ಹಣವನ್ನು 1ನೇ ಪ್ರತಿವಾದಿಯಾದ ನಿಮ್ಮಿಂದ ವಸೂಲು ಮಾಡುವ ಕುರಿತು Succession Certificate ಕೊಡಿಸುವ ಕುರಿತು ನಮಗೇನಾದರೂ ಆಕ್ಷೇಪವಿದ್ದಲ್ಲಿ ತಿಳಿಸುವ ಕುರಿತು ತಾ 16.12.1971ಕ್ಕೆ ಪ್ರಾವಿ ಇರುವುದರಿಂದ ನೀವು ಆ ದಿವಸ ಬೆಳಿಗ್ಗೆ ಕೋರ್ಟಿನಲ್ಲಿ ಹಾಜರಿಗಾಗಿ ಉದಾಹರಿಸಿಕೊಳ್ಳ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಸೂಚಿ ಆರ್ಜಿಯನ್ನು ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸಲಾಗಿದೆ.

(By Order)

Sd|- K.T. Bhat

Advocate for Petitioners

Puttur, S.K. 27-11-71

ಅಮೃತಾಂಜನ

● ತಲೆ ನಡಿತ ● ಮೈ ನೋವು

● ಉಳುಕು ● ಕಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,

ಮದ್ರಾಸು-4

Gram: VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging.

107 Police Road, City Market,

BANGALORE-2

Centrally situated, delicious food,

Comfortable rooms. Courteous service.

Attached bath rooms with running hot and cold water.

Telephone attached rooms.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

*1967*ನೇ ಸಂವತ್ಸರದ *O.S. 222* ವ್ಯಾಜ್ಯದ ನಂಬರು *ExC.No. 97/1968*

ಆನಂತ ಉಳುರ —ಅರ್ಜಿದಾರ

ಎದುರಾಗಿ

ಮರ್ತಪ್ಪ ನಾಯ್ಕ ಕೂಡಾ —ಎದ್ರಿರು

ಜಡ್ಜ್‌ಮೆಂಟ್ ದೇಣಿದಾರನಾದ ಸುರೇಂದ್ರ ನಾಯ್ಕ, ನಾರಾಯಣ ನಾಯ್ಕರ ಮಗ, ಕುಂದಾಪುರ ತಾಲ್ಲು ಕಾವ್ರಾಡಿ ಗ್ರಾಮದ ಕಂಡ್ಲೂರು, ಕಲಾರ ಬೈಲಲ್ಲು ಇರುವವ. ಇವರಿಗೆ—

ಮೇಲೆ ಹೇಳಿರುವ ವ್ಯಾಜ್ಯದಲ್ಲಿ ಡಿಕ್ರಿ ಹೊಂದಿದವನಾದ ಅರ್ಜಿದಾರನು ನಿಮ್ಮ ವಗ್ಗೆರೆ ಬಾಬ್ತು ಸ್ಥಿರಾಸ್ತಿಯ ವಿಕ್ರಯದ ಬಗ್ಗೆ ಅರ್ಜಿ ಮಾಡಿದ್ದಾನೆ. ಆದುದರಿಂದ ವಿಕ್ರಯದ ಇಸ್ತಿಹಾರಿನ ಪರತುಗಳನ್ನು ನಿರ್ಣಯಿಸಲಿಕ್ಕೆ 1972ನೇ ಇಸವಿ ಜನವರಿ ತಿಂಗಳು 17ನೇ ತಾರೀಕು ಬೆಳ್ಳಿಯಪ್ಪಾನಿಯದಂತೆ ನಿಮಗೆ ಇದರಿಂದ ತಿಳಿಸೋಣಾಗುತ್ತದೆ.

ಕೋರ್ಟು ಹುಕುಂ ಪ್ರಕಾರ.

G. Ramakrishna Rao,

B.A.,LL.B.,

Advocate for the Petitioner.

ತಾಲೂಕು ಮಟ್ಟದ ಮಕ್ಕಳ ನಾಟಕಾಭಿನಯ ಸ್ಪರ್ಧೆ

ಉಡುಪಿ ಸ್ಪೋರ್ಟ್ಸ್ ಎಂಡ್ ಕಲ್ಚರಲ್ ಎಸೋಸಿಯೇಶನವರು 14 ವರ್ಷ ಪ್ರಾಯದ ಮಕ್ಕಳಿಗಾಗಿ ಏರ್ಪಡಿಸಿದ ತಾಲೂಕು ಮಟ್ಟದ ನಾಟಕಾಭಿನಯದ ಸ್ಪರ್ಧೆಯ ಬಹುಮಾನ ವಿತರಣಾ ಸಮಾರಂಭವು ತಾ. 26ರಂದು ಎಂ. ಜಿ. ಎಂ. ಕಾಲೇಜಿನ ಭೌತಶಾಸ್ತ್ರ ಪ್ರಾಧ್ಯಾಪಕ ಪ್ರೊ| ಯು. ಎಲ್. ಆಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು.

ಎಸೋಸಿಯೆಶನಿನ ಅಧ್ಯಕ್ಷ ಡಾ| ಬಿ. ಬಿ. ಶೆಟ್ಟರು ಆರಂಭದಲ್ಲಿ ಸ್ವಾಗತಿಸಿದರು.

ಪ್ರೊ| ಆಚಾರ್ಯರು ಮಾತಾಡುತ್ತಾ, ಮಕ್ಕಳು ಆಡುವ ನಾಟಕ ಮಕ್ಕಳೇ ಬರೆಯಬೇಕು. ಇದರಿಂದ ಮಕ್ಕಳ ಮುಗ್ಧ ಮನಸ್ಸಿನ ಪ್ರತಿಬಿಂಬವನ್ನು ನಾವು ಕಾಣಬಹುದಾಗಿದೆ ಅಲ್ಲದೆ ನಾಟಕವೂ ಹೆಚ್ಚು ಪ್ರಭಾವಶಾಲಿಯೂ ನೈಜವೂ ಆಗಿ ಕಾಣಬಹುದು ಆದರು ಈ ಎಸೋಸಿಯೇಶನಿನ ವಿವಿಧ ಚಟುವಟಿಕೆಗಳನ್ನು ವಿವರಿಸಿ ಸಂಸ್ಥೆಗೆ ಉಜ್ವಲ ಭವಿಷ್ಯವಿರುವುದಾಗಿ ತಿಳಿಸಿದರು.

ಶ್ರೀ ಯು. ಮೊಧವಾಚಾರ್ಯರು ನಿರ್ಣಾಯಕರ ಪರವಾಗಿ ಮಾತನಾಡಿ ನುಕ್ತಳಿಗೆ ನಾಟಕವನ್ನು ಆಯ್ಕೆಮಾಡುವಾಗ ಆನರ ಸುಯಸ್ಸು ಮನೋಸ್ಥಿತಿಗೆ ತಕ್ಕಂಥ ನಾಟಕವನ್ನು ಆರಿಸಿದಲ್ಲಿ ಆನರು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಅಭಿನಯಿಸಬಹುದು ಎಂದರು.

ಶ್ರೀಗಳಾದ ಪಿ. ರಾಘವಕೃಷ್ಣ ಆಚಾರ್ಯ. ಯು. ಮೊಧನ ಆಚಾರ್ಯ, ಎನ್. ಬಿ. ದೀಕ್ಷಿತ ಮತ್ತು ದೇವಕಿ ಟೀಚರ್ ನಿರ್ಣಯಕರಾಗಿದ್ದರು.

ಪ್ರಥನ ಹಾಗೂ ದ್ವಿತೀಯ ಬಹುಮಾನಗಳನ್ನು ಚೇತನಾ ಹೈಸ್ಕೂಲ್, ಹಂಗಾರಕಟ್ಟೆ, ಇವರ 'ಮುಂದೇನು' ಹಾಗೂ ಪೆರ್ಡೂರು ಬಿ ಎಂ. ಐಡೆಡ್ ಪ್ರೌಢ ಪ್ರಾಥಮಿಕ ಶಾಲೆಯ 'ಸುನರ್ಜನ್ಮ' ಎಂಬ ನಾಟಕವೂ ಸಕ್ರಮವಾಗಿ ಗಳಿಸಿತು. ತೃತೀಯ ಬಹುಮಾನವನ್ನು ಪೆರ್ಡೂರು ಹೈಸ್ಕೂಲ್ ಮತ್ತು ಉಡುಪಿ ಕ್ರಿಶ್ಚಿಯನ್ ಹಾಯರ್ ಸೆಕೆಂಡರಿ ಶಾಲೆಗಳು ಪಡೆದವು. ನಿರ್ದೇಶನ ಹಾಗೂ ಉತ್ತಮ ಅಭಿನಯಕ್ಕೆಂದು ಮೀಸಲಾಗಿಟ್ಟ ಬಹುಮಾನವು ಹಂಗಾರಕಟ್ಟೆಯ ಚೇತನಾ ಹೈಸ್ಕೂಲಿಗೆ ದೊರೆಯಿತು.

ಉತ್ತಮ ಅಭಿನಯದ ಪ್ರೋತ್ಸಾಹಕ ಬಹುಮಾನವು ವಿದ್ಯಾಸಮುದ್ರ ತೀರ್ಥ ಪ್ರೌಢ ಪ್ರಾಥಮಿಕ ಶಾಲೆ, ಕಿದಿಯೂರು ಇವರ "ಗಂಡಸೆರೆ ಗಂಡಸು" ನಾಟಕದ ಸುಂದರರಾವ್ ಪಾತ್ರಧಾರಿಗೆ ದೊರೆಯಿತು. ಈ ಸ್ಪರ್ಧೆಯಲ್ಲಿ ಒಟ್ಟು ಆರು ಶಾಲೆಗಳವರು ಭಾಗವಹಿಸಿದ್ದರು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ವಿಲಿಯಂ ನೊರ್ಟಿಸರು ಧನ್ಯವಾದ ಸಮರ್ಪಿಸಿದರು.

ಮೇಜರ್ ಕೆ. ಕೆ. ರಾವ್ ವೈತ್ಯ

ಕಲ್ಯಾಣಪುರದ ಶ್ರೀ ಅಪ್ಪಾಬಿರಾಯರ ಪುತ್ರ, ಭಾರತ ಸೇನೆಯ ಮೇಜರ್ ಕೆ. ಕೆ. ರಾವ್ ಆನರು ಪಶ್ಚಿಮ ಪಾಕಿಸ್ತಾನ ಗಡಿಯಲ್ಲಿ ಸಕ್ರಿಯ ಸೇನೆಯಲ್ಲಿದ್ದಾಗಲೇ ತಾ. 28-11-71ರಂದು ರಾತ್ರಿ ಹೊತ್ತಿಗೆ ಮೃತ್ಯುವಶರಾಗಿರುವರೆಂಬ ಸೇನೆಯ ಕಮಾಂಡಿಂಗ್ ಆಫೀಸರರು ಮೃತರ ತಂದೆಗೆ ವಿಷಾದ ವ್ಯಕ್ತಪಡಿಸುತ್ತಾ ಕಳುಹಿಸಿದ ತಂತಿಯಿಂದ ತಿಳಿದು ಬಂದಿದೆ. ಅವಿವಾಹಿತರಾದ ಮೃತರು ಮೂರುವರ್ಷಗಳ ಮೊದಲು ಸೋಲ್ಜರ್ ಆಗಿ ಸೇರಿದ್ದು ತನ್ನ ಶಿಸ್ತು, ಶೌರ್ಯ ಸೇವೆಗಳಿಂದ ಎರಡು ವರುಷಗಳ ಮೊದಲು ಬಡ್ತಿ ಹೊಂದಿ ಲೆಫ್ಟಿನೆಂಟ್ ಕ್ಯಾಪ್ಟನ್ ಪದವಿಗೇರಿ ಮೇಜರ್ ಆದರು.

ಮೇಜರ್ ರಾಯರು ಸಾಕ್ ಆಕ್ರಮಣಗಾರರಿಂದ ಭಾರತದ ಸಾರ್ವಭೌಮತೆಯನ್ನೂ ಸಮಗ್ರತೆಯನ್ನೂ ರಕ್ಷಿಸುವ ಮಹಾಕಾರ್ಯದಲ್ಲಿ ಪ್ರಾಣಾರ್ಪಣೆ ಮಾಡಿ ಅಮರರಾಗಿರುವರು.

ವಿದ್ಯಾರ್ಥಿಗಳು ಎಚ್ಚರವಹಿಸಬೇಕು– ಬಡೆಕ್ಕಿಲ ಕೃಷ್ಣ ಭಟ್ಟ

ಖ್ಯಾತ ವಕೀಲರೂ, ಬರಹಗಾರರೂ ಆದ ಶ್ರೀ ಬಡೆಕ್ಕಿಲ ಕೃಷ್ಣ ಭಟ್ಟರು ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನ ಕನ್ನಡ ಸಂಘದ ಆಶ್ರಯದಲ್ಲಿ 30—11—71ರಂದು ಜರಗಿದ ಸಮಾರಂಭವೊಂದರಲ್ಲಿ ಮಾತಾಡುತ್ತಾ, ಇಂದಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ ಶೀಲಭ್ರಷ್ಟರಿಗೆ ರಾಜಕೀಯದಲ್ಲಿ ಸ್ಥಾನ ಸಲ್ಲದು. ಕಾನೂನಿನ ಮುಖಾಂತರ ಸಮಾಜದ ವ್ಯವಸ್ಥೆಗಳನ್ನು ಬದಲಾಯಿಸುತ್ತೇವೆನ್ನುವುದು ಪ್ರಮೆಯ ಸುಳ್ಳು. ಜನರ ಹೃದಯ ಪರಿವರ್ತನೆಯಾದಾಗಲೇ ಸಮಾಜ ಪರಿವರ್ತನೆಗೊಳ್ಳುತ್ತದೆ. ಇಂದಿನ ರಾಜಕೀಯದಿಂದ ಹಾಗೂ ರಾಜಕಾರಣಗಳಿಂದ ದೇಶೋದ್ಧಾರವಾಗದು ಎಂದರು. ಅಲ್ಲದೆ ಸಮಾಜವಾದ ಮತ್ತು ಸರ್ವತೋಮುಖದ ಹೆಸರಿನಲ್ಲಿ ರಾಜಕೀಯ ಮುಖಂಡರು ದೇಶದ ಬೊಕ್ಕಸವನ್ನು ಸೂರೆ ಮಾಡಿ ತಮ್ಮ ಬೊಕ್ಕಸವನ್ನೂ ತುಂಬಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳು ಇಂತಹ ಕರ್ತವ್ಯಭ್ರಷ್ಟ ರಾಜಕಾರಣಿಗಳ ಬಲೆಗೆ ಸಿಗದಂತೆ ಎಚ್ಚರವಹಿಸಬೇಕೆಂದು ಆವರು ಹೇಳಿದರು.

ಕನ್ನಡ ಅಧ್ಯಾಪಕ ಶ್ರೀ ಅಮ್ಮೆಂಬಳ ವಾಸುದೇವ ಸಾಮಗರು ಈ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯದರ್ಶಿ ಶ್ರೀ ನಾಗರಾಜರು ಆರಂಭದಲ್ಲಿ ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಕೊನೆಯಲ್ಲಿ ಕುಮಾರಿ ಸಂಪಾವತಿ ಶೆಟ್ಟಿಯವರು ಧನ್ಯವಾದ ಅರ್ಪಿಸಿದರು.

'ರಂಗಭಾರತ' ನಾಟಕ ಪ್ರದರ್ಶನ

ಕರ್ನಾಟಕದ ಸುಪ್ರಸಿದ್ಧ ನಿರ್ದೇಶಕ ಶ್ರೀ ಬಿ. ವಿ. ಕಾರಂತರ ನಿರ್ದೇಶನದಲ್ಲಿ ಮತ್ತು ಆವರೇ ಮುಖ್ಯ ಪಾತ್ರದಲ್ಲಿ ಶ್ರೀರಂಗ ವಿರಚಿತ 'ರಂಗಭಾರತ' ಎಂಬ ಅತ್ಯಂತ ಸ್ವಾರಸ್ಯ ಹಾಗೂ ಮರ್ಮ ಸ್ಪರ್ಶಿ ಮಹಾಭಾರತದ ಕಥಾಭಾಗದ ನಾಟಕವು ತಾ.4—12—71ರಂದು ಎಂ. ಜಿ ಎಂ. ಕಾಲೇಜು ಮುದ್ದಣ ನುಂಟಪದಲ್ಲಿ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರ ಸಪಯೋಗದಿಂದ ಜಯಶೀಲವಾಗಿ ಅಭಿನಯಿಸಲ್ಪಟ್ಟಿತು.

ಶ್ರೀ ಮಾಧವಾಚಾರ್ಯರಿಗೆ ಪತ್ನೀವಿಯೋಗ

ಭದ್ರಾವತಿಯ ಸೂಜಿ ವಿಧಾನ ಸಭಾಸದಸ್ಯರೂ, ಸಾರ್ವಜನಿಕ ಕಾರ್ಯ ನಿರತರೂ ದಕ್ಷಿಣ ಕನ್ನಡಿಗರೂಆದ ಶ್ರೀ ಬಿ ಮಾಧವಾಚಾರ್ಯರ ಧರ್ಮ ಪತ್ನಿ ಶ್ರೀಮತಿ ಲಕ್ಷ್ಮಮ್ಮ ಆವರು ತಾ. 24-11-71ರಂದು ದಿವಂಗತೆಯಾದರು. ಭದ್ರಾವತಿಯ ದೈವಭಕ್ತರೂ, ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ ಸಂಸ್ಥಾಪಕರೂ ಆದ ಶ್ರೀ ಕೆ. ಎನ್. ಮಹಾಬಲಯ್ಯ ಆವರ ಪುತ್ರಿಯಾದ ದಿವಂಗತೆಯರು ಆದರ್ಶ ಜೀವಿಯಾಗಿದ್ದರು. ಇವರ ಜನನ 1926ರಲ್ಲಿ. ಸಣ್ಣವಯಸ್ಸಿನಿಂದ ಇವರು ಕಷ್ಟ ಸಹಿಷ್ಣುಗಳೂ ಪತಿ ಸೇವಾ ಪರಾಯಣೆಯೂ ಆಗಿದ್ದರು. ಇವರು ತಮ್ಮ ಹಿಂದೆ ಒರ್ವ ಪುತ್ರ ಮತ್ತು ಒರ್ವ ಪುತ್ರಿ ಹಾಗೂ ಪತಿಯನ್ನು ಬಿಟ್ಟು ಹೋಗಿರುವರು. ಇವರ ನಿಧನವಾರ್ತೆಯನ್ನು ಕೇಳಿ ಇಡೀ ಭದ್ರಾವತಿ ಊರೇ ಶೋಕಗೊಂಡಿತು.

ಪ್ರಗತಿಯಾಗಿದೆ ಆದರೆ...



ಕಾರಣ ಜನಸಂಖ್ಯೆಯ ತೀವ್ರ ಹೆಚ್ಚಳದಿಂದಾಗಿ, ಆರ್ಥಿಕ ಅಭಿವೃದ್ಧಿಯ ಫಲ ಸರಿಯಾಗಿ ಎಲ್ಲರಿಗೂ ಎಟುಕುತ್ತಿಲ್ಲ.

★ 1960—61 ರ ಬೆಲೆಗಳಲ್ಲಿ

davp 71/246

In the Court of Munsiff of Bantwal, S. Kanara.

O. S. No. 128/1971

Between:-

John Rodrigues, S/o Gabrial Rodrigues, Cultivator, aged about 68 years, residing at Bantwal Kasba village, Bantwal Taluk, S. K. — Plaintiff.

Versus

Thomas Pinto, S/o Lawrence Pinto, aged about 50 years, residing at St. Antony's Hill, Urva, P. O. Mangalore-5. — Defendant.

Please take notice that the above suit is posted for your appearance on 15-12-1971 at 11 A. M. If you fail to appear, the matter will be decided in your absence and you will be set exparte, and the decree will be passed against you as prayed for by the Plaintiff.

(By order of the Court)

P. Shankernarayan
Advocate for Plaintiff.

Bantwal, 3-12-71

ಬೆಲೆಯಿಲ್ಲದ ಬಾಳು

(ಎರಡನೇ ಪುಟದಿಂದ)

ದ್ದರು ಹೆಚ್ಚು ಕೆಲಸಮಾಡಲು ಜೀವನವಿಡೀ ಕಷ್ಟಗಳಿಂದಲೇ ಕಂಗೆಟ್ಟ .ಆಕೆಯ ಕೃಶ ದೇಹದಲ್ಲಿ ಚೈತನ್ಯವೂ ಇರಲಿಲ್ಲ ನಾಲ್ಕು ನೈಲು ದೂರದಿಂದ ಮೊದಲು ನಿತ್ಯವೂ ಬರುತ್ತಿದ್ದ ಮಗ ಮದುವೆಯಾದ ಸೀಲೆ ತಿಂಗಳಿಗೊಮ್ಮೆಯೂ ಮುಖತೋರಿಸುತ್ತಿರಲಿಲ್ಲವೆಂದು ಕಂಬನಿದುಂಬಿ ಹೇಳಿ ಸಂಕಟಪಟ್ಟರು. ಆದರೂ ಆಕೆ ಕೊನೆಯದಾಗಿ ಹೇಳಿದರು, ' ಮುಖ್ಯ ನನ್ನ ಹಣೇಬರಹಕ್ಕೆ ಯಾರು ಯಾರು ಹೇಳು? ಅವನು ಎಲ್ಲಾದರೂ ಸುಖವಾಗಿರಲಿ ''

ಇಲ್ಲ. ಆತ ಸುಖವಾಗಿರಲು ಅವನ ದುರಾದೃಷ್ಟವೋ ಕರ್ಮ ಫಲವೋ ಬೆನ್ನುಬಿಡಲಿಲ್ಲ. ಆತನ ಸಂಬಳ ಡಾಂಭಿಕ ಜೀವನಕ್ಕೆ, ಪತ್ನಿ ಶೋಭಾಳ ಮಿತಿಮೀರಿದ ಶೃಂಗಾರ ಸಾಧನಗಳಿಗೆ ಸಾಕಾಗುತ್ತಿರಲಿಲ್ಲ. ಇದರಿಂದಾಗಿ ಆತನಿಗೆ ಊರೆಲ್ಲ ಸಾಲ. ಪತ್ನಿಯ ಕೇಳಿಕೆಗಳನ್ನೆಲ್ಲ ಈಡೇರಿಸಲು ಸಾಧ್ಯವಾಗದ ಅಸಹಾಯಕತೆಗಾಗಿ ಮನೆಯಲ್ಲಿ ನಿರಸದ ಹಗರಣ ಇದರಿಂದಾಗಿ ಕಂಗೆಟ್ಟು ಕೈಕಟ್ಟಿ ಕುಳಿತ ಆತನಿಗೆ ಮಾರ್ಗ ತೋರಿಸಿದವಳು ಆತನ ನೆಚ್ಚಿನ ಮಡದಿಯೇ

ಆತ ಮಡದಿಯೊಂದಿಗೆ ಬೆಂಗಳೂರಿನ ಶ್ರೀಮಂತ ಮೂವನ ಆಶ್ರಯಕ್ಕೆ ತೆರಳುವುದು ನಿರ್ಧಾರವಾಯಿತು. ಆತ ಹೊರಟೂ ಹೋದ.

ಆ ಮೇಲೆ ಯಾರ್ಯಾರಿಂದಲೋ ಆತನ ಅಲ್ಪ ಸ್ಪಲ್ಪ ವರ್ತಮಾನಗಳು ತಿಳಿಯುವುದಿತ್ತು. ಆತನಿಗೆ ಒಂದು ಮಗು ಜನಿಸಿದೆಯೆಂದೂ ಮೂವನ ಹೋಟೇಲಲ್ಲಿ ಕಾಫಿ ಮೂಡುವ ಕೆಲಸ ವಹಿಸಿಕೊಂಡು ದಿನಗಳೆಯುತ್ತಿರುವನೆಂದೂ ತಿಳಿದುಬಂತು.

ಆದರೆ ಈಗ? ಮಡದಿಯ ಅತ್ಯಾಧುನಿಕ ಆಲಂಕಾರಗಳಿಗೆ ಪ್ರತಿಸ್ಪರ್ಧಿಯೊಗಲು ಹೆಣಣಿಸುತ್ತಿದ್ದ ಪ್ಯಾಟುಧಾರೀ ಶ್ರೀನಾಥ ಗಡ್ಡಧಾರಿಯಾಗಿ ಆಗಮಿಸಿದ್ದಾನೆ. ಪತ್ನಿಯೇ ತನ್ನ ಪೂರ್ಣ ಪ್ರಪಂಚವೆಂದೂ ಉಳಿದೆಲ್ಲವೂ ಕ್ಷುಲ್ಲಕ ವಸ್ತುಗಳೆಂದೂ ಭಾವಿಸುತ್ತಿದ್ದ ಶ್ರೀನಾಥ ಅಂತಹ ಮಡದಿಯನ್ನು ಮರೆತು ಸನ್ಯಾಸಿಯೊಗುತ್ತೇನೆಂದರೆ ಇದಕ್ಕಿಂತ ಆಶ್ಚರ್ಯದ ಸಂಗತಿಯೇನಿದೆ?

ನನ್ನ ಯೋಚನೆಗಳಿಗೆಲ್ಲ ಪೂರ್ಣವಿರಾಮ ಹಾಕಲು ನಾಲ್ಕು ದಿನಗಳ ನಂತರ ಮನಃ ಶ್ರೀನಾಥನೇ ಬರಬೇಕಾಯ್ತು. ಆದು ತನ್ನ ಕೊನೆಯ ಭೇಟಿಯೆಂದೂ ಇನ್ನು ಮುಂದೆ ತಾನು ದೇಶದ ಎಲ್ಲ ಯಾತ್ರಾ ಸ್ಥಳಗಳ ಸಂದರ್ಶನಕ್ಕೆ ತೆರಳುವೆನೆಂದೂ ಸಂಪೂರ್ಣ ವಿರಕ್ತಿಯ ಯೋಗಿಯಾಗಿ ಬದುಕುವ ಬಯಕೆಯಿದೆಯೆಂದೂ ನನ್ನೊಡನೆ ಹೇಳಿ ತನ್ನ ಕತೆ ಆರಂಭಿಸಿದ

ಶ್ರೀನಾಥನ ಮೂವ ಶಂಕರರಾಯರು ತುಂಬಾ ಕೋಪಿಷ್ಠ ಹಾಗೂ ದುರಹಂಕಾರಿ. ತಂದೆಯ ಗುಣಗಳನ್ನೇ ಬಳುವಳಿಯನ್ನಾಗಿ ಪಡೆದ ಮಗಳು ಪತಿ ತನ್ನ ತಂದೆಯ ಹೋಟೇಲಿನ ಬಡ ನೌಕರನೆಂದು ನಿಶ್ಚಯವಾದ ಮೇಲೆ ಅವನನ್ನು ಆಳಗಿಂತಲೂ ಕೀಳಾಗಿಯೇ ಕಾಣತೊಡಗಿದಳು. ಆದರೂ ಶ್ರೀನಾಥ ನಿರುಪಾಯನಾಗಿ ಆಕೆಯನ್ನೊಲಿಸಿಕೊಳ್ಳಲಿತ್ನಿಸುತ್ತಾ ದಿನ ತಳ್ಳುತ್ತಿದ್ದ.

ಶ್ರೀನಾಥ ಹೋಟೇಲಿನ ಬಡನೌಕರನಾಗಿ ಬೆಂಕಿಯ ಮುಂದೆ ದೆವರು ಸುರಿಸುತ್ತಾ ಬೇಯುತ್ತಿರುವಾಗ ಪತ್ನಿ ಶೋಭಾ ವಿಹಾರ, ಸಿನಿಮೂಗಳೆಂದು ಆಲಂಕರಿಸಿಕೊಂಡು ಊರೆಲ್ಲ ತಿರುಗಾಡುತ್ತಿದ್ದಳು. ಶೋಭಾಳ ಅಕ್ಕ ಪ್ರಭಾ ಹೆರಿಗೆಗೆಂದು ತವರಿಗೆ ಬಂದವಳನ್ನು ನೋಡಲೆಂದು ಆಗಾಗ ಬರುತ್ತಿದ್ದ ಆವಳ ಪತಿ ಗಿರೀಶನೂ ಆವಳನ್ನು ಎಲ್ಲೆಂದರಲ್ಲಿಗೆ ವಿಹಾರಕ್ಕೆ ಕರಿದೊಯ್ಯುತ್ತಿದ್ದ. ಸುಖವಾಗಿ ತಿಂದುಂಡು ಬೆಳೆದ ಭಾವನ ದೇಹ ಧಾರ್ಢ್ಯತೆ, ಶ್ರೀಮಂತಿಕೆಗೊಪ್ಪುವ ವೇಷ ಭೂಷಣ, ಎಲ್ಲರೊಂದಿಗೂ ನಕ್ಕುನಲಿಯುವ ಹಾಸ್ಯ ಪ್ರವೃತ್ತಿ ಇವೆಲ್ಲವನ್ನೂ ಶೋಭಾ ಮೆಚ್ಚಿಕೊಂಡಳು. ಇವನೊಂದಿಗೆ ವಿಹಾರಕ್ಕೆ ಹೊರಡುವುದೆಂದರೆ ಶೋಭಾಳಿಗೆ ಬಹಳ ಸಂತಸ, ಸಂಭ್ರಮ ಪ್ರಭಾ ತಿಂಗಳು ತುಂಬಿದ್ದರಿಂದ ಹೆಚ್ಚು ಓಡಾಡುವ ಸ್ಥಿತಿಯಲ್ಲಿರಲಿಲ್ಲ ಶೋಭಾಳಿಗಾದರೋ ಭಾವನೊಂದಿಗೆ ಮೂತು ಆಲೆದಾಟಗಳೆಂದರೆ ಅತ್ಯಂತ ಪ್ರಿಯವಾದ ವಿಚಾರ. ಆದರೆ ಇವನ್ನೆಲ್ಲ ವಿರೋಧಿಸುವ ಸಾಮರ್ಥ್ಯ ಮೂವನ ಕೃಪಾಶ್ರಯದಲ್ಲಿ ಬದುಕು ನಡೆಸುವ ಶ್ರೀನಾಥನಿಗಿರಲಿಲ್ಲ. ಶೋಭಾ ತನ್ನ ತವರಿನ ಸುಖ ಸಂಪತ್ತುಗಳ ವೈಭವದಿಂದಿರು ಶ್ರೀನಾಥ ತನ್ನ ಪತಿಯೆಂಬ ವಿಚಾರವನ್ನೆ ಮರೆಯುತ್ತಾ ಕೇವಲ ಆತ ಹೋಟೇಲಿನ ಕೆಲಸಗಾರ ಎಂಬುದನ್ನೇ ನಿರ್ಧರಿಸುತ್ತಾ ಬಂದಿದ್ದಳು. ಆ ವಿಚಾರವಾಗಿ ಹೆಚ್ಚು ಚರ್ಚಿಸಲು ಶ್ರೀನಾಥನಿಗೆ ಬಿಡುವೂ ಇರುತ್ತಿರಲಿಲ್ಲ. ಶೋಭಾ ಅದಕ್ಕೆ ಅವಕಾಶವನ್ನೂ ಕೊಡುತ್ತಿರಲಿಲ್ಲ ಶ್ರೀನಾಥನ ಹೆಂಡತಿ ಶೋಭಾ ಬಸುರಿಯಾದಾಗ ಆಕೆಯ ಭಾವ ತನ್ನ ಮಡದಿಯೊಂದಿಗೆ ಮುಂಬಯಿಗೆ ಹೊರಟು ಹೋದ. ಇದರಿಂದ ಶ್ರೀನಾಥ ಎನ್ನು ಸಮಾಧಾನಪಟ್ಟನೋ ಅಪ್ಪೆ ಆಸಮಾಧಾನ, ಆಸಂತೋಷ ಶೋಭಾಳಿಗಾಗಿತ್ತು.

ಶೋಭಾ ಆಸ್ಪತ್ರೆಯಲ್ಲಿ ಗಂಡು ಮಗುವಿಗೆ ಜನ್ಮವಿತ್ತಳು. ಆವಳನ್ನು ನೋಡಲೆಂದು ಹೋದ ಶ್ರೀನಾಥ ಬೆಚ್ಚಿಬಿದ್ದ. ಪೌದು ಶೋಭಾಳ ಭಾವ ಗಿರೀಶನದ್ದೇ ಪ್ರತಿರೂಪದ ಪುಟ್ಟ ಗೊಂಬೆಯಂತಿದ್ದ ಮಗುವಿನ ಬಿಳಿಯ ಕಣ್ಣಾಲಿಗಳು ಗಿರೀಶನನ್ನೇ ಹೋಲುತ್ತಿದ್ದವು ಗಿರೀಶನಿಗೂ ಹಾಗೆಯೇ ಆವನ ಲಕ್ಷಣವಾದ ಮುಖವನ್ನು ಬಿಳಿ ಕಣ್ಣುಗಳು ಅಮಲಕ್ಷಣಗೊಳಿಸಿದ್ದವು. ಪತಿಯ ಮುಖಭಾವನನ್ನು ಮಲಗಿದ್ದಲ್ಲಿಂದಲೇ ಗ್ರಹಿಸಿದ ಶೋಭಾ ತಿರಸ್ಕಾರದಿಂದ ಮುಖತಿರುಗಿಸಿದಳು. ಮುಂದೆ ಶ್ರೀನಾಥನಿಗೆ ಅಲ್ಲಿ ನಿಲ್ಲುವುದೇ ಅಸಾಧ್ಯವಾಯಿತು. ಆತ ಆ ಕ್ಷಣ ಹೇಳದೆಯೇ ಹೊರಟು ಊರೂರು ಅಲೆದು ಕೊನೆಯದಾಗಿ ನೋಡಿ ಹೋಗಲೆಂದು ಹುಟ್ಟೂರಿಗೆ ಬಂದಿದ್ದ. ಇಷ್ಟೆಲ್ಲ ವನ್ನೂ ಪೇಳಿ ಮುಗಿಸಿದ ಶ್ರೀನಾಥ ಹೊರ

ಭಾರತೀಯ ಕ್ಷಯರೋಗ ನಿರೋಧ ಸಮಿತಿ, ನವದೆಹಲಿ.

ಕ್ಷಯರೋಗದ ವಿರುದ್ಧ ಹೋರಾಡಲು ಸಹಾಯ ಮಾಡಿರಿ.

ಕ್ಷಯರೋಗವು ನಮ್ಮ ರಾಷ್ಟ್ರದಲ್ಲಿ ಸರ್ವವ್ಯಾಪಿಯಾಗಿರುತ್ತದೆ. ಎಂಟು ಮಿಲಿಯಕ್ಕಿಂತಲೂ ಹೆಚ್ಚಿಗೆ ಶ್ವಾಸಕೋಶದ ಕ್ಷಯರೋಗಿಗಳಿದ್ದಾರೆ. ಅವರಲ್ಲಿ ಕಡಿಮೆ ಎಂದರೆ ಎರಡು ಮಿಲಿಯ ಸ್ಪರ್ಶ ಸಂಚಾರಕ ರೋಗಿಗಳಿದ್ದಾರೆ. ಆನಾರೋಗ್ಯಕರ ಪರಿಸ್ಥಿತಿಯಲ್ಲಿ ವಾಸಿಸುತ್ತಿರುವ ಬಡಜನರಲ್ಲಿ ಈ ರೋಗವು ಸರ್ವಸಾಮಾನ್ಯವಾಗಿದೆ. ಇತ್ತೀಚೆಗಿನ ವರೆಗೆ ಕ್ಷಯರೋಗವನ್ನು ಗುಣಪಡಿಸುವ ನಿರ್ದಿಷ್ಟ ಔಷಧಿಗಳಿರಲ್ಲಿಲ್ಲ. ಇಂದೀಗ ಅನೇಕ ಔಷಧಗಳು ಸಿಗುತ್ತಿದ್ದು, ಚಿಕಿತ್ಸೆಯು ಪರಿಣಾಮಕಾರಿಯೂ ಸುಲಭಸಾಧ್ಯವೂ ಆಗಿದೆ ಒಂದು ಚಿಕಿತ್ಸಾ ಕೇಂದ್ರದಿಂದ ಗುಣವಾಗಲು ಕನಿಷ್ಟ 18 ತಿಂಗಳುಗಳು ಯಾ ಕೆಲ ಸಂದರ್ಭಗಳಲ್ಲಿ 2 ವರುಷಗಳಿಗೂ ಹೆಚ್ಚು ಸಮಯ ಬೇಕಾಗುತ್ತದೆ. ಡಾಕ್ಟರರು ಸೂಚಿಸಿದಂತೆ ರೋಗಿಗಳು ಬಿಡದೆ ಕ್ರಮವಾಗತವಾಗಿ, ಹೇಳಿದ್ದಷ್ಟು ಕಾಲ ಔಷಧ ತೆಗೆದುಕೊಳ್ಳಬೇಕು ಡಾಕ್ಟರರ ಸಲಹೆಗೆ ವಿರುದ್ಧವಾಗಿ ರೋಗಿಗಳು ಅಕಾಲಿಕವಾಗಿ ಚಿಕಿತ್ಸೆಯನ್ನು ಬಿಟ್ಟುಬಿಟ್ಟರೆ ಚಿಕಿತ್ಸೆಯು ವಿಫಲವಾಗುವುದು. ಅಧಿಕ ಕಾಲಕ್ರಮಣದಲ್ಲಿ ರೋಗವು ಮರುಕಳಿಸಬಹುದು. ಈ ನಿಚಾರದಲ್ಲಿ ಜನಜಾಗೃತಿ ಹುಟ್ಟಿಸಬೇಕಾಗಿದೆ. ಹಾಗೆ ಆದರೇನೇ ಕ್ಷಯರೋಗದ ವಿರುದ್ಧ ಬಳುವಳಿಯು ಜಯಪ್ರದವಾಗುತ್ತದೆ.



ಟಿ ಬಿ ಮೊಹರುಗಳನ್ನು ಖರೀದಿಸಿರಿ ಮತ್ತು ಕ್ಷಯರೋಗದ ವಿರುದ್ಧ ಹೋರಾಟಕ್ಕೆ ಸಹಾಯ ಮಾಡಿರಿ. ಟಿ ಬಿ ಮೊಹರುಗಳನ್ನು ನಿಮ್ಮ ಕಾಗದಪತ್ರಗಳು, ಗ್ರೀಟಿಂಗ್ ಕಾರ್ಡುಗಳು, ಮತ್ತು ಪಾರಿತೋಷಕ ಪಾರ್ಸೆಲುಗಳು ಇವುಗಳ ಮೇಲೆ ಅಂಟಿಸಲು ಮರೆಯದಿರಿ.

ಒಂದು ಮುದ್ರೆಯ ಬೆಲೆ ಬರೇ ಹತ್ತು ಪೈಸೆ.

ಮೊಹರುಗಳು ಸಿಗುವ ಸ್ಥಳಗಳು: ಮೈಸೂರು ರಾಜ್ಯದ ಟಿ ಬಿ ಎಸೋಸಿಯೇಷನ್; 3. ಯೂನಿಯನ್ ಸ್ಟ್ರೀಟ್, ಬೆಂಗಳೂರು-1; ದ. ಕ. ಜಿಲ್ಲಾ ಟಿ ಬಿ ಎಸೋಸೆಯೇಷನ್, ಮಂಗಳೂರು; ಟಿ ಬಿ ಆಸ್ಪತ್ರೆಗಳು; ಟಿ ಬಿ ಕ್ಲಿನಿಕ್‌ಗಳು; ಮತ್ತಿತರ ಏಜನ್ಸಿಗಳು.

ಸ್ಥಳದಾನ:

'ನವಯುಗ', ಉಡುಪಿ.

NAVAYUGA 9-12-1971

Registered with the Registrar of News Papers for India under No. R. N. 3546/57

REGD. No. B. G. 176
LICENCE No. 33
Licensed to Post without Prepayment

ಆಯಕಟ್ಟಿನ ಕೆಲವು ನಗರಗಳು

ಬಾರ್ಮೇರ್

ಬಾರ್ಮೇರ್ ರಾಜಸ್ಥಾನದ ನೈಋತ್ಯ ಕ್ಕಿರುವ ಆಯಕಟ್ಟಿನಸ್ಥಳ ಜಿಲ್ಲಾ ಕೇಂದ್ರವೂ ಹೌದು. 1971ರ ಜನಗಣತಿಯ ಪ್ರಕಾರ ಈ ನಗರದ ಜನಸಂಖ್ಯೆ 38,634.

ಜಿಲ್ಲೆಯ ಉತ್ತರಕ್ಕೆ ಜೋಧಪುರ, ವಾಯುವ್ಯಕ್ಕೆ ಜಾಲೋರ್, ಜಿಲ್ಲೆಗಳು, ದಕ್ಷಿಣಕ್ಕೆ ಗುಜರಾತ್‌ರಾಜ್ಯ; ಪಶ್ಚಿಮದಲ್ಲಿ ಪಾಕಿಸ್ತಾನದ ಸಿಂಧಪ್ರಾಂತಗಳಿವೆ. ಪಾಕಿಸ್ತಾನದೊಂದಿಗಿರುವ ಬಾರ್ಮೆರಗಡಿ ಸುಮಾರು 300ಕೆಲೋಮೀಟರ್ ಉದ್ದವಿದೆ

ಬಾರ್ಮೇರ ನಗರ ಪಾಕಿಸ್ತಾನದ ಗಡಿಯಿಂದ ಸುಮಾರು 80ಕೆಲೋಮೀಟರುಗಳಷ್ಟುದೂರದಲಿದೆ. ಈನಗರವನ್ನು ರಾಜಾ ಬಹಾಡಾ ಅವರು 13ನೆಯ ಶತಮಾನದಲ್ಲಿ ಸ್ಥಾಪಿಸಿದರೆಂದು ಪ್ರತೀತಿ. ನಗರದ ಬಹುತೇಕಭಾಗ ಶಿಲಾಮಯವಾಗಿ ಬೆಟ್ಟದ ಪಕ್ಕದಲ್ಲಿದೆ. ಈ ಬೆಟ್ಟದ ತುದಿಯಲ್ಲೇ ಕೋಟೆಯೊಂದರ ಅವಶೇಷಗಳಿವೆ.

ಬಾರ್ಮೇರ ನಗರ ಜೋಧಪುರದೊಂದಿಗೆ ರೈಲ್ವೆ ಮತ್ತು ರಸ್ತೆ ಸಂಪರ್ಕ ಹೊಂದಿದೆ. ಸಮೀಪದ ವಿಮಾನ ನಿಲ್ದಾಣವೆಂದರೆ ಜೋಧಪುರ. ಈ ಜಿಲ್ಲೆಯಲ್ಲಿ ರಸ್ತೆಗಳ ಒಟ್ಟು ಉದ್ದ ಅಳತೆ 2200 ಕೆಲೋಮೀಟರ್‌ಗಳು ರೈಲ್ವೆಮಾರ್ಗದ ಉದ್ದಳತೆ 284 ಕಿಲೋಮೀಟರ್‌ಗಳು. 32 ರೈಲ್ವೆ ಸ್ಟೇಷನ್‌ಗಳಿವೆ. ಬಲೋತ್ರಾ, ಮುನಾಬಾ; ಸಂದಾರಿ, ಮತ್ತು ಗಾದ್ರಾರೋಡ್ ಮುಖ್ಯ ರೈಲು ನಿಲ್ದಾಣಗಳು. ಮಳೆಕಡಿಮೆ ಪ್ರಧಾನ ಸಾರಿಗೆ ವಾಹನ ಒಂಟೆ. ಜನರ ಮುಖ್ಯ ಉದ್ಯೋಗ ಪಶುಪಾಲನೆ.

ಕೊಮಿಲ್ಲಾ

ಮಧ್ಯಮ ತರಗತಿಯ ನಗರ. ಜನಸಂಖ್ಯೆ 54,504. ಈ ಪುರಾತನ ನಗರ ಕೋಮಿಲ್ಲಾ ಜಿಲ್ಲೆಯ ಮುಖ್ಯಸ್ಥಳ ಇಡೀ ಜಿಲ್ಲೆಯ ಭೂಮಿ ಫಲವತ್ತಾಗಿದೆ. ಇಡೀ ಬಂಗ್ಲಾ ದೇಶದಲ್ಲೇ ಚೆನ್ನಡೆ ನಾಡು ಎಂಬ ಅಸ್ವರ್ಥನಾಮ ಇದಕ್ಕೆ. ಅಕ್ಕಿ ಮತ್ತು ಸೆಣಬಿನ ಬೆಳೆಗಳಿಗೆ ಹೆಸರಾಗಿದೆ.

ಕೊಮಿಲ್ಲಾ ನಗರ ಕೋಟೆಯಸ್ಥಳ. ವಿದ್ಯುತ್ ಸೌಕರ್ಯವಿದೆ. ಬೆಂಕಿಪೊಟ್ಟಣ ತಯಾರಿಸುವ ಕಾರ್ಖಾನೆಯು ಇಲ್ಲಿದೆ. ಹದ ಮಾಡಿದಚರ್ಮ ಮತ್ತು ಚರ್ಮದ ವಸ್ತುಗಳ ವ್ಯಾಪಾರಕ್ಕೆ ಹೆಸರುವಾಸಿ. ಡಾಕ್ಕಾದಿಂದ ಚಿತ್ತಗಾಂಗಿಗೆ ಹೋಗುವ ರಸ್ತೆಯಲ್ಲಿದೆ. ಮೊಗಲರ ಕಾಲದಲ್ಲಿ ಈ ಪ್ರದೇಶ ಆಯಕಟ್ಟಿನಜಾಗವಾಗಿತ್ತು. ದಕ್ಷಿಣದಲ್ಲಿ ಚಿತ್ತಗಾಂಗ್ ಮತ್ತು ಉತ್ತರದಲ್ಲಿ ಅಖೌರಾ ದೊಂದಿಗೆ ರೈಲ್ವೆ ಸಂಪರ್ಕವಿದೆ. ಡಾಕ್ಕಾದಿಂದ ಕೋಮಿಲ್ಲಾವರೆಗೆ ವಿಮಾನ ಸಂಪರ್ಕ ಕಲ್ಪಿಸಲಾಗಿದೆ

ಕೃಷ್ಣಗರ್

ಕೃಷ್ಣಗರ ಪಶ್ಚಿಮ ಬಂಗಾಲ— ಬಂಗ್ಲಾದೇಶಗಡಿ ಸಮೀಪದಲ್ಲಿರುವ ಪುಟ್ಟನಗರ ನಗರ ಚಿಕ್ಕದಾದರೂ ಅದರ ಹಿರಿಮೆ ಚಿಕ್ಕದಲ್ಲ. 1971ರ ಜನಗಣತಿಯ ಪ್ರಕಾರ ಜನಸಂಖ್ಯೆ 86354. ಈ ನಗರ ಪಶ್ಚಿಮಬಂಗಾಳದ ನಾಡಿಯಾ ಜಿಲ್ಲೆಯ ರಾಣಾಕೇಂದ್ರವೂ ಹೌದು. ಜಿಲ್ಲೆಯ ಜನಸಂಖ್ಯೆ 1971ರ ಜನಗಣತಿಯ ಪ್ರಕಾರ 22,29,022. ಜನಸಾಂದ್ರತೆ ಚದರ ಕಿಲೋಮೀಟರ್‌ಗೆ 568. ಈ ಪ್ರದೇಶಕ್ಕೆ 'ಭಾಗೀರಥಿ ಪಟ್ಟಿ' ಎಂದು ಹೆಸರು.

ಇದು ಅನಾದಿಕಾಲದಿಂದಲೂ ಸಾಂಸ್ಕೃತಿಕ ಕೇಂದ್ರ ಕೃಷ್ಣಗರ್ ಮಣ್ಣಿನ ಬೊಂಬೆಗಳಿಗೆ ಪ್ರಸಿದ್ಧವಾಗಿದೆ. ಈ ಬೊಂಬೆಗಳು ಸೌಂದರ್ಯ ಹಾಗೂ ಕಲಾತ್ಮಕ ಅವರ್ಣನೀಯ. ಕೃಷ್ಣಗರದ 'ಚಪ್ಪಾ' ಮತ್ತು ಹಾಲಿನ ಮಿಠಾಯಿಗಳು ಸುಪ್ರಸಿದ್ಧವಾಗಿದೆ.

ದಿನಾಜಪುರ್

ದಿನಾಜಪುರ ಬಂಗ್ಲಾ ದೇಶದ ಒಂದು ಸಣ್ಣ ಪಟ್ಟಣ. 1971ರ ಜನಗಣತಿಯ ಪ್ರಕಾರ ಜನಸಂಖ್ಯೆ 37,711. ಅದು ದಿನಾಜಪುರ ಜಿಲ್ಲೆಯ ಮುಖ್ಯಸ್ಥಳ. ಈ ಜಿಲ್ಲೆಯ ಕ್ಷೇತ್ರ 2609 ಚದರ ಮೈಲುಗಳು. ಜನಸಂಖ್ಯೆ 17,099.17. ಅಧುನಿಕ ಕೈಗಾರಿಕೆ ದಿನಾಜಪುರ ಪಟ್ಟಣದ ಅಭಿವೃದ್ಧಿಗೆ ಸ್ವಲ್ಪಮಟ್ಟಿಗೆ ಕಾರಣವಾಗಿದೆ

ಪಾಕಿಸ್ತಾನ ಸೈನ್ಯ ಬಂಗ್ಲಾ ದೇಶದ ಮೇಲೆ ದಾಳಿಮಾಡುವ ಮುನ್ನ ಈ ಪಟ್ಟಣದಲ್ಲಿ ಎಣ್ಣೆ ಕಾರ್ಖಾನೆಗಳೂ. ಗಾಜಿನ ಕೈಗಾರಿಕೆಗಳೂ ಇದ್ದವು. ದಿನಾಜಪುರ ಪಟ್ಟಣವು, ಪರ್ಬತಿಪುರ- ದಿನಾಜಪುರ-ರೋಹಿಯ ರೈಲ್ವೆ ಮಾರ್ಗದ ಕುರಿಗ್ರಾಮ. ಲೆನ್ಸಾ ಜಂಕ್ಷನ್ ಪ್ರದೇಶದಲ್ಲಿದೆ. ದಿನಾಜಪುರ ಡಾಕ್ಕಾ ನಡುವೆ ಹೆಲಿಕಾಪ್ಟರ್ ಸಾರಿಗೆ ಇದೆ. ನಗರಬಾರಿ ಭೋಗ್ರಾ ರಂಗಪುರ ನಗರಗಳೊಂದಿಗೆ ರಸ್ತೆ ಸಂಪರ್ಕವಿದೆ.

ದಿನಾಜಪುರ ಜಿಲ್ಲೆ ಕಬ್ಬಿನ ಬೆಳೆಗೆ ಪ್ರಸಿದ್ಧ. ಅಕ್ಕಿ, ಸಾಸಿವೆ, ಸೆಣಬು ಮತ್ತು ದ್ವಿದಳಧಾನ್ಯ ಇತ್ಯಾದಿ ಬೆಳೆಗಳು.

ಜೇಸಲ್ಮೀರ

ಜೇಸಲ್ಮೀರ, ರಾಜಾಸ್ತಾನ ಮರುಭೂಮಿ ಪ್ರದೇಶದಲ್ಲಿದೆ. ಅದು ಜಿಲ್ಲೆಯ ಮುಖ್ಯಸ್ಥಳವೂ ಹೌದು. ಜನಸಂಖ್ಯೆ 1971ರ ಜನಗಣತಿಯ ಪ್ರಕಾರ 1,65,888.

ಪ್ರಾದೇಶಿಕ ವಿಸ್ತೀರ್ಣದ ದೃಷ್ಟಿಯಿಂದ ಜೇಸಲ್ಮೀರ ಜಿಲ್ಲೆ ಇಡೀ ದೇಶದ ಜಿಲ್ಲೆಗಳಲ್ಲೇ ದೊಡ್ಡದು ಈ ಜಿಲ್ಲೆಯ ಉತ್ತರ ಹಾಗೂ ಪಶ್ಚಿಮ ದಿಕ್ಕುಗಳಲ್ಲಿ ಪಾಕಿಸ್ತಾನದ ಸಿಂಧ ಪ್ರಾಂತ ದಕ್ಷಿಣ ಮತ್ತು ಪೂರ್ವಕ್ಕೆ ಜೋಧಪುರ ಜಿಲ್ಲೆ, ವಾಯುವ್ಯಕ್ಕೆ ಬಿಕಾನೇರ ಜಿಲ್ಲೆಗಳಿವೆ. ಹೀಗೆ ಪಾಕಿಸ್ತಾನದೊಂದಿಗೆ ಈ ಜಿಲ್ಲೆಯ ಗಡಿ 560 ಕೆಲೋಮೀಟರ್‌ಗಳಷ್ಟಿದೆ. ಜೇಸಲ್ಮೀರ ನಗರ ಭಾರತ-ವಾಕ್ ಗಡಿಯಿಂದ 100 ಕೆಲೋಮೀಟರು ದೂರದಲ್ಲಿದೆ. ರಾವಲ ಜೈಸಲ್ ಅವರು ಕ್ರಿಸ್ತಶಕ 1156ರಲ್ಲಿ ಈ ನಗರವನ್ನು ಕಟ್ಟಿಸಿದರೆಂದು ಹೇಳಲಾಗುತ್ತಿದೆ. ಅಷ್ಟೊಂದು ಉತ್ತರವಲ್ಲದ ಬೆಟ್ಟಗಳ ಸಾಲು. ಅದನ್ನು ಸುತ್ತುವರಿದಿರುವ ಕಲ್ಲಿನಗೋಡೆ ಈ ಪಟ್ಟಣದ ಅಂದವನ್ನು ಹೆಚ್ಚಿಸಿದೆ.

●●

ಟು ಹೋದ.

ದಿನಗಳುರುಳಿದವು.ಶ್ರೀನಾಥನ ನೆನಪು ಮನಸ್ಸಿನಿಂದ ಮರೆಯಾಗುತ್ತಾ ಬಂದಿತ್ತು. ನಾನು ನನ್ನ ನಿತ್ಯ ಕಾರ್ಯಗಳಲ್ಲಿ ನಿರತನಾಗಿದ್ದೆ.

ಅಂದು ಸಂಜೆಯ ಹೊತ್ತು ತಿರುಗಾಡಿ ಕೊಂಡು ಬರೋಣವೆಂದು ಹೊರಟಾಗ ಶ್ರೀನಾಥನ ಸೋದರ ಮಾವ ಶೇಷಪ್ಪನವರು ಅವನ ಕತೆಯ ಉತ್ತರಾರ್ಧವನ್ನು ಹೇಳತೊಡಗಿದರು.

ಶ್ರೀನಾಥ ಇಲ್ಲಿಂದ ಹೊರಟ ಮೇಲೆ ಒಂದು ವರ್ಷದನವರೆಗೆ ಎಲ್ಲಿಲ್ಲೋ ಅಲೆದು ಸನ್ಯಾಸಿಯ ವೇಷದಲ್ಲೇ ಇದ್ದನಂತೆ ಆಮೇಲೆ ಹೇಗೋ ಏನೋ ಯಾಕೊ ...ಏನೋ.. ಅದೆಲ್ಲ ಗೊತ್ತಿಲ್ಲ. ಅಂತೂ ಪುನಃ ಬೆಂಗಳೂರಿಗೆ ಬಂದು ಮಾವನ ಮನೆಯಲ್ಲೇ ಮಡದಿಯೊಂದಿಗೆ ಇದ್ದಾನಂತೆ. ಇಷ್ಟನ್ನು ಕೇಳಿದ ಮೇಲೆ ನಾನೇನೆನ್ನಲಿ? ಸಿಟ್ಟುಗೊಳ್ಳಲೇ? ಜಗುಪ್ಸೆತೋರಲೇ? ಅಲ್ಲ ಸಹಾನುಭೂತಿಗೆ ಪಾತ್ರನಾದಾನೇ? ನೀನೇ ಹೇಳಿ.

ಶ್ರೀಮತಿ ಯಶೋದಾ ಯನ್. ಜೆನ್ಸಿ

●●

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ **English Made Easy**

ಅನ್ಯರ ಸಹಾಯವಿಲ್ಲದೆ ತನ್ಮುಖೇನ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ: ರೂ 2--00

●

Letter Writing Made Easy **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ನಿವಿಧ ಪತ್ರ ಸಂಕಲನ. ಬೆಲೆ: ರೂ. 1—50

●

ಗೀತೆಯ ಕೈಗನ್ನಡಿ **ಭಗವದ್ಗೀತೆಯ ಸಮೂಲ ಭಾಷಾಂತರ**

ಹೊಸಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಸಮೂಲ ಅನುವಾದ. 450 ಪುಟಗಳ ಸುಂದರ ಕೈಹೊತ್ತಗೆ ಬೆಲೆ. ರೂ 2-00

●

ಮನೆ-ಮದ್ದು **Home Remedies**

ಡಾ| ವಿ. ಆರ್. ಕೊರಡ್ಡಲ್‌ರು ಬರೆವ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹಪೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟ

ಸಂಗ್ರಾಹ್ಯ ಪುಸ್ತಕ. ಬೆಲೆ: ರೂ. 2-00

ವಿ. ಪೂ. ವಿ. ಪಿ. ಮಾಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 80 ಪೈಸೆ ಆಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಪಾಲುಕೋಟಿ, ಉಡುಪಿ.

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. 260/1971

S. L ನಾರಾಯಣ ಭಟ್ —ವಾದಿ.

ಮತ್ತು

ಸಣ್ಣ ದೇವಡಿಗ—ಪುತ್ತು
ದೇವಡಿಗರ ಪುಗೆ-ಕಂಡಕ್ಟರ್
ಪನಸೂನ್ ಟ್ರಾನ್ಸ್‌ಪೋರ್ಟ್
ಕಂಪೆನಿ ಪ್ರೈವೇಟ್ ಲಿಮಿಟೆಡ್
ಉಡ್ಪಿಯಲ್ಲಿರುವವ— —ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಯ ಕೂಡೆ ಪ್ರತಿವಾದಿಯು ಜಾಕ ಮಾಡಿತೊಂಡ ವ್ಯವಹಾರಿಗೆ-ವಾದಿಯು ಪ್ರತಿವಾದಿಯ ಮೇಲೆ ಪ್ಲೈಂಟನಲ್ಲಿ ಕೇಳಿದ ಬಾಬ್ತು ಅಸಲು ಬಡ್ಡಿ ಇತ್ಯರ್ಥ ಆಗ್ಗೆರೆ ಕೇಳಿ ದಾಖ್ಲು ಮಾಡಿದ ಮೇಲ್ಕಂಡ ದಾವೆಯು ತಾರೀಕು 17.12.1971 ಕ್ಕೆ ನಿಮ್ಮ ಅಪ್ಪೆರು ನೋಟಿಸಿನ ಬಗ್ಗೆ ಯಿಟ್ಟಿದೆ. ಆ ಶುರಿತು ನೀವೇನಾದರೂ ಉಡಾಹರಿಸುವುದಾದ್ದಿದ್ದರೆ ಆ ದಿನ್ನ ಹಗಲು ಘಂಟೆ 11ಕ್ಕೆ ಸರಿಯಾಗಿ ಈ ಕೋರ್ಟು ಮುಂದೆ ಬಂದು ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲ್ಪಡುವುದು

(By Order of the Court)

ಶಿರ್ವಾಡಿ ವಿಲಿಯಂ ಪಿಂಟೊ.
M.A.,L.L.B.,
ವಾದಿ ಪರ ಎಡ್ವೋಕೇಟ್.

Udipi, Dated 28-11-71.

Edited, Printed & Published by K. H. Shetty at the Navayuga Press, Udipi, S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಸಂಪುಟ ೫೧
ಸಂಚಿಕೆ ೧೫

Vol. 51
No. 15

ಉಡುಪಿ, 16—12—1971

ಚಾರುಚಿಂತನ

ಬಂಗ್ಲಾ ದೇಶ್ ಕೀ ಜಯ್

'ಇನ್ನು ಹತ್ತು ದಿನಗಳಲ್ಲಿಯೇ ಭಾರತ—ಪಾಕಿಸ್ತಾನ ಯುದ್ಧ....'

ದಂಡಿನಾಳಿಕೆಯ ಸರ್ವಾಧಿಕಾರಿ ಯೂಹ್ಯಾಖಾನರ ಭವಿಷ್ಯ ನುಡಿ-ಅಲ್ಲ, ನಿರ್ಧಾರದ ನುಡಿ.

ಈ ಅವಧಿಯೊಳಗೆ ಅವರು ಸಮರವಾರಂಭಿಸಿಯೇ ಬಿಟ್ಟರು. ಆಗರ್ತಲಾದ ಮೇಲೆ ಬಾಂಬು ದಾಳಿಯಿಂದದು ಮೊದಲಾಯ್ತು. ಆತ್ಮ ರಕ್ಷಣೆಗಾಗಿ ಭಾರತೀಯ ಸೇನೆಗೆ ಬಂಗ್ಲಾದೇಶ ಪ್ರವೇಶಿಸಲು ಅನುಮತಿ; ಅಲ್ಲಿ ಮುಕ್ತಿವಾಹಿನಿಯೊಡನೆ ಸಂಬಂಧ-ವಾಕ್ ಸರ್ವಾಧಿಕಾರದ ಸರ್ವದಮನಕ್ಕೆ ಬದ್ಧ ಕಂಕಣ.

ಉತ್ತರ ಭಾರತದ ಹಲವಾರು ಮಿಲಿಟರಿ ನೆಲೆಗಳ ಮೇಲೆ ಪಾಕಿನಿಂದ ವಿಮಾನದಾಳಿ ಆಕ್ರಮಣದ ಸ್ಪಷ್ಟ ಉದ್ದೇಶ. ದೇಶದಲ್ಲಿ ವಿಷಮ ಪರಿಸ್ಥಿತಿಯ ಘೋಷಣೆ—ಪ್ರತಿದಾಳಿಗೆ ಆದೇಶ.

ಪಾಕಿಸ್ತಾನದ ಮಿಲಿಟರಿ ವ್ಯವಸ್ಥೆಯನ್ನು ಧ್ವಂಸಗೊಳಿಸಲು ನಮ್ಮ ಸೇನೆಗೆ ಕೆಚ್ಚೆದೆಯ ಆಜ್ಞೆ. ಬಂಗ್ಲಾದೇಶದ ಜನತೆಗೆ ಸಂಪೂರ್ಣ ಸಹಕಾರ. ಭೂಸೇನೆಯಿಂದ ಪಾಕಿಸ್ತಾನ ಸೀಮೋಲ್ಲಂಘನ, ವಾಯು ಬಲದಿಂದ ಅದಕ್ಕೆ ರಕ್ಷಣೆ—ಪಾಕ್ ನೆಲೆಗಳ ಮೇಲೆ ದಾಳಿ.

ಸ್ವತಂತ್ರ ಭಾರತದ ಇತಿಹಾಸದಲ್ಲೇ ಮೊತ್ತಮೊದಲ ಬಾರಿಗೆ ನೌಕಾಬಲದ ಸಮರ ಪ್ರವೇಶ. ಶತ್ರು ನೌಕೆ ಜಲಾಂತರ್ಗಾಮಿಗಳ ಶೋಧ—ನಾಶ.

ಸಮರೋತ್ಸಾಹದಲ್ಲಿದ್ದ ಯೂಹ್ಯಾಖಾನರಿಗೆ ಸಮರ್ಪಕವಾದ ಆಹ್ವಾನ. ನರಮೇಧಕ್ಕೆ ದಿಗ್ಬಂಧನ-ಯೂಹ್ಯಾರ ಪರಾಟೀ ಪೇಚಾಟ — ಅಪಲಾಪ-ಪ್ರಲಾಪ.

ಎಂದಿನಿಂದಲೋ ನಿರೀಕ್ಷಿಸಲಾಗಿದ್ದ ಬಂಗ್ಲಾದೇಶಕ್ಕೆ ಭಾರತದ ಮನ್ನಣೆ-ಜೈ ಬಂಗ್ಲಾ.

ಧರ್ಮದ ನೆಲೆಯಲ್ಲಿ ಭಾರತದಿಂದ ಬೇರೆಯಾದ ಪಾಕಿಸ್ತಾನ, ಸಂಸ್ಕೃತಿಯ ಕಾರಣದಿಂದ ಮತ್ತೆ ಬಡಿದಿತ್ತು. ಇದಕ್ಕೆ ಭಾರತದ ಸಹಾನುಭೂತಿ ಕಾರ್ಯರೂಪಕ್ಕೆ ಬಂತು.

ಈಗ ಬಂಗ್ಲಾದೇಶ ಪಾಕಿಸ್ತಾನದ ಆಂತರಿಕ ಪ್ರಶ್ನೆಯಲ್ಲ, ಅದು ಪ್ರಜಾಪ್ರಭುತ್ವವಾದಿ ಸಾರ್ವಭೌಮ ರಾಷ್ಟ್ರ. ಭಾರತದ ನೂಸ್ಥೈತೆಯನ್ನನುಸರಿಸಿ ಭೂತಾನವು ಬಂಗ್ಲಾದೇಶವನ್ನು ಮನ್ನಿಸಿತು-ಉಳಿದ ಕೆಲವಾದರೂ ಶೀಘ್ರಮನ್ನಣೆ ನೀಡುವ ಸಂಭವ.

ಬಂಗ್ಲಾದ ಹೆಚ್ಚಿನ ಭೂಪ್ರದೇಶ ಭಾರತೀಯ-ಸೇನೆ— ಮತ್ತು ಮುಕ್ತಿವಾಹಿನಿಗಳ ಕೈಯಲ್ಲ. ಜಲ್ಲಿನ ವಾರ್ ವಿಮಾನ ಬಲ ಸರ್ವನಾಶ. ಭೂಸೇನೆಗೆ ದಿಬ್ಬಂಧ. ಪತನದ ದಿನ ದೂರವಿಲ್ಲ. ಭಾರತೀಯ ಮಿಲಿಟರಿ ನಾಯಕರ ಅಭಿಪ್ರಾಯದಂತೆ ಒಟ್ಟು ಎಂಟು— ಹತ್ತು ದಿನಗಳಲ್ಲಿ ಬಂಗ್ಲಾ ನೆಲವಲ್ಲಿ ವಾಕ್ ಸೇನೆ ನಿಲ್ಲಲಾರದು.

ಭಾರತೀಯ ಸೇನೆ ವಶಪಡಿಸಿಕೊಂಡ ಭೂಮಿಯಲ್ಲಿ ನಾಗರಿಕ ಆಡಳಿತೆ ಸ್ಥಾಪಿಸಲು ಮುಕ್ತಿವಾಹಿನಿ ಮುಂದೆ. ಶೇಕ್ ಮುಜಿಬುರ್ ರೆಹಮಾನರ ಹೆಸರಿನಲ್ಲಿ ಬಂಗ್ಲಾ ದೇಶ ಒಕ್ಕೂರಲಿನಿಂದ ಘೋಷಿಸುತ್ತದೆ — ಜೈ ಬಂಗ್ಲಾದೇಶ್!

ಬಂಗ್ಲಾದ ಎಳೂನರೆ ಕೋಟಿ ನಾಗರಿಕರ ಈ ಜಯನಾದಕ್ಕೆ ಭಾರತದ ಅರುವತ್ತು ಕೋಟಿ ಜನರು ತಮ್ಮ ಕೊರಲು ಸೇರಿಸುತ್ತಾರೆ-ಬಂಗ್ಲಾದೇಶ್ ಕೀ ಜೈ.

ಭಾರತೀಯ ಸೇನೆಗಳ ಕಾರ್ಯಾಚರಣೆ ಪೂರ್ವ ಪ್ರದೇಶದಲ್ಲಿ ಮಾತ್ರ ಸೀಮಿತವಲ್ಲ. ಪಶ್ಚಿಮದಲ್ಲೂ ಪಾಕ್ ಗಡಿದಾಟಿವೆ.

ಪಾಕಿಸ್ತಾನದ ನೆಲವನ್ನು ಕಬಳಿಸುವ ಉದ್ದೇಶದಿಂದಲ್ಲ, ಅದರ ಮಿಲಿಟರಿ ಶಕ್ತಿಯನ್ನು ದಮನ ಮಾಡುವ ಸಮರ್ಥನೀಯ ಉದ್ದೇಶದಿಂದ. ಯೂಹ್ಯಾ ಕಂಗಾಲಾಗಿದ್ದಾರೆ

ಯೂಹ್ಯಾಖಾನರ ಮಿತ್ರರೂ ಕಣ್ಣು ತೋರದವರಾಗಿದ್ದಾರೆ. ಯುದ್ಧ ಆರಂಭಿಸಿದ ಮೇಲೆ ಅದರ ಪರಿಣಾಮವೇನಾಗುತ್ತದೆಂದು ಯೂಹ್ಯಾಖಾನರಿಗೂ ನಿಕ್ಸನ್ನರಿಗೂ ಮೊದಲೇ ಗೊತ್ತು. ಯುದ್ಧದ ಕಡಿಹಾರಿಸಿದ ಮೇಲೆ ಭದ್ರತಾ ಸಮಿತಿಯ ಹೆಸರಿನಲ್ಲಿ ಭಾರತವನ್ನು ತಲೆ ಬಾಗುವಂತೆ ಮಾಡುವ ತಂತ್ರ ಅಮೆರಿಕೆಯದ್ದು

ವಿಶ್ವ ಸಂಸ್ಥೆ ಮತ್ತದರ ಅಂಗ ಸಂಸ್ಥೆಗಳ ನಿರ್ಣಯಗಳು ತನಗೆ ಪ್ರತಿಕೂಲವಾಗಿದ್ದರೂ ಭಾರತ ಅದರ ಮುಂದೆ ತಲೆ ತಗ್ಗಿಸಿ ಗೌರವಿಸಿದ್ದು. ಸತ್‌ಸಂಪ್ರದಾಯ ಈ ಬಾರಿಯೂ ಹಾಗೇನೇ ಮೂಡಬಹುದೆಂದು ನಿಕ್ಸನ್ ಇಂಗಿತ.

ಭದ್ರತಾ ಸಮಿತಿಯಿಂದ ಭಾರತಕ್ಕೆ ಇದುವರೆಗೆ ನ್ಯಾಯ ದೊರಕಿದ್ದೆಂಬುದಿಲ್ಲ ಆದ್ದರಿಂದ ನಾವೀ ಪ್ರಶ್ನೆಯನ್ನು ಅದರ ಮುಂದೆ ತರುವುದಿಲ್ಲ.

ಸಮರಾರಂಭವಾದ ಮೇಲೆ ಬಂಗ್ಲಾ ಸಮಸ್ಯೆಯಲ್ಲಿ ಏಕೆ ಆಸಕ್ತಿ? ಲಕ್ಷೋಪಲಕ್ಷ ನಿರಾಶ್ರಿತರು ಭಾರತದತ್ತ ವ್ಯಾಣ ಅಂಚೆಯಲ್ಲಟ್ಟುಕೊಂಡು ಓಡಿ ಬರುವಾಗ, ನಿಮ್ಮ ಕಣ್ಣು ಕುರುಡಾಗಿತ್ತೇ? ಲಕ್ಷ ಲಕ್ಷ ನಿರೀಹ ನಾಗರಿಕರನ್ನು ಯೂಹ್ಯಾಖಾನರು ಚೆಂಡಾಡುತ್ತಿರುವಾಗ, ಅವರ ಆರ್ತಕ್ರಂದನ ಕೇಳಿದಂತೆ ನಿಮ್ಮ ಕಿವಿ ಕಿವುಡಾಗಿತ್ತೆ? ಆನಾಥರಿಗೆ ನೆರವು ನೀಡಲು ಧಾವಿಸುವಲ್ಲಿ ನಿಮ್ಮ ಕಾಲುಗಳು ಕುಂಟಾದುವೆ?

ಇವಕ್ಕೆ ಯೂಹ್ಯಾ ಜೊಬಲಿಗರಲ್ಲಿ ಉತ್ತರವಿಲ್ಲ. ಅದು ಯೂಹ್ಯಾಖಾನರೊಬ್ಬರಿಗೇ ಸಂಬಂಧಿಸಿದ ಪ್ರಶ್ನೆ ಎಂದು ತೆಪ್ಪಗೆ ಕುಳಿತಿದ್ದಾವು. ಮತ್ತೀಗೇಕೆ ಆಸಕ್ತಿ?

ಬಂಗ್ಲಾ ಸಮಸ್ಯೆಗೆ ಮೂಲಕಾರಣವೇನೆಂದು ತಿಳಿದುಕೊಳ್ಳುವ ಆಸಕ್ತಿಯಿಟ್ಟುಕೊಂಡವರು ಸಮಸ್ಯೆಗೆ ಪರಿಹಾರವನ್ನು ಮುಂದಾಗಿದ್ದಾರೆ. ಅಂತಾರಾಷ್ಟ್ರೀಯ ಸಮಸ್ಯೆಯೊಂದನ್ನು ಭಾರತ-ಪಾಕಿಸ್ತಾನಗಳ ಸಮಸ್ಯೆಯೆಂದು ತಪ್ಪು ತಿಳಿದುಕೊಂಡಿದ್ದಾವೆ. ತಪ್ಪು ಪ್ರಚಾರ ಮಾಡುತ್ತಿದ್ದಾರೆ; ಸತ್ಯವನ್ನು ಆವರಿಸಿಕೊಂಡಿದ್ದಾರೆ.

ಇಮ್ರಾಜ್ಯಕೀಯ ವ್ಯಥೆಭಾರೆ.

ವ್ಯಥೆಭಾವು ಅಕ್ಷೀಲನೆಂಬ ಭಾವನೆ ಇಂದು ಪೂರ್ವದೇಶಗಳಲ್ಲಿ ಬೆಳೆದಿವೆ. ಪಶ್ಚಿಮದಲ್ಲಿ ಸೂರ್ಯ ಮೂಡುವುದೇ ಇಲ್ಲವೆಂಬ ಸತ್ಯದ ಪ್ರಜ್ಞೆ ಈಗ ಪೂರ್ವ ದೇಶಸ್ಥರಿಗೆ ಉಂಟಾಗಿದೆ. ಭಾರತೀಯರು ಜಾಗ್ರತರಾಗಿದ್ದಾರೆ. ಅವರು ವಾಸ್ತವಿಕತೆಯನ್ನು ಅರಿತುಕೊಳ್ಳಬಲ್ಲವರಾಗಿದ್ದಾರೆ.

ಅಮೆರಿಕೆಗೆ ಭಾರತವ ನೇಲೆ ತೀವ್ರ ಕೋಪ. ಶಸ್ತ್ರಾಸ್ತ್ರ ನೆರವು ನಿಲುಗಡೆ; ಆರ್ಥಿಕ ಸಹಾಯ ಬಂದ್....ಇನ್ನೂ ಏನೇನೋ....

ಅಮೆರಿಕೆ ನೆರವು ನೀಡಿದ್ದನ್ನು ನಾವು ಕೃತಜ್ಞತೆಯಿಂದ ನೆನೆದು ಕೊಳ್ಳುತ್ತೇವೆ. ಆದರೆ ಕೃತಜ್ಞತೆಯೆಂದರೆ, ಅವರ ಅವಿವೇಕವನ್ನು ಒಪ್ಪಿಕೊಳ್ಳುವುದೆಂದರ್ಥವಲ್ಲ.

ಭದ್ರತಾಸಮಿತಿಯ ಮುಂದೆ ಬಂದೂ ಸಮರ ನಿವಾರಣೆಕ್ಕೆ ಕರೆ ಕೊಡುವ ಎರಡು ಗೊತ್ತುವಳಿಗಳು ಸೋವಿಯತ್ತಿನ ವೀಟೋದಿಂದ ನಿರರ್ಥಕ. ಅಪರಾಧಿಯನ್ನು ಗೊತ್ತು ಹತ್ತಿದೆ ನಿರಪರಾಧಿಯನ್ನೇ ಅಪರಾಧಿಯೆಂದು ಘೋಷಿಸುವುದು ಶಕ್ತಿಮದ ಬುದ್ಧಿವಂತ ರಾಷ್ಟ್ರಗಳ ಸಂಪ್ರದಾಯ.

ಪಾಕ್ ಸರಕಾರವು ಬಂಗ್ಲಾ ನೇತೆಯ ಚುನಾಯಿತ ಪ್ರತಿನಿಧಿಗಳೊಡನೆ ರಾಜ್ಯಕೀಯ ಪರಿಹಾರದ ಮಾತುಕತೆ ನಡೆಸ ಬೇಕೆಂಬುದನ್ನು ಅಮೆರಿಕೆ—ಅದರ ಮಿತ್ರರು ಹೇಳುವುದೇ ಇಲ್ಲ.

ಅಂದರೆ, ಯೂಹ್ಯಾಖಾನರನ್ನು ಹೇಗಾದರೂ ಉಳಿಸುವುದೇ, ಅವರು ಮಾಡಿದ್ದನ್ನು ಸಮರ್ಥಿಸುವುದೇ ಅವರ ಇಂಗಿತ.

ಇದು ನ್ಯಾಯವಲ್ಲ, ಅನ್ಯಾಯದ ಪರವಾಗಿ. ಆದೇನಿದ್ದರೂ ಭಾರತ ಬಂಗಾದೇಶಕ್ಕೆ ಮನ್ನಣೆ ನೀಡಿದ್ದರಿಂದ- ಇತಿಹಾಸದಲ್ಲಿ ಮತ್ತೊಂದು ಕವಲು ಹುಟ್ಟಿತು.

ಅಮೆರಿಕೆಯ ಕುತಂತ್ರ ಬಹಿರಂಗವಾಗಲು ಹೆಚ್ಚು ಕಾಲಾವಧಿ ಬೇಕಾಗಿಲ್ಲ.

ಪಾಕಿಸ್ತಾನವೇ ಭಾರತದ ಮೇಲೆ ಆಕ್ರಮಣ ಮಾಡಿದ್ದರಿಂದ, ಯುದ್ಧ ಘೋಷಿಸಿದರಿಂದ. ಕಾಶ್ಮೀರದಲ್ಲಿನ ಸಮರ ವಿರಾಮ ರೇಖೆ ತನ್ನ ಅಸ್ತಿತ್ವವನ್ನು ಕಳೆದು ಕೊಂಡಿದೆ.

ಭಾರತವು ತನಗೆ ಬೇಕೆನಿಸಿದಾಗ, ಆಜಾದ ಕಾಶ್ಮೀರವನ್ನು ಪಾಕ್ ಆಕ್ರಮಣದಿಂದ ಮುಕ್ತಗೊಳಿಸುವುದೆಂದು ಎಂದೋ ಸಾರಿತ್ತು. ಇದೀಗ ಅದಕ್ಕೆ ಸದವಕಾಶವೊದಗಿಬಂದಿದೆ. ನಮ್ಮ ಸೇನೆಗಳು ಈ ಕಾರ್ಯದಲ್ಲಿ ಆಸಕ್ತವಾಗಿವೆ.

ವಿಶ್ವ ಸಂಸ್ಥೆಯೂ ಅದರ ಗುತ್ತೇದಾರ ದೇಶಗಳೂ ಪ್ರಚಲಿತ ಘಟನಾವಳಿಗಳಲ್ಲಿ ನಿರಾಸಕ್ತವಾಗಿದ್ದುವು. ಈಗ ಅವು ಜಾಗ್ರತನಾಗಬೇಕಾದ ಅಗತ್ಯವುಳಿದಿಲ್ಲ. ಅವು ಭಾರತ-ಪಾಕಿಸ್ತಾನಗಳನ್ನು ಅವುಗಳಪ್ಪಕ್ಕೇ ಬಿಟ್ಟು ತಾವು ಪರಿಣಾಮವನ್ನು ಕಾದು ನೋಡಬೇಕು.

ಭಾರತವನ್ನು ದಾಕ್ಷಿಣ್ಯಕ್ಕೆ ಬಲಿ ಮಾಡಿ ಪಾಕಿಸ್ತಾನವನ್ನು ಉಳಿಸುವ ಪಾಶ್ಚಾತ್ಯ ಮಹಿಮಾವಂತರು ಇನ್ನು ಮುಂದಾದರೂ ಈ ಹವ್ಯಾಸವನ್ನು ಬಿಡಬೇಕು.

ಅತ್ಯಲ್ಪ ಗೌಂವಕ್ಕೆ ಹಾನಿಯೊದಗಿದಾಗ ಅದನ್ನು ಅಮೆರಿಕೆಯೊದರೂ ಹೇಗೆ ಸಹಿಸೀತು?

ಹತ್ತಿಯನ್ನಾದರೂ ಒತ್ತೊತ್ತಿದರೆ ಕಲ್ಲಿಗೂ ಗಟ್ಟಿಯಾಗುತ್ತದೆ.

ನ್ಯಾಯ—ಅನ್ಯಾಯಗಳ ಅಪರಾಧಿ - ನಿರಪರಾಧಿಗಳ ನಡುವೆ ತಾರತಮ್ಯವಿಡಿಯಿಂಬುದನ್ನು ಬುದ್ಧಿವಂತ ದೇಶಗಳು ಇನ್ನಾದರೂ ಕಂತುಕೊಳ್ಳಬೇಕು.

●●

ನವಯುಗ

ಹೊನ್ನ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ

ಹೊನ್ನ ಹಬ್ಬದ ವಿಶೇಷ ಸಂಚಿಕೆಗೆ ಜಾಹೀರಾತು ಕೊಟ್ಟು ಸಹಕರಿಸಿರಿ.

ಕೇನೋಪನಿಷತ್ತಿನ ಕಥೆ

ಸ್ವರ್ಣಮಯೀ - ಉಮಾ

ನಿವೇದಕರು ಶ್ರೀ ಕೆ. ಜಿ. ಹೆಗಡೆ, ಮುಂಬಯಿ

(ಸಂಸ್ಕೃತ ಭಾಷೆಯಲ್ಲಿ 'ಉಪನಿಷದ್' ಎಂದರೆ 'ಬಾ. ನನ್ನ ಬಳಿ ಕೂತುಕೋ' ಎಂಬ ಅರ್ಥವಂತೆ. ಉಪನಿಷತ್ತುಗಳೆಲ್ಲ ತತ್ವಜ್ಞಾನ ಭಂಡಾರದ ಶ್ರೇಷ್ಠ ಉಪನ್ಯಾಸ ಮತ್ತು ಪ್ರಬಂಧಗಳು. ಇವು ಸುಮಾರು ನೂರಎಂಟು ಇವೆಯೆಂದು ಬಲ್ಲವರು ಹೇಳುತ್ತಾರೆ. ಆದರೆ ಅವೆಲ್ಲ ವೇದ ಕಾಲದ ನಂತರ ಒಂದರ ಹಿಂದೆ ಇನ್ನೊಂದು ಅಂದರೆ ಕಾಲಕ್ರಮೇಣ ರಚಿಯಿತವಾದವುಗಳು. ಬರೇ ಹದಿಮೂರು ಉಪನಿಷತ್ತುಗಳು ಮಾತ್ರ ಪ್ರಾಮುಖ್ಯವಾದವುಗಳು ಮತ್ತು ವೇದ ಕಾಲಕ್ಕೆ ಸೇರಿದವುಗಳೆಂದು ಪಂಡಿತರು ಅಭಿಪ್ರಾಯ ಪಡುತ್ತಾರೆ.

ಇವುಗಳಲ್ಲಿ ಅಡಕವಾದ ದಿವ್ಯ ಸಾರ ಅದೊಂದು ಕಾಲದಲ್ಲಿ ಆತ್ಮ ಸಂಭೂತರಿಗೆ ಮಾತ್ರ ಸಾಧ್ಯವೂ ಲಭ್ಯವೂ ಆಗಿತ್ತು. ಗಹನವಾದ ರಹಸ್ಯಗಳಿಂದ ಕೂಡಿತ್ತು. ಅಧ್ಯಾತ್ಮ ದರ್ಶನ ಅದರ ಬೀಜವಾಗಿತ್ತು. ಅವುಗಳಲ್ಲಿ ಹೆಚ್ಚಿನ ಭಾಗ ಇಂದು ಉಪಲಬ್ಧವಿದ್ದರೂ ಅವುಗಳ ಅಂತರಾರ್ಥ ಮಾತ್ರ ಬಹು ಜನರಿಗೆ ಅರ್ಥವಾಗುತ್ತಿಲ್ಲ. ಆದರೆ ಉಪನಿಷತ್ತುಗಳಲ್ಲಿ ಅನೇಕ ಅಮೂಲ್ಯವಾದ, ಉತ್ಕೃಷ್ಟವಾದ ಚಿತ್ರ ವಿಚಿತ್ರ ಕಥಾರತ್ನಗಳಿವೆ. ಇವು ಅಧ್ಯಾತ್ಮ ತತ್ವಗಳನ್ನು ಅಂದರೆ ಅಮರತತ್ವ ಅಥವಾ ಅಖಂಡ ಸತ್ಯವನ್ನು ಪ್ರತಿಪಾದಿಸುತ್ತವೆ. ಉಪನಿಷತ್ತುಗಳಲ್ಲಿ ಅಂತರ್ಗತವಾದ ಮಹಾ ತತ್ವ ಅಥವಾ ಸತ್ವ–ಸತ್ಯ–ಸಾರ ಇಂದಿಗೂ ವೇದ್ಯವಾಗಿ ತ್ರಿಕಾಲಾಬಾಧಿತವಾಗಿದೆ. ಕೆಳಗಿನ ಸಂಸ್ಕೃತ ಶ್ಲೋಕ ಈ ಮಾತನ್ನು ಉದಹರಿಸುತ್ತದೆ.

ಅಸತೋಮಾ ಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ

ಅರ್ಥ:– ಅಸತ್ಯದಿಂದ ಸತ್ಯದೆಡೆಗೆ ಕೊಂಡೊಯ್ಯು ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯು–ಮತ್ತು ಸಾವಿನಿಂದ ಅಮರತ್ವದೆಡೆಗೆ ಕೊಂಡೊಯ್ಯು.

ಆತ್ಮ ಜಡ ವಸ್ತುವಿನಲ್ಲಿ ಅಂದರೆ ನಮ್ಮ ದೇಹದಲ್ಲಿ ಬಂಧಿತವಾಗಿದೆಯೆಂದು ಉಪನಿಷತ್ತುಗಳಲ್ಲಿ ಹೇಳಲಾಗಿದೆ. ಬಂಧನದಲ್ಲಿದ್ದ ಈ ಆತ್ಮ ಪರಮಾತ್ಮ ಅಥವಾ ದೇವರ ಸಾನ್ನಿಧ್ಯವನ್ನು ಸೇರಲು ಅಥವಾ ಕೂಡಲು ಸದಾ ತವಕಿಸುತ್ತದೆ. ನೀವರು ಅಥವಾ ಪರಮಾತ್ಮನೆಂದರೆ ವಿಶ್ವ ಸಂಭೂತ. ಎಲ್ಲೆಲ್ಲೂ ಎಲ್ಲದರಲ್ಲೂ ಅಡಕವಾದ ಮಹಾ ಚೇತನ ಆದರೆ ದೇವರನ್ನು ತಿಳಿಯಲು ಅಥವಾ ನೋಡಲು ಅವಿದ್ಯೆ, ಅಜ್ಞಾನ ಅಥವಾ ಮಾಯೆ ಬಿಡುವದಿಲ್ಲ. ಆದರೂ ಈ ತೊಡಕುಗಳನ್ನೆಲ್ಲ ಕುಂದುರಿಸಿ, ಜೀವನ ಸಾಗರದಲ್ಲಿ ನಿರ್ಭಯದಿಂದ ಈ ಜಾಡಿ, ನಿತ್ಯ ಸತ್ಯದ ಅಥವಾ ಅಮರತ್ವದ ನೆಲೆ ಗುರಿಯನ್ನು ಸೇರಬಹುದು ಎಂಬುದನ್ನೂ ಉಪನಿಷತ್ತು ಸೂಚಿಸುತ್ತದೆ. ಸತ್ಯಾನ್ವೇಷಣೆಯ ಗನಿಯೇ ಉಪನಿಷತ್ತು.)

ಹಿಂದೊಮ್ಮೆ ದೇವತೆಗಳಿಗೂ ರಾಕ್ಷಸರಿಗೂ ಭಯಂಕರ ಯುದ್ಧವಾಯಿತು. ದೇವತೆಗಳು ವಿಜಯಿಗಳಾದರು. ಗೆಲವಿನ ಅಹಂಕಾರದಿಂದ 'ಉಬ್ಬಿದರು; ದರ್ಪದಿಂದ ಕೊಬ್ಬಿದರು. ಹೆಮ್ಮೆಯಿಂದ ಹಾರೆಜ್ಜೆಯನ್ನಿಡುತ್ತ ಅಡಿಪಾಡಲು ಪ್ರಾರಂಭಿಸಿದರು.

ಒಂದು ದಿನ ಸ್ವರ್ಗಲೋಕದ ಸುರೇಂದ್ರ, ಇಂದ್ರ—ಬೆಂಕೆಯ ಅಧಿದೇವತೆ ಅಗ್ನಿ ಮತ್ತು ಗಾಳಿಯ ದೇವತೆ ವಾಯು ಈ ಮೂರು ದೇವತೆಗಳು ಒಂದು ವಿಶಾಲವಾದ ಬಯಲನ್ನು ದಾಟುತ್ತ ಸಾಗುತ್ತಿದ್ದರು. ಅನತಿ ದೂರದಲ್ಲಿ ಅವರೊಂದು ಪ್ರಜ್ವಲಿಸುವ ಪ್ರಕಾಶವನ್ನು ಕಂಡರು

ಇಬ್ಬರು ದೇವತೆಗಳು ಅಗ್ನಿಯನ್ನು ಹುರಿದುಂಬಿಸಿದರು.

"ಅಗ್ನಿ ನಡೆ ನಡೆ. ಅದಾವ ಅಮರ ಜ್ಯೋತಿಯ ಬೆಳಕು ಎಂಬುದನ್ನು ತಿಳಿದು ಕೊಂಡು ಮರಳು."

ಅಗ್ನಿ ಕೂಡಲೇ ಆ ದಿವ್ಯ ಪ್ರಕಾಶದತ್ತ ನಡೆದನು ವಿಚಿತ್ರವಾದ ಬೆಳಕು ಅಗ್ನಿಯನ್ನು ಪ್ರಶ್ನಿಸಿತು.

"ನೀನಾರು?"

ಅಗ್ನಿ ಉತ್ತರಿಸಿದ. "ನಾನು ಅಗ್ನಿ; ಬೆಂಕೆಯ ಅಧಿದೇವತೆ"

"ಚೆನ್ನಾಯಿತು. ನೀನೇನು ಮಾಡಬಲ್ಲೇ."

"ನಾನು ಏನನ್ನೂ ಎಲ್ಲವನ್ನೂ ಉರಿಸಬಲ್ಲೆ!"

"ಸರಿ ಹಾಗಾದರೆ ಈ ಹುಲ್ಲಿನ ಗರಿಕೆಯ ಅಂಕುರವನ್ನು ಉರಿಸು"

ಅಗ್ನಿ ಶತಪಥ ಯತ್ನ ಪ್ರಯತ್ನಗಳನ್ನು ಮಾಡಿದರೂ ಆ ಹುಲ್ಲಿನ ಗರಿಕೆಯನ್ನು ಉರಿಸಲು ಅವನಿಗೆ ಸಾಧ್ಯವಾಗಲಿಲ್ಲ. ಆತ ನಾಚುಗೆಯಿಂದ ತಲೆ ತಗ್ಗಿಸಿ ಹಿಂದೆ ಮರಳಿದನು.

"ಅದು ಯಾವ ಜ್ಯೋತಿಯ ಪ್ರಕಾಶವೆಂದು ಕಂಡು ಹಿಡಿಯಲು ನನ್ನಿಂದ ಆಗಲಿಲ್ಲ; ಆಗದು" ಎಂದು ಇಬ್ಬರಿಗೂ ತಿಳಿಸಿದನು.

ಪವನ ದೇವ ವಾಯು ಆನಂತರ ಆ ಭವ್ಯ ಬೆಳಕಿನತ್ತ ಸಾಗಿದನು. ಬೆಳಕು ವಾಯುವಿನೊಡನೆ "ನೀನಾರು" ಎಂದು ಕೇಕೇಳಿತು.

'ನಾನು ಪವನ ದೇವ; ವಾಯು' ಉತ್ತರ.

'ಬಹಳ ಚೆನ್ನಾಯಿತು. ನೀನೇನು ಮಾಡಬಲ್ಲೆ?'

'ನಾನು ಬೇಕಾದುದನ್ನು, ಎಲ್ಲವನ್ನೂ ಹಾರಿಸಿ ಕೊಂಡೊಯ್ಯ ಬಲ್ಲೆನು'

'ಸರಿ; ಹಾಗಾದರೆ ಈ ಹುಲ್ಲುಗರಿಕೆಯನ್ನು ಹಾರಿಸು'.

ವಾಯು ಮಹಾ ಯತ್ನಗಳಿಂದ ಪ್ರಯತ್ನಿಸಿದನು. ಗರಿಕೆಯನ್ನು ಹಾರಿಸುವದು ಅಸಾಧ್ಯವಾಯಿತು. ಅವನೂ ನಾಚುಗೆಯಿಂದ ಹಿಂದಕ್ಕೆ ಮರಳಿದನು.

'ಅದು ಯಾವ ಜ್ಯೋತಿಯೆಂಬುದನ್ನು ತಿಳಿಯಲು ನನಗೆ ಆಗಲಿಲ್ಲ' ಎಂದು ನುಡಿದನು.

ಕೊನೆಗೆ ಸ್ವರ್ಗ ಲೋಕದ ಸುರೇಂದ್ರ ಇಂದ್ರನೇ ಆದಂತಹ ಜ್ಯೋತಿ ಮತ್ತು ಪ್ರಕಾಶವೆಂಬುದನ್ನು ತಿಳಿಯಲು ಸ್ವತಃ ಹೋಗಬೇಕಾಯಿತು ಆದರೆ ಅನತಿ ದೂರದಲ್ಲಿದ್ದ ಆ ದೀಪ ಮತ್ತು ಪ್ರಕಾಶ ಇಂದ್ರನ ಸವಾರಿ ಸಮೀಪಿಸುತಿದ್ದಂತೆ ದೂರ ದೂರ ಸರಿದು ಮಾಯವಾಯಿತು! ಅದರ ಬದಲು ಅನುಪಮವಾದ ಸುಂದರಿ– ತರುಣ ರಮಣಿಯೋರ್ವಳು ಅಲ್ಲಿ ನಿಂತಿದ್ದಳು! ಚಿನ್ನಾಭರಣಗಳಿಂದ ಶೋಭಿಸುತಿದ್ದಳು ಆಕೆಯ ಮೈ ವರ್ಣ ಸುವರ್ಣಮಯೆ ವಾಗಿತ್ತು.

ಅವಳನ್ನು ಕಂಡು 'ಚೆಲುವಿನ ಗನಿ, ನೀನಾರು?' ವಿನಯದಿಂದ ಇಂದ್ರನು ಕೇಳಿದನು.

ಸುಂದರ ರಮಣಿ, ಕೃಪಾಮಯ ಮುಗುಳ್ನಕ್ಕಳು. ಮತ್ತು 'ನಾನೇ? ನಾನು ಸ್ವರ್ಣಮಯೀ ಉಮಾ' ಎಂದಳು.

'ಇಲ್ಲಿದ್ದ ಜ್ಯೋತಿ, ಪ್ರಕಾಶ ಎತ್ತಹೋಯಿತು?'

"ಅದೇ ಅವನೇ ಏಕೈಕ ದೇವ ಬ್ರಹ್ಮ, ಸೃಷ್ಟಿಕರ್ತ ಅವನೀಗ ಅಂತರ್ಧಾನನಾದ"

"ಅವನನ್ನು ಹೇಗೆ ತಿಳಿಯ ಬಹುದು? ನೋಡಬಹುದು, ಕೇಳಬಹುದು? ಮತ್ತು ಅವನೊಡನೆ ಹೇಗೆ ಮಾತನಾಡಬಹುದು?"

"ಅವನನ್ನು ಸಂಪೂರ್ಣ ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಒಬ್ಬನು ಏನೇನು ಬಲ್ಲನೋ ಅದೆಲ್ಲವೂ ಅವನ ಒಂದು ಭಾಗವೆಂದು ತಿಳಿಯು ಈ ಸಂಗತಿಯನ್ನೂ, ಅವನ ಮನಸ್ಸಿನ ಒಂದು ಭಾಗದಿಂದ ಮಾತ್ರ ತಿಳಿಯಬರುತ್ತದೆ. ಯಾರೊಬ್ಬನಿಂದಲೂ ಅವನನ್ನು ನೋಡಲು ಸಾಧ್ಯವಿಲ್ಲ ಆದರೆ ನಾವು ಏನನ್ನು ಕಂಡರೂ, ಎಲ್ಲವನ್ನು ಕಂಡರೂ ಅವನದೊಂದು ಭಾಗವನ್ನು ಮಾತ್ರ ಕಂಡಂತೆ ಆಗುತ್ತದೆ. ಅದೂ ಅವನ ಅಂದರೆ ಬ್ರಹ್ಮನ ಶಕ್ತಿಯಿಂದ ಮಾತ್ರ ಸಾಧ್ಯವಿದೆ ಅವನು ಆಡಿದುದನ್ನು ಯಾರೊಬ್ಬನಿಂದಲೂ ಕೇಳಲು ಸಾಧ್ಯವಿಲ್ಲ ಆದರೆ ಪೃಥ್ವಿಯಲ್ಲಿನ ಎಲ್ಲಾ ಶಬ್ದ ಅಥವಾ ಮಾತು–ಕೂಗು ಅವನ ಮಾತಿನಿಂದ ಮಾತ್ರ ಸಾಧ್ಯವಾಗುತ್ತದೆ. ನೀನು ಮಾತನಾಡುವುದಾದರೂ ಅವನ ಧ್ವನಿಯಿಂದಲೇ. ನೀನು ಅವನನ್ನು ಬಲ್ಲೆಯೆಂದು ತಿಳಿಯುವುದಾದರೆ, ನೀನು ಅವನ ವಿಷಯ ಏನೂ ಅರಿಯದವನು ಎಂಬ ಮಾತು ಸತ್ಯ ಆದರೆ ಪ್ರತಿಯೊಬ್ಬನೂ ಅವನ ಪ್ರಕೃತಿ ಸ್ವಭಾವವನ್ನು ಪಡೆಯಲು ಸಾಧ್ಯವಿದೆ. ಹೆಚ್ಚೆಚ್ಚು ಪಡೆಯಲು ಸಾಧ್ಯವಿದೆ. ಸುಖ ಪಡೆಯುವ ದಾರಿ ಯಾವುದು? ಅವನೊಡನೆ ಸದಾ ಕಾಲ ಹೆಚ್ಚೆಚ್ಚು

(ಹನ್ನೊಂದನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದೆ ದಶಾಲಾ (ಪೆವೆಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ನಿಡಿತ ● ಮೈ ನೋವು
● ಉಳುಕು ● ಕಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA

(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 15

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೨೫

ಚಿಕ್ಕ ಜೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತವಾಗಿಯೇ ನಮ್ಮ ಕೈಸೇರಬೇಕು.

ಬಂಗ್ಲಾ ದೇಶಕ್ಕೆ- ವಿಶ್ವ ಮನ್ನಣೆ ಬೇಕು

ಬಂಗ್ಲಾ ದೇಶಕ್ಕೆ ಮನ್ನಣೆ ನೀಡಿ, ಭಾರತ ಸರಕಾರವು ತನ್ನ ಸ್ವತಂತ್ರ ಸಾರ್ವಭೌಮತೆಯನ್ನು ವಿಶಾಲ ಜಗತ್ತಿಗೆ ತೋರಿಸಿ ಕೊಟ್ಟಿತು. ಸರಕಾರದ ಈ ನಿರ್ಣಯವನ್ನು ಪಕ್ಷ ಪಂಗಡಗಳ ಭೇದವಿಲ್ಲದೆ ಸಮಸ್ತ ಭಾರತೀಯರೂ ಏಕ ಕಂಠದಿಂದ, ಹರ್ಷಾತಿರೇಕದಿಂದ ಸ್ವಾಗತಿಸಿದ್ದನ್ನು ಕಾಣುವಾಗ, ಈ ನಿರ್ಣಯಕ್ಕಾಗಿ ಇವರೆಲ್ಲರೂ ಕಾದು ಕುಳಿತಿದ್ದರೆಂದು ಹೇಳಲೇಬೇಕು. "ಬಂಗ್ಲಾ ದೇಶಕ್ಕೆ ಮನ್ನಣೆ ನೀಡಲು ಭಾರತ ಸರಕಾರ ಹಿಂದು ಮುಂದು ನೋಡುವುದಿಲ್ಲ; ಆದರೆ, ಆದಕ್ಕೆ ಸೂಕ್ತ ಅವಕಾಶವನ್ನು ನಿರೀಕ್ಷಿಸುತ್ತಿದೆ" ಎಂದು ಹೇಳುತಿದ್ದ ಪ್ರಧಾನಿ ಗಾಂಧಿಯವರು ಬಂಗ್ಲಾ ದೇಶದ ಅಸ್ತಿತ್ವವನ್ನು ಎಂದೋ ಒಪ್ಪಿಕೊಂಡಿದ್ದರೆಂದು ತಿಳಿಯಬಹುದು. ಬಂಗ್ಲಾ ದೇಶವನ್ನು ಮೊತ್ತಮೊದಲಿಗೆ ಮಾನ್ಯಮಾಡಿದ ಭಾರತ ಸರಕಾರ ಆ ದೇಶವನ್ನು ಕಟ್ಟುವಲ್ಲಿ ಅಲ್ಲಿನ ನಾಗರಿಕರಿಗೆ ತುಂಬು ಹೃದಯದ ನೆರವು ನೀಡಬೇಕಾಗುತ್ತದೆ. ಆದುದರಿಂದ, ಸಂಪೂರ್ಣ ಬಂಗ್ಲಾದೇಶವನ್ನು ಪಶ್ಚಿಮ ಪಾಕಿಸ್ತಾನದ ಸೈನಿಕರ ವಾದದಿಂದ ವಿಮೋಚನೆಗೊಳಿಸುವುದು, ಅಲ್ಲಿ ನಾಗರಿಕ ಶಾಸನವನ್ನು ಜಾರಿಗೆ ತರುವುದು, ಭಾರತಕ್ಕೆ ವ್ಯಾಪಿಸಿ ಭಯದಿಂದೊಡಿಬಂದ ನಿರಾಶ್ರಿತರನ್ನು ಬಂಗ್ಲಾದೇಶಕ್ಕೆ ಪುನರ್ನೆಲಸುವಂತೆ ಕ್ರಮ ಕೈಕೊಳ್ಳುವುದು ಅಗತ್ಯವಾಗಿದೆ. ಇವೆಲ್ಲವೂ ಸಾಧಿಸಿದ ಬಳಿಕ, ಯೂಹ್ಯಾಖಾನರ ಮಿಲಿಟರಿ ಬಲಕ್ಕೆ ತುತ್ತಾದ ದೇಶವನ್ನು ಮತ್ತೆ ಕಟ್ಟುವಲ್ಲಿ ಬಂಗ್ಲಾದೇಶಿಗೆ ಸಹಾಯ ನೀಡುವುದೂ ಅನಿವಾರ್ಯವಾಗುತ್ತದೆ.

ಭಾರತೀಯ ಉಪಖಂಡದ ಸ್ವಾತಂತ್ರ್ಯೋತ್ತರ ಯುಗವನ್ನು ಪರಿಶೀಲಿಸುವಾಗ, ಪಾಕಿಸ್ತಾನವು ಪ್ರತಿ ಐದು ವರ್ಷಗಳಿಗೊಂದು ಬಾರಿ ವಿನಾಕಾರಣ ಭಾರತದೊಡನೆ ಹೋರಾಟಕ್ಕಿಳಿದದ್ದು ವೇದ್ಯವಾಗುತ್ತದೆ. ಭಾರತವು ವಿಶ್ವಸಂಸ್ಥೆಯ ತಾಮ್ರ ಪಟದ ಮೇಲೆ ವಿಶ್ವಸನಿಟ್ಟು ಶಾಂತಿ ಸ್ಥಾಪನೆಯ ಹೆಸರಲ್ಲಿ ತನ್ನ ಗೌರವ—ಪ್ರತಿಷ್ಠೆ– ಆತ್ಮರಕ್ಷಣೆಯನ್ನು ಗೌಣವೆಂದು ತಿಳಿದ ಉಪಾಹರಣೆಗಳುಂಟು. ವಿಶ್ವಸಂಸ್ಥೆಯ ಒಲವು ಹಿರಿಯ ರಾಷ್ಟ್ರಗಳ ನಿಲುಮೆಯನ್ನು ಹೊಂದಿಕೊಂಡಿರುತ್ತದೆ. ಈ ಹಿರಿಯ ದೇಶಗಳು ಪಾಕಿಸ್ತಾನದ ಹಿಂದೆ ನಿಂತುಕೊಳ್ಳುವುದನ್ನು ತಮ್ಮ ಪರಿಪಾಠನನ್ನಾಗಿ ಮಾಡಿಕೊಂಡಿವೆ. ಭಾರತವು ತನ್ನ ನೀತಿ–ನಿಲುಮೆಗಳ ರೂಪಣೆಯಲ್ಲಿ ವಿದೇಶೀ ಪ್ರಭಾವಕ್ಕೊಳಗಾಗುವುದಿಲ್ಲ. ಇದು ನೆಹರೂ ಕಾಲದಿಂದಲೂ ನಡೆದು ಬಂದ ದಾರಿ. ಆದುದರಿಂದಲೇ ಅದು ಅಮೆರಿಕೆಯು ವಿಯತ್ನಾಮದಲ್ಲಿ ನಡೆಸುವ ನರಮೇಧವನ್ನು ಖಂಡ ತುಂಡವಾಗಿ ಖಂಡಿಸಿತ್ತು. ವಿಶ್ವಸಂಸ್ಥೆಯಿಂದ ಭಾರತ ಕ್ಕೆಂದೂ ನ್ಯಾಯ ದೊರಕಲಿಲ್ಲ; ಗೋವಾದಲ್ಲಿನ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು ಪೋರ್ಚುಗೀಸರು ಮಾಡಿದ ಅಕ್ರಮಣಕ್ಕೆ ಭಾರತ ಸೈನ್ಯವು ಪ್ರತಿಕ್ರಮ ಕೈಕೊಂಡಾಗ, ಭಾರತವು ಆಕ್ರಮಣಕಾರಿ ಎಂದು ಖಂಡಿಸಿದ್ದ ವಿಶ್ವಸಂಸ್ಥೆಯು ಪೋರ್ಚುಗೀಸರ ಆಕ್ರಮಣವನ್ನು ಖಂಡಿಸಲಿಲ್ಲ. ಕಾಶ್ಮೀರದ ಸಮಸ್ಯೆಯನ್ನು ಪರಿಹರಿಸಲು ಭಾರತ ಸರಕಾರವು ಶಿಮ್ಲಾ ಒಪ್ಪಂದದಂತೆ ಪಾಕಿಸ್ತಾನದೊಡನೆ ನೇರ ಮಾತುಕತೆಗೆ ಸಿದ್ಧವಾಗಿದ್ದರೂ, ಪಾಕಿಸ್ತಾನವು ಅದಕ್ಕೆ ಸಿದ್ಧವಿಲ್ಲ. ಅದು ಕಾಶ್ಮೀರದ ಸಮಸ್ಯೆಯನ್ನು ವಿಶ್ವಸಂಸ್ಥೆಯಲ್ಲಿ ಎತ್ತಲು ಹವಣಿಸುತ್ತಿದೆ. ಭಾರತವು ಇಂತಹ ದೇಶಗಳ ಭೂಭಾಗವನ್ನು ಬಯಸುವುದಿಲ್ಲ; ಪರರಾಷ್ಟ್ರಗಳ ಮೇಲೆ ಆಕ್ರಮಣವೆಸಗುವುದಿಲ್ಲ. ಆದರೆ, ತನ್ನ ಸಾರ್ವಭೌಮತೆಗೆ ಆಹ್ವಾನ ಬಂದರೆ, ಆತ್ಮರಕ್ಷಣೆಗಾಗಿ ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಹಿಂದುಳಿಯುವುದಿಲ್ಲ.

ಭದ್ರತಾ ಸಮಿತಿಯಲ್ಲಿ ಉಪಖಂಡದ ಸಮರ ವಿರಾಮ, ವಿಜಯಕ ನಿರ್ಣಯ ಸ್ವೀಕಾರವಾಗದೆ ಹೋದಾಗ, ವಿಶ್ವ ಸಂಸ್ಥೆಯ ಸಾನೂನ್ಯಾಧಿನೇತನದ ಮುಂದೆ ಈ ಪ್ರಶ್ನೆಯನ್ನು ತರಲಾಯ್ತು. ಸಮಸ್ಯೆಯ ಮೂಲವನ್ನು ಅರಿತುಕೊಳ್ಳದೆಯೋ, ಅರಿತುಕೊಳ್ಳಲು ಸಾಕಷ್ಟು ಸಮಯಾವಕಾಶವಿಲ್ಲದೆಯೋ, ಸಮರವಿರಾಮದ ಮೇಲಿನ ವ್ಯಾಮೋಹದಿಂದಲೋ, ಮತ್ತಾವುದೇ ಕಾರಣದಿಂದಲೋ ಭಾರತ—ಪಾಕ್ ಸಮರ ವಿರಾಮದ ನಿರ್ಣಯವನ್ನು ಬಹುಮತದಿಂದ ಸ್ವೀಕರಿಸಿತು. ಇದನ್ನೇ ಪಾಕಿಸ್ತಾನ ತನಗೆ ವಿಶ್ವ ಸಂಸ್ಥೆಯಲ್ಲಿ ಪ್ರಬಲ ಬೆಂಬಲವಿದೆಯೆಂದು ಕೊಚ್ಚಿಕೊಳ್ಳತೊಡಗಿದೆ. ಈಗಿತ್ತುವಳೆಯು ಬರಿಯ ಸಿಫಾರಸು ಮಾತ್ರವೇ ಹೊರತು ಆದೇಶವಾಗುವುದಿಲ್ಲ. ಸಮರ ವಿರಾಮಕ್ಕೆ ಭಾರತವೆಂದಿಗೂ ವಿರೋಧವಿಲ್ಲ; ಆದರೆ, ಸಮಸ್ಯೆಯ ಮೂಲ ಕಾರಣವನ್ನು ಮರೆ ಮಾಚಿ ಎಣ್ಣೆ ಜೆಲ್ಲಿದವನನ್ನು ಕಡೆಗಣಿಸಿ, ನೀರು ಜೆಲ್ಲಿದವನ ಮೇಲೆ ಅನುಕಂಪ ತೋರಿಸುವುದನ್ನು ಮೊತ್ತ ವಿರೋಧಿಸುತ್ತದೆ. ಭಾರತ–ಪಾಕ್ ವಿವಾದವು ಇಲ್ಲಿ ಇಲ್ಲವೇ ಇಲ್ಲ. ಪಾಕ್ ಸರಕಾರವು ಬಂಗ್ಲಾ ದೇಶಕ್ಕೆ ಮನ್ನಣೆ ನೀಡಿದರೆ ಆಗ ವಿವಾದ ಅಶಾಂತಿ ಇಲ್ಲವಾಗುತ್ತದೆ. ಒಂದು ವೇಳೆ ಪಾಕ್ ಬಂಗ್ಲಾ ದೇಶದ ಅಸ್ತಿತ್ವವನ್ನು ಒಪ್ಪದೆ ಹೋದರೂ ಬಂಗ್ಲಾಗಳಿಗೆ ನಷ್ಟವಿಲ್ಲ; ಸೂರ್ಯನನ್ನು ಬಟ್ಟೆಯಿಂದ ಮರೆಮಾಡುವ ಪಾಕ್ ಸಾಹಸ ವ್ಯರ್ಥವಾಗಿಯೇ ಹೋಗುತ್ತದೆ.

ಶ್ರೀ ಜಿ. ಎಂ. ಸಾದಿಕ್

ಜಮ್ಮು ಮತ್ತು ಕಾಶ್ಮೀರದ ಮುಖ್ಯ ಮಂತ್ರಿ ಶ್ರೀ ಜಿ. ಎಂ. ಸಾದಿಕರು ಚಿರೀಕ್ಷಿತ ಸಿಧನಕ್ಕೆ ಗುರಿಯಾದರು. ಶ್ರೀ ನಗರದಲ್ಲಿ ೧೯೧೫ರಲ್ಲಿ ಜನಿಸಿದ ಶ್ರೀ ಸಾದಿಕರು ಶಿಕ್ಷಣ ಪಡೆದ ನಂತರ ಮಹಾರಾಜರ ಕಾಶ್ಮೀರದ ವಿರುದ್ಧ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದರು. ೧೯೪೭ರಲ್ಲಿ ಕಾಶ್ಮೀರವು ಭಾರತದಲ್ಲಿ ಸೇರ್ಪಡೆಯಾದ ಬಳಿಕ. ಪಾಕಿಸ್ತಾನವು ಆಕ್ರಮಣವೆಸಗಿದಾಗ, ಅವರು ಸ್ವಯಂಸೇವಕ ದಳವನ್ನು ಸಂಘಟಿಸಿ, ಆಕ್ರಮಣಕಾರರ ವಿರುದ್ಧ ಜನಾಭಿಪ್ರಾಯ ರೂಪಿಸಿದರು. ೧೯೪೭ರಿಂದ ಕೆಲಕಾಲ ಮಂತ್ರಿಯಾಗಿದ್ದ ಶ್ರೀ ಸಾದಿಕ್ ೧೯೫೨ರಲ್ಲಿ ಮುಖ್ಯಮಂತ್ರಿ ಶ್ರೀ ಭಕ್ಷಿಗುಲಾಂ ಮಹಮ್ಮದರೊಡನೆ ತೀವ್ರ ಮತಭೇದದಿಂದಾಗಿ ಸಂಪುಟದಿಂದ ಹೊರಬಂದರು. ಮುಂದೆ ೧೯೫೫ರಲ್ಲಿ ತಾನೇ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡರು. ಕೂಡಲೇ ತನ್ನ ಪಕ್ಷವನ್ನು ಕಾಂಗ್ರೆಸಿನಲ್ಲಿ ವಿಲೀನಗೊಳಿಸಲು ಸೂಕ್ತ ಕ್ರಮ ಕೈಕೊಂಡು ಅದರಲ್ಲಿ ಯಶಸ್ವಿ ಗಳಿಸಿದರು. ೧೯೬೫ರ ಪಾಕ್ ಮತ್ತೊಮ್ಮೆ ಕಾಶ್ಮೀರವನ್ನು ಆಕ್ರಮಿಸಿದಾಗಲೂ ಉತ್ತಮ ಜನಾಭಿಪ್ರಾಯ ಮೂಡಿಸುವಲ್ಲಿ ಸಶಕ್ತರಾದ ಸಾದಿಕರು ಈ ಭಾರಿಯ ಸಮರಕಾಲದಲ್ಲಿ ತನ್ನ ಕೊನೆಯುಸಿರಿಳೆದುದು ಅತ್ಯಂತ ಆನಿರೀಕ್ಷಿತ. ಬಹಳ ಯಶಸ್ವೀ ಮುಖ್ಯಮಂತ್ರಿಯಾಗಿದ್ದುಕೊಂಡು ಭಾರತದ ಒಂದು ರಾಜ್ಯವಾದ ಕಾಶ್ಮೀರವನ್ನು ಪ್ರಗತಿಪಥದಲ್ಲಿ ಕಟ್ಟುವಲ್ಲಿ ಇವರು ಸಾಧಿಸಿದ ಯಶಸ್ಸು ಅವಿಸ್ಮರಣೀಯವೇ. ಶ್ರೀಸಾದಿಕರು ಕೇಂದ್ರ ಸರಕಾರದೊಡನೆ ಸುಮಧುರ ಸಂಬಂಧವನ್ನೇ ಉಳಿಸಿಕೊಂಡಿದ್ದ ದಾಖಲೆ ಹೊಂದಿದವರು. ಪ್ರಾಯಃ ಜಮ್ಮು ಕಾಶ್ಮೀರದಲ್ಲಿ ಇವರಷ್ಟು ಯಶಸ್ವಿಯಾದ ಮುಖ್ಯಮಂತ್ರಿ ಮತ್ತೊಬ್ಬರಿಲ್ಲ. ದಿವಂಗತರ ಸಿಧನ ಅಕಾಲಿಕವಾದರೂ ಕಾಲದ ಕವಿಯನ್ನು ಕಡೆಗಣಿಸಲಾಗದು. ಅವರ ಆತ್ಮಕ್ಕೆ ಶಾಶ್ವತ ಶಾಂತಿ ದೊರೆಯಲಿ.

●●

ಹಣವು ಆನೇ ಇಂದ್ರಿಯವಿದ್ದಂತೆ. ಅದಿಲ್ಲದೆ ಉಳಿದ ಐದು ಇಂದ್ರಿಯಗಳ ಸಂಪೂರ್ಣ ಉಪಯೋಗ ಮಾಡಿಕೊಳ್ಳಲು ಸಾಧ್ಯವಿಲ್ಲ. —ಸೋಮರಸೆಟ್ ಮೌಮ್

೦ ೦ ೦

ಹುತಾತ್ಮ ಭಗತ್ ಸಿಂಹರ ಕುರಿತು ಸೋವಿಯತ್ ಪತ್ರಿಕೆಗಳು

1929ರ ಏಪ್ರಿಲ್ ತಿಂಗಳಿನಲ್ಲಿ ಭಗತ್ ಸಿಂಹರೂ ಮತ್ತು ಅವರ ಸಂಗಾತಿ ಬಟುಕೇಶ್ವರ ದತ್ತರೂ ಪರಾಧೀನ ಭಾರತದ ನ್ಯಾಯವಿಧಾಯಕ ಸಭಾಭವನದಲ್ಲಿ ಎರಡು ಬಾಂಬುಗಳನ್ನು ಎಸೆದಾಗ, ಸೋವಿಯೆತ್ ಜನತೆಗೆ ಪ್ರಥಮತಃ ಅವರ ಸಮಾಚಾರವು ತಿಳಿಯಿತು. ಈ ಘಟನೆಯ ವಿವರಣೆಗಳನ್ನು ಸೋವಿಯೆತ್ ಪತ್ರಿಕೆಗಳು ನೀಡಿದುವು. ಈ ಧೀರ ದೇಶಭಕ್ತರ ಭವಿತವ್ಯದ ಬಗೆಗೆ ಸೋವಿಯೆತ್ ಜನತೆಯು ಸಹಾನುಭೂತಿಯನ್ನು ಅವು ವ್ಯಕ್ತಪಡಿಸಿದುವು. ವೈಯಕ್ತಿಕ ಹಿಂಸಾಚರಣೆಯು ವಿಧಾನಗಳ ಬಗೆಗೆ 'ಪ್ರಾವ್ದ' ಪತ್ರಿಕೆಯು ಅಸಮ್ಮತಿಯನ್ನು ಸೂಚಿಸಿತು. 'ಈ ಬಾಂಬುದಾಳಿಗಳಲ್ಲಿ ಕಮ್ಯೂನಿಸ್ಟರು ಸೇರಿಯೇ ಇಲ್ಲವೆಂಬುದು ಸ್ಪಷ್ಟವಾಗಿದೆ. ಏಕೆಂದರೆ, ಅವರು ವೈಯಕ್ತಿಕ ಭಯೋತ್ಪಾತ ಹಿಂಸಾಚರಣೆಯ ವಿರೋಧಿಗಳಾಗಿದ್ದಾರೆ. ಅದುದರಿಂದಲೇ, ಕಮ್ಯೂನಿಸ್ಟರ ವಿರುದ್ಧವಾದ 'ಪುರಾವೆ' ಯೆಂದು ಆಡಳಿತ ವಲಯಗಳು ಈ ಚರ್ಯೆಯನ್ನು ಬಳಸಿಕೊಳ್ಳುವ ಯಾವ ಪ್ರಯತ್ನವನ್ನಾದರೂ, ಭಾರತದಲ್ಲಿ ಸಾಮುದಾಯಿಕ ಶ್ರಮಿಕ ಚಳವಳಿಯನ್ನು ದಮನಗೊಳಿಸುವುದಕ್ಕಾಗಿ ಸಿದ್ಧತೆ ಮಾಡುವ, ಬೀದಿಯ ಜನ-ಸಾಮಾನ್ಯರ ಮೇಲೆಯೂ ಮತ್ತು ಬ್ರಿಟನ್ನಿನಲ್ಲಿ ಮತದಾರರ ಮೇಲೆಯೂ ಪ್ರಭಾವವನ್ನು ಬೀರುವ ಲಕ್ಷ್ಯದಿಂದ ಕೈಗೊಳ್ಳಲಾದ ಚಿತಾವಣೆಯ ಚರ್ಯೆಯೆಂದು ತಿರಸ್ಕರಿಸಲೇಬೇಕು'—ಎಂದು 'ಪ್ರಾವ್ದ' ಪತ್ರಿಕೆಯು 1929ರ ಏಪ್ರಿಲ್ ದಿನಾಂಕ 9 ರಂದು ಬರೆಯಿತು. 'ಪ್ರಾವ್ದ' ಪತ್ರಿಕೆ ಯಲ್ಲಿ ವ್ಯಕ್ತಪಡಿಸಲಾದ ಭೀತಿ-ಶಂಕೆಗಳಿಗೆ ಒಳ್ಳೆಯ ಆಧಾರವಿದ್ದಿತು. ಏಕೆಂದರೆ, ಲಂಡನ್ 'ಟೈಂಸ್' ಪತ್ರಿಕೆಯು ಸೋವಿಯೆತ್—ವಿರೋಧಿ ಮತ್ತು ಕಮ್ಯೂನಿಸ್ಟ್—ವಿರೋಧಿ ಉನ್ಮಾದದ ಚಳವಳಿಯನ್ನು ಹಬ್ಬಿಸಲು ಪ್ರಯತ್ನಿಸುತ್ತ, ಭಗತ್ ಸಿಂಹರನ್ನು ಕಮ್ಯೂನಿಸ್ಟರೆಂದು ಕರೆಯಿತು. ಆದರೆ ಭಗತ್ ಸಿಂಹರು ತಮ್ಮ ಅಭಿಪ್ರಾಯಗಳ ಪರಿಣಾಮವಾಗಿ ಕಮ್ಯೂನಿಸ್ಟರಾದರೂ, ಅವರು ಹಾಗಾದುದು ಆಗಲ್ಲಿ, ತುಂಬಾ ಸಮಯದ ತರುವಾಯ ಮಾತ್ರವೇ.

ಪ್ರತಿಭಟನೆ

1929ರ ಏಪ್ರಿಲ್ ದಿನಾಂಕ 10ರಂದು, 'ಪ್ರಾವ್ದ' ಪತ್ರಿಕೆಯಲ್ಲಿ ಭಗತ್ ಸಿಂಹರು ಶಾಸನ-ಸಭಾಭವನದಲ್ಲಿ ಎಸೆದಿದ್ದ ಕರಪತ್ರಗಳ ದೊಡ್ಡ ಉದ್ಧೃತಾಂಶವನ್ನು ಪ್ರಕಟಿಸಲಾಯಿತು. ಸೈಮನ್ನರ ನೇತೃತ್ವದಲ್ಲಿ ಆಗ ಭಾರತಕ್ಕೆ ಬಂದಿದ್ದ ಬ್ರಿಟಿಷ್ ನಿಯೋಗದ ಮೇಲೆ ಯಾವ ಭರವಸೆಯನ್ನಾದರೂ ಇಡುವುದು ನಿರರ್ಥಕವೆಂದು ಈ ಕರಪತ್ರಗಳಲ್ಲಿ ಸೂಚಿಸಲಾಗಿತ್ತು. ಶ್ರಮಿಕ ಚಳುವಳಿಯ 33 ಮಂದಿ ಧುರೀಣರ-'ಮೀರತ್ ಪಿತೂರಿಯ ಕೈದಿಗಳ'-ಬಂಧನದ ವಿರುದ್ಧವಾಗಿ ಅವುಗಳಲ್ಲಿ ಪ್ರತಿಭಟನೆಯನ್ನು ವ್ಯಕ್ತಪಡಿಸಲಾಗಿತ್ತು. ನ್ಯಾಯ ವಿಧಾಯಕ ಸಭೆಯ ಸದಸ್ಯರು 'ತಮ್ಮ ತಮ್ಮ ಕ್ಷೇತ್ರಗಳಿಗೆ ಹಿಂದಿರುಗಿ, ಜನತೆಯನ್ನು ಮುಂಬರುವ ಕ್ರಾಂತಿಗಾಗಿ ಸಿದ್ಧಗೊಳಿಸಬೇಕು' ಎಂದು ಕ್ರಾಂತಿಕಾರರು ಆ ಕರಪತ್ರಗಳಲ್ಲಿ ಕರೆಕೊಟ್ಟಿದ್ದರು.

ಭಗತ್ ಸಿಂಹರು ಸುಟ್ಟ ಬಂಡವಾಳವಾದಿ ರಾಷ್ಟ್ರೀಯವಾದಿ ವಿಚಾರಗಳ ಶಕ್ತಿಯ ಬಗೆಗೆ ಹೆಚ್ಚು ಹೆಚ್ಚು ಸಂಶಯವನ್ನು ವ್ಯಕ್ತಪಡಿಸುತ್ತ, ಶ್ರಮಜೀವಿ ಕ್ರಾಂತಿಯ ಅವಶ್ಯಕತೆಯನ್ನು ಕ್ರಮಶಃ ಒಪ್ಪಿಕೊಂಡರು. ಅವರ ದೃಕ್ಪಥದಲ್ಲಿನ ವಿಕಾಸವನ್ನು ನಿರೂಪಿಸುವುದಕ್ಕೆ ಈ ಬಗೆಗೆ 'ಪ್ರಾವ್ದ' ಪತ್ರಿಕೆಯಲ್ಲಿ ಪ್ರಕಟವಾದ ಲೇಖನಗಳು ನಮಗೆ ಅವಕಾಶವನ್ನು ನೀಡುತ್ತವೆ.

"ಬಂಧಿತರು ತಮ್ಮ ಮೇಲೆ ವಿಧಿಸಲಾದ ನ್ಯಾಯಾಲಯದ ತೀರ್ಪನ್ನು ಕೇಳಿ 'ಶ್ರಮಜೀವಿ ಕ್ರಾಂತಿಯು ಚಿರಾಯುವಾಗಲಿ!' ಎಂದು ಘೋಷಿಸಿದರು. ಎಂದು 'ಪ್ರಾವ್ದ' ವಾರ್ತಾಪತ್ರಿಕೆಯು ಆಗ ಬರೆಯಿತು ಭಗತ್ ಸಿಂಹ ಮತ್ತು ಬಟುಕೇಶ್ವರ ದತ್ ಅವರುಗಳ ವಿಚಾರಣೆಯ ಕುರಿತು ವರದಿಯನ್ನು ನೀಡುತ್ತ 'ಪ್ರಾವ್ದ' ಪತ್ರಿಕೆಯು ಭಾರತೀಯ ಶ್ರಮಿಕ ಚಳುವಳಿಯ 33 ಮಂದಿ ಧುರೀಣರ ವಿರುದ್ಧವಾಗಿ ಮೀರತ್ತಿನಲ್ಲಿ ನಡೆದ ವಿಚಾರಣೆಯ ಕುರಿತಾದ ಸಮಾಚಾರವನ್ನು ಪ್ರಕಟಿಸಿದುದು ಸ್ವಾಭಾವಿಕವೇ ಆಗಿದೆ

ವಿಚಾರಣೆಯಲ್ಲಿ ಭಾರತೀಯ ಕ್ರಾಂತಿಕಾರರನ್ನು ಸಮರ್ಥಿಸಿ ಬೆಂಬಲಿಸುವ ನಿಲುವನ್ನು "ಕಮ್ಯೂನಿಸ್ಟ್ ಇಂಟರ್ನ್ಯಾಷನಲ್' ಪತ್ರಿಕೆಯು ವಹಿಸಿತು. ಸೆರೆಮನೆಯಲ್ಲಿ ಭಗತ್ ಸಿಂಹರಿಗೆ ನೀಡಲಾದ ಹಿಂಸಾತ್ಮಕವಾದ ನಡೆವಳಿಕೆಯು "ಅತ್ಯಂತ ಅಮಾನುಷಿಕವಾದುದೂ ಮತ್ತು ಪಾಶವಿಕವಾದುದೂ" ಆಗಿತ್ತೆಂದೂ,—ಈ ವಿಚಾರಣೆಯು "ರಾಜಕೀಯ ವಿಚಾರಣಾ ಮೊಕದ್ದಮೆಗಳ ಇತಿಹಾಸವಲ್ಲಿ ಅಸಮಾನವಾದುದೆಂ'ದೂ ವಿವರಿಸುತ್ತ ಬ್ರಿಟಿಷ್ ಕಮ್ಯೂನಿಸ್ಟ್ ಪಾರ್ಟಿಯು ಕೊಟ್ಟ ವಿಶೇಷ ಹೇಳಿಕೆಯನ್ನು ಈ ಪತ್ರಿಕೆಯು ಪ್ರಕಟಿಸಿತು.

1931ರ ಮಾರ್ಚ್ ದಿನಾಂಕ 23ರಂದು ಭಗತ್ ಸಿಂಹರನ್ನು ಗಲ್ಲಿಗೇರಿಸಲಾಯಿತು.

ಈ ಸುದ್ದಿಯನ್ನು ವ್ಯಾಪಕವಾಗಿ ಸೋವಿಯೆತ್ ಪತ್ರಿಕೆಗಳು ಪ್ರಕಟಿಸಿದುವು ಆ ತರುವಾಯದ ದಿನಗಳಲ್ಲಿ 'ಪ್ರಾವ್ದ', 'ಇಜ್ವೆಸ್ತಿಯ' ಮತ್ತು ಇತರ ಪತ್ರಿಕೆಗಳಲ್ಲಿ "ಭಾರತದಲ್ಲಿ ಮರಣದಂಡನೆಗಳು", 'ಲಾಹೋರಿನ ಮರಣದಂಡನೆಗಳಿಂದ ಭಾರತದಲ್ಲಿ ಕ್ಷೋಭೆ', 'ಮೂವರು ಭಾರತೀಯರ ಮರಣದಂಡನೆಯಿಂದ ಭಾರತದಲ್ಲಿ ಹಬ್ಬಿದ ಕ್ರೋಧ ತರಂಗ' ಎಂಬೀ ಪ್ರಮುಖ ಶೀರ್ಷಿಕೆಗಳಲ್ಲಿದ್ದ ಲೇಖನಗಳು ಪ್ರಕಟವಾದುವು. "ಭಗತ್ ಸಿಂಹರನ್ನೂ ಒಳಗೊಂಡು ಮೂರು ಜನರಿಗೆ ಲಾಹೋರಿನಲ್ಲಿ ಮರಣದಂಡನೆಯಾಯಿತು. ಭಾರತದ ಎಲ್ಲ ಕಡೆಗಳಲ್ಲಿಯೂ ಸ್ಥಳೀಯ ರಾಷ್ಟ್ರೀಯ ಕಾಂಗ್ರೆಸ್ ಸಮಿತಿಗಳು ಒಮ್ಮತದಿಂದ ಪ್ರತಿಭಟಿಸಿದುವಾದರೂ ಕೂಡ ಅವರನ್ನು ಗಲ್ಲಿಗೇರಿಸಲಾಯಿತು"—ಎಂದು 'ಇಜ್ವೆಸ್ತಿಯ' ಪತ್ರಿಕೆಯು1931ರ ಮಾರ್ಚ್ ದಿನಾಂಕ 25 ರಂದು ಬರೆಯಿತು.

ಭಾರತದಲ್ಲಿ ನಡೆಯುತ್ತಿದ್ದ ಸಾಮುದಾಯಿಕ ಪ್ರತಿಭಟನೆಯ ಚಳವಳಿಗೆ ಸೋವಿಯೆತ್ ವಾರ್ತಾಪತ್ರಿಕೆಗಳು ವಿಶೇಷ ಗಮನವನ್ನು ನೀಡಿದುವು; ಮನಾಹತುವಾದಿಗಳ ವಿರುದ್ಧ ನಡೆದ ಅನೇಕ ಕಾರ್ಯಾಚರಣೆಗಳ ಕುರಿತಾದ ಸಮಾಚಾರವನ್ನು ಪ್ರಕಟಿಸಿದುವು. ಕಾರ್ಮಿಕ ವರ್ಗದ ಚಟುವಟಿಕೆಯು ಬೆಳೆಯುತ್ತಿರುವುದನ್ನು ಸೂಚಿಸುತ್ತ, ಮಾರ್ಚ್ ದಿನಾಂಕ 25ರಂದು 'ಇಜ್ವೆಸ್ತಿಯ' ಪತ್ರಿಕೆಯು ಹೀಗೆ ಬರೆಯಿತು: "ಲಾಹೋರಿನಲ್ಲಿ ನಡೆದ ಮರಣದಂಡನೆಗಳು ಭಾರತದಲ್ಲಿ ಎಲ್ಲ ಕಡೆಯೂ ಪ್ರತಿಭಟನೆಯ ಪ್ರಚಂಡ ಚಳವಳಿಗೆ ಎಡೆಗೊಟ್ಟುವು ಮುಂಬಯಿ, ಕಲಕತ್ತಾ ಮತ್ತು ಕರಾಚಿ ನಗರಗಳಲ್ಲಿ ಇಂದು ಶೋಕ ಮುಷ್ಕರಗಳನ್ನು ಪ್ರಕಟಿಸಲಾಗಿದೆ. ಎಲ್ಲ ಅಂಗಡಿಗಳನ್ನೂ, ಮೂರುಕಟ್ಟೆಗಳನ್ನೂ, ಕಾರಖಾನೆಗಳನ್ನೂ, ಪಾಠಶಾಲೆಗಳನ್ನೂ ಮುಚ್ಚಲಾಗಿದೆ ಪರಿಸ್ಥಿತಿಯು ಅತ್ಯಂತ ಉದ್ರಿಕ್ತವಾಗಿದೆ. ಮುಖ್ಯ ಪಟ್ಟಣಗಳ ಬೀದಿಗಳಲ್ಲಿ ಸಶಸ್ತ್ರ ಪೋಲೀಸರ ಪಡೆಗಳು ಪಹರೆ ತಿರುಗುತ್ತಿವೆ."

ಮಾರ್ಚ್ ದಿನಾಂಕ 27ರಂದು 'ಪ್ರಾವ್ದ' ಪತ್ರಿಕೆಯು "ಲಾಹೋರ್ ಮರಣದಂಡನೆಗಳಿಂದ ಉಂಟಾದ ಕ್ರೋಧತರಂಗವು ಹೆಚ್ಚುತ್ತಲೇ ಇದೆ"—ಎಂದು ವರದಿ ಮಾಡಿತು. "ಲಾಹೋರ್ ಮರಣ ದಂಡನೆಗಳು ಭಾರತದ ರಾಜಕೀಯ ಜೀವನದ ಇತರ ಎಲ್ಲ ಘಟನೆಗಳನ್ನೂ ಹಿಂದಕ್ಕೆ ಹಾಕಿವೆ ದೇಶದಲ್ಲಿ ಎಲ್ಲ ಕಡೆಯೂ ಶೋಕ—ಮುಷ್ಕರಗಳು ಮುಂದುವರಿಯುತ್ತಿವೆ."

ಉನ್ನತ ಪ್ರಶಂಸೆ

ಹೆಚ್ಚುತ್ತಿದ್ದ ಸಾಮ್ರಾಜ್ಯವಾದ-ವಿರೋಧಿ ಚಳವಳಿಗೆದುರಾಗಿ, ಬ್ರಿಟಿಷ್ ಆಡಳಿತ ವಲಯಗಳು ವಿಭಿನ್ನ ಮತಧರ್ಮಗಳ ಪ್ರತಿನಿಧಿಗಳನ್ನು ಪರಸ್ಪರರ ವಿರುದ್ಧವಾಗಿ ಎತ್ತಿಕಟ್ಟುವ ತಮ್ಮ ಅಚ್ಚುಮೆಚ್ಚಿನ ವಿಧಾನವನ್ನು ಬಳಸಿದುವೆಂಬುದನ್ನು ಸೋವಿಯೆತ್ ಪತ್ರಿಕೆಗಳು ಗಮನಿಸಿದುವು. (ಕ್ರಾಂತಿಕಾರರ) 'ಮರಣದಂಡನೆಗೆ ವಿರುದ್ಧವಾಗಿ ನಡೆದ ಪ್ರಚಂಡ ಪ್ರತಿಭಟನೆಯ ಪ್ರದರ್ಶನಗಳು ಕಾನ್ಪುರದಲ್ಲಿ ಮತಧರ್ಮದ ಹೋರಾಟವಾಗಿ ಬೆಳೆದಿದೆ'—ಎಂದು ಒಂದು ಪತ್ರಿಕೆಯು ಆಗ ಟಿಪ್ಪಣಿ ಬರೆದಿತ್ತು.

'ಕಮ್ಯೂನಿಸ್ಟ್ ಇಂಟರ್ನ್ಯಾಷನಲ್' ಸಂಘಟನೆಯೂ ಕೂಡ ಭಗತ್ ಸಿಂಹರ ಮರಣ ದಂಡನೆಯ ಬಗೆಗೆ ತೀಕ್ಷ್ಣ ಪ್ರತಿಕ್ರಿಯೆಯನ್ನು ಪ್ರದರ್ಶಿಸಿತು. ಭಾರತೀಯ ದೇಶಭಕ್ತರ ಸಾಹಸದ ಬಗೆಗೆ ಉನ್ನತ ಪ್ರಶಂಸೆಯುಳ್ಳ ಲೇಖನವೊಂದನ್ನು ಅದರ ಪತ್ರಿಕೆಯು ಪ್ರಶಂಸಿಸಿತು. "ಲಾಹೋರಿನ ಹುತಾತ್ಮರು ಭಾರತೀಯ ಕ್ರಾಂತಿಯ ಐತಿಹಾಸಿಕ ವೀರರಾಗಿದ್ದಾರೆ. ಅವರು ಮೃತರಾಗಿಲ್ಲ. ರಾಷ್ಟ್ರೀಯ ಹುತಾತ್ಮರೂ, ಕ್ರಾಂತಿಕಾರಿ ವೀರರೂ ಆದ ಭಗತ್ ಸಿಂಹ, ರಾಜಗುರು ಮತ್ತು ಸುಖದೇವ್ ಅವರುಗಳ ಹೆಸರುಗಳು ಭಾರತದ ಮತ್ತು ಜಗತ್ತಿನ ಇತಿಹಾಸದಲ್ಲಿ ಅಮರವಾಗಿನುವುವು ಭಾರತದ ಕೋಟಿಗಟ್ಟಲೆಯ ಪೀಡಿತ ಜನಸಮುದಾಯಗಳಿಗೆ, ಕಾರ್ಮಿಕರಿಗೆ, ರೈತರಿಗೆ, ವಿದ್ಯಾರ್ಥಿಗಳಿಗೆ, ಬುದ್ಧಿಜೀವಿಗಳಿಗೆ, ವ್ಯಾಪಾರಿಗಳಿಗೆ, ಮಧ್ಯಮವರ್ಗದವರಿಗೆ—'ಪೋಸಹೋಗಬೇಡಿ, ಕ್ರಾಂತಿಕಾರಿ ಹೋರಾಟಕ್ಕಾಗಿ ಎದ್ದೇಳಿ!....' ಎಂದು ಅವರ ಧ್ವನಿಗಳು ಚಂಡ ಮಾರುತದಂತೆ ಅವರು ಮಣ್ಣುಗೂಡಿದ ಸ್ಮಶಾನ ಭೂಮಿಯಿಂದಲೇ ಕೂಗಿ ಹೇಳುತ್ತವೆ"—ಎಂದು ಆ ಪತ್ರಿಕೆಯು ಬರೆಯಿತು.

ಈ ಮೌಲ್ಯನಿರ್ಣಯವು ಎಷ್ಟೊಂದು ಪ್ರಾಥಮವಾಗಿಯೂ, ನ್ಯಾಯ ಸಮ್ಮತವಾಗಿಯೂ ಇತ್ತೆಂಬುದನ್ನು ಜೀವನವು ತೋರಿಸಿಕೊಟ್ಟಿದೆ. ಭಾರತದಲ್ಲಿಯೂ ಮತ್ತು ವಿದೇಶಗಳಲ್ಲಿಯೂ ಭಗತ್ ಸಿಂಹರ ನೆನಪು ಇನ್ನೂ ಜೀವಂತವಾಗಿದೆ.

Gram: VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging,

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ: ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಬಂಗ್ಲಾ ದೇಶ ಘಟನೆಯಿಂದ

ಯಾಹ್ಯಾಖಾನರು ಇತಿಹಾಸ ನಿರ್ಮಿಸಿದರು

ಶ್ರೀಮತಿ ಇಂದಿರಾಗಾಂಧಿಯವರು ಬಂಗ್ಲಾದೇಶಕ್ಕೆ ಮನ್ನಣೆ ನೀಡಲು ಹಿಂದೆಯೂ ವಿರೋಧವಿರಲಿಲ್ಲ. ಸೂಕ್ತ ಸಮಯದಲ್ಲಿ ಸರಕಾರ ಈ ಪ್ರಶ್ನೆಯನ್ನು ಪರಿಶೀಲಿಸಿ ಆವಶ್ಯಕ ನಿರ್ಧಾರವನ್ನು ಕೈಗೊಳ್ಳುವುದೆಂದು ಪರು ಅದೆಂದೋ ಹೇಳಿದ್ದರು. ಅವರು ನಿರೀಕ್ಷಿಸಿದ ಸೂಕ್ತ ಸಮಯವೀಗಬಂತು; ಬಂಗ್ಲಾ ದೇಶದ ಏಳೂವರೆ ಕೋಟಿ ಸ್ವಾತಂತ್ರ್ಯ ಪ್ರಿಯ ಜನತೆಯ ಆಶೋತ್ತರಗಳನ್ನು ಮನವರಿಕೆ ಮಾಡಿಕೊಂಡು, ಅವನ್ನು ಗೌರವಿಸಿ ಮೊತ್ತ ಮೊದಲಿಗೆ ಬಂಗ್ಲಾದೇಶಕ್ಕೆ ಮನ್ನಣೆ ನೀಡಿದ ಕೀರ್ತಿ ನಮ್ಮದು. ನಮ್ಮನ್ನನುಸರಿಸಿ ನೆರೆಯ ಭೂತಾನವೂ ಅದಕ್ಕೆ ಮೂನ್ಯತೆ ನೀಡಿತು; ಇನ್ನು ಮುಂದೆ ಒಂದೊಂದೇ ದೇಶಗಳು ಬಂಗ್ಲಾದೇಶಕ್ಕೆ ಮನ್ನಣೆ ನೀಡುವುದಕ್ಕೆ ಮುಂದೆ ಬರಬಹುದು.

೧೯೭೦ರ ಕೊನೆಯಲ್ಲಿ ಇಡಿಯ ಪಾಕಿಸ್ತಾನದಲ್ಲಿ ಚುನಾವಣೆಯೇರ್ಪಡಿಸಿದ್ದು, ಇಡಿಯ ಪಾಕಿಸ್ತಾನದಲ್ಲೇ ಶೇಕಮುಜಿಬುರ್ ರೆಹಮಾನರ ಆವಾಮಿಲೀಗು ಬಹುಮತಗಳಿಸಿದ್ದು, ಈ ಬಹುಮತೀಯ ಪಕ್ಷಕ್ಕೆ ಸರಕಾರ ರಚಿಸುವ ಅವಕಾಶ ಯಾಹ್ಯಾಖಾನರು ನೀಡದೆ ಹೋದದ್ದು, ಮುಜಿಬುರ್ ಏಕಪಕ್ಷೀಯವಾಗಿ ಸ್ವಾತಂತ್ರ್ಯ ಘೋಷಿಸಿಕೊಂಡದ್ದು, ಯಾಹ್ಯಾಖಾನರು ನರಮೇಧಕ್ಕೆ ತೊಡಗಿದ್ದು, ನಿರಾಶ್ರಿತರ ಪ್ರವಾಹ ಭಾರತದತ್ತ ಹರಿದು ಬಂದದ್ದು, ಈ ಕಾರಣದಿಂದ ಭಾರತದ ಆರ್ಥ ವ್ಯವಸ್ಥೆ ಕೆಡತೊಡಗಿದ್ದು.... ಈ ಘಟನಾವಳಿಗೆ ಇದೀಗ ಅರ್ಧವಿರಾಮ ಬಿದ್ದಂತಾಯ್ತು. ಬಂಗ್ಲಾದೇಶಕ್ಕೆ ಮನ್ನಣೆನೀಡಬೇಕು; ಅಲ್ಲಿನ ಸ್ವಾತಂತ್ರ್ಯ ಯೋಧರಿಗೆ ನೆರವು ನೀಡಬೇಕು—ಇದು ಹಲವು ಭಾರತೀಯ ಮುತ್ಸದ್ಧಿಗಳ ವಿಚಾರವಿತ್ತು. ಇದರಲ್ಲಿ ಸತ್ಯಾಂಶವಿರುವುದನ್ನು ಶ್ರೀಮತಿ ಗಾಂಧಿ ಅದೆಂದೋ ತಿಳಿದುಕೊಂಡಿದ್ದರೂ ಜಗತ್ತಿನ ಸ್ವಾತಂತ್ರ್ಯ ರಕ್ಷಕ ರಾಷ್ಟ್ರಗಳ ನಿಲುನೆಯನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವನರೆಗೆ, ಯಾಹ್ಯಾಖಾನರು ತಮ್ಮ ತಪ್ಪನ್ನು ತಿದ್ದಿಕೊಳ್ಳಲಾಗದ ಮಟ್ಟಕ್ಕೆ ಎತ್ತರಿಸುವವರೆಗೆ ಅವರು ಕಾದರು.

ಶ್ರೀಮತಿ ಗಾಂಧಿಯವರಿಂದು ಅಂತಾರಾಷ್ಟ್ರೀಯ ವ್ಯಕ್ತಿಯೂಗಿದ್ದಾರೆ. ಆಕೆ ಸುಂದರವಾದ ಕಪೋತವೂ ಹೌದು, ಶಕ್ತಿಯ ಪುನರವತಾರವೂ ಹೌದು ಜಾನ್ ಆಫ್ ಆರ್ಕ್ ಕೂಡ ಹೌದು. ಇವರೆಲ್ಲರನ್ನೂ ಮಿರಿಸುವವರೂ ಹೌದು. ಹಿರಿಯ ರಾಷ್ಟ್ರಗಳ ಮುನಿಸನ್ನು ಗಣನೆಗೆ ತಾರದೆ, "ನಮ್ಮ ದೇಶದ ರಕ್ಷಣಾ ಕಾರ್ಯದಲ್ಲಿ ಪರರ ಮನನೋಯುವುದೆಂದು ಆರೆಕ್ಷರಾಗಿರುವುದು ಸಾಧ್ಯವಿಲ್ಲ" ಎಂದು ಘೋಷಿಸಿದ ಸಿಂಹಿಣಿಯವರು ಪಾಕಿಸ್ತಾನವನ್ನು ಶ್ರೀಮತಿ ಗಾಂಧಿ ಇಬ್ಬಾಗಿಸಿದರೆಂದು ಯಾಹ್ಯಾಖಾನರೂ ಅವರ ಜನ್ನು ಚಪ್ಪರಿಸುವವರೂ ದೂರುತ್ತಾರೆ; ಆದರೆ ಯಾಹ್ಯಾಖಾನರೇ ಪಾಕಿಸ್ತಾನವನ್ನು ತಾವಾಗಿಯೇ ತುಂಡರಿಸಿದರು. ಭಾರತ ಅದಕ್ಕೆತ್ನ ಮೂನ್ಯತೆಯನ್ನು ನೀಡದೆ ಸುಮ್ಮನುಳಿಯುವುದು ಹೇಗೆ ಸಾಧ್ಯ?

೦ ೦ ೦

೧೯೫೦ರಲ್ಲಿ ಭಾರತದ್ಮೇಲೆ ಆಕ್ರಮಣ ನೂಡಿ, ದಂಡಿನಲ್ಲಿ ತಾನು ಗಳಿಸಿದ ಯಶವೆಲ್ಲವನ್ನೂ ನೀರಲ್ಲಿ ಅದ್ದಿಕೊಂಡ ಅಯ್ಯೂಬ್‌ಖಾನರನ್ನು ಮೂಲೆಗೆ ತಳ್ಳಿ ಯಾಹ್ಯಾಖಾನರು ಪಾಕಿನ ಸರ್ವಾಧಿಕಾರ ನಹಿಸಿದರು. ಅಯ್ಯೂಬರನ್ನು ತಾನು ಮಿರಿಸಬೇಕು, ಪಾಕ್ ಇತಿಹಾಸ ತನ್ನನ್ನು ಸದಾ ನೆನೆಯುತ್ತಿರಬೇಕೆಂದವರು ಸುಂದರ ಕನಸು ಕಾಣುತ್ತಿದ್ದರು. ಅಯೂಬರು ನಡೆಸಿಲ್ಲಾದ ಚುನಾವಣೆಗಳನ್ನು ಇವರು ನಡೆಸಿದರು. ಸರ್ವಾಧಿಕಾರದ ನೊಗದಿಂದ ತಮ್ಮ ಭುಜ ತಪ್ಪಿತೆಂದು ಜನ ಹಿಗ್ಗಿದ್ದೇ ಹಿಗ್ಗಿದ್ದು; ಬಹುಮತಗಳಿಸಿದ ಪಕ್ಷಕ್ಕೆ ಸರಕಾರ ರಚಿಸುವ ಅಧಿಕಾರವನ್ನವರು ನಿರಾಕರಿಸಿದರು. ದಂಡಿನಾಳಿಕೆಯ ದಂಡವನ್ನು ಪ್ರಯೋಗಿಸಿದರು. ಇದರ ಪರಿಣಾಮವಿಷ್ಟು ಭೀಕರವಾಗುವುದೆಂದು ಅವರು ಆಂದು ಊಹಿಸಿರಲಿಲ್ಲ.

ಪಂಗ ಬಂಧು ಶೇಕ್ ಮುಜಿಬುರ್ ರೆಹಮಾನರನ್ನು ಎದುರು ಪಾಕಿಕೊಂಡವರು ಮುಳ್ಳಿನ ಮಾರವನ್ನು ಅಪ್ಪಿಕೊಂಡರು. ಇತಿಹಾಸವನ್ನು ಒದಲಿಸಲು ಪಾಕ್ಷಾತ್ಯ ಇತಿಹಾಸಕಾರರು ತುಂಬ ಪ್ರಯತ್ನಿಸಿದ್ದರು; ಆದರೆ ಇದರಲ್ಲಿ ಅವರಿಗೇ ಯರಸ್ಸು ಸಿಗಲಿಲ್ಲವೆಂದ ಮೇಲೆ ಈ ಯಾಹ್ಯಾಖಾನರಿಗೆ ಹೇಗೆ ಲಭ್ಯವಾದೀತು? ಅವರು ಇತಿಹಾಸ ಬರೆದರು; ಮಹಮ್ಮದಾಲಿ ಜಿನ್ನಾರು ಇಂಗ್ಲಿಷರ ಒಡೆದು ಆಳುವ ನೀತಿಯಿಂದ ಪ್ರಭಾವಿತರಾಗಿ ಜಾತೀಯ ನೆಲೆಯಲ್ಲಿ ಭಾರತವನ್ನು ತುಂಡರಿಸಿದರು—ಪಾಕಿಸ್ತಾನದ ಜನಕರಾದರು; ತಾನು ಹಡೆದದ್ದು ಪಾಪದ ಕೂಸು ಎಂಬುದನ್ನವರು ಕಂಡುಕೊಳ್ಳಲು ಪಾಪ, ಈಗ ಬದುಕಿಲ್ಲ.

ಮತ-ಧರ್ಮಗಳಿಂದ ಅಂಧರಾದ ಪಾಕಿಸ್ತಾನಿ ಆಳರಸರು ಆವುಗಳ ಸೂತ್ರದಿಂದ ರಾಜ್ಯ ಕಟ್ಟುವುದು ಸಾಧ್ಯವೆಂದು ದೃಢವಾಗಿ ನಂಬಿದ್ದರು. ಆದರೆ, ಇದೀಗ ಅವರ ಸೂತ್ರ ಅವರ ಕಣ್ಣೆದುರಲ್ಲೇ ಸಟಸಟನೆ ತುಂಡರಿಸಿ ಹೋಗುತ್ತಿರುವುದನ್ನು ಕಾಣುತ್ತಿದ್ದಾರೆ ಜಿನ್ನಾ ಮಾಡಿದ ಪಾಪ ಪರಂಪರೆಯನ್ನು ಯಾಹ್ಯಾಖಾನರು ತೊಳೆಯಬೇಕಾಗಿದೆ. ಅವರು ಬಂಗ್ಲಾದೇಶವನ್ನು ಮನ್ನಿಸಲಿ ಬಿಡಲಿ, ಬಂಗ್ಲಾದೇಶ ಪ್ರತ್ಯೇಕವಾಯ್ತು; ಪಶ್ಚಿಮ ಪಾಕಿಸ್ತಾನದ ವಿವಿಧ ರಾಜ್ಯಗಳಿಗೂ ಇದರ ಗಾಳಿ ಬೀಸತೊಡಗಿತು. ಯಾಹ್ಯಾಖಾನರು ಈಗ ರಾಷ್ಟ್ರೀಯ ಸರಕಾರ ಸ್ಥಾಪಿಸಿದ್ದಾರೆ. ಪೂರ್ವ ಪಾಕಿಸ್ತಾನವೆಂದೆರು ಕರೆಯುತ್ತಿರುವ ಬಂಗ್ಲಾದೇಶದ ನೂರಲ್ ಹುಸೇನ್ ಪ್ರಧಾನಿ; ಭುಟ್ಟೋ ಮಹಾಶಯರು ಉಪಪ್ರಧಾನಿ. ಸರಕಾರದ ಒಳಗಿದ್ದು ಭುಟ್ಟೊ ತಮ್ಮಯೂಬ ಖಾನರನ್ನು ಕಬಳಿಸಿದರು; ಈಗ ಸರಕಾರ ಜೊಳಗೆ ಬಂದವರು ಯಾಹ್ಯಾರನ್ನೂ ನೂರಲ್ ಹುಸೇನರನ್ನೂ ಗುಳುಂಕರಿಸುತ್ತಾರೆ. ಬಂಗ್ಲಾದೇಶದ ಅಸ್ತಿತ್ವವನ್ನು ಅಲ್ಲಗಳೆಯಲು ಯಾಹ್ಯಾಖಾನರಿಂದ ಸಾಧ್ಯವಿಲ್ಲ; ಅವರ ವ್ಯಾಣಿಮಿತ್ರರಿಂದಲೂ ಸಾಧ್ಯವಿಲ್ಲ. ಯಾಹ್ಯಾಖಾನ ಮಿತ್ರವರ ಮಿತ್ರರು ಉಳಿದ ಪಾಕಿಸ್ತಾನವನ್ನಾದರೂ ನ್ಯಾಯದ ಸೂತ್ರದಿಂದ ಬಿಗಿದು ಏಕರಾಷ್ಟ್ರವಾಗಿ ಉಳಿಸಿಕೊಳ್ಳಲು ಪ್ರಯತ್ನಿಸುವುದು, ಬಂಗ್ಲಾದೇಶಕ್ಕೆ ತಲ್ಲಾಖ್ ಕೊಡುವುದು ಸೂಕ್ತ.

೦ ೦ ೦

ಭಾರತ—ಪಾಕಿಸ್ತಾನಗಳ ನಡುವಣ ಹೋರಾಟವನ್ನು ತಡೆಹಿಡಿಯಬೇಕೆಂಬ ಅರ್ಥದಲ್ಲಿ ಭದ್ರತಾ ಸಮಿತಿ ಗೊತ್ತುವಳಿ ಸ್ವೀಕರಿಸಬೇಕೆಂದಿದ್ದಾಗ, ಸೋವಿಯತ್ತು ಎರಡು ಬಾರಿ ತನ್ನ ನಿಷೇಧ ಮತವನ್ನು ಚಲಾಯಿಸಿ ಅದು ಜ್ಯಾರಿಗೆ ಬಾರದಂತೆ ತಡೆಯಿತು. ಇದು ಭಾರತದ ಮೇಲೆ, ಮುಖ್ಯವಾಗಿ ಬಂಗ್ಲಾ ಜನತೆಯ ಆಶೋತ್ತರಗಳ ಮೇಲೆ, ಸೋವಿಯತ್ತಿಗಿರುವ ಅನುಕಂಪದಿಂದ ಪ್ರೇರಕವಾದದ್ದು. ಕದನ ವಿರಾಮವಾಗ ಬೇಕಾದದ್ದು ಪಾಕಿಸ್ತಾನ ಮತ್ತು ಭಾರತಗಳ ನಡುವಲ್ಲ; ಪಾಕಿಸ್ತಾನ ಮತ್ತು ಬಂಗ್ಲಾ ದೇಶಗಳ ನಡುವೆಯೆಂದ ಸೋವಿಯತ್ ವಾದ ಮಹತ್ವಪೂರ್ಣವಾದದ್ದು. ವಸ್ತು ಸ್ಥಿತಿಯನ್ನು ಕೂಲಂಕಷವಾಗಿ ತಿಳಿದುಕೊಂಡೇ ರಷ್ಯ ಈ ನಿಲುವಿಯನ್ನು ತಾಳಿದೆ. ಈ ಅವಿಚಲ ನಿಲುವಿನಿಂದಾಗಿ ಭಾರತವನ್ನು ಮತ್ತೊಮ್ಮೆ ಆಪತ್ಬಾಧಿಯ ಸ್ವಾನದಲ್ಲಿ ನಿಲ್ಲಿಸುವ ಅಮೆರಿಕೆಯ ಹೆಬ್ಬಯಕೆ ನೀರಲ್ಲಿ ಹುಳಿ ಅದ್ದಿದಂತಾಯ್ತು. ಭಾರತವನ್ನು ಟೀಕಿಸುವ ಯಾವುದೇ ಗೊತ್ತುವಳಿಗೆ ಸೋವಿಯತ್ತು ನಿಷೇಧ ಮತ ಚಲಾಯಿಸುವ ದೃಢ ಸಂಕಲ್ಪ ಮಾಡಿದ್ದರಿಂದ ಭದ್ರತಾ ಸಮಿತಿಯೊಗೆ ನಿ

(ಎಂಟನೇ ಪುಟ ನೋಡಿರಿ)

ಪುಟ..

ನೋಟೀಸು

ಕುಂದಾಪುರ ಮು. ಕೋರ್ಟಿನಲ್ಲಿ

O. S. 5169.

ವಾದಿ— ನೂಪಡ ಉಂಮರ್ ಸಾಹೇಬ.
ಪ್ರತಿವಾದಿರು—ಮಿರಾ ಸಾಹೇಬ ಕೂಡಾ

19, 20ನೆ ಪ್ರತಿವಾದಿರಿಗೆ ಈ ನೂಲಕ ತಿಳಿಸುವನೆಂದರೆ,

19ನೆ ಪ್ರ. ಬಿ. ಬಿ. ರಾಬಿಯೂ, 20ನೆ ಪ್ರ. ಯಿಸ್ಮಾಯಿಲ್ ಸ್ವಾಬ. ಮಣ್ಣಾಸಿ ಮುಗುಡಿ ಅನ್ನಿಪ ಸಾಹೇಬರ ಮಕ್ಕಳು.

ಕುಂದಾಪುರ ತಾಲ್ಲು ನಂಬ್ರ 1ನೆ ಶಿರೂರು ಗ್ರಾಮಸ್ತರು.

ವಾದಿಯು ಬೋಗಾದಿ ಆಡಮಿನ ಕುಲಾಸಿನ ಬಗ್ಗೆ ನಿಮ್ಮ ವಿರೈರ ಮೇರೆ ಮೇಲ್ಕಂಡ ದಾವೆಯಂನು ದಾಖಲು ಮಾಡಿರುತ್ತಾನೆ. ಸದ್ರಿ ದಾವೆಯು ತಾರೀಖು 21—1—1972ಕ್ಕೆ ತಪ್ಪಿಗೆ ಬಿಟ್ಟರುವದರಿಂದ ಆ ಕುರಿತು ನಿಂಮ ಉದಾಹರಣೆಯೇನಾದರೂ ಯಿದ್ದರೆ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಿ ಆಗಿ ಜಾಬೀಲು ಮಾಡಿಕೊಳ್ಳ ತಕ್ಕದ್ದು. ಯಿದಕ್ಕೆ ತಪ್ಪಿದಲ್ಲಿ ನಿಂಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯಂನು ಕೇಳಿ ಪೈಸಲು ಮಾಡೋಜಾದೀತೆಂತ ಯಿ ಮೂಲಕ ತಿಳಿಸೋಜಾಗುತ್ತದೆ.

M. Madhava Rao,
Advocate for Plaintiff.

ಕುಂದಾಪುರ, ತಾರೀಕು. 4-12-71.

ಎಲ್ಲಾ ಸಮಸ್ಯೆಗಳಿಗೆ
ಒಂದೇ ಉತ್ತರ
—ಸಿಂಡಿಕೇಟ್ ಬ್ಯಾಂಕಿನ ಉಳಿತಾಯ ಖಾತೆ

ದಿನಗೂಲಿಯವರಿರಲಿ, ಮಾಸಿಕ ವರಮಾನದವರಿರಲಿ, ಅನಿಯತ ಆದಾಯನಿರುವ ಮಂದಿಯಿರಲಿ—ಎಲ್ಲರ ಅನುಕೂಲತೆಗೂ ಹೊಂದಿರುವ ಹತ್ತು ಹಲವು ಉಳಿತಾಯ ಖಾತೆಗಳು, ಸರ್ಟಿಫಿಕೇಟುಗಳು, ಸಿಂಡಿಕೇಟ್ ಬ್ಯಾಂಕಿನಲ್ಲಿ ಲಭ್ಯ.

ಅನಶ್ಯಕ ಸಂದರ್ಭದಲ್ಲಿ —ನಿಮ್ಮ ಉದ್ಯೋಗ, ವ್ಯವಹಾರ, ಗೃಹ ಕೃತ್ಯಕ್ಕೆ ಸಂಬಂಧಿಸಿದ ಶೊಂದರೆಗಳಿದ್ದಾಗ—ಬ್ಯಾಂಕಿನ ಉಳಿತಾಯ ಖಾತೆಯಲ್ಲಿ ಬೆಳೆದು ಹಿಗ್ಗಿದ ನಿಮ್ಮ ಹಣ ನಿಮ್ಮ ಪಾಲಿಗೆ ಲಭ್ಯ.

ನಿಮ್ಮ ಸಮಸ್ಯೆಗಳು ಹತ್ತು ಪಲನಿನ್ದರೂ ಅವುಗಳಿಗೆ ಸಿಂಡಿಕೇಟ್ ಬ್ಯಾಂಕಿನಲ್ಲಿ ಉತ್ತರವಿದೆ. ನಮ್ಮ ಲ್ಲೊಂದು ಉಳಿತಾಯ ಖಾತೆಯನ್ನು ತೆರೆದು ನಿಮ್ಮ ಮುಂದಿನ ಬಾಳಿಗೆ ರಕ್ಷೆಯನ್ನು ನೀಡಿರಿ.

ಸಿಂಡಿಕೇಟ್ ಬ್ಯಾಂಕ್

ಪ್ರಧಾನ ಕಚೇರಿ: ಮಣಿಪಾಲ

ಶಾಖೆಗಳು: 500ಕ್ಕೂ ಹೆಚ್ಚಿನ

ಕೆ. ಕೆ. ಪೈ ಕಸ್ಟೋಡಿಯನ್

ಯಾಹ್ಯಾಖಾನರು ಸಮರಕ್ಕೇ ತೊಡಗಿದರು

'ಮಿಲಿಟರಿ ಆಡಳಿತಕ್ಕೂ ಪ್ರಜಾಸ್ವಭುತ್ವಕ್ಕೂ ಎಣ್ಣೆ–ಸೀಗೆಕಾಯಿ ಸಂಬಂಧ. ಪ್ರಸ್ತುತ ಪರಿಸ್ಥಿತಿಯಲ್ಲಿ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವ ಸನ್ನಿಹಿತ ಎಂದರೆ ಇಬ್ಬರು ಮಾತ್ರ ನಂಬುತ್ತಾರೆ. ಒಬ್ಬ ಮೂರ್ಖ. ಮತ್ತೊಬ್ಬ ನೀತಿಭ್ರಷ್ಟ. ಪೂರ್ವ ಪಾಕಿಸ್ತಾನ ಸಮಸ್ಯೆ ಜೀವಂತವಾಗಿರುವ ತನಕ, ದೇಶದ ಆರ್ಥಿಕ ಸ್ಥಿತಿಗೆ ಆಘೋಗತಿಯೇ ಸರಿ' ಎಂದು ಅತ್ಯಧಿಕ ಪ್ರಸಾರವುಳ್ಳ ಪಾಕಿಸ್ತಾನದ ಉರ್ದು ವಾರಪತ್ರಿಕೆ ಅಖಬಾರ್–ಇ–ಜಹಾನ್ ಅಭಿಪ್ರಾಯ ಪಟ್ಟಿದೆ.

ಪಾಕಿಸ್ತಾನದ ಮುಂದೆ ಈಗ ಎರಡೇ ಮಾರ್ಗಗಳಿವೆ. ಭಾರತದ ವಿರುದ್ಧ ನಿರ್ಣಾಯಕ ಯುದ್ಧವನ್ನು ಆರಂಭಿಸುವುದು ಮೊದಲ ಮಾರ್ಗ. ಪಾಕಿಸ್ತಾನದ ಮಿಲಿಟರಿ ಪ್ರಭುಗಳು ಈ ವರೆಗೂ ತಮ್ಮ ವೈರಿಗ ಳೆಂದು ಭಾವಿಸಿದ್ದ ಚುನಾಯಿತ ಪ್ರತಿನಿಧಿಗಳೊಂದಿಗೆ ಮಾತುಕತೆ ಆರಂಭಿಸುವುದು ಎರಡನೆಯ ಮಾರ್ಗ.

ಮೊದಲನೆಯ ಮಾರ್ಗದಿಂದ ಖರ್ಚಿನ ಹೊರೆ ಹೆಚ್ಚುತ್ತದೆ. ಇದು ಪಾಕ್ ಆರ್ಥ ವ್ಯವಸ್ಥೆಯ ಎನ್ನು ಮುರಿಯುತ್ತದೆ. ಕಾರಣ ಮೊದಲ ಮಾರ್ಗ ಅಪಾಯಕಾರಿ ಎಂದು ಪತ್ರಿಕೆ ತನ್ನ ಸಂಪಾದಕೀಯದಲ್ಲಿ ಬರೆದಿದೆ.

ಚೀನಾದೊಂದಿಗೆ ರಕ್ಷಣಾ ಒಪ್ಪಂದ ಮಾಡಿಕೊಳ್ಳುವ ಮೂಲಕ ನಾವು ಈ ಸಮರವನ್ನು ಎದುರಿಸಬಹುದು. ಪ್ರಸ್ತುತ ಪರಿಸ್ಥಿತಿಯಲ್ಲಿ ಇಂತಹ ಒಪ್ಪಂದ ನಾಧ್ಯವೇ ಎಂಬುದನ್ನು ಹೇಳಲಿಕ್ಕಾಗುವುದಿಲ್ಲ. ಏನೇ ಆದರೂ ಇದು ಸರ್ಕಾರದ ಚಿತ್ತವನ್ನೇ ಅವಲಂಬಿಸಿದೆ. ಚೀನಾದೊಂದಿಗೆ ರಕ್ಷಣಾ ಒಪ್ಪಂದ ಮಾಡಿಕೊಳ್ಳುವುದು ಅಸಾಧ್ಯವಾದರೆ, ಭಾರತದ ವಿರುದ್ಧ ಯುದ್ಧ ಹೂಡುವ ಗೋಜಿಗೇ ಹೋಗಬಾರದು. ಯುದ್ಧ ಆರಂಭಿಸಿದ್ದೇ ಆದರೆ ಪಾಕಿಸ್ತಾನ ಭಾರೀ ಬೆಲೆಯನ್ನು ತೆರ ಬೇಕಾಗುವುದು. ಇಂತಹ ಒಂದು ಪ್ರಸಂಗದಲ್ಲಿ ಎರಡನೆ ಮಾರ್ಗವನ್ನು ಅಂದರೆ ಪೂರ್ವಪಾಕಿಸ್ತಾನ ಚುನಾಯಿತ ಮುಂದಾಳುಗಳೊಂದಿಗೆ ಮಾತುಕತೆ ಪ್ರಾರಂಭಿಸುವುದೇ ಬುದ್ಧಿವಂತಿಕೆ ಯೆನಿಸುತ್ತದೆ ಎಂದು ಪತ್ರಿಕೆಯು ಸ್ಪಷ್ಟ ಪಡಿಸಿದೆ.

ಭುಟ್ಟೋ ಬ್ರಮನಿರಶನ

ಪಾಕಿಸ್ತಾನದ ಮಿಲಿಟರಿ ಆಡಳಿತಗಾರರು ಭಾರತ ಮತ್ತು ಬಂಗ್ಲಾ ದೇಶಗಳ ವಿರುದ್ಧ ಒಂದೇ ಸಮನೆ ವಿಷ ಕಾರುತ್ತಿದ್ದರೂ, ಬಂಗ್ಲಾ ದೇಶ ಸಮಸ್ಯೆಗೆ ಪ್ರಜಾಪ್ರಭುತ್ವ ಸಮ್ಮತವಾದ ಪರಿಹಾರವನ್ನು ಹುಡುಕಬೇಕೆಂಬ ವಿಚಾರಕ್ಕೆ ಪಾಕಿಸ್ತಾನದಲ್ಲಿ ಈಗ ಹೆಚ್ಚು ಬೆಂಬಲ ದೊರೆಯತೊಡಗಿದೆ. ಯಾಹ್ಯಾಖಾನರು ಇತ್ತೀಚೆಗೆ ಲಾಹೋರಿಗೆ ಭೇಟಿ ನೀಡಿದಾಗ ಪಶ್ಚಿಮ ಪಾಕಿಸ್ತಾನದ 42ಮಂದಿ ಖ್ಯಾತವ್ಯಕ್ತಿಗಳು ಅವರನ್ನು ಕಂಡು ಒಂದು ಮನವಿಯನ್ನು ಸಲ್ಲಿಸಿದರು. ಶೇಖ ಮುಜೀಬುರ್ ರೆಹಮಾನರನ್ನು ಈ ಕೂಡಲೇ ಬಿಡುಗಡೆ ಮಾಡಬೇಕೆಂದೂ, ಕಳೆದ ಡಿಸೆಂಬರ ತಿಂಗಳಲ್ಲಿ ನಡೆದ ಚುನಾವಣೆಗಳಲ್ಲಿ ಆರಿಸಿ ಬಂದ ಜನತಾ ಪ್ರತಿನಿಧಿಗಳಿಗೆ ಅಧಿಕಾರ ವಹಿಸಿಕೊಡಬೇಕೆಂದು ಅವರು ಒತ್ತಾಯ ಪಡಿಸಿದರು. ಇದು ಪಾಕಿಸ್ತಾನದಲ್ಲಿ ಈಗ ಗಾಳಿ ಎತ್ತ ಕಡೆಗೆ ಬೀಸುತ್ತಿದೆಯೆಂಬುದನ್ನು ತೋರಿಸಿದೆ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ 42 ಜನ ಮುಂದಾಳುಗಳು ಅವಾಮಿ ಲೀಗ್ ಬಹುಮತವಿರುವ ರಾಷ್ಟ್ರೀಯ ಅಸೆಂಬ್ಲಿಗೆ ಅಧಿಕಾರ ವಹಿಸಿಕೊಡಬೇಕೆಂದು ಎಚ್ಚರಿಕೆ ನೀಡಿದ್ದಾರೆ.

ಯಾಹ್ಯಾಖಾನರಿಗೆ ಸಲ್ಲಿಸಲಾದ ಮನವಿಯ ಸಂದರ್ಭ ಹಾಗೂ ಈ ಮನವಿಗೆ ಸಹಿ ಹಾಕಿದ ವ್ಯಕ್ತಿಗಳನ್ನು ಗಮನಿಸಿದಾಗ ಅದರ ಮಹತ್ವ ಸ್ಪಷ್ಟವಾಗುತ್ತದೆ. ಇಸ್ತಿಕಲ್ ಪಾರ್ಟಿಯ ಮುಖಂಡರೂ ಪಾಕಿಸ್ತಾನ ವಿಮೋಚನ ಬಲದ ಮೂಜೀ ಮುಖ್ಯಸ್ಥರೂ ಆದ ಏರಮಾರ್ಶಲ್ ಅಸಘರಖಾನ್ ಈ ಮನವಿಗೆ ಸಹಿ ಹಾಕಿದವರಲ್ಲಿ ಮೊದಲಿಗರು. ಶೇಖ ಮುಜೀಬುರ ವಿಚಾರಣೆ ಬಹಿರಂಗವಾಗಿ ನಡೆಯಬೇಕೆಂದೂ ಅವಾಮಿಲೀಗ್ ಮುಖಂಡರೊಂದಿಗೆ ಮಾತುಕತೆ ನಡೆಸಬೇಕೆಂದೂ ಒತ್ತಾಯ ಪಡಿಸಿದ ರಾಜಕಾರಣಿಗಳಲ್ಲಿ ಅವರೇ ಮೊದಲಿಗರು. ಅಸಘರಖಾನ ಇತ್ತೀಚೆಗೆ ಡಾಕ್ಕಾದಿಂದ ವಾಪಸು ಬಂದರಲ್ಲದೇ ಬಂಗ್ಲಾ ದೇಶದ ಉಪಚುನಾವಣೆಯ ಕಪಟನಾಟಕದಲ್ಲಿ ಪಾಲುಗೊಳ್ಳಲು ತಮ್ಮ ಪಕ್ಷ ಸಿದ್ಧವಿಲ್ಲವೆಂದು ಸಾರಿದ್ದಾರೆ.

ಮನವಿ ಪತ್ರಕ್ಕೆ ಸಹಿ ಹಾಕಿದ 42 ಮಂದಿ ಪ್ರಮುಖರಲ್ಲಿ ಖ್ಯಾತ ಉರ್ದು ಕವಿ ಲೆನಿನ್ ಪ್ರಶಸ್ತಿ ವಿಜೇತ ಹಾಗೂ ಸಾಹಿತಿ ಫಯೀಜ ಅಹಮ್ಮದ ಫಯೀಜ್. ಪಾಕಿಸ್ತಾನ ಟ್ರೇಡ್ ಯೂನಿಯನ್ ಫೆಡರೇಶನ್ನಿನ ಅಧ್ಯಕ್ಷ ಮಿರ್ಝಾ ಮಹಮ್ಮದ ಇಬ್ರಾಹಿಮ, ಪಾಕ್ ಸಮಾಜವಾದಿ ಪಕ್ಷದ ಅಧ್ಯಕ್ಷ ಮಿ. ಸಿ. ಆರ್. ಅಸ್ಲಾಂ, ಪಾಕಿಸ್ತಾನ ಟೈಮ್ಸ್ ಪತ್ರಿಕೆಯ ಮೂಜಿ–ಸಂಪಾದಕ ಮಿ ಮಜುಹರ ಅಲಿಖಾನರೂ ಇದ್ದಾರೆನ್ನುವುದು ಮನವಿಗೆ ಸಾರ್ವತ್ರಿಕ ಬೆಂಬಲದ ಸೂಚಕವಾಗಿದೆ. ತತ್ವದ ದೃಷ್ಟಿಯಿಂದ ನೋಡಿದಾಗ ಮನವಿಗೆ ಸಹಿ ಹಾಕಿದ ಈ ಮುಖಂಡರಲ್ಲಿ ಬಹುತೇಕ ಮಂದಿ ಪಶ್ಚಿಮ ಪಾಕಿಸ್ತಾನದ ವಾಮಪಕ್ಷಗಳಿಗೆ ಸೇರಿದವರು.

ಪಾಕಿಸ್ತಾನದಲ್ಲಿ ಈಗ ಜಾರಿಯಲ್ಲಿರುವ ಉಗ್ರ ನಿರ್ಬಂಧಗಳಿಂದಾಗಿ ಬಹುತೇಕ ಜನ ಬುದ್ಧಿಜೀವಿಗಳಿಗೆ ತಮ್ಮ ಅಭಿಪ್ರಾಯವನ್ನು ನಿರ್ದಾಕ್ಷಿಣ್ಯವಾಗಿ ಪ್ರಕಟಿಸುವ ಸ್ವಾತಂತ್ರ್ಯವಿಲ್ಲ. ಯಾಹ್ಯಾಖಾನರ ಸೈನಿಕರು ಇತ್ತೀಚೆಗೆ ಖ್ಯಾತ ಪಂಜಾಬಿ ಕವಿ ಅಹ್ಮದ ಸಲೀಂ ಅವರನ್ನು ಬಂಧಿಸಿ ಆರುತಿಂಗಳ ವರೆಗೆ ಕಾರಾಗೃಹಕ್ಕೆ ಕಳುಹಿಸಿದ್ದಾರೆ. ಬಂಗ್ಲಾ ದೇಶ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಕವಿತೆಯನ್ನು ರಚಿಸಿದ್ದೇ ಅವರು ಮಾಡಿದ ಅಪರಾಧ. ಮಿಲಿಟರಿ ಆಡಳಿತಗಾರರು ನಡೆಸಿದ ದಬ್ಬಾಳಿಕೆಯನ್ನು ಪ್ರತಿಭಟಿಸಿದ ಇನ್ನೊಬ್ಬ ಖ್ಯಾತ ಉರ್ದು ಕವಿ ಹಬೀಬ್ ಜಲೀಬ ಅವರೂ ಬಂಧಿತರಾಗಿದ್ದಾರೆ ಸಿಂಧ ಪ್ರಾಂತದಲ್ಲಿ ಅಶಾಂತಿ ಹಬ್ಬಲೂ ಕಾರಣರಾದರೆಂಬ ಆರೋಪ ಹೊರಿಸಿ ಖ್ಯಾತ ಸಿಂಧಿ ಕವಿ ಜಿ. ಎಂ ಸಯ್ಯದ್ ಅವರನ್ನು ಪಾಕ್ ಸೈನಿಕರು ಬಂಧಿಸಿ ಶಿಕ್ಷೆಗೆ ಗುರಿಪಡಿಸಿದ್ದಾರೆ. ಬಂಗ್ಲಾದೇಶ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವಾಗಿರುವ ವ್ಯಕ್ತಿಗಳನ್ನು ಹುಡುಕಿ ಅವರ ಸದ್ದಡಗಿಸುವುದೇ ಈಗ ಯಾಹ್ಯಾಖಾನರ ಸೈನಿಕರಿಗೆ ಒಂದು ಭಾರೀ ಕಷ್ಟದ ಕಾರ್ಯವಾಗಿ ಪರಿಣಮಿಸಿದೆ.

ಪ್ರವಾಹದ ವಿರುದ್ಧ ಈಜುವ ಯಾಹ್ಯಾಖಾನರ ಯತ್ನ ಪಾಕಿಸ್ತಾನವನ್ನು ಇನ್ನಷ್ಟು ಕಷ್ಟ ಕ್ಕೀಡು ಮಾಡಲಿದೆ. ಯಾಹ್ಯಾಖಾನರು ಯುದ್ಧಕ್ಕೆ ಶರಣು ಹೋದರು.

●●

ನೋಟೀಸು

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 186/68.

ವಾದಿ— ನರಸಿಂಹ ಸೇರಿಗಾರ.
ಪ್ರತಿವಾದಿರು— ಮೂಕಂಮ್ಮ ಸೇರಿಗಾರ್ತಿ ಕೂಡಾ.

19ನೆ ಪ್ರ. ಕೃಷ್ಣಪ್ಪ ಸೆಟ್ಟಿ, 15ನೆ ಪ್ರ. ರಾಮಾನು ಸೆಟ್ಟಿ, 17ನೆ ಪ್ರ. ಕಸ್ತೂರಿ ಸೆಡ್ತಿ, 18ನೆ ಪ್ರ. ಸದಾಶಿವ ಸೆಟ್ಟಿ, 19ನೆ ಪ್ರ. ಸುಗಂಧಿನಿ ಸೆಡ್ತಿ, 21ನೆ ಪ್ರ. ಬಾಸ್ಕರ ಸೆಟ್ಟಿ—ಆಲಂದೂರು ಹಿರಿಯಣ್ಣ ಸೆಟ್ಟಿ ಮಕ್ಕಳು ಕುಂದಾಪುರ ತಾಲ್ಲೂ ನಂಬ್ರ 1ನೆ ಶಿರೂರು ಗ್ರಾಮದಲ್ಲಿರುವವರು.

13, 15, 17, 18, 19, 21ನೆ ಪ್ರತಿವಾದಿರಿಗೆ ತಿಳಿಸುವದೇನೆಂದರೆ.

ವಾದಿಯು ಆಡವಿನ ಕುಲಾಸಿನ ಬಗ್ಗೆ ನಂಬ ವಗ್ಗೆರೆ ಮೇಲೆಮೇಲ್ಕಂಡ ಕೋರ್ಟಿನಲ್ಲಿ ಮೇಲ್ಕಂಡ ದಾವೆಯಂನು ದಾಕಲು ಮಾಡಿರುತ್ತಾನೆ. ಸದ್ರಿ ದಾವೆಯು ತಾರೀಖು 21—1—1972ಕ್ಕೆ ತನ್ನಾಗೆ ಯಿಜೋಣಾಗಿಯಿದೆ. ಸದ್ರಿ ದಾವೆಯಲ್ಲಿ ನಿಂಮ ಕಡೆಯಿಂದ ಯೇನಾದರೂ ಉದಾಹರಣೆ ದಾಕಲು ಮಾಡುವದು ಯಿದ್ದ ಪಕ್ಷದಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಹಾಜ್ರು ಆಗಿ ಜಾಬೀದಿ ಮಾಡಿಕೊಳ್ಳ ತಕ್ಕದ್ದು. ಯಿದಕ್ಕೆ ತಪ್ಪಿದಲ್ಲಿ ನಿಂಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯಂನು ಕೇಳಿ ಏಕಪಕ್ಷೀಯ ಮಾಡೋಣಾದೀತೆಂತ ಯಿ ಮೂಲಕ ತಿಳಿಸೋಣಾಗುತ್ತದೆ.

M. Madhava Rao.
Advocate for Plaintiff.

ಕುಂದಾಪುರ, ತಾರೀಖು. 6–12–71.

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ 137 ಶಾಖೆಗಳಿಂದ ಹಬ್ಬರುವ **"ವಿಜಯಾ ಬ್ಯಾಂಕ್"**ನಲ್ಲಿ ಸಂಪರ್ಕ ಬೆಳೆಸಿರಿ.

ತೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ವೈಶಿಷ್ಟ್ಯ ಉಳಿತಾಯ ಯೋಜನೆ **"ಜೀವನ–ನಿಧಿ"**ಯಲ್ಲಿ ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:— **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.**

ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156, **ರೇಸ್ ಕೋರ್ಸ್ ರೋಡ್, ಬೆಂಗಳೂರು. 1.**

ಎಮ್. ಸುಂದರ್‌ರಾಮ್ ಶೆಟ್ಟಿ,
ಜೆನರಲ್ ಮೆನೆಜರ್.

ನೋಟೀಸು

ಪುತ್ತೂರು IIIrd Addl. Munsiff Court

R. R. C. 127/71

H. ಇಸ್ಮಾಯಿಲ್ ಬ್ಯಾರಿ —ಅರ್ಜಿದಾರ.
ಚಿನ್ನಮ್ಮ ಕೂಡಾ —ಎದ್ರಿರು.

ಎದ್ರಿರು 6. ಅಪ್ಪು—ನಾಮುನ ಗೌಡರ ಹೆಂಡತಿ, 8 ಶೇಷಮ್ಮ, ಜತಪ್ಪ ಗೌಡರ ಹೆಂಡತಿ—ಆರ್ಯಾಪುಗ್ರಾಮ.

ಸದ್ರಿ 6, 8ನೇ ಎದ್ರಿರಿಗೆ ಕೋರ್ಟುಹ್ಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಅರ್ಜಿದಾರನು ನಿಮ್ಮ ಮೇಲೆ ಕೂಡಾ 69–70ನೇ ವರ್ಷದ ಗೇಣಿ ಬಾಕಿಗೆ ಮಾಡಿದ ಈ ನಂಬ್ರವನ್ನು ನಿಮ್ಮ ನೋಟೀಸಿನ ಬಗ್ಗೆ ತಾ. 19–1–72ಕ್ಕೆ ಇಟ್ಟಿರುತ್ತದೆ. ಸದ್ರಿ ದಿವ್ಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸ ತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿಯುಕ್ತ ಕಂಡಂತೆ ತೀರ್ಮಾನಿಸಲಾಗುವುದು.

Sd/- M. Rammohan Rao.
Advocate for Petitioner.

Puttur, 27-11-71.

ಸೋವಿಯತ್ ಕಾದಂಬರಿ:
ಇಂದು ಮತ್ತು ನಾಳೆ

ಪಶ್ಚಿಮದ ಕೆಲವೊಂದು ಸಾಹಿತ್ಯ ವರ್ತುಲಗಳಲ್ಲಿ ಕಾದಂಬರಿಯ "ಸಾವಿನ" ಬಗ್ಗೆ, ಅದರ ಕುರೂಪತನದ ಬಗ್ಗೆ ಹಾಗೂ "ಗೊಡ್ಡು"ತನದ ಬಗ್ಗೆ ಮಾತನಾಡುವುದು ಒಂದು ಫ್ಯಾಷನ್ ಆಗಿದೆ. ಸೋವಿಯೆತ್ ಸಾಹಿತ್ಯದ ಚರಿತ್ರೆ ಮತ್ತು ಬೆಳವಣಿಗೆಯು ಮಾತ್ರ ಇಂಥ "ಸಿದ್ಧಾಂತ"ಗಳನ್ನು ನಿರಾಕರಿಸುತ್ತದೆ. ಮಾಸ್ಕೋದ ಸಾಹಿತ್ಯ ವಿಮರ್ಶಕರಾದ ವೀಕ್ಟರ್ ಚಲ್ಮಾಯೆವ್ ಈ ಲೇಖನದಲ್ಲಿ ಕಾದಂಬರಿಯ ಹೊಸ ಪ್ರತೀಕ್ಷೆಗಳ ಬಗ್ಗೆ ಬರೆದಿದ್ದಾರೆ.

ತನ್ನ ಅದೃಷ್ಟದ ಒಡೆಯನು ತಾನೆ ಆಗುವ, ಪ್ರಗತಿಯ ನಿರ್ಮೂಪಕನಾಗುವ, ಪಾತ್ರವನ್ನು ನಿರ್ವಹಿಸಲು ಮನುಷ್ಯ ಶಕ್ತನಾಗಿಲ್ಲವೆ? ಅಥವಾ ವಿವೇಕ, ಆರೋಗ್ಯ ಮತ್ತು ಶೀಲ ಸಮಗ್ರತೆಗಳಿಗಿಂತ ಆಕಸ್ಮಿಕ ಆಗುಹೋಗುಗಳು, ಗ್ರಹಿಸುವನ್ನೆ ಹಾಗೂ ಮಾನಸಿಕ ಅಂಟುರೋಗಗಳು ಇವೇ ಹೆಚ್ಚು ಬಲಿಷ್ಠವಾಗಿರಬಹುದೆ?

ಅಸಂಖ್ಯಾತ ಐತಿಹಾಸಿಕ ಕೃತಿಗಳ ಮತ್ತು ಸೋವಿಯೆತ್ ಜನರ ನೈತಿಕ ನಿರ್ಣಯಗಳ ಆಧಾರದ ಮೇಲೆ ಬೆಳೆದು ವಿಕಾಸಗೊಳ್ಳುತ್ತಿರುವ ಹಾಗೂ ಮನುಷ್ಯ ಪೃದಯದ ಸಂಕೀರ್ಣ ಮಾನಸಿಕ ಪ್ರಕ್ರಿಯೆಯನ್ನೂ, ಪರಿವರ್ತನೆಗಳನ್ನೂ ಪ್ರತಿಬಿಂಬಿಸುತ್ತಿರುವ ಸಮಕಾಲೀನ ಸೋವಿಯೆತ್ ಕಾದಂಬರಿಯು ಅನೇಕ, ವಿದೇಶೀ ಕಲಾವಿದರಿಗೆ ಆಸಕ್ತಿಕರವಾದ ಸಮಸ್ಯೆಗಳನ್ನೂ ನಿರ್ಲಕ್ಷಿಸುವುದಿಲ್ಲ. ಈ ಸಮಸ್ಯೆಗಳನ್ನು ಭಾಗಶಃ ಸಾಹಿತಿಗಳ ಚರ್ಚೆಯಲ್ಲಿ ಮತ್ತು ಪ್ರತ್ಯಕ್ಷವಾಗಿ ಸೋವಿಯೆತ್ ಕಾದಂಬರಿಕಾರರ ಸೃಷ್ಟಾತ್ಮಕ ಕೃತಿಗಳಲ್ಲಿ ಬಿಡಿಸಲಾಗುತ್ತಿರುತ್ತದೆ. ಗಣ್ಯ ಸೋವಿಯೆತ್ ಕಾದಂಬರಿಕಾರರಲ್ಲಿ ಒಬ್ಬರೆನಿಸಿರುವ ಲೆವೋನೀದ್ ಲೆವೊನೋವ್ ಅವರು ಈ ಸಾಹಿತ್ಯ ವ್ಯಾಪಾರದ ನಿರಂತರ ಜೀವನದ ಬಗ್ಗೆ ಮಾತನಾಡುತ್ತ ಇದು, ಹಳೆಯ ಹಳಸಲಾಗುತ್ತಿದೆಯೆಂಬ ವಾದವನ್ನು ತಿರಸ್ಕರಿಸಿದರು ಹಾಗೂ ಜೀವನದ ಬಗ್ಗೆ ಮಾನವ ಚರಿತ್ರೆಯ ಬಗ್ಗೆ, ಶ್ರದ್ಧಾಪೂರ್ವಕವಾದ ಮನೋಭಾವವನ್ನು (ಇತಿಹಾಸದಲ್ಲಿ ಕೆಲವೊಂದು ತಿಗುವುಗಳು ಆದೆಷ್ಟೆ ದುರಂತಕಾರಿಯೂಗಿದ್ದರೂ ಸಹ) ಬೆಳೆಸಿಕೊಳ್ಳಬೇಕೆಂದು ಹೇಳಿದರು. ಅವರು ಆಡಿದ ನುಡಿ ಹೀಗಿದೆ: "ಆಗ ಮಾತ್ರ ನಾವು ಸುಂದರವಾದುದನ್ನೂ, ಅಮರ ಮಾನವ ವಿಷಯವನ್ನೂ ಸಾಹಿತ್ಯದಿಂದ ದೂರಿಸುವುದಿಲ್ಲ, ಕಲಾವಿದನ ಪ್ರತಿಭೆಗೆ ಏಕೈಕ ಮಾನದಂಡವೆಂದರೆ ಇಂಥ ಬೆಳವಣಿಗೆಯ ಸಾಮರ್ಥ್ಯವೇ ಆಗಿದೆ."

ಮಾನವತಾವಾದವನ್ನು ಪ್ರಚುರಗೊಳಿಸಬೇಕಾಗಿರುವುದೂ ಮತ್ತು ಮನುಷ್ಯನಲ್ಲಿ ಮನುಷ್ಯತ್ವವನ್ನು ಕಾಪಾಡುವ ಕಲಾವಿದನ ಹೊಣೆಗಾರಿಕೆಯನ್ನು ತೋರಿಸಿಕೊಡಬೇಕಾಗಿರುವುದೂ ಎಂದರೆ ಕಾದಂಬರಿಯೆ ಆಗಿದೆಯೆಂದು ಉಕ್ರೇನಿಯದ ವಿಮರ್ಶಕರಾದ ಲೆವೊನೀದ್ ನೋವಿಚೆಂಕೊ ಹೇಳುತ್ತಾರೆ. ಯಥಾರ್ಥವಾದ ಪಾತ್ರಗಳನ್ನೂ, ಮಾನವನ ಧೀಮಂತ ಪ್ರಯತ್ನಗಳ ಮತ್ತು ಈ ಚರಿತ್ರೆಯ ನಿರ್ಮಾಪಕನ ಚಿತ್ರಣದ ವಿಷಯವನ್ನೂ ಬಿಟ್ಟುಕೊಟ್ಟು, ಸಾಮಾಜಿಕ ಮತ್ತು ಐತಿಹಾಸಿಕ ಯಥಾರ್ಥತೆಯ ವಿಚಾರಗಳನ್ನು 'ಶುದ್ಧಗೊಳಿಸಲು' ಯತ್ನಿಸುವ ಹಾಗೂ ಸಾಹಿತ್ಯ ನಾಯಕರನ್ನು ಛಾಯೆಗಳನ್ನಾಗಿಸುವ, ಅಸ್ಪಷ್ಟ ನೆರಳುಗಳನ್ನಾಗಿಸುವ, ಒಂದು ತರಹ ಗಣಿತ ಯಂತ್ರಗಳನ್ನಾಗಿಸುವ ಈ ಪಾಶ್ಚಾತ್ಯ ಸಾಹಿತ್ಯಕ್ಕೆ ಪ್ರತಿಯೊಗಿ ಸಮಕಾಲೀನ ಸೋವಿಯೆತ್ ಸಾಹಿತಿಗಳು ಗತಿಶೀಲದ ಹಾಗೂ ದ್ವಂದ್ವ ಸಂಕೀರ್ಣ ಜೀವನದ ಸ್ಪಷ್ಟವಾದ ಚಿತ್ರವನ್ನೂ. ಉಸಲ್ ಪಾತ್ರಗಳನ್ನೂ ಜನರ ಮತ್ತು ವ್ಯಕ್ತಿಗಳ ನಿಜವಾದ ಕಾರ್ಯಗಳನ್ನು ಪ್ರತಿಪಾದಿಸುವಂಥ ವಿಷಯ—ವಸ್ತುಗಳನ್ನೂ ಮುಂದಿಡುತ್ತಾರೆ. "ಜಗತ್ತು ಹೇಗಿದೆಯೊ ಹಾಗೇ—ಅದರ ಬಣ್ಣಗಳು, ನೆರಳುಗಳು, ದ್ವನಿಗಳು—ಅದನ್ನು ನಾವು ಪೆಚ್ಚಿಕೊಳ್ಳುತ್ತೇನೆ ಮತ್ತು ಹಾಗಿರುವುದೂ ಸಮಗೆ ಅಗತ್ಯವಾಗಿದೆ. ಮನುಷ್ಯ ನಮಗೆ ತುಂಬಾ ಪ್ರಿಯನಾಗಿದ್ದಾನೆ. ಆದರೆ 'ಸಂಕೇತ'ವಾಗಿಯಲ್ಲ. ಬದಲು, ನಾನೆಲ್ಲರೂ ನಾಸಿಸುವ ಸಮೂಹದ ನಿಜವಾದ ಸದಸ್ಯನಾಗಿ, ಜೀವನ ಋಚಿತವಾದ ಐತಿಹಾಸಿಕ ಪ್ರತಿನೆಯನ್ನು ನೆಚ್ಚಿಕೊಳ್ಳುತ್ತೇವೆ' ಎಂದು ನೋವಿಟೆಂಕೊ ಹೇಳುತ್ತಾರೆ.

ಐತಿಹಾಸಿಕ ಯಥಾರ್ಥವಾದ. ಈ ವ್ಯಾಕಾರದ ಪಾರಂಪರಿಕ ಹಾಗೂ ನೈಜ ಸ್ವಭಾವಕ್ಕೂ ನಿಷ್ಠೆ, ಹೊಸ ಅಭಿವ್ಯಕ್ತಿ ಸಾಧನೆಗಳ ಬಗ್ಗೆ ತೀವ್ರವಾದ ಆನ್ವೇಷಣೆ ಮುಂತಾದುವು ಇತ್ತೀಚಿನ ವರ್ಷಗಳಲ್ಲಿಯೆ ಹಲವಾರು ಸೋವಿಯೆತ್ ಕಾದಂಬರಿಗಳಲ್ಲಿ ಕಂಡುಬರುತ್ತಿರುವ ವಿಶೇಷ ಲಕ್ಷಣಗಳಾಗಿವೆ.

ಸಮಕಾಲೀನ ಸೋವಿಯೆತ್ ಕಾದಂಬರಿ ಬೆಳವಣಿಗೆಯ ಕೆಲವೊಂದು ಮುಖಗಳು ಸಂಕೀರ್ಣವಾಗಿವೆ. ನಾವು ಆಗಾಗ ಇಂಥ ಅಭಿಪ್ರಾಯಗಳನ್ನು ಕೇಳುತ್ತಿರುತ್ತೇವೆ: ನಮ್ಮ ಕಾಲದಲ್ಲಿ ಸಮಯವು ಹೆಚ್ಚೂ ಕಡಿಮೆ ಆಸ್ಫೋಟಕ ಮಟ್ಟಕ್ಕೆ ಸಂಕುಚಿತಗೊಂಡು ಕಂಪನದಿಂದ ಅಡಿಪ್ಪು ಭರದಿಂದ ಸಾಗುತ್ತಿದೆಯೆಂದರೆ, ಪಾರಂಪರಿಕ ಕಾದಂಬರಿಯು ಆದರೊಂದಿಗೆ ಸರಿಜೋಡಿಯಾಗಿ ಹೆಜ್ಜೆಹಾಕಲಾರದು, ಕಾದಂಬರಿಯು ಹೆಚ್ಚು ಹೆಚ್ಚಾಗಿ ತನ್ನ ಸಂಸ್ಪರ್ಶಾಯವಾದವನ್ನು ತೋರಿಸಿಕೊಳ್ಳುತ್ತಿದೆ, ಸಮೂಚಾರಗಳ ಜಡಿಮಳೆಗೆ ಸಿಲುಕಿರುವ ನಮ್ಮ ಬಾಳುವೆಗೆ ಆದರ ಪ್ರತಿಕ್ರಿಯೆಯು ತೀರ ಮಂದವಾಗಿದೆ. ಸಮಕಾಲೀನ ನೇಗಕ್ಕೆ ಕಾದಂಬರಿಯು 'ತಡೆ' ಹಾಕುತ್ತದೆಯೆಂದೂ, ಪ್ರತ್ಯಕ್ಷ ನಿಜವಾದ ಸಮೂಚಾರವನ್ನು 'ಹೂಳು'ತ್ತದೆಯೆಂದೂ ಅವರು ಆಪಾದಿಸುತ್ತಾರೆ. ಹೊಸ ಅಭಿವ್ಯಕ್ತಿಗೆ ಸಾಧನಗಳು, ಜೀವಂತ ಪಾತ್ರಗಳಿಗೆ ಬದಲು 'ಗಣಿತ ಕಸರತ್ತಿನ' ಶೈಲಿ ಮತ್ತು 'ಪ್ರಜ್ಞಾವಾಹಿನಿ' ಇತ್ಯಾದಿಗಳು ಸಾಕು. ಈ ವಸ್ತುನಿಷ್ಠ ಜಗತ್ತಾಗಲೀ, ರಕ್ತ—ಮಾಂಸಗಳು ತುಂಬಿದ ಪಾತ್ರಗಳಾಗಲೀ ಯಾವುದೂ ಬೇಕಿಲ್ಲ.

ಪರಿವರ್ತನೆ ಮತ್ತು ನವೀಕರಣಗಳ ಸಂಬಂಧಕರಣದ ಸಮಸ್ಯೆಗಳನ್ನು ಪ್ರಸ್ತಾಪಿಸುತ್ತ ಲೆವೊನೀದ್ ಲೆವೋನೋವ್ ಅವರು ತಮ್ಮ ಒಂದು ಸಂದರ್ಶನದಲ್ಲಿ ಹೀಗಂದಿದ್ದರು: "ನಾವು ಈ ಹಿಂದೆ ಬರೆದಂತೆ ಇಂದು ಕಾದಂಬರಿಗಳನ್ನು ಬರೆಯಲಾರೆವು. ಆ ಧರಪಲ್ಲಟಗಳಿಂದಾಗಲಿ, ಗತ್ತುಗಾರಿಕೆಯ ಅನಾರ್ಥಗಳಿಂದಾಗಲಿ ನಾವೀನ್ಯತೆಯುಂಟಾಗುವುದಿಲ್ಲ. ಇನ್ನಿಷ್ಟು ವಿಶಾಲವಾದ ಆ ಧರದಿಂದ ಮಾತ್ರವೇ ಕಾದಂಬರಿಗೆ ನಿಜವಾದ ನಾವೀನ್ಯತೆಯು ಉಂಟಾಗುತ್ತದೆ.

ಕಾದಂಬರಿಯ ಪಾತ್ರಗಳು—ಅವುಗಳ ನೈವಿಧ್ಯತೆ. ಇಂದು ಘಟಿಸುತ್ತಿರುವ ಸಂಕೀರ್ಣವಾದ ಆತ್ಮಿಕ ವ್ಯಕ್ತಿಯೆಗಳನ್ನು ಸಂಜಯಿಸಿಕೊಂಡು ಪ್ರಕಟಗೊಳಿಸುವ ಅಭೆಗಳ ಸಾಮರ್ಥ್ಯ—ಇವುವೇ ಕಾದಂಬರಿ ವ್ಯಾಕಾರದ ವೃದ್ಧತೆಗೆ ಮುಖ್ಯ ಮೂಪನವಾಗಿವೆ. "ನನ್ನು ಕಾಲಕ್ಕೆ ಹಿಂಕೆ ಬೀಳಲಾಗುತ್ತಿದೆ" ಯೆಂದು ಹೇಳಲಾಗುವ ಈ ಸಾಹಿತ್ಯ ವ್ಯಾಕಾರವು, ಕಾದಂಬರಿಯು, ತಾನು ಚಿತ್ರಿಸುವ ಪಾತ್ರಗಳ ಮೂಲಕ, ಹೆಚ್ಚು ಸಂಕೀರ್ಣವಾಗುತ್ತಿರುವ ಸಮೂಚಾರ ಪ್ರವಾಹದೊಂದಿಗೆ ಸರಿಜೋಡಿಯಾಗಿ ಮೂತ್ರವೇ ನಿಲ್ಲುವುದಿಲ್ಲ. ಜೀವನದ ಬಗ್ಗೆ ಹೊಸ ಹೊಸ ನಿಜವಾದ ಮೂಹಿತಿಗಳೊಡನೆ ವಿಜ್ಞಾನಿಯ ಬುದ್ಧಿ ಮನಸ್ಸುಗಳನ್ನೂ ಮತ್ತಿಷ್ಟು ಶ್ರೀಮಂತಗೊಳಿಸಲೂ ಶಕ್ತವಾಗಿದೆ.

ಸೋವಿಯತ್ ಕಾದಂಬರಿಯು ತನ್ನ ಬೆಳವಣಿಗೆಯ ಕಾಲದಲ್ಲಿ, ವಾಸ್ತವಿಕತಾವಾದದ ವಿಧಾನಗಳನ್ನೇ ಆಧರಿಸಿಕೊಂಡು ಹೊಸ ಹೊಸ ವಿಷಯಗಳನ್ನು ಎತ್ತಿಕೊಳ್ಳುತ್ತ ದೆಯೆನ್ನುವುದರಲ್ಲಿ ಮನುಷ್ಯ ಜೀವನದ ಮೂಲ ಸಮಸ್ಯೆಗಳನ್ನು ಬಿಡಿಸುತ್ತದೆಯೆನ್ನುವುದರಲ್ಲಿ ಸಂದೇಹವೇ ಇಲ್ಲ. ವಾಸ್ತವಿಕತೆಯನ್ನು ತಿರಸ್ಕರಿಸುವುದರಿಂದ, ಈ ಐಚಿತ್ಯ ಸ್ಪಷ್ಟ ಐತಿಹಾಸಿಕ ಸಾಮಗ್ರಿಯನ್ನು ತಿರಸ್ಕರಿಸುವುದರಿಂದ ಮನೋವೈಜ್ಞಾನಿಕ ವೈಪರೀತ್ಯಗಳಿಂದ, ಪಾತ್ರಗಳನ್ನು ಕೇವಲ ಗಣಿತಯಂತ್ರಗಳನ್ನಾಗಿ ಮೂಡುವುದರಿಂದ, ಚಿತ್ರಣ ಶ್ರೇಣಿಯನ್ನು ಹಿಂಡಿ ಕಿರಿದು ಗೊಳಿಸುವುದರಿಂದ, ಕಾಲಮಿತಿಯ ಬದಲಾವಣೆಗಳಿಂದ ಕನಸಿನ ಅಥವಾ ಸುಪ್ತ ಪ್ರಜ್ಞೆಯ ಹೆಲವು ಕ್ಷಣಗಳನ್ನು ಹಿಡಿದು ತೋರಿಸುವುದರಿಂದ ಅದು ಹೆಚ್ಚು ಗಾಢವಾದ ಅರ್ಥವನ್ನು ಪಡೆಯುವುದಿಲ್ಲ. ಅದು ತನ್ನ ಪಾತ್ರವನ್ನು ವಿಕಾಸಗೊಳಿಸಿ ಕೊಳ್ಳುವ ಮೂಲಕ ಮತ್ತು ತನ್ನ ಸುತ್ತಣ ಜಗತ್ತಿನ ಇಡೀ ನೈನಿಧ್ಯತೆಯನ್ನು ಪ್ರತಿಬಿಂಬಿಸುವ ಮೂಲಕ ಮೂತ್ರವೇ ವಿಶಾಲಾರ್ಥವನ್ನು ಪಡೆಯುತ್ತದೆ.

ಕಾದಂಬರಿಯು ಎಂದೆಂದಿಗೂ ಇರುತ್ತದೆ. ನಮ್ಮ ಉನ್ನತ ಆಕಾಂಕ್ಷೆಗಳ ಗುರಿಯಾಗಿರುವ, ಮನುಷ್ಯ ಚರಿತ್ರೆಯ ಆಚೆ ದೂರವ ದಿಗಂತಗಳಿಗೂ ಅದು ಕೂಡ ಹಂಬಲಿಸುತ್ತದೆ.

●●

ಹಳ್ಳಿಗಳಲ್ಲಿ ಕುಟುಂಬ ಯೋಜನೆಯ ಜನಪ್ರಿಯತೆ

ಒನ್ಮೈಲೆ ನಂಬುವುದು ಅಸಾಧ್ಯವಾಗಬಹುದು. ಆದರೆ ಇದು ಸತ್ಯ ಸಂಗತಿ. ಜಲಂಧರ್ ನಗರಪ್ರದೇಶಕ್ಕಿಂತ ಆ ಸುತ್ತಮುತ್ತಲಿರುವ ಹಳ್ಳಿಗಳಲ್ಲಿ ಕುಟುಂಬಯೋಜನೆ ಇಂದು ಹೆಚ್ಚು ಜನಪ್ರಿಯವಾಗಿದೆ. ಇತ್ತೀಚೆಗೆ ಆಕಾಶವಾಣಿಯವರು ನಡೆಸಿದ ಸಮೀಕ್ಷೆಯಿಂದ ಈ ಸಂಗತಿ ವ್ಯಕ್ತವಾಗಿದೆ. ಜಲಂಧರ್‌ನಲ್ಲಿ ಕುಟುಂಬಯೋಜನೆ ಅನುಸರಿಸುತ್ತಿರುವರಲ್ಲಿ ಶೇಕಡಾ 41 ನಗರ ಜನತೆ ಹಾಗೂ ಶೇಕಡಾ 59ರಷ್ಟು ಗ್ರಾಮೀಣ ಜನತೆ ಇದ್ದಾರೆ. ಆಕಾಶವಾಣಿ ನಡೆಸಿದ ಸಮೀಕ್ಷೆಯಲ್ಲಿ ಒಟ್ಟು 500 ಮಂದಿಯನ್ನು ಸಂದರ್ಶಿಸಲಾಯಿತು. ಆದರಲ್ಲಿ 300 ಮಂದಿ ಜಲಂಧರ್ ನಗರವಾಸಿಗರು ಹಾಗೂ ಉಳಿದ 200 ಮಂದಿ ಆ ಜಿಲ್ಲೆಗೆ ಸಮೀಪವಿರುವ ಮಾಜಾರಾ ಹಳ್ಳಿಯವರು ಸೇರಿದ್ದಾರೆ. ನಗರದ ಶೇಕಡಾ 90ರಷ್ಟು ಜನ ಕುಟುಂಬ ಯೋಜನೆಯ ಬಗ್ಗೆ ತಿಳಿದಿದ್ದಾರೆ ಎಂಬುದೂ ಈ ಸಮೀಕ್ಷೆಯಿಂದ ತಿಳಿದುಬಂದಿದೆ. ಕುಟುಂಬಯೋಜನೆಯ ಬಗ್ಗೆ ತಿಳಿಯಲು ತಮ್ಮ ಮಿತ್ರರು ಹಾಗೂ ನೆಂಟರಿಷ್ಟರಲ್ಲಿನೆ ರೇಡಿಯೋ ಕೊಡುಗೆಯೂ ಪ್ರಭಾವನ ಸಾಧನೆ ಎಂಬುದಾಗಿ ಸಂದರ್ಶನ ನೀಡಿದವರು ತಿಳಿಸಿದ್ದಾರೆ. ಶೇಕಡಾ 68ರಷ್ಟು ಮಂದಿ ಹೂರು ಮಕ್ಕಳ ಕುಟುಂಬವನ್ನು ಬಯಸಿದ್ದಾರೆ. ಎರಡು ಗಂಡು ಒಂದು ಹೆಣ್ಣು ಇದ್ದರೆ ಆನುಕೂಲ ಎಂಬುದರಲ್ಲಿ ಅವರ ವಿಶ್ವಾಸ.

ನಿರೋಧ, ವಾಸಕ್ಟಮಿ ಶಸ್ತ್ರಚಿಕಿತ್ಸೆ, ಲೂಪ್ ಧರಿಸುವುದು. ಇವು ಕುಟುಂಬಯೋಜನೆ ಅನುಸರಿಸುವಲ್ಲಿ ಸುಧಾರಿತ ಸಾಧನಗಳೆಂಬುದು ಅವರ ನುಡಿ. ●

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore—27.

Phone No.— 1 72304 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಯೂಹ್ಯಾಖಾನರು ಇತಿಹಾಸ ನಿರ್ಮಿಸಿದರು

(ಐದನೇ ಪುಟದಿಂದ)

ಶ್ಚಿಯವಾದಂತಾಗಿದೆ. ಅಮೆರಿಕೆಯು ಪಾಕ್ ಪರ ನೀತಿಯನ್ನಷ್ಟೇ ಅಲ್ಲ ಸಿದ್ಧ ಪಡಿಸಿ ಸಮಸ್ಯೆಯನ್ನು ವಿಶ್ವ ಸಂಸ್ಥೆಯ ಸಾಮಾನ್ಯಾಧಿವೇಶನದ ಮುಂದೆ ತಂದಿತು.

ವಿಶ್ವ ಸಂಸ್ಥೆಯಲ್ಲಿ ೧೩೧ ಸದಸ್ಯರು. ಇವರಲ್ಲಿ ಹೆಚ್ಚಿನವರು ತಟಸ್ಥರಾಗಿ ಉಳಿಯಬಹುದು; ಏಕೆಂದರೆ, ವಿಶ್ವ ಸಂಸ್ಥೆಯ ಈ ಗೊತ್ತುವಳಿ ಯಾರಿಗೂ ಬಂಧನಕಾರಿಯಲ್ಲ. ಬಂಗ್ಲಾ ದೇಶಕ್ಕೆ ಮನ್ನಣೆ ನೀಡಿರುವ ಭಾರತವನ್ನು ಅಪರಾಧಿಯೆಂದು ಹೆಸರಿಸಿದರೂ ಭಾರತ ಅದಕ್ಕೆ ಸೊಪ್ಪು ಹಾಕುವುದಿಲ್ಲವೆಂಬುದು ಜಗಜ್ಜನಿತ. ಬಂಗ್ಲಾ ದೇಶವೆಂದೋ ಉದಯವಾಗಿದೆ;ಅದಕ್ಕೆ ಮನ್ನಣೆಯೂ ಕೆಲವರಿಂದ ದೊರೆತಿದೆ. ಅದು ಸಾಯುವುದಕ್ಕೆ ಹುಟ್ಟಿಕೊಂಡ ದೇಶವಲ್ಲ. ಬದುಕುವುದಕ್ಕಾಗಿ ಜನ್ಮತಳೆದ ರಾಷ್ಟ್ರ. ಅದನ್ನು ಅಲ್ಲಗಳೆಯುವುದರಿಂದ ತತ್ಕಾಲಕ್ಕೆ ಪಾಕಿಸ್ತಾನ ಮತ್ತು ದರ ಪ್ರಬಲ ಮಿತ್ರರನ್ನು ಪ್ರಸನ್ನೀಕರಿಸಬಹುದಷ್ಟೆ. ವಿಷ್ಯಾದಲ್ಲಿನ ಗಾಳಿಯೆತ್ತ ಬೀಸುತ್ತಿದೆಯೆಂಬುದನ್ನು ಜೆನ್ನಾಗಿ ಅರಿತಿರುವವರು ಗೊತ್ತುವಳಿಯನ್ನು ಖಂಡಿಸುತ್ತಾರೆ; ಆದನ್ನು ತಿಳಿದುಕೊಳ್ಳಲು ಆನಾಸಕ್ತರು ತಟಸ್ಥರಾಗಿ ಉಳಿಯುತ್ತಾರೆ. ಉಳಿದವರು ಕೈಯೆತ್ತುತ್ತಾರೆ.

ಧೈವಾನವನ್ನು ಉಳಿಸಿಕೊಂಡೇ ಕೆಂಪು ಚೀನಕ್ಕೆ ಪ್ರವೇಶ ದೊರಕಿಸಿ ಕೊಡುವ ಅಮೆರಿಕೆಯ ಪ್ರಯತ್ನ ಸಂಪೂರ್ಣ ವಿಫಲವಾಗಿ ಹೋದುದನ್ನು ನಾವಿಲ್ಲಿ ನೆನಪಿಸಬಹುದು. ತನ್ನ ಸಂಪತ್ತಿನಿಂದಾಗಲೀ ವಿದೇಶ ನೆರವಿನ ಬಾರಿ ಮೊತ್ತದಿಂದಾಗಲೀ. ಸೈನಿಕ ಬಲದಿಂದಾಗಲೀ ಯಾವುದೇ ದೇಶವನ್ನು ತನ್ನ ಮುಷ್ಟಿಯಲ್ಲಿಟ್ಟುಕೊಳ್ಳ ಬಹುದೆಂದು ಅಮೆರಿಕೆ ಬಯಸಿದ್ದರೆ ಆದರ ಭ್ರಮೆ ನಿರಸನವಾಗ ತೊಡಗಿದೆ. ಸಹಾಯವು ನಿಸ್ವಾರ್ಥವಾಗಿದ್ದರೆ ಮಾತ್ರ ಅದು ಅತ್ಯಂತ ಉಪಾದೇಯವಾಗುತ್ತದೆ. ●●

ನೋಟೀಸು

ಕುಂದಾಪುರ ಮು. ಕೋರ್ಟಿನಲ್ಲಿ

S. C. 132/71.

ವಾದಿ— ಕೃಷ್ಣಪ್ಪ ಸೆಟ್ಟಿ.
ಪ್ರತಿವಾದಿರು— ರಾಮಯ್ಯ ಸೆಟ್ಟಿ.

2ನೆ ಪ್ರತಿವಾದಿಗೆ ಯಾ ಮೂಲಕ ತಿಳಿಸುವ ದೇನೆಂದರೆ.

2ನೆ ಪ್ರತಿವಾದಿ ಜಗನ್ನಾತ ಸೆಟ್ಟಿ. ಹಾಡಿಮನೆ ಕೊರಗು ಸೆಡ್ತಿ ಮಗ, ಕುಂದಾಪುರ ತಾಲ್ಲು ಉಪ್ಪುಂದ ಗ್ರಾಮಸ್ಥ.

ವಾದಿಯು ನಿಮ್ಮ ವಸ್ತೆರೆರ ಮೇಲೆ ಮೇಲ್ಕಂಡ ದಾವೆಯಂನು ಮೇಲ್ಕಂಡ ಕೋರ್ಟಿನಲ್ಲಿ ದಾಕಲು ಮಾಡಿರುತ್ತಾನೆ. ಸದ್ರಿ ದಾವೆಯು ತಾರೀಕು 24-1-1972ಕ್ಕೆ ತಪ್ಪಿಗೆ ಯಿಟ್ಟಿರುವುದರಿಂದ ಸದ್ರಿ ದಾವೆಯಲ್ಲಿ ನಿಮ ಕಡೆಯಿಂದ ಯೇನಾದರೂ ಉದಾಹರಣೆ ದಾಕಲು ಮಾಡುವದು ಯಿದ್ದ ಪಕ್ಷಚಲ್ಲಿ ಸದ್ರಿ ತಾರೀಕಿನ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜಾಹೀರು ಮಾಡಿಕೊಳ್ಳ ತಕ್ಕದ್ದು. ಯದಕ್ಕೆ ತಪ್ಪಿದಲ್ಲಿ ನಿಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯಂನು ಕೇಳಿ ಏಸಲು ಮಾಡೋಣಾ ದೀತೆಂತ ಯಿ ಮೂಲಕ ತಿಳಿಸೋಣಾಗುತ್ತದೆ.

M. Madhava Rao.
Advocate for Plff.

ಕುಂದಾಪುರ, ತಾರೀಕು. 6-12-71.

ಡಿಲ್ಲಿಯ ಡೋಲು, ಹಳ್ಳಿಯ ಹಾಡು

ಇಂದಿರಾ ಪ್ರಿಯದರ್ಶಿನಿಯವರು ಬಿಳಿ ಪಾರಿವಾಳದಂತೆ ಹಾರಾಡುತ್ತ ವಿಶ್ವಪರ್ಯಟನ ಮಾಡಿಕೊಂಡು ಹಿಂತಿರುಗಿದರು. ಅವರು ಪಾಕಿಸ್ತಾನಿ ಪಿಶಾಚಿ ಪೀಡೆಯ ಕುರಿತು ಪ್ರಚಾರ ನಡೆಸಿ ಬಂದರು ಸ್ಫೋಟಕ ಪರಿಸ್ಥಿತಿಯುಂಟಾಗಿದೆಯೆಂದು ಅವರು ಅಲ್ಲಿ ಅಂದಿರುವರು....

ಭಾರತದಲ್ಲಿ ಬಂದಿಳಿದರನರು. ಇಲ್ಲಿ ಒಗ್ಗಟ್ಟಿನ ಕುರಿತು ಮಾತಿನ ಪ್ರವಾಹ ಹರಿಸಿದರು. ಇದರಿಂದಲೇ ಎಲ್ಲಾ ಸಮಸ್ಯೆಗಳು ಬಗೆಹರಿಯುವು, ತಾವು ಬೇಕಾದಂತೆ-ಇಷ್ಟ ಬಂದಂತೆ ವರ್ತಿಸಬಹುದೆಂದು ಅವರ ಅನುಸಾರಕರು ತಿಳಿದುಕೊಂಡರು ...

ಪಶ್ಚಿಮ ರಾಷ್ಟ್ರಗಳ ದಿಗ್ವಿಜಯ ನಡೆಸಿ ಬಂದಾಗ ಇಂದಿರಾ ಗಾಂಧಿಯವರಿಗೆ ಅವರ ಅನುಸಾರಕರು ಅದೇನಾದರೂ ಅರ್ಪಿಸಬೇಡವೇ? ಏನನ್ನು ಅರ್ಪಿಸುವದು? ಪ್ರಶ್ನಾರ್ಥಕ ಚಿನ್ಹೆ ಅವರೆದುರು ನಿಂತಿತು. ಆಗ ಅವರಿಗೆ ನಮ್ಮ ರಕ್ಷಣಾಮಂತ್ರಿ ಜಗಜೀವನರಾಮರ ಪೌರುಷಪೂರ್ಣ ಭಾಷಣ ಜ್ಞಾಪಕಕ್ಕೆ ಬಂತು— ಈ ಸಲ ಯುದ್ಧವಾದಲ್ಲಿ ಸಮರಾಂಗಣ ಪಾಕಿಸ್ತಾನದಲ್ಲಿರುತ್ತದೆ. ರಾವಲ್‌ಪಿಂಡಿ-ಲಾಹೋರ್-ನಮ್ಮ ಸೇನೆ ಒಳನುಗ್ಗುತ್ತದೆ. ಗೆದ್ದ ಪ್ರದೇಶಗಳನ್ನು ಹಿಂದಕ್ಕೆ ಬಿಟ್ಟುಕೊಡುವದಿಲ್ಲ.' ನಾವೂ ಗೆದ್ದುಕೊಳ್ಳ ಬೇಡವೇ? ಹಿಂದಕ್ಕೆ ಬಿಟ್ಟುಕೊಡಬಾರದು. ಇಂದಿರಾದೇವಿಯವರಿಗೆ ಅದನ್ನು ಅರ್ಪಿಸಬೇಕು. ಡಿಲ್ಲಿಯ ಕಾಂಗ್ರೆಸ್ಸ್ ಕಲಿಗಳು ಕಲೆತರು. ಡಿಲ್ಲಿಯಲ್ಲಿ ಡೋಲಿನ ಶಬ್ದ ಕೇಳಿ ಬಂತು. ಆದುವರೆಗೂ ಜಂತರ ಮಂತರಿನಲ್ಲಿರುವ ಕಾಂಗ್ರೆಸ್ಸ್ ಕಾರ್ಯಾಲಯವು ಹಳೆ ಕಾಂಗ್ರೆಸ್ಸಿನ ವಶದಲ್ಲಿತ್ತು. ಅದನ್ನು ಗೆದ್ದು ಇಂದಿರಾಜೀಯವರಿಗೆ ಅರ್ಪಿಸಿದಲ್ಲಿ ತಮಗಿಂತ ಉತ್ತಮ ನಂಬಿಗಸ್ಥ ಅನುಸಾರಕರು ಬೇರೆಯೂ ರಿರುತ್ತಾರೆ? ಯೋಜನೆ ಯೋಜನೆಯ ರೂಪ ತಳೆಯಿತು. ಹೊಸ ಕಾಂಗ್ರೆಸಿಗರು ಕಾಂಗ್ರೆಸ್ಸ್ ಕಾರ್ಯಾಲಯಕ್ಕೆ ಮುತ್ತಿಗೆ ಹಾಕಿದರು. ಅದನ್ನು ವಶಪಡಿಸಿಕೊಂಡರು. ಒಳಗಿದ್ದವರನ್ನು ಹೊರದಬ್ಬಿದರು. ಕಾರ್ಯಾಲಯವನ್ನು ತಮ್ಮ ಕಾಲಡಿಯಲ್ಲಿಟ್ಟುಕೊಂಡರು. ಸೂಚ್ಯವಾಗಿ ಜಗಜೀವನರಾಮರು ಇದನ್ನೇ ಹೇಳಿದ್ದರೋ ಏನೋ! ಅಥವಾ ಅವರ, ತಮ್ಮ ಸ್ವ ಭಾವಕ್ಕನುಸಾರವಾಗಿ ಮುರೆತು ಪಾಕಿಸ್ತಾನವೆಂದು ಹೇಳಿರಬಹುದು. ಪಾಕಿಸ್ತಾನ ಗಡಿ ಪ್ರದೇಶದಲ್ಲಿ ಗುಂಡು ಹಾರಿಸುತ್ತಿರುವಾಗ ಹೊಸ ಕಾಂಗ್ರೆಸ್ಸ್ ಕಾರ್ಯಕರ್ತರು ಹಳೆಯ ಕಾಂಗ್ರೆಸ್ಸಿಗರ ವಶದಲ್ಲಿದ್ದ ಕಾಂಗ್ರೆಸ್ಸ್ ಕಾರ್ಯಾಲಯವನ್ನು ಆಕ್ರಮಿಸಿಕೊಂಡರು, ಗೆದ್ದುಕೊಂಡರು. ಅವರು ತಾವು ಗೆದ್ದೆವೆಂದು ವಿಜಯ ಡೋಲುಬಾರಿಸಿದರು.

ಹೊಸ ಕಾಂಗ್ರೆಸ್ಸಿಗರು ಸರ್ವೋಚ್ಚನ್ಯಾಯಾಲಯದ ತೀರ್ಪಿನತ್ತ ಬೆಟ್ಟುತೋರಿಸುತ್ತಿರುವಂತೆ ಹಳೆಯಕಾಂಗ್ರೆಸ್ಸಿಗರು ಆದರತ್ತನೇ ಲಕ್ಷವನ್ನೆಳೆಯುತ್ತಿದ್ದಾರೆ. ವಿಭಜನೆಯಪೂರ್ವ ಇದ್ದ ಜೋಡೆತ್ತುಗಳನ್ನು ವಿಭಜಿಸದೆ ಸರ್ವೋಚ್ಚ ನ್ಯಾಯಾಲಯವು ಹೊಸ ಕಾಂಗ್ರೆಸ್ಸಿಗೆ ಬಿಟ್ಟುಕೊಟ್ಟಿದೆ. ಸೊತ್ತಿನ ವಿಷಯದಲ್ಲಿ ಸ್ಥಳೀಯ ನ್ಯಾಯಾಲಯದ ಆದೇಶದಂತೆ ವರ್ತಿಸಬೇಕೆಂದು ಸರ್ವೋಚ್ಚ ನ್ಯಾಯಾಲಯ ಸ್ಪಷ್ಟವಾಗಿ ಸೂಚಿಸಿರುತ್ತದೆ. ನ್ಯಾಯಾಲಯದ ತೀರ್ಪಿಗೆ ಹೊಸ ಕಾಂಗ್ರೆಸ್ಸಿಗರೇತಕ್ಕೆ ತಲೆಬಾಗ್ಗಿ ನಡೆಯ ಬೇಕು? ಜೋಡೆತ್ತುಗಳು ಹಳೆಯ ಕಾಂಗ್ರೆಸ್ಸಿಗೆ ಸೇರಿದ್ದೆಂದು ನ್ಯಾಯಾಲಯ ಹೇಳುತ್ತಿದ್ದರೂ ಹೊಸ ಕಾಂಗ್ರೆಸ್ಸಿಗರು ಆದಕ್ಕೆ ಗೌರವವನ್ನು ಕೊಡುತ್ತಿರಲಿಲ್ಲನೆಂಬುದಕ್ಕೆ ಅವರ ವರ್ತನೆಯೇ ಸಾಕ್ಷಿ ಇದೆ. ಸರ್ವೋಚ್ಚ ನ್ಯಾಯಾಲಯವನ್ನೇ ಕಡೆಗಣಿಸುವವರು ಸ್ಥಳೀಯ ನ್ಯಾಯಾಲಯದ ಆದೇಶಕ್ಕಾಗಿ ಕಾಯುವದುಂಟೇನು? ಅದು ಅವರ ಗೌರವಕ್ಕೆ ಕುಂದಲ್ಲವೇ? ಹಾಗಿರುವದರಿಂದ ಸ್ಥಳೀಯ ನ್ಯಾಯಾಲಯಗಳಿಗೆ ತೊಂದರೆ ಕೊಡುವ ಬದಲು ಇಂದಿರಾ ಕಾಂಗ್ರೆಸ್ಸಿಗರು ಕಾರ್ಯಮಗ್ನರಾದರು. ಹೀಗೆ ಹೊಸ ಕಾಂಗ್ರೆಸ್ಸಿಗರು ಸರ್ವೋಚ್ಚ ನ್ಯಾಯಾಲಯವನ್ನು ತುಚ್ಛವಾದಿಂದ ಕಂಡಿರುತ್ತಾರೆ. ಇದು ದೇಶದೊಳಗಿನ ವಿಷಯ.

ಇಂದಿರಾಜಿಯವರು ತಮ್ಮ ಅನುಸಾರಕರ ವರ್ತನೆಯನ್ನು ಖಂಡಿಸುವ ಬದಲು ತಮ್ಮ ಅಮೂತ್ಯರ ಮೂಲಕ ಅದುವೇ ಸರಿಯೆಂದು ಸೂಚಿಸಿದ್ದಾರೆ ಈ ಭಯಾನಕ ಪರಿಸ್ಥಿತಿಯಲ್ಲಿ ಎಲ್ಲರೂ ಒಗ್ಗಟ್ಟಿನಿಂದಿರಬೇಕೆಂದು ಹೇಳುತ್ತಿರುವ ಇಂದಿರಾಜಿಯವರು ತಮ್ಮ ಅನುಸಾರಕರ ಮೂಲಕ ಕಾಂಗ್ರೆಸ್ ಕಾರ್ಯಾಲಯದ ಸುದ್ದಿಗೆ ಸದ್ಯ ಹೋಗದೆ ಇರುವದು ಹಾಗಿರಲಿ, ಅಲ್ಲಿ ಒಗ್ಗಟ್ಟಿನಿಂದ ಇರುವ ಬದಲು ಒಳಗಿದ್ದವರನ್ನು ಹೊರಗೆಸೆದು ಬಿಟ್ಟರು. ಇದು ಯಾವ ರೀತಿಯ ಒಗ್ಗಟ್ಟು? ಅವರ ಅರ್ಥದಲ್ಲಿ ಎಲ್ಲರೂ 'ಶರಣಂ ಇಂದಿರಾ' ವೆಂದು ಅವರೊಂದಿಗೆ ಒಗ್ಗಟ್ಟನಲ್ಲಿರಲು ಬೆರೆಯ ಬೇಕೆಂದಿರುತ್ತದೆ.

ಅನ್ಯರಾಷ್ಟ್ರಗಳು ಸುಲಭವಾಗಿ ಈ ಘಟನೆಗೆ ಬೆಲೆ ಕಟ್ಟದಿರಲಾರವು ಇದನ್ನು ಜೈನಾ ದುರುಪಯೋಗಪಡಿಸಿಕೊಳ್ಳದಿರಲಾರದು. ಐಕ್ಯ ರಾಷ್ಟ್ರ ಸಂಘದಲ್ಲಿ ಅದು ನಮ್ಮ ಮುಖಕ್ಕೆ ಮಸಿ ಬಳೆಯಲು ಹವಣಿಸಿ ಬಹುದು.

ಡಿಲ್ಲಿಯ ಡೋಲಿನ ಶಬ್ದಕ್ಕೆ ಸರಿಯಾಗಿ ಹಳ್ಳಿಯ ಹಾಡು ಕೇಳಿ ಬಂದಿರುತ್ತದೆ ಕೇರಳದ ಬಸ್ಸ್‌ಗಳು ಕರ್ನಾಟಕದೊಳಗೆ ಹೋಡುವು ಅಲ್ಲಿ ತಿರುಗಿಸಲು ಸಾಧ್ಯವಾಗದ ಕಾರಣ ಒಂದು-ಒಂದೂವರೆ ಫರ್ಲಾಂಗು ದೂರ ಕರ್ನಾಟಕದ ನೆಲದೊಳಗೆ ಅವು ಹೋದುವಂತೆ. ಕರ್ನಾಟಕದ 'ಕಡುಗಲಿ'ಗಳು ಅದನ್ನು ನೆರೆಹಿಡಿದರು. ಇಲ್ಲಿರುವ ಕಾನೂನಿನ ವಿಚಾರ....ಅಷ್ಟು ದೂರ ಹೋಗುವ ಅವಶ್ಯಕತೆ....ಯೋಚಿಸ ಬೇಕಾದ್ದೇ. ಆದರೆ ನೆರೆ ಹಿಡಿದದ್ದು ಯಾರ ಬಸ್ಸನ್ನು ಯಾಕೆಂಬುದು ಮುಖ್ಯ. ಕರ್ನಾಟಕದವರೂ ಭಾರತೀಯರೇ ಇದ್ದಾರೆ, ಕೇರಳದವರೂ ಭಾರತೀಯರೇ ಇದ್ದಾರೆ.

ಕಾಶ್ಮೀರದಲ್ಲಿ ಪಾಕಿ ವಿಮಾನ ಹಾರಾಟದ ಕುರಿತು ಲೋಕಸಭೆಯಲ್ಲಿ ವಾಗ್ವಾದ ನಡೆದಿತ್ತು. ಪಾಕಿ ವಿಮಾನ ಆಕ್ರಮಣ ನಡೆಸಿದಲ್ಲಿ ಅವನ್ನು ಹೊಡೆದು ಕೆಳಗಿಳಿಸಲಾಗುತ್ತದೆಂದು ಗಿಳಿಯಂತೆ ಜಗಜೀವನರಾಮರಾಯರು ಜಗಜಾಹಿರಗೊಳಿಸಿದ್ದಾರೆ. ಆದರೆ ಅದುವರೆಗೆ ಒಂದೇ ಒಂದು ವಿಮಾನವನ್ನುಕೆಳಗಿಳಿಸುವುದು ಹಾಗಿರಲಿ ಅತ್ತ ಗುಂಡುಕೂಡಾ ಹಾರಿಸಲಾಗಿರುವದಿಲ್ಲ. ಈಗ ಪರಿಸ್ಥಿತಿ ಒದಲಾಗಿದೆ ಆತ್ಮರಕ್ಷಣೆಗಾಗಿ ನಮ್ಮ ಸೇನೆಗಳು ಪಾಕೆನೊಳಗೆ ನುಗ್ಗಿವೆ.

ಈ ರೀತಿ ಡಿಲ್ಲಿಯ ಡೋಲು, ಹಳ್ಳಿಯ ಹಾಡಿಗೆ ಸರಿಯಾಗಿ ಪಾಕಿಖಾನರ ಪಿಶಾಚಿ ಕಬಂಧ ಭರದಿಂದ ಸಾಗುತ್ತಿವೆ. ಅದನ್ನು ತಡೆಗಟ್ಟಲು ಒಗ್ಗಟ್ಟು ಅತ್ಯಾವಶ್ಯಕ. ನಾವಿಂದು ಒಂದಾಗಿ ನಮ್ಮ ದೇಶ ರಕ್ಷಣೆಯಲ್ಲಿ ಏಕೀಭೂತರಾಗಬೇಕು

—ಶಿವಶಂಕರ.

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ಸ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಆಗ್ಫಾ ಕೊಡಕ್, ಇಲ್‌ಫೋರ್ಡ್ ಸೆನರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

CANARA BANK LIMITED,

Lighthouse Hill,
MANGALORE - 1.

NOTICE having been given of the loss of share certificate No. P. 863 in respect of 5 preference shares Nos. 21811—21815 (both inclusive) of the Bank standing in the joint names of (1) Mrs Vanajaxiamma; (2) Madhava; (3) Sitarama; (4) Vittaldasa & (5) Narasimha, duplicate share certificate will be issued in the joint names of the said shareholders unless objection is lodged with us within 30 days from today.

A. Damodar Pai
Chairman

Mangalore, 6-12-1971.

ಭಾರತ ಧ್ವಂಸ ಮಾಡುವ ಕನಸು

(ಪಾಕಿಸ್ತಾನದ ಪತ್ರಿಕೆಗಳಿಗೆ ದಿನಬೆಳಗಾದರೆ ಭಾರತವನ್ನು ಹಳಿಯುವುದೇ ಕೆಲಸ. ಭಾರತವನ್ನು ಧ್ವಂಸ ಮಾಡಿ ಎಂದು ಕೂಗುವುದೇ ಕಾಯಕ. ಇದನ್ನು ಬಿಟ್ಟರೆ ಬೇರೆ ಬಂಡವಾಳವಿಲ್ಲ. ಪತ್ರಿಕೆಗಳು ಈ ಅಪಪ್ರಚಾರದಿಂದ ಜನರ ಮನಸ್ಸನ್ನು ಕಲಕಿ ಅವರನ್ನು ಬೇಡದ ಯುದ್ಧಕ್ಕೆ ಅಣಿಗೊಳಿಸುತ್ತಿವೆ. ಪ್ರಸ್ತುತ ಲೇಖನ ಮೂಲೆಯಲ್ಲಿ ಈ ಪತ್ರಿಕೆಗಳ ಪ್ರಚಾರ ವೈಖರಿಯ ಸಾರವನ್ನು ಸಂಗ್ರಹಿಸಿ ಕೊಡಲಾಗಿದೆ.)

ದೇಶದ ಬೆಂಬಲ ಪಡೆದು ಪಾಕಿಸ್ತಾನದ ಶೂರಸೈನಿಕರು ಭಾರತವನ್ನು ಧ್ವಂಸ ಮಾಡುವುದಾಗಿ ಪಾಕಿಸ್ತಾನದ ಪೀಪಲ್ಸ್‌ಪಾರ್ಟಿಯ ಮುಖಂಡ ಮುಖ್ತಾರ್ ರಾಣಾ ಹೇಳಿದರೆಂದು ಕರಾಚಿಯ 'ಜಂಗ್' ಪತ್ರಿಕೆ ಇದೇ ಅಕ್ಟೋಬರ 17ರಂದು ವರದಿ ಮಾಡಿದೆ. ಜಮಾತ್-ಇ-ಇಸ್ಲಾಮ ಮತ್ತು ನಿಝಾಮ-ಇ-ಇಸ್ಲಾಮ ಪಕ್ಷಗಳ ಮುಖಂಡ ಮೌಲಾನಾ ಹಕ್ ಧಪ್ಲಿ ಅವರು ಹೇಳಿದ್ದಾರೆಂದು ಕರಾಚಿಯ ನಯೀ ರೋಷನಿ ಪತ್ರಿಕೆ ಇದೇ ಅಕ್ಟೋಬರ್ 21ರ ಸಂಚಿಕೆಯಲ್ಲಿ ಪ್ರಕಟಿಸಿದೆ.

ಂ ಂ ಂ

ರಾಷ್ಟ್ರೀಯ ಯುವಕ ಮಂಡಲ ಅಕ್ಟೋಬರ್ 22ರಂದು, ಕರಾಚಿಯಲ್ಲಿ ಭಾರತ ಧ್ವಂಸ ಮಾಡಿ ಎಂಬ ದಿನವನ್ನು ಆಚರಿಸಿತು. ಈ ಸಭೆಯಲ್ಲಿ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿ ಮತ್ತು ಮಿ. ಕೊಸಿಗಿನ ಅವರ ಭಾವಚಿತ್ರಗಳನ್ನು ದಹನ ಮಾಡಿದರೆಂದು ಕರಾಚಿಯ ಡಾನ್ ಪತ್ರಿಕೆ ಇದೇ ಅಕ್ಟೋಬರ 23ರ ಸಂಚಿಕೆಯಲ್ಲಿ ವರದಿ ಮಾಡಿದೆ.

ಂ ಂ ಂ

ಭಾರತದ ವಿರುದ್ಧ ಜೇಹಾದ್ ಆರಂಭಿಸಬೇಕೆಂದು ಪಾಕಿಸ್ತಾನ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವನ್ನು ಜಮೊತ-ಉಲ್-ಉಲೇಮ-ಇ-ಪಾಕಿಸ್ತಾನ್ ಸರ್ವ-ಸದಸ್ಯರ ಮಂಡಳಿಯು ಸ್ವೀಕರಿಸಿದೆ. ಭಾರತ ಪಾಕಿಸ್ತಾನದ ಮೇಲೆ ಆಕ್ರಮಣ ಮಾಡಿದ್ದೇ ಆದರೆ ನಾವು ನಮ್ಮ ಪವಿತ್ರ ದೇಶದ ಪ್ರತಿಯೊಂದು ಅಂಗುಲ ನೆಲವನ್ನೂ ಬಿಡದೇ ರಕ್ಷಿಸುವೆವು ಮಾತ್ರವಲ್ಲದೇ, ಭಾರತ ಭಾರೀ ಸೋಲನ್ನು ಅನುಭವಿಸುವಂತೆ ಮಾಡುತ್ತೇವೆ. ಈ ಭಾರಿ ನಮ್ಮ ಸೈನಿಕರು ಹಿಂದೆಗೆಯಲಾರರು" ಎಂದು ಈ ನಿರ್ಣಯದಲ್ಲಿ ಹೇಳಲಾಗಿದೆಯೆಂದು ಅದೇ ಪತ್ರಿಕೆ ದಿನಾಂಕ 19ರ ಸಂಚಿಕೆಯಲ್ಲಿ ತಿಳಿಸಿದೆ.

ಂ ಂ ಂ

ಪಾಕಿಸ್ತಾನದ 12 ಕೋಟಿ ಮಂದಿ ಮುಸ್ಲಿಮರು ದೇಶದ ಪ್ರತಿ ಒಂದು ಅಂಗುಲ ಭೂಮಿಗಾಗಿ ಹೋರಾಡುವರಲ್ಲದೆ. ಭಾರತಕ್ಕೆ ಬೇಕಾದಾಗಲೆಲ್ಲ ಅಂತೆ ಪೆಟ್ಟು ಕೊಡುವುದಾಗಿ ಮರಕಾಜಿ ಚೈಮೈತುರ್—ಉಲ್ ಲೇಮ ಹೇಳಿದೆ.

ಂ ಂ ಂ

ಭಾರತ ತನ್ನ ಸೇನೆಯನ್ನು ಗಡಿಯಿಂದ ಹಿಂತೆಗೆದುಕೊಳ್ಳದಿದ್ದರೆ. ಪಶ್ಚಿಮ ಪಾಕಿಸ್ತಾನದೊಂದಿಗೆ ನಿರ್ಣಾಯಕ ಯುದ್ಧ ನಡೆಯಲು ಸಿದ್ಧರಿರಬೇಕು. ಈ ಬಾರಿ ಯುದ್ಧ ನಡೆದರೆ ನಾವು ಭಾರತದ ಸೇಲಿದ ಮೇಲೆಯೇ ಹೋರಾಡುತ್ತೇವೆ. ಎಂದು ಜಮೊತ-ಇ-ಇಸ್ಲಾಮಿ ಸಂಸ್ಥೆಯು ಪ್ರಮುಖರಾದ ಪೀರ್ ಗಾಝಿಯಾಖಾನ್, ಡಾ. ನಝೀರ್ ಜಹ್ಮದ್ ಇವರು ಎಚ್ಚರಿಕೆ ನೀಡಿದರೆಂದು ಲಾಹೋರಿನ ನವಾ-ಇ-ವಕ್ತ್ ಪತ್ರಿಕೆ ತನ್ನ ಅಕ್ಟೋಬರ್ 26ರ ಸಂಚಿಕೆಯಲ್ಲಿ ವರದಿ ಮಾಡಿದೆ.

●●

ಸಿಂಡಿಕೇಟ್ ಬ್ಯಾಂಕಿನ ಮಣಿಪಾಲ ಶಾಖೆಯ ನೂತನ ಕಟ್ಟಡದ ಉದ್ಘಾಟನೆ

ಸಿಂಡಿಕೇಟ್ ಬ್ಯಾಂಕಿನ ಮಣಿಪಾಲ ಶಾಖೆಯ ನೂತನ ಕಟ್ಟಡವನ್ನು ಉದ್ಘಾಟಿಸುವ ಸಮಾರಂಭವು ತಾ. 6ರಂದು ಸಂಜೆ ಮಣಿಪಾಲದಲ್ಲಿ ಶ್ರೀ ಕೆ. ಕೆ. ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಜೀವವಿಮಾ ಕಾರ್ಪೊರೇಶನ್ ಅಧ್ಯಕ್ಷ ಶ್ರೀ ಬಿ ಎ ಪೈಗಳು ಉದ್ಘಾಟಿಸಿದರು. ಕರ್ಣಾಟಕ ಪ್ರೆ ಮಣಿಪಾಲ ಶಾಖೆಯ ಮೇನೇಜರ್ ಶ್ರೀ ಕೆ. ಅನಂತರಾಮ ಉಪಾಧ್ಯಾಯ ಸ್ವಾಗತಿಸಿ ಮುಖ್ಯ ಅತಿಥಿಗಳ ಪರಿಚಯ ಮಾಡಿಸಿದರು.

ಶ್ರೀ ಬಿ ಎ. ಪೈಗಳವರು ಉದ್ಘಾಟಿಸುತ್ತಾ, ಸಿಂಡಿಕೇಟ್ ಬ್ಯಾಂಕು ರಾಷ್ಟ್ರೀಕರಣಾನಂತರ ನಡೆದ ಸೇವಾಕಾರ್ಯಗಳನ್ನು ನಡೆಸಿಕೊಂಡು ಬಂದ ರಾಷ್ಟ್ರೀಕರಣದ ಮೂಲೋದ್ದೇಶವನ್ನು ಸಾಧಿಸಿದೆ. ಆದು ಜೀವಾತ್ಮಕ ತತ್ವ ಪಾಲಿಸಿಯನ್ನು ಪಿಸಿದರೆ ಪ್ರಬುದ್ಧ ಬ್ಯಾಂಕಾಗಿ ಪರಿವರ್ತನೆ ಹೊಂದಿದ್ದಕ್ಕೆ, ಗ್ರಾಹಕರಲ್ಲಿ ಪ್ರೀತಿ ಗಳಿಸಿ ತನ್ನ ಶಾಖೆಗಳನ್ನು ತೆರೆದು ಆಧಿಯ ಜನರಿಗೆ ಬ್ಯಾಂಕಿಂಗ್ ಸೌಲಭ್ಯ ದೊರಕಿಸಿರುವುದೂ ಮುಕಾರಣ ಎಂದು ತಿಳಿಸಿದರು.ಜನರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಿಂಡಿಕೇಟ್ ಆಕ್ಯಮೂಲ್ಯ ಸೇವೆ ಸಲ್ಲಿಸುತ್ತಿದೆ ಪ. ಕ. ಜಿಲ್ಲೆ ಒಂದು ಖ್ಯಾತ ಯೋಗಿಕ ಕ್ಷೇತ್ರ ಎಂದ ಶ್ರೀ ಪೈಗಳು ಈ ಜಿಲ್ಲೆಯ ಕೆಲವು ತಿಂಗಳುಗಳನ್ನು ಸಂಗ್ರಹಿಸಿದ್ದು ಈ ಅಂಕಿಅಂಶವನ್ನು ಜನರ ಹಿತಾಭಿವೃದ್ಧಿಗಾಗಿ ಉಪಯೋಗಿಸಿ ದೇಶೀಯ ಮತ್ತು ಇತರ ವಿಷಯಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ತನ್ನ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಲು ಬೇಕಾದ ಧೃಢ ಸಂಕಲ್ಪ ಅಧಿಕಾರಿಗಳಿಗಿರಬೇಕೆಂದು ಹೇಳಿದರು ಸಿಂಡಿಕೇಟ್ ಬ್ಯಾಂಕ್ ತನ್ನ ಹಿಂದಿನ ಪರಂಪರೆಯನ್ನು ಉಳಿಸಿಕೊಂಡಿರುವುದಕ್ಕೆ ತನ್ನ ಮೆಚ್ಚುಕೆ ವ್ಯಕ್ತಪಡಿಸಿದರು.

ಶಿವಳ್ಳಿ ಕಂಚಾಯತಿನ ಅಧ್ಯಕ್ಷ ಶ್ರೀ ಬಿ. ರಮೇಶ ಪೈಗಳವರು ಉಡುಪಿ ಮಣಿಪಾಲಕ್ಕೆ ಹತ್ತಿರವಿರುವ ಶಿವಳ್ಳಿಗ್ರಾಮವನ್ನು ತೀವ್ರಗತಿಯ ಪ್ರಾಥಮಿಕ ಶಿಕ್ಷಣಕ್ಕೆ ಆಯ್ಕೆಯನ್ನಾಗಿ ಪರಿಗಣಿಸಿದ್ದನ್ನು ವಿವರಿಸಿದರು. ದೇಶವಿಂದು ಆತ್ಯಂತ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿರುವುದರಿಂದ ನಾವು ಎಲ್ಲ ತ್ಯಾಗಕ್ಕೂ ಸಿದ್ಧರಾಗಬೇಕಾಗಿದೆ. ಇದಕ್ಕೆ ತನ್ನ ಗ್ರಾಮದ ಜನತೆಯು ಸಂಪೂರ್ಣ ಬೆಂಬಲವನ್ನೀಯುವ ಗೊತ್ತುವಳಿಯೊಂದನ್ನು ಸಭೆಯ ಮುಂದೆ ಇರಿಸಿದರು ಆಟ್ಲಿನ ಸಿಂಡಿಕೇಟ್ ಬ್ಯಾಂಕಿನ ಹೊಸ ಶಾಖೆಗೆ ಶುಭಕೋರಿದರು

ಮಣಿಪಾಲ ಮೆಡಿಕಲ್ ಕಾಲೇಜಿನ ಡೀನ್ ಡಾ. ವಿ. ಕೃಷ್ಣರಾಯರು ನೂತನ ಕಟ್ಟಡಕ್ಕೆ ಅಗತ್ಯವಿರುವ ಜಾಗೆಗೆ ಶುಭವನ್ನು ಹಾರೈಸಿದರು.

ಡಾ! ಟಿ. ಎಂ. ಎ. ಪೈಗಳವರು ಮೂತನಾಡಿದ ಬಳಿಕ ಕಸ್ತೂರಿಬಾಯಿ ಶ್ರೀ ಕೆ. ಕೆ. ಪೈಗಳು ತನ್ನ ಅತ್ಯಕ್ಷರ ಭಾಷಣದಲ್ಲಿ ಸಿಂಡಿಕೇಟಿನ್ನು ಕಟ್ಟಿ ಬೆಳೆಸಿದ ಡಾ. ಟಿ. ಎಂ. ಎ. ಪೈ ಮತ್ತು ಶ್ರೀ ಟಿ. ಎ. ಪೈಗಳನ್ನು ಸ್ಮರಿಸಿದರು. ಕರ್ಣಾಟಕ ಬ್ಯಾಂಕಿನ ತೆಕ್ಕಟ್ಟೆ ಸಮನ್ವಯರು ಇತ್ತೀಚೆಗೆ ಬ್ಯಾಂಕು ಸ್ಥಾಪಿಸಿರುವ ಅನೇಕ ಉಪಯುಕ್ತ ಕಾರ್ಯಗಳೆಂದಾಗಿ ಮೆಚ್ಚುಗೆ ವ್ಯಕ್ತ ಪಡಿಸಿರುವುದನ್ನು ತಿಳಿಸಿದರು. ಜನತಾ ಸೇವೆ ನೂಡುವಲ್ಲಿ ಬ್ಯಾಂಕಿನ ಅಧಿಕಾರಿ ವರ್ಗದವರೂ ಇತರ ಸಿಬ್ಬಂದಿಗಳೂ ತನ್ನು ಸಂಪೂರ್ಣ ಸಹಕಾರ ನೀಡಿರುವರೆಂದು ತಿಳಿಸಿದರು.

ಅಂತ್ಯದಲ್ಲಿ ಶ್ರೀ ಪಿ. ಸಿ. ನಾಯಕರು ವಂದಿಸಿದರು. ●

ಶ್ರೀಕೃಷ್ಣನಿಗೆ

ಯಂಕಯ್ಯ ನಗುತಿರುವೆ ಕಳ್ಳ ನಗುವೆ
ನೀನೊಬ್ಬ ಪಕ್ಕಾ ಕಳ್ಳನೆಂಬುದಕ್ಕೆ-
ಸಾಕಷ್ಟು ಪುರಾವೆಗಳುಂಟು. ಮಟ್ಟಿದ್ದೇ-
ಸೆದೆಸುಜೆಯಲ್ಲಿ, ಬೆಳೆದದ್ದು
ಗೋಸಿಯರ ತೋಳ ಸೆರೆಯಲ್ಲಿ-
ಕದ್ದೆ, ಹಾಲು, ಬೆಣ್ಣೆ, ಮೊಸರುಗಳ, ಸೀರೆ-
ರವಿಕೆಗಳ, ಜನರ ಮನಸ್ಸುಗಳ, ರಾಧೆ-
ಯಂತಹ ಮುಗ್ಧ ಬಾಲೆಯರ ಹೃದಯಗಳ-

ನೀನೊಬ್ಬ ಜಾದೂಗಾರನಿದ್ದಿರಬೇಕು.
ಮುಸ್ಸಿ ನುಣ್ಣಾಸು ಪೆದ್ದು ಮೂಜಗನ ತೋರಿದ್ದೆ
ಗೋವುಗಳನುಸರಿಸಲಿಕೆ ಪರ್ವತನಿತ್ತಿದ್ದೆ
ಎಲ್ಲ ಗೋಪಿಯರನ್ನು ಒಮ್ಮೆಗೇ ರಮಿಸಿದ್ದೆ
ಅರ್ಜುನನಿಗೆ ಅಧ್ಯಾತ್ಮರೂಪ ತೋರಿಸಿದ್ದೆ.

ನೀನೊಬ್ಬ ಕೊಲೆಗುತಕನಯ್ಯ, ಕೊಂಚೆ.
ಮೂನ ಕಂಸನನ್ನು ಮೊದಲೆಯುಗ್ಗೆನಿಸಿದೆ.
ಪೂತನಿಯನ್ನು, ಬಕ, ಧೇನುಕ, ನರಕರನ್ನು
ಕೊಲ್ಲಿಸಿದೆ-ಜರಾಸಂಧನನ್ನು. ಕೌರವರನ್ನು
ಇತರ ದುರುಳರನ್ನು, ಆಳಿಯ ಅಭಿಮನ್ಯುವನ್ನು
ಭೀಷ್ಮ ದ್ರೋಣರಂತಹ ಮೇಧಾವಿಗಳನ್ನು
ಕರ್ಣನಂತಹ ಶ್ರೇಷ್ಠ ಯೋಧರನ್ನು.

ನೀನೊಬ್ಬ ಮೇದಾಂತಿ, ಭೋಧಿಸಿದೆ ಅರ್ಜುನಗೆ-
ತತ್ವ ಜ್ಞಾನಗಳನ್ನು. ಗೆಲ್ಲಿಸಿದೆ ಧರ್ಮವನ್ನು.
ಜೀವಿತನಕ್ಕೆ ಧೈರ್ಯ ನೀಡಿ ಎಚ್ಚರಿಸಿದೆ.
ನೀನೊಬ್ಬ ಭವರೋಗ ವೈದ್ಯ ಮದ್ದನ್ನಿತ್ತೆ-
ಆಶಾಂತಿಗೆ, ಅಧರ್ಮ, ಅಜ್ಞಾನಗಳಿಗೆ.

ನೀನೊಬ್ಬ ಲೀಲಾವಿನೋದಿ-ವಿಂದಿರುವ
ವ್ಯಾಸಕವಿ-
ನೀನಾಡಿದ್ದು ನಾಟಕ ನೀನೇ ಆದರೆ ದಿಗ್ದರ್ಶಕ.
ಈಗಲೂ ನಿನ್ನ ನೆನೆಯುವವರಿದ್ದಾರೆ, ನೀನೊಬ್ಬ
ಕುತಂತ್ರಿಯಯ್ಯ, ನಾವು ಮೆಚ್ಚುವುದಿಲ್ಲ ನಿನ್ನ.

ಆದರೂ, ಈ ಜಗದ ಜಂಜಾಟಗಳಿಗಂಜಿ-
ಕತ್ತಲು ತುಂಬಿದ ನನ್ನ ಪುಟ್ಟ ಮನಕ್ಕೆ
ನೀನು ಬೋಧಿಸಿದ ಗೀತೆ ದೀಪದ ಬೆಳಕು-
ಬೇಕು. ಆದಕ್ಕೇ ಗೀತಾಚಾರ್ಯನಾದ ನಿನಗೆ,
ಮನ ತುಂಬಿ ನಮಿಸುತ್ತೇನೆ.

ಶ್ರೀ ರಾಧಾಕೃಷ್ಣ ಪುತ್ತೂರು.

ದಯವಾಡಿ
ನಿಮ್ಮ ಬಾಕಿ ಚಂದಾ
ಹಣವನ್ನು ಕಳುಹಿಸಿರಿ

ಭಾರತದ ವೀರ ಯೋಧರಿಂದ ಗಡಿರಕ್ಷಣೆ

ಭಾರತ ಸೇನಾಪಡೆಯ ವೀರಯೋಧರು ಕಳೆದ ಕೆಲವು ವಾರಗಳಿಂದ ದೇಶದ ಪಶ್ಚಿಮ ಹಾಗು ಪೂರ್ವಗಡಿ ಪ್ರದೇಶದುದ್ದಕ್ಕೂ ನಿರಂತರ ಚಚ್ಚರದಿಂದ ಸಜ್ಜಾಗಿ ನಿಂತಿದ್ದಾರೆ. ಈ ವೀರ ಯೋಧರು ಈಚ್ ಜೊಗುಪ್ರದೇಶ, ರಾಜಾಸ್ತಾನದ ಮರುಭೂಮಿ, ಪಂಜಾಬ್-ಹರಿಯಾನದ ಹೆಚ್ಚಹಸುರಿನ ಭೂಮಿ, ಹಾಗೂ ಕಾಶ್ಮೀರದ ಗುಡ್ಡಗಾಡು ಪ್ರದೇಶದಲ್ಲಿ ಸಂಭವಿಸ ಬಹುದಾದ ಸಶಸ್ತ್ರ ಆಕ್ರಮಣ ಎದುರಿಸಲು ಸಿದ್ಧರಾಗಿದ್ದಾರೆ. ಪೂರ್ವಗಡಿಯಲ್ಲಿ ಗಂಗಾನದಿ ಮುಖಜಭೂಮಿ ಹಾಗು ಅರಣ್ಯ ಪ್ರದೇಶದಲ್ಲಿ ಯೋಧರು ಸನ್ನದ್ಧರಾಗಿದ್ದಾರೆ.

ಭಾರತ ವಿರುದ್ಧ ಪಾಕಿಸ್ತಾನ ಹಾಕಿರುವ ಯುದ್ಧದ ಬೆದರಿಕೆ ಹಾಗು ಪಾಕಿಸ್ತಾನಿ ಸೈನಿಕ ಪಡೆಯ ಗಡ್ಡಿಉಲ್ಲಂಘನೆ ಎದುರಿಸಲು ಸೇನಾಪಡೆ ಕಳೆದ ತಿಂಗಳು ಗಡಿ ಪ್ರದೇಶಕ್ಕೆ ಹೋಯಿತು. ಪಾಕಿಸ್ತಾನದ ದಂಡು ಪ್ರದೇಶಗಳು ಗಡಿಗೆ ಅತ್ಯಂತ ಸನಿಹದಲ್ಲಿದೆ. ಆದರೆ ಭಾರತ ದಂಡು ಪ್ರದೇಶ ಗಡಿಯಿಂದ ಬಹುದೂರದಲ್ಲಿದೆ.

ಭಾರತದ ಯೋಧರು ಎಂತಹ ಸನ್ನಿವೇಶ ಬಂದರೂ ಎದುರಿಸಲು ಸಿದ್ಧವಾಗಿದ್ದಾರೆ. ಈ ಯೋಧರಿಗೆ ಅತ್ಯುತ್ತಮ ತರಬೇತಿ ನೀಡಿ ಆಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜುಗೊಳಿಸಲಾಗಿದೆ. ನಮ್ಮ ಯೋಧರ ಉತ್ಸಾಹ ಅತ್ಯುನ್ನತ ಮಟ್ಟದಲ್ಲಿದೆ. ಗಡಿ ರಕ್ಷಣೆಯಲ್ಲಿ ನಿರತವಾಗಿರುವ ಯೋಧರಿಗೆ ಆ ಪ್ರದೇಶದಲ್ಲಿರುವ ಗ್ರಾಮಸ್ಥರು ಸರ್ವ ಸಹಾಯ, ಸಹಕಾರಗಳನ್ನು ನೀಡುತ್ತಿದ್ದಾರೆ.

ಕೇಂದ್ರ ಸಂರಕ್ಷಣ ಸಚಿವ ಶ್ರೀ ಜಗಜೀವನರಾಂ ಇತ್ತೀಚೆಗೆ ಸಂಸತಿನಲ್ಲಿ ಹೇಳಿದಂತೆ ಭಾರತ ಸೇನಾಪಡೆಯು ಪಾಕಿಸ್ತಾನದ ಬೆದರಿಕೆಯಿರುವವರೆಗೆ ಗಡಿ ಪ್ರದೇಶದಲ್ಲಿರುತ್ತದೆ. ●

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನವ ಹಬ್ಬ: 1971

1972ರಲ್ಲಿ ಚಿನ್ನವ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ವ್ಯಕ್ತಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನವ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ
ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ನೂಡಿರಿ!

ಪಾಕ್ ಪತ್ರಿಕೆಗಳ ಪ್ರಲಾಪ

ಪಾಕಿಸ್ತಾನದ ಪತ್ರಿಕೆಗಳು ಮತ್ತು ಟಿಪ್ಪಣಿಗಾರರು ಭಾರತ ವಿರೋಧಿ ಪ್ರಚಾರ ಚಳುವಳಿಯಲ್ಲಿ ನಿರತರಾಗಿದ್ದಾರೆ. ಆದರೆ ಭಾರತದ ನಿಲುವಿಗೆ ವಿಶ್ವದ ವಿವಿಧೆಡೆಗಳಲ್ಲಿ ಪೂರ್ಣ ಅನುಮೋದನೆ ಸಿಗುತ್ತಿರುವುದನ್ನು ಅವರು ಓದುಗರಿಂದ ಮುಚ್ಚಿಡುವುದು ಸಾಧ್ಯವಾಗುತ್ತಿಲ್ಲ.

'ಡಾನ್' ಪತ್ರಿಕೆಯ ಟಿಪ್ಪಣಿಗಾರರೊಬ್ಬರು ಇತ್ತೀಚೆಗೆ ಹೀಗೆ ಬರೆದಿದ್ದಾರೆ; "ಅಮೇರಿಕಾ ಮತ್ತು ಫ್ರಾನ್ಸ್ ದೇಶಗಳು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಸರಬರಾಜನ್ನು ನಿಷೇಧಿಸಿರುವುದು ದುರದೃಷ್ಟಕರ ಹಾಗು "ಅತ್ಯಂತ ಅಸಮಂಜಸ"ವೆಂದು ಹೇಳಿದೆ. ಶ್ರೀಮತಿ ಇಂದಿರಾಗಾಂಧಿಯ ಒತ್ತಾಯದ ಫಲವಾಗಿ ಅಮೇರಿಕಾ ಸರ್ಕಾರವು ಪಾಕಿಸ್ತಾನಕ್ಕೆ ಸರಬರಾಜು ಮಾಡುವ ಮಿಲಿಟರಿ ಸಾಧನೋಪಕರಣಗಳ ರಫ್ತಿಗೆ ಲೈಸೆನ್ಸ್‌ನ್ನು ನಿಲ್ಲಿಸಿದೆಯೆಂದು ಪತ್ರಿಕೆ ಬರೆದಿದೆ.

ಕರಾಚಿಯಿಂದ ಪ್ರಕಟವಾಗುವ ಮತ್ತೊಂದು ಪ್ರಭಾವಶಾಲಿಯಾದ "ದಿ ಲೀಡರ್" ಎಂಬ ಸಂಜೆ ಪತ್ರಿಕೆಯು ಪಾಕಿಸ್ತಾನವು ಈ ದಿನಗಳಲ್ಲಿ ಎದುರಿಸುತ್ತಿರುವ ವೈಫಲ್ಯತೆಯನ್ನು ಕುರಿತು ಹೀಗೆ ಬರೆದಿದೆ. "ಅತ್ಯಂತ ವ್ಯಾವಹಾರಿಕವಾದ ಆಧುನಿಕ ಜಗತ್ತಿನಲ್ಲಿ ದೇಶಗಳು ಸ್ವಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತಿವೆ. ಭಾರತವು ಪಾಕಿಸ್ತಾನಕ್ಕಿಂತ ನಾಲ್ಕರಷ್ಟು ಬೃಹತ್ತಾದುದರಿಂದ ವಿಶ್ವದ ರಾಷ್ಟ್ರಗಳು ಭಾರತವನ್ನು ಬೆಂಬಲಿಸಿ ನಿಂತಿವೆ. ಏಕೆಂದರೆ ಈ ದೇಶಗಳ ದೃಷ್ಟಿಯಲ್ಲಿ ಭಾರತವು ಪಾಕಿಸ್ತಾನಕ್ಕಿಂತ ಹೆಚ್ಚು ಲಾಭದಾಯಕವಾದ ಗ್ರಾಹಕ ದೇಶವಾಗುತ್ತದೆ".

ಭಾರತದ ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರ ಇತ್ತೀಚಿನ ಯೂರೋಪ್ ಪ್ರವಾಸದ ಬಗ್ಗೆ ವರದಿ ಮಾಡಿದ "ಡಾನ್" ಪತ್ರಿಕೆಯ ಲಂಡನ್ ಪ್ರತಿನಿಧಿ ನಸೀಂ ಅಹಮದ್ ಅವರ ಪ್ರಕಾರ 'ಶ್ರೀಮತಿ ಗಾಂಧಿಗೆ ಆರು ಪಾಶ್ಚಾತ್ಯ ದೇಶಗಳಲ್ಲಿ ಹಾರ್ದಿಕ ಸ್ವಾಗತ ಹಾಗೂ ಅದ್ಭುತ ಪ್ರಚಾರ ದೊರಕಿತು' ಪಾಶ್ಚಾತ್ಯ ವಾರ್ತಾ ಮಾಧ್ಯಮಗಳು ಶ್ರೀಮತಿ ಇಂದಿರಾಗಾಂಧಿ ನೋವು, ನರಳಿಕೆಗಳನ್ನು ಅನುಭವಿಸುತ್ತಿರುವ ದೇಶದ ಮಹಾನಾಯಕಿಯೆಂದು ದಾರಿತಪ್ಪಿದ ಪ್ರಚಾರ ಮಾಡಿವೆ. ●●

ಪಾಕಿಸ್ತಾನದ ಸರ್ವನಾಶ: ಒಂದು ಎಚ್ಚರಿಕೆ

ಪಾಕಿಸ್ತಾನವು ಸಂಪೂರ್ಣವಾಗಿ ನಾಶವಾಗುವ ಭೀತಿಯಿದೆಯೆಂದು ಬಂಗ್ಲಾದೇಶದಲ್ಲಿ ಯೂಹ್ಯಾಖಾನರ ಮಿಲಿಟರಿ ಆಡಳಿತಕ್ಕೆ ಬಲಗೈಯಾಗಿರುವ ಈಗ ಪಾಕ್ ಪ್ರಧಾನಿಯಾಗಿರುವ ನೂರುಲ್ ಅಮೀನ್ ಎಚ್ಚರಿಕೆ ನೀಡಿದ್ದಾರೆ. (ಮುಂದಿನ ತಿಂಗಳು ಬಂಗ್ಲಾದೇಶದಲ್ಲಿ ಪ್ರಜಾಪ್ರಭುತ್ವವನ್ನು ಪ್ರತಿಷ್ಠಾಪನೆ ಮಾಡಿದಾಗ ಪಾಕಿಸ್ತಾನದ ಪರವಾಗಿ ಮುಖ್ಯಪಾತ್ರವಹಿಸಲು ಈ ವ್ಯಕ್ತಿಯನ್ನು ನೇಮಕ ಮಾಡಲಾಗುತ್ತದೆ ಎಂದು ಹೇಳಲಾಗಿತ್ತು.)

ಇತ್ತೀಚೆಗೆ ನೂರುಲ್ ಅಮೀನ್ ಲಾಹೋರ್ ನಗರದಲ್ಲಿ ಪಾಕಿಸ್ತಾನ ಪ್ರಜಾತಂತ್ರ ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡುತ್ತ, ಪೂರ್ವಪಾಕಿಸ್ತಾನವು ನಮ್ಮ ಕೈಬಿಟ್ಟು ಹೋದರೆ ಪಶ್ಚಿಮ ಪಾಕಿಸ್ತಾನದ ವಿವಿಧೆಡೆಗಳಲ್ಲಿ ಪ್ರತ್ಯೇಕತೆಯ ವಿಷಸರ್ಪ ಹೆಡೆಯೆತ್ತುತ್ತದೆ. ಇದರಿಂದ ಪಾಕಿಸ್ತಾನದ ಸರ್ವನಾಶವಾಗುತ್ತದೆ. ಈ ಪರಿಸ್ಥಿತಿಯನ್ನು ದೇವರೇ ಕಾಪಾಡಲಿ ಎಂದು ನುಡಿದರು.

ಪೂರ್ವಪಾಕಿಸ್ತಾನದ ನಾಯಕರಿಗೆ ಅಧಿಕಾರ ನೀಡದಿದ್ದರೆ ದೇಶವು ಎಂದಿಗೂ ಒಗ್ಗಟ್ಟಾಗಿರಲಾರದೆಂದು ಪ್ರಧಾನಿಸಿಟ್ಟದ ಮೇಲೆ ಕಣ್ಣಿಟ್ಟಿರುವಾಗಲೇ ನೂರುಲ್ ಅಮೀನ್ ಹೇಳಿದರು. "ಪೂರ್ವಪಾಕಿಸ್ತಾನಿಗಳ ಆಶಾಭಂಗದ ಜ್ವಾಲಾಮುಖಿ ಸಿಡಿದು ಅಂತಿಮವಾಗಿ ಪಾಕಿಸ್ತಾನ ನಾಶವಾಗುವುದೆಂದು" ನೂರುಲ್ ಅಮೀನ್ ಘೋಷಿಸಿದರು

ಇದುವರೆಗೂ ಪಶ್ಚಿಮಪಾಕಿಸ್ತಾನಿಗಳು ತಮ್ಮ ಮೇಲೆ ದಬ್ಬಾಳಿಕೆ ನಡೆಸಿದರೆಂಬ ಪೂರ್ವ ಬಂಗಾಳಿಗಳ ಭಾವನೆಯನ್ನು ಪಾಕಿಸ್ತಾನದ ಆಡಳಿತಗಾರರು ಅರ್ಥಮಾಡಿಕೊಳ್ಳಬೇಕೆಂದು ನೂರುಲ್ ಅಮೀನ್ ಮನವಿ ಮಾಡಿಕೊಂಡಿದ್ದಾರೆ.

ಈ ಸಲವೂ ತಮಗೆ ಅಧಿಕಾರ ದಕ್ಕದಿದ್ದರೆ, ಷೇಕ ಮುಜೀಬರಿಗೆ ಅಧಿಕಾರ ನಿರಾಕರಿಸಲು ತಂತ್ರ ಹೂಡಲಾಯಿತೆಂದು ಬಂಗ್ಲಾಜನ ಭಾವಿಸಿ,ವರೆಂಬ ಅಖಂಡ ಸತ್ಯವನ್ನು ಬಂಗ್ಲಾದೇಶದ ಇಸ್ಲಾಮೊಬಾದಿನ ಏಕಮಾತ್ರ ಮಿತ್ರ ನೂರುಲ್ ಅಮೀನ್ ಒಪ್ಪಿಕೊಂಡಿದ್ದಾರೆ. ●●

ಚಹಾದಿಂದ ಸ್ಫೂರ್ತಿ

ಪಂಜಾಬ್ ಗಡಿಪ್ರದೇಶಗಳಲ್ಲಿ ಆಲ್ಲಿನ ಜನತೆ ಯೋಧರಿಗಾಗಿ ಉಚಿತ ಜೆಟಾ ಅಂಗಡಿಗಳನ್ನು ತೆರೆದಿದ್ದಾರೆ. ಇದು ಯೋಧರ ಬಗ್ಗೆ ಅವರಿಗಿರುವ ಆತ್ಮೀಯತೆಯನ್ನು ಎತ್ತಿ ತೋರಿಸುತ್ತದೆ.

ಆ ಪ್ರದೇಶಗಳಲ್ಲಿ ಯೋಧರು ಎಲ್ಲೇ ಕಾಣಿಸಲಿ ಚಹಾ ಕುಡಿಯಲೇ ಬೇಕು. ಇದು ಜನತೆ ವಿಧಿಸಿರುವ ನಿಯಮವಾಗಿದೆ.

ಪಂಜಾಬ್ ಗಡಿಪ್ರದೇಶಗಳಲ್ಲಿ ಹಸಿರು ನೋಟುದೊಂದಿಗೆ ಎತ್ತಿ ಕಾಣುವ ಇನ್ನೊಂದು ಮನಮೋಹಕ ದೃಶ್ಯ ಟೀ ಅಂಗಡಿಗಳು. 'ವೀರ ಯೋಧರೆ–ನಿಮ್ಮ ಬಗ್ಗೆ ನಮಗೆ ಹೆಚ್ಚಿನ ಅಭಿಮಾನವಿದೆ' ಎಂಬ ಫಲಕಗಳು ಎಲ್ಲೆಲ್ಲೂ ಕಾಣಿಸುತ್ತವೆ. ಹಗಲಿರುಳು ತೆರೆದಿರುವ ಈ ಟೀ ಅಂಗಡಿಗಳ ಸೌಲಭ್ಯವನ್ನು ಅಲ್ಲಿನ ಜನತೆ ಸ್ವ–ಸಂತೋಷದಿಂದ ನಡೆಸುತ್ತಿದ್ದಾರೆ.

ವಿವಾಹ–ಭೋಜನ ಕೂಟ

ಉಡುಪಿಯ ಸುಪ್ರಸಿದ್ಧ ಕಂಟ್ರಾಕ್ಟರ್ ಶ್ರೀ ಜೀಳಂಜೆ ಮಹೇಶ ಹೆಗ್ಡೆಯವರು ತಮ್ಮ ಪುತ್ರಿ ಸೌ| ಸುರೇಖಳ ವಿವಾಹವು ಮಂಗಳೂರು ಬೋಳಾರ ಶಿವರಾಯ ಮನೆ ಶ್ರೀ ಶಿವಶಂಕರ ರೈ ಅವರ ಪುತ್ರ ಡಾ| ಸ್ವರೂಪ್ ಆವರೊಂದಿಗೆ ತಾ. 12—12—71ರಂದು ಮಂಗಳೂರು ಪುರಭವನದಲ್ಲಿ ಜರಗಿದ ಸಂಬಂಧ ತಾ. 15ರಂದು ತಮ್ಮ ಆಜ್ಜರಕಾಡು ನಿವಾಸದಲ್ಲಿ ಭೋಜನ ಸಮಾರಂಭವೊಂದನ್ನು ಏರ್ಪಡಿಸಿದ್ದರು.

ವಿವಾಹ–ಸ್ವಾಗತ ಸಮಾರಂಭ

ಮದರಾಸಿನ ಡಾ| ಕೆ.ಎಂ.ರೈಯವರು ತಮ್ಮ ಪುತ್ರ ಚಿ| ಪ್ರೇಮನಾಥ ರೈಯವರ ವಿವಾಹವು ಮಂಗಳೂರಿನ ಸಾಯೋನೀರ್ ಹಂಚು ಕಾರ್ಖಾನೆಯ ಶ್ರೀ ಬಿ. ಸದಾಶಿವ ನಾಯಕರ ಪುತ್ರಿ ಕು ಮೂರಿ ವನಿತಾಳೊಂದಿಗೆ ತಾ. 8.12.71ರಂದು ತಿರುಪತಿ ದೇವಸ್ಥಾನದಲ್ಲಿ ಜರಗಿದ ಸಲುವಾಗಿ ತಾ. 10ರಂದು ಮದರಾಸಿನ ಆಬೊಟ್ಸ್‌ಬರಿ ಸಭಾಂಗಣದಲ್ಲಿ ವೈಭವಪೂರ್ಣ ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದರು. ಇದಕ್ಕೆ ನಗರದ ಮತ್ತು ಬೇರೆ ಬೇರೆ ಕಡೆಗಳಿಂದ ಸಾವಿರಾರು ಪ್ರಮುಖರು ಆಗಮಿಸಿ ವಧೂವರರನ್ನು ಆಶೀರ್ವದಿಸಿದರು. ಉಪಾಹಾರದ ನಂತರ ಭಾರತ ಕಲಾಂಜಲಿ ನಾಟ್ಯಸಂಘದವರಿಂದ ವಿವಿಧ ಭಾರತೀಯ ನೃತ್ಯ ಪ್ರದರ್ಶನ ಜಯಶೀಲವಾಗಿ ಜರಗಿತು. ರಾತ್ರಿ ವಿಶಿಷ್ಟ ರೀತಿಯ ಭೋಜನ ಸತ್ಕಾರ ನಡೆಯಿತು. ಆಹ್ವಾತ ಅಭ್ಯಾಗತರನ್ನು ಶ್ರೀಮತಿ ನುತ್ತು ಡಾ| ಕೆ.ಎಂ. ರೈಯವರು ಹಾರ್ದಿಕವಾಗಿ ಸ್ವಾಗತಿಸಿದರು.

ಸಿಂಡಿಕೇಟ್ ಬ್ಯಾಂಕ್

ತಾ. 4ರಂದು ಸಭೆಸೇರಿ, ಸಿಂಡಿಕೇಟ್ ಬ್ಯಾಂಕಿನ ಕಸ್ಟೋಡಿಯನ್ ಮತ್ತು ನೌಕರರು ಭಾರತದ ಪ್ರಜಾಕಿತ ಸ್ಥಿನಿವೇಶದಲ್ಲಿ ಪ್ರಧಾನಮಂತ್ರಿಗೂ ಕೇಂದ್ರ ಸರಕಾರಕ್ಕೂ ತಮ್ಮ ಹೃತ್ಪೂರ್ವಕ ಬೆಂಬಲವನ್ನು ಘೋಷಿಸಿದರು. ರಾಷ್ಟ್ರದ ಸಮಗ್ರತೆಗೆ ಬಂದ ಈ ಆಹ್ವಾನವನ್ನು ಸ್ವೀಕರಿಸಲು ಎಂತಹ ತ್ಯಾಗಕ್ಕೂ ಸಿದ್ಧರಾಗುವ ನಿರ್ಣಯವನ್ನು ಮಾಡಿದ ಸಭೆಯು ನಮ್ಮ ದೇಶದ ಶಕ್ತಿಯು ಈ ಪರೀಕ್ಷೆಯಿಂದ ಹೆಚ್ಚುವುದೆಂದೂ ದೇಶದಲ್ಲಿ ಏಕ್ಯಭಾವನೆಯು ಬಲಿಯುವುದೆಂದೂ ಆಶಿಸಿತು. ದೇಶದ ವಿಷಮ ಪರಿಸ್ಥಿತಿಯ ಬೇಳೆ ದಿನವೂ ಒಂದೊಂದು ತಾಸು, ಸ್ವೇಚ್ಛೆಯಿಂದ ಆಧಿಕ ಕೆಲಸಮಾಡಲು ಬ್ಯಾಂಕಿನ ಅಧಿಕಾರಿಗಳು ನಿರ್ಧರಿಸಿದರು.

ಸೀತಾನದಿ ಜಾನುವಾರು ಜಾತ್ರೆ ಬಹುಮಾನ ವಿತರಣೆ

ಸೀತಾನದಿ ಜಾನುವಾರು ಜಾತ್ರೆಯ ಬಹುಮಾನ ವಿತರಣಾ ಸಮಾರಂಭವು ತಾ. 10ರಂದು ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಶ್ರೀ ಎಸ್. ಎಂ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಜಾನುವಾರು ಜಾತ್ರೆ ಸಮಿತಿಯ ಸಲಹೆಗಾರ ಶ್ರೀ ಬಿ. ವಿಠ್ಠಲ ಹೆಗ್ಡೆಯವರು ಸ್ವಾಗತಿಸಿದರು.

ಉಡುಪಿ ತಾಲೂಕು ಅಭಿವೃದ್ಧಿ ಮಂಡಳಿಯ ಆಧ್ಯಕ್ಷ ಶ್ರೀ ಎಂ. ಮುಧ್ವರಾಜರು ಬಹುಮಾನ ವಿತರಣೆ ನೂಡುತ್ತಾ ಳೆದ 35 ವರ್ಷಗಳಿಂದ ಹೆಬ್ರಿ ಪಂಚಾಯತು ಹಾಗೂ ಕಾರ್ಕಳ ಅಭಿವೃದ್ಧಿ ಮಂಡಳಿಯವರು ನಡೆಸಿಕೊಂಡು ಬರುತ್ತಿರುವ ಈ ಜಾನುವಾರು ಜಾತ್ರೆಯಿಂದ ಜನರಿಗೆ, ಕೃಷಿಗೆ ಆಗುತ್ತಿರುವ ಉಪಕಾರವನ್ನು ಸ್ಮರಿಸಿ, ಜಾತ್ರೆಯ ಸಮಯದಲ್ಲಿ ಇಲ್ಲಿ ಬರುವ ಜನರಿಗೆ ಇನ್ನೂ ಹೆಚ್ಚಿನ ಸೌಲಭ್ಯವನ್ನು ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಳಿ ಮತ್ತು ಪಂಚಾಯತು ನೆರವೇರಿಸಿಕೊಡುವೆನ್ನುವ ವಿಶ್ವಾಸ ತಮಗಿದೆಯೆಂದು ತಿಳಿಸಿದರು.

ಶ್ರೀ ಎಚ್. ಆನಂದ ಹೆಗ್ಡೆಯವರು ಮತ್ತು ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ಟರು ಮೂಡನಾಡಿದ ಬಳಿಕ ಅಧ್ಯಕ್ಷತೆ ವಹಿಸಿದ್ದ ಶ್ರೀ ಎನ್. ಎಂ. ಅಡ್ಯಂತಾಯರು ಮೂತಾಡಿ, ಜಾನುವಾರು ಸಾಕಣೆಯ ಕುರಿತು ಪ್ರಸ್ತಾಪಿಸಿ ಜಾನುವಾರು ಜಾತ್ರೆಯ ಆವಶ್ಯಕತೆಗಳನ್ನು ವಿವರಿಸಿದರು. ಜಾತ್ರೆಗಾಗಿ ಬರುವವರ ಸೌಲಭ್ಯಕ್ಕಾಗಿ ತಾಲೂಕು ಅಭಿವೃದ್ಧಿ ಮಂಡಳಿಯ ಮೂಲಕ ಪ್ರಯತ್ನಿಸುವುದಾಗಿ ಭರವಸೆಯಿತ್ತರು.

20 ದಿನಗಳ ಈ ಜಾತ್ರೆಗೆ ಬೇರೆ ಬೇರೆ ಕಡೆಗಳಿಂದ ಒಟ್ಟು 3000 ಜಾನುವಾರುಗಳು ಬಂದಿದ್ದವು.

ಈ ಜಾತ್ರೆಯ ಅಂಗವಾಗಿ ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಳಿಯ ಕೃಷಿ ಇಲಾಖೆಯ ವತಿಂದ ಕೃಷಿ ಪ್ರದರ್ಶನ ಕೂಡಾ ಇತ್ತು.

●●

ಒರಟು ಬೈಗಳಿಗೂ ನಯವಾದ ಬೈಗಳಿಗೂ ಇರುವ ಅಂತರವೂ ಗದೆಯಿಂದ ಮೈಮುರಿಸಿಕೊಳ್ಳುವುದಕ್ಕೂ ವಿಷಾಕ್ತ ಬಾಣದಿಂದ ಗಾಯಗೊಳಿಸುವುದಕ್ಕೂ ಇರುವ ಅಂತರದಷ್ಟೇ. ಡಾ| ಜಾನ್‌ಸನ್

ಂ ಂ ಂ

ಹರಿಪದ ನಿಮ್ಮಂರನು ನಿಲುಕುವನೆ ದುರ್ಜನ. —ಕು| ವ್ಯಾಸ

ಂ ಂ ಂ

ನೈತಿಕ ಉದಾತ್ತತೆಗೆ ಸ್ವಾರ್ಥತ್ಯಾಗ, ಆತ್ಮಾರ್ಪಣೆಗಳೇ ತಳಹದಿ.

ಂ ಂ ಂ

ನಿಮ್ಮದು ಒಂದು ವರ್ಷದ ಯೋಜನೆ ಇದ್ದರೆ ಭೀಜ ಬಿತ್ತಿರಿ; ಹತ್ತು ವರ್ಷದ ಯೋಜನೆಯೊಗಿದ್ದರೆ ಗಿಡಗಳನ್ನು ಹಚ್ಚಿರಿ; ನೂರು ವರ್ಷದ್ದಾದರೆ ಸಂತತಿ ಬೆಳೆಸಿರಿ -- (ಚೀನೀ ಗಾದೆ)

ಂ ಂ ಂ

Kindly

Contribute generously

to the

NAVAYUGA

GOLDEN JUBILEE FUND 1971

ಶ್ರೀಸಾಮಾನ್ಯನ ಸಂಸತ್ತಿನಲ್ಲಿ

ಜೈ ಬಂಗ್ಲಾ ದೇಶ್

ಕೆಟ್ಟ ಮೇಲೆ ಬುದ್ಧಿ ಬಂತೆನ್ನುವದಕ್ಕಿಂತ ಅರಿತು ನಡೆವ ಜಾಣನಿಗೆ ಒಳಿತಾಗುವ ಪ್ರಶ್ನೆ ಲೇಸೆನಿಸುತ್ತದೆ. ಪಾಕ್ ಪತ್ಯಾಕಾಂಡದ ರವರವ ನರಕದ ಧರ್ಮಾಧಿಕಾರಿಯೂಗಿರುವ ಕುಟಿಲನೀತಿಯು ಯಾಹ್ಯಾಖಾನ್ ಪ್ರಾಯಶಃ ರಕ್ತದ ನದಿಯ ದಡದಲ್ಲಿ ಎಲುಬಿನ ಮನೆಕಟ್ಟಿ. ತಲೆಬುರುಡೆಗಳ ಚಕ್ರಾಧಿಪತ್ಯ ಸ್ಥಾಪಿಸಲೇ ಯತ್ನಿಸುತ್ತಿರಬೇಕೆನಿಸುತ್ತದೆ. ಈ ದುರ್ಯೋಧನ ನೀತಿಯ ಯೂಹ್ಯಾ ಪುತ್ರ ಶಕುನಿ ತಂತ್ರದ ಭುಟ್ಟೋ ನಡೆಸುವ ಪಗಡೆಯೊಟದಲ್ಲಿ ನಿಜವಾಗಿಯೂ ಸೋತುಹೋಗುವುದೆಂದರೆ ಶ್ರೀಸಾಮಾನ್ಯ ಮಾತ್ರ. ಬಂಗ್ಲಾ ಸಮಸ್ಯೆ ವಿಶ್ವದ ಜಾಗೃತ ಸಮಸ್ಯೆಯಾಗಿರದೆ ಭಾರತದ ಶ್ರೀಸಾಮಾನ್ಯನಿಗೆ ಬಗೆಹರಿಸಲಾರದ ಒಂದು ಪೀಡೆಯಾಗಿ ಪರಿಣಮಿಸಿರುವುದಂತೂ ದಿಟ.

ಏಳೂವರೆ ಕೋಟಿಯಷ್ಟಿರುವ ಪಾಕ್ ಸ್ಥಾನಿಗಳಲ್ಲಿ ಎಂಟು ಲಕ್ಷದಷ್ಟು ನಿಷ್ಠಾವಿಗಳನ್ನು ಬಂದೂಕಿನ ಸಿಡಿಗುಂಡಿನಲ್ಲಿ ಹರಿದು, ಒಂದು ಕೋಟಿ ಜನರನ್ನು ಬಡಭಾರತಕ್ಕಟ್ಟಿ ಕೃತಕೃತ್ಯರಾಗಿರುವ ಪಾಕ್ ಪೀಡೆಗಳ ನೆನಪಲ್ಲಿ ಇಂದಿರಾಗಾಂಧಿಯವರ ವಿಶ್ವಪರ್ಯಟನೆಯೂಯಿತು. ಬಡ ಭಾರತೀಯನ ಬೆವರಿನ ಹಣ ಎಷ್ಟೋ ಪಾಲು ಅವಕ್ಕಾಗಿ ತೇಲಿಹೋಯಿತು. ವಿಶ್ವಸಂಸ್ಥೆಯಲ್ಲಿ ಚೀಣಕ್ಕೊಂದು ಸ್ಥಾನ ಸಿಕ್ಕಿತು. ಬಂಗ್ಲಾ ದೇಶದ ನಿರಾಶ್ರಿತರ ಪರಿಸ್ಥಿತಿಯ ಬಗೆಗೆ ಅಧ್ಯಕ್ಷ ನಿಕ್ಸನ್ನರದು ವಿಶ್ವಸಂಸ್ಥೆಯೊಂದಿಗೆ ಸಮಾಲೋಚನೆಯೂಯಿತು.

ಆದರೆ ಎತ್ತಿಗೆ ರೋಗ; ಕತ್ತೆಗೆ ಬರೆ ಎಂಬ ಗಾದೆಯೂಗಿದೆ ಭಾರತದಲ್ಲಿ ಬಂಗ್ಲಾ ನಿರಾಶ್ರಿತರ ಸಮಸ್ಯೆ. ದಿನಕ್ಕೆ ಪ್ರತಿಯೊಬ್ಬ ಆನಾಶ್ರಿತನಿಗೂ ಮೂರು ರೂಪಾಯಿಯಂತೆ ಮೂರು ಕೋಟಿ ರೂಪಾಯಿಯನ್ನು ನಾವು ವ್ಯಯಿಸುತ್ತಿದ್ದೇನೆ. ಎಲ್ಲಾ ನಿಜ. ಪೌರಾಣಿಕ ಪರಂಪರೆ ನಮ್ಮದು. ನಿರಾಶ್ರಿತರಿಗೆ ಆಶ್ರಯನಿತ್ತ ರಾಜಾಧಿರಾಜರ ಇತಿಹಾಸ, ಪರಂಪರೆ, ದೇಹಿಯೆಂದವರಿಗೆ ದೇಹವನ್ನೇ ಕೊಟ್ಟ ದಪ್ಪ ದಪ್ಪ ಇತಿಹಾಸವಿಂದು ನಮ್ಮ್ಯಲ್ಲಿದೆ. ಆ ಪೂತು ಇಂದು ಗಾಳಿಯಿಲ್ಲವ ಬಲೂನಿನಂತಾಗಿದೆ. ಹಿಂಗೋಲಿಲ್ಲದ ನಾವೆಯೂಗಿದೆ. ಪ್ರವಾಹದಲ್ಲಿ ಮುಳುಗುತ್ತಿರುವವನಿಗೆ ನೇದಾಂತ ಹೇಳಿದಂತಾಗಿದೆ. ಕೈಯಲ್ಲಿ ಕಸುವಿಲ್ಲ; ಮೈಯಲ್ಲಿ ಬಲವಿಲ್ಲ-ಶರತಲ್ಪದಲ್ಲಿ ಶಯನಿಸಿಕೊಂಡು ಮರಣಕ್ಕಾಗಿ ಉತ್ತರಾಯಣವನ್ನೇ ಎದುರು ನೋಡುತ್ತಿದ್ದ ಭೀಷ್ಮಾಚಾರ್ಯರಂತೆ ಇಂದೋ ನಾಳೆಯೋ ಕೈಲಾಸ ಯಾತೆ ಎನ್ನುವ ಭೀಕರ ಪರಿಸ್ಥಿತಿ ಭಾರತದ ಶ್ರೀಸಾಮಾನ್ಯನದಾಗಿದೆ.

ಸ್ವಭಾವತಃ ತಾಳ್ಮೆಯವರಾದ ನಾವು ಯೂರ ಸಮಸ್ಯೆಯನ್ನೂ ಅಷ್ಟು ಗಂಭೀರವಾಗಿ ವಿನೇಚಿಸುವುದಿಲ್ಲ. ವಿನೇಚಿಸಿದರೆ ಅದು ಅತಿ ಘೋರವೆನಿಸುತ್ತದೆ ತೋಳ, ಕುರಿಯ ಕತೆ ಕೇಳಿಲ್ಲವೆ? ಬೈದುದು: ನೀನಲ್ಲದಿದ್ದರೆ ನಿನ್ನಜ್ಜ ಎಂದು ಕುರಿಯನ್ನು ತೋಳ ಕಬಳಿಸಲಿಲ್ಲವೆ? ಯೂಹ್ಯಾಖಾನನ ತಪ್ಪಿಗೆ ನಾವೇಕೆ ನಿರಾಶ್ರಿತರನ್ನು ಸಾಕುವ ಪ್ರಾಯಶ್ಚಿತ್ತ ಹೊಂದಬೇಕು? ತೆರಿಗೆ ವಿಧಿಸಲು ಬಾಕಿ ಯೂವುದಕ್ಕೆನೆ; ಪೈಸೂರಿನ ಗವರ್ನರ್ ಧರ್ಮವೀರರು ಕೂಡ ಬಂಗ್ಲಾ ದೇಶಕ್ಕಾಗಿ ಕನ್ನಡಿಗರ ಕಾರ್ಯಭಾರದ ಮೇಲೆ ಮೂರು ಕೋಟಿ ರೂಪಾಯಿ ತೆರಿಗೆ ವಿಧಿಸಿದ್ದಾರೆ. ಪ್ರತಿಯೊಬ್ಬನೂ ಈ ತೆರಿಗೆಯ ಹೊರೆಯನ್ನು ಹೊರಬಲ್ಲನೆ?

ಬಂಗ್ಲಾ ಸಮಸ್ಯೆಗೆ ರಾಜಕೀಯ ಪರಿಹಾರ ಹುಡುಕಲು ಪಾಕ್ ಕುಕರ್ಮಿಗಳನ್ನು ಪಶ್ಚಿಮ ರಾಷ್ಟ್ರಗಳು ಪಂಚಾಯತಿ ರಂಗಕ್ಕೆಳೆದರೂ ಅದೊಂದು ನಾಟಕದಂತಾಗಿದೆ. ಷೇಕ್ಸ್‌ಪಿಯರನ ನ್ಯೂಕ್‌ಬೆತ್ ನಾಟಕದಲ್ಲಿ ಒಂದಾದ ಮೇಲೊಂದು ಕೊಲೆ ನೂಡುವ ಸರದಾರ ವ್ಯೂಕ್‌ಬೆತ್‌ನಿಗೆ ಅರಮನೆಯೆದುರಿನ ತರಣ್ಯ ನಡೆದು ಬಂದಾಗ ಸಾವು ಬರುವುದೆಂದು ಹೇಳುವ ಮೂವರು ಮುದಿ ಧಾಕಿನಿಯರು ನೆನಪಾಗುತ್ತಾರೆ.

ಅಷ್ಟೂ ಸಾಲದೆಂದು ಕೃಷ್ಣಗಢದಲ್ಲಿ ಪಾಕ್ ಅತಿಕ್ರಮಣಕಾರಿ ಸೈನಿಕರ ರಿಕಾಣಿ ಭದ್ರತಾ ಪಡೆಯ ಸೈನಿಕರಲ್ಲಿ ಕೆಲವರು ಅವರ ಮೆಶಿನ್‌ಗನ್‌ಗೆ ಬಲಿ. ದುಷ್ಟ ಆಯೂಬ್ ಖಾನ್ ಮತ್ತು ದಿ| ಶಾಸ್ತ್ರಿಗಳೊಂದಿಗೆ ತಾಷ್ಕೆಂಟಿನಲ್ಲಿ ನಡೆದ ಸಂಧಾನ ನಿರ್ಣಾಪಾಲಾಯಿತು. ಈಗ ಸರದಾರ ಪಟೇಲರೊಬ್ಬರು ಇರುತ್ತಿದ್ದರೆ ಇಂಥ ವಿಡಂಬನ ಪರಿಸ್ಥಿತಿ ಬರುತ್ತಿರಲಿಲ್ಲವೆನಿಸುತ್ತದೆ. ಯೂಕೇ ಕೋಡಂಗಿ ಉಡಿತೆ? ನಮ್ಮಲ್ಲಿ ಶಸ್ತ್ರಾಸ್ತ್ರಗಳಿಲ್ಲವೆ? ವಿಮಾನಗಳಿಲ್ಲವೆ? ಗ್ರೋಮಿಕೋನೊಂದಿಗೆ ಆದ ಒಪ್ಪಂದದಂತೆ ರಷಿಯ ನಮ್ಮೊಂದಿಗಿದೆ. ವಿಶ್ವಸಂಸ್ಥೆಯಲ್ಲಿ ಸ್ಥಾನ ಸುದುರಿಸಿಕೊಟ್ಟ ಇಂದಿರಾಗಾಂಧಿಯವರಲ್ಲಿ ಸೌಹಾರ್ದತೆಯಿದ್ದರೆ ಚೀಣ ನಮ್ಮ ಸಹಾಯಕ್ಕೆ ಬರುತ್ತದೆ. ಅಮೆರಿಕ ಪಾಕಿನ್ತಾನಕ್ಕೆ ಶಸ್ತ್ರಾಸ್ತ್ರ ಕೊಡುವುದಿಲ್ಲ. ಇನ್ನೇನು? ಫೈರೈ, ಸ್ಫೈರ್ಯ, ವೀರೋಪ ಭಾರತೀಯ ಯೋಧರಿಗೆ ಬಲುನಳೆಯೂಗಿದ್ದಲ್ಲಿ ಮುಂದುನರಿಯಲಿ. ಯುದ್ಧರಂಗದಲ್ಲಿ ಹೋರಾಡಲಿ. ಪಾಕ್ ದುರಾಗ್ರಹಿಗಳು ಮಣ್ಣು ಮುಕ್ಕಲಿ. ಅಂದರೆ ಯೂಹ್ಯಾಖಾನನ ರುಪ್ರನಾಟಕ ನಿಲ್ಲುತ್ತದೆ. ಬಂಗ್ಲಾ ನಿರಾಶ್ರಿತರಿಗೆ ನೆಲೆಯೂಗುತ್ತದೆ. ಆ ಸತ್ಕೀರ್ತಿ ಭಾರತದ್ದೇ ಆಗುತ್ತದೆ. ನಮ್ಮ ತಾಳ್ಮೆ ಈಗಂತೂ ನಮ್ಮನ್ನೇ ಕೊಲ್ಲುತ್ತಿರುವುದು ನಿಜ. ಓಂ ಶಾಂತಿಃ ಶಾಂತಿಃ ಶಾಂತಿಃ ಯು ನೆನಪಲ್ಲಿ ನೋತು ಹಣ್ಣಾಗಿದ್ದೇನೆ; ನಿರ್ವೀರ್ಯರಾಗುತ್ತಿದ್ದೇನೆ.

ಭಾರತದಲ್ಲಿರುವ ಬಂಗ್ಲಾ ನಿರಾಶ್ರಿತರನ್ನು ಬಿಡಿಸಿ, ರುಂಡ ಚಂಡಾಡುವ ಸಲುವಾಗಿ ಯೂಹ್ಯಾಖಾನರು ಸಮರಸಿದ್ಧತೆ ನಡೆಸುತ್ತಿದ್ದಾರೆ. ಮಿಂಚಿಹೋದ ಕಾರ್ಯಕ್ಕೆ ಚಿಂತಿಸುವ ಮುನ್ನ ಶ್ರೀಸಾಮಾನ್ಯ ಜಾಗ್ರತನಾಗಬೇಕು. ಈ ನರಮೇಧ ನಿಲ್ಲಿಸಲು ಪಣ ತೊಡಬೇಕು. ಭಾರತೀಯ ರಾಜಕಾರಣಿಗಳು ಜೊಜ್ಜು ಬೆಳೆಸಿ ತಿರುಗಬಹುದಲ್ಲದೆ ಹೆಗಲಿಗೆ ಬಂದುದನ್ನು ಬಗಲಿಗಿಳಿಸಬೇಕೆಂದವರು ತಿಳಿದೇ ಇಲ್ಲ.

ಬಂಗ್ಲಾ ಸಮಸ್ಯೆಯನ್ನು ಅಸಜ್ಜೆ ಮೂಡದೆ ಪರಿಹರಿಸುವುದೂ ಇಂದಿರಾಗಾಂಧಿಯವರ ಕರ್ತವ್ಯ. ಅದಷ್ಟು ಶೀಘ್ರ ನಿರಾಶ್ರಿತರಿಗೊಂದು ಆಶ್ರಯವಾಗಲಿ. ಬಂಗ್ಲಾ ಸಮಸ್ಯೆಯಿಂದ ಸೋತು ಸುಣ್ಣಾಗಿರುವ ನಾವು ಜೇತರಿಸಿಕೊಳ್ಳುವಂತಾಗಲಿ. ಸೈ ತಾನನ ಕೈಗೊಂಬೆಯೂಗಿರುವ ಪಾಕಿಸ್ತಾನದ ಕತ್ತು ಮುರಿದು ಪಂಜರಕ್ಕೆ ತಳ್ಳುವುದು ಪೂರದ ಮಾತಲ್ಲ!

—ಪೆ. ರಾಮಕೃಷ್ಣ ಶಾಸ್ತ್ರಿ

●●

ಸ್ವರ್ಣಮಯೂ ಉಮಾ

(ಎರಡನೇ ಪುಟದಿಂದ)

ಅಡನಾಡುವುದು. ಅವನೊಡನೆ ಇರುವದು. ಅವನಿಗಾಗಿಯೇ ಇರುವುದೆಲ್ಲ ಹೇಗೆ ಸಾಧ್ಯ ಬಲ್ಲೆಯೇನು? ಇಂದ್ರಿಯಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕು. ಮನಸ್ಸನ್ನು ಬೆಳೆಸಬೇಕು. ಯಾವಾಗಲೂ ಒಳ್ಳೆಯ ಕೆಲಸವನ್ನು ಸರಿಯೂದುವನ್ನೇ ಮೂಡಬೇಕು. ನೀನು ಅತಿನೇಕ ಆಸಂಕಾರದಿಂದ ಜಂಬ ಪ್ರದರ್ಶಿಸುತ್ತಿದ್ದೀಯೆ. ಆ ನ್ದರಿಂದ ಸೃಷ್ಟಿಕರ್ತನಾದ ಬ್ರಹ್ಮನು ನಿನ್ನನ್ನು ಸರಿ ದಾರಿಗೆ ತರಲು ನನ್ನನ್ನು ಕಳುಹಿಸಿದ್ದಾನೆ. ಈ ಪಾಠವನ್ನು ನಿನಗೆ ಕಲಿಸಲು ನನಗೆ ಆಜ್ಞಾಪಿಸಿದ್ದಾನೆ".

ಸ್ವರ್ಣಮಯೂ ಸುಂದರ ನಾರಿಯು ಅಂಗಾಂಗಗಳಿಂದ ದಿವ್ಯವಾದ ಪ್ರಕಾಶ ಬೆಳಗಿತು. ಆ ಹೊಂಬಣ್ಣ ಎಷ್ಟು ಥಳಥಳಿಸಿತೆಂದರೆ ಇಂದ್ರನನ್ನೂ ಅದು ಕುರುಡನನ್ನಾಗಿ ಪರಿವರ್ತಿಸಿತು. ಸ್ವರ್ಗಲೋಕದ ಸುರೇಂದ್ರ ಭಯ ಭೀತಿಯಿಂದ ನಡುಗಲು ಪ್ರಾರಂಭಿಸಿದನು ಮತ್ತು ತನ್ನ ಕಣ್ಣುಗಳನ್ನು ಮುಚ್ಚಿ ಅವಳ ಅಡಿದಾವರೆಗಳಿಗೆ ಪ್ರಣಾಮ ಮಾಡುತ್ತ ಬಿದ್ದು ಬಿಟ್ಟನು.

ಕಣ್ಣು ತೆರೆದು ನೋಡುವಾಗ ಅಲ್ಲಿ ಉಮೆಯಿರಲಿಲ್ಲ;ಅವಳು ಮಾಯವಾಗಿದ್ದಳು.

●●

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರವಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಆಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

ಫೋನ್: 77

Please Visit

HOTEL SHIVAPRASAD

High Class Boarding, Lodging & Restaurant

COONDAPUR, S. K.

ನೋಟೀಸು

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

S. C. No. 98/1971.

ವಾದಿ— ವೈ. ಸೂರ್ಯಂಣ ಶೆಟ್ಟಿ. ಮತ್ತು

ಪ್ರತಿವಾದಿಗಳು—ಮೊಗೆರ ಚಿಕ್ಕಮ್ಮ ಹೆಂಗಸು ಕೂಡಾ 2 ಜನರು.

ಸದ್ರಿ ದಾವೆಯ 1ನೆ ಪ್ರತಿವಾದಿಳು ಮೊಗೆರ ಚಿಕ್ಕಂಮು ಹೆಂಗಸ್ಸು, ಮೊಗೆರ ನಾಗಿ ಪೆಂಗ್ಸಿನ ಮಗಳು.

2ನೆ ಪ್ರತಿವಾದಿ, ಮೊಗೆರ ಕುಪ್ಪಯ್ಯ ,ಶೇಷು ಹೆಂಗ್ಸಿನ ಮಗ.

ಕುಂದಾಪುರ ತಾಲ್ಲು ಪಡುವರಿ ಗ್ರಾಮದ ಜೋಪಯೆಲ್ಲಿರುವವರು.

ಇವರಿಗೆ

ನೀವು ಕೂಡಾ 2 ಜನರು ಪ್ರತಿವಾದಿರಾಗಿ, ವಾದಿಗೆ ತಾರೀಕು 9-6-1968ರಲ್ಲು ದೊಪಾಯ 90-00ಕ್ಕೆ ಜರತಿಕೊಟ್ಟ ದಿನಾಂಕ ನೋಟಿನ ಆಲ್ಲು ಬಡ್ಡಿ ಕೂಡಾ ಪೂರಾಯಿ 107.90ರ ಸಂತ್ರವೆ ಬಡ್ಡಿ ಕೋರ್ಟು ಖರ್ಚು ವಗೈರೆ ಬಗ್ಗೆಸಿವಮ ಮೇಲೆ ಮೂಡಿವ ಮೇಲ್ಕಂಡ ದಾವೆಯು ನಿಮ್ಮ ಹಾಜರಾತಿಯ ಬಗ್ಗೆಕ್ಕೆ ತಾರೀಕು 21—1—1972ಕ್ಕೆ ಆಪ್ಪೀರೆ ತಪ್ಪದೆಗೆ ಯಿತೋಸಾಗಿಯವೆ. ಈ ಕುರಿತು ನಿಮಗೆ ಆಕ್ಷೇಪಣೆ ಇದ್ದಲ್ಲಿ ಸದ್ರಿ ತಾರೀಕಿನ ದಿನದ ಹಗಲು 11 ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಜ್ಞಾಪಿಸಿರು ಮೂಡಿಕೊಳ್ಳ ತಕ್ಕದ್ದು. ತಪ್ಪಿದಲ್ಲಿ ದಾವೆಯನ್ನು ಏಕ ಪಕ್ಷವಲ್ಲಿ ತೀರ್ಮಾನಿಸಲಾದೀತು.

ಕೋರ್ಟು ಹ್ಕುಂ ಪ್ರಕಾರ.

A. ರಾಜೀವ ಶೆಟ್ಟಿ.
ಎಡ್ವೋಕೇಟ್

ಕುಂದಾಪುರ, ತಾ. 27—11—1971.

ಬಿ. ಎಲ್. ಎನ್. ರೈ ನಿಧನ.

ನಿವೃತ್ತ ಜಿಲ್ಲಾ ನ್ಯಾಯಾಧೀಶರೂ, ಉಡುಪಿ ಲಾ ಕಾಲೇಜಿನ ಪ್ರಥಮ ಪ್ರಿನ್ಸಿಪಾಲರಾಗಿ ನಿವೃತ್ತರಾದವರೂ, ಆದ ಶ್ರೀ ಬಿ. ಲಕ್ಷ್ಮೀನಾರಾಯಣ ರೈ ಅವರು ತಾ. 3 ನೇ ರಾತ್ರಿ ನಿಧನರಾದರು. ಅವರ ಅಂತ್ಯ ಕ್ರಿಯೆಯು ಮರುದಿನ ಪೆರಂಪಳ್ಳಿಯಲ್ಲಿ ನೆರವೇರಿತು. ದಿವಂಗತ ರೈಗಳು ಸರಳ ಹೃದಯರೂ, ಜನಸ್ನೇಹಿಯರೂ ಪರೋಪಕಾರಿಗಳೂ ಆಗಿದ್ದರು. ಸುದರಾಸು ಸರಕಾರದಲ್ಲಿ ವಿಶೇಷ ನಿಷ್ಠೆ ಪ್ರಾಮಾಣಿಕತೆ ಉಳ್ಳವರಾಗಿದ್ದರು.

NAVAYUGA 16-12-1971

Registered with the Registrar of News Papers for India under No. R. N. 3546/57

REGD. No B. G. 176
LICENCE No. 33
Licensed to Post without Prepayment

ಎಂ. ಇ. ಜಿ. ಯಲ್ಲಿ

ನಾಳಿನ ಸ್ಯಾಪರುಗಳಿಗೆ ಇಂದು ತರಬೇತಿ

ಹದಿನಾಲ್ಕು—ಹದಿನೈದರ ಹರೆಯದ ಹುಡುಗ—ಎಂದರೆ ಹಟಮೂರಿ ಅವಿಧೇಯ ಸಂಪ್ರದಾಯ ವಿರೋಧಿ, ಎಂದೇ ಅನೇಕರ ಭಾವನೆ. ಆದರೆ ಸೇನೆಗೆ ಈ ಹುಡುಗರ ಬಗ್ಗೆ ಇಂತಹ ಭಾವನೆಯಿಲ್ಲ. ಇವರ ಪಾಲಿಗೆ ಅವರು ಮುಖ್ಯಾಗದವಜ್ರ. ಇಂತಹ ಅಪ್ರಾಪ್ತ ವಯಸ್ಸಿನ ಹುಡುಗರನ್ನೇ ಆರಿಸಿಕೊಂಡು ಅವರನ್ನು ನಾನಾ ಸೇವೆಗಳಿಗೆ ಅಣಿಗೊಳಿಸುವುದು ಸೇನೆಯ ಗುರಿ

ಮದ್ರಾಸ್ ಇಂಜಿನಿಯರಿಂಗ್ ಗ್ರೂಪ್ 1940ರಲ್ಲಿ ಬಾಯ್ಸ್ ಕಂಪೆನಿಯೊಂದನ್ನು ಪ್ರಾರಂಭಿಸಿ ಈ ದಿಶೆಯಲ್ಲಿ ಮುನ್ನುಡಿ ಇಟ್ಟಿತು.

ಚಿಕ್ಕ ಹುಡುಗರನ್ನು ಸೇನೆಯಸ್ಯಾಪರುಗಳ ಇಂಜಿನಿಯರ್‌ಗಳನ್ನಾಗಿ ಮೂರ್ಪಡಿಸುವುದು ಮತ್ತು ಸ್ಯಾಪರುಗಳ ಮಕ್ಕಳು ಅಥವಾ ಅವರ ಕುಟುಂಬದವರು ಸ್ಯಾಪರ್ ಶಾಖೆಯನ್ನು ಸೇರಿ ಸೇವೆಸಲ್ಲಿಸುವುದಕ್ಕೆ ಉತ್ತೇಜನನೀಡುವುದು ಎಂ.ಇ.ಜಿ. ಯ ಎರಡು ಉದ್ದೇಶಗಳಾಗಿವೆ.

ಎರಡನೆಯ ವಿಶ್ವಸಮರದ ಕಾಲದಲ್ಲಿ ತರಬೇತಾದ ಯೋಧರ ಅವಶ್ಯಕತೆ ಹೆಚ್ಚಿತು. ಫಲಸ್ವರೂಪವಾಗಿ ಬಾಯ್ಸ್ ಕಂಪೆನಿಯನ್ನು ಮೇಲ್ದರ್ಜೆಗೆ ಏರಿಸಲಾಯಿತು. ಆನಂತರ ಇದೇ ಒಂದು ಸ್ವತಂತ್ರದಳನವಾಗಿ ಬೆಳೆದುಬಂದಿದೆ. ಈ ಕಂಪೆನಿಯು ಒಂದು ಸಲಕ್ಕೆ 1600 ಹುಡುಗರಿಗೆ ತರಬೇತಿಯನ್ನು ಕೊಡಬಲ್ಲದು.

ಏಳನೆಯ ತರಗತಿಯವರೆಗೆ ಓದಿದ ಮತ್ತು ಹದಿನಾಲ್ಕುವರೆಯಿಂದ-ಹದಿನೈದುವರೆವರ್ಷ ವಯೋಮಿತಿಯೊಳಗಿರುವ ಹುಡುಗನನ್ನು ಈ ದಳಕ್ಕೆ ಆರಿಸಿಕೊಳ್ಳಲಾಗುತ್ತದೆ.

ಎರಡು ವರ್ಷಗಳವರೆಗೆ ತರಬೇತಿ ನೀಡಿದಬಳಿಕ ಅವರನ್ನು ಟ್ರೈನಿಂಗ್ ಬೆಟಾಲಿಯನ್‌ಗಳಿಗೆ ಕಳುಹಿಸಿಕೊಡಲಾಗುತ್ತದೆ. ಪ್ರತಿ ಮೂರು ತಿಂಗಳಿಗೊಮ್ಮೆ ಬಾಯ್ಸ್‌ದಳಕ್ಕೆ ಅಭ್ಯರ್ಥಿಗಳನ್ನು ಆರಿಸಿಕೊಳ್ಳಲಾಗುತ್ತದೆ. ಹೀಗೆ ಆರಿಸಿಕೊಳ್ಳುವ ಪ್ರತಿಯೊಂದು ತಂಡದಲ್ಲೂ 40ರಿಂದ 60 ಮಂದಿ ಹುಡುಗರು ಇರುತ್ತಾರೆ. ಈ ಹುಡುಗರ ತರಬೇತಿ ಶ್ರಮ ಪ್ರಧಾನವಾದದ್ದು. ಸ್ವತಿದಿನ ಬೆಳಿಗ್ಗೆ 7 ಗಂಟೆಗೆ ಅವರ ತರಬೇತಿ ಆರಂಭವಾಗಿ ರಾತ್ರಿ 10 ಗಂಟೆಯವರೆಗೂ ನಡೆಯುತ್ತದೆ

ಮೊದಲ ವರ್ಷ ಬಾಯ್ಸ್ ಕಂಪೆನಿಯ ಈ ಹುಡುಗರಿಗೆ ಶಾಲೆಯ ಕೋಣೆಗಳಲ್ಲಿ ಸೇನೆಯ ಜೀವನವೂ ಸೇರಿದಂತೆ ಸಾಮಾನ್ಯ ಶಿಕ್ಷಣದ ಬಗ್ಗೆ ತಿಳಿವಳಿಕೆ ಮೂಡಿಕೊಡಲಾಗುತ್ತದೆ. ಆಗ ಅವರು ಹಿಂದಿ, ಇಂಗ್ಲೀಷ್ ಭಾಷೆಗಳನ್ನು ಕಲಿಯುತ್ತಾರೆ. ನಕ್ಷೆಗಳನ್ನು ಓದುವುದು ಮತ್ತು ಸಮೂಜಶಾಸ್ತ್ರಗಳನ್ನೂ ಪ್ರಾಥಮಿಕ ವಿಜ್ಞಾನಗಳನ್ನೂ ಕಲಿಯುವುದು ಇತ್ಯಾದಿ ಅವರ ಪಾಠಕ್ರಮ. ಮೊದಲ ವರ್ಷದ ತರಬೇತಿಯನ್ನು ಪೂರೈಸುವ ಹೊತ್ತಿಗೆ ಅವರು ಸೇನೆಯ ಇಂಗ್ಲೀಷ್ ಪರೀಕ್ಷೆಯ ಮೂರನೆಯ ವರ್ಗವನ್ನು ಪೂರೈಸುತ್ತಾರೆ.

ತರಬೇತಿಯ ಎರಡನೆಯ ವರ್ಷದಲ್ಲಿ ಹುಡುಗರ ಅಪೇಕ್ಷೆಯ ವೃತ್ತಿಗಳನ್ನು ಅರಿತುಕೊಂಡು ಆಯಾ ವೃತ್ತಿಗಳಲ್ಲಿ ತರಬೇತಿಯನ್ನು ನೀಡಲು ಯತ್ನಿಸಲಾಗುತ್ತದೆ. ಆಗ ಅವರು ಹಿಂದಿ ಭಾಷೆಯಲ್ಲಿ ಸೇನೆಯ ಎರಡನೆಯ ವರ್ಗವನ್ನು ಪಾಸಾಗುತ್ತಾರೆ. ಇದೇ ಅವಧಿಯಲ್ಲಿ ವೃತ್ತಿ ಶಿಕ್ಷಣದ ನಾಲ್ಕನೆಯ ವರ್ಗವನ್ನೂ ಪಾಸಾಗಬೇಕು. ತರಬೇತಿಯ ಈ ಕಾಲದಲ್ಲಿಯೇ ಹುಡುಗರು ಕೊನೆಯಪಕ್ಷ ಒಂದು ಉಪಯುಕ್ತವಾದ ವೃತ್ತಿಯಲ್ಲಾದರೂ ವಿಶೇಷ ಜ್ಞಾನವನ್ನು ಪಡೆಯುತ್ತಾರೆ ಸಮೀಕ್ಷೆ, ವಿದ್ಯುಚ್ಛಕ್ತಿ ಸಾಧನಗಳನ್ನು ಪರೀಕ್ಷಿಸುವ ಕಲೆ, ಫಿಟರ್, ಮೆಷಿನಿಂಗ್, ವೆಲ್ಡಿಂಗ್, ಬಡಿಗತನ, ಮೋಟಾರುಚಾಲಕ ಇವೇ ಮುಂತಾದ ವೃತ್ತಿಗಳಲ್ಲಿ ಅವರು ನಿಷ್ಣಾತರಾಗುತ್ತಾರೆ. ಈ ಹೊತ್ತಿಗಾಗಲೇ ಅವರಿಗೆ ಇಂಜನಿಯರಿಂಗ್ ಕೌಶಲದ ಹಾಗೂ ಒಟ್ಟಾಗಿ ಕಾರ್ಯನಿರ್ವಹಿಸುವುದರ ಮಹತ್ವ ಮನನವಾಗುತ್ತದೆ.

ಫುಟ್‌ಬಾಲ್, ವಾಲಿಬಾಲ್, ಹಾಕಿ ಬಾಕ್ಸಿಂಗ್ ಮುಂತಾದ ಸ್ಪರ್ಧೆಗಳಲ್ಲಿ ಅವರು ಕಡ್ಡಾಯವಾಗಿ ಭಾಗವಹಿಸಲೇಬೇಕು. ಪೌಷ್ಟಿಕಾಹಾರದ ವಿಷಯದಲ್ಲೂ ವಿಶೇಷ ಗಮನವನ್ನು ನೀಡಲಾಗುತ್ತದೆ.

ಹುಡುಗರಿಗೆ ಪೌಷ್ಟಿಕಾಹಾರವನ್ನು ನೀಡುವುದರ ಜೊತೆಗೆ ದಿನವೂ ಅರ್ಧಲೀಟರ್ ಗಳಷ್ಟು ಹಾಲನ್ನು ಕೊಡಲಾಗುತ್ತದೆ, ವಾರದಲ್ಲಿ ಐದುದಿನ ಮೊಸಳನ್ನೂ ಸಾಕಷ್ಟು ಪ್ರಮಾಣದಲ್ಲಿ ತರಕಾರಿಯನ್ನು ಕೊಡಲಾಗುತ್ತದೆ. ವಯಸ್ಸಾದ ಯೋಧರಿಗೆ ನೀಡುವುದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಹಾಲು ಹಣ್ಣು ತರಕಾರಿ ಇತ್ಯಾದಿ ಈ ಹುಡುಗರಿಗೆ ಕೊಡಲಾಗುತ್ತದೆ.

ತರಬೇತಿಯ ಕಾಲದಲ್ಲಿ ಬಾಯ್ಸ್ ಕಂಪೆನಿಯ ಹುಡುಗರು ತಿಂಗಳಿಗೆ ಇಪ್ಪತ್ತೈರಡು ರುಪಾಯಿ ಐವತ್ತು ಪೈಸೆ ವ್ಯಾಸಂಗವೇತನವನ್ನು ಪಡೆಯುತ್ತಾರೆ. ಇದರಲ್ಲಿ ಬಹುತೇಕ ಹಣವನ್ನು ಉಳಿತಾಯಮೂಡಿ, ವರ್ಷದಲ್ಲಿ ಒಂದು ತಿಂಗಳ ರಜೆ ತೆಗೆದು ಕೊಂಡಾಗ ಈ ಹಣವನ್ನು ತಮ್ಮ ಊರಿಗೆ ತೆಗೆದುಕೊಂಡು ಹೋಗುತ್ತಾರೆ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಅವರು ಕಲಿಯುವ ವೇಳೆಯಲ್ಲಿ ಗಳಿಸುತ್ತಾರೆ.

ಹೀಗೆ ಬಾಯ್ಸ್ ಕಂಪೆನಿಗೆ ಹುಡುಗರನ್ನು ಆಯ್ಕೆಮಾಡುವ ಎಂ. ಇ.ಜಿ. ನಾಳೆಗೆ ಬೇಕಾಗಬಹುದಾದ ಸೈನಿಕರನ್ನು ಪೂರೈಸುವ ಸಾಮರ್ಥ್ಯವನ್ನು ಹೊಂದಿದೆ.

● ●

ಗೇಣಿ ವ್ಯಾಜ್ಯಗಳಿಗೆ ತಡೆಯಾಜ್ಞೆ

ಮೈಸೂರು ಭೂ ಶಾಸನದ ಪ್ರಕಾರ ಉಡುಪಿ ತಹಶೀಲ್ದಾರರ ಕೃಷಿ ಉತ್ಪತ್ತಿ ಪ್ರಕಟಣೆಯಿಂದ ಅಸಂತುಷ್ಟರಾಗಿ ಉಡುಪಿ ತಾಲೂಕಿನ ಸುಮಾರು ೬೫೦ ಚೀಲ ಚಾಲಗೇಣಿ ವಕ್ಕುಗಳು ಬಿಲ್ಲಾಧಿಕಾರಿಗಳಿಗೆ ಮಾಡಿದ ಅಪೀಲು ಅರ್ಜಿಗಳ ಫಲವಾಗಿ ಈ ಮೊದಲು ೪೫೭ ವಕ್ಕುಗಳಿಗೆ ಪೈಯುಕ್ತ ತಡೆಯಾಜ್ಞೆಗಳು ಆನಂತರ ಕೊಡಲ್ಪಟ್ಟದ್ದು ಆನಂತರ ತಾ. 24.11.71ರಲ್ಲು ಅವರು ಬಾಕಿ ಗೇಣಿ ವ್ಯಾಜ್ಯಗಳನ್ನು ತನಿಖೆ ಮಾಡದಿರಲು ರೇಂಡ್ ಟ್ರಿಬ್ಯೂನಲಿಗೆ ತಾತ್ಕಾಲಿಕ ಸಾಮೂಹಿಕ ತಡೆಯಾಜ್ಞೆಯನ್ನು ಹೊರಡಿಸಿದ್ದಾರೆ.

ಬಿಲ್ಲಾಧಿಕಾರಿಗಳು ಅಪೀಲು ಅರ್ಜಿಗಳನ್ನು ಸದ್ಯದಲ್ಲೇ ತನಿಖೆ ತೆಗೆಯುವರೆಂದು ತಿಳಿದು ಬಂದಿದೆ.

ನೋಟೀಸು

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. No. 28/1971.

ಗಣಪತಿ ಭಟ್ಟ —ಅರ್ಜಿದಾರ.

-Vs-

K.M. ಮೊಯಿನ್ ಕುಂಞಿ ಕೂಡಾ —ಎದ್ರಿರು.

2ನೇ ಎದ್ರಿ K. M. ಅಬ್ದುಲ್ ಖಾದರ್, ಕುಂಞಾರ್ ಮಮ್ಮದೆ ಬ್ಯಾರಿಯವರ ಮಗ, ಸುಳ್ಯ ತಾಲೂಕು, ಬೆಳ್ಳಾರೆ ಕಸ್ಬಾ ಗ್ರಾಮದಲ್ಲಿರುವವರು. P.O. ಬೆಳ್ಳಾರೆ. ದ. ಕ. ಇವರಿಗೆ—

ಮೇಲ್ಕಂಡ ಗೇಣಿ ವಸೂಲಿ ಅರ್ಜಿಯು ನಿಮ್ಮ ಹಾಜ್ರಾತಿ ಬಗ್ಗೆ ತಾ. 5-1-1972ಕ್ಕೆ ವ್ಯಾದೆಯೂಗಿರುತ್ತದೆ. ಆ ದಿನ ನೀವು ಸ್ವತಹ ಯಾ ವಕೀಲರ ಮುಖಾಂತರ ಹಾಜ್ರಾಗಿ ಉದಾಹರಿಸಿ ಕೊಳ್ಳ ತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಕೋರ್ಟಿನವರಿಗೆ ಯುಕ್ತ ಕಂಡಂತೆ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)

ಎ. ಪಿ. ಗೌರೀಶಂಕರ್.

ಅರ್ಜಿದಾರನ ಕಡೆ ಎಡ್ವಕೇಟು.

ಪುತ್ತೂರು, ದ. ಕ. 6—12—1971.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ **English Made Easy**

ಅನ್ಯರ ಸಹಾಯವಿಲ್ಲದೆ ತನ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ: ರೂ. 2—00

Letter Writing Made Easy **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ : ರೂ. 1—50

ಗೀತೆಯ ಕೈಗನ್ನಡಿ **ಭಗವದ್ಗೀತೆಯ ಸಮೂಲ ಭಾಷಾಂತರ**

ಹೊರಕೆರೆ ಚಿದಂಬರಯ್ಯನವರು ಸರಳ ಕನ್ನಡದಲ್ಲಿ ಬರೆದ ಗೀತೆಯ ಸಮೂಲ ಅನುವಾದ. 450 ಪುಟಗಳ ಸುಂದರ ಕೈಹೊತ್ತಗೆ ಬೆಲೆ: ರೂ. 2-00

ಮನೆ-ಮದ್ದು **Home Remedies**

ಡಾ| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರೆ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಸಂಗ್ರಾಹ್ಯ ಪುಸ್ತಕ. ಬೆಲೆ: ರೂ. 2-00

ವಿ. ಸೂ. ವಿ. ಪಿ. ಮೂಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 80 ಪೈಸೆ ಅಂಚೆ ವೆಚ್ಚ ಸೇರಿಸಿ ಮನಿಆರ್ಡರು ಮಾಡಿದರೆ ಬುಕ್ ಪೋಸ್ಟ್ ಮಾಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಕಾಲುಕೋಟೆ, ಉಡುಪಿ.

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0-75 ಪೈಸೆ ಮಾತ್ರ.

ಒಂದು ರೂ ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ.ಕ.

Edited, Printed & Published by K. H. Shetty at the Navayuga Press, Udipi, S. Indian

ಸ್ಥಾಪಕರು:
ದಿ| ಎ. ಬಿ. ಶೆಟ್ಟಿ

ಸಂಪಾದಕ:
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಸಂಪುಟ ೫೧
ಸಂಚಿಕೆ ೧೬

Vol. 51
No. 16

ಉಡುಪಿ, 23—12—1971

ಅಮೆರಿಕೆಯು
ಪಾಕಿಸ್ತಾನದ ಪರಮ ಮಿತ್ರನೆ?

ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನ ಮಂತ್ರಿಯಾದ ಬಳಿಕ ನಮ್ಮ ದೇಶದ ಒಲವು ಸೋವಿಯತ್ ರಶ್ಯದತ್ತ ಹೆಚ್ಚು ಹೆಚ್ಚಾಗಿ ಸರಿಯುತ್ತಿರುವುದು ವೇದ್ಯವಾಗಿದೆ. ಆದು ಈಗಿನ ಸಮಯದಲ್ಲಿ ಮತ್ತಷ್ಟು ದೃಢವಾಗಿದೆ.

ಪಂ. ನೆಹರೂರವರು ಎಲ್ಲರೊಡನೆ ಸ್ನೇಹಾಚಾರವನ್ನು ಬಯಸಿದ್ದರು; ಕೈಕುಲುಕಿದ್ದರು. ಆದರೂ ಅವರೊಲವೂ ಸೋವಿಯತ್ತಿನತ್ತಲೇ ಇದ್ದುದು ಹಗಲಿನಷ್ಟು ಸ್ಪಷ್ಟ.

ಪಾಶ್ಚಾತ್ಯದೇಶಗಳು ಒತಿಕಾಟದ ಸ್ವಭಾವದವುಗಳೆಂಬುದನ್ನು ಭಾರತೀಯರೆಂದೋ ಅರಿತುಕೊಂಡಿದ್ದಾರೆ. ಆವರು ಪಾಕ್ ಪರರು ಎಂಬುದಕ್ಕೆ ಇದಕ್ಕೆ ಮೊದಲೇ ಹಲವಾರು ನಿದರ್ಶನಗಳು ದೊರಕಿವೆ.

ಕಾಶ್ಮೀರವು ಭಾರತದಲ್ಲಿ ವಿಲೀನಗೊಂಡ ರಾಜ್ಯವೆಂಬುದನ್ನು ಒಪ್ಪದ ಪಾಕಿಸ್ತಾನದ ಬೆನ್ನು ಚಪ್ಪರಿಸುತ್ತಲೇ ಇರುವ ಪಾಶ್ಚಾತ್ಯ ದೇಶಗಳು ಭದ್ರತಾ ಸಮಿತಿಯಲ್ಲಿ ಆಗಲೂ ಅದನ್ನು ಬೆಂಬಲಿಸಿದ್ದುವು; ಈಗಲೂ ಬೆಂಬಲಿಸಿದರೆ ವಿಸ್ಮಯವಿಲ್ಲ.

ಕಾಶ್ಮೀರ ಸಂಬಂಧಿ ಗೊತ್ತುವಳಿಗಳು ಭದ್ರತಾ ಸಮಿತಿಯಲ್ಲಿ ಚರ್ವಿತ ಚರ್ವಣವಾದಾಗಲೆಲ್ಲ ಸೋವಿಯತ್ ರಶ್ಯ ಭಾರತದ ಪರವಾಗಿ ನಿಂತು ತನ್ನ ಪ್ರತಿಷೇಧಮತ ನೀಡಿ ಅವನ್ನು ನಿಷ್ಕ್ರಿಯಗೊಳಿಸಿದ್ದನ್ನು ನಾವೆಂತು ಮರೆತೇವು?

ಈಗ ಮತ್ತೆ ಅಂತಹುದೇ ಕಪಟ ನಾಟಕವನ್ನು ಪಾಶ್ಚಾತ್ಯದೇಶಗಳು ಆಡತೊಡಗಿವೆ. ಬಂಗ್ಲಾದೇಶದೊಡನೆ ತಾನೆಸುರಿಸಬೇಕಾಗಿ ಬಂದ ಸಮರವನ್ನು ದಂಡಪತಿ ಯಹ್ಯಾಖಾನರು ನಮ್ಮತ್ತ ತಿರುಗಿಸಿದ್ದಾರೆ.

ನಮ್ಮ ಸಮಗ್ರತೆಗೆ, ನಮ್ಮ ಸಾರ್ವಭೌಮತೆಗೆ ನಮ್ಮ ಸಂರಕ್ಷಣೆಗೆ ಈ ಪಂಥಾಹ್ವಾನವನ್ನು ನಾವು ಸ್ವೀಕರಿಸಿದ್ದೇವೆ.

ಭಾರತವು ಬಂಗ್ಲಾದೇಶದಲ್ಲಿ ಮುಕ್ತಿವಾಹಿನಿಯೊಡಗೂಡಿ ಬಂಗ್ಲಾ ವಿಮೋಚನಾ ಕಾರ್ಯದಲ್ಲಿ ನಿರತವಾಗಿದೆ. ಪಶ್ಚಿಮ ಪಾಕಿಸ್ತಾನದಲ್ಲಿ ಪಾಕಿನ ಯುದ್ಧ ತಂತ್ರಗಳನ್ನು ಭಂಗಗೊಳಿಸಲು ಮುಂದುವರಿದಿದೆ.

ಬಂಗ್ಲಾದೇಶದಿಂದ ಪಾಕ್ ಸೇನೆಯು ಕಾಲ್ತೆಗೆಯಿತೆಂದರೆ ಅಲ್ಲಿಗೆ ಯುದ್ಧವಿರಾಮ-ಪಶ್ಚಿಮ ಪಾಕಿಸ್ತಾನವು ಮತ್ತೆ ಕೆಣಕದೆ ಸುಮ್ಮನುಳಿದರೆ.

ಬಂಗ್ಲಾದೇಶವು ತನ್ನ ಕೈ ಬಿಟ್ಟ ಗಳಿಗೆಯಲ್ಲಿ ಯಹ್ಯಾಖಾನರು ಇಸ್ಲಾಮೂ ಬಾದದಲ್ಲಿ ಚುನಾಯಿತ ಪ್ರತಿನಿಧಿಗಳ ಸರಕಾರ ರಚಿಸಿದರು.

ಈ ಚುನಾವಣೆಗಳು ನಡೆದದ್ದು ಯಾವಾಗ? ಒಂದು ವರ್ಷದ ಕೆಳಗೆ! ೧೯೭೦ರಲ್ಲಿನ ಚುನಾವಣೆಗಳಲ್ಲಿ ಪ್ರಚಂಡ ಬಹುಮತಗಳಿಸಿ ಗೆದ್ದ ವಂಗ ಬಂಧು ಶೇಕಮುಜಿಬುರ್ ರೆಹಮೂನರನ್ನು ಬಂಧನದಲ್ಲಿಟ್ಟು, ಅವರ ಪಕ್ಷವನ್ನು ಬಹಿಷ್ಕರಿಸಿದ ಯಹ್ಯಾಖಾನರು ಅದೇ ಚುನಾವಣೆಗಳ ಒಂದಂಶವನ್ನು ಮನ್ನಿಸುವ ಉದಾರತೆ ತೋರಿಸಿದರು.

ಆದರೆ, ಶೇಕ ಮುಜಿಬುರರನ್ನು ಬಿಟ್ಟು, ಬಂಗ್ಲಾದೇಶದ ನೂರಲ್ ಅಮೀನರನ್ನು, ತನ್ನ ಏಕೈಕ ಸಮರ್ಥಕನನ್ನು ಪ್ರಧಾನಿಯನ್ನಾಗಿ ನೂಡಿದರು.

ಆಯ್ಯೂಬರ ಪತನಕ್ಕೆ ನಾಂದಿಹಾಡಿದ ಭುಟ್ಟೋಮಹಾಶಯರು ಉಪಪ್ರಧಾನಿಯೂ ವಿದೇಶ ಸಚಿವರೂ ಆಗಿ ತಮ್ಮ ಕೈಗಳಿಗೆ ತೆಗೆದುಕೊಂಡರು.

ನೂರಲ್ ನಾಮ ಮಾತ್ರದ ಪ್ರಧಾನಿ. ಭುಟ್ಟೋ ಯಹ್ಯಾಖಾನರನ್ನೂ ನೂರಲ್ ಅಮೀನರನ್ನು ಒಂಟು ಗುಟುಕಿನಲ್ಲೇ ಗುಳುಂಕರಿಸುತ್ತಾರೆ.

ಭಾರತ ವಿದ್ವೇಷವನ್ನೇ ತನ್ನ ನೀತಿಯೂ ಗಿಟ್ಟು ಬೆಳೆದು ಬಂದಿರುವ ಭುಟ್ಟೋ ನೂರು ವರ್ಷ ಬೇಕಾದರೂ ಹೋರಾಟ ನಡೆಸಲು ಸಿದ್ಧರಂತೆ. ಭಾರತದೊಡನೆ, ಬಂಗ್ಲಾದೇಶದೊಡನೆ ನೂರು ದಿನವೂ ಹೋರಾಡಲಾಗದೆನು ಬಾಯಿ ಈ ಮಾತು ಆಡುತ್ತದೆ!

ಪಾಕಿಸ್ತಾನ ಶಾಂತಿಪ್ರಿಯ ದೇಶವಂತೆ! ಅದಕ್ಕೆ ಶಾಂತಿಬೇಕಂತೆ.

ಆ ಶಾಂತಿಗಾಗಿ ಸತ್ಯದ ಮೇಲೆ ಜಸತ್ಯದ ಹೊದಿಕೆ ಹೊದಿಸಬೇಕಂತೆ! ಸಮಸ್ಯೆಯ ಮೂಲಜಾರಣಗಳೇನೇ ಇರಲಿ, ಸಸ್ಯಕದನ ವಿರಾಮವಾಗಲೆಂದು ಅಮೆರಿಕೆಯ ನೀತಿಗೆ ಆವರ ಹೃತ್ಪೂರ್ವಕ ಬೆಂಬಲ.

ಭಾರತವನ್ನು ಅಪರಾಧಿಯ ಸ್ಥಾನದಲ್ಲಿ ನಿಲ್ಲಿಸಿಕೊಂಡಿರುವ ನಿಕ್ಸನ್ನರದು ಇದಕ್ಕೆ ಸಂಪೂರ್ಣ ಬೆಂಬಲ. ಭಾರತದ ಮೇಲೆ ಉರಿಕಾರುತ್ತಿರುವ ಚೀನಾದ ಸಹಾನುಭೂತಿ.

ನಿಜವಾದ ಆಪರಾಧಿ ಯಾರೆಂಬುದನ್ನು ಕಂಡು ಹಿಡಿಯದ ಹೊರತು ಸಮರ ವಿರಾಮವೇಕೆ? ಬಂಗ್ಲಾದೇಶವನ್ನು ಯಹ್ಯಾಖಾನರು ಮನ್ನಿಸದೆ ಹೊರತು ಸಮಸ್ಯೆಗೆ ಪರಿಹಾರ ಹೇಗೆ?

ಅದಾಯತೆಂದರೆ ಮರುಕ್ಷಣ ಸಮರವಿರಾಮ.

ತಾನು ಬಿತ್ತಿದ ವಿಷ ಬೀಜದ ಮರ ನೀಡಿರುವ ಈ ವಿಷಫಲವನ್ನು ಪಾಶ್ಚಾತ್ಯದೇಶಗಳು ತಿನ್ನಲೇಬೇಕು. ತಮ್ಮನ್ನೇ ನಂಬಿರುವ ಪಾಕಿನ ಮುಖ ಭಂಗವಾಗುವುದನ್ನು ಅವೆಂತು ನೋಡಿಯಾವು?

ಆದುದರಿಂದಲೇ ಅಮೆರಿಕೆಗೆ ಕಸಿವಿಸಿ. ಭಾರತದ ದೃಢ ನಿಲುವೆಯಿಂದ ಕಂಗಾಲು. ತಮ್ಮ ಮಾನವುಳಿಸಲು ನಾನಾ ಕ್ರಮಗಳು.

ವಿಯತನಾಮದಲ್ಲಿರುವ ತನ್ನ ಭಾರೀ ಸಮರ ನೌಕೆಗೆ ಭಾರತದತ್ತ ಸಾಗಲು ಸೂಚನೆ.

ಏಕೆ?

ಡಾಕ್ಕಾದಲ್ಲಿರುವ ವಿದೇಶೀ ಅಧಿಕಾರಿ-ನಾಗರಿಕರನ್ನು ಒಯ್ಯಲು.

ಇವಕ್ಕೆ ನಾಗರಿಕ ಪಡಗ ಸಾಲದೆ? ಸಮರ ನೌಕೆಯೇಕೆ? ಸಮರದಲ್ಲಿ ಪಾಲುಗೊಳ್ಳುವ ಇರಾದೆ ಅದಕ್ಕದೆಯೆ?

ಅದುದರಿಂದ ಅದು ಅಪಾಯಕರ. ಭಾರತವು ಇದನ್ನು ಸ್ಪಷ್ಟಪಡಿಸಿದೆ. ಸೋವಿಯತ್ತು ವಿದೇಶಗಳಿಗೆ ಎಚ್ಚರಿಕೆ ನೀಡಿದೆ.—ಭಾರತ-ಪಾಕ್ ಸಮರದಲ್ಲಿ ವಿದೇಶಗಳು ಹಸ್ತಕ್ಷೇಪ ಮಾಡಬಾರದು.

ಡಾಕ್ಕಾದಲ್ಲಿನ ವಿದೇಶೀ ನಾಗರಿಕರನ್ನೊಯ್ಯಲು ಭಾರತ ಸರಕಾರ ಅನುಮತಿ ನೀಡಿತ್ತು. ತನ್ನ ನಾಳಿಯನ್ನು ಅದು ತಡೆದಿತ್ತು. ಆವರೆ ಯಹ್ಯಾ ಸರಕಾರ ವಿದೇಶಿ ನಿಯೋಗಗಳು ಢಾಕ್ಕಾ ನಿಲ್ದಾಣದಲ್ಲಿಳಿಯಲು ಅನುಮತಿ ನಿರಾಕರಿಸಿತು ಆದರೆ, ಈ ಘಟನೆಯನ್ನು ಅಮೆರಿಕೆ ಹೇಳುವುದಿಲ್ಲ.

ಕರಾಚಿಯಲ್ಲೂ ಹಾಗೆಯೇ ವಿದೇಶೀಯರ ನಿರ್ಗಮನದ ಕಾರ್ಯದಲ್ಲಿ ಭಾರತ ತನ್ನೆಲ್ಲ ಸಹಕಾರವನ್ನೂ ನೀಡುತ್ತಿದೆ; ಆದರೆ, ಪಾಕ್ ಅಸಹಕಾರ ತೋರಿಸುತ್ತಿದೆ.

ಇವರ್ಥನೇನು?

ಬಂಗ್ಲಾ ದೇಶ ತನ್ನ ಕೈಗಳಿಂದ ಜಾರಿ ಹೋಯ್ತು; ವಿದೇಶಗಳಾದರೂ ತನ್ನ ನೆರವಿಗೆ ಬಂದು ಅದನ್ನು ಮರಳಿ ತನಗೀಯಬೇಕು! ಅದಕ್ಕಾಗಿ ವಿದೇಶಗಳನ್ನು ಕೆರಳಿಸಬೇಕು.

ಭಾರತ—ಪಾಕ್ ಸಮರದಲ್ಲಿ ವಿದೇಶಗಳಿಗೆ ಆಸಕ್ತಿ ಇದೆಯೆ? ಅವು ಭಾಗವಹಿಸಿದರೆ, ಪರಿಣಾಮವೇನು?

ಆದುದರಿಂದಲೇ ಅಮೆರಿಕೆಯೂ ಭಾರತದೊಡನೆ ಉತ್ತಮ ಸಂಬಂಧವನ್ನು ಬಯಸುತ್ತದೆ. ಸ್ವಯಂ ನಿಕ್ಸನ್ನರೇ ತನ್ನ ದೇಶದಲ್ಲಿ ತನ್ನ ನೀತಿಗೆ ವಿರೋಧವನ್ನು ಎದುರಿಸಬೇಕಾಗಿದೆ. ಆದುದರಿಂದ ಅವರು ಬಯಸುವ ಗದರಿಕೆ — ಬೆದರಿಕೆಗಳಿಂದಷ್ಟೇ ಪಾಕಿಗೆ ಬೆಂಬಲ ಸೂಚಿಸಿ ಹೊರಟಿಪ್ಪಾರೆ.

ಸೋವಿಯತ್ತು ಈ ದಿಸೆಯಲ್ಲಿ ನಿಕರವಾದ ನಿಲುವೆಮೆ ತಾಳಿದೆ. ಅದು ಮೂರಲ್ಲ, ನೂರು ಸಾರೆ ಬೇಕಾದರೂ ಪ್ರತಿಷೇಧ ಮತ ಚಲಾಯಿಸಿ ಭಾರತವ ನಿಲುವೆಯನ್ನು ಸಮರ್ಥಿಸುವ ಇರಾದೆಯಿಂದಿದೆ.

ಬೆಂಕಿಯು ಕೆಡಿಯೂಗಿರುವಾಗ ಅದನ್ನು ಭಾರತದತ್ತ ಎಸೆದು ಧಗಧಗಿಸುವಂತೆ ಮಾಡುವ ಕುತಂತ್ರಿ ನಿಕ್ಸನ್ ಸರಕಾರ ಆ ಬೆಂಕಿ ಪಾಕಿಸ್ತಾನವನ್ನು ಸುಡ ಬಂದಾಗ ಹೌಹಾರುತ್ತಾರೆ. ಆದನ್ನು ನಂದಿಸಬೇಕೆನ್ನುತ್ತಾರೆ.

ಅಮೆರಿಕೆಯು ಭಾರತದೊತನೆಂಮೊ ಪ್ರಾಮಾಣಿಕವಾಗಿ ನಡೆದುಕೊಂಡದ್ದಿಲ್ಲ. ೧೯೬೫ರಲ್ಲೂ ಅದು ತುತ್ತಿನ ಚೀಲವನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡು ಭಾರತ ದೊಡನೆ ತಿಂಡಿಬೇಕೆ ತೀರ್ಥಬೇಕೆ ಎಂದು ನಾಯಿಯೂಟವಾಡಿತ್ತು.

ಕಮ್ಯುನಿಜಂ ವಿರೋಧಕ್ಕೆಂದೂ ನೀಡಿದ್ದ ಶಸ್ತಾಸ್ತ್ರಗಳು ಭಾರತದ ವಿರುದ್ಧ ಪ್ರಯೋಗವಾದುದನ್ನು ಕಂಡೂ ಕಂಡೂ ಕರುಡನಂತೆ ವರ್ತಿಸಿತು.

ಇಂದಿನ ಸರ್ವ ಸಮಸ್ಯೆಗೂ ಯಹ್ಯಾಖಾನರ ಪ್ರಜಾತಂತ್ರವನ್ನು ಮೆಟ್ಟಿ ಪಾಕಿದ ನೀತಿಯೆ ಮೂಲಕಾರಣವೆಂಬು ತಿಳಿತಿಳಿದೂ ಭಾರತದ ವಿರುದ್ಧ ವಿಷಕಾರುತ್ತದೆ.

ಈಗ ಯಹ್ಯಾಖಾನರೇ ಆಲೋಚಿಸಬೇಕು. ನಿಕ್ಸನ್ ಸರಕಾರ ನಿಜವಾಗಿಯೂ ತನ್ನ ಶ್ರೇಯಸ್ಸು ಬಯಸುತ್ತಿದೆಯೆ? ಸರ್ವನಾಶ ಬಯಸುತ್ತಿದೆಯೆ?

ತನಗೆ ಶಸ್ತಾಸ್ತ್ರ ಸರಬರಾಜು ಮಾಡಿ ನಿರ್ಬಲ ದೇಶವಾಗಿಯೇ ಉಳಿಯುವಂತೆ ಮಾಡಿದ ಅಮೆರಿಕೆಗೆ ತನ್ನ ಆರೋಗ್ಯಕರ

(ಹನ್ನೆರಡನೆಯ ಪುಟ ನೋಡಿರಿ)

ಛಾಂದೋಗ್ಯ ಉಪನಿಷತ್ತಿನಿಂದ

ನೀನು ಅದೇ ಆಗಿರುತ್ತೀ

(ತತ್ ತ್ವಮ್ ಅಸಿ)

ವೇದೋಪನಿಷತ್ತುಗಳ ಕಾಲದಲ್ಲಿ, ಅಂದರೆ ಸಾವಿರಾರು ವರ್ಷಗಳ ಪೂರ್ವದಲ್ಲಿ ಆರುಣಿ ಎಂಬ ಹೆಸರಿನ ಒಬ್ಬ ಶ್ರೇಷ್ಠ ಮುನಿವರ್ಯನಿದ್ದನು. ಅವನಿಗೆ ಕುಮಾರ ಶ್ವೇತಕೇತು, ಇನ್ನೊಬ್ಬ ಜ್ಞಾನಿನ ವೈದ್ಯ ಋಷಿಯೊಡನೆ ವಿದ್ಯಾಭ್ಯಾಸಮಾಡಲು ತೆರಳಿದನು. ಹದಿನೆರಡು ವರ್ಷಗಳ ನಂತರ ಋಷಿಕುಮಾರನು ಮನೆಗೆ ಮರಳಿದನು. ವಿಶೇಷವಾದ ವೇದ ವಿದ್ಯೆ ಮತ್ತು ಜ್ಞಾನಗಳಿಸಿದ ಮುನಿ ಪುತ್ರ ಗರ್ವ ಮತ್ತು ಅಹಂಕಾರಗಳಿಂದ ಉಬ್ಬಿ ಹೋಗಿದ್ದನು.

ಆದರೆ ಅವನ ದುರಭಿಮಾನವನ್ನು ಒಪ್ಪಲು ಅವನ ತಂದೆ ಸರ್ವಥಾ ಸಿದ್ಧನಿರಲಿಲ್ಲ. ವಿನಯವಿಲ್ಲದ ವಿದ್ಯೆಗೆ ಶೋಭೆಯಿಲ್ಲ. ಈ ಹಂಭಾವದ ತಿಳಿವಳಿಕೆಯಲ್ಲಿ ಸಾರವಿಲ್ಲ. ಜೀವನ ತತ್ವದ ದೃಷ್ಟಿಯಲ್ಲಿ ಮಗನಿಗೆ ನಿನೂ ತಿಳಿದಿಲ್ಲವೆಂಬ ಖಂಡ ತುಂಡ ಅಭಿಪ್ರಾಯ.

ಆತ ಮಗನನ್ನು ಪ್ರಶ್ನಿಸಿದ. 'ಎಲ್ಲಾ ವಸ್ತುಗಳ ಸಾರವೇನು?'

'ಅಪ್ಪಾ, ಹಾಗಂದರೇನು?' ಶ್ವೇತ ಕೇತು ಉತ್ತರಿಸಿದ.

'ಮಗನೇ, ನಿನಗೆ ಈ ಸಂಗತಿ ತಿಳಿದು ಮಾತ್ರೆ. ನೀನು ವೇದವನ್ನು ಕಲಿತಿರುವೆ?' ಆಂತಿ ಕೇಳಿದ.

ನಾನು ಹೇಳುವುದನ್ನು ಜಿಜ್ಞಾಸಿ ಕೇಳು. ಈ ಮಣ್ಣಿನ ಮಡಿಕೆ. ಕುಡಿಕೆ ಮತ್ತು ಆಟಿಕೆಗಳನ್ನು ನೋಡು. ನಿನಗೆ ಮಣ್ಣಿನ ಪ್ರಕೃತಿ ಸ್ವಭಾವ ಅಥವಾ ಸತ್ವವೇನೆಂಬುವದು ಗೊತ್ತಿದ್ದರೆ—ನಿನಗೆ ಅವನ್ನು ಹೇಗೆ ಮಾಡುವದು ಎಂಬ ಸಂಗತಿ ತಿಳಿಯುತ್ತದೆ. ಯಾಕಂದರೆ ಅಪ್ಪಲ್ಲ ಮಣ್ಣಿನಿಂದಲೇ ಮಾಡಿದವುಗಳು. ಇದೇ ರೀತಿಯಲ್ಲಿ ಯಾವದಾದರೊಂದು ಲೋಹದ ವಸ್ತುಗಳ ವಿಚಾರವೂ ಆಗಿದೆ. ನಿನಗೆ ಲೋಹದ ಪ್ರಕೃತಿ ಅಥವಾ ಸ್ವಭಾವ ಗುಣಗಳು ಗೊತ್ತಿದ್ದರೆ ನೀನು ಎಲ್ಲವನ್ನೂ ತಿಳಿದಂತೆಯೇ. ನೀನು ಲೋಹವನ್ನು ಬೇಕಾದ ಕೆಲಸಕ್ಕೆ ಬೇಕಾದಂತೆ ಉಪಯೋಗಿಸಬಹುದು. ಹಾಗೆಯೇ ನಿನ್ನ ಅಂತರಾತ್ಮನ ಅಥವಾ ಮನಸ್ಸೊತಲಿನ ಸಾರ ಸತ್ವಗಳನ್ನು ನೀನು ತಿಳಿದರೆ ಮಾತ್ರ ಸಫಲ ಜೀವನವನ್ನು ನೀಗಬಹುದು. ಬದುಕನ್ನು ಪಾವನ ಮಾಡಬಹುದು; ಸಾರ್ಥಕ ಗೊಳಿಸಬಹುದು. ಹಾಗಾದರೆ ಶ್ವೇತಕೇತೂ ಆಲಿಸು.

"ಪ್ರಾರಂಭದಲ್ಲಿ ಅಂದರೆ ಎಲ್ಲಿಕ್ಕೂ ಮೊದಲು ಬರೀ ಪರಿಶುದ್ಧವಾದ ಅಥವಾ ನಿರ್ಮಲವಾದ ಒಂದು ಸತ್ಸ ಮಾತ್ರವೇ ಇತ್ತು. ಜೀರೇನು ಇರಲಿಲ್ಲ. ಆ ಒಂದು, ಅನೇಕ ಅಥವಾ ಬಹಳವಾಗಲು ಇಚ್ಛಿಸಿತು. ಒದು ದೃವ ಮತ್ತು ಘನ ಮತ್ತು ಜಲಿಲ ರೂಪಗಳಲ್ಲಿ ಪರಿವರ್ತಿಸಿ ತನ್ನ ಬಹುರೂಪವನ್ನು ಪ್ರಕಟಪಡಿಸಿತು. ಈ ರೂಪಗಳು ಒಂದಕ್ಕೊಂದು ಸೇರಿ ಅನೇಕ ರೂಪಗಳ ಸೃಷ್ಟಿಯಾಯಿತು. ಮೊತ್ತ ಮೊದಲು ಇವೆಲ್ಲ ಜಡ ಅಂದರೆ ಜೀವವಿಲ್ಲದ ವಸ್ತುಗಳಾಗಿದ್ದವು. ಅನಂತರ ಜೀವಸೃಷ್ಟಿಯಾಯಿತು. ಆದರೆ ಸರಿಶುದ್ಧವೂ ನಿರ್ಮಲವೂ ಒಂದೇ ಒಂದಾಗಿದ್ದ ಆ ವಸ್ತು ಈ ನಿಶ್ವವನ್ನೆಲ್ಲಾ ವ್ಯಾಪಿಸಿಕೊಂಡಿದೆ. ಸೃಷ್ಟಿಯಾದಂದಿನಿಂದ ಅಂದರೆ ಸ್ಪಾರಂಭದಿಂದ ಕೊನೆಯವರೆಗೆ, ಅಂತ್ಯಕಾಲದವರೆಗೆ ಅದು ವ್ಯಾಪಿಸಿಕೊಂಡಿರುವದು. ಹಾಗಾದರೆ ಆ ಪರಿಶುದ್ಧವಾದ ವಸ್ತು ಯೂ ಸತ್ವ ಎಂತಹುದು? ಎಲ್ಲಿ ಇರುವುದು ಮತ್ತು ಹೇಗೆ ಇರುವುದು? ಶ್ವೇತಕೇತೂ, ನೀನು ಅದೇ ಆಗಿರುತ್ತಿ."

• "ತಂದೆ ಇದೊಂದೂ ನನಗೆ ತಿಳಿಯದಾಗಿದೆ" ಶ್ವೇತಕೇತು ದೈನ್ಯದಿಂದ ಬೇಡಿಕೊಂಡನು.

"ಮಗನೇ ಜೇನುಗೂಡಿನಲ್ಲಿದ್ದ ಜೇನನ್ನು ಬಲ್ಲೆಯೇನು?' ಆರುಣಿ ಕೇಳಿದ ಮತ್ತು ನೂತು ಮುಂದುವರಿಸಿದ

'ಜೇನು ತುಂಬಿಗಳು ಬೇರೆ ಬೇರೆ, ಸಾವಿರಾರು ಹೂವುಗಳಿಂದ ಒಂದೊಂದು ಹನಿ ಮಕರಂದವನ್ನು ತಂದು ಸಂಗ್ರಹಿಸಿವೆ. ಆ ಪೆಟಿ ಗೂಡಿನಲ್ಲಿರುವ ಜೇನು ಒಂದೇ. ಬೇರೆ ಬೇರೆ ಪುಷ್ಪಗಳಿಂದ ತಂದ ನಿವಿಧ ಜಾತಿಯ ಜೇನು ಹನಿಗಳೆಲ್ಲ ತನ್ನ ಸ್ವರೂಪವನ್ನು ಕಳೆದು ಕೊಂಡಿವೆ. ಇದೇ ರೀತಿಯಲ್ಲಿ ಎಲ್ಲಾ ಜೀವಗಳು ಕಟ್ಟಕಡೆಗೆ ಅಥವಾ ಕೊನೆಯಲ್ಲಿ ಒಂದು ಪರಿಶುದ್ಧವಾದ ಸತ್ವ ಅಥವಾ ಸಾರದೊಡನೆ ಸೇರುತ್ತವೆ. ಹಾಗಾದರೆ, ಆ ಎಲ್ಲಾ ಜೀವಿಗಳು ಕೂಡುವ, ಸಂಗಮಿಸುವ, ಆ ಪರಿಶುದ್ಧವಾದ ವಸ್ತು ಅಥವಾ ಸತ್ವದ ಸಾರ ಎಂತಹುದು? ಶ್ವೇತಕೇತೂ, ನೀನು ಅದೇ ಆಗಿರುತ್ತೀ'

ಶ್ವೇತಕೇತು ಇದನ್ನೆಲ್ಲ ಬಹಳ ಆಸ್ಥೆಯಿಂದ ಆಲಿಸುತ್ತಿದ್ದನು. 'ಹಾಗಾದರೆ, ಮನುಷ್ಯ ನಿದ್ರಿಸುವಾಗ ಅವನಿಗೇನಾಗುತ್ತದೆ' ಎಂದು ತಂದೆಯನ್ನು ಕೇಳಿದುದಕ್ಕೆ ಆರುಣಿಯ ಉತ್ತರ

'ಒಬ್ಬ ಮನುಷ್ಯನು ಮಲಗಿದಾಗ ಅಂದರೆ ನಿದ್ರಾವಸ್ಥೆಯಲ್ಲಿದ್ದಾಗ ಅವನು ತತ್ಕಾಲ ಪರಿಶುದ್ಧವಾದ ತತ್ವವಾಗುತ್ತಾನೆ. ಅಥವಾ ದೇವರಾಗುತ್ತಾನೆ. ಮನುಷ್ಯನ ಮನಸ್ಸು ಗುಂಟಕ್ಕೆ ಕಟ್ಟಿಹಾಕಿದ ಒಂದು ದನ ಅಥವಾ ಪ್ರಾಣಿಯಂತೆ. ಆದು ಎಲ್ಲೆಲ್ಲಿ ಅಥವಾ ಎಲ್ಲೆಲ್ಲೆಯಲ್ಲಿ ಆಲಿದಾಡಿದರೂ, ಒಡಾಡಿದರೂ ತನ್ನ ದೇಹವನ್ನು ಬಿಟ್ಟು ಹೋಗದು. ಆದರೆ ಮನುಷ್ಯನು ಸಾಯಲು ಸನ್ನದ್ಧನಾದಾಗ ಗೂಟಕ್ಕೆ ಕಟ್ಟಿ ಹಾಕಿದ ದನ ಹಗ್ಗ ಮುರಿದು ಹರಿದೋಡುವಂತೆ, ಅದೂ ಹೋಗಿ ದೇವರೊಡನೆ ಐಕ್ಯವಾಗುವದು. ಎಲ್ಲಾ, ಶ್ವೇತಕೇತೂ, ನೀನೂ ಆದೇ ಆಗಿರುವಿ. ಪ್ರತಿಯೊಂದು ವಸ್ತು ಅಥವಾ ಪದಾರ್ಥದಲ್ಲಿ ಪೇವರ ಸ್ವಲ್ಪ ಅಂಶ ಇದ್ದೇ ಇದೆ.'

ಶ್ವೇತಕೇತು ನುಡಿದನು. "ತಿಳ್ಳಾ ಇದೆಲ್ಲ ಶಂಕಾಸ್ಪದವಾಗಿಯದೆ. ನನ್ನನ್ನು ಕಂಗಡಿಸಿದೆ ಆ ಪರಿಶುದ್ಧವಾದ ತತ್ವ ಅಥವಾ ಸಾರವನ್ನು ನಾನು ಹೇಗೆ ಪ್ರಾಪ್ತ ಮಾಡಿ ಅನುಭವಿಸಬಹುದು? ಯಾಕೆಂದರೆ ಅದರ ಸಿದ್ಧಿಯಾದರೆ ಮಾತ್ರ ಸಮ್ಮಿಶ್ರ ವಿಲ್ಲದ ಸತತ ಸುಖಾನಂದಗಳನ್ನು ಅನುಭವಿಸಬಹುದು ಎಂದು ಹೇಳುತ್ತಾರೆ. ಅದನ್ನು ತಿಳಿಸು."

ಆರುಣಿ ಉತ್ತರಿಸಿದನು. "ನೀನು ಅದನ್ನು ನಿನಗೆ ತಿಳಿದಂತೆ ನಿನ್ನ ದಾರಿಯಲ್ಲೇ ಹುಡುಕಾಡಬೇಕು. ಮಗನೇ ನೀನೇ ಅದನ್ನು ವಿಚಾರಿಸಿ ಅರಸಿ ಕೋಧಿಸಬೇಕು. ನಿನ್ನ ಜೀವನಾರಭ್ಯ ಅದರ ಅನ್ವೇಷಣೆ ನಡೆಯಬೇಕು. ಒಬ್ಬ ಮನುಷ್ಯನ ಕಣ್ಣಿಗೆ ಕಣ್ಣು ಕಾಣದಷ್ಟು ಬಟ್ಟೆ ಕಟ್ಟಿ, ಏನೂ ತಿಳಿಯದ ಯಾವದೋ ಒಂದು ಕಾಡಿನಲ್ಲಿ ಬಿಟ್ಟು ಬಂದೆವೆಂದು ಊಹಿಸುವ, ಅವನು ಅಲ್ಲಿಂದ ಮುಂಬಿ ಮನೆಗೆ ಬರಲು ಏನು ಮಾಡ ವನು? ಮೊತ್ತಮೊದಲು ಕಣ್ಣಿಗೆ ಕಟ್ಟು ಹಾಕಿದ ಬಟ್ಟೆಯನ್ನು ತೆಗೆದೊಗೆಯಲು ಯತ್ನಿಸುವನು. ಅನಂತರ ಕಾನನದಲ್ಲಿ ಅತ್ತಿಂದಿತ್ತ ಅಲೆದಾಡಿ, ಸಿಕ್ಕ ಸಿಕ್ಕವರೊಡನೆ ತನ್ನ ಊರಿನ ದಾರಿಯನ್ನು ಕೇಳುವನು. ಕೆಲವರಿಗೆ ಸರಿಯಾದ ಮಾರ್ಗವನ್ನು ಹೇಳಲು ಅಥವಾ ತೋರಿಸಲು ತಿಳಿಯದು. ಆದರೆ ಕೆಲವರು ಅವನಿಗೆ ಸವಿಾಪದ ಹಳ್ಳಿಗೆಹೋಗುವ ಮಾರ್ಗವನ್ನು ತೋರಿಸಿ ಬಿಡುವರು. ಅವನು ಊರೂರು ತಿರುಗುತ್ತ ಹೋಗುವನು ಕಟ್ಟಕಡೆಗೆ ಯಾರಾದರೂ ಅವನ ಮನೆಗೆ ಹೋಗುವ ಸರಿಯಾದ ಮಾರ್ಗವನ್ನೇ ತೋರಿಸುವರು. ಆದರೆ ಪ್ರಾರಂಭದಲ್ಲೇ ತನ್ನ ದಾರಿಯನ್ನು ಸರಿಯಾಗಿ ತಿಳಿದುಕೊಳ್ಳುವ ಜಾಗ್ರತೆ ಮಾತ್ರ ಅವನಲ್ಲಿ ಇರಬೇಕು. ತಾನೆಲ್ಲಿ ಹೋಗಬೇಕು. ಯಾವ ದಿಕ್ಕಿನಲ್ಲಿ ನಡೆಯ ಬೇಕು—ಎಂಬ ಜ್ಞಾನ ಅವನಲ್ಲಿ ಬೇಕೇ ಬೇಕು. ಶ್ವೇತಕೇತು ಅಂತಹನೊಬ್ಬನು ಸಣ್ಣ ತಪ್ಪನ್ನು ಮಾಡಿದರೆ, ಆ ಪ್ರಮಾದದಿಂದ ನೇರವಾದ ಮಾರ್ಗವನ್ನು ತಲಪಲು ಬಹಳ ಸಮಯ ತಾಗಬಹುದು ಇಲ್ಲವೇ ಸಮಯವೇ ಸಾಕಾಗದಿರಬಹುದು. ಶುದ್ಧವಾದ ಸತ್ವ ಅಥವಾ ನಿರ್ಮಲವಾದ ಸಾರ ತತ್ವ ಅಂದರೆ ಸಕಲ ಜೀವಾತ್ಮ—ಜೀವಾತ್ಮಗಳ ಮೂಲವಾದ ಪರಮಾತ್ಮನೆಂಬುದು ಮಾತ್ರ ಸತ್ಯ. ಈ ಸನಾತನ ಸತ್ಯದತ್ತ ಎಲ್ಲಾ ಹೆಜ್ಜೆಗಳನ್ನು ನಡೆಸಬೇಕು. ಈ ಅಖಂಡ ಸತ್ಯದ ಸತ್ಯಯವುದು? ಶ್ವೇತಕೇತೂ, ಮೊದಲು ಶ್ರದ್ಧಾವಂತನಾಗು ಇದರಲ್ಲಿ ವಿಶ್ವಾಸವನ್ನಿಡು. ಈ ಸತ್ವ ಅಥವಾ ಸತ್ಯ ಪ್ರತಿಯೊಂದು ಅಸ್ತಿತ್ವದ ಮೂಲಕಾರಣ. ನೀನೂ, ಅದೇ ಆಗಿರುತ್ತೀ, ಶ್ವೇತಕೇತೂ".

ಸುಳ್ಳು ಕಲ್ಲಿದ್ದಲ ಕಟ್ಟಿಗಿಂತಲೂ ಕಪ್ಪು; ಮಾತ್ರವಲ್ಲ ಅದಕ್ಕಿಂತಲೂ ಇಮ್ಮಡಿ ಅನಹ್ಯ

o o o

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ
ಲೋಕವಿಖ್ಯಾತಿ ಗಳಿಸಿರುವ
ನಂಜನಗೂಡು ಟೂತ್-ಪೌಡರ್
ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ
ಆಯುರ್ವೇದೀಯ ಸಿದ್ಧೌಷಧಗಳು
ಮತ್ತು
ಚಿತ್ತಾಕರ್ಷಕ ಪರಿಮಳಯುಕ್ತವಾದ
ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್
ಮುಂತಾದ
ಸುಗಂಧದ್ರವ್ಯಗಳೂ ಸಹಾ
ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.
ದಿ ಸದೆ ದಶಾಲಾ (ಪೆವೆಟ್) ಲಿಮಿಟೆಡ್,
ವಲ್ಲಿ ಯೆ
ನಂಜನಗೂಡು, (ಮೈಸೂರು ಸ್ಟೇಟ್)
ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ
● ತಲೆ ನಡಿತ ● ಮೈ ನೋವು
● ಉಳುಕು ● ಕಮ್ಮು ಮತ್ತು ನೆಗಡಿ
ಇವುಗಳ ನಿವಾರಕ
ತಯಾರಕರು:
ಅಮೃತಾಂಜನ ಲಿಮಿಟೆಡ್,
ಮದ್ರಾಸು-1

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 16

ಸಂಸ್ಥಾಪಕರು :
ದಿ। ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦-೭೫

ಚಿಕ್ಕ ಜೊಕ್ಕೆ- ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಠ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಸಮರ ಹೂಡಿದ ಯಾಹ್ಯಾ ಖಾನರು ಸಾಧಿಸಿದ್ದೇನು?

ಬಂಗ್ಲಾ ವಿನೋಚನಾನಂತರ ಭಾರತ ಸರಕಾರವು ಪಾಕಿಸ್ತಾನಕ್ಕೆ ಸಮರ ವಿರಾಮದ ಕೊಡುಗೆ ನೀಡಿತು. ಈ ಕೊಡುಗೆಯು ಅತ್ಯಂತ ಮುತ್ಸದ್ದಿತನದ್ದೆಂದೇ ವಿಶ್ವಪ್ರಶಂಸನೀಯ. ಭಾರತಕ್ಕೆ ಪಾಕಿಸ್ತಾನದೊಡನೆಯೂ ಸಮರ ಅನಿವಾರ್ಯತೆ; ಅನಪೇಕ್ಷಣೀಯ. ಆದರೆ, ತಮ್ಮ ಮನೆಬಾಗಿಲನ್ನು ಸಮರ ಘೋಷಣೆಯೊಂದಿಗೆ ಬಡಿಯುಬಂದವರಿಗೆ, ಬಂದೂಕಿನ ಧ್ವನಿಗೆ ಬಂದೂಕದಿಂದಲೇ ಉತ್ತರಿಸಲು ಭಾರತ ಹಿಂಜರಿಯದೆಂದು ೧೯೭೧ರ ಪಾಕ್-ಭಾರತ ಯುದ್ಧ ತೋರಿಸಿಕೊಟ್ಟಿತು. ಭಾರತಕ್ಕೆ ಪರಕೀಯ ಭೂಭಾಗದ ಮೇಲೆ ಲೋಭವಿಲ್ಲ; ಆದರೆ, ಆತ್ಮರಕ್ಷಣೆಯಿಂದ ಕೈತೊಳೆದುಕೊಳ್ಳದೆಂದು ಇದು ವಿಶಾಲ ಜಗತ್ತಿಗೆ ಸಾರಿ ಹೇಳಿತು. ಜಗತ್ತಿನ ಗುತ್ತೇದಾರ ರಾಷ್ಟ್ರಗಳು ತಮ್ಮ ಪಕ್ಷಪಾತ ಪೂರ್ಣ ನೀತಿಯಿಂದ ಕದಲದಿರುವಾಗ, ಭಾರತವು ಅವುಗಳ ಮುಂದೆ ತಲೆವಾಗದೆ ಆತ್ಮರಕ್ಷಣೆಗೆ ಮಿಗಿಲಾದದ್ದು ಮತ್ತಾವುದೂ ಇಲ್ಲವೆಂದು ತೋರಿಸಿಕೊಟ್ಟು, ಅವುಗಳ ಮೊಂಡುವಾದವನ್ನು ಖಂಡಿಸಿತು. ಭಾರತೀಯ ಸೇನೆಯೂ ಭಾರತೀಯ ಪರಂಪರೆ—ಸಂಪ್ರದಾಯ—ಸಂಸ್ಕೃತಿಗಳನ್ನು ಮರೆಯದೆ, ಅವಕ್ಕೆ ಮುಕುಟಪ್ರಾಯವಾಗುವಂತೆ ವರ್ತಿಸಿ 'ನಮ್ಮದು ಶಾಂತಿ ಸೇನೆ' ಎಂಬುದನ್ನು ತೋರಿಸಿಕೊಟ್ಟಿತು.

ಪಾಕ್—ಭಾರತ ಯುದ್ಧದ ಪರಿಣಾಮವೇನು? ಬಂಗ್ಲಾದೇಶವು ಪಶ್ಚಿಮ ಪಾಕಿಸ್ತಾನದಿಂದ ಸಿಡಿದು ಸ್ವತಂತ್ರ ಸಾರ್ವಭೌಮ ದೇಶವಾಗಿ ಹೊರಹೊಮ್ಮಿದ್ದು ಒಂದು. ಇದರಿಂದ ಭಾರತಕ್ಕೇನೂ ಲಾಭವಿಲ್ಲ; ಆದರೆ, ಜಾತೀಯತೆಯ ನೆಲೆಯಲ್ಲಿ ಹುಟ್ಟಿಕೊಂಡ ಪಾಕಿಸ್ತಾನದ ಜನ್ಮವೇ ಪಾಪಸೂರಿತವಾದದ್ದು; ವಿಭಿನ್ನ ಸಂಸ್ಕೃತಿ-ಸಂಪ್ರದಾಯಗಳನ್ನು ಜಾತೀಯ ಸೂತ್ರದಿಂದ ಬೆಸೆಯಲಾಗದೆಂಬುದನ್ನು ಈ ವಿದ್ಯಮಾನ ಲೋಕದ ಮುಂದೆ ಘೋಷಿಸಿತು. ಭಾರತದತ್ತ ಓಡಿಬಂದ ಒಂದು ಕೋಟಿ ನಿರಾಶ್ರಿತರು ತಮ್ಮ ಮಾತೃಭೂಮಿಯಲ್ಲಿ ಸುರಕ್ಷಿತವಾಗಿ ಪುನರ್ನೆಲಸುವ ಸೌಭಾಗ್ಯ ದೊರೆಯಿತು; ಇದರಿಂದ ನಿರಾಶ್ರಿತರ ಪಾಕಣಿಗೆಂದು ನಾವು ಭರಿಸಬೇಕಾದ ಆರ್ಥಿಕ ಹೊರೆ ಹಗುರವಾಯ್ತು. ಇದಲ್ಲದೆ ನಿರಾಶ್ರಿತರು ಭಾರತದಲ್ಲೇ ಭದ್ರವಾಗಿ ತಳವೂರಿದ್ದರು; ಈ ಬಾರಿ ಹಾಗಾಗದಂತೆ ನೋಡಿಕೊಳ್ಳುವಲ್ಲಿ ಮುತ್ಸದ್ದಿತನದಿಂದ ಸಮಸ್ಯೆಯನ್ನೆದುರಿಸಿದ ಪ್ರಧಾನಿ ಶ್ರೀಮತಿ ಗಾಂಧಿಯವರನ್ನು ಅಭಿನಂದಿಸಲು ಶಬ್ದ ಸಮೂಹವೇ ಸಾಲದು. ಬಂಗ್ಲಾದೇಶವನ್ನು ಯಾರು ಮನ್ನಿಸಲಿ, ಬಿಡಲಿ, ಭಾರತ ಸರಕಾರ ಮನ್ನಿಸಿದೆ. ಯಾಹ್ಯಾಖಾನರ ನರಮೇಧದಿಂದ ಕಂಗೆಟ್ಟು ಹೋದ ಬಂಗ್ಲಾದೇಶದ ಪುನಾರಚನೆಯಲ್ಲಿ ತನ್ನ ಆರ್ಥಿಕ ತೊಂದರೆಗಳನ್ನು ಪರಿಗಣಿಸದೆಯೇ ನೆರವಾಗುವ ಪೂರ್ಣ ಭರವಸೆ ಅದು ನೀಡಿದೆ. ನಿರಾಶ್ರಿತರೆಲ್ಲರೂ ಆಶ್ರಿತರಾಗಿ, ವಂಗ ಬಂಧು ಶೇಕ ಮುಜಿಬುರ್ ರೆಹಮಾನರು ಮುಜಿಬ್ ನಗರಕ್ಕೆ ಮರಳಿ, ದೇಶದ ಸೂತ್ರ ಹಿಡಿದು ದೇಶ ಕಟ್ಟಲು ಆರಂಭಿಸುವ ಶುಭುದಿನವನ್ನು ಭಾರತ ಎದುರು ನೋಡುತ್ತಿದೆ.

ಈ ಸಮರದಲ್ಲಿ ಭಾರತಕ್ಕೆ ಆರ್ಥಿಕವಾಗಿ ಬಹಳ ಹಾನಿಯೂಗಿದೆ ನಮ್ಮ್ಹಲವು ಹತ್ತು ವಿಮಾನಗಳೂ ಟ್ಯಾಂಕುಗಳೂ ನಷ್ಟವಾಗಿವೆ. ಕೆಲವು ಸಾವಿರ ಯೋಧರು ಮಡಿದಿದ್ದಾರೆ, ಗಾಯಗೊಂಡಿದ್ದಾರೆ. ಆಥವಾ ಕಾಣೆಯೂ ಗಿದ್ದಾರೆ. ಮಾತೃಭೂಮಿಯ ರಕ್ಷಣೆಯಲ್ಲಿ ಅಸುನೀಗಿದ ವೀರ ಯೋಧರ ಕುಟುಂಬಗಳಿಗೆ ಉದಾರ ಪರಿಹಾರ ನಿಡಬೇಕು; ಗಾಯಗೊಂಡವರು ಗೌರವಯುತ ಜೀವನ ನಡೆಸಲು ವಿಶಾಲಾವಕಾಶವೊದಗಿಸಿ ಕೊಡಬೇಕು; ಕಾಣೆಯಾದವರನ್ನು ಪತ್ತೆಹಚ್ಚಬೇಕು. ಇದರಲ್ಲಿ ಪ್ರತಿಯೊಬ್ಬ ಭಾರತೀಯನೂ ತನ್ನ ಪಾಲಿನ ಕರ್ತವ್ಯ ಪಾಲಿಸಲು ಮುಂದೆಬರಬೇಕು. ಪಾಕ್ತಿಸಾನಕ್ಕಾದ ವಿತ್ತ ಜೀವಿತಗಳ ನಷ್ಟ ದೊಡನೆ ಹೋಲಿಸುವಾಗ ನಮ್ಮದು ಆಗಣ್ಯ. ಆದರೂ ನಷ್ಟ ನಷ್ಟವೇ. ಅದನ್ನು ತುಂಬಿಸಿಕೊಳ್ಳಲು ಕೆಲ ಕಾಲವಾದರೂ ಬೇಕು.

ಅತ್ತ ಪಾಕಿಸ್ತಾನದ ಸ್ಥಿತಿಗತಿಗಳು ಅತ್ಯಂತ ಶೋಚನೀಯವಾಗಿದೆ. ಡಾಕ್ಕದಲ್ಲಿ ಪಾಕ್ ಸೇನೆ ಶರಣಾದೆ ಮೂತ್ರಕ್ಕೆ ಯುದ್ಧ ನಿಲ್ಲಲಿಲ್ಲವೆಂದು ಪ್ರಸಾರ ಭಾಷಣದಲ್ಲಿ ಘೋಷಿಸಿದ ಯಾಹ್ಯಾಖಾನರು ಭಾರತದ ಸಮರವಿರಾಮದ ಕೊಡುಗೆ ಸ್ವೀಕರಿಸಲು ಸುಮಾರು ಇಪ್ಪತ್ತು ತಾಸುಗಳ ಅವಧಿ ತೆಗೆದುಕೊಂಡರು. ಬಂಗ್ಲಾವನ್ನು ಕಳೆದುಕೊಳ್ಳಲು ಪ್ರೇರಕವಾದ ರಾಜ್ಯನೀತಿಯಿಂದಾಗಿ ಜನರೀಗ ಪ್ರಬಲ ವಿರೋಧವನ್ನೆದುರಿಸುತಿದ್ದಾರೆ. ಲಾಹೋರಾದಿಗಳಲ್ಲಿ ಯಾಹ್ಯಾ ವಿರುದ್ಧ ಬೃಹತ್ ಪ್ರತಿಭಟನೆ ನಡೆಯಿತು. ಪ್ರಜೆಗಳಲ್ಲೆಲ್ಲ ಹಬ್ಬಿರುವ ಕಿಚ್ಚಿನ ಜ್ವಾಲೆಯನ್ನು ನಂದಿಸಲು ಯಾಹ್ಯಾ ಅಶಕ್ತರಾಗಿದ್ದಾರೆ ಆದ್ದರಿಂದಲೇ ಶ್ರೀ ಭುಟ್ಟೋರನ್ನು ಇಸ್ಲಾಮಬಾದಿಗೆ ಕರೆದರು. ನೂರಲ್ ಅಮೀನರು ಪ್ರಧಾನಿಯಾಗಿರುವ, ಭುಟ್ಟೋ ಉಪಪ್ರಧಾನಿಯಾಗಿರುವ ಸರಕಾರವೊಂದನ್ನು ರಚಿಸಿ, ತಾನು ನಿವೃತ್ತಿ ಹೊಂದಲು ಅವರು ಮೊದಲು ನಿರ್ಧರಿಸಿದ್ದರು. ಆದರೆ, ಅಧಿಕಾರ ದಾಹದಿಂದ ಪಿತಾಚಿಯಾಗಿ ತನ್ನ ದೇಶದಲ್ಲಿ ಯಾಹ್ಯಾ ನರಮೇಧವನ್ನು ಬೆಂಬಲಿಸಿದ ಬಂಗ್ಲಾದ ನೂರಲ್ ಅಮೀನ್ ಈಗ ಅಧಿಕಾರಕ್ಕಾಗಿ ಭಾರಿ ಬೆಲೆ ತೆರಬೇಕಾಗುತ್ತದೆಂದು ಹಿಂಜರಿದಿದ್ದಾರೆ. ಆಗ ಮತ್ತೊಬ್ಬ ನರಮೇಧಿಷ್ಟ್ರಿಯ ಭುಟ್ಟೋರ ಸರದಿ. ಆದರೆ, ಪಾಕಿಸ್ತಾನದಲ್ಲಿ ವಿಶಾಲವಾಗಿ ಹರಡಿರುವ ತೀವ್ರ ಅಶಾಂತಿ ಅಸಮಾಧಾನಗಳ ನಡುವೆ ಭುಟ್ಟೋ ಅಧಿಕಾರ ಸ್ವೀಕರಿಸಲು ಮುಂದೆ ಬರುತ್ತಾರೆಯೆ? ಅಥವಾ ಯಾಹ್ಯಾಖಾನರ ದಂಡಿನಾಡಳಿತೆ ಮುಗಿದು ಮತ್ತೊಬ್ಬ ಖಾನನ ಸರ್ವಾಧಿಕಾರವೇ ಮುಂದುವರಿಯುತ್ತದೆಯೆ?

ಯಾರೇ ಅಧಿಕಾರಕ್ಕೆಬರಲಿ ಭಾರತದೊಡನೆ ಪಾಕ್ ಸಂಬಂಧ ಉತ್ತಮಗೊಳ್ಳುವ ನಿರೀಕ್ಷೆ ಕಡಿಮೆ. ಸದ್ಯದ ಯುದ್ಧವಿರಾಮ ಬಹುಕಾಲ ಮುಂದುವರಿಯುವ ಆಶೆಯೂ ಇಲ್ಲ ಭಾರತೀಯ ನೇತೆಗಳು ಹಲವು ಪಾಕ್ ತಾಣೆಗಳನ್ನು ನಶಪಡಿಸಿಕೊಂಡಿರುವುದರಿಂದ, ಇಲ್ಲಿಂದ ಹಿಂಪೆಗೆಯಲು ಅಂತಾರಾಷ್ಟ್ರೀಯ ಒತ್ತಡಕ್ಕೆ ಮಣಿಯಲು ಸಿದ್ಧವಿಲ್ಲದ್ದರಿಂದ, ವಿಶ್ವಸಂಸ್ಥೆಯ ಪರ್ಯಾಲಗಳು ನ್ಯಾಯೋಚಿತವಾದ ನಿಲುವನ್ನೇ ಅನುಸರಿಸಬೇಕಾಗುತ್ತದೆ. ಕಾಶ್ಮೀರದಲ್ಲಿನ ತನ್ನ ಆಕ್ರಮಣವನ್ನು ಪಾಕ್ ತೆರವು ಮಾಡಿದರೆ ಮಾತ್ರ ತನ್ನ ವಶದಲ್ಲಿನ ನೆಲವನ್ನು ಪಾಕಿಗೆ ಬಿಟ್ಟುಕೊಡಲು ಭಾರತ ಒಪ್ಪಬಹುದು. ಕಾಶ್ಮೀರವನ್ನು ಭಾರತದ ಭಾಗವಲ್ಲವೆಂದು ನಂಬಿರುವ ಪಾಕ್‌ನಾಯಕರು ಬಂಗ್ಲಾಕ್ಕೆ ಮನ್ನಣೆ ಕೊಡುವುದೆಂತು? ನಡೆದು ಹೋದ ಸತ್ಯ ಘಟನೆಗಳನ್ನು ಅಲ್ಲಗಳೆದು ಹೊಸ ಇತಿಹಾಸ ಬರೆಯಲು ಉತ್ಸುಕರಾಗಿರುವ ಧೂರ್ತ ಪಾಕ್ ರಾಜ್ಯಕಾರಣಿಗಳು ಮತ್ತೊಮ್ಮೆ ಪೂರ್ಣ ಬಲದೊಂದಿಗೆ ಭಾರತದ ಮೇಲೆ ಬೀಳುವುದು ಆಶ್ಚರ್ಯವಲ್ಲ. ಆದರೆ, ಆಗ ಪಾಕಿಸ್ತಾನದ ಅಸ್ತಿತ್ವವೇ ನಿರ್ಮೂಲವಾಗುವುದು ನಿಸ್ಸಂದೇಹ.

ಅಮೆರಿಕೆಯ ಕರ್ತವ್ಯ

ಪಾಕ್—ಭಾರತ ಕದನದಿಂದಾಗಿ ಅಮೆರಿಕೆ—ಭಾರತಗಳ ಸಂಬಂಧ ತೀವ್ರ ಹ

(ಹತ್ತನೇ ಪುಟ ನೋಡಿರಿ)

ಕೃತಜ್ಞತಾ ಸಮರ್ಪಣೆ

ಸುರೇಖಾ – ಡಾ। ಸ್ವರೂಪ್

ಇದೇ ತಾ. 12—12—71ನೇ ಆದಿತ್ಯವಾರ ದಿನ ನನ್ನ ಪುತ್ರಿ **ಚಿ। ಸುರೇಖಾಳ** ವಿವಾಹ ಸಮಾರಂಭವು ಬೋಳಾರ್ ಶ್ರೀ ಶಿವಶಂಕರ ರೈಗಳ ಪುತ್ರ **ಡಾ। ಸ್ವರೂಪ** ರೈಯವರೊಂದಿಗೆ ಮಂಗಳೂರು ಪುರಭವನದಲ್ಲಿ ಜರಗಿದ ಸಂದರ್ಭದಲ್ಲಿ ಈ ಸಮಾರಂಭಕ್ಕೆ ಚಿತ್ತೈಸಿ ವಧೂವರರನ್ನು ಆಶೀರ್ವದಿಸಿದಂಥವರಿಗೂ ಇತರ ರೀತಿಯಲ್ಲಿ ಸಹಕಾರ ನೀಡಿದಂಥವರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಕೃತಜ್ಞತೆಯನ್ನು ಸಲ್ಲಿಸುವುದು ಅಸಾಧ್ಯವಾದುದರಿಂದ ಈ ಮೂಲಕ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸುತ್ತೇನೆ.

ಇಂತು ವಂದನೆಗಳು,
ಬಿ. ಮಹೇಶ ಹೆಗ್ಡೆ
ಉಡುಪಿ

ಗೇಹರಾಜ್ಯದಲ್ಲಿ

ಇದೇ ಕೊನೆಯ ಸಮರವಾಗಲಿ

'ಬಂಗ್ಲಾದೇಶವು ಪಶ್ಚಿಮ ಪಾಕಿಸ್ತಾನದ ಗುಲಾಮಿ ನೊಗದಿಂದ ಸಂಪೂರ್ಣ ಮುಕ್ತವಾಯ್ತು....'

'ಹ್ಞೂಂ....ಬಂಗ್ಲಾ ದೇಶದಲ್ಲಿರುವ ಪಾಕಿಸ್ತಾನಿ ಸೇನೆಯ ದಂಡನಾಯಕ ಲೆ|ಜ| ಎ.ಎ.ಕೆ. ನಿಯಾಜಿಯವರು ಬೇಷರತ್ ಶರಣಾಗತಿ ಸತ್ರಕ್ಕೆ ಸಹಿಹಾಕಿದರು....'

'ಜಲ್ರಿ, ನೊವಲಿಗೆ ಇನ್ನೇ ನಿಯೋಜಿ ಸಮರಭೇರಿ ಬಾರಿಸಲು ತುದಿಗಾಲಲ್ಲಿ ನಿಂತಿದ್ದರಲ್ಲಾ....'

ಅದೂ ಹೌದು. ಪರತಾಯ ಮುಕ್ಕಳು ಸತ್ತರೆ ನಾಯಲೆಂದಿರಬಹುದು. ಈಗ ತನ್ನ ಸುತ್ತು ಮುತ್ತಲಲ್ಲಿ ಮೃತ್ಯು ವಿಹರಿಸುತ್ತಿರುವುದನ್ನು ಕಂಡು ಶರಣಾಗಿರಬಹುದು.'

'ಏ ಅನ್ನಿ, ನಮ್ಮ ಪ್ರಧಾನಿಯವರು ಪಾಕಿಸ್ತಾನದ್ದೆ ಪಶ್ಚಿಮ ಸಲಯದಲ್ಲಿ ಸಮರ ವಿರಾಮದ ಕೊಡುಗೆ ನೀಡಿದರಲ್ಲಾ....'

'ಇದು ಭಾರಿ ಬೇರಕ್ಕು ಮುಸ್ಸದ್ದಿ ತನ'

'ಯಾಕೆ?'

'ನಮಗೆ ಪಾಕಿಸ್ತಾನದ ಮೇಲೆ ಶತ್ರು ಭಾವವಿಲ್ಲ; ಅಧಿಕಾರ ಪಾಕ್ ಸೆಲವ ಮೇಲೆ ಲೋಭವೂ ಇಲ್ಲ. ನಮ್ಮ ಉದ್ದೇಶ—ಬಂಗ್ಲಾ ವಿಮೋಚನೆ ಮಾತ್ರ. ಇದು ಸಾಧಿತವಾದ ಮೇಲೆ ನಮಗೇಕೆ ಹೋರಾಟ?'

'ಅದು ಜೌಮೊನ್ನಿ. ಹಾಗಾದರೆ, ನಾವು ಪ್ಚಮದಲ್ಲಿ ಯಾಕೆ ಯುದ್ಧಕ್ಕೆ ತೊಡಗಿದ್ದೂತಕ್?'

"ಅನು ಇಷ್ಟು ಬೇಗನೇ ನುರೆತು ಹೋಯ್ತೀನು? ಪಾಕ್ ವಿಮಾನಗಳು ಪಶ್ಚಿಮ-ಉತ್ತರ ಭಾರತದ ಹಲವಾರು ನಿಲಿಟರಿ ನೆಲೆಗಳ ಮೇಲೆ ನಾಳೆ ನೂಡಿದ್ದರಿಂದ ತಾನೇ ನಾವು ಆತ್ಮರಕ್ಷಣೆಗಾಗಿ ಮುಂದುವರಿದೆವು?"

'ಅದು ನಿಜ. ಬಂಗ್ಲಾ ಜನತೆಯ ವಿರುದ್ಧ ಎತ್ತಿದ ತನ್ನ ಶಸ್ತ್ರಾಸ್ತ್ರಗಳನ್ನು ಭಾರತ ದತ್ತ ತಿರುಗಿಸಿದ್ದರಿಂದಲೇ ಇಷ್ಟೆಲ್ಲ ಅನಾಹುತವಾಯ್ತು.'

'ಹ್ಞೂಂ....'

"ಜಲ್ರಿ, ಯೂಹ್ಯಾಖಾನರು ಯುದ್ಧನಿಂತಲ್ಲನೆಂದು ಆಕಾಶವಾಣಿಯಲ್ಲಿ ಘೋಷಿಸಿದ್ದರಂತಲ್ಲಾ?"

'ಪ್ರಾಮು ಕಣೇ. ಪೂರ್ವಪಾಕಿಸ್ತಾನದಲ್ಲಿ ನಮ್ಮ ಸೇನೆಯು ಶರಣಾಯಿತೆಂದ ಮೂತ್ರಕ್ಕೆ ಯುದ್ಧ ಮುಗಿಯಲಿಲ್ಲವೆಂದು ಕರೆ ನೀಡಿದರಂತೆ ಅವರು ಪ್ರಾಯಃ ಆಗ ಅವುಗೆ ಪ್ರಧಾನಿ ಗಾಂಧಿಯವರ ಕೊಡುಗೆ ಕೈಸೇರದಿರಬಹುದು....'

'ನೂರು ವರ್ಷವಾದರೂ ಹೋರಾಡುತ್ತೀವೆ ಎಂದನರು....'

'ಆಯ್ಯೋ, ಅವೇನು ಹೇಳ್ತೀಯ? ಪಾಕಿಸ್ತಾನವು ಯೂರೆನ್ನೆ ನಂಬಿ ಯುದ್ಧಾರಂಭ ಮಾಡಿತ್ತೋ ಅವರೆಲ್ಲರೂ ತನಗೆ ಮೋಸ ಮಾಡಿವುದಂತ ಭುಟ್ಟೊ ಮುರುಗಲಿಲ್ಲವೆ?'

'ಪ್ರಾಯಃ ಚೀನಾ—ಅಮೆರಿಕೆಗಳನ್ನವರು ನಂಬಿದ್ದರು. ಬ್ರಿಟನ್-ಫ್ರಾನ್ಸ್‌ಗಳ ನೈತಿಕ ಬೆಂಬಲವನ್ನು ನಿರೀಕ್ಷಿಸಿದರು. ಆದರೆ, ಅಮೆರಿಕೆಯನ್ನುಳಿದು ಉಳಿದವರಾರೂ ಪಾಕಿಗೆ ಯೂವ ಬೆಂಬಲವನ್ನೂ ನೀಡಲಿಲ್ಲ.'

'ಮತ್ತೆ ಅಮೆರಿಕೆಯವ್ದೇನು? ಭಾರತದ ಮೇಲೆ ವೃಥಾರೋಪ ಹೊರಿಸಿಯೇ ಅದು ತೃಪ್ತಿ ಪಟ್ಟಿತು ...'

"ಜಲ್ರಿ, ಯೂಹ್ಯಾಖಾನರು ಸಮರವಿರಾಮದ ಕೊಡುಗೆಯನ್ನು ಸ್ವೀಕರಿಸಿದರಲ್ಲಾ ...'

'ಮತ್ತವರು ಮೂಡುವುದಾದರೂ ಏನು? ಬಂಗ್ಲಾ ದೇಶ ಕೈಬಿಟ್ಟದ್ದನ್ನು ಅಲ್ಲ ವೆನ್ನುವುದು ಯೂರಿಗೆ ಸಾಧ್ಯ? ಅವರ ಪ್ರಾಣ ಮಿತ್ರ ಅಮೆರಿಕೆಯೂ ಅದು ಮುಗಿದ ಅಧ್ಯಾಯವೆಂದು ತಿಳಿದ ಮೇಲೆ....'

ಬಂಗ್ಲಾ ಕೈ ಬಿಟ್ಟರೂ ತನ್ನೆಲ್ಲ ಶಕ್ತಿಯನ್ನು ಕೇಂದ್ರೀಕರಿಸಿ ಪಶ್ಚಿಮದಲ್ಲಿ ಭಾರತದ ಮೇಲೆ ತೀವ್ರ ಪ್ರತಿಕ್ರಿಯೆ ತೋರ್ಪಡಿಸಲು ಯೂಹ್ಯಾಖಾನರು ನಿಶ್ಚಯಿಸಿದ್ದರಂತೆ ...'

'ಇರಬಹುದು ಆದರೆ, ಅವರೆಷ್ಟು ದಿನ ಹೋರಾಡಬಲ್ಲರೆಂಬುದೇ ಮುಖ್ಯ ಪ್ರಶ್ನೆ. ಭಾರತವು ಕೊಡಮೂಡಿದ ಸಮರ ವಿರಾಮದ ಕೊಡುಗೆಯನ್ನವರು ತಿರಸ್ಕರಿಸಿದರೆ, ಅಮೆರಿಕೆಯೂ ಸೂರ್ತ ಅವರ ಕೈ ಬಿಟ್ಟೀತು. ಆಳಿದುಳಿದ ಯೂಹ್ಯಾ ಶಕ್ತಿ ಅತ್ಯಲ್ಪ. ಅದನ್ನು ನಂಬಿ ಅವರು ಪೂರ್ಣ ಮೂರ್ಖರಾಗಿ ಜೆನ್ನಾ ಕಟ್ಟಿದ ಪಾಕಿಸ್ತಾನಕ್ಕೆ ಪೂರ್ಣ ಗೋರಿ ಕಟ್ಟಲು ಮನ ಮಾಡಲಿಲ್ಲ ಅಷ್ಟೆ....'

'ಇನ್ನೇನು ಬೇರೆ ಗೋರಿ ಬೇಕು? ಬಂಗ್ಲಾ ಸ್ವತಂತ್ರವಾದ ಮೇಲೆ....ಸಿಂಧ ಪಂಜಾಬ—ಫಖ್ತೂನಿಸ್ತಾನ....'

'ಅದು ಮುಂದಿನಮೊತು ನಮಗೆ ಆಗತ್ಯವಿಲ್ಲ. ಯೂಹ್ಯಾಖಾನರು ಸಮರ ವಿರಾಮನನ್ನು ಒಪ್ಪದೇ ಇರುತಿದ್ದರೆ, ಪಾಕಿಸ್ತಾನದ ಹೆಸರೇ ಇಲ್ಲವಾಗುತ್ತಿತ್ತು. ಯೂಹ್ಯಾಖಾನರು ಭಾರತದ ಕೊಡುಗೆಯನ್ನು ಸ್ವೀಕರಿಸಿ ಗೌರವಯುತ ಶರಣಾಗತಿಗೆ ಒಪ್ಪಿದರಪ್ಪೆ.'

'ಅದು ಸರಿನ್ನಿ. ಇನ್ನು ಮುಂದೆ?'

'ಸಮರ ವಿರಾಮ ವೇಳೆಯುಲ್ಲಿಹಿಡಿದಿದ್ದ ಎಲ್ಲ ಠಾಣೆಗಳನ್ನೂ ವಶದಲ್ಲಿಟ್ಟುಕೊಳ್ಳಲು ನಮ್ಮ ಸೇನೆಗೆ ಆಜ್ಞೆ ನೀಡಲಾಗಿದೆ. ಅವುಗಳ ರಕ್ಷಣೆಗೆ ಅಗತ್ಯವೆನಿಸಿದರೆ, ಶಸ್ತ್ರಾಸ್ತ್ರ ಬಳಸಲೂ ಆದೇಶವಿದೆ.'

'ಹೌದು. ಈಗ ಭಾರತವು ಪಾಕಿಸ್ತಾನದ ಹತ್ತಾರು ಠಾಣ್ಯಗಳನ್ನೂ ನೂರಾರು ಚದರ ಮೈಲಿ ಭೂ ಪ್ರದೇಶವನ್ನೂ ತನ್ನ ಅಂಕೆಯಲ್ಲಿಟ್ಟುಕೊಂಡಿದೆ. ಅದನ್ನು ಪಾಕಿಸ್ತಾನಕ್ಕೆ ಬಿಟ್ಟು ಕೊಡುವುದುಂಟೆ?'

'ಈಯೆಲ್ಲ ವಿಚಾರ ಮುಂದೆಯೊಗಬೇಕಷ್ಟೆ. ಅಂತಾರಾಷ್ಟ್ರೀಯ ವಲಯಗಳು ಇದರಲ್ಲಿ ಕಾಳಜಿ ವಹಿಸುತ್ತವೆಯೋ ಇಲ್ಲವೋ ನೋಡಬೇಕು. ಸಮರ ವಿರಾಮಕ್ಕೆ ಮೂರಲ್ಲ, ನಾಲ್ಕು ಬಾರಿ ಗೊತ್ತುವಳಿ ಮಂಡಿಸಿದ ಅಮೆರಿಕೆಯ ಪಾತ್ರವೇನೆಂದು ಈಗ ಕಾಣಬೇಕು.'

'ಯೂಹ್ಯಾಖಾನರು ತನ್ನ ಸೋಲನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ.'

'ಯಾಕೆ ಹಾಗಂತೀಯ? ಲಕ್ಷೋಪಲಕ್ಷ ನಿರಾಶ್ರಿತರ ವಲಸೆಯನ್ನು, ಸಾವಿರಾರು ನಿರೀಹ ಬಂಗ್ಲಾ ದೇಶೀಯರ ಕಗ್ಗೊಲೆಯನ್ನು ಕಂಡೂ ಕಂಡೂ ಕುರುಡರಂತೆ ವರ್ತಿಸಿದ ಅಂತಾರಾಷ್ಟ್ರೀಯ ವಲಯಗಳು ಈಗಲೂ ಕುರುಡರಾಗಿರಬಾರದೆ?'

'ಛೆ ಛೆ, ಇದೇನು ಹೇಳ್ತೀರಾ? ಅಲ್ಲ, ಯೂಹ್ಯಾಖಾನರ ಮೂಗಿಗೆ ಪ್ಲಾಸ್ಟಿಕ್ ಸರ್ಜರಿ ಮಾಡಲು ಅಮೆರಿಕನ್ ವೈದ್ಯರು ಬಂದೇ ಬರುತ್ತಾರೆ. ಇಲ್ಲವಾದರೆ, ಅವರ ಪ್ಯಾಟನ್ ಟ್ಯಾಂಕು, ಸೆಬರ ಜೆಟ್ಟುಗಳಿಗೆ ಗಿರಾಕಿಯೆಲ್ಲಿಂದ?'

'ಓ, ಅಂದರೆ. ಈ ಯುದ್ಧದಲ್ಲಿ ಅಮೆರಿಕದ ವ್ಯಾಪಾರಿ ನೀತಿ ನುಸುಳಿದೆಯೆನ್ನುತ್ತೀಯ?'

'ಏಸರ್ ಹಾವರಿಂದ ತೊಡಗಿ ಜಾನ್ಸನ್ನಿನ್ನಿಂದ ಬೆಳೆದು ನಿಕ್ಸನ್ನಿನ್ನಿಂದ ಪರಿಪೂರ್ಣಗೊಂಡ ಶಸ್ತ್ರಾಸ್ತ್ರ ಪೂರಯ್ಕೆ ಈಗ ಬಹಳಷ್ಟು ಖಾಲಿಯಾಯ್ತಲ್ಲಾ? ಈ ಮೊದಲು ಗಾಯಗೊಂಡಲ್ಲೆ ಅರ್ಧಾಂಶ ಖಾಲಿಯಾಗಿತ್ತು; ಅದನ್ನು ಭರ್ತಿ ಮಾಡಿಕೊಟ್ಟು ಸಂಪೂರ್ಣ ವ್ಯರ್ಥ ಮಾಡಿದ ಕೀರ್ತಿ ನಿಕ್ಸನ್ನರಿಗೆ. ಇನ್ನು ಮತ್ತೆ ಶ್ರೀ ಗಣೇಶಾಯ ನಮಃ ಹಾಡಬಹುದು....'

'ಅಂದ್ರೆ ಈ ಸಮರವನ್ನು ಅಮೆರಿಕೆಯೇ ಪ್ರೇರೇಪಿಸಿದ್ದು?'

'ಯಾಕೆ ಹಾಗನ್ನಬೇಕು? ಆದರೆ ನೋಡಿ, ಅಮೆರಿಕೆ ವಸ್ತುಸ್ಥಿತಿಯನ್ನು ಸಮರ್ಪಕವಾಗಿ ಅರಿತುಕೊಳ್ಳಲು ಕೃಷ್ಣ ಪ್ರಯತ್ನ ಮಾಡುತ್ತಿದ್ದರೆ ಈ ದುರಂತ ಸಂಭವಿಸುತ್ತಲೇ ಇರಲಿಲ್ಲ.'

'ಅದು ಖರೆ ಕಣೇ.'

'ಹಾಗಾದರೆ, ಅಮೆರಿಕೆಯ ಉದ್ದೇಶವೇ ನಿತ್ರಾಂತ ಬೇರೆ ಹೇಳಬೇಕೆ?'

'ಶಾಶ್ವತ ಲವಣಾಯ ಬಂಗ್ಲಾದೇಶವನ್ನು ಯೂಹ್ಯಾರ ಮುಷ್ಟಿಯಲ್ಲೆ ಉಳಿಸುವ ದುರಾಸೆಯಿಂದಾಗಿ ಅದೂ ಕೈ-ಮೈ ಸುಟ್ಟುಕೊಂಡಿತು....'

'ನೋಡಿ, ಪಾಶ್ಚಾತ್ಯ ದೇಶಗಳ ಈ ದ್ವಿದಳ ನೀತಿಯಿಂದಲೇ ಅಶಾಂತಿ ಹರಡುವುದು. ಹೆಟ್ಟೊಂದು ತುಂಡೆರಡು ಇಲ್ಲವೇ ಇಲ್ಲ....'

'ಹ್ಞೂಂ....'

"ಅಲ್ಲ, ಇನ್ನು ನುಂಜೆ ಪಾಕ್ ಕಳೆದುಕೊಂಡ ನೆಲವನ್ನು ಭಾರತ ಮರಳಿ ಕೊಡಬೇಕೆಂದು ಕೇಳಿದರೆ?'

'ಯಾರು?'

'ಭದ್ರತಾಸಮಿತಿಯೆನ್ನಿ...'

'ನಮಗ್ಯಾಕೆ? ಕೊಟ್ಟುಬಿಡಬೇಕು, ಆದರೆ...'

'ಏನು?'

(ಹತ್ತನೇ ಪುಟ ನೋಡಿರಿ)

In the Court of the
II Additional Munsiff at
Puttur. S. K.

Ex.C. 873 of 1971.
in O. S. 368/1970.

Between:—

A. S. Bhavanishankar Gowda
—Petitioner.

vs.

1. Monappa Gowda. 2. Sundara Gowda. —Respondents

To

Sri 1. Monappa Gowda.
S/o A. Annakoosa Gowda.
2. Sundara Gowda,
S/o Monappa Gowda.
Ajjavara Village,
Sullia Taluk, S. Kanara.

Please take notice that the above execution case stands posted to 10—1—1972 for your appearance and you are hereby directed to appear before the court on the said day at 10—30 a.m. in person or through an Advocate failing which the case will proceed in your absence.

(By Order of Court)

Sd/- U.P.Shivarama
Advocate for Petitioner.

ನವಯುಗ
ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಪ್ರಕಟಿಸಲಾಗುವ ಒಂದು ವಿನೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ.

ನವಯುಗದ ನವೀಕರಣಕ್ಕಾಗಿ
ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಬಂಗ್ಲಾ ನರಮೇಧಕ್ಕೆ ಪೂರ್ಣಾಹುತಿ ಬೇಕೆ?

ಬಂಗ್ಲಾದೇಶದ ವಿದ್ಯಮಾನಗಳಿಗೆ ದಿನ ದಿನವೂ ಹೊಸರೂಪ. ಅಲ್ಲಿದ್ದ ಪಶ್ಚಿಮ ಪಾಕಿಸ್ತಾನಿ ಪಡೆಗಳು ನಿರ್ನಾಮವಾದವು; ಬಳಿಕವು ಶರಣು ಬಂದವು. ಬಂಗ್ಲಾದೇಶದ ಮುಕ್ತಿವಾಹಿನಿ ಮತ್ತು ನಮ್ಮ ಪಡೆಗಳು ಪಶ್ಚಿಮ ಪಾಕಿಸ್ತಾನದ ಮೇಲೆ ವಿಜಯವನ್ನು ಗಳಿಸಿದುವು.

ತನ್ನ ಪೂರ್ವರೆಕ್ಕೆಯೆಂದು ಪಶ್ಚಿಮ ಪಾಕಿಸ್ತಾನವು ಬಂಗ್ಲಾವನ್ನು ಕರೆಯುವುದನ್ನಿನ್ನೂ ಬಿಡಲಿಲ್ಲ. ಅಲ್ಲಿದ್ದ ಪಾಕ್ ಪಡೆಗಳು ಸೈನಿಕ ನೆರವಿನಾಗಿ ಕೈ ಬೊಬ್ಬಿಡುವಾಗ, ಯೂಹ್ಯಾ ಖಾನರಿಗೊಂದು ಆನಂದವಾಗಿರಬಹುದೋ ಏನೋ! 'ಸಾಧ್ಯವಾದುದೆಲ್ಲವನ್ನೂ ಮಾಡುತ್ತಿದ್ದೇನೆ' ಎಂದು ಪ್ರತಿ ಸಂದೇಶ ಕಳಿಸಿಯೇ ಅವರು ತೃಪ್ತರಾದರು.

ಅಲ್ಲಿಲ್ಲಿ ಬರಬಹುದಾಗಿದ್ದ ಮಿಲಿಟರಿ ನೆರವನ್ನು ಭಾರತೀಯ ಪಡೆಗಳು ತಡೆಹಿಡಿದುವು. ದಿಗ್ಬಂಧನದಲ್ಲಿ ಸಿಕ್ಕುಬಿದ್ದ ಬಂಗ್ಲಾದೇಶದಲ್ಲಿ ಬೇರು ಬಿಟ್ಟಿದ್ದ ಯೂಹ್ಯಾ ಪಡೆಗಳಿಗೆ ಶರಣು ಬಾರದೆ ಅನ್ಯಗತಿಯಿರಲಿಲ್ಲ.

ಭಾರತವು ಪಾಕ್ ಜನತೆಯನ್ನಾಗಲೀ ಯೋಧರನ್ನಾಗಲೀ ದ್ವೇಷಿಸುವುದಿಲ್ಲ. ಆದುದರಿಂದ ಆದು ತನ್ನ ಕಾರ್ಯಾಚರಣೆಯನ್ನು ನಿಧಾನವಾಗಿ ಮಂದುವರಿಸಿತು. ವಿತ್ತ—ಜೀವಿತ, ಆಸ್ತಿಪಾಸ್ತಿಗಳಿಗೆ ಆದಷ್ಟು ಕಡಿಮೆ ಹಾನಿ ಮಾಡಬೇಕೆಂಬುದೇ ಆದರ ಗುರಿ. ಆದುದರಿಂದಲೇ ಡಾಕ್ಕಾದತ್ತ ಸುತ್ತುವರಿಯಲು ಅದು ಹಷ್ಟು ದಿನಗಳನ್ನು ತೆಗೆದು ಕೊಂಡಿತು.

ಬಂಗ್ಲಾದೇಶದಲ್ಲಿ ತಾನು ನಾಗರಿಕ ಆಡಳಿತ ಸ್ಥಾಪಿಸಿದ್ದೇನೆಂದು ಯೂಹ್ಯಾ ಖಾನರು ಹಲವು ದಿನಗಳಿಗೆ ಮೊದಲು ಹೇಳಿದ್ದರು. ದಂಡಿನ ಆಡಳಿತಾಧಿಕಾರಿ ಟಿಕ್ಕಾ ಖಾನರ ಬದಲು ಅವರು ಶ್ರೀ ಮಲಿಕ್ ರನ್ನು ಗವರ್ನರರೆಂದು ನೇಮಿಸಿದ್ದರು.

ಭಾರತೀಯ ಪಡೆಗಳು ಡಾಕ್ಕಾದ ನಿಕಟಾತಿನಿಕಟ ಬರುತಿದ್ದಂತೆ ಅರಿವಾಯ್ತು. ತಾವು ತಮ್ಮ ಹುದ್ದೆಗೆ ರಾಜೀನಾಮೆ ನೀಡಿದರು; ಈ ಗಳಿಗೆಯಿಂದ ನಡೆಯಬಹುದಾದ ದುರ್ಘಟನೆಗಳಿಗೆ ತಾನು ಹೊಣೆಯಲ್ಲವೆಂದು ಬರೆದರು.

ಭಾರತೀಯ ದಂಡಿನ ಮಹಾದಂಡನಾಯಕ ಶ್ರೀ ಮಾಣಿಕ್ ಶಹ ಕೆಲವು ದಿನಗಳಿಂದ ಪಾಕ್ ಯೋಧರಿಗೆ ಕರೆ ನೀಡುತ್ತಲೆ ಇದ್ದರು. 'ಶರಣಾಗಿ, ನಿಮ್ಮನ್ನು ಗೌರವದಿಂದ ಕಾಣಲಾಗುವುದು.

ತಾವು ಅಸಹಾಯಕರು, ಯೂಹ್ಯಾ ಖಾನರು ತಮ್ಮ ಕೈ ಬಿಟ್ಟರೆಂದು ಸಾಬೀತಾದ ಮೇಲೆ ಅವರು ತಡಮಾಡಲಿಲ್ಲ.

ಪಾಕ್ ದಂಡಿನ ಹಲವು ಸರದಾರರು ಭಾರತೀಯ ಪಡೆ— ಮುಕ್ತಿವಾಹಿನಿಗಳ ಮುಂದೆ ಶಸ್ತ್ರ ಸನ್ಯಾಸ ಸ್ವೀಕರಿಸಿದರು.

ಡಾಕ್ಕಾದ ಇಂಟರ್‌ನೇಶನಲ್ ಹೋಟೇಲೊಂದು, ಆಸ್ಪತ್ರೆಯೊಂದು ಶರಣು ಬಂದವರಿಗೆ ಆಶ್ರಯ ನೀಡುತ್ತಿದೆ. ಇವನ್ನು ಜಿನೀವಾ ಒಡಂಬಡಿಕೆಯನ್ವಯ ಸುರಕ್ಷಿತ ಪ್ರದೇಶವೆಂದು ಘೋಷಿಸಲಾಗಿದೆ. ರೆಡ್ ಕ್ರಾಸ್ ಸಂಸ್ಥೆಯು ಇಲ್ಲಿ ಕಾರ್ಯಮಗ್ನವಾಗಿದೆ.

ಗವರ್ನರ್ ಮಲಿಕ್ ಮತ್ತವರ ಪರಿವಾರವೂ ಶರಣು ಬಂದ ಮೇಲೆ ದಂಡಪತಿ ನಿಯೋಗಿಯೇನು ಮಾಡಬೇಕು? ಅವರು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯು ಥಾಂಟರಿಗೆ ಕೆಲವುದಿನ ಮೊದಲೇ ರಕ್ಷಣೆಗಾಗಿ ಮೊರೆಯಿಟ್ಟಿದ್ದರು.

ಆದರೆ, ನರಮೇಧಪ್ರಿಯ ಯೂಹ್ಯಾಖಾನರು ಈ ಕರೆಯನ್ನು ಗಣನೆಗೆ ತರಬಾರದೆಂದು ಮರುಕ್ಷಣದಲ್ಲೇ ಯು ಥಾಂಟರಿಗೆ ಹೇಳಿಕಳಿಸಿದ್ದರು.

ಈಗ ನಿರ್ಬಲ—ಅಸಹಾಯಕರಾದ ನಿಯೋಗಿ ಕಪಸವಿರಾಮವನ್ನು ಬೇಡಿದರು. ದಂಡಪತಿ ಮಾಣಿಕ್ ಶಹ ತತ್‌ಕ್ಷಣ ಕದನವಿರಾಮಕ್ಕೆ ಆಜ್ಞೆನೀಡಿದರು.

ಬಂಗ್ಲಾ ದೇಶದಲ್ಲಿರುವ ಎಲ್ಲ ಪಾಕ್ ಯೋಧರು ತಮ್ಮ ಶಸ್ತ್ರಾಸ್ತ್ರಗಳ ಸಮೇತ ಶರಣು ಬರಬೇಕೆಂದು ಕರೆ ನೀಡಿದರು.

ಇಲ್ಲಿಗೆ ಬಂಗ್ಲಾ ವಿದ್ಯಮಾನಗಳಿಗೆ ಅರ್ಧ ವಿರಾಮ ಬಿದ್ದಿತು. ಎಲ್ಲವೂ ಸರಿಯಾಗಿಯೇ ನಡೆದರೆ, ಸುಮಾರು ಇನ್ನೂರೈವತ್ತು ದಿನಗಳಿಂದ ನಡೆದು ಬಂದ ಯೂಹ್ಯಾ ನರಮೇಧವು ಬಂಗ್ಲಾ ದೇಶದಲ್ಲಿ ನಿಂತಿತು. ಪೂರ್ಣಾಹುತಿ ಮಾತ್ರ ಬಾಕಿ.

ಯೂಹ್ಯಾಖಾನರು ಬಂಗ್ಲಾ ಸಮಸ್ಯೆಯನ್ನು ಸೃಷ್ಟಿಸಿದ ತರುಣದಲ್ಲೇ ರಾಜ್ಯಕೀಯ ತಂತ್ರಜ್ಞರು ಅಂದಿದ್ದರು—

ಬಂಗ್ಲಾ ಪಾಕಿಸ್ತಾನದಿಂದ ಸಿಡಿದು ಪ್ರತ್ಯೇಕವಾಗುವುದು ಖಂಡಿತ. ಆದರೆ, ಈ ವಿಭಜನೆ ಶಾಂತ ವಿಧಾನಗಳಿಂದ ಆಗುವುದೋ ಹಿಂಸಾರೂಪದಿಂದ ಸಿದ್ಧಿಸುವುದೋ ನೋಡಬೇಕು.

ಯೂಹ್ಯಾಖಾನರು ಎರಡನೆಯ ದಾರಿಯನ್ನೇ ಹಿಡಿದರು. ದಮನದಿಂದ, ನರಮೇಧದಿಂದ ಜನತೆಯನ್ನು ತನ್ನ ಮುಷ್ಟಿಯೊಳಗಡೆ ಹಿಡಿದಿಟ್ಟು ಕೊಳ್ಳ ಬಹುದೆಂದು ಅವರಿಗೆ ದುರ್ಬೋಧನೆ ಕೊಡಲಾಯ್ತು. ಅವರು ಈ ಬೋಧನೆಗೆ ಕಿವಿಗೊಟ್ಟರು; ತಾವು ರಸಾತಳಕ್ಕೆ ಕುಸಿದು ಬಿದ್ದರು.

ಬಂಗ್ಲಾ ದೇಶವನ್ನು ಪಾಕಿಸ್ತಾನ ಮನ್ನಿಸದಿರಬಹುದು; ಅದರ 'ಮಿತ್ರ' ದೇಶಗಳು ಅದಕ್ಕೆ ಸೂಸ್ಯತೆ ನೀಡದಿರಬಹುದು. ಆದರೆ, ಬಂಗ್ಲಾದೇಶ ಉದಯವಾಗುವುದನ್ನು ಅವರೆಲ್ಲರೂ ಒಂದಲ್ಲ ಒಂದು ದಿನ ಒಪ್ಪಿ ಕೊಳ್ಳಲೇ ಬೇಕಾಗುತ್ತದೆ.

ಬಂಗ್ಲಾ ವಿಮೋಚನೆ ಪರಿಪೂರ್ಣವಾದ ಮೇಲೆ ಯೂಹ್ಯಾ ಯಜ್ಞಶಾಲೆಯೊಗಿ ಪರಿಣಮಿಸಿದ್ದ ದೇಶವನ್ನು ಪುನಾರಚಿಸುವತ್ತ ಅಲ್ಲಿನ ಸರಕಾರದ ಗಮನ ಹರಿಯ ಬೇಕು. ಭಾರತದಲ್ಲಿ ಆಶ್ರಯ ಪಡೆದಿರುವ ಒಂದು ಕೋಟಿ ನಿರಾಶ್ರಿತರನ್ನು ಸ್ವದೇಶಕ್ಕೆ ಕರೆದು ಕೊಳ್ಳಬೇಕು.

ಇನ್ನೂ ಪಾಕಿಸ್ತಾನದ ಬಂಧನದಲ್ಲಿರುವ ಶೇಕ ಮುಜಿಬುರ್ ರೆಹಮಾನರ ಬಂಧಮುಕ್ತಿಗೆ ಹೋರಾಡಬೇಕು.

ಈ ನಡುವೆಯೊಂದು ಸುದ್ದಿ. ಯೂಹ್ಯಾಖಾನರು ನಾಪತ್ತೆಯಾಗಿದ್ದಾರೆಂದು. ಮಿತಿಮೀರಿದ ಚಿಂತೆಯಿಂದವರು ವಿಶ್ರಾಂತಿ ತೆಗೆದು ಕೊಂಡಿರಬಹುದು.

ದುರ್ಯೋಧನ ವೈಶಂಪಾಯನ ಕೊಳದಲ್ಲಿ ಜಲಸ್ತಂಭನ ಬಲದಿಂದ ಅಡಗಿಕೊಂಡಿರಲಿಲ್ಲವೆ? ಹಾಗೆ.

ಪಾಕ್ ಪಡೆಗಳೆಲ್ಲವೂ ಈಗ ಪಶ್ಚಿಮ ವಲಯದಲ್ಲಿ ಕೇಂದ್ರೀಕೃತವಾಗಿವೆ. ಭೀಕರ ಕಾಳಗ ನಡೆಯುತ್ತಿದೆ.

ಕದನ ವಿರಾಮವನ್ನು ಬಯಸುವವರು ಸತ್ಯ ಘಟನೆಯನ್ನು ಮನ್ನಿಸಿದರೆ ಕೂಡಲೆ ಅದು ಸಾಧಿತವಾಗಬಹುದು.

ಭಾರತಕ್ಕೆ ಪಾಕಿಸ್ತಾನದ ನಾಶ ಬೇಡವಾದ ವಿಷಯ; ಅದರೊಡನೆ ಹೋರಾಡಬೇಕೆಂಬ ಹೆಬ್ಬಯಕೆ ಭಾರತಕ್ಕಿಲ್ಲ. ಸತ್ಯ ಮತ್ತು ನ್ಯಾಯಕ್ಕಾಗಿ ನಾವು ಹೋರಾಡಿದ್ದೇವೆ; ಮುಂದೆಯೂ ಹೋರಾಡುತ್ತೇವೆ.

ಇನ್ನೂ ಸಮಯ ಮಿಂಚಿ ಹೋಗಿಲ್ಲ. ನೂರು ವರ್ಷವಾದರೂ ಭಾರತದೊಂದಿಗೆ ಹೋರಾಡುತ್ತೇವೆಯೆಂದು ಹೋರಾಟದ ಮಾತು ಬಿಟ್ಟು, ಇತಿಹಾಸದ ಮುಂದೆ ತಲೆ ವಾಗಿದರೆ, ಅವರ ಘನತೆ ಹೆಚ್ಚುತ್ತದೆ; ಪಾಕಿಸ್ತಾನ ಉಳಿಯುತ್ತದೆ.

ಯೂಹ್ಯಾಖಾನರು ಅಮೆರಿಕೆಯಿಂದ ಮಿಲಿಟರಿ ನೆರವನ್ನು ನೀರೀಕ್ಷಿಸಿರಬಹುದು; ಆದು ದೊರೆಯುತ್ತಲೂ ಇರಬಹುದು. ಆ ಪೆರಿಕೆಯ ಅಣುಶಕ್ತಿ ಸಮರ ನೌಕೆ ಮತ್ತಿತರ ಏಳು ನೌಕೆಗಳು ಪಾಕಿಗೆ ಶಸ್ತ್ರಾಸ್ತ್ರ ನೆರವು ಹೊತ್ತುಕೊಂಡು ಬಂಗಾಳ ಕೊಲ್ಲಿಗಿಳಿದಿವೆಯೆಂಬ ವರದಿ.

ಒಂದು ವೇಳೆ, ಅಮೆರಿಕೆಯು ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಯೂಹ್ಯಾಖಾನರ ಕೈಹಿಡಿದು ಸಮರಕ್ಕೆಳಸಿದರೆ, ಆದರ ಪರಿಣಾಮ ಭೀಕರವಾಗುತ್ತದೆ.

ಅಮೆರಿಕೆಯೆಂದು ತೀವ್ರವಾಗಿ ಯೋಚಿಸಬೇಕು—ಭಾರತ ಉಪಖಂಡದಲ್ಲಿ ತನ್ನ ಹಸ್ತಕ್ಷೇಪ ನ್ಯಾಯ ಸಮ್ಮತವಾದುದೆ? ಯೂಹ್ಯಾಖಾನರಿಗೆ ನೆರವು ನೀಡುವುದರ ಪರಿಣಾಮವೇನಾಗುತ್ತದೆ?

ಉಪಖಂಡದಲ್ಲಿ ಮತ್ತೊಂದು ವಿಯತ್ನಾಮವನ್ನು ಆದು ನಿರ್ಮಿಸ ಬಯಸುತ್ತದೆಯೆ?

ಬಂಗ್ಲಾ ದೇಶವನ್ನು ಇತಿಹಾಸವೇ ನಿರ್ಮಿಸಿತು. ಆದನ್ನು ಅಲ್ಲಗಳೆದರೆ, ನಿಕ್ಸನ್ನರೂ ಶ್ವೇತಭವನದಿಂದ ಹೊರಬರಬೇಕಾಗಬಹುದು.

ಏಕೆಂದರೆ, ಅಲ್ಲಿ ಅವರ ರಾಜ್ಯನೀತಿಯನ್ನು ಒಪ್ಪದವರ ದೊಡ್ಡ ಗುಂಪೇ ಇದೆ. ಆದುದರಿಂದಲೇ ಅಮೆರಿಕನ್ ಸಮರ ನೌಕೆಗಳ ವರದಿಯನ್ನು ರಹಸ್ಯದಲ್ಲೇ ಇಡಲಾಗುತ್ತಿದೆ.

ಪರಿಣಾಮ ಗಂಭೀರ—ಅತಿ ಗಂಭೀರ. ಅದನ್ನು ನಿರೀಕ್ಷಿಸುತ್ತಿರಬೇಕಷ್ಟೆ. ●

In the Court of Munsif of Coondapoor

O. S. No. 46/1971.

Between:—

Mysore State Electricity Board—Plaintiff

and

Patel Saw Mills, Coondapoor —Defendant

To

M/s. Patel Saw Mills, Coondapoor represented by its Managing Partner P. G. Meghji. C/o Sri Sharada Vijaya Saw Mills, Bijapur, Bijapur District.

Sir,

Please take notice that the above suit filed for recovery of Electrical Charges of Rs. 7517.90 towards R. R. No. 1160 Coondapoor from you, has been posted to 21—1—1972 for your appearance. If you fail to attend on that date, the case will be decided in your absence.

By order of Court.

M. Anthaya Shetty.

Advocate for Plaintiff.

Coondapoor 13—12—1971.

ಬಂಗ್ಲಾ ಆಶೋತ್ತರ ಪೂರಯ್ಸಿತು

ವಿಶ್ವ ಸಂಸ್ಥೆಯ ಸಾಮಾನ್ಯಾಧಿವೇಶನದಲ್ಲಿ ಪಾಕಿಸ್ತಾನದ ಮಿತ್ರರು ಸಮರ ವಿರಾಮ ಗೊತ್ತುವಳಿ ಮುಂಡಿಸಿದರು ಅದು ಬಹುಮತದಿಂದ ಸ್ವೀಕೃತವಾಯ್ತು.

ಈ ಬಗ್ಗೆ ಪಾಕಿಸ್ತಾನವು ತಪ್ಪು ಕಲ್ಪನೆ ಹೊಂದಿತು, ಭಾರತವೇ ತಪ್ಪುಗಾರನೆಂದೂ ತನಗೆ ಆಪ್ತ ದೇಶಗಳ ಬೆಂಬಲವಿದೆಯೆಂದೂ ಅದು ಪ್ರಚಾರಕ್ಕೆ ನೊದಲು ಮಾಡಿತು.

ಆದರೆ, ವಿಶ್ವಸಂಸ್ಥೆಯು ಯಾರೊಬ್ಬರನ್ನಾದರೂ ತಪ್ಪುಗಾರನೆನ್ನು ಹೇಳಲಿಲ್ಲ; ಬರಿಯ ಸಮರ ವಿರಾಮಕ್ಕೆ ಕರೆಯಿತ್ತಿತು. ಇದಕ್ಕೆ ಶಾಸನಾಧಿಕಾರವೂ ತಲ್ಲ: ಹೆಚ್ಚಿನ ಕಾಳಜಿಯೂ ಇಲ್ಲ. ಎಲ್ಲರೊಡನೆ ಗೋ ವಿಂದಾ....

ಈ ಗೊತ್ತುವಳಿಯಂತೆ ಸಮರವಿರಾಮ ಕ್ಕೆ ಕರೆ ನೀಡುವ ಗೊತ್ತುವಳಿಯೊಂದನ್ನು ಅಮೆರಿಕೆ ಸುತ್ತಿ, ಭದ್ರತಾ ಮಂಡಲಿಯ ಮುಂದೆ ತಂದು ನೋಡಿತು. ಇಟಲಿ ಮತ್ತು ಜಪಾನಾಗಲು ಸಮರ ವಿರಾಮ ಮತ್ತು ಅದಕೊಡನೆಯೇ ರಾಜ್ಯಕೀಯ ಪರಿಹಾರಕ್ಕೆ ಕರೆಕೊಡುವ ನಿರ್ಣಯವನ್ನು ಮಂಡಿಸಿದವು.

ಇದರಿಂದ ಇಷ್ಟೊಂದು ಸಮ್ಮತಿಪಲಿಲ್ಲ. ಮುಖಕ್ಕೆ ಕೊಳಕಿ ಬಳಿದುಕೊಳ್ಳಲು ತೆಪ್ಪ ದೇಶ ಸಿದ್ಧವಿಲ್ಲವೆಂದವರು ಗುಡುಗಿ, ಸಭಾ ತ್ಯಾಗಮಾಡಿ ಮೂಲೆಯಲ್ಲಿ ನಿಲಿತು ತಾ ಸುಗುಟ್ಟಲಿ ಇತ್ತರು.

ಬಂಗ್ಲಾದೇಶದಲ್ಲಿ ಸೇನಾಪತಿ ನಿಯೋಜಿಯವರು ಬೇಷರತ್ ಶರಣು ಬಂದಿರುವುದರಿಂದ ಬಂಗ್ಲಾ ವಿಮೋಚನೆ ಪೂರ್ಣವಾಯ್ತು. ಒಂಬತ್ತು ತಿಂಗಳುಗಳಿಂದ ಯಾಹ್ಯಾಖಾನರು ನಡೆಸುತ್ತ ಬಂದ ಜನಯೋಗ--ನರಮೇಧಕ್ಕೆ ಕೊನೆಗಾಲ ಪ್ರಾಪ್ತವಾಯ್ತು.

ಉಳಿದಿರುವುದು ಪೂರ್ಣಾಹುತಿ ಮಾತ್ರ. ಯಾಹ್ಯಾಖಾನರೇ ಇದಕ್ಕೆ ಪೂರ್ಣಾಹುತಿಯೊದರೂ ಅಶ್ಚರ್ಯವಿಲ್ಲ.

ಯಾಹ್ಯಾಖಾನರ ಅದ್ಭುತ ಮಿಲಿಟರಿ ಶಕ್ತಿಗೆದುರು ನಿಂತು, ಸ್ವಾತಂತ್ರ್ಯಕ್ಕಾಗಿ ಪ್ರಾಣಪಣವಿಟ್ಟು ಹೋರಾಡಿದ ಧೀರ ಬಂಗ್ಲಾದೇಶೀಯರು ಧನ್ಯರು.

ಒಂದು ಕೋಟಿಗೂ ಮಿಕ್ಕಿದ ನಿರಾಶ್ರಿತರನ್ನು ಸಾಕಿ ಸಲಹಲು ಆದ್ಭುತತ್ಯಾಗ ಮಾಡಲು ಮುಂದೆ ಬಂದು, ಸಮರದ ವೇಳೆ ಏಕ ಪುರುಷನಂತೆ ಸಿಂಹನಾದದಲ್ಲಿ ಎದ್ದು ನಿಂತ ಐವತ್ತೈದು ಕೋಟಿ ಭಾರತೀಯರು ಧನ್ಯರು

ಭಾರತದ ಪರಂಪರೆ—ಸಂಸ್ಕೃತಿ—ಧರ್ಮ—ನೀತಿಗಳಿಗೆ ಅಪಚಾರವಾಗದಂತೆ ಸಮರ ಮುನ್ನಡೆಸಿದ ಭಾರತೀಯ ಸದಸ್ಯರು—ವಾಯು—ಜಲ ಪಡೆಗಳ ದಂಡನಾಯಕರುಗಳು ಧನ್ಯರು.

ಮಾತೃಭೂಮಿಯ ಕರೆಗೆ ಓಗೊಟ್ಟು ಬಲಿದಾನಕ್ಕೆ ಮುಂದಾದ ಬಲಿದಾನಗೊಂಡ ನಮ್ಮ ಮುಕ್ತಿವಾಹಿನಿಯ ಸೈನಿಕರು ಧನ್ಯರು.

ಇಪ್ಪತ್ತನೆಯ ಶತಮಾನದಲ್ಲಿ ಏಶಿಯಾ ಖಂಡದ ದೇಶಗಳ ನೆಲೆ ಪಾಶ್ಚಾತ್ಯರ ಪ್ರಭಾವ-ಈ ದೇಶಗಳಿಗೆ ಸ್ವತಂತ್ರ ಅಸ್ತಿತ್ವವೇ ಇಲ್ಲವೆಂಬ ನುಸ್ಥಿತಿ.

ಇದನ್ನು ತಪ್ಪಿಸಿ, ನೆರೆಯ ಜನತೆಯ ಆಶೋತ್ತರಗಳನ್ನು ಮೂರ್ತ ಮಾಡಿ ತೋರಿಸಿದ ಭಾರತ ಹೊಸ ಇತಿಹಾಸ ಬರೆಯಿತು; ವಿಶ್ವ ಸಂಸ್ಥೆಯ ನೆರಳಲ್ಲಿ ತಮ್ಮ ಕುಹಕ ನೀತಿಗಳಿಗೆ ಆಶ್ರಯ ಪಡೆದು, ಇಡಿಯ ಜಗತ್ತನ್ನು ನಂಬಿಸುತಿದ್ದ ಬೃಹತ್ ರಾಷ್ಟ್ರಗಳಿಗೆ ಭ್ರಾಂತ ಜೀನ್ಯಾಗಿ ಬುದ್ಧಿ ಕಲಿಸಿತು.

ನಿಜ, ಸೋವಿಯತ್ತಿನ ಬೆಂಬಲವೊಂದಿಲ್ಲವಾಗಿದ್ದರೆ ಇದು ಸಾಧ್ಯವಾಗುತ್ತಿರಲಿಲ್ಲ. ಅದೂ ಧನ್ಯವಾಯ್ತು.

ಅಮೆರಿಕೆ—ಕೆಂಪು ಚೀನಾಗಳು ಭಾರತದ ಬಗ್ಗೆ ನೆಕ್ಸನೀತಿ ಮಹಿಸಿದವು. ಅಮೆರಿಕೆ ತನ್ನ ನೌಕಾಪಡೆಯನ್ನು ಬಂಗಾಳ ಕೊಲ್ಲಿಗೆ ಕಳಿಸಿತು. ಚೀನಾ ಟಿಬೇಟಿನಲ್ಲಿ ಸೇನೆ ಜಮಾಯಿಸಿತು.

ಬಂಗ್ಲಾ ಸಮಸ್ಯೆ ಭಾರತದ ಸೃಷ್ಟಿ. ಅಲ್ಲಿ ತನ್ನ ಕೈಗೊಂಬೆ ಸರಕಾರವನ್ನು ಇರಿಸುವುದು ಅದರ ಎಣಿಯ. ಆಕ್ರಮಣಕಾರಿ ಭಾರತದ ಈ ನೀತಿ ಖಂಡನಾರ್ಹ. ಭಾರತ ನಾಮ್ರಜ್ಯವಾದವು 'ಬಂಗ್ಲಾ ವಿಮೋಚನೆ'ಯನ್ನು ಮಾಡಲು ಮುಂದುವರಿದು ಇಂಕ್ ಆಂತರಿಕ ವ್ಯವಹಾರದಲ್ಲಿ ಕೈ ಹಾಕಿದೆ ಅದರ ಈ ಕೃತಿ ನೆರೆಯ ರಾಷ್ಟ್ರಗಳಿಗೆ ಬೆದರಿಕೆ. ಇದು ನಾಳೆ ಬ್ರಹ್ಮದ ಮೇಲೆ, ಟಿಬೇಟಿನ ಮೇಲೆ, ಪಾಕಿಸ್ತಾನದ ಮೇಲೆ ಏರಿಬರುವುದಿಲ್ಲವೆಂದೇನು ನಂಬಿಕೆ?. ..

ಕೆಂಪು ಚೀನಾದ ವಾದ ವೈಖರಿಯಲ್ಲಿ ಹೊಸತಿಲ್ಲ. ಅದು ಗಡಿಯಿಂದಲೂ ಇದೇ ರೀತಿ ಹಾಡುತ್ತ ಬಂದಿದೆ; ಮುಂದೆಯೂ ಹಾಡ ಬಹುದು.

ಆದರೆ, ಪ್ರಧಾನ ಮಂತ್ರಿ ಶ್ರೀಮತಿ ಗಾಂಧಿಯವರು ಹಲವು ಬಾರಿ ಸ್ಪಷ್ಟಪಡಿಸಿದ್ದಾರೆ. 'ಭಾರತಕ್ಕೆ ಅನ್ಯ ದೇಶಗಳ ಒಂದಂಗುಲ ನೆಲವೂ ಬೇಡ' ಸದ್ಯದ ಹೋರಾಟದ ಬಗ್ಗೆ ಅವರು ಘೋಷಿಸಿದರು—"ಬಂಗ್ಲಾ ದೇಶವನ್ನು ಪಶ್ಚಿಮ ಪಾಕಿಸ್ತಾನದ ಮಿಲಿಟರಿ ಸೇನಾಡಳಿತೆಯಿಂದ ವಿಮೋಚನೆಗೊಳಿಸುವುದು ನಮ್ಮ ಉದ್ದೇಶ್ಯ. ಅದು ಪಾಕ್ ಸೇನೆಯ ಶರಣಾಗತಿಯಿಂದ ಪರಿಪೂರ್ಣವಾಯ್ತು. ಆದುದರಿಂದ ತಾ. ೧೭ರಂದು ರಾತ್ರಿ ತಾನು ಎಂಟರಿಂದ ನಾವು ಏಕಪಕ್ಷೀಯವಾಗಿ ಸಮರ ವಿರಾಮ ಘೋಷಿಸುತ್ತೇವೆ.'

ಬಂಗ್ಲಾ ದೇಶದಲ್ಲೂ ಆಷ್ಟೇ. ಅಲ್ಲಿ ಶಾಂತಿ ಸ್ಥಾಪನೆಯ ಕಾರ್ಯವನ್ನು ನಿರ್ವಹಿಸಿ, ಅದಷ್ಟು ಶೀಘ್ರವಾಗಿ ನಮ್ಮ ಸೇನೆ ಹಿಂದೆ ಬರುತ್ತದೆ.

ವಿಶ್ವಸಂಸ್ಥೆ ಗೊತ್ತುವಳಿ ಸಾಧಿಸದ್ದನ್ನು ಬಂಗ್ಲಾ ವಿಮೋಚನೆ ಸಾಧಿಸಿತು.

ಭದ್ರತಾ ಸಮಿತಿಯ ಗೊತ್ತುವಳಿಯು ವಾಸ್ತವಿಕಾಂಶವನ್ನು ಕಡೆಗಣಿಸಿದ್ದರಿಂದ ಲೇ ಅದಕ್ಕೆ ಮೂರು ಬಾರಿ ಮೃತ್ಯು ಸಂಭವಿಸಿತು.

ಬ್ರಿಟನ್ ಮತ್ತು ಫ್ರಾನ್ಸುಗಳು ಈ ಕರಿನ ಪರಿಸ್ಥಿತಿಯಲ್ಲಿ ತಟಸ್ಥವಾಗಿ ಉಳಿದುವು ಇವು ಪಾಕಿಸ್ತಾನದ ಟೀಕೆಗೆ, ಆವಹೇಳನಕ್ಕೆ ಗುರಿಯಾದರೂ ಬಂಗ್ಲಾ ಸಮಸ್ಯೆಯನ್ನು ವಾಸ್ತವಿಕ ದೃಷ್ಟಿಯಿಂದ ನೋಡುವ ಪ್ರಯತ್ನವನ್ನಾದರೂ ಮಾಡಿವೆ.

ಪಾಕಿಸ್ತಾನದೊಡನೆ ಬೆನ್ನಿಗೆ ಬೆನ್ನು ಕೊಟ್ಟು ಅದರ ನರಮೇಧವನ್ನು ಸಮರ್ಥಿಸಿದ ದೇಶವೊಂದಿದ್ದರೆ, ಅದು ಅಮೆರಿಕೆ. ಅದರೆ, ಅದರ ಪ್ರತಿಷ್ಠೆಗೆ ಭಾರಿ ಏಟು ಬಿತ್ತು. ಭಾರತದೊಡನೆ ಅದರ ಸಂಬಂಧ ಸಂಪೂರ್ಣ ಬಿಗಡಾಯಿಸಿತು.

ಪಾಕ್ ಸೇನೆಯ ಶರಣಾಗತಿಯ ನಂತರ ಅಮೆರಿಕನ್ ವಕ್ತಾರರ ಹೇಳಿಕೆ ಅರ್ಥಪೂರ್ಣವಾದದ್ದು.

ಅದು ಹೇಳಿತು-ಬಂಗ್ಲಾ ಪಾಕಿಸ್ತಾನದ ಕೈತಪ್ಪಿ ಹೋಯಿತು. ಇದೇ ಪರಿಸ್ಥಿತಿ ಪಶ್ಚಿಮ ಪಾಕಿಸ್ತಾನಕ್ಕೂ ಒದಗದಿರಲಿ.

ಇದು ಕಾರ್ಯರೂಪಕ್ಕೆ ಬರಬೇಕಾದರೆ, ಪಾಕಿಸ್ತಾನಿ ಅಧಿಕಾರಿಗಳಿಗೆ ಮೊದಲು ವಿವೇಕ ಹುಟ್ಟಬೇಕು. ನೆರೆಹೊರೆಯೊಡನೆ ಕಾಲು ಕೆದರಿ ಜಗಳ ಕಠಿಯುವುದನ್ನು ಬಿಟ್ಟು ದೇಶದ ಪ್ರಜೆಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ದುಡಿಯಬೇಕು.

ಪಾಕ್ ಮಿತ್ರರು, ಅದರ ಒಳಿತನ್ನು, ಶ್ರೇಯಸ್ಸನ್ನು ಬಯಸುವವರು ಶಸ್ತ್ರಾಸ್ತ್ರ ಪೂರಯ್ಕೆಗೆ ಪೂರ್ಣ ವಿರಾಮ ಹಾಕಿ ಆರ್ಥಿಕ ಅಭಿವೃದ್ಧಿಗೆ ಸಹಾಯಮಾಡಬೇಕು.

ಜಾತೀಯ ವಿಷ ಸರ್ಪದಲ್ಲಿ ಮಹಮ್ಮದಾಲಿ ಜಿನ್ನಾ ಪಡೆದ ಆವಲಿ ಕೂಸು ಪಾಕಿಸ್ತಾನ. ಅವರು ಅಂದು ಮಾಡಿದ ಪಾಪದ ಬಲವನ್ನು ಇಂದು ಯೂಹ್ಯಾಖಾನರೂ ಅವರ ಸಲಹೆಗಾರರೂ ಎರಡೂ ಕೈಗಳಲ್ಲಿ ಉಂಡರು.

ಪಂ. ನೆಹರು ಪಾಕಿಸ್ತಾನದ ಮೇಲೆಯೂ ಅರಬ ದೇಶಗಳ ಮೇಲೆಯೂ ಅನುಕಂಪವುಳ್ಳವರಾಗಿದ್ದರು. ಅರಬ ಜಗತ್ತಿಗೆ ಅವರು ಮಾಡಿದ ಉಪಕಾರ ವಿಶ್ವದ ಇತಿಹಾಸದಲ್ಲಿ ಅವಿಸ್ಮರಣೀಯ.

ಆದರೆ, ಅದೇ ಅರಬ ಜಗತ್ತು ಗೋಲ್ಡಾ ಮೀರ್ ಹೋರಾಟದ ವೇಳೆ ಜಾತೀಯ ನೆಲೆಯಲ್ಲಿ ಪಾಕಿಗೆ ಬೆಂಬಲ ನೀಡಿತು; ಈ ಬಾರಿಯೂ ಅವು ತಮ್ಮ ತಪ್ಪನ್ನು ತಿದ್ದಿಕೊಳ್ಳಲಿಲ್ಲ

ಜಾತೀಯತೆಗೂ ಮೈತ್ರಿಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಭಾರತ ಜಗಜ್ಜಾಹೀರು ಮಾಡಿತೋರಿಸುತ್ತಲೇ ಬಂದಿದೆ ಇಲ್ಲಿ ಎಲ್ಲ ಜಾತೀಯರೂ ಒಂದಾಗಿ ಏಕ ರಾಷ್ಟ್ರಘಟಕರಾಗಿ ಅಭಿವೃದ್ಧಿ ಹೊಂದುತಿದ್ದಾರೆ.

ಬಂಗ್ಲಾ ದೇಶವೂ ಇದೇ ಮಾದರಿಯಲ್ಲಿ ಮುಂದುವರಿದು ಜಾತ್ಯತೀತ ದೇಶವಾಗಿ ಬೆಳಗಿ ಬಾಳಲೆಂದು ಪ್ರತಿ ಭಾರತೀಯನ ಆಂತರ್ಯಪಾಶಯ.

ಭಾರತ ತನ್ನ ಮಿತ್ರರಾರು, ಹಿತ ಶತ್ರುಗಳಾರು, ಶತ್ರುಗಳಾರು ಎಂಬುದನ್ನು ಪ್ರತ್ಯಕ್ಷವಾಗಿ ಕಂಡುಕೊಂಡಿತು.

ಬಂಗ್ಲಾ ದೇಶ ನಮಗೆ ಈ ವಿವೇಕವನ್ನು ನೀಡಿತು.

●●

HOTEL SATKAR

Boarding, Lodging & Restaurant

Behind Corporation Office,

9 Mission Road — **Bangalore—27.**

Phone No.— 1 72363
2 72304

Grams: HOST SATKAR

Vegetarian Cuisine

Attached Bath Rooms and Phones.

Running H and C water.

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

Ex.C. 156/1971. O. S. 324/1962.

ಅರ್ಜಿದಾರರು— ವೆಂಕಮ್ಮ ಸೆಟ್ತಿ ಕೂಡಾ.

ಎದ್ರಿರು— ಸದಿಯಮ್ಮ ಸೆಟ್ತಿ ಕೂಡಾ ಎದ್ರಿರು

1 ಸದಿಯಮ್ಮ ಸೆಟ್ತಿ, ತುಂಗಮ್ಮ ಸೆಟ್ತಿರ ಮಗಳು. 2. ನರಸಿಂಹ ಸೆಟ್ಟ, ದಾರಮ್ಮ ಸೆಟ್ತಿರ ಮಗ. 4 ನಾರಾಯಣ ಸೆಟ್ಟ, ಸಂಜೀವಿ ಸೆಟ್ತಿರ ಮಗ. 18 ಚೇಗಾರಮರ ಮಂಜಯ್ಯ ಸೆಟ್ಟ, ರುಕ್ಕಮ್ಮ ಸೆಟ್ತಿರ ಮಗ.

1, 2, 4ನೇಯವರು ಕುಂದಾಪುರ ತಾಲ್ಲುಹೊಸೂರು ಗ್ರಾಮದ ಪಂಡಬಳ್ಳಿಯಲ್ಲಿರುವವರು.

18ನೇಯವ ಬಳ್ಕೂರು ಗ್ರಾಮದಲ್ಲಿರುವವ. ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ:

ಮೇಲಿನ ದಿಕ್ರಿ ವಿಧಿಯಂತೆ ಅರ್ಜದಾರರಿಗೆ ಬರತಕ್ಕ ಹಣಗಳ ಬಗ್ಗೆ ಅರ್ಜದಾರರು ನೂಡಿದ ಮೇಲಿನ ಅಮಲ್ದಾರಿಯು ತಾ. 6-1-1972 ಕ್ಕೆ ತಸ್ಸಿಗೆ ಯಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪ ಯಿದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟನಲ್ಲಿ ಹಾಜರಾಗಿ ಜ್ಯಾಹೀರು ನೂಡಿಕೊಳ್ಳ ತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಿರುತ್ತದೆ.

By order of the Court

Y. Tejappa Shetty.

Advocate for Plaintiff.

Coondapoor, 11-12-1971.

ತುಂಬಾದಲ್ಲಿ

ಭಾರತದ ರಾಕೆಟ್ ವಿಜ್ಞಾನ ಬೆಳೆದು ಬರುತ್ತಿದೆ

ಲೇಖಕರು— ಶ್ರೀ ಎ. ಎಂ. ರಾಜ್

ತಿರುವನಂತಪುರ-1963ರಲ್ಲಿ ಹೊರ ಅಂತರಿಕ್ಷದ ರಹಸ್ಯಗಳನ್ನು ಶೋಧಿಸಲು ತುಂಬಾದಲ್ಲಿ ಭಾರತದ ಮೊದಲನೆಯ ರಾಕೆಟ್ ಉಡಾವಣಾ ನಿಲಯವನ್ನು ಸ್ಥಾಪಿಸಿದಾಗ, ನಿಲಯದಲ್ಲಿ ಸುಮಾರು 50 ಜನ ಕೆಲಸ ಮಾಡುತ್ತಿದ್ದರು. ಅವರಲ್ಲಿ ಕೆಲವರಿಗಂತೂ ಅಂತರಿಕ್ಷ ವಿಜ್ಞಾನದ ಬಗೆಗಿದ್ದ ತಿಳುವಳಿಕೆ ಸಾಧಾರಣ ರೀತಿಯದಾಗಿತ್ತು.

ಎಂಟು ವರ್ಷಗಳ ನಂತರ ಇಂದು,ಪಶ್ಚಿಮ ಕರಾವಳಿಯಲ್ಲಿ ತಿರುವನಂತಪುರದಿಂದ ಹತ್ತು ಮೈಲು ಉತ್ತರದಲ್ಲಿರುವ ತುಂಬಾ ಇಕ್ವೆಟೋರಿಯಲ್ ರಾಕೆಟ್ ಲಾಂಚಿಂಗ್ ಸ್ಟೇಷನ್ (ಟಿ.ಇ.ಆರ್.ಎಲ್.ಎಸ್.) ಒಂದು ದೊಡ್ಡ, ಮಹತ್ವದ ಸಂಶೋಧನ ಕೇಂದ್ರವಾಗಿದೆ. ಇಲ್ಲಿ 2700 ಕ್ಕೆಂತ ಹೆಚ್ಚು ಜನ ಕೆಲಸ ಮಾಡುತ್ತಿದ್ದಾರೆ. ಇವರಲ್ಲಿ ಅರ್ಧಕ್ಕಿಂತ ಹೆಚ್ಚಿನವರು ತಾಂತ್ರಿಕ ನೈಪುಣ್ಯವಿರುವವರು.

ತಾಂತ್ರಿಕ ಕೌಶಲ್ಯವಿರುವ ಕಾರ್ಯಕರ್ತರ ಸಂಖ್ಯೆಯಲ್ಲಾಗಿರುವ ಈ ಆದ್ಭುತ ಏರಿಕೆಯು ತುಂಬಾ ಕೇಂದ್ರದ ಮಹತ್ವದ ಸಾಧನೆಗಳಲ್ಲೊಂದು ಎಂದು ಇತ್ತೀಚಿನ ಸಂದರ್ಶನವೊಂದರಲ್ಲಿ ತುಂಬಾ ಕೇಂದ್ರದ ಡೈರೆಕ್ಟರ್ ಶ್ರೀ ಎಜ್.ಜಿ.ಎಸ್. ಮೂರ್ತಿ ಹೇಳಿದರು. ಇದರಿಂದಾಗಿ ಭಾರತಕ್ಕೆ ತನ್ನ ಅಂತರಿಕ್ಷ ಸಂಶೋಧನ ಕಾರ್ಯಕ್ರಮಗಳಲ್ಲಿ ಸ್ವತಂತ್ರವಾಗಿ ಮುನ್ನಡೆಯಲು ಸಹಾಯವಾಗುವುದು ಎಂದವರು ಹೇಳಿದರು.

'ರಾಕೆಟ್‌ಗಳ ದೇಶೀಯ ವಿನ್ಯಾಸ ಹಾಗೂ ಅಭಿವೃದ್ಧಿಗೆ ಭಾರತದ ವಿಜ್ಞಾನಿಗಳು ಮತ್ತು ಇಂಜಿನಿಯರುಗಳು ಸರ್ವಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದಕ್ಕೆ ಎಲೆಕ್ಟ್ರಾನಿಕ್ಸ್, ಸಾಧನಗಳ ಜೋಡಣೆ ಮತ್ತು ಮಾರ್ಗದರ್ಶನದಲ್ಲಿ ಪರಿಷ್ಕೃತ ತಾಂತ್ರಿಕ ವಿಧಾನಗಳು ಅವಶ್ಯ' ಎಂದವರು ಹೇಳಿದರು.

ಉದಾಹರಣೆಗೆ, ಇತ್ತೀಚಿನ ಪ್ರಯೋಗಗಳಲ್ಲಿ ಸೆಂಟಾರ್ ಮತ್ತು ರೋಹಿಣಿ ಮುಂತಾದ ಭಾರತ ನಿರ್ಮಿತ ರಾಕೆಟ್‌ಗಳು, ಭಾರತದಲ್ಲೇ ನಿರ್ಮಿಸಲಾದ ಪೇಲೋಡ್‌ಗಳನ್ನು ಒಯ್ದುದನ್ನು ಮೂರ್ತಿಯವರು ಉಲ್ಲೇಖಿಸಿದರು. "ಇದು ಭಾರತದ ಅಂತರಿಕ್ಷ ಸಂಶೋಧನೆಯಲ್ಲೊಂದು ದೊಡ್ಡ ಸಿದ್ಧಿ" ಎಂದವರು ಹೇಳಿದರು.

ಈ ಅಭಿಪ್ರಾಯವನ್ನು ಸಮರ್ಥಿಸಿದ, ಅಹಮದಾಬಾದಿನ ಭೌತ ಸಂಶೋಧನ ಪ್ರಯೋಗಾಲಯದ ಡಾ| ವಿ. ಆರ್. ವಿಕ್ರಮ್ ಸಾರಾಭಾಯಿಯವರು ಹೀಗೆಂದರು: 'ನಾವು ನಮ್ಮ ಸ್ವಂತ ಉಪಗ್ರಹಗಳನ್ನು ಪಡೆದಿರುವುದು ಅಪೇಕ್ಷಣೀಯ, ಸದಾ ಅನ್ಯರ ಆವಲಂಬನ ಸಲ್ಲದು, ಪೇಲೋಡ್‌ಗಳ ನಿರ್ಮಾಣ ಮತ್ತು ಉಡಾವಣೆಗೆ ಬೇಕಾದ ಕೌಶಲ್ಯಗಳನ್ನು ಅನುಭವದಿಂದಲೇ ಪಡೆಯಬೇಕಷ್ಟೆ. ಈ ವಿಷಯದಲ್ಲಿ ತುಂಬಾ ಮಹತ್ವದ ಪಾತ್ರ ನಿರ್ವಹಿಸುತ್ತಿದೆ." ಡಾ| ವಿಕ್ರಮ್ ಸಾರಾಭಾಯಿಯವರು ತುಂಬಾದಲ್ಲಿ ಹವಾಮಾನ ಕಾರ್ಯಕ್ರಮಗಳಿಗೆ ಪ್ರಾಜೆಕ್ಟ್ ವಿಜ್ಞಾನಿ.

ಮುಂದುವರಿಯುತ್ತಾ ಡಾ| ವಿಕ್ರಮ್ ಸಾರಾಭಾಯಿ ಹೀಗೆಂದರು: "ಆರಂಭದಲ್ಲಿ ನಮ್ಮ ಪೇಲೋಡ್‌ಗಳು ವಿದೇಶೀ ತಯಾರಿಕೆಗಳ ನಕಲುಗಳಾಗಿದ್ದವು. ತದನಂತರ ನಾವು ತಯಾರಿಸಿದ ಪೇಲೋಡ್‌ಗಳು ಇತರೆಡೆಗಳಲ್ಲಿ ತಯಾರಾದುವುಗಳಿಗಿಂತ ಉತ್ತಮವಲ್ಲದಿದ್ದರೆ, ಅವಕ್ಕೆ ಸಮಾನ ಎಂದು ಮಾನ್ಯವಾಗಿವೆ."

1970—71ನೆಯ ವರ್ಷದಲ್ಲಿ 172 ಕ್ಕೆಂತ ಹೆಚ್ಚು ರಾಕೆಟ್‌ಗಳನ್ನು ತುಂಬಾ ಕೇಂದ್ರದಿಂದ ಉಡಾಯಿಸಲಾಯಿತು. ಇವುಗಳಲ್ಲಿ ಕೆಲವು ವ್ಯಾಯೋಗಿಕ ರಾಕೆಟ್‌ಗಳು. ಇವುಗಳ ಪೈಕಿ 54 ರಾಕೆಟ್‌ಗಳನ್ನು ವೈಜ್ಞಾನಿಕ ಪ್ರಯೋಗಗಳನ್ನು ನಡೆಸಲು ಉಡಾಯಿಸಲಾಯಿತು. ತುಂಬಾದಲ್ಲಿ ತಯಾರಿಸಿದ ಸಾಧನಗಳನ್ನು ಪರೀಕ್ಷಿಸಲು 118 ರಾಕೆಟ್‌ಗಳನ್ನು ಉಡಾಯಿಸಲಾಯಿತು.

ಸಮಭಾಜಕ ವೃತ್ತ ಪ್ರದೇಶದಲ್ಲಿರುವುದೇ ತುಂಬಾದ ಮಹತ್ವಕ್ಕೆ ಕಾರಣ. ಸಮಭಾಜಕ ವೃತ್ತ ಪ್ರದೇಶದ ವೈಶಿಷ್ಟ್ಯಗಳಾಗಿರುವ ಅಯನೋವಲಯದಲ್ಲಿನ, ಹವಾಮಾನದ ಹಾಗೂ ವಾತಾವರಣದ ಲಕ್ಷಣಗಳ ಅಧ್ಯಯನಕ್ಕೆ ಇದೊಂದು ಆದರ್ಶ ಸ್ಥಳ.

ಅಂತರಿಕ್ಷ ಸಂಶೋಧನೆಯ ಭಾರತೀಯ ರಾಷ್ಟ್ರೀಯ ಸಮಿತಿಯವರು (ಇನ್ಕೋಸ್ಪಾರ್) ತುಂಬಾದಲ್ಲಿ ಸ್ಥಾಪಿಸಿದ 600 ಎಕರೆಗಳ ಕೇಂದ್ರದಿಂದ, ಭಾರತೀಯ ವಿಜ್ಞಾನಿಗಳು ಅಂತಾರಾಷ್ಟ್ರೀಯ ಸಹಕಾರದೊಡನೆ ಬಾಹ್ಯಾಕಾಶದ ಶಾಂತಿಯುತ ಪರಿಶೋಧನೆಗಾಗಿ ಸೌಂಡಿಂಗ್ ರಾಕೆಟ್‌ಗಳನ್ನು ಉಡಾಯಿಸುವರು. ಮೇಲಿನ ವಾತಾವರಣದ ವಿವಿಧ ಲಕ್ಷಣಗಳನ್ನು ಅಳೆಯಲು ಅಥವಾ ನಿರ್ಧರಿಸಲು ಬೇಕಾದ ಉಪಕರಣಗಳನ್ನು ಈ ಸೌಂಡಿಂಗ್ ರಾಕೆಟ್‌ಗಳು ಒಯ್ಯುವುವು

ಅನೇಕ ರಾಷ್ಟ್ರಗಳ ವಿಜ್ಞಾನಿಗಳು ತುಂಬಾ ಕೇಂದ್ರವನ್ನು ಬಳಸುತ್ತಿರುವುದರಿಂದಾಗಿ ಭಾರತದ ವಿಜ್ಞಾನಿಗಳು ಮತ್ತು ಇಂಜಿನಿಯರುಗಳಲ್ಲಿ ರಾಕೆಟ್ ತಂತ್ರದಲ್ಲಿ ಆಸಕ್ತಿ ಅಧಿಕವಾಗುತ್ತಿದೆ ಎಂದು ಮೂರ್ತಿಯವರು ಹೇಳಿದರು.

ಭಾರತದಲ್ಲಿ ಮೊದಲನೆಯ ರಾಕೆಟ್ ಉಡಾವಣಾ ಸ್ಥಳ ತುಂಬಾ ಕೇಂದ್ರ. 1963ನೆಯ ನವೆಂಬರ್ 21ರಂದು ಇಲ್ಲಿ ಸೋಡಿಯಂ ಹೆಬೆಯ ಪೇಲೋಡ್ ಸಹಿತ ನೈಕ್-ಅಪಾಚೆ ರಾಕೆಟನ್ನು ಹಾರಿಸಿದಾಗ ಭಾರತದ ರಾಕೆಟ್ ಉಡಾವಣಾ ಕಾರ್ಯ ಆರಂಭವಾಯಿತು. ರಾಕೆಟನ್ನು ಒದಗಿಸಿದುದು ಅಮೆರಿಕದ ರಾಷ್ಟ್ರೀಯ ವಾಯುಯಾನ ಮತ್ತು ಗಗನಾಡಳಿತ ಸಂಸ್ಥೆ (ನಾಸಾ) ಪೇಲೋಡ್ ಸರಬರಾಜು ಮಾಡಿದುದು ಫ್ರಾನ್ಸಿನ ಅಂತರಿಕ್ಷ ಸಂಸ್ಥೆ.

ತುಂಬಾ ಸಂಸ್ಥಾಪನೆಯ ಮತ್ತು ಕಾರ್ಯ ನಿರ್ವಹಣೆಯ ಆರಂಭದ ಹಂತಗಳಲ್ಲಿ ಅಮೆರಿಕ, ಫ್ರಾನ್ಸ್, ಇಂಗ್ಲೆಂಡ್, ರಷ್ಯ ಮತ್ತು ಇತರ ದೇಶಗಳು ಸಹಾಯ ಮಾಡಿದವು. ತುಂಬಾದಲ್ಲಿ ಈಗ ಬಳಕೆಯಲ್ಲಿರುವ ಕೆಲವು ಎಲೆಕ್ಟ್ರಾನಿಕ್ ಸಾಧನಗಳನ್ನು ನಾಸಾ ಒದಗಿಸಿತು. ಮೂರ್ತಿಯವರು ಮತ್ತು ಅವರ ತಾಂತ್ರಿಕ ಸಿಬ್ಬಂದಿಯ ಅನೇಕ ಕಾರ್ಯಕರ್ತರು ವಾಲ್ಲಪ್ಸ್ ದ್ವೀಪದಲ್ಲಿರುವ ನಾಸಾದ ರಾಕೆಟ್ ಉಡಾವಣಾ ಕೇಂದ್ರದಲ್ಲಿ ಮತ್ತು ಅಮೆರಿಕದ ಇತರ ಕೇಂದ್ರಗಳಲ್ಲಿ ತರಬೇತಿ ಪಡೆದರು.

ತುಂಬಾ ಕೇಂದ್ರವನ್ನು ಅಂತಾರಾಷ್ಟ್ರೀಯ ಬಳಕೆಗೆ ವಿೂಸಲಿಡುವ ಮೂಲಕ ಭಾರತವು ಅಂತರಿಕ್ಷ ವಿಜ್ಞಾನದಲ್ಲಿ ಗಣ್ಯ ಸ್ಥಾನವನ್ನು ಪಡೆದಿದೆ.

1968ನೆಯ ಫೆಬ್ರವರಿ 2ರಂದು ಅಂತಾರಾಷ್ಟ್ರೀಯ ಬಳಕೆಗೆ ವಿೂಸಲಿಡುವ ಸಮಾರಂಭವನ್ನು ಉದ್ಘಾಟಿಸಿದ ಪ್ರಧಾನ ಮಂತ್ರಿ ಇಂದಿರಾಗಾಂಧಿಯವರು "ಭಾರತದ ಅಂತರಿಕ್ಷ ಸಂಶೋಧನೆಯ ರಾಷ್ಟ್ರೀಯ ಸಮಿತಿಯೊಡನೆ ಅಮೆರಿಕ, ಫ್ರಾನ್ಸ್ ಮತ್ತು ರಷ್ಯದ ಅಂತರಿಕ್ಷ ಸಂಸ್ಥೆಗಳು ಸಹಕರಿಸಿದುದರಿಂದ ಇದು ಸಾಧ್ಯವಾಗಿದೆ" ಎಂದರು.

ತುಂಬಾ ಕೇಂದ್ರದವರು ತಮ್ಮ ಉದ್ದೇಶ ಸಾಧನೆಯ ಪ್ರಯತ್ನದಲ್ಲಿ ಎಂದಿಗೂ ಹಿಂಜರಿದಿಲ್ಲ. ಕಾಲ ಕಳೆದಂತೆ ಭಾರತೀಯ ವಿಜ್ಞಾನಿಗಳು ರಾಕೆಟ್ ತಂತ್ರದಲ್ಲಿ ಹಾಗೂ ರಾಕೆಟ್ ಬಳಸುವ ಪ್ರಯೋಗಗಳಲ್ಲಿ ಹೆಚ್ಚು ಪ್ರೌಢತೆ, ಪ್ರಾವೀಣ್ಯ ಗಳಿಸುತ್ತಿದ್ದಾರೆ.

1967ರಲ್ಲಿ ಅಂತರಿಕ್ಷ ವಿಜ್ಞಾನ ಮತ್ತು ಯಂತ್ರಶಾಸ್ತ್ರ ಕೇಂದ್ರ (ಎಸ್. ಎಸ್. ಟಿ. ಸಿ) 1969ರಲ್ಲಿ 'ರಾಕೆಟ್ ಪ್ರೊಪೆಲೆಂಟ್ ಪ್ಲಾಂಟ್' (ಆರ್. ಪಿ ಸಿ.) ಮತ್ತು 1971ರಲ್ಲಿ "ರಾಕೆಟ್ ಫ್ಯಾಬ್ರಿಕೇಷನ್ ಫೆಸಿಲಿಟಿ' (ಆರ್. ಎಫ್. ಎಫ್.)-ಇವನ್ನೂ ತುಂಬಾದಲ್ಲಿ ಕಾರ್ಯಾರಂಭಗೊಳಿಸಿ, ಭಾರತವು ರಾಕೆಟ್ ತಂತ್ರಾಭ್ಯಾಸದಲ್ಲಿ ಇನ್ನೊಂದು ಪ್ರಮುಖ ಹೆಜ್ಜೆ ಮುಂದಿಟ್ಟಿತು.

'ಎಸ್ ಎಸ್ ಟಿ ಸಿ. ಮುಖ್ಯವಾಗಿ ತಾಂತ್ರಿಕ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ನಿರತವಾಗಿದೆ. 'ಪ್ರಾಜೆಕ್ಟ್ ರೋಹಿಣಿ' ಎಂಬ ಕಾರ್ಯಕ್ರಮದಡಿ ಈಗ ಒಂದು ಹಂತದ ಮತ್ತು ವಿವಿಧ ಹಂತಗಳ ಹಲಬಗೆಯ ರಾಕೆಟ್‌ಗಳನ್ನು ಈ ಕೇಂದ್ರ ಈಗ ರೂಪಿಸುತ್ತಿದೆ. 75 ಎಂ ಎಂ. ಮತ್ತು 300 ಎಂ ಎಂ ಅಡ್ಡಳತೆಯ ವ್ಯಾಯೋಗಿಕ ರಾಕೆಟ್‌ಗಳನ್ನೂ ಇಲ್ಲಿ ತಯಾರಿಸಲಾಗುವುದು. 'ಮೇನಕಾ' ಮತ್ತು 'ಸೆಂಟಾರ್' ರಾಕೆಟ್‌ಗಳನ್ನು ನಿರ್ಮಿಸಲೂ ಕೇಂದ್ರವು ಉದ್ದೇಶಿಸಿದೆ.

ಶ್ರೇಷ್ಠ ರೀತಿಯ ರಾಕೆಟ್‌ಗಳ ಉಡಾವಣೆಗೆ ಉತ್ಕೃಷ್ಟ ದರ್ಜೆಯ ಮುಂದೂಡಿಕೆ ಸಾಧನಗಳು ಅಗತ್ಯ. ಇವಕ್ಕಾಗಿ ತುಂಬಾದಲ್ಲಿ ದೇಶೀಯ 'ರಾಕೆಟ್ ಪ್ರೊಪೆಲೆಂಟ್ ಪ್ಲಾಂಟ್' ಸ್ಥಾಪಿಸಲಾಗಿದೆ.

ರಾಕೆಟ್ ತಯಾರಿಕೆ ಕೆಲಸ ವೇಗ ಗತಿಯಲ್ಲಿ ಬೆಳೆದಂತೆ ತುಂಬಾದಲ್ಲಿ ಎಲ್ಲ ಬಗೆಯ ರಾಕೆಟ್‌ಗಳ ಜೋಡಣೆಗೆ ಸೌಲಭ್ಯ ಒದಗಿಸುವುದು ಅಗತ್ಯವಾಯಿತು. ಇದಕ್ಕಾಗಿ ಇಲ್ಲಿ 'ರಾಕೆಟ್ ಫ್ಯಾಬ್ರಿಕೇಷನ್ ಫೆಸಿಲಿಟಿ' ಕಾರ್ಯಾಗಾರವೊಂದನ್ನು ಸ್ಥಾಪಿಸಲಾಯಿತು. ಮುಂದೆ ಮೇನಕಾ, ರೋಹಿಣಿ ಮತ್ತು ಸೆಂಟಾರ್ ರಾಕೆಟ್‌ಗಳಿಗಾಗಿ ರಾಕೆಟ್ ವಾಹನಗಳು, ಬಿಡಿಭಾಗಗಳು ಮತ್ತಿತರ ಸಾಧನ ಸಾಮಗ್ರಿಗಳನ್ನು ತಯಾರಿಸುವ ಹೊಣೆ ಇದಕ್ಕೆ ಸೇರಿದ್ದು.

"ರಾಕೆಟ್ ಉಡಾವಣೆ ಕಾರ್ಯಕ್ರಮಗಳಲ್ಲಿ ಇತರ ದೇಶಗಳೊಡನೆ ಬತೆಗೂಡಿ ಕೆಲಸ ಮಾಡಿರುವುದರಿಂದ ನಮ್ಮದೇ ಸ್ವಂತ ರಾಕೆಟ್‌ಗಳು ಮತ್ತು ಉಪಗ್ರಹಗಳನ್ನು ತಯಾರಿಸಲು ಬೇಕಾದ ಎಲ್ಲ ಜ್ಞಾನವೂ ನಮಗೆ ದೊರೆತಿದೆ" ಎಂದು ಶ್ರೀ ಮೂರ್ತಿ ಹೇಳಿದರು. "ರಾಕೆಟ್ ವಿನ್ಯಾಸ ಮತ್ತು ನಿರ್ಮಾಣದ ಪರಿಜ್ಞಾನ ಲಭಿಸಿದೊಡನೆ ಅಂ

(ಒಳಪುಟಕ್ಕೇ ಮುಂದುವರಿಯಿರಿ)

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
137 ಶಾಖೆಗಳಿಂದ ಹಬ್ಬರುವ "ವಿಜಯಾ ಬ್ಯಾಂಕ್"ನಲ್ಲಿ
ಸಂಪರ್ಕ ಬೆಳೆಸಿರಿ.

ಶೇವಣಾತಿಗಳ ಮೇಲೆ 7½ % ವರೆಗಿನ ಬಡ್ಡಿ.
ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,
(ಸ್ಥಾಪನೆ: 1921)
ರಿಜಿಸ್ಟರ್ಡ್ ಆಫೀಸು:— ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು-3.
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು-1.
ಎಮ್. ಸುಂದರ್‌ರಾಮ್ ಶೆಟ್ಟಿ,
ಜೆಯರ್‌ಮೆನ್.

ಭಾರತಕ್ಕೆ ಪೀಕಿಂಗಿನ ಸಮರ್ಥನೆಯಿಲ್ಲ

ಲೇಖಕರು: ಶ್ರೀ ವೀಕ್ಟರ್ ವಸೀಲ್ಯೆವ್

ಭಾರತದ ಜನತೆಗಳಿಗೆ ಅವರ ಇತಿಹಾಸದಲ್ಲಿ ಕಠಿಣ ಕಾಲಾವಧಿಯ ಅನುಭವವಾಗುತ್ತಿದೆ. ಭಾರತೀಯ–ಪಾಕಿಸ್ತಾನಿ ಸಂಘರ್ಷವು ಜಗತ್ತಿನಲ್ಲಿ ಎಲ್ಲ ಕಡೆಯೂ ವಿಶೇಷ ಕಳವಳವನ್ನುಂಟುಮಾಡುತ್ತಿದೆ.

ಈ ತೀವ್ರ ಸಮಸ್ಯೆಯ ವಿಚಾರದಲ್ಲಿ ಪೀಕಿಂಗ್ ವಲಯಗಳನ್ನೇನು ನಿಲುವು? ಭಾರತೀಯ ಉಪಖಂಡದಲ್ಲಿ ಉದ್ಭವಿಸಿರುವ ಸಮಸ್ಯೆಗಳ ಬಗೆಗೆ ಅವರ ದೃಷ್ಟಿವೈಪರೀತ್ಯದಲ್ಲಿರುವ ಕಳವಳೋಲುಗಳು ಯಾವುವು?

ಪೆಕಿಂಗ್ ನಲುವು "ಪಾಕಿಸ್ತಾನದ ಸಂರಕ್ಷಕರಿಗೆ ಮತ್ತು ಜನತೆಗೂ ಅವರ ನ್ಯಾಯ ಸಮ್ಮತವಾದ ಸಂಘರ್ಷದಲ್ಲಿ" ನೈತಿಕವಾದ ಬೆಂಬಲ ನೀಡುತ್ತಿದೆಯೆಂದು ಚೀನಾದ ಸ್ಪಷ್ಟಾನಿ ಟೌ-ಎನ್-ಲೈ ಮತ್ತು ಹೊಣಾಮಿ ವಿದೇಶಾಂಗ ಸಚಿವ ಶ್ರೀ ಮೆನ್-ಫೆಯ ಮೇಳವರು ಈ ಮೇಳಕೆಯು ಒಂದು ವೈಷ್ಟಿ ಕೋನದಿಂದ ಮಾತ್ರವೇ ಸರಿಯೊನಿಸೆ–ಚೀನೀ ನಾಯಕತ್ವವು ಪಾಕಿಸ್ತಾನಿ ಅಧಿಕೃತ ವಲಯಗಳ ಎಲ್ಲ ಜರ್ಜರಿಗಳಿಗೂ ಅನಿರ್ಬಂಧವಾಗಿ ಬೆಂಬಲವನ್ನು ನೀಡುತ್ತಿದೆ. ಪಾಕಿಸ್ತಾನಿ ಜನತೆಯ ಹಿತಗಳ ಬಗೆಗೆ ಮೇಳುವುದಾದೆ. ಅವರಿಗೆ ಪೆಕಿಂಗ್ ಧುರೀಣರ ನಿಲುವು ನಿರ್ದಿಷ್ಟವಾಗಿ ತಿಳಿಯಬಹುದಾಗಿದೆ.

ಜಾಗತಿಕ ರಂಗದಲ್ಲಿ ತಿಷ್ಠೆ ಅಧಿಕಾರಯುಕ್ತವಾದ ಪ್ರಯತ್ನಗಳೀದ ಮುಂದೆವರಿಯುತ್ತ ಪೆಕಿಂಗ್ ವಲಯವು ಪಾಕಿಸ್ತಾನದ ಕಡೆಗೆ ತಾನು ಅನುಸರಿಸುವ ನೀತಿಯನ್ನು ನಿರ್ಮಿಸಿಕೊಳ್ಳುತ್ತಿದೆ. ಪ್ರಥಮತಃ ನೆರೆರಾಷ್ಟ್ರಗಳ ವಿರುದ್ಧವಾಗಿ ತಿವಿತವ ನೊನೆಯುಳ್ಳ ಭಾನಿ ಪ್ರಯೋಗದ ತಂತ್ರಾಸ್ತ್ರೀಯ ಒಳಸಂಚುಗಳಿಗಾಗಿ ಪಾಕಿಸ್ತಾನಿ ಸೈನಿಕ ಅಡಳಿತ ವಲಯಗಳೊಡನೆ ತನಗಿರುವ ಸಂಬಂಧಗಳನ್ನು ಬಳಸಿಕೊಳ್ಳಲು ಅದು ಪ್ರಯತ್ನಿಸುತ್ತಿದೆ. ಪಾಕಿಸ್ತಾನಕ್ಕೆ ನೀಡಲಾದ ಈ ನೈತ್ರವನ್ನು ಉಳಿಸಲು ಚೀನೀ ಧುರೀಣರು ಪಾಕಿಸ್ತಾನೀ ಜನತೆಯ ಹಿತಗಳ ಬಗೆಗೆ ತಮ್ಮ ಕಣ್ಣು ಮುಚ್ಚಿಕೊಳ್ಳುತ್ತಾರೆ ಪೂರ್ವದಲ್ಲಿ ಸಂಭವಿಸುತ್ತಿರುವ ಘಟನೆಗಳನ್ನೂ, ಭಾರತೀಯ ಉಪಖಂಡದ ಮೇಲೆ ಪ್ರಸಕ್ತ ಸಮಯದಲ್ಲಿ ನಡೆಯುತ್ತಿರುವ ಸಶಸ್ತ್ರ ಸಂಘರ್ಷದ ನಿಜವಾದ ಕಾರಣಗಳನ್ನೂ ಅವರು ಪ್ರತಿಯೊಂದು ರೀತಿಯಲ್ಲೂ ಚೀನೀ ಜನತೆಯಿಂದ ಮರೆಮಾಡುತ್ತಿರುವುದು ಆಕಸ್ಮಿಕವೇನೂ ಅಲ್ಲ.

ಇತ್ತೀಚಿನ ವರ್ಷಗಳಲ್ಲಿ, ಸ್ವಾಯತ್ತತೆಗಾಗಿಯೂ, ಮೂಲ ಸ್ವರೂಪದ ಹಕ್ಕುಗಳಿಗಾಗಿಯೂ, ಸ್ವಾತಂತ್ರ್ಯಕ್ಕಾಗಿಯೂ ಸಾಮುದಾಯಿಕ ಚಳವಳಿಯು ಪೂರ್ವ ಪಾಕಿಸ್ತಾನದಲ್ಲಿ ಅಭಿವೃದ್ಧಿಗೊಂಡಿದೆಯೆಂಬ ವಿಷಯವು ಸುಪರಿಚಿತವಾಗಿದೆ. 1970 ರ ಡಿಸೆಂಬರ್ ತಿಂಗಳಿನಲ್ಲಿ ನಾಡಿನ ರಾಷ್ಟ್ರ ಸಭೆಗಳಿಗಾಗಿ ನಡೆದ ಚುನಾವಣೆಗಳಲ್ಲಿ, ಪೂರ್ವ ಪಾಕಿಸ್ತಾನದ ಜನತೆಯು ಮುಜೀಬುರ್ ರೆಹಮಾನರ ನೇತೃತ್ವದ ಅವಾಮಿ ಲೀಗಿಗೆ ತಮ್ಮ ಸರ್ವಸಮ್ಮತಿಯ ಬೆಂಬಲವನ್ನು ವ್ಯಕ್ತ ಪಡಿಸಿದರು. ಈ ಪಕ್ಷದ ಕಾರ್ಯಕ್ರಮವು, ರಾಜಕೀಯ ಮತ್ತು ಆರ್ಥಿಕ ಜೀವನದಲ್ಲಿ ಭಾರೀ ಪ್ರಗತಿಪರವಾದ ಜನವಾದಿ ಸುಧಾರಣೆಗಳನ್ನು ಘೋಷಿಸಿತು. ಕಾರ್ಮಿಕ ವರ್ಗದ ಸ್ಥಾನದ ಸುಧಾರಣೆಗೂ, ರೈತರಿಗೆ ಭೂಮಿಯನ್ನು ವರ್ಗಾಯಿಸುವ ಲಕ್ಷ್ಯವುಳ್ಳ ಚರ್ಯೆಗಳಿಗೂ ಅವಕಾಶವನ್ನು ಅದು ಮೂಡಿಕೊಟ್ಟಿತು. ವಿದೇಶಾಂಗ ವ್ಯವಹಾರಗಳಲ್ಲಿ, ಈ ಪಕ್ಷವು ಸಾಮ್ರಾಜ್ಯವಾದ–ವಿರೋಧಿ ನೀತಿಯ ಪಥವನ್ನು ಅಕ್ರಮಣಕಾರಿ ಕೂಟಗಳನ್ನು ತ್ಯಜಿಸುವ ಪಥವನ್ನು ರೂಪಿಸಿತು. ಈ ಕಾರ್ಯಕ್ರಮವು ಪಾಕಿಸ್ತಾನದ ಜನತೆಯ ಆಕಾಂಕ್ಷೆಗಳಿಗೆ ಅನುಗುಣವಾಗಿತ್ತು. ಮತದಾರರಲ್ಲಿ ಅತ್ಯಧಿಕ ಬಹ್ವಂಶದ ಜನರು ಅದಕ್ಕೆ ತಮ್ಮ ಸಮ್ಮತಿಯನ್ನು ನೀಡಿದರು.

ಈ ನಾಸ್ತನಾಂಶಗಳನ್ನು ಚೀನೀ ಜನತೆಯಿಂದ ಬಚ್ಚಿಡಲು ಪೆಕಿಂಗ್ ಆಡಳಿತ ವಲಯವು ಸರ್ವ ಪ್ರಯತ್ನವನ್ನೂ ಮಾಡಿತು. ಪೂರ್ವ ಪಾಕಿಸ್ತಾನದಲ್ಲಿ ಹಿಂಸೆ ಮತ್ತು ಭಯೋತ್ಪಾತ ವಾತಾವರಣವನ್ನು ನಿರ್ಮಿಸಿದಾಗ, ಅವಾಮಿ ಲೀಗಿಗೆ ಮತದಾನ ಮಾಡಿದವರ ಮೇಲೆ ತೀವ್ರವಾದ ದಮನ ಚರ್ಯೆಗಳನ್ನು ನಡೆಸಿದಾಗ, ಚೀನೀ ಧುರೀಣರು ಮೌನವಾಗಿದ್ದರು. ಇನ್ನಾಸೂಚ್ಯ ವಲಯದ ಚರ್ಯೆಗಳು ಪಾಕಿಸ್ತಾನಿ ರಾಜ್ಯದ ಅಖಂಡತೆಗೆ ಪ್ರಹಾರವನ್ನು ನೀಡಿದವು, ಪ್ರಸಂಚದ ಪತ್ರಿಕೆಗಳು ವರದಿ ಮಾಡಿದ ಪ್ರಕಾರ, ಪೂರ್ವ ಪಾಕಿಸ್ತಾನದಲ್ಲಿ ನೂರಾರು ಸಾವಿರ ಜನರನ್ನು ಕೊಲ್ಲಲಾಯಿತು ನಿರಿಯಗಟ್ಟಲೆ ಪರಿವಾರಗಳು ಮನೆ-ಸ್ವಸ್ಥಳಗಳನ್ನು ಬಿಟ್ಟು ಹೋಗಲಾಯಿತು ನಿರಾಶ್ರಿತರು–ಹತ್ತು ಮಿಲಿಯಗಿಂದ ಪೂರ್ವ ಪಾಕಿಸ್ತಾನಿ ಜನರು–ತಮ್ಮ ಜೀವಗಳನ್ನು ಉಳಿಸಿಕೊಂಡು, ಭಾರತದಲ್ಲಿ ಆಶ್ರಯವನ್ನು ಪಡೆದರು. ಈ ರೀತಿಯಾಗಿ ಈ ಸಂಘರ್ಷದಲ್ಲಿ ಭಾರತವನ್ನೂ ತೊಡಕಿಸಲಾಯಿತು.

ತನಗೆ ಇದೆಲ್ಲವೂ ಕಾಣುತ್ತಿಲ್ಲವೆಂದು ಪೆಕಿಂಗ್ ಆಡಳಿತವು ನಟಿಸಿತು ತಾನೇ ಹಿಂಸೆಯ ವಾತಾವರಣವನ್ನು ಮೂಡಿಸಿದ ಮೂವೋವಾದಿಧುರೀಣರು "ಸಾಂಸ್ಕೃತಿಕ ಕ್ರಾಂತಿಯ ಧ್ವಜದಡಿಯಲ್ಲಿ" ರಾಜಕೀಯ ಕ್ಷೋಭೆಯ ಕ್ರಾಂತಿ ನಡೆಸಿದಾಗ ಸೃಷ್ಟಿಸಿದ್ದರು. ಇಂತಹ ಮೂವೋವಾದಿ ಧುರೀಣರು ಏನು ತಾನೇ ಹೇಳಬಲ್ಲರು? ಸೇನೆಯ ಶಿಕ್ಷಕರ ನೇತೃತ್ವದಲ್ಲಿ 'ಕೆಂಪು ರಕ್ಷಕರ' ಗುಂಪುಗಳು ಪಾಕ್ ಕಾರ್ಯಕರ್ತರನ್ನು–ಕ್ರಾಂತಿಕಾರಿ ಸಂಘರ್ಷದ ದೀರ್ಘ ಪಥಾನುಸರಣೆ 'ಮಾಡಿಕೊಂಡು ಬಂದಿದ್ದ ಅನೇಕ ಮಂದಿ ಕಾರ್ಯಕರ್ತರನ್ನು–ನೈತಿಕವಾಗಿ ಅವನತಿಗೆ ಇಳಿಸಲಾಯಿತು ಮತ್ತು ಕಾಯಕವಾಗಿ ನಾಶಗೊಳಿಸಲಾಯಿತು. ಚೀನದ ಜನತೆಯ ಗಣರಾಜ್ಯದ ಸಂವಿಧಾನಕ್ಕೆ ಅನುಗುಣವಾಗಿ ಸ್ಥಾಪಿಸಲಾದ ಜನಾಧಿಕಾರ ಸಂಸ್ಥೆಗಳನ್ನೂ, ವೃತ್ತಿ ಸಂಘಗಳನ್ನೂ, ಮಹಿಳೆಯರ, ಯುವಜನರ ಮತ್ತು ಇನ್ನಿತರ ಸಂಘಟನೆಗಳನ್ನೂ ನಾಶಗೊಳಿಸಲಾಯಿತು. ಮೂವೋ ಅವರ ವಿಚಾರಗಳನ್ನು ದೃಢವಾಗಿ ಪ್ರತಿಪಾದಿಸಲು ಸೇನೆಯನ್ನು ಕಳಿಸಲಾಯಿತು. ಮೂವೋ ಸ್ವತಃ ಹೇಳಿದ ಪ್ರಕಾರ, ಮೊದಲು ಈಟಗಳ ಮೂಲಕವೂ, ಆ ಮೇಲೆ ಬಂದೂಕುಗಳ ಮೂಲಕವೂ, ಆ ತರುವಾಯ ಸಣ್ಣ 'ಮೋರ್ಟರ್' ಫಿರಂಗಿಗಳ ಮೂಲಕವೂ ಹೋರಾಟವನ್ನು ನಡೆಸಲಾಯಿತು.

ತಮ್ಮ ಜನತೆಯ ಹಿತಗಳನ್ನು ಕಾಲ್ತೆಳಗೆ ತುಳಿಯುತ್ತ,ಚೀನಿಧುರೀಣರು ಜಾಗತಿಕ ರಂಗದಲ್ಲಿ ತಮ್ಮ ರಾಜಕೀಯ ಪ್ರಯೋಜನಗಳನ್ನು ಸಾಧಿಸಿಕೊಳ್ಳುವುದರ ಸಲುವಾಗಿ, ಇತರ ಜನತೆಗಳಿಗೂ ಅಷ್ಟೇ ಸುಲಭವಾಗಿ ದ್ರೋಹ ಬಗೆಯುತ್ತಾರೆ,

ಮೂವೋ ಗುಂಪಿನ ಇಡೀ ಆಂತರಿಕ, ವಿದೇಶಾಂಗ ನೀತಿಯು ಆಧಿನಾಯಕತ್ವವಾದಿ ಪ್ರಯತ್ನಗಳ ಸಾಧನೆಗೆ ಅಧೀನವಾಗಿದೆ. ಇದಕ್ಕಾಗಿ ಪೆಕಿಂಗ್ ಧುರೀಣರು ಪ್ರತಿಯೊಂದು ರೀತಿಯಲ್ಲಿಯೂ 'ಸುತ್ತು ಗಟ್ಟಲಾದ ಕೋಟೆಯ' ವಾತಾವರಣವನ್ನು ಕೆರಳಿಸುತ್ತಾರೆ ಚೀನಜೊಳಿಗೆಡೆ ಪಟ್ಟಣಗಳಲ್ಲಿಯೂ, ವಸತಿ ಪ್ರದೇಶಗಳಲ್ಲಿಯೂ ಕಂದಕಗಳನ್ನೂ, ಬಾಂಬುದಾಳಿಯ ಸಮಯದ ಆಸರೆಗಳನ್ನೂ ಅಗೆಯಲಾಗುತ್ತಿದೆ. ಇದಕ್ಕಾಗಿ, ಉತ್ತರದಿಂದ ಗಂಡಾತರವುಂಟಾಗಿದೆಯೆಂಬ ಅಪಸಿಂದೆಯನ್ನು ಸ್ಪಷ್ಟವಾಗಿ ಮಾಡಲಾಗಿದೆ ಮತ್ತು ಅದನ್ನು ತೀವ್ರವಾಗಿ ಪ್ರಚಾರಗೊಳಿಸಲಾಗುತ್ತಿದೆ. ಪೃಥ್ವಿಯ ವೇರೆ ವೇರೆ ಮೂಲೆಗಳಲ್ಲಿ ಉದ್ರಿಕ್ತತೆಗಳನ್ನು ನಿರ್ಮಿಸುವುದರಲ್ಲಿಯೂ, ಅವುಗಳನ್ನು ಉಳಿಸಿಡುವುದರಲ್ಲಿಯೂ ಮೂವೋವಾದಿಗಳು ಬಹಿರಂಗವಾಗಿಯೇ ಆಸಕ್ತಿಯನ್ನು ಪ್ರದರ್ಶಿಸುತ್ತಿದ್ದಾರೆ.

ಸೇನೆಯಲ್ಲಿಯೂ ಪಾರ್ಟಿಯಲ್ಲಿಯೂ ಮುಖ್ಯ ಸ್ಥಾನಗಳನ್ನು ವಶಪಡಿಸಿಕೊಂಡಿದ್ದ ಸೈನಿಕ ಕ್ಷೇತ್ರದ ಗುಂಪಿನ ವಿರುದ್ಧವಾಗಿ ನಡೆದ ಮೂವೋ ಹೋರಾಟದಿಂದ ಉಂಟಾಗಿರುವ ಸುಪರಿಚಿತವಾದ ಬಿಕ್ಕಟ್ಟಿನ ತರುವಾಯ ಈಗಲೂ ಚೀನೀ ನಾಯಕತ್ವವು ಹಿಂದೂಸ್ತಾನದಲ್ಲಿ ಉದ್ರಿಕ್ತತೆಯನ್ನು ಹೆಚ್ಚಿಸುವುದರ ಮೇಲೆ ಪಣವೊಡ್ಡುತ್ತಿದೆ. ಇಡೀ ಜಗತ್ತಿನ ಪರಿಸ್ಥಿತಿಯನ್ನು ಉದ್ರಿಕ್ತಗೊಳಿಸುವುದಕ್ಕಾಗಿಯೂ, ತಮ್ಮ ಒಳಚಿತಿಕ್ಕಾಟಗಳ ಕಡೆಯಿಂದ ಬೇರೆ ಕಡೆಗೆ ಗಮನವನ್ನು ಸೆಳೆಯಲು ಸೋವಿಯೆತ್ ಒಕ್ಕೂಟದ ಮೇಲಿನ ದಾಳಿಗಳನ್ನು ತೀವ್ರಗೊಳಿಸುವುದಕ್ಕಾಯೂ, ಭಾರತೀಯ–ಪಾಕಿಸ್ತಾನಿ ಸಂಘರ್ಷವನ್ನು ಬಳಸಿಕೊಳ್ಳಲು ಚೀನೀ ಧುರೀಣರು ಪ್ರಯತ್ನಿಸುತ್ತಿದ್ದಾರೆ.

ಭಾರತೀಯ –ಪಾಕಿಸ್ತಾನಿ ಸಂಘರ್ಷದ ಕುರಿತು ಚೀನೀ ಧುರೀಣರು ವಹಿಸುತ್ತಿರುವ ಉದ್ರೇಕಕಾರಿಯೊದ, ಚಿತಾವಣೆಯ ನಿಲುವು. ಪೆಕಿಂಗ್ ಆಡಳಿತದ ಸಾಧಾರಣ ಆಂತರಿಕ, ವಿದೇಶೀ ನೀತಿಗಳೊಂದಿಗೆ ನಿಕಟವಾಗಿ ಪರಸ್ಪರ ಸಂಬಂಧವನ್ನು ಪಡೆದಿದೆ.

ಸೋವಿಯೆತ್ ಒಕ್ಕೂಟದ ನಿಲುವಿನ ಕುರಿತು ಹೇಳುವುದಾದರೆ, ಅದು ಅತ್ಯಂತ ಸ್ಪಷ್ಟವಾಗಿದೆ. ಇತರ ಶಾಂತಿಪ್ರಿಯ ಶಕ್ತಿಗಳೊಟ್ಟಿಗೆ ಸೋವಿಯೆತ್ ಒಕ್ಕೂಟವು, ಪೂರ್ವ ಪಾಕಿಸ್ತಾನದಲ್ಲಿ ನ್ಯಾಯಸಮ್ಮತವಾದ ರಾಜಕೀಯ ಇತ್ಯರ್ಥ ಸಾಧಿಸುವುದರ ಪರವಾಗಿ ನಿಲ್ಲುತ್ತದೆ. ಈ ಮೂರ್ಗವು ಮೂತ್ರವೇ ಭಾರತೀಯ ಉಪಖಂಡದಲ್ಲಿ ಸುಸ್ಥಿರ ಶಾಂತಿಯನ್ನು ಪುನಃ ಸ್ಥಾಪಿಸುವ ಭರವಸೆಯನ್ನು ನೀಡುತ್ತದೆ. ಈ ಮೂರ್ಗವು ಮೂತ್ರವೇ ಎಲ್ಲಿನ ಜನತೆಗಳ ಮುಖ್ಯ ಹಿತಗಳಿಗೆ ಅನುಗುಣವಾಗಿರುತ್ತದೆ.

Gram : VISHWA Tel: 28111 & 28112

When at Bangalore

Stay at

HOTEL NATARAJA

Restaurant, Boarding & Lodging.

107 Police Road, City Market,

BANGALORE-2

Centrally situated, delicious food,

Comfortable rooms, Courteous service.

Attached bath rooms with running hot and cold water.

Telephone attached rooms.

ಮಿತ ಕುಟುಂಬ ಯೋಜನೆಗೆ ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 1-75 ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ

(ನವಯುಗ ಪ್ರೆಸ್) ಉಡುಪಿ, ದ.ಕ

ಬಂಗ್ಲಾ ವಿಮೋಚನೆ ಸಾಧಿಸಿದ

ಸಮರಶಿಲ್ಪಿ ರತ್ನತ್ರಯರು

ಬಂಗ್ಲಾ ವಿಜಯವನ್ನು ಹದಿನಾಲ್ಕೇ ದಿನಗಳಲ್ಲಿ ಸಾಧಿಸಿ ಪಾಶ್ಚಾತ್ಯ ದೇಶಗಳ ಪ್ರಭಾವದಿಂದ ಏಶ್ಯಾ ಬದುಕುಳಿದಿದೆಯೆಂಬ ನಂಬುಗೆಯನ್ನು ಭಾರತೀಯ ಸೇನೆಗಳು ಸುಳ್ಳುಮಾಡಿ, ದೇಶಕ್ಕೂ ವಿಶ್ವಾಮಿತ್ರಕ್ಕೂ ಗೌರವತಂದವು.

ನಮ್ಮ ನೆಲ ಜಲ ಮತ್ತು ವಾಯು ಪಡೆಗಳ ದಂಡನಾಯಕರು ಬಂಧಾಗಿ ಒಮ್ಮುಖದ ಕಾರ್ಯಕ್ರಮ ರೂಪಿಸಿದ್ದರಿಂದ ಲೇ ಇದು ಸಾಧ್ಯವಾಯ್ತು. ನಮ್ಮ ನೆಲ ಮತ್ತು ವಾಯು ಪಡೆಗಳು ಈ ಮೊದಲೂ ಹಲವು ಬಾರಿ ಕಾರ್ಯಾಚರಣೆಯಲ್ಲಿ ಕೊಡಗಿ ಯಶಗಳಿಸಿದ ಐತಿಹ್ಯಗಳಿವೆ ಆದರೆ, ಸ್ವಕೃತದ ಪ್ರಸಂಗಕ್ಕೆ ಮೊದಲು ಭಾರತೀಯ ನೌಕಪಡೆಗೆ ತನ್ನ ಕೃತು ಅವಕಾಶ ಶಕ್ತಿಯನ್ನು ಪ್ರದರ್ಶಿಸುವ ಲಭ್ಯವಾಗಲಿಲ್ಲ.

ಯೂಹ್ಯಾಖಾನರು ತಾನು ಬಂಗ್ಲಾದೇಶವನ್ನು ಕಳೆದುಕೊಂಡದನ್ನು ವಿಶಾಲ ಜಗತ್ತಿನ ಮುಂದೆ ಒಪ್ಪಿಕೊಳ್ಳದೆ ಹೋದರೂ ಅದನ್ನು ಲೋಕ ಅರಿತುಕೊಳ್ಳದಷ್ಟು ಪಡ್ಡವಾಗಲಾರದು. ಜತೆಗೆ ಭಾರತೀಯ ಸೇನೆಯ ಸುಸಂಘಟನೆ, ಸಮರ್ಥತೆ ಮತ್ತು ಏಕಮುಖತೆಗಳ ಪರಿಚಯವನ್ನೂ ಅದು ಮಾಡಿಕೊಳ್ಳುತ್ತದೆ.

ಭಾರತಮಾತೆಯ ರತ್ನತ್ರಯರು ಮುಪ್ಪರಿಗೊಂಡು ಏಕೋದ್ದೇಶ ಸಾಧನೆಯಲ್ಲಿ ನಿರತರಾಗಿ ಸಫಲರಾದದ್ದು ಮಹತ್ವ ಪೂರ್ಣವಾದದ್ದು. ಇದಕ್ಕೂ ಹೆಚ್ಚಿನದ್ದು, ಅವರು ದೇಶದ ನೀತಿಯನ್ನು ಮಿಲಿಟರಿ ಆವೇಶದಲ್ಲಿ ಮರೆಯದೆ. ಇದನ್ನು ಸಂಪೂರ್ಣವಾಗಿ ಪರಿಪಾಲಿಸಿಕೊಂಡು ಬಂದದ್ದು. ಸುಗ್ರೀವನಿಗೆ ಸಹಾಯ ಮಾಡಿದ ರಾಮನೇ ವಾಲಿಯನ್ನು ಸಂಹರಿಸಿದನಲ್ಲವೇ?

ಮಾಣಿಕ್ ಷಾ

ಭಾರತದ ಭೂಸೇನೆಯ ಮಹಾದಂಡನಾಯಕರು ಜ| ಮಾಣಿಕ್ ಷಾ ಅವರು. ಹೆಸರಿಗೆ ತಕ್ಕಂತೆ ಅವರು ಭಾರತದ ಇತಿಹಾಸಕ್ಕೊಂದು ಮಾಣಿಕ್ಯವನ್ನು ಕೊರಿಸಿದರು. ೧೯೧೪ರಲ್ಲಿ ಅಮೃತಸರದಲ್ಲಿ ಜನ್ಮ ತಾಳಿದ ಈ ಭಾರತದ ವೀರಪುತ್ರ ಸೈನಿತಾಲ್ ಮತ್ತು ಅಮೃತಸರಗಳಲ್ಲಿ ಶಿಕ್ಷಣ ಹೊಂದಿದರು. ೧೯೩೪ರಲ್ಲಿ ಅಂದರೆ, ತನ್ನ ಇಪ್ಪತ್ತನೆಯ ವಯಸ್ಸಿನಲ್ಲೇ ಅವರು ಸೇನೆಯಲ್ಲಿ ಸೇರಿಕೊಂಡರು. ಅಂದಿನಿಂದ ಸೇನೆಯ ನಾನಾ ಸ್ಥಾನಗಳಲ್ಲಿ ದೇಶಕ್ಕೆ ಅಮೂಲ್ಯ ಸೇವೆ ಸಲ್ಲಿಸುತ್ತ ಬಂದ ಶ್ರೀಷಾ ೧೯೬೯ರ ಜೂನ್ ತಿಂಗಳಲ್ಲಿ ಭಾರತೀಯ ಸೇನೆಯ ಮಹಾದಂಡನಾಯಕ ಹುದ್ದೆಗೇರಿದರು.

ದ್ವಿತೀಯ ಲೋಕ ಸಂಗ್ರಾಮ ಕಾಲದಲ್ಲಿ ಬ್ರಹ್ಮದೇಶದಲ್ಲಿ ಅಪ್ರತಿಮ ಸಾಹಸವನ್ನೂ ಸ್ಥೈರ್ಯವನ್ನೂ ತೋರಿಸಿ 'ಮಿಲಿಟರಿ ಕ್ರಾಸ್' ಇವರು ಪಡೆದಿದ್ದರು. ಸುಮಾರು ಹತ್ತು ಸಾವಿರ ಮಂದಿ ಯುದ್ಧ ಕೈದಿಗಳನ್ನು ಪುನರ್ನೆಲಸುವಂತೆ ಮಾಡುವಲ್ಲಿ ಶ್ರೀಷಾ ನಮ್ಮ ಸಂಪೂರ್ಣ ನೆರವನ್ನು ನೀಡಿದ್ದರು. ೧೯೪೬ರಲ್ಲಿ ಆರು ತಿಂಗಳುಗಳ ಕಾಲ ಬ್ರೋಧನಾ ಪ್ರವಾಸವನ್ನೂ ಕೈಕೊಂಡಿದ್ದರು.

ಕಾಶ್ಮೀರ ವಿಷಯಕ ಚರ್ಚೆಯಲ್ಲಿ ಶ್ರೀ ಬಿ. ಎನ್. ರಾಯರು ವಿಶ್ವಸಂಸ್ಥೆಗೆ ಹೋದಾಗ ಸೇನಾ ಸೆಲಹೆಗಾರರಾಗಿ ಜ| ತಿಮ್ಮಯ್ಯನವರು ಅಲ್ಲಿಗೆ ತೆರಳಿದ್ದರು. ಈ ನೆಳೆ ಶ್ರೀ ಷಾ ಕೂಡಾ ಅವರೊಡನಿದ್ದರು. ಜಮ್ಮು ಮತ್ತು ಕಾಶ್ಮೀರದ ಮೇಲೆ ಪಾಕಿಸ್ತಾನವು ಆಕ್ರಮಣ ಮಾಡಿದಾಗ, ಪ್ರತಿ ಕಾರ್ಯಾಚರಣೆಯಲ್ಲಿಯೂ ಶ್ರೀ ಷಾ ಮಹತ್ವದ ಪಾತ್ರ ವಹಿಸಿದ ಧೀಮಂತ ವ್ಯಕ್ತಿ.

ನೆಲ—ಜಲ—ವಾಯು ಸೇನೆಗಳನ್ನು ಏಕ ಮುಖವಾಗಿ, ಕಲಕತ್ತೆಯಲ್ಲಿದ್ದು ಕೊಂಡು ನಡೆಸಿ; ಬಂಗ್ಲಾ ವಿಮೋಚನಾ ರಂಗದ ನಾಯಕ ಜ| ಮೋಣಿಕ್ ಷಾ ಸ್ವಯಂ ಸ್ವಕಾಶಿತ ದಂಡನಾಯಕರು.

ಎಸ್. ಎಂ. ನಂದಾ

ಜ| ಷಾರಿಗೆ ಪ್ರಾಯದಲ್ಲಿ ಒಂದು ವರ್ಷ ಕಿರಿಯರಾದ ಅಡ್ಮಿರಲ್ ನಂದಾ ೧೯೬೦ರಲ್ಲಿ ಭಾರತೀಯ ನೌಕಾದಳದ ಮುಖ್ಯ ದಂಡನಾಯಕ ಪದವಿಯನ್ನು ಸ್ವೀಕರಿಸಿದರು. ೧೯೪೧ರಲ್ಲಿ–ದ್ವಿತೀಯ ಲೋಕ ಸಮರದ ಜ್ವಾಲೆಗಳು ಹರಡುತ್ತಿರುವಾಗ. ಶ್ರೀ ನಂದಾ "ಇಂಡಿಯನ್ ನೇವಲ್ ವಾಲಂಟಿಯರ್ ರಿಜರ್ವ್"ಗೆ ಸೇರಿದರು. ಇದಕ್ಕೆ ಮೊದಲವರು ಕರಾಚಿಯಲ್ಲಿ ಪೋರ್ಟ್ ಟ್ರಸ್ಟಿನಲ್ಲಿದ್ದರು.

ಸ್ವಾತಂತ್ರ್ಯಾನಂತರ ಶ್ರೀ ನಂದಾ ನೌಕಾದಳದ ಹಲವು ಸ್ಥಾನಗಳಿಗೇರುತ್ತಬಂದು ಮಹಾದಂಡನಾಯಕರೂ ಆದರು. ಪ್ರತಿ ರಂಗದಲ್ಲೂ ಬಹಳಷ್ಟು ಅನುಭವ ಪಡೆದಿರುವ ಶ್ರೀ ನಂದಾ ೧೯೬೧ರಲ್ಲಿ ಅತಿ ವಿಶಿಷ್ಟ ಸೇವಾ ಪದಕವನ್ನೂ ೧೯೬೫ರಲ್ಲಿ ಪರಮ ವಿಶಿಷ್ಟ ಸೇವಾ ಪದಕವನ್ನೂ ಸಂಪಾದಿಸಿಕೊಂಡವರು.

ಲಂಡನ್ನಿನಲ್ಲಿ ಇಂಪೀರಿಯಲ್ ರಕ್ಷಣಾ ಕಾಲೇಜಿನಲ್ಲಿ ತರಬೇತಿ ಹೊಂದಿರುವ ಶ್ರೀ ನಂದಾರು ಭಾರತದ ನೌಕಾದಳದ ಮೊದಲನೆಯ ಕ್ರೂಸಿಯರ್ ಐ. ಎನ್. ಎನ್. ದೆಹಲಿಯಲ್ಲಿ ಮೊದಲನೆಯ ಲೆಫ್ಟಿನೆಂಟ್ ಆಗಿ ಸೆವೆ ಸಲ್ಲಿಸಿದರು ೧೯೫೫–೫೭ರ ಅವಧಿಯಲ್ಲಿ ಭಾರತದ ನೌಕಾ ಕೇಂದ್ರ ಕಚೇರಿಯಲ್ಲಿ ವಿಭಾಗಾಧಿಕಾರಿಯಾಗಿದ್ದರು. ೧೯೬೦ರಲ್ಲಿ ರೇರ್ ಅಡ್ಮಿರಲ್ ದರ್ಜೆಗೇರಿದ ಶ್ರೀ ನಂದಾ ಮುಂಬಯಿಯ ಮಜಗಾಂವ್ ಬಂದರು ಕಟ್ಟೆಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ನೇಮಕ ಹೊಂದಿದರು. ಶ್ರೀ ನಂದಾರು ಅಲ್ಲಿ ಹಲವು ಸುಧಾರಣೆಗಳನ್ನು ಕಾರ್ಯರೂಪಕ್ಕೆ ತಂದು ಕೀರ್ತಿಗಳಿಸಿದರು.

ಭಾರತೀಯ ನೌಕಾ ಸೇನೆಗೆ ಒದಗಿದ ಪ್ರಥಮೂವಕಾಶದಲ್ಲೇ ಅದು ಪ್ರಪಂಚದ ಉತ್ತಮ ನೌಕಾಸೇನೆಗಳಲ್ಲಿ ಒಂದು ಎಂಬುದನ್ನು ಅಡ್ಮಿರಲ್ ನಂದಾ ಜಗತ್ತಿಗೆ ತೋರಿಸಿ ಕೊಟ್ಟಿದ್ದಾರೆ. ಕಾರ್ಯಸಾಧನೆಯಲ್ಲಿ ಸಹಕಾರ ಮತ್ತು ದೇಶದ ನೀತಿಗಳನ್ನು ಇವರು ಎತ್ತಿ ಹಿಡಿದಿದ್ದಾರೆ.

ಪಿ. ಸಿ. ಲಾಲ್

ಅಡ್ಮಿರಲ್ ನಂದಾರಿಗೆ ಒಂದು ವರ್ಷ ಕಿರಿಯರಾದ ಏರ್ ಮಾರ್ಷಲ್ ಪಿ. ಸಿ. ಲಾಲ್ ಜನಿಸಿದ್ದು ೧೯೧೬ರಲ್ಲಿ, ಲುಧಿಯೊನಾದಲ್ಲಿ. ಇವರು ಭಾರತೀಯ ವಾಯುದಳದ ಮಹಾದಂಡನಾಯಕರಾಗಿ ಅಧಿಕಾರ ವಹಿಸಿದ್ದು ೧೯೬೫ರ ಮಧ್ಯಾವಧಿಯಲ್ಲಿ ಶ್ರೀ ಲಾಲರ ವಿದ್ಯಾಭ್ಯಾಸ ನಡೆದದ್ದು ಮೊದಲು ದೆಹಲಿಯಲ್ಲಿ; ಅನಂತರ ಲಂಡನ್ನಿನ ಕಿಂಗ್ಸ್ ಕಾಲೇಜಿನಲ್ಲಿ ಪದವಿ ಪಡೆದ ಬಳಿಕ ಅವರು ತೊಡಗಿದ್ದು ವಕೀಲಿ ವೃತ್ತಿ ತರಬೇತಿಗೆ. ಆ ವೇಳೆ ದ್ವಿತೀಯ ಲೋಕ ಸಂಗ್ರಾಮದ ಕಾಲ ಭಾಯೆ ಹರಡಿದ್ದರಿಂದ ಅವರ ಅಭ್ಯಾಸಕ್ಕೆ ತೊಡರೆಯೊಯ್ತು.

೧೯೩೮ರಲ್ಲೇನಿಮೋನ ಜಾಲಕತನವನ್ನು ಅರೆಕೋ ಶ್ರೀಲಾಲ್ ಕಲಿತು ಕೊಂಡಿದ್ದರು. ಲೋಕ ಸಂಗ್ರಾಮವು ಒದಿಂತೋ ಅವರನ್ನು ತನ್ನೆಡೆಗೆ ಕರೆಯಿತು. ಶ್ರೀಲಾಲ್ ೧೯೩೯ರಲ್ಲೇ ಅಂದಿನ ಬ್ರಿಟಿಷ್ ಭಾರತದ ವೈಮಾನಿಕ ಪಡೆಯಲ್ಲಿ ಸೇರಿಕೊಂಡರು. ಅಂದಿನಿಂದ ಅವರು ತನ್ನ ದಳದ ವಿವಿಧ ಹುದ್ದೆಗಳಿಗೇರಿದರು. ಅನೇಕ ಪ್ರಮುಖ ಸ್ಥಾನಗಳಲ್ಲಿದ್ದು ದೇಶಕ್ಕೆ ಮರೆಯಲಾಗದ ಸೇವೆ ಸಲ್ಲಿಸಿದರು.

ಭಾರತೀಯ ವಿಮಾನ ಪೂರ್ಗ ಮಹಾ ಮಂಡಳಿಯ ಜನರಲ್ ಮೆನೇಜರಾಗಿದ್ದು ಶ್ರೀ ಲಾಲ್ ಅದರ ಇತಿಹಾಸವನ್ನು ಹೊಸತಾಗಿ ಬರೆದರು. ಅದಾದರೆಗೆ ಪ್ರತಿವರ್ಷವೂ ಸಭ್ಯದಲ್ಲಿ ನಡೆಯುತ್ತಿದ್ದ ಮಹಾ ಮಂಡಳಿ ಆ ಬಳಿಕ ಲಾಭ ತೋರಿಸಲಾರಂಭಿಸಿತು!

ಒಂದು ವೇಳೆ ಶ್ರೀಲಾಲ್ ತನ್ನ ವಕೀಲಿ ಅಭ್ಯಾಸವನ್ನೇ ಮುಂದುವರಿಸಿದ್ದಿದ್ದರೆ ಅವರು ಸಮರ್ಥ ವಕೀಲರಾಗುತ್ತಿದ್ದರೋ ಏನೋ; ಹಾಗಾಗಿದ್ದರೆ ತನ್ನ ಕೆಲವೇ ಕಕ್ಷಿಗಾರರಲ್ಲಿ ಮಾತ್ರ ಅವರು ಪ್ರೀಯರಾಗುತಿದ್ದರು.ಆದರೆ. ಅವರು ಭಾರತೀಯ ವೈಮಾನಿಕ ದಳವನ್ನು ಸೇರಿದ್ದರಿಂದ ಲೋಕ ವಿಖ್ಯಾತರಾದರು. ಜೀವನದ ಒಂದೊಂದು ಘಟನೆಯೂ ಇತಿಹಾಸ ಬರೆಯುತ್ತದೆಂಬುದು ಇವರ ಮಟ್ಟಿಗೆ ನೂರಕ್ಕೆ ನೂರರಷ್ಟು ಸತ್ಯವಾಯ್ತು.

ಭಾರತದ ರಾಕೆಟ್ ವಿಜ್ಞಾನ ಬೆಳೆದು ಬರುತ್ತಿದೆ

(ಬಳಿನೇ ಪುಟದಿಂದ)

ತರಿಕ್ಷ ಶೋಧದ ಕಾರ್ಯದಲ್ಲಿ ನಾವು ಹೆಚ್ಚಿನ ಪ್ರಗತಿ ಸಾಧಿಸಿದಂತಾಗುತ್ತದೆ' ಎಂದರವರು.

ತುಂಬಾದ ವಿಜ್ಞಾನಿಗಳು ಮತ್ತು ಎಂಜಿನಿಯರುಗಳು ಈಗ ಮದರಾಸಿಗೆ 60 ಮೈಲಿಉತ್ತರಕ್ಕೆ ಪೂರ್ವ ತೀರದಲ್ಲಿರುವ ಶ್ರೀಹರಿಕೋಟೆ [ಷಾರ್] ದ್ವೀಪದಲ್ಲಿ ಹೊಸ ಉಪಗ್ರಹ ಉಡಾವಣೆ ನೆಲೆಯೊಂದನ್ನು ಸ್ಥಾಪಿಸಲು ಕೆಲಸ ಆರಂಭಿಸಿವ್ವಾರೆ ಬಹು ಹಂತಗಳ ರಾಕೆಟ್‌ಗಳನ್ನು ಬಳಸಿ ವೈಜ್ಞಾನಿಕ ಉಪಗ್ರಹಗಳನ್ನು ಉಡಾಯಿಸಲು ಸೂಕ್ತವಾದ ವೇದಿಕೆ ಒದಗಿಸುವುದೇ 'ಷಾರ್' ಯೋಜನೆಯ ಉದ್ದೇಶ "ಫ್ರಸ್ಟ್ ವೆಪಕ್ಟರ್ ಕಂಟ್ರೋಲ್"ಪ್ರಯೋಗವೊಂದಾಗಿ ರೋಹಿಣಿ 1.5 ಎಂ ಎಂ ರಾಕೆಟ್ ಒಂದನ್ನು ಹಾರಿಸಿ ಪರೀಕ್ಷಿಸುವುದರೊಂದಿಗೆ ಈ ವರ್ಷ ಆಕ್ಟೋಬರಿನಲ್ಲಿ ಈ ನೇದಿಕೆಯನ್ನು ಉದ್ಘಾಟಿಸಲಾಗುತ್ತದೆ. 1973ರ ವೇಳೆಗೆ 'ಷಾರ್' ಪೂರ್ಣ ಪ್ರಮಾಣದ ಉಪಗ್ರಹ ಉಡಾವಣೆ ಕೆಲಸಗಳಿಗೆ ಸಜ್ಜಾಗುವುದೆಂದು ನಿರೀಕ್ಷಿಸಲಾಗಿದೆ.

ಒಮ್ಮೆ ಪ್ರಶಾಂತ, ಗಂಭೀರ ಬೆಸ್ತರ ಗ್ರಾಮವಾಗಿದ್ದ ತುಂಬಾ ಈಗ ಭಾರತೀಯ ರಾಕೆಟ್ ವಿಜ್ಞಾನ ಚಟುವಟಿಕೆಯ ಕೇಂದ್ರವಾಗಿದೆ. ದೋಷರಹಿತ ಕಾರ್ಯನಿರ್ವಹಣೆಗೆ ದಾಖಲೆಯನ್ನು ಸ್ಥಾಪಿಸಿರುವ ಈ ಕೇಂದ್ರ ಶಾಂತಿಯುತ ಉದ್ದೇಶಗಳಿಗಾಗಿ ಅಂತಾರಾಷ್ಟ್ರೀಯ ಅಂತರಿಕ್ಷ ಸಂಶೋಧನೆಯಲ್ಲಿ ಭಾರತಕ್ಕೆ ಮುಂದಿನ ಸಾಲಿನ ಸ್ಥಾನ ಜೊರೆಯುವಂತೆ ಮಾಡಿದೆ.

●●

ಸಂದರ್ಶಿಸಿರಿ — ಸಂತೃಪ್ತರಾಗಿರಿ!!

ಬ್ಲೂಜಾಗರಾ ವಜ್ರಗಳಿಗೆ ಆಧುನಿಕ ಫೇಶನಿನ ಚಿನ್ನಾಭರಣಗಳಿಗೆ ಹೆಸರಾಂತ

ಎಸ್. ಎಲ್. ಶೇಟ್ ಡೈಮಂಡ್ ಹೌಸ್

ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ

ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್

=ಎಲ್ಲಾ ತರದ ಫೋಟೋಗ್ರಾಫಿಕ್ ವಸ್ತುಗಳಿಗೆ=

ಐಡಿಯಲ್ ಫೋಟೋ ಹೌಸ್ PHONE: 3131

ಅಗ್ಫಾ ಕೊಡಕ್, ಇಲ್‌ಫೋರ್ಡ್ ಗೆವರ್ಟ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.

ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು-1

Tele: GOLDKING Estd: 1947 Phone: 3242 Res: 3272

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರತಿದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ಅಡಿಕೆ ಬೋರ್ಡು ರಚನೆ ವೀರೇಂದ್ರ ಹೆಗ್ಗಡೆಯವರ ಸೂಚನೆ

ದ. ಕ. ಮತ್ತು ಕೊಡಗು ಅಡಿಕೆ ಪ್ಲಾಂಟರುಗಳ ಸಂಘದ ಆಶ್ರಯದಲ್ಲಿ ವಿಟ್ಲದಲ್ಲಿನ ವಿಟ್ಲ ಅಡಿಕೆ ಪರಿಶೋಧನಾ ಕೇಂದ್ರದಲ್ಲಿ ತಾ. 11ರಂದು ನಡೆದ ಮೈಸೂರು ರಾಜ್ಯ ನುತ್ತು ಕಾಸರಗೋಡು ತಾಲೂಕು ಅಡಿಕೆ ಕೃಷಿಗಳ ಸಮ್ಮೇಳನವನ್ನು ಮಂಗಳೂರಿನ ಕೆನರಾ ಚೇಂಬರ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರೀಸ್‌ನ ಕಾರ್ಯದರ್ಶಿ ಶ್ರೀ ಬಿ. ಅಂ ಕಾಮತರ ಅಧ್ಯಕ್ಷತೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಿದರು.

ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಕೆ. ವೆಂಕಪ್ಪಯ್ಯನವರು ಆತಿಥಿಗಳ ಪರಿಚಯ ಮಾಡಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ವಾರಣಾಸಿ ಸುಬ್ರಾಯ ಭಟ್ಟರು ಸ್ವಾಗತಿಸಿದರು. ಅಡಿಕೆಯ ಉತ್ಪಾದನೆಯು ಹೆಚ್ಚು ಹೆಚ್ಚಾದಂತೆ ಬೇಡಿಕೆಯೂ ಹೆಚ್ಚಾಗುವಂತೆ ಅಡಿಕೆಯನ್ನು ಬೇರೆ ಬೇರೆ ಉಪಯೋಗಗಳಿಗೆ ಬಳಸಲ್ಪಡುವಂತೆ ಪ್ರಯತ್ನ, ಸಂಶೋಧನೆ ಮತ್ತು ಕಾರ್ಯ ಪ್ರವೃತ್ತಿ ಮೊದಲಾದ ವಿಚಾರವಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲು ಈ ಸಮ್ಮೇಳನವನ್ನು ಕರೆಯಲಾಗಿದೆಯೆಂದವರು ತಿಳಿಸಿದರು.

ಶ್ರೀ ವೀರೇಂದ್ರ ಹೆಗ್ಗಡೆಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಅಡಿಕೆ ವ್ಯವಸಾಯಗಾರರು ಇತ್ತೀಚಿಗಿನ ದಿನಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಿ ಅಡಿಕೆ 'ಬೋರ್ಡ್' ರಚಿಸುವುದರಿಂದ ನಲವು ತೊಂದರೆಗಳನ್ನು ಹೋಗಲಾಡಿಸಬಹುದು. ಇದರಿಂದಾಗಿ ಅಡಿಕೆ ಅಂತರ್ರಾಷ್ಟ್ರೀಯ ಮಾರುಕಟ್ಟೆಯನ್ನೂ ಗಳಿಸಲು ಸಾಧ್ಯವಾಗಬಹುದು ಎಂದರು. ಅಡಿಕೆ ವ್ಯವಸಾಯದವರು ಬೇರೆ ಕೃಷಿಗಳಿಗೆ ಮಹತ್ವವನ್ನು ಕೊಡುವ ನುತ್ತು ಅಡಿಕೆ ಸಿಪ್ಪೆಯಿಂದ ಕಾಗದ ತಯಾರಿಸುವದೇ ಮೊದಲಾದುವುಗಳ ಕುರಿತು ಪರಿಶೀಲಿಸುವುದು ಉಚಿತ ಎಂದು ಸಲಹೆಯಿತ್ತರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ. ಅರ್. ಕಾಮತರು ತಮ್ಮ ಭಾಷಣದಲ್ಲಿ ಅಡಿಕೆ ಕೃಷಿಕರ ಇಂದಿನ ಪರಿಸ್ಥಿತಿಯ ಮುಖ್ಯ ಕಾರಣಗಳನ್ನು ನಿವಾರಿಸಿ ಈ ಸಮ್ಮೇಳನದ ಪೂರ್ಣ ಉಪಯೋಗ ಪಡೆದು ಮುಂದಿರುವ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಕಂಡು ಹುಡುಕುವಂತೆ ಸಲಹೆ ಇತ್ತರು.

ಕಾಸರಗೋಡಿನ ಸೆಂಟ್ರಲ್ ಪ್ಲಾಂಟೇಶನ್ ಬೆಳೆಗಳ ಪರಿಶೋಧನಾ ಸಂಸ್ಥೆಯ ಡೈರೆಕ್ಟರ್ ಶ್ರೀ ಕೆ. ವಿ. ಅಮ್ಮೆ ಜಾಪ್ಪನವರು ನೂತನವಾಗಿ ವಿಟ್ಲದಲ್ಲಿ ಸ್ಥಾಪಿಸಲಿರುವ ಅಡಿಕೆ ಪರಿಶೋಧನಾ ಕೇಂದ್ರದ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಅಡಿಕೆ ಕೃಷಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಈ ಕೇಂದ್ರವು ಸಹಾಯಕವಾಗಲಿದೆಯೆಂದು ಅವರು ಹೇಳಿದರು.

ಅಡಿಕೆ ಕೃಷಿಕರ ಸಮಸ್ಯೆಗಳ ಕುರಿತು ಸವಿಸ್ತಾರ ಚರ್ಚೆ ನಡೆದು ಕಲವು ಮಹತ್ವದ ಹಾಗೂ ಉಪಯುಕ್ತ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಕೊನೆಯಲ್ಲಿ ದ. ಕ. ಜಿಲ್ಲೆ ಮತ್ತು ಕೊಡಗು ಅಡಿಕೆ ತೋಟಿಗಾರರ ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಎ. ಪಿ. ಗೌರೀಶಂಕರರು ಧನ್ಯವಾದ ಸಮರ್ಪಣೆ ಮಾಡಿದರು.

ನ್ಯಾಯಾಂಗ ರಕ್ಷಣೆಯಿಂದ ನಾಗರಿಕ ಸ್ವಾತಂತ್ರ್ಯ ಸುರಕ್ಷಿತ—ಕೆ.ಎಸ್.ಹೆಗ್ಡೆ.

ಕಳೆದ ತಾ. 15ರಂದು ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಭಾಭವನದಲ್ಲಿ ಭಾರತೀಯ ವಿದ್ಯಾಭವನದ ಆಶ್ರಯದಲ್ಲಿ ಜರಗಿದ ಸಮಾರಂಭದಲ್ಲಿ ಭಾರತದ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶ ಶ್ರೀ ಕೆ. ಸದಾನಂದ ಹೆಗ್ಡೆಯವರು "ಸಂವಿಧಾನ ಹಾಗೂ ವರಿಷ್ಠ ನ್ಯಾಯಾಲಯ" ದ ಕುರಿತು ಮಾತಾಡಿದರು. ಭವನದ ಮಂಗಳೂರು ಕೇಂದ್ರದ ಕಾರ್ಯಕಾರಿ ಸದಸ್ಯ ಎಡ್ವೊಕೇಟ್ ಶ್ರೀ ಬಿ. ಗಂಗಾಧರ್ ದಾಸರು ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಕೇಂದ್ರದ ಅಧ್ಯಕ್ಷ ಎಂ. ಪಿ. ಪೈಯವರು ಸ್ವಾಗತಿಸಿದರು.

ಶ್ರೀ ಹೆಗ್ಡೆಯವರು ಮಾತಾಡುತ್ತಾ, ನ್ಯಾಯಾಂಗದ ಸ್ವಾತಂತ್ರ್ಯ ರಕ್ಷಣೆಯಿಂದ ನಮ್ಮ ದೇಶದಂತಹ ಪ್ರಜಾ ಸತ್ತಾತ್ಮಕ ದೇಶದ ನಾಗರಿಕರ ಸ್ವಾತಂತ್ರ್ಯ ಹಾಗೂ ನೈಯಕ್ತಿಕ ಹಕ್ಕುಗಳನ್ನು ರಕ್ಷಿಸಬೇಕಾಗುವದರಿಂದ ಈ ಬಗ್ಗೆ ದೇಶದ ಸುಶಿಕ್ಷಿತರು ಸಾರ್ವಜನಿಕ ಅಭಿಪ್ರಾಯವನ್ನು ಸಂಘಟಿಸಬೇಕು. ನಾಗರಿಕರ ಮೂಲಭೂತ ಹಕ್ಕು ಹಾಗೂ ವ್ಯಕ್ತಿ ಸ್ವಾತಂತ್ರ್ಯಗಳನ್ನು ರಕ್ಷಿಸುವ ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗಗಳಿಗೆ ಮಧ್ಯವರ್ತಿಯಾಗಿರುವ ಮತ್ತು ಶಾಸನಾತ ಆಶ್ವಿಕೆಯನ್ನು ಸಂರಕ್ಷಿಸುವ ಮುಖ್ಯ ಉದ್ದೇಶದೊಡನೆ ದೇಶದ ವರಿಷ್ಠ ನ್ಯಾಯಾಲಯವನ್ನು ರೂಪಿಸಲಾಗಿದೆ ಎಂದರು. ನ್ಯಾಯಾಂಗದ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ಈ ಹಂತದಲ್ಲಿ ಕಾರ್ಯಾಂಗಕ್ಕೆ ಅನುಮತಿ ನೀಡಿದರೆ ಶಾಸಕಾಂಗದನ್ನು ಅಮ ಹತ್ತಿಕ್ಕುಸ ದಿನ ದೂರವಿಲ್ಲ ಎಂದವರು ಎಚ್ಚರಿಸಿದರು.

ಅಂತ್ಯದಲ್ಲಿ ಡಾ। ಕೆ. ಸುಧಾಕರ ಶೆಟ್ಟರು ಧನ್ಯವಾದ ಅರ್ಪಿಸಿದರು.

ಬಿ. ವಿಟ್ಲ ಹೆಗ್ಡೆಯವರ ಅವಿರೋಧ ಆಯ್ಕೆ

ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಳಿಯ ಉತ್ಸಾಹೀ ಸದಸ್ಯರೂ ಚತುರ ಕಾರ್ಯಕರ್ತರೂ ಆದ ಶ್ರೀ ಜೀಳಂಜೆ ವಿಟ್ಲ ಹೆಗ್ಡೆಯವರು ತಾ. 7—12—71ರಂದು ಚುನಾವಣಾಧಿಕಾರಿ ಕುಂದಾಪುರ ಅಸಿಸ್ಟಂಟ್ ಕಮಿಷನರ್ ಶ್ರೀ ಟಿ. ಜಿ. ಬಂಗೇರರ ನೇತೃತ್ವದಲ್ಲಿ ಜರಗಿದ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಲ್ಪಟ್ಟಿದ್ದಾರೆ. ಶ್ರೀ ಹೆಗ್ಡೆಯವರ ಹೆಸರನ್ನು ಶ್ರೀ ಎಂ. ಆನಂದ ಆಳ್ವರು ಸೂಚಿಸಿ ಶ್ರೀ ಎಂ. ಅಮರನಾಥ ಶೆಟ್ಟಿಯವರು ಅನುಮೋದಿಸಿದ್ದರು. ಶ್ರೀ ಎಸ್. ಧರ್ಮ ಸಾಮ್ರಾಜ್ಯರು ರಾಜೀನಾಮೆ ಸಲ್ಲಿಸಿದ್ದರಿಂದ ಈ ಸ್ಥಾನ ತೆರವಾಗಿತ್ತು.

ಮಿಲಾಗ್ರಿಸ್ ಕಾಲೇಜಿನ ಗ್ರಂಥಾಲಯ ಕಟ್ಟಡದ ಉದ್ಘಾಟನೆ

1967ರಲ್ಲಿ ವೀರೆಫಾ। ಮೊನ್ಸಿಜರ್ ಡಿ.ಜಿ. ಡಿ'ಸೋಜಾರವರಿಂದ ಸ್ಥಾಪಿತವಾಗಿ ಪ್ರಿನ್ಸಿಪಾಲ್ ಡಾ। ಪಿ. ಗುರುರಾಜ ಭಟ್ಟರ ಉತ್ಸಾಹೀ ನೇತೃತ್ವ ಹಾಗೂ ಪ್ರಾಧ್ಯಾಪಕ ವೃಂದದ ಸಹಯೋಗದಿಂದ ಪ್ರಗತಿ ಹೊಂದುತ್ತಿರುವ ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಸುಮಾರು ಒಂದು ಲಕ್ಷ ಎಂಭತ್ತೈದು ಸಾವಿರ ರೂ. ವೆಚ್ಚದಲ್ಲಿ ಉಡುಪಿ ಭಾರತ್ ಇಂಜಿನಿಯರಿಂಗ್ ಕನ್ಸ್ಟ್ರಕ್ಷನ್ ನವರು ನೂತನವಾಗಿ ನಿರ್ಮಿಸಿದ ಲೈಬ್ರೇರಿ ಕಟ್ಟಡದ ಉದ್ಘಾಟನಾ ಸಮಾರಂಭವು ಧರ್ಮಸ್ಥಳ ಶ್ರೀ ವೀರೇಂದ್ರ ಹೆಗ್ಗಡೆಯವರಿಂದ ತಾ. 19 ರಂದು ನೆರವೇರಿಸಲ್ಪಟ್ಟಿತು. ಸಿಂಡಿಕೇಟ್ ಬ್ಯಾಂಕಿನ ಕನ್ಸೋರ್ಡಿಯಂ ಶ್ರೀ ಕೆ.ಕೆ. ಪೈಯವರು ಅಧ್ಯಕ್ಷತೆ ವಹಿಸಿದ್ದರು.

ಕಾಲೇಜಿನ ಕರೆಸ್ಪಾಂಡೆಂಟ್ ರೆ। ಫಾ। ಲಾರೆನ್ಸ್ ಬೂವಿಸರು ಸ್ವಾಗತಿಸಿ ಅತಿಥಿಗಳ ಪರಿಚಯ ಮಾಡಿಕೊಟ್ಟರು. ಶುಭಸಂದೇಶಗಳನ್ನು ಶ್ರೀ ಪಿ. ಲಕ್ಷ್ಮಣ ಶೆಟ್ಟಿಯವರು ಓದಿದರು. ಶ್ರೀ ವೀರೇಂದ್ರ ಹೆಗ್ಗಡೆಯವರು ಮಾತನಾಡುತ್ತಾ, ಕ್ರೈಸ್ತ ಮಿಷನರಿಗಳು ವಿದ್ಯೆ ಮತ್ತು ವೈದ್ಯ ರಂಗಗಳಲ್ಲಿ ನೂಡಿರುವ ಸೇವಾ ಕಾರ್ಯವನ್ನು ಶ್ಲಾಘಿಸಿ ಗ್ರಂಥ ಭಂಡಾರದ ಪ್ರಯೋಜನವನ್ನು ವಿವರಿಸಿ ವಿದ್ಯಾರ್ಥಿಗಳು ಅದರ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂದರಲ್ಲದೆ ಪ್ರಿನ್ಸಿಪಾಲ್ ಡಾ। ಗುರುರಾಜಭಟ್ಟರ ದಕ್ಷತೆಯನ್ನು ಶ್ಲಾಘಿಸಿದರು.

ಕಾಲೇಜು ಸ್ಥಾಪಕ ರೆ। ಫಾ। ಮೊನ್ಸಿಜರ್ ಡಿ. ಜಿ. ಡಿ'ಸೋಜಾರವರ ಭಾವಚಿತ್ರವನ್ನು ರೆ। ಫಾ। ಜೆ. ರೋಚೋರವರು ಅನಾವರಣ ಗೈದು ಅವರ ಕಾರ್ಯದಕ್ಷತೆಯನ್ನೂ ಸಾಹಸವನ್ನೂ ಕೊಂಡಾಡಿದರು. ಮೊನ್ಸಿಜರ್ ಡಿ'ಸೋಜಾರು ಕಾಲೇಜು ಸ್ಥಾಪನೆಗೆ ಸಹಕಾರಿತ್ವ ವರನ್ನು ನೆನಪಿಸಿ ತನ್ನ ಕುರಿತು ಪ್ರಸ್ತಾಪಿಸಿದ ಮಾತುಗಳಿಗೆ ಕೃತಜ್ಞತೆ ಸಲ್ಲಿಸಿ ಕಾಲೇಜನ್ನು ಉತ್ತಮವಾಗಿ ನಡೆಸಿಕೊಂಡು ಬರುತ್ತಿರುವ ಪ್ರಿನ್ಸಿಪಾಲ್ ಭಟ್ಟರನ್ನು ಅಭಿನಂದಿಸಿದರು.

ಶ್ರೀ ಕೆ.ಕೆ. ಪೈಗಳು ತಮ್ಮ ಅಧ್ಯಕ್ಷ ಭಾಷಣದಲ್ಲಿ, ವಿದ್ಯಾರ್ಥಿಗಳು ಈ ಗ್ರಂಥ ಭಂಡಾರದ ಪ್ರಯೋಜನವನ್ನು ಪಡೆಯಬೇಕೆಂದರಲ್ಲದೆ ಈ ಕಾಲೇಜು ಶಿಕ್ಷಣ ರಂಗದಲ್ಲಿ ಮಹೋನ್ನತ ಸ್ಥಾನ ಪಡೆಯುವಂತಾಗಲೆಂದರು.

ಪ್ರಿನ್ಸಿಪಾಲ್ ಡಾ। ಗುರುರಾಜ ಭಟ್ಟರು ಧನ್ಯವಾದಗಳನ್ನರ್ಪಿಸುತ್ತಾ ವಿಶ್ವವಿದ್ಯಾನಿಲಯ ಧನ ಆಯೋಗವು ಇದಕ್ಕೆ ಒಂದು ಲಕ್ಷ ಇಪ್ಪತ್ತೈದು ಸಾವಿರ ನೆರವು ಕೊಟ್ಟಿರುವುದೆನ್ನು ಪ್ರಸ್ತಾಪಿಸಿ ಶೀಘ್ರದಲ್ಲಿ ಮನೋಹರ ಕಟ್ಟಡವನ್ನು ನಿರ್ಮಿಸಿಕೊಟ್ಟ ಭಾರತ್ ಕನ್ಸ್ಟ್ರಕ್ಷನ್ ನ ಶ್ರೀ ಪಿ. ಶ್ರೀಪತಿ ಆಚಾರ್ಯ ಮೊದಲಾದವರಿಗೆ ಕೃತಜ್ಞತೆಗಳನ್ನು ಸೂಚಿಸಿದರು. ಅಂತ್ಯದಲ್ಲಿ ಶ್ರೀ ಶರ್ಮರ ಕಾವ್ಯವಾಚನವಿತ್ತು. ●

ಅಡಿಕೆ ಬೋರ್ಡು ರಚನೆ ವೀರೇಂದ್ರ ಹೆಗ್ಗಡೆಯವರ ಸೂಚನೆ

ದ. ಕ. ಮತ್ತು ಕೊಡಗು ಅಡಿಕೆ ಪ್ಲಾಂಟರುಗಳ ಸಂಘದ ಆಶ್ರಯದಲ್ಲಿ ವಿಟ್ಲದಲ್ಲಿನ ವಿಟ್ಲ ಅಡಿಕೆ ಪರಿಶೋಧನಾ ಕೇಂದ್ರದಲ್ಲಿ ತಾ. 11ರಂದು ನಡೆದ ಮೈಸೂರು ರಾಜ್ಯ ನುತ್ತು ಕಾಸರಗೋಡು ತಾಲೂಕು ಅಡಿಕೆ ಕೃಷಿಗಳ ಸಮ್ಮೇಳನವನ್ನು ಮಂಗಳೂರಿನ ಕೆನರಾ ಚೇಂಬರ್ ಆಫ್ ಕಾಮರ್ಸ್ ಎಂಡ್ ಇಂಡಸ್ಟ್ರೀಸ್‌ನ ಕಾರ್ಯದರ್ಶಿ ಶ್ರೀ ಬಿ. ಅಂ ಕಾಮತರ ಅಧ್ಯಕ್ಷತೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಉದ್ಘಾಟಿಸಿದರು.

ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಕೆ. ವೆಂಕಪ್ಪಯ್ಯನವರು ಆತಿಥಿಗಳ ಪರಿಚಯ ಮಾಡಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷ ಶ್ರೀ ವಾರಣಾಸಿ ಸುಬ್ರಾಯ ಭಟ್ಟರು ಸ್ವಾಗತಿಸಿದರು. ಅಡಿಕೆಯ ಉತ್ಪಾದನೆಯು ಹೆಚ್ಚು ಹೆಚ್ಚಾದಂತೆ ಬೇಡಿಕೆಯೂ ಹೆಚ್ಚಾಗುವಂತೆ ಅಡಿಕೆಯನ್ನು ಬೇರೆ ಬೇರೆ ಉಪಯೋಗಗಳಿಗೆ ಬಳಸಲ್ಪಡುವಂತೆ ಪ್ರಯತ್ನ, ಸಂಶೋಧನೆ ಮತ್ತು ಕಾರ್ಯ ಪ್ರವೃತ್ತಿ ಮೊದಲಾದ ವಿಚಾರವಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲು ಈ ಸಮ್ಮೇಳನವನ್ನು ಕರೆಯಲಾಗಿದೆಯೆಂದವರು ತಿಳಿಸಿದರು.

ಶ್ರೀ ವೀರೇಂದ್ರ ಹೆಗ್ಗಡೆಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಅಡಿಕೆ ವ್ಯವಸಾಯಗಾರರು ಇತ್ತೀಚಿಗಿನ ದಿನಗಳಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ನಿವಾರಿಸಿ ಅಡಿಕೆ 'ಬೋರ್ಡ್' ರಚಿಸುವುದರಿಂದ ನಲವು ತೊಂದರೆಗಳನ್ನು ಹೋಗಲಾಡಿಸಬಹುದು. ಇದರಿಂದಾಗಿ ಅಡಿಕೆ ಅಂತರ್ರಾಷ್ಟ್ರೀಯ ಮಾರುಕಟ್ಟೆಯನ್ನೂ ಗಳಿಸಲು ಸಾಧ್ಯವಾಗಬಹುದು ಎಂದರು. ಅಡಿಕೆ ವ್ಯವಸಾಯದವರು ಬೇರೆ ಕೃಷಿಗಳಿಗೆ ಮಹತ್ವವನ್ನು ಕೊಡುವ ನುತ್ತು ಅಡಿಕೆ ಸಿಪ್ಪೆಯಿಂದ ಕಾಗದ ತಯಾರಿಸುವದೇ ಮೊದಲಾದುವುಗಳ ಕುರಿತು ಪರಿಶೀಲಿಸುವುದು ಉಚಿತ ಎಂದು ಸಲಹೆಯಿತ್ತರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ. ಆರ್. ಕಾಮತರು ತಮ್ಮ ಭಾಷಣದಲ್ಲಿ ಅಡಿಕೆ ಕೃಷಿಕರ ಇಂದಿನ ಪರಿಸ್ಥಿತಿಯ ಮುಖ್ಯ ಕಾರಣಗಳನ್ನು ನಿವಾರಿಸಿ ಈ ಸಮ್ಮೇಳನದ ಪೂರ್ಣ ಉಪಯೋಗ ಪಡೆದು ಮುಂದಿರುವ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಕಂಡು ಹುಡುಕುವಂತೆ ಸಲಹೆ ಇತ್ತರು.

ಕಾಸರಗೋಡಿನ ಸೆಂಟ್ರಲ್ ಪ್ಲಾಂಟೇಶನ್ ಬೆಳೆಗಳ ಪರಿಶೋಧನಾ ಸಂಸ್ಥೆಯ ಡೈರೆಕ್ಟರ್ ಶ್ರೀ ಕೆ. ವಿ. ಅಮ್ಮೆ ಜಾಪ್ಪನವರು ನೂತನವಾಗಿ ವಿಟ್ಲದಲ್ಲಿ ಸ್ಥಾಪಿಸಲಿರುವ ಅಡಿಕೆ ಪರಿಶೋಧನಾ ಕೇಂದ್ರದ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಅಡಿಕೆ ಕೃಷಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಈ ಕೇಂದ್ರವು ಸಹಾಯಕವಾಗಲಿದೆಯೆಂದು ಅವರು ಹೇಳಿದರು.

ಅಡಿಕೆ ಕೃಷಿಕರ ಸಮಸ್ಯೆಗಳ ಕುರಿತು ಸವಿಸ್ತಾರ ಚರ್ಚೆ ನಡೆದು ಕಲವು ಮಹತ್ವದ ಹಾಗೂ ಉಪಯುಕ್ತ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಕೊನೆಯಲ್ಲಿ ದ. ಕ. ಜಿಲ್ಲೆ ಮತ್ತು ಕೊಡಗು ಅಡಿಕೆ ತೋಟಿಗಾರರ ಸಂಘದ ಜಂಟಿ ಕಾರ್ಯದರ್ಶಿ ಶ್ರೀ ಎ. ಪಿ. ಗೌರೀಶಂಕರರು ಧನ್ಯವಾದ ಸಮರ್ಪಣೆ ಮಾಡಿದರು.

ನ್ಯಾಯಾಂಗ ರಕ್ಷಣೆಯಿಂದ ನಾಗರಿಕ ಸ್ವಾತಂತ್ರ್ಯ ಸುರಕ್ಷಿತ—ಕೆ.ಎಸ್.ಹೆಗ್ಡೆ.

ಕಳೆದ ತಾ. 15ರಂದು ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಸಭಾಭವನದಲ್ಲಿ ಭಾರತೀಯ ವಿದ್ಯಾಭವನದ ಆಶ್ರಯದಲ್ಲಿ ಜರಗಿದ ಸಮಾರಂಭದಲ್ಲಿ ಭಾರತದ ವರಿಷ್ಠ ನ್ಯಾಯಾಲಯದ ನ್ಯಾಯಾಧೀಶ ಶ್ರೀ ಕೆ. ಸದಾನಂದ ಹೆಗ್ಡೆಯವರು "ಸಂವಿಧಾನ ಹಾಗೂ ವರಿಷ್ಠ ನ್ಯಾಯಾಲಯ" ದ ಕುರಿತು ಮಾತಾಡಿದರು. ಭವನದ ಮಂಗಳೂರು ಕೇಂದ್ರದ ಕಾರ್ಯಕಾರಿ ಸದಸ್ಯ ಎಡ್ವೊಕೇಟ್ ಶ್ರೀ ಬಿ. ಗಂಗಾಧರ್ ದಾಸರು ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಕೇಂದ್ರದ ಅಧ್ಯಕ್ಷ ಎಂ. ಪಿ. ಪೈಯವರು ಸ್ವಾಗತಿಸಿದರು.

ಶ್ರೀ ಹೆಗ್ಡೆಯವರು ಮಾತಾಡುತ್ತಾ, ನ್ಯಾಯಾಂಗದ ಸ್ವಾತಂತ್ರ್ಯ ರಕ್ಷಣೆಯಿಂದ ನಮ್ಮ ದೇಶದಂತಹ ಪ್ರಜಾ ಸತ್ತಾತ್ಮಕ ದೇಶದ ನಾಗರಿಕರ ಸ್ವಾತಂತ್ರ್ಯ ಹಾಗೂ ನೈಯಕ್ತಿಕ ಹಕ್ಕುಗಳನ್ನು ರಕ್ಷಿಸಬೇಕಾಗುವದರಿಂದ ಈ ಬಗ್ಗೆ ದೇಶದ ಸುಶಿಕ್ಷಿತರು ಸಾರ್ವಜನಿಕ ಅಭಿಪ್ರಾಯವನ್ನು ಸಂಘಟಿಸಬೇಕು. ನಾಗರಿಕರ ಮೂಲಭೂತ ಹಕ್ಕು ಹಾಗೂ ವ್ಯಕ್ತಿ ಸ್ವಾತಂತ್ರ್ಯಗಳನ್ನು ರಕ್ಷಿಸುವ ಕಾರ್ಯಾಂಗ, ಶಾಸಕಾಂಗ ಹಾಗೂ ನ್ಯಾಯಾಂಗಗಳಿಗೆ ಮಧ್ಯವರ್ತಿಯಾಗಿರುವ ಮತ್ತು ಶಾಸನಾತ ಆಶ್ವಿಕೆಯನ್ನು ಸಂರಕ್ಷಿಸುವ ಮುಖ್ಯ ಉದ್ದೇಶದೊಡನೆ ದೇಶದ ವರಿಷ್ಠ ನ್ಯಾಯಾಲಯವನ್ನು ರೂಪಿಸಲಾಗಿದೆ ಎಂದರು. ನ್ಯಾಯಾಂಗದ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲು ಈ ಹಂತದಲ್ಲಿ ಕಾರ್ಯಾಂಗಕ್ಕೆ ಅನುಮತಿ ನೀಡಿದರೆ ಶಾಸಕಾಂಗದನ್ನು ಅಮ ಹತ್ತಿಕ್ಕುಸ ದಿನ ದೂರವಿಲ್ಲ ಎಂದವರು ಎಚ್ಚರಿಸಿದರು.

ಅಂತ್ಯದಲ್ಲಿ ಡಾ। ಕೆ. ಸುಧಾಕರ ಶೆಟ್ಟರು ಧನ್ಯವಾದ ಅರ್ಪಿಸಿದರು.

ಬಿ. ವಿಟ್ಲ ಹೆಗ್ಡೆಯವರ ಅವಿರೋಧ ಆಯ್ಕೆ

ಕಾರ್ಕಳ ತಾಲೂಕು ಅಭಿವೃದ್ಧಿ ಮಂಡಳಿಯ ಉತ್ಸಾಹೀ ಸದಸ್ಯರೂ ಚತುರ ಕಾರ್ಯಕರ್ತರೂ ಆದ ಶ್ರೀ ಜೀಳಂಜೆ ವಿಟ್ಲ ಹೆಗ್ಡೆಯವರು ತಾ. 7—12—71ರಂದು ಚುನಾವಣಾಧಿಕಾರಿ ಕುಂದಾಪುರ ಅಸಿಸ್ಟಂಟ್ ಕಮಿಷನರ್ ಶ್ರೀ ಟಿ. ಜಿ. ಬಂಗೇರರ ನೇತೃತ್ವದಲ್ಲಿ ಜರಗಿದ ಚುನಾವಣೆಯಲ್ಲಿ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಲ್ಪಟ್ಟಿದ್ದಾರೆ. ಶ್ರೀ ಹೆಗ್ಡೆಯವರ ಹೆಸರನ್ನು ಶ್ರೀ ಎಂ. ಆನಂದ ಆಳ್ವರು ಸೂಚಿಸಿ ಶ್ರೀ ಎಂ. ಅಮರನಾಥ ಶೆಟ್ಟಿಯವರು ಅನುಮೋದಿಸಿದ್ದರು. ಶ್ರೀ ಎಸ್. ಧರ್ಮ ಸಾಮ್ರಾಜ್ಯರು ರಾಜೀನಾಮೆ ಸಲ್ಲಿಸಿದ್ದರಿಂದ ಈ ಸ್ಥಾನ ತೆರವಾಗಿತ್ತು.

ಮಿಲಾಗ್ರಿಸ್ ಕಾಲೇಜಿನ ಗ್ರಂಥಾಲಯ ಕಟ್ಟಡದ ಉದ್ಘಾಟನೆ

1967ರಲ್ಲಿ ವೀರೆಫಾ। ಮೊನ್ಸಿಜರ್ ಡಿ.ಜಿ. ಡಿ'ಸೋಜಾರವರಿಂದ ಸ್ಥಾಪಿತವಾಗಿ ಪ್ರಿನ್ಸಿಪಾಲ್ ಡಾ। ಪಿ. ಗುರುರಾಜ ಭಟ್ಟರ ಉತ್ಸಾಹೀ ನೇತೃತ್ವ ಹಾಗೂ ಪ್ರಾಧ್ಯಾಪಕ ವೃಂದದ ಸಹಯೋಗದಿಂದ ಪ್ರಗತಿ ಹೊಂದುತ್ತಿರುವ ಕಲ್ಯಾಣಪುರ ಮಿಲಾಗ್ರಿಸ್ ಕಾಲೇಜಿನ ಸುಮಾರು ಒಂದು ಲಕ್ಷ ಎಂಭತ್ತೈದು ಸಾವಿರ ರೂ. ವೆಚ್ಚದಲ್ಲಿ ಉಡುಪಿ ಭಾರತ್ ಇಂಜಿನಿಯರಿಂಗ್ ಕನ್ಸ್ಟ್ರಕ್ಷನ್ ನವರು ನೂತನವಾಗಿ ನಿರ್ಮಿಸಿದ ಲೈಬ್ರೇರಿ ಕಟ್ಟಡದ ಉದ್ಘಾಟನಾ ಸಮಾರಂಭವು ಧರ್ಮಸ್ಥಳ ಶ್ರೀ ವೀರೇಂದ್ರ ಹೆಗ್ಗಡೆಯವರಿಂದ ತಾ. 19

ಹಿಂದುಳಿದ ಶ್ರೀಸಾಮಾನ್ಯನ ಉದ್ಧಾರವೆಂದು?

ಬಡವನ ಮಡಿ ಉಡದೇ ಮೊಸಿತು— ಎಂದಂತೆ ಬಡವನ ಮೂತು ಎಡೆಯಲ್ಲೇ ಹೋಯಿತು ಎನ್ನುವುದಿದೆ. ನಮ್ಮ ದೇಶದ ಶ್ರೀಸಾಮಾನ್ಯರಲ್ಲಿ ಹಿಂದುಳಿದ ವರ್ಗದವರ ಹಾಗೂ ಅಲ್ಪ ಸಂಖ್ಯಾತರ ಸ್ಥಿತಿ, ಸಮಸ್ಯೆಗಳೂ ಹಾಗೇ ಆಗಿವೆ. ಒಂದೆಡೆ ಜಾತೀಯತೆಯ ದಾವಾನಲವಾದರೆ ಮತ್ತೊಂದೆಡೆಯಲ್ಲಿ ಆರ್ಥಿಕ ಬಿಕ್ಕಟ್ಟು, ಸ್ಥಳಾಭಾವ, ಅಸಾಕ್ಷರತೆ, ಬೌದ್ಧಿಕ ಜಡ್ಡಾನದ ಆ ಭಾವಗಳಿಂದ ಸಾಮರ್ಥ್ಯವಿಲ್ಲದ ಇವರೆಲ್ಲ ಹಣ್ಣು ಹಣ್ಣಾಗಿ ಹೋಗಿದ್ದಾರೆ. ಈ ಅಲ್ಪ ಸಂಖ್ಯಾತರಲ್ಲಿ ಗುಡಿ ಕೈಗಾರಿಕೆ ಕುಶಲರು, ಕಲಾವಿದರು-ಇದ್ದಾರೆ. ಬಡವನ ಮಡಿ ಉಡದೆ ಮೊಸಿದಂತೆ ಅವರೆಲ್ಲ ಏಳಿಗೆಯಿಲ್ಲದ ಪೀಳಿಗೆಯೆಲೆಯ ಮರೆಯ ಕಾಯಿಗಳಾಗಿದ್ದಾರೆ.

ನಮ್ಮ ಕರ್ನಾಟಕದ ಜನಸಂಖ್ಯೆಯಲ್ಲಿ ಶೇ. 35ರಷ್ಟು ಬಹು ಸಂಖ್ಯಾತರಿದ್ದು, ಉಳಿದ ಶೇ. 65ರ ಭೀಮ ಪಾಲು ಅಲ್ಪ ಸಂಖ್ಯಾತ ಹಾಗೂ ಹಳ್ಳಿ ಮತ್ತು ಕಾಡು ಗುಡ್ಡಗಳಲ್ಲಿ ವಿಶೇಷವಾಗಿ ವಾಸಿಸುವ ಹಿಂದುಳಿದ ಜನಾಂಗದವರಾಗಿದೆ. ಅವರ ಹಿತಾಪಕ್ತಿಗಳು ಅಪಾರವಾಗಿದ್ದಂತೆ ಕುಂದು ಕೊರತೆಗಳು ಅನೇಕ ವಿಧದಿಂದ ಕಾಡುತ್ತಿವೆ. ಸರಕಾರವಾಗಲೀ ಬಹು ಸಂಖ್ಯಾತರಾಗಲೀ ಇವರ ಗೋಳನ್ನು ಗಮನಿಸುತ್ತಿಲ್ಲವೆಂಬುದಕ್ಕೆ ಉದಾಹರಣೆಯೆಂದರೆ ೨೨-೧೧-೭೧ ರಂದು ತಮ್ಮ ಪಂಸ್ಥಿತಿ ಸುಧಾರಿಸಬೇಕೆಂದು ಒತ್ತಾಯಿಸಿ ಬಂದ ೭೨ ಹರಿಜನರನ್ನು ನವದೆಹಲಿಯಲ್ಲಿ ಪಾರ್ಲಿಮೆಂಟಿನ ನಿಷೇಧಾಜ್ಞೆಯನ್ನು ಉಲ್ಲಂಘಿಸಿದ ಮೇರೆಗೆ ಬಂಧಿಸಿ ಜೈಲಿಗೆ ಹಾಕಿದರು. ಅವರಲ್ಲಿ ಏವರು ಮಹಿಳೆಯರೂ ಇದ್ದರು.

ಹಿಂದುಳಿದ ವರ್ಗದವರು ಎಷ್ಟು ಬನ್ನ ಪಟ್ಟಿದ್ದಾರೆ, ಪಡುತ್ತಿದ್ದಾರೆಂಬುದಕ್ಕೆ ಡಾ| ಭೀಮರಾವ್ ರಾಮರಾವ್ ಅಂಬೇಡ್ಕರರೇ ಉದಾಹರಣೆಯಾಗಿದ್ದರು. ಅಸ್ಪೃಶ್ಯತೆಯ ಸೋಗು ಅವರನ್ನು ಕೊನೆಯವರೆಗೂ ಬಿಡದೆ, ಕಡೆಗವರು ಬೌದ್ಧ ಮತ ಸ್ವೀಕರಿಸಿ ಪ್ರಾಣ ಬಿಟ್ಟರು. ಹಿಂದುಳಿದವರನ್ನು ಕಡೆಗಣಿಸಿ ನೋಡುವ ದೃಷ್ಟಿ ನಮ್ಮಲ್ಲಿನ್ನೂ ಬಿಟ್ಟಿಲ್ಲ. ಹೋಟೆಲುಗಳಲ್ಲಿ ಹರಿಜನರನ್ನು ಹೊರಗೆ ಕೂಡಿಸಿ, ತೆಂಗಿನ ಚಿಪ್ಪಿನಲ್ಲಿ ಕಾಫಿ ಕೊಡುವುದನ್ನು ಇಂದಿಗೂ ಕಾಣಬಹುದು. ದೇವಾಲಯಗಳಲ್ಲಂತೂ ಅವರಿಗೆ ಪ್ರವೇಶ ನಿಷೇಧ.

ಹಿಂದುಳಿದ ವರ್ಗದ ಕೆಲವರು ಇಂದಿಗೂ ಸತ್ತ ದನ ಕರುಗಳ ಭಕ್ಷಣೆ, ಎಂಜಲು ಎಲೆಯ ಶೇಷಾಹಾರ ಭೋಜನದಿಂದ ಅಧೋಗತಿಗಿಳಿಯುವುದು ಶೋಚನೀಯ. ನಮ್ಮ ಜಿಲ್ಲೆಯಲ್ಲಿ ಹರಿಜನರ ಎಲ್ಲಾ ವರ್ಗದವರನ್ನು ಹರಿಜನರೆಂದೂ, ನಾಯ್ಕ, ಮಲೆಕುಡಿಯ, ಮೊದಲಾದವರನ್ನು ಗಿರಿಜನರೆಂದು ವಿಂಗಡಿಸಿ, ಉಚಿತ ಮನೆ, ದನ ಕರುಗಳನ್ನು ನೀಡುವುದಾದರೂ ಇದರಿಂದ ಈ ವರ್ಗದವರಾರೂ ಶುದ್ಧ ನಾಗರಿಕರಾಗಿಲ್ಲ. ಗ್ರಾಮಾಂತರಗಳ ರೈತರಿಗೆ ಬೇಕಾದ ಬುಟ್ಟಿ, ಹೆಡಿಗೆ— ಇತ್ಯಾದಿಗಳನ್ನು ತಯಾರಿಸಿ ಕೊಟ್ಟು, ಕೃಷಿ ಜೀವನದಲ್ಲಿ ಬಹು ಮುಖ ಸೇವೆ ಮಾಡುತ್ತಿರುವ ಈ ವರ್ಗದವರು ಅಳಿಯದೆ ಉಳಿಯಬೇಕು. ಗಾಂಧಿಜಿಯ ನೆಪವೊಡ್ಡಿ ಮೂರುದ್ದ ಭಾಷಣವೀಪ ರಾಜಕಾರಣಿಗಳು ಅವರ ಉದ್ಧಾರಕ್ಕಾಗಿ ಶ್ರಮಿಸಿದರೆ ಆ ಕಾರ್ಯ ಸ್ತುತ್ಯ. ಈ ಜನತೆಗೆ ವಿದ್ಯಾಲಾಭ, ಸಹಾನುಭೂತಿ ಮೊರಕೆಸಿ ಕೊಡುವುದು ರಾಷ್ಟ್ರ ಧರ್ಮವಾಗಿದೆ.

ಪ್ರಸ್ತುತ ಅಲ್ಪ ಸಂಖ್ಯಾತರಾದ ಹಾಗೂ ಹಿಂದುಳಿದವರ ಜೀವನದ ಸರಿಪ್ಪಿತಿಯನ್ನು ನೋಡಿ ವರದಿ ಮಾಡಲು ಆಂಧ್ರ ಮತ್ತು ತಮಿಳು ನಾಡು ಸರಕಾರಗಳು ಆಯೋಗವೊಂದನ್ನು ನೇಮಿಸಿವೆ. ಅದರಂತೆ ಕರ್ನಾಟಕದಲ್ಲೂ ಈ ಜನರನ್ನು ರಕ್ಷಿಸಿ ಬೆಳೆಸುವದರೊಂದಿಗೆ ಅವರ ಹಿತರಕ್ಷಣೆಗಾಗಿ ಸಮಿತಿಯೊಂದನ್ನು ನೇಮಿಸುವ ಸರಕಾರವ ಇತ್ತೀಚಿನ ಯೋಜನೆ ಸ್ತುತ್ಯವೇ ಸರಿ ಶುಭಸ್ಯ ಶೀಘ್ರಂ ಎಂಬಂತೆ ಅದು ತ್ವರಿತಗತಿ ನೇಮಕಗೊಂಡು ಅವರಿಗೆ ನೆರವು ಸೌಲಭ್ಯ ನೀಡಿದರೆ ಬಿಳಿಯುತ್ತಿರುವ ಜನಾಂಗ ಉಳಿದೀತು. ಈಗಾಗಲೇ ಶೋಚನೀಯನಾಗಿರುವ ಈ ಜನರ ಬಾಳಿಗೊಂದು ಆಧಾರಸ್ತಂಭ ಲಭ್ಯವಾದೀತು.

ದಿನೇ ದಿನೇ ಜನಾಂಗಗಳ ಮಧ್ಯೆ ಬೆಳೆಯುತ್ತಿರುವ ಅಂತರದಿಂದಾಗಿ ಅನೇಕ ಬಹು ಸಂಖ್ಯಾತ ಲಾಭ ಬಡುಕರು ಸೌಲಭ್ಯಗಳನ್ನೆಲ್ಲ ತಾನೇ ದಕ್ಕಿಸಿಕೊಂಡು ಹಿಂದುಳಿದವರನ್ನು ಮೂಲೆಗೆ ತಳ್ಳುತ್ತಿದ್ದಾರೆ. ಇದರಿಂದ ಹಿಂದುಳಿದವರಿಗೆ ನಿರುದ್ಯೋಗ ಸಮಸ್ಯೆ, ಬಿಕ್ಕಟ್ಟು ಕಾಡಿಸಿ ಜೀವನಕ್ಕೊಂದು ಗೊತ್ತು ಗುರಿ ಇಲ್ಲವಾಗುತ್ತದೆ. ಕೆಲವೆಡೆ ಹರಿಜನರು ಮೂಸಾಸನದ ಆಸೆಗಾಗಿ ಹಿಂದೂ ಧರ್ಮವನ್ನು ತೊರೆದು, ಕ್ರೈಸ್ತ ಮತಾವಲಂಬಿಗಳಾದ ಉದಾಹರಣೆಯಿದೆ

ಸರಕಾರವೂ ಕೂಡ ಹಲವು ಕಾರ್ಯ ನಿರ್ವಾಹಕ ಅಧಿಕಾರ ಸಾಸನಬದ್ಧ ಮಂಡಳಿಗಳ ಸದಸ್ಯರನ್ನು, ಅಧ್ಯಕ್ಷರನ್ನು ಆಯ್ಕೆ ಮಾಡುವಾಗ ಹಿಂದುಳಿದ ವರ್ಗದವರಲ್ಲಿ ಅಲಕ್ಷ್ಯ ಧೋರಣೆ ತಾಳಿರುವುದು. ಇನ್ನು ಮುಂದೆ ಜನತಾ ಸೇವೆಯಲ್ಲಿ ನಾಗರಿಕರ ಕಾರ್ಯ ಪ್ರವೃತ್ತಿಗಳಲ್ಲಿ, ಗೌರವ ಧನತೆಗಳಲ್ಲಿ ಅವರಿಗೂ ಅರ್ಹತೆ ಸಿಗುವಂತಾಗಬೇಕು. ಈ ಅಲ್ಪ ಸಂಖ್ಯಾತರಲ್ಲಿ ಕೆಲವರು ಸರಕಾರಿ ನೌಕರರಾಗಿದ್ದರು. ಆದರೆ ಇವರ ಬಡ್ತಿ ಮತ್ತು ಇತರ ಹಲವಾರು ಹಿತಾಸಕ್ತಿಗಳ ರಕ್ಷಣೆಯಲ್ಲಿ ಅನಾಸಕ್ತಿ ಸಲ್ಲದು.

ತಾಂತ್ರಿಕ, ವೈದ್ಯಕೀಯ, ಮೊದಲಾದ ಶಿಕ್ಷಣ ಸಂಸ್ಥೆಗಳಲ್ಲಿ ಈ ವರ್ಗದವರಿಗೆ ಮೊದಲಿನ ಆದ್ಯತೆ ದೊರಕಿ, ಇವರ ಶೈಕ್ಷಣಿಕ, ರಾಜಕೀಯ, ಸಾಮಾಜಿಕ ಹಾಗೂ ಬೌದ್ಧಿಕ ಸ್ಥಾನ ವಿಸ್ತರಿಸುವುದರೊಂದಿಗೆ ಅವರಿಗೆಂದೇ ವಿಶೇಷ ಮಂಡಳಿಗಳು, ಸಚಿವರು ನೇಮಕ ಹೊಂದಿದರೆ ಯೋಗ್ಯ. ಅದರಿಂದ ಅವರೂ ಬದುಕಿಕೊಳ್ಳುತ್ತಾರೆ. ಬುದ್ಧಿವಂತರಾಗುತ್ತಾರೆ. ದೇಶದ ಮೌಲ್ಯಜೆ ಹೆಚ್ಚಿ, ಸುಭದ್ರತೆಯೂ ಕೂಡ ಲಭ್ಯವಾಗುತ್ತದೆ.

ಈ ವರ್ಗದವರ ಉಳಿವಿಗಾಗಿ ರಾಜ್ಯಸರಕಾರ ಶಾಸನಬದ್ಧ ತೀರ್ಮಾನವೊಂದನ್ನು ಬಳಕೆಗೆ ತಂದರೆ ಕನ್ನಡದ ಸ್ಥಾನಮಾನಗಳು ಹೊಸತನದಲ್ಲಿ ಕಾಲಿರಿಸುತ್ತವೆ. ಅಸೂಯೆ ತೊರೆದು, ಆ ಜನರು ಬಾಳುತ್ತಿರುವ ಹೀನ ಬಾಳಿನೆಡೆಗೆ, ನೈತಿಕ ಸ್ಥಾನದೆಡೆಗೆ ಕಣ್ಣೊಡೆದರೆ ಕಲ್ಲೂ ಕರಗುತ್ತದೆ, ನಮ್ಮ ಹೃದಯವಲ್ಲಿ ಕನಿಕರವೆಂಬುದೊಂದಿದ್ದರೆ ಇವರೂ ನಮ್ಮಂತೆಯೇ ಜೀನ್ನಾಗಿ ಬದುಕು ವಂತಾಗಲಿ.

—ಶ್ರೀ ಪ. ರಾಮಕೃಷ್ಣ ಶಾಸ್ತ್ರಿ

ಏನು ಯೋಚನೆ-?

(ಜಂತಾಮಗ್ಗರಾಗಿ ಬಂಜೂಳಧಾರಿ ಜುಕ್ಕಳ ಕೆಲಿಂದರ ಸ್ಫೂರ್ತಿ ಈ ಕವನ)

ಏನು ಯೋಚನೆ ಕಂದಾ?
ನಿನ್ನ ಮನಸಿನಿಂದಾ;
ಏನು ಯೋಜನೆ ಕಂದಾ?

ದೇಶಕಾಗಿ ದುಡಿವೆಯಾ?
ಕೀರ್ತಿಶಾಲಿಯಾಗುವೆಯಾ?

ನಿನ್ನ 'ಗನ್ನು' ಹಿರಿದು ಎನ್ನು
ದೇಶಕಾಗಿ ಮುಡಿವು ಅನ್ನು
ಅವೇ ಯೋಚನೆ, ರಾಷ್ಟ್ರರಕ್ಷಣೆ
ದೇಶಕಾಗಿ ಮಡಿನೆಯೂ-?
ಕೀರ್ತಿಶಾಲಿ ಯಾಗುನೆಯೂ?

||ಏನು ಯೋಚನೆ||

ನಿನ್ನ ಮನಸು ಹಿರಿದು
ದೇಶಕಾಗಿ ಕುರಿತು
ಬಂದ ಕಷ್ಟನನರಿತು
ದೆ.ಶಕಾಗಿ ದುಡಿವೆಯಾ?
ಕೀರ್ತಿಶಾಲಿಯಾಗುನೆಯಾ?

||ಏನು ಯೋಚನೆ||

ಚೀನ ಬಂದಿತ್ತು ಹಿಂದೆ
ಆಗಲಿ ಹೋಯಿತೆಂದೇ
"ಪಾಕ್"ಬಂದಿತ್ತು ಈ ಹಿಂದೆ
ಮತ್ತೆ ಬಂದಾಯ್ತು ಇಂದು
ನಮರ ನಡೆದಿದೆ ಮತ್ತಿಂದು-?

||ಏನು ಯೋಚನೆ||

"ಬಂಗ್ಲಾದೇಶ"ಕೆ ಬೇಕಂತೆ -ಸ್ವತಂತ್ರ
ಅಲ್ಲಿಂದಲೇ ಹುಟ್ಟಿಮದು ಪಾಕ್ ತಂತ್ರ
ಆದಕೆಂದೇ ಬಂದಿಹುದು
ತಾ ಯುದ್ಧ ಸಾರಿ.
ನೀವು ಮಾಡಬೇಕೇಗ ಅನರ ಗೋರಿ-?
ಇದನೆಲ್ಲ ಹೇಳುತಿಹುದು ಭಾರತ
ಸಾರಿ ಸಾರಿ!

||ಏನು ಯೋಚನೆ||

-ಬಾಲಚಂದ್ರ ಎಸ್. ಬಡಿಗೇರ

ನೋಟೀಸು

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 313/71.

H. ಅಬೂ ಮಹಮ್ಮದ್ —ಅರ್ಜಿದಾರ.
ಕೆ. ಮಹಮ್ಮದ್ —ಎದ್ರಿ.

ಕೆ. ಮಹಮ್ಮದ್, U. K. ಆಬ್ಬಾಸ್‌ರ ಮಗ, ಕೌಕ್ರಾಡಿ ಗ್ರಾಮ, P. O. ಕೊಕ್ಕಡ. ಇವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ—

ಮೇಲ್ಕಂಡ ವ್ಯವಹರಣೆಯಲ್ಲಿ ಅರ್ಜಿದಾರನು ಗೇಣಿ ವಸೂಲಿ ಬಗ್ಗೆ ಆರ್ಜಿ ಕೊಟ್ಟಿರುವುದ್ರಿಂದ, ನೀವು ತಾ. 11-1-1972ರಂದು ಹಗಲು ಗಂಟೆ 11ಕ್ಕೆ ಈ ಕೋರ್ಟಿನಲ್ಲಿ ಹಾಜರಾಗಿ ತಿಳಿಸಿಕೊಳ್ಳಿ ಬೇಕು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(By Order.)
Sd/- V. R. HEBBAR.
Advocate for Petitioner.

ನೋಟೀಸು

ಪುತ್ತೂರು III ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

R. R. C. 186/71.

H. ಅಬ್ದುಲ್ ಜಲೀಲ್ ಸಾಹೇಬ್ ಮತ್ತು ಇತರರು —ಅರ್ಜಿದಾರರು.
ಉನೀಶ ಮತ್ತು ಇತರರು —ಎದ್ರಿರು.

2ನೇ ಎದ್ರಿ—ಸಾಲ್ಮರ ಸುಬ್ರಾಯರ ಮಗ ಮೋಹನ, ಸಾಲ್ಮರ ಮನೆ, P.O. ಪುತ್ತೂರು. ಇವರಿಗೆ ಈ ಮೂಲಕ ತಿಳಿಸುವುದೇನೆಂದ್ರೆ,

ಮೇಲ್ಕಂಡ ವ್ಯವಹರಣೆಯಲ್ಲಿ ಅರ್ಜಿದಾರರು ಗೇಣಿ ವಸೂಲಿ ಬಗ್ಗೆ ಆರ್ಜಿ ಕೊಟ್ಟಿರುವುದ್ರಿಂದ, ನೀವು ತಾ. 11-1-1972ರಂದು ಹಗಲು ಗಂಟೆ 11ಕ್ಕೆ ಈ ಕೋರ್ಟಿನಲ್ಲಿ ಹಾಜ್ರಾಗಿ ತಿಳಿಸಿಕೊಳ್ಳಿ ಬೇಕು. ಇಲ್ಲವಾದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲ್ಪಡುವುದು.

(By Order.)
Sd/- V. R. HEBBAR.
Advocate for Petitioners.

ಸುಂದರ ಕುಂದಾಪುರ ನಗರದ ಪ್ರವೇಶ ದ್ವಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯವಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ರುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

NAVAYUGA 23-12-1971

Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ದೇಶ ರಕ್ಷಣೆಗಾಗಿ ಸೇನೆಯ ಸಿದ್ಧತೆ

ತಮಗೆ ನೀಡಿರುವ ಉಪಕರಣಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಬಳಸಿಕೊಳ್ಳಲು ಭಾರತೀಯ ರಕ್ಷಣಾಬಲ ಸಾಕಷ್ಟು ತರಬೇತಿಯನ್ನು ಪಡೆದಿದೆ. ಭೂಸೇನಾ ಪಡೆಗಳ ಸಂಚಲನವನ್ನು ಸುಗಮಗೊಳಿಸಲು ಕಾಲ್ದಳ ಮತ್ತು ಫಿರಂಗಿದಳದ ಹೋರಾಟ ಸಾಮರ್ಥ್ಯವನ್ನು ಸುಧಾರಿಸಲು ಸಾಧ್ಯವಿದ್ದ ಎಲ್ಲಾ ಯತ್ನವನ್ನು ಮಾಡಲಾಗಿದೆ. ಕ್ಷಿಪಣಿಗಳ ಹೊಸ ಘಟಕವೊಂದನ್ನು ಜೋಡಿಸುವ ಮೂಲಕ ಟ್ಯಾಂಕ್‌ವಿನಾಶಕೆ ಪಡೆಯ ಶಕ್ತಿಯನ್ನು ಹೆಚ್ಚಿಸಲಾಗಿದೆ. ಆಯುಧಉಪಯೋಗಿಸುವ ಕ್ರಮ ಮತ್ತು ಹೋರಾಟದ ವಿಧಾನಗಳಿಗೆ ಸಂಬಂಧಿಸಿದಂತೆ ಹೊಸ ತರಬೇತಿ ಕ್ರಮಗಳು ಜಾರಿಗೆಬಂದಿವೆ. ರಕ್ಷಣಾಬಲದಲ್ಲಿ ಇಂದು8,28,000 ಮಂದಿ ಯೋಧರಿದ್ದಾರೆ. ರಕ್ಷಣಾಬಲದಲ್ಲಿ ಎಲ್ಲಾ ಮಟ್ಟಗಳಲ್ಲೂ ಸಮತೋಲನವನ್ನು ಕಾದುಕೊಳ್ಳಲಾಗಿದೆ.

ಹೊಸ ಬಗೆಯ ವಿದ್ಯುಚ್ಛಕ್ತಿ ಉಪಕರಣಗಳ ಮಾಗು ಹೊಸ ಸಂಪರ್ಕ ವ್ಯವಸ್ಥೆಯ ಮೂಲಕ ಗಡಿಪ್ರದೇಶವಲ್ಲಿ ಸಂಪರ್ಕ ಸೌಲಭ್ಯಗಳನ್ನು ಸುಧಾರಿಸಲಾಗಿದೆ. ಹೊಸ ಹಾಗು ಸೂಕ್ಷ್ಮ ವಿದ್ಯುಚ್ಛಕ್ತಿ ಉಪಕರಣಗಳಿರುವ ಸಂಪರ್ಕ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರುವ ಉದ್ದೇಶದಿಂದ ದೀರ್ಘಾವಧಿ ಯೋಜನೆಯೊಂದನ್ನು ಈಗ ತಯಾರಿಸಲಾಗುತ್ತಿದೆ.

ಸೇನೆಗೆ ಹೊಸ—ಹೊಸ ವಾಹನಗಳನ್ನು ಹಂತ—ಹಂತವಾಗಿ ಸೇರಿಸಿ, ಸೇನೆಯನ್ನು ಸಾಗಿಸುವ ಹಾಗೂ ಬೀಡು ಬಿಡುವ ಕಾರ್ಯವನ್ನು ಸುಗಮಗೊಳಿಸಲಾಗಿದೆ. ಭಾರತೀಯ ಸೇನೆಯ ದೇಶರಕ್ಷಣಾ ಹಾಗೂ ಸಾಮರ್ಥ್ಯ ಸಮರಶಕ್ತಿ ಶತ್ರುಗಳಿಗೆ ನಡುಕವುಂಟು ಮಾಡುವಂತಾಗಿದೆ.

ವಿಮಾನ ಬಲದ ವಿಚಕ್ಷಣೆ

ಪಾಕಿಸ್ತಾನ ಮಿರೇಜ್ ವಿಮಾನಗಳನ್ನು ಪಡೆದಿದೆ ಎಂಬುದು ನಿಜ. ಪಾಕಿಸ್ತಾನದ ವಿಮಾನ ಬಲದ ಶಕ್ತಿ—ಸಾಮರ್ಥ್ಯದಲ್ಲಾಗಿರುವ ಈ ಹೆಚ್ಚಳವನ್ನು ಭಾರತೀಯ ವಿಮಾನ ಬಲದಲ್ಲಿರುವ ವಿಮಾನಗಳ ಹೋರಾಟದ ಸಾಮರ್ಥ್ಯ, ಶತ್ರು ಪಕ್ಷದ ವಿಮಾನಗಳ ಹೋರಾಟದ ಸಾಮರ್ಥ್ಯಕ್ಕೆಂತ ಎಸ್ಟೋ ಪಾಲು ಮೇಲು ಎಂದು ಹೇಳಬಹುದು. ನಮ್ಮ ಫೈಟರ್‌ಬಾಂಬರ್ ವಿಮಾನಗಳ ಪಡೆಯನ್ನು ಆಧುನಿಕ ಆವಶ್ಯಕತೆಗಳಿಗೆ ತಕ್ಕಂತೆ ಸಜ್ಜುಗೊಳಿಸಲಾಗಿದೆ.

ಇತ್ತೀಚಿನ ಮೂಲು. ವಿಮಾನ ಬಲದ ನಾನಾ ದಳಗಳಲ್ಲಿ ಪುನರ್‌ಹೊಂದಾಣಿಕೆ ಮಾಡಲಾಗಿದೆ. ಸಮರ ಪ್ರಾರಂಭವಾದರೆ ಹೋರಾಟಕ್ಕೆ ಸಜ್ಜಾಗಿರಲು ವಿಮಾನ ಬಲದ ಯೋಧರು ಆಹೋರಾತ್ರ ತರಬೇತಿ ಪಡೆಯುತ್ತಿದ್ದಾರೆ. ಭೂಸೇನೆ ಹಾಗು ನೌಕಾ ಪಡೆಯ ಕಾರ್ಯಾಚರಣೆಗೆ ಹೊಂದಿಕೊಂಡು ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ಸೇವೆಸಲ್ಲಿಸಲು ವಿಮಾನಬಲ ಈಗ ಸಿದ್ಧವಾಗಿದೆ.

ನೌಕಾಬಲದ ನವ್ಯಶಕ್ತಿ

ಪಾಕಿಸ್ತಾನ ನೌಕಾಬಲಹೊಸ ಸಬ್‌ಮರೀನುಗಳನ್ನು ಪಡೆದಿದೆ ಡಾಫ್ನೆವರ್ಗದ ಸಬ್‌ಮರೀನುಗಳು, ಮಿಜೆಟ್ ಮತ್ತು ಜಾರಿಯಟ್ ಸಬ್‌ಮರೀನ್ ಪಡೆಯ ಶಕ್ತಿಯನ್ನು ಹೆಚ್ಚಿಸಿವೆ. ನಮ್ಮ ನೌಕಾಬಲದ ಸಾಮರ್ಥ್ಯವೂ ಗಮನಾರ್ಹವಾದ ರೀತಿಯಲ್ಲಿ ಸುಧಾರಿಸಿದೆ. ನೌಕಾಬಲದಲ್ಲಿ ಈಗ ಸಬ್‌ಮರೀನ್ ಪಡೆಯೂ ಇದೆ. ಹೊಸ ಸಬ್‌ಮರೀನ್ ವಿನಾಶಕೆಗಳನ್ನು ಪಡೆದುಕೊಂಡು ನೌಕಾಬಲ ಪ್ರಬಲವಾಗಿದೆ. ಕ್ಷಿಪಣಿ ವಾಹಕ ನೌಕೆಗಳು ನಮ್ಮ ನೌಕಾಪಡೆಯಲ್ಲಿವೆ. ಪ್ರಸಂಗ ಬಂದರೆ ತನ್ನ ಕೆಚ್ಚನ್ನು ಪ್ರದರ್ಶಿಸಲು ನೌಕಾಪಡೆ ಸರ್ವಸಿದ್ಧತೆ ರೂಢಿಕೊಂಡಿದೆ.

ನಮ್ಮ ವಿಮಾನ ನಿರೋಧಕ ದಳವೂ ಶಕ್ತಿಸಂಪನ್ನವಾಗಿದೆ. ನೆಲದ ಮೇಲಿಂದ ಆಕಾಶದತ್ತ ಎರಗುವ ವಿಮಾನನಾಶಕ ಕ್ಷಿಪಣಿಗಳು ಈಗ ದೇಶದ ನಾನಾ ಕಡೆಗಳಲ್ಲಿ ಸ್ಥಾಪನೆಗೊಂಡಿವೆ. ನಮಗೆ ಬೇಕಾದ ರಕ್ಷಣಾ ಅವಶ್ಯಕತೆಗಳನ್ನು ವಿದೇಶಗಳಿಂದ ಕೊಂಡುಕೊಳ್ಳುವ ಸಾಧ್ಯತೆ—ಸೀಮಿತವಾಗಿದೆ. ಕಾರಣ ಸ್ವಾವಲಂಬನೆಯೇ ನಮ್ಮ ಗುರಿಯೂಗಿದೆ. ನಮ್ಮ ಆಯುಧ ಕಾರ್ಖಾನೆಗಳು ಮತ್ತು ರಕ್ಷಣಾಬಲದ ಸಂಸ್ಥೆಗಳು ಸೇನೆಯ ಆವಶ್ಯಕತೆಗಳನ್ನು ಪೂರೈಸಲು ಶಕ್ತಿಮೀರಿ ಶ್ರಮಿಸುತ್ತಿವೆ. ಆನೇಕ ಹೊಸ ಬಗೆಯ ರಕ್ಷಣಾ ಉಪಕರಣಗಳ ವಿನ್ಯಾಸ ಸಿದ್ಧವಾಗಿದ್ದು ಅವುಗಳ ತಯಾರಿಕೆಯೂ ಆರಂಭವಾಗಿದೆ. ರಕ್ಷಣಾ ಸಂಶೋಧನೆ ಹಾಗು ಅಭಿವೃದ್ಧಿ ಸಂಸ್ಥೆ ಈ ದಿಶೆಯಲ್ಲಿ ಪ್ರಶಂಸಾರ್ಹ ಸಾಧನೆ ನೂಡಿದೆ.

(ಒಂದೆನೆಯ ಪುಟದಿಂದ)

ಉಳಿವು ಬೇಕಾಗಿದೆಯೆ? ಜಮ ಮುಳಿವನ್ನೇ ಸಾಧಿಸಲು ತನ್ನ ಪರ ವಾದಿಸುತ್ತಿದೆಯೆ?

ಬಾಂಗ್ಲಾ ವಿಮೋಚನೆಯೊಗದೆ ಸಮರ ವಿರಾಮವಿಲ್ಲ-ಇದನ್ನು ಅರಿತೂ ಅಮೆರಿಕೆಯು ಪಾಕ್‌ನೊಡನೆ ಮತ್ತೊಮ್ಮೆ ಕಣ್ಣು ಮುಚ್ಚಾಲೆಯಾಟವಾಡುತ್ತಿದೆಯೆ?

ಪಾಕಿಸ್ತಾನದ ನಿಜವಾದ ಸ್ನೇಹಿತ ಭಾರತ ಮಾತ್ರ – ಈ ಸ್ನೇಹದಿಂದಲೇ ಅದು ಒಂಬತ್ತು ತಿಂಗಳು ಕಾಲ ಕಾದು ಕುಳಿತಿತು. ಇದನ್ನು ಅರಿತು ಇಸ್ಲಾಮಾಬಾದ ಸರಕಾರ ಹೊಸ ಇತಿಹಾಸ ಬರೆಯಲು ಮುಂದು ಬರಬೇಕು.

ಕುಂದಾಪುರ ಮುನ್ಸಿಫ್ ಕೋರ್ಟಿನಲ್ಲಿ

O. S. 266/1971.

ವಾದಿ— ಗೋವಿಂದ ಪೂಜಾರಿ.

ಪ್ರತಿವಾದಿ—ಮುತ್ತಯ್ಯ ಸೆಟ್ಟಿ, ಕುನ್ಯಾಡಿ ಕುರ್ಸು ಕೊಡ್ಲು ಕುಪ್ಪಯ್ಯ ಸೆಟ್ಟಿ ಆಳಿಯ ಕುಂದಾಪುರ ತಾಲ್ಲು ಯಿಡೂರು ಕುನ್ಯಾಡಿ ಗ್ರಾಮದಲ್ಲಿರುವವ.

ಸದ್ರಿ ಪ್ರತಿವಾದಿಗೆ ಈ ಮೂಲ್ಕ ತೀರಿಸಬಡಿ ಸುವುದೇನೆಂದ್ರೆ—

ನೀವು ವಾದಿಗೆ ತಾ. 26.7.1965ರಲ್ಲಿ ರೂಪಾಯಿ 800.00ಕ್ಕೆ ಬರಕೊಟ್ಟ ದಿವಾಂಡು ನೋಟಿನ ಬಾಕಿ ಉಸಲು ಬಡ್ಡಿ ಕಾಣಿಗೆ ಬಗ್ಗೆ ವಾದಿಯು ಮೂಡಿದ ಮೇಲಿನ ದಾವೆಯು ತಾರೀಕು 21-1-1972ಕ್ಕೆ ತನ್ನಿಗೆ ಯಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪಯಿದ್ದರೆ ಆದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪಿಸಿರು ಮೂಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ನಿಮಗೆ ತಿಳಿಸಿರುತ್ತದೆ.

By Order of the Court.

Y. Tejappa Shetty.
Advocate for Plaintiff.

Coondapoor. 11-12-1971.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ **English Made Easy**

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ : ರೂ. 2—00

Letter Writing Made Easy **ಸುಲಭದಲ್ಲಿ ಪತ್ರಲೇಖನ**

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ ಬೆಲೆ : ರೂ. 1—50

ಮನೆ-ಮದ್ದು **Home Remedies**

ಡಾ| ವಿ. ಆರ್. ಕೊರಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಹೂಡುವ ಸುಲಭ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟಿ

ಸಂಗ್ರಾಹ್ಯ ಪುಸ್ತಕ. ಬೆಲೆ : ರೂ. 2—00

ವಿ. ಸೂ. ವಿ. ಪಿ. ಹೂಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 80 ಸೈಸೆ ಅಂಚೆ ವೆಚ್ಚ ಸೇರಿಸಿ ಮನಿಯಾರ್ಡರು ಮೂಡಿದರೆ ಬುಕ್ ಪೋಸ್ಟ್ ಮೂಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಕಾಲುಕೋಟಿ, ಉಡುಪಿ.

ರಾಮಕುಂಜೇಶ್ವರ ಹೈಸ್ಕೂಲ್ ವರ್ಧಂತ್ಯುತ್ಸವ

ದ. ಕ. ಜಿಲ್ಲೆಯ ರಾಮಕುಂಜದ ಶ್ರೀ ರಾಮಕುಂಜೇಶ್ವರ ಹೈಸ್ಕೂಲಿನ 20ನೇ ವಾರ್ಷಿಕೋತ್ಸವವು ಅಲಿಕೆ ಲೋಕ ಸೇವಾ ವೃಂದದ ಅಧ್ಯಕ್ಷ ಶ್ರೀ ಎಂ. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಕಳೆದ 10ರಂದು ವಿಜೃಂಭಣೆಯಿಂದ ಜರಗಿತು. ಅಧ್ಯಕ್ಷರು ಭಾಷಣ ಮಾಡುತ್ತಾ ದೇವರು ಮಾತಾಪಿತೃಗಳು ಮತ್ತು ಅಧ್ಯಾಪಕರಲ್ಲಿ ವಿದ್ಯಾರ್ಥಿಗಳಿಗೆ ಭಕ್ತಿಯೂ, ದೇಶ ಪ್ರೇಮವೂ ಆತ್ಯಾವಶ್ಯಕವೆಂದು ಪ್ರತಿಪಾದಿಸಿದರು. ಪ್ರಧಾನಾಧ್ಯಾಪಕ ಶ್ರೀ ಎಸ್. ಹರಿಪ್ರಸಾದರಾಯರು ನರದಿವಾಚನವನ್ನು ಮಾಡಿದರು. ಮಹಾನೀಯರಿಂದ ಬಂದ ಸಂದೇಶಗಳನ್ನು ಶ್ರೀ ಎಸ್. ನಾರಾಯಣ ತಲ್ಲುಗಾಯರು ಓದಿದರು. ಶಾಲಾ ಕರೆಸ್ಪೊಂಡೆಂಟ್ ಶ್ರೀ ಎನ್. ಕೃಷ್ಣಾಚಾರ್ಯರು ಸಭಾಂತ್ಯದಲ್ಲಿ ಧನ್ಯವಾದಪತ್ತರು. ಪಾಠ ಆಟಗಳಲ್ಲಿ ಜಯಶಾಲಿಗಳಾದ ಶಾಲಾ ವಿದ್ಯಾರ್ಥಿಗಳಿಗೆ ಮತ್ತು ವಿವಿಧ ಆಟಗಳಲ್ಲಿ ಜಯಶಾಲಿಗಳಾದ ಊರಿನ ಎಲಿಮೆಂಟರಿ ಶಾಲೆಗಳ ವಿದ್ಯಾರ್ಥಿಗಳಿಗೆ ಬಹುಮೂನ ವಿತರಣೆಯಾಯಿತು. ಸಭಾ ಕಾರ್ಯಕ್ರಮ ಮುಗಿದಮೇಲೆ ಹೈಸ್ಕೂಲಿನ ಬಾಲಕ ಬಾಲಕಿಯರಿಂದ ಪ್ರತ್ಯೇಕ ಎರಡು ಕನ್ನಡ ನಾಟಕಗಳೂ ಮತ್ತು ಹಲೆ ವಿದ್ಯಾರ್ಥಿಗಳಿಂದ ಹಾಗೂ ಊರಿನ ಕಲಾಪ್ರೇಮಿಗಳಿಂದ ಒಂದು ತುಳು ನಾಟಕವೂ ಅಭಿನಯಿಸಲ್ಪಟ್ಟತು.

ಗೇಣಿ ರೈತರ ಪ್ರತಿಭಟನಾ ಸಭೆಗಳು

ಉಡುಪಿ ತಹಶಿಲ್ದಾರರ ಉಚ್ಚಾಟನೆ ನಿರ್ಣಯ ಪ್ರತಿಭಟನಾ ಸಮಿತಿಯ ಆಶ್ರಯದಲ್ಲಿ ರೈತರಿಗೆ ಸಂಬಂಧಿಸಿದ 9 ಕೇಳಿಕೆಗಳಿಗಾಗಿ ಪ್ರಚಾರಪ್ರಕ್ಷೋಭೆ ಚಳವಳಿ ನಡೆಸಲು ಉಡುಪಿ ತಾಲೂಕಿನಾದ್ಯಂತ ಗೇಣಿದಾರ ರೈತರ ಸಾರ್ವಜನಿಕ ಸಭೆಗಳು ಜರಗಿದವು. ಪ್ರತಿಭಟನಾ ಸಮಿತಿಯ ಕನ್ವೀನರ್ ಶ್ರೀ ಶಿರ್ವಾದಿ ವಿಲಿಯಂ ಪಿಂಟೋರವರು ಸಭೆಗಳಲ್ಲಿ ಪ್ರತಿಭಟನಾ ಸಮಿತಿಯ ಉದ್ದೇಶ ಮತ್ತು ಚಟುವಟಿಕೆಗಳನ್ನು ವಿವರಿಸಿ ಜನಜಾಗೃತಿಯನ್ನುಂಟು ಮಾಡಿದರು. ಸಮಿತಿಯ ಸದಸ್ಯರಾದ ಜ್ಯಾಕಿಡಿ ಶೀನಪ್ಪ ಶೆಟ್ಟಿ, ಬಿ. ಎಸ್ ಲೂವಿಸ್, ಎಂ. ಕೊರಗ ಶೆಟ್ಟಿ, ಡೇವಿಡ್ ಕರ್ಕಡ, ಕಾಳಪ್ಪ ಶೆಟ್ಟಿ, ದಾಸ ಶೇರಿಗಾರ, ಮರ್ಡಿ ಗೋವಿಂದ ಶೆಟ್ಟಿ ಮೊದಲಾದವರು ಅಲ್ಲಲ್ಲಿಯ ಸಭೆಗಳಲ್ಲಿ ಮೂತನಾಡಿ ಚಳವಳಿಯನ್ನು ಬಲಪಡಿಸುವಂತೆ ವಿನಂತಿಸಿದರು. ದೇಶದಲ್ಲಿ ತುರ್ತು ಪರಿಸ್ಥಿತಿ ಇರುವುದರಿಂದ ರೈತರೆಲ್ಲರೂ ಸರಕಾರಕ್ಕೆ ಬೆಂಬಲ ನೀಡಬೇಕೆಂದೂ ಮುಂದಿನ ಸಭೆಗಳನ್ನು ನಿಷೇಧಿಸಲಾಗಿದೆ ಎಂಗೂ ಆಲಿವೂರಲ್ಲಿ ಜರಗಿನ ಸಭೆಯಲ್ಲಿ ಶ್ರೀ ಪಿಂಟೋರವರು ಜ್ಞಾಪಿಸಿರು ಪಡಿಸಿದರು.

Edited, Printed & Published by K. H. Shetty at the Navayuga Press, Udipi, S. India.

ಸ್ಥಾಪಕರು :
ದಿ| ಎ. ಬಿ. ಶೆಟ್ಟಿ

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ ಪ್ರಮುಖ ಕನ್ನಡ ವಾರಪತ್ರಿಕೆ

ಉಡುಪಿ, 30—12—1971

ಸಂಪುಟ ೫೧
ಸಂಚಿಕೆ ೧೭

Vol. 51
No. 17

ಚಾರುಚಯನ

ಭುಟ್ಟೊ ಮಹಾಶಯರ ಪಟ್ಟಾಭಿಷೇಕ

ಅಧ್ಯಕ್ಷ ಆಯೂಬಖಾನರು ತನ್ನ ವಿದೇಶ ಮಂತ್ರಿ ಜುಲ್‌ಫಿಕರ್ ಅಲಿ ಭುಟ್ಟೊರ ಸಲಹೆಯಂತೆ, ಅಗ್ರಹದಂತೆ ಗಡಿಭಾಗದಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿದರು. ಆಗತಾನೇ ಹೊಸತಾಗಿ ಸಂಪಾದಿಸಿದ ಸ್ನೇಹಿತ ಕೆಂಪು ಚೀನಾ ತನಗೆ ಸಹಾಯ ಮಾಡುವುದೆಂದು ಭುಟ್ಟೊ ಬಲವಾಗಿ ನಂಬಿದ್ದರು.

ಆ ಸಮಯಕ್ಕೆ ಭಾರತ-ಚೀನಾ ಸಂಬಂಧ ಹದಗೆಟ್ಟು ಅದು ಚೀನೀಯರ ದುರಾಕ್ರಮಣದಲ್ಲಿ ಪರ್ಯವಸಾನ ಹೊಂದಿತ್ತು. ಕೊಲಂಬೋ ಸಲಹೆಗಳನ್ನು ಕೆಂಪು ಚೀನಾ ತಿರಸ್ಕರಿಸಿದ್ದರಿಂದ, ಪರಿಸ್ಥಿತಿ ಶೋಚನೀಯವಾಗೇ ಇತ್ತು.

ಚೀನಾವನ್ನು ತೃಪ್ತಿಪಡಿಸಲು ಪಾಕಿಸ್ತಾನದ ದಂಡಾಧಿಕಾರಿ ಅಯೂಬಖಾನರು ಭುಟ್ಟೋರ ಪುರೋಹಿತತನ ಪಾಕ್ ದಲ್ಲಿ ಅಕ್ರಮಿತ ಕಾಶ್ಮೀರದ ಒಂದು ಭಾಗವನ್ನು ಉಡುಗೊರೆಯಾಗಿ ನೀಡಿದರು. ನಮಗೂ ನಿಮಗೂ ಗಡಿ ವಿವಾದವಿಲ್ಲವೆಂದೊಮ್ಮೆಗೆ ಕೈ ಕುಲುಕಿದರು.

ಅಮೆರಿಕೆಯು ಕಮ್ಯುನಿಜಂ ವಿರುದ್ಧ ಆತ್ಮರಕ್ಷಣೆಗೆಂದು ಉದಾರವಾಗಿ ನೀಡುತ್ತ ಬಂದಿದ್ದ ಪ್ಯಾಟನ್ ಟ್ಯಾಂಕುಗಳು, ಸೇಬರಜೆಟ್ ವಿಮಾನಗಳು, ಬಾಂಬರುಗಳನ್ನು ಅಯ್ಯೂಬರು ಗಡಿಭಾಗದಲ್ಲಿ ಭಾರತದ ವಿರುದ್ಧ ಬಳಸಿಕೊಂಡರು. ಕೆಂಪು ಚೀನಾ ನೀಡಿದ್ದ ಎಣಿಕೆಯಷ್ಟು ಶಸ್ತ್ರಾಸ್ತ್ರಗಳನ್ನೂ ಎತ್ತಿಕೊಂಡರು

ಆದರೆ, ಭುಟ್ಟೊ ಎಣಿಕೆ ತಪ್ಪಾಯಿತು ಪಾಕಿಸ್ತಾನವು ಅರಬ ದೇಶಗಳಿಂದೆಲೂ ಭಾರಿ ನೆರವು ನಂಬಿತ್ತು, ಕೆಂಪು ಚೀನಾದ ಶಸ್ತ್ರಶಾಲೆ ಇಸ್ಲಾಮಾಬಾದಕ್ಕೇ ಸ್ಥಾನಾಂತರಗೊಳ್ಳುವುದೆಂದು ವಿಶ್ವಾಸವಿಟ್ಟಿತ್ತು. ಆವರ ಹೊಂಚು ತಲೆಕೆಳಗಾಯ್ತು.

ಅಯ್ಯೂಬಖಾನರು ಸೋಲಿನ ದವಡೆಯಿಂದ ತಪ್ಪಲೆಂದು ತಾಷ್ಕೆಂಟ್ ಒಡಂಬಡಿಕೆಗೆ ಒಪ್ಪಿಕೊಂಡರು. ಭಾರತ ಪ್ರಧಾನಿ ಶಾಸ್ತ್ರಿಯವರು ಸಂಶಯಪ್ಪದ ರೀತಿಯಲ್ಲಿ 'ತಾಷ್ಕೆಂಟ್ ವೀರ'ರಾಗಿ ವೀರಘಾಟದಲ್ಲಿ ಚಿರಶಾಂತಿಹೊಂದಿದರು.

ಸಮರವಿರಾಮಕ್ಕೆ ಒಪ್ಪಿದ ಅಯ್ಯೂಬರು ತನ್ನ ದೇಶೀಯರ ಪ್ರಬಲ ವಿರೋಧವನ್ನೇ ಎದುರಿಸಬೇಕಾಯಿತು. ಇದಕ್ಕೆಲ್ಲ ನಾಯಕ ಭುಟ್ಟೊ. ಭಾರತಪ್ರೇಷಪು ರೋಮಗಳಲ್ಲಿ ತುಳುಕುತ್ತಿರುವ ಈ ಯುವಜನಸಿಗೆ ಸಮರವಿರಾಮ ಸುತರಾಂ ಇಷ್ಟವಿರಲಿಲ್ಲ.

ಅವರು ಸೇನೆಯನ್ನೂ ಛೇದೋಪಾಯದಿಂದ ಒಡೆದುತನಗೆ ನಿಷ್ಠವಾದ ತುಕುಡಿಯೊಂದನ್ನು ಗುಪ್ತವಾಗಿ ರಚಿಸಿಕೊಂಡರು. ಈ ಮಹಾಶಯರನ್ನು ದೈಹಿಕ ಚಿಕಿತ್ಸೆಗೆಂದು ಅಯ್ಯೂಬಖಾನರು ಪಾಕಿಸ್ತಾನದಿಂದ ಹೊರಕಳಿಸಿದರೂ ಬೇಗನೇ ಗುಣಮುಖನಾಗಿ ಭುಟ್ಟೊ ಮರಳಿಬಂದರು. ಸೇನೆಯೊಳಗೂ ಹೊರಗೂ ತನಗೆ ವಿರೋಧ ಬಲಿಯುತ್ತಿರುವುದನ್ನು ಮನಗಂಡ ಅಯ್ಯೂಬಖಾನರು 'ಪಾಕಿಸ್ತಾನದ ಉಳಿವಿಗಾಗಿ ಪದವಿ ತ್ಯಜಿಸಿದ ನಾಯಕ ಯೂಹ್ಯಾಖಾನರಿಗೆ ಪಾಕಿಸ್ತಾನದ ರಕ್ಷಣೆಯ ಭಾರ ಹೊರಿಸಿ ನಿರ್ಗಮಿಸಿದರು.

ಆದಷ್ಟು ಶೀಘ್ರವಾಗಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಿ, ಪ್ರಜಾಸತ್ತೆಯನ್ನು ಸಂಸ್ಥಾಪಿಸಿ ತಾನು ಆದಂಡಿನಾಡಳಿತೆಯನ್ನು ಹಿಂದೆಗೆಯುವುದಾಗಿ ಯೂಹ್ಯಾಖಾನರು ಪಾಕ್ ಜನತೆಗೆ ವಚನ ನೀಡಿದ್ದರು.

ಪ್ರಾಯಃ ಅಧಿಕಾರಕ್ಕೆ ಬಂದ ಮೇಲೆ ತಾನು ನೀಡಿದ ವಚನಗಳನ್ನು ಮರೆಯುವುದು ಸಂಪ್ರದಾಯವೋ ಏನೋ! ಯೂಹ್ಯಾಖಾನರೂ ಸಂವಿಧಾನವನ್ನುಘೋಷಿಸಿಕೊಂಡರು; ಕಿಸ್ಸ ಪೀರವನ್ನು ಭದ್ರ ಪಡಿಸಿಕೊಂಡರು ಚುನಾವಣೆಗಳನ್ನು ಮಾತ್ರ ಮುಂದೆ ಹಾಕತೊಡಗಿನರು.

ಕೊನೆಗೂ ೧೯೭೦ರ ದಶಂಬರದಲ್ಲಿ ಚುನಾವಣೆಗಳು ನಡೆದುವು. ಈ ಹೊತ್ತಿಗೆ ಭಾರತ ದ್ವೇಷಿ ಭುಟ್ಟೋ ಮರಳಿ ತನ್ನ ಕಾರುಬಾರಿಗೆ ತೊಡಗಿದ್ದರು.ಪಶ್ಚಿಮ ಪಾಕಿಸ್ತಾನದ ಜನತೆಯಲ್ಲಿ ಭಾರತ ಸ್ನೇಹದ ಭಾವನೆಯನ್ನು ಮತ್ತೆ ಸಜೀವಗೊಳಿಸತೊಡಗಿದರು.

ಪೂರ್ವ ಪಾಕಿಸ್ತಾನದಲ್ಲಿ ಶೇಕ ಮುಜಿಬುರ್ ರೆಹಮಾನರ ಅವಾಮಿಲೀಗು ಸರ್ವೇ ಸಾಮಾನ್ಯ ಎಲ್ಲ ಸ್ಥಾನಗಳನ್ನೂ ಗೆದ್ದು, ಇಡಿಯ ಪಾಕಿಸ್ತಾನದ ಎಸೆಂಬ್ಲಿಯಲ್ಲೇ ಬಹುಮತ ಗಳಿಸಿತು ಅವಾಮಿ ಲೀಗಿನ ನೀತಿ-ಘೋರಣೆಗಳು ಪಶ್ಚಿಮ ಪಾಕಿಗೆ ತಲೆಶೂಲೆ.

ತನ್ನ ಲೆಕ್ಕಾಚಾರ ತಲೆ ಕೆಳಗಾದದ್ದರಿಂದ ಯೂಹ್ಯಾಖಾನರು ಭುಟ್ಟೊಗೆ ಶರಣಾಗತರಾಗಬೇಕಾಯ್ತು. ಭುಟ್ಟೊ ಸಲಹೆಯಂತೆ ನಡೆಯಬೇಕಾಯ್ತು. ಸೇನೆಯಲ್ಲಿ ಭುಟ್ಟೋಸರರು ಅಧಿಕಾರದಲ್ಲಿದ್ದರಿಂದ ಯೂಹ್ಯಾಖಾನರು ಆವರ ವಶವರ್ತಿಗಳಾದರು. ಪೂರ್ವ ಪಾಕಿಸ್ತಾನ ಏಕಪಕ್ಷೀಯವಾಗಿ ಸ್ವಾತಂತ್ರ್ಯ ಘೋಷಿಸಿಕೊಳ್ಳುವುದಕ್ಕೆ ಅವಕಾಶ ಮೂಡಿಕೊಟ್ಟರು.

ಈಗಲಾದರೂ ತಪ್ಪನ್ನು ತಿದ್ದಿಕೊಳ್ಳಬಹುದಿತ್ತು ಆದರೆ, ಅಮೆರಿಕೆ-ಚೀನಿ ಶಸ್ತ್ರಾಸ್ತ್ರಗಳು ಅವರನ್ನು ಸಮರೋನ್ಮಾದಕ್ಕೆ ಗುರಿ ಮಾಡಿದುವು.ಬಂಗ್ಲಾದ ಬಂಗಾಳಿ ಬುಡಗಟ್ಟಿನವರಿಗಿಂತ ಪುರಾಣರಾದ ನಾವು ಶ್ರೇಷ್ಠರೆಂಬ ಹೆಗ್ಗಳಿಕೆ ಅವರದ್ದು. ಆದುದರಿಂದಲೇ ಮುಂದಿನ ಅಸಮರ್ಥ ಪರಂಪರೆ.

ಶೇಕ ಮುಜೀಬುರರ ಬಂಧನ, ನ್ಯಾಯ ವಿಚಾರಣೆಯ ನಾಟಕ, ಅವರ ಪಕ್ಷಕ್ಕೆ ಬಹಿಷ್ಕಾರ- ನರಮೇಧ-ಭಾರತದೊತನೆ ಸಮರ-ಬಾಂಗ್ಲಾ ವಿಮೋಚನೆ-ಸಮರ ವಿರಾಮ-ಒಂಬತ್ತು ತಿಂಗಳ ಅವಧಿಯಲ್ಲಿ ಒಂಭೈನೂರು ಅನ್ಯಾಯಗಳು ನಡೆಯುತ್ತಲೇ ಹೋದುವು.

ಪಾಕ್ ಸೇನಾ ನಾಯಕರೂ ಅಧಿಕಾರಿಗಳೂ ಪಾಕಿಸ್ತಾನದ ಜನತೆಯನ್ನು ವಂಚಿಸಿದರು. ಪಾಕಿಸ್ತಾನವು ಭಾರತಕ್ಕೆಂತಲೂ ಪ್ರಬಲ ರಾಷ್ಟ್ರವೆಂಬ, ಪಾಕ್ ಸೇನೆ ಸೈನಿಕ-ಶಕ್ತಿ ಭಾರತೀಯ ಸೇನೆ-ಸೈನಿಕ ಶಕ್ತಿಯಿಂದ ಹಿರಿದೆಂಬ ಹೆಗ್ಗಳಿಕೆ ಹಾರಿಸಿ ಪಾಕ್ ಜನತೆಯಲ್ಲಿ ವಿಜಯ ಸಮರೋನ್ಮಾದವನ್ನೇ ಹುಟ್ಟಿಸಿ ಬೆಳೆಸಿ ಬಂದವರು ಅವರು.

ತಮ್ಮಲ್ಲಿ ಅಮೆರಿಕೆ ಚೀನಾ ಕರಬ ವಿತ್ರರು ನೀಡಿದ ಶಸ್ತ್ರಾಸ್ತ್ರಗಳಿವೆಯೆಂದೂ ಇವುಗಳ ಬಲದಿಂದ ತಾವು ವಿಜಯಿಯಾಗುವುದು ನಿಸ್ಸಂದೇಹವೆಂದೂ ಅಬ್ಬರಿಯಲು ಪ್ರಚಾರ ಮಾಡುತ್ತಲೇ ಬಂದರು.

ತಮ್ಮಂತೆಯೇ ಭಾರತ ಬಡದೇಶ, ಶಸ್ತ್ರಾಸ್ತ್ರಗಳಿಗೆ ವಿದೆರಿಗಳನ್ನೇ ಅವಲಂಬಿಸಿದೆಯೆಂದು ನಂಬಿಸ್ದ ಪಾಕ್ ಜನತೆ ಅಧಿಕಾರಿಗಳ ಮಾತನ್ನೇ ನಂಬಿತು. ಸಮಾನದ ಸತ್ಯ ಸಂಗತಿಗಳನ್ನೆಲ್ಲ ಮರೆ ಮಾಚಿ ಪಾಕ್ ನಿಜಯ ಪಥದಲ್ಲಿದೆಯೆಂದು ಆಲ್ಲಿನ ಆಕಾಶವಾಣಿ-ಪತ್ರಿಕೆಗಳು ವರದಿ ನೂಡಿದುವು.

ಬಂಗ್ಲಾ ತಮ್ಮ ಕೈಬಿಟ್ಟಿತೆಂದು ಪಾಕ್ ಜನತೆಗೆ ತಿಳಿದಾಗ ಆವರ ದೇಶ ಸೋತು ಸುಣ್ಣವಾಗಿತ್ತು; ಯೂಹ್ಯಾಖಾನರು ಸಮರ ವಿರಾಮಕ್ಕೆ ಒಪ್ಪಿಕೊಂಡಾಗಿತ್ತು.

ಪಾಕ್ ಜನತೆಯ ಕ್ರೋಧ ಯೂಹ್ಯಾಖಾನರ ಮೇಲೆ ತಿರುಗಿತು. ಸುಳ್ಳು ಸುದ್ದಿಯನ್ನು ಪ್ರಚುರಪಡಿಸಿದ, ಪಾಕ್ ಜನತೆಯನ್ನು ವಂಚಿಸಿದ, ಪಾಕ್ ಸೈನಿಕ ಬಲದ ನಿಜಸ್ವರೂಪನನ್ನು ಪ್ರದರ್ಶಿಸಿ ರಾಷ್ಟ್ರಗೌರವನವನ್ನು ಭಗ್ನಗೊಳಿಸಿದ ಆರೋಪ ಅವರ ಮೇಲೆ.

ಯೂಹ್ಯಾ ವಿರುದ್ಧ ಪ್ರಬಲ ಪ್ರದರ್ಶನ, ಅವರ ಮನೆಯ ಜಲನ-ವಿರುದ್ಧ ಘೋಷಣೆ-ಭಿತ್ತಿಪತ್ರ- ಪ್ರತಿಮೂದಹನ- ಯೂಹ್ಯಾಖಾನರ ಜೀವಂತ ಮರಣ.

ಅಮೆರಿಕೆಯಿಂದ ಭುಟ್ಟೊಗೆ ಕರೆ-ಅವರ ತವರಿದ ಆಗಮನ. ಪಾಕಿಸ್ತಾನದ ಸರ್ವಾಧಿಕಾರ ಸ್ವೀಕಾರ. ಬಂಗ್ಲಾದ ಏಕಮಾತ್ರ ಪ್ರತಿನಿಧಿ ನೂರಲ್ ಅಮೀನರು ಪ್ರಧಾನಿಪಟ್ಟ ಸ್ವೀಕರಿಸಲು ಹೆದರಿದ್ದರಿಂದ ಭುಟ್ಟೊರಿಗೆ ಪಟ್ಟಾಭಿಷೇಕ.

ಭುಟ್ಟೊ ಬಹುವರ್ಣೀಯ; ಇನ್ನೂ ಅರಿಯಲಿಲ್ಲೆಯ. ಭಾರತ ವಿದ್ವೇಷಿಗಳಲ್ಲಿ ಅಗ್ರಗಣ್ಯ ಭಾರತದ ಬಲವಲ್ಲಿ ಅವರಿಗೆ ಪೂರ್ಣ ವಿಶ್ವಾಸ. ಸೋವಿಯತ್ತಿನ ಮಿಲಿಟರಿ ನೆರವಿನಿಂದಲೇ ಭಾರತ ಹೋರಾಡಿತೆಂದು ಇಂದೂ ಅವರಿಗೆ ದೃಢವಿಶ್ವಾಸ.

ಸರ್ವಾಧಿಕಾರ ಸ್ವೀಕಾರದೊಡನೆಯೇ ಅವರ ರೇಡಿಯೋ ಭಾಷಣ,ಕಾಲಮಿತಿಯಿಲ್ಲ, ಪೂರ್ವ ತಯಾರಿಗೆ ಬಿಡುವೇ ಇಲ್ಲ.ಒಂದುತಾಸು ಕಾಲಹರಣ-ರಾಜ್ಯಕಾರಣಿಯ ಚುನಾವಣಾ ಭಾಷಣ.

ಅವರು ಮುಟ್ಟಿದ್ದು ಮೂರಂಶ-ಒಂದು-ಭಾರತದೊಡನೆ ಸಮರ ನಿಲ್ಲಲಿಲ್ಲ; ಸೇಡಿಗೆ ಸೇಡನ್ನು ಕಾಪಿರರೊಂದಿಗೆ ತೀರಿಸಿಯೇ ಬಿಡುತ್ತೇನೆ.

ಎರಡು-ಅವಾಮಿಲೀಗಿನ ಮೇಲಿನ ಬಹಿಷ್ಕಾರ ಕೆತ್ತು ಹಾಕಿದ್ದೇನೆ. ನಮ್ಮ ಬಂಗ್ಲಾ ಮಿತ್ರರು ನಮ್ಮ ತಪ್ಪನ್ನು ಮನ್ನಿಸಬೇಕು. ಅವರೊಡನೆ ಮತುಕತೆಗೆ ನಾನು ಸಿದ್ಧ.

ಮೂರು-ಪಾಕ್ ಜನತೆಯೇ; ಬಂಗ್ಲಾವನ್ನು ಭಾರತ ಗೆದ್ದುಕೊಳ್ಳಲಿಲ್ಲ, ರಷ್ಯ ಗೆದ್ದುಕೊಂಡಿದೆ ನನಗೆ ಕೆಲವು ಸಮಯದ ಅವಕಾಶ ಕೊಡಿ, ನಿಮ್ಮೆಲ್ಲರನ್ನೂ ಉದ್ಧರಿಸುತ್ತೇನೆ.

(ಒಂಭತ್ತನೇ ಪುಟ ನೋಡಿರಿ)

ಜ್ಞಾಪಕಶಕ್ತಿ

ನೆನಪು ಎಂದರೆ ಏನು? ಅನಾದಿ ಕಾಲದಿಂದಲೂ ಮನುಷ್ಯನು ಈ ಪ್ರಶ್ನೆಯಲ್ಲಿ ಆಸಕ್ತಿ ವಹಿಸಿದ್ದಾನೆ. ಈ ಒಂದು ಆಸಕ್ತಿಯು ಸಹಜವೇ ಆಗಿದೆ. ಯಾಕೆಂದರೆ ಬಾಹ್ಯ ಜಗತ್ತಿನ ಅರಿವು, ಶಿಕ್ಷಣ, ನೈಪುಣ್ಯ ಕೌಶಲ್ಯ, ಸಂಪಾದನೆ ಮೊದಲಾದನೆಲ್ಲವೂ ದೊರೆತ ನೂಹಿತಿಯನ್ನೆಲ್ಲ ರಕ್ಷಿಸಿಡುವ ನಮ್ಮ ಮಿದುಳಿನ ಈ ಅದ್ಭುತ ಶಕ್ತಿಯನ್ನೇ ಅವಲಂಬಿಸಿವೆ. ಆದರೆ ಈ ಜ್ಞಾಪಕ ಶಕ್ತಿಯೆನ್ನುವುದು ಸುತ್ತಲಿನ ಜಗತ್ತಿಗೆ ಸಂಬಂಧಪಟ್ಟ ಜ್ಞಾನಕ್ಕಿಂತ ಹೆಚ್ಚಿನ ಸಂಗತಿಯೂಗಿದೆಯೆಂಬುವುದನ್ನು ಮಾತ್ರ ನಾವೆಲ್ಲರೂ ತಿಳಿದುಕೊಂಡಿಲ್ಲ ಒಬ್ಬರ ಜ್ಞಾಪಕ ಶಕ್ತಿಯೆಂದರೆ, ಅವರದೇ. ಅವರೇ ಎಂದು ಹೇಳಬಹುದು. ಯಾಕೆಂದರೆ ಒಬ್ಬರ ವೈಶಿಷ್ಟ್ಯ, ಬೇರೆ ಜನರ ಬಗ್ಗೆ ಜನರ ನಡೆನಳಿಕೆ ಮತ್ತು ಸಂಗತಿಗಳು ಕಾಣಿಸಲ್ಪಟ್ಟ ಸಮೂಚಾರದಿಂದ ಮಾತ್ರವೇ ನಿರ್ಧರಿಸಲ್ಪಡುವುದಿಲ್ಲ. ಆವರೆ ಬೇರೆಯವರೊಡನೆ ಇವರ ಸಂಪರ್ಕ ಕಾಲದಲ್ಲಿ ಪ್ರಕಟಗೊಳ್ಳುವ ಭಾವನೆಗಳ ಕುರುಹುಗಳಿಂದ ಒಬ್ಬವಾ ಜೀವನದಲ್ಲಿಯ ಸಂಗತಿಗಳಿಂದುಂಟಾಗುವ ಭಾವನಾತ್ಮಕ ಅನುಭವಗಳಿಂದಲೂ ನಿರ್ಣಯಿಸಲ್ಪಡುತ್ತವೆ.

ಮನುಷ್ಯನ ಮಿದುಳು ಒಟ್ಟಿಲ್ಲ ಮೂಲ ಕೋಶಗಳಿಂದ ಕೂಡಿದೆ. ಮನುಷ್ಯನ ಜಂತರಿಕ ಮತ್ತು ಬಾಹ್ಯಲೋಕಕ್ಕೆ ಸಂಬಂಧವಪ್ಟ ಸಮಾಚಾರವು ಇವೆಲ್ಲಿ ಹೇಗೆ ದಾಖಲೆಗೊಳ್ಳುತ್ತವೆ?

ಸ್ವೀಡಿಷ್ ವಿಜ್ಞಾನಿಗಳಾದ ಹೆಡ್ಡೆನ್ ಅವರ ಆಧಾರ ಕಲ್ಪನೆಯ ಪ್ರಕಾರ, ಮಿದುಳಿನ ಕೋಶಗಳಲ್ಲಿರುವ ರಿಬೊನ್ಯೂಕ್ಲೇಕ್ ಆಮ್ಲದ ಸಂಕೀರ್ಣ ಅಣುಗಳ ಮೇಲೆ ಜೀವ ರಾಸಾಯನಿಕ ಸಂಜ್ಞೆ ಸಾಧನೆಗಳಿಂದ ಸಮಾಚಾರವು ದಾಖಲೆಗೊಳ್ಳುತ್ತದೆ. ಈ ಅಭಿಪ್ರಾಯದ ಪ್ರಕಾರ, ರಿಬೊನ್ಯೂಕ್ಲೇಕ್ ಆಮ್ಲವು ಒಂದು ತರಹ 'ಟೇಪ್' ನಂತೆ ಕೆಲಸ ಮಾಡುತ್ತದೆ; ಮಿದುಳು ಪಡೆದ ಸಂಕೇತಗಳು ಇದರ ಮೇಲೆ ಒಂದು ವಿಶಿಷ್ಟ ಸಂಜ್ಞೆ ಮೂಲಕ ದಾಖಲೆಗೊಳ್ಳುತ್ತದೆ. ಅನೇಕ ಜನ ವಿಜ್ಞಾನಿಗಳು ಪರೀಕ್ಷಿಸಿ ನೋಡಿದ ಬಳಿಕ, ಈ ಆಧಾರ ಕಲ್ಪನೆಯು ದೃಢಪಡಲಿಲ್ಲ.

ಶಿಕ್ಷಣದ ಕಾಲದಲ್ಲಿ, ಹೊಸ ಸಮೂಚಾರವು'ಉರು ಹಾಕಲ್ಪಡುತ್ತಿರುವಾಗ' ಮೂಲ ಕೋಶಗಳ ನಡುವಣ ಸಂಪರ್ಕಗಳ ಸಂಕೀರ್ಣ ರಚನೆಯಲ್ಲಿ ಆಯ್ದು ಬದಲಾವಣೆಗಳು ನಡೆಯುತ್ತನೆಯೆನ್ನುವುದಕ್ಕೆ ಪೋಕ್ಷ ರುಜುವಾತುಗಳು ಇವೆ. ಈ ಬದಲಾವಣೆಗಳನ್ನು ಸೈನಾಪ್ಸಸ್ ಎಂದು ಕರೆಯಲಾಗುತ್ತದೆ. ಮಿದುಳು ಸ್ವೀಕರಿಸಿದ ಸಮಾಚಾರ ವಹನೆಯಲ್ಲಿ ಇವು ತುಂಬಾ ಮಹತ್ವದ ಪಾತ್ರಗಳನ್ನು ನಿರ್ವಹಿಸುತ್ತವೆ. ಮೂಲ ಕೋಶರಗಳು ಉತ್ಪಾದಿಸುವ ಒತ್ತಡಗಳ ರೂಪದಲ್ಲಿ—ಈ ಸಮೂಚಾರವು ಮಿದುಳಿನಲ್ಲಿ ಪ್ರತಿಬಿಂಬಿಸಲ್ಪಡುತ್ತಿರುತ್ತದೆ. ಒತ್ತಡಗಳ ಸ್ವೀಕೃತಿಯ ನಂತರ ನಡೆಯುವ ಸೈನಾಪ್ಸಸ್‌ನ ತೀವ್ರ ರೀತಿಯ ಚಟುವಟಿಕೆಯೊಡನೆ ಜೀವುಗಳ ಪುನಾರಚನೆಯು ನಡೆಯುತ್ತದೆ. ಇದರ ಫಲವಾಗಿ ಕೆಲವೊಂದು ಪ್ರಭಾವವು ಪುನರಾವೃತ್ತಿಗೊಂಡಾಗ ಪ್ರಾಯಶಃ ಸೈನಾಪ್ಸಸ್, ಬೇರೆ ಮೂಲ ಕೋಶಗಳಿಗೆ ಸಮೂಚಾರವನ್ನು ಪ್ರವಹಿಸುವುದಕ್ಕೆ ಇನ್ನಿಷ್ಟು ತೀವ್ರವಾದ ಸಾನುರ್ಯವನ್ನು ಪಡೆಯುತ್ತಿರಬೇಕು. ಈ ರೀತಿಯಲ್ಲಿ ಈ ಸಂಪರ್ಕಗಳು ಜ್ಞಾಪಕ ಶಕ್ತಿಯ ನ್ಯಾಸದಾರಿಗಳಂತೆ ಕಾರ್ಯಮಾಡುತ್ತವೆ.

ಮಕ್ಕಳಲ್ಲಿಯ ಜ್ಞಾಪಕ ಶಕ್ತಿ ಮತ್ತು ಅದರ ಬೆಳವಣಿಗೆಯನ್ನು ಅಭ್ಯಸಿಸುವುದು ವಿಶೇಷವಾಗಿ ಪ್ರತ್ಯಕ್ಷ ಮಹತ್ವದಿಂದ ಕೂಡಿದೆ. ಶಾಲೆಯಲ್ಲಿ ಬಾಲಕನೊಬ್ಬನು ತೋರಿಸುವ ಪ್ರಗತಿಯು ಬಹುಮಟ್ಟಿಗೆ-ಜ್ಞಾಪಕ ಉಪಕರಣದ ಪಕ್ವತೆ, ಜ್ಞಾಪಕಶಕ್ತಿಯ ಸ್ಥೈರ್ಯತೆಯ ಮಟ್ಟ ಮತ್ತು ಅದರ ವಿಶಿಷ್ಟ ಲಕ್ಷಣಗಳನ್ನೇ ಅವಲಂಬಿಸಿರುತ್ತದೆ.

ಜ್ಞಾಪಕಶಕ್ತಿಯನ್ನು ಹೇಗೆ ಸುಧಾರಿಸಿಕೊಳ್ಳಬಹುದು?

ಭಿನ್ನ ಭಿನ್ನ ಜನರ ಜ್ಞಾಪಕ ಶಕ್ತಿಯು ಭಿನ್ನ ಭಿನ್ನವೇ ಆಗಿರುತ್ತದೆ. ಹೀಗಿದ್ದಾಗಲೂ ಪ್ರತಿಯೊಬ್ಬರೂ ಅದನ್ನು ತರಬೇತಿನ ಮೂಲಕ ಬೆಳೆಸಿಕೊಳ್ಳಬಹುದಾಗಿದೆ. ಮನುಷ್ಯನಲ್ಲಿ ಎರಡು ಮೂಲರೀತಿಯ ಜ್ಞಾಪಕಶಕ್ತಿಗಳು ಇವೆ. ಒಂದು ಸಂವೇದನ ಸ್ಮರಣೆ ಮತ್ತು ಇನ್ನೊಂದು ತಾರ್ಕಿಕ ಸ್ಮರಣೆ ಮೊದಲನೆಯದರಲ್ಲಿ ದೃಶ್ಯ ಶ್ರಾವ್ಯ ಮತ್ತು 'ಮೋಟಾರ್' ಪ್ರಭಾವಗಳೂ, ಅದೇ ರೀತಿ ಆಸೇಕ ಭಾವ ಪೂರ್ಣವಾದ ಸಂವೇದನೆಗಳೂ ಸೇರುತ್ತಿದ್ದರೆ ಎರಡನೆಯದು ವಿಚಾರಗಳ ನೆನಪಾಗಿದೆ.

ಕೆಲವರು ಕಿವಿಯಿಂದ ಕೇಳಿದ ಮಾತ್ರಕ್ಕೇ ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳುತ್ತಾರೆ ಇನ್ನು ಕೆಲವರು ಕಣ್ಣಿನಿಂದ ನೋಡಿದಾಗ ಮಾತ್ರವೇ ಚೆನ್ನಾಗಿ ನೆನಪಿನಲ್ಲಿಟ್ಟುಕೊಳ್ಳುತ್ತಾರೆ. ಆದರೆ ಮನುಷ್ಯನು ಜ್ಞಾಪಕ ಶಕ್ತಿಯ ತನ್ನ ವಿಧಾನಗಳನ್ನು ಪರ್ಯಾಯಗೊಳಿಸಿಕೊಳ್ಳಬೇಕು. ಉದಾಹರಣೆಗೆ ಬೇಕಾದ ಪಠ್ಯವನ್ನು ಇಂದು ನೀವೇ ಓದುತ್ತೀರಿ. ನಾಳೆ ಇದನ್ನು ನಿಮ್ಮ ಸ್ನೇಹಿತರೋ, ಸಂಬಂಧಿಯೋ ನಿಮಗಾಗಿ ಗಟ್ಟಿಸಿ ಓದುತ್ತಾರೆ. ಮುಂದಿನ ಬಾರಿಗೆ ನೀವೇ ಅದನ್ನು ಹೇಳಲು ಸಮರ್ಥರಾಗಬೇಕು.

ಶಾಲಾ ಮಕ್ಕಳೂ, ವಿದ್ಯಾರ್ಥಿಗಳೂ ಆಗಾಗ ವಿಷಯಗಳನ್ನು ಕೇವಲ ಯಾಂತ್ರಿಕವಾಗಿ ಕಲಿತುಕೊಳ್ಳುತ್ತಾರೆ, ಕೇವಲ ತುರುಕಿಕೊಳ್ಳುತ್ತಾರೆ. ಯಾಕೆಂದರೆ ಹೀರಿಕೊಳ್ಳಲು ಇದೇ ಉತ್ತಮ ಮಾರ್ಗವೆಂದು ಅವರು ತಿಳಿದಿರುತ್ತಾರೆ. ಇದು ತಪ್ಪು. ಒಂದು ಪಠ್ಯವನ್ನು ಪ್ರಜ್ಞಾಪೂರ್ವಕವಾಗಿ ಓದಿದ ಬಳಿಕ ಅದನ್ನು ಕಲಿತುಕೊಳ್ಳುವುದು ಯಾವಾಗಲೂ ಸುಲಭ ಭೂಮಿಯ ಥೀರಮ್‌ಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದಲ್ಲಿ ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಎಷ್ಟೊಂದು ಕಷ್ಟವೆಂಬುದನ್ನು ಆಲೋಚಿಸಿ ನೋಡಿರಿ.

ಗದ್ಯ—ಪದ್ಯಗಳನ್ನು ಗಟ್ಟಿ ಮಾಡುತ್ತಿರುವಾಗ, ಅವರ ಭಾಗಗಳನ್ನೆಲ್ಲ ಆದರೆ, ಇಡೀ ಪಠ್ಯವನ್ನೇ ಮಾನಸಿಕವಾಗಿ ಪುನರುಚ್ಚರಿಸುವುದು ತುಂಬಾ ಮಹತ್ವದ್ದಾಗಿದೆ. ಈ ರೀತಿಯಲ್ಲಿ ಮಿದುಳು ತುಂಬಾ ಚಟುವಟಿಕೆಗೊಂಡು ಅದರ ಕಾರ್ಯಕ್ಕೆ ಅಗತ್ಯವಾದ ಸ್ಥಿತಿಗತಿಗಳು ನಿರ್ಮಾಣವಾಗುತ್ತವೆ. ಏನಾದರೊಂದಿಷ್ಟು ಮರೆತು ಹೋದರೆ, ಅದನ್ನು ಪುಸ್ತಕದಲ್ಲಿ ನೋಡಬಾರದು, ಅಗತ್ಯವಾದ ಸಂಗತಿಗಳನ್ನೋ, ನಾಲುಗಳನ್ನೋ ನೀನೇ ನೆನಪಿಸಿಕೊಳ್ಳಲು ವ್ಯಯಶ್ರಮಿಸಬೇಕು. ಆರ್ಥಾತ್ ಮಿದುಳಿಗೆ ಅತಿ ದಣಿವು ಕೂಡದು. ಇದರಿಂದ ಅವನೇ ಹೆಚ್ಚು ಬಲಶಾಲಿತ್ವನಾಗುತ್ತಾನೆ.

ತರ್ಕ ಸ್ಮರಣೆಯನ್ನು ತರಬೇತು ಗೊಳಿಸುವುದಂತೂ ತುಂಬಾ ಮಹತ್ವದ್ದಾಗಿದೆ. ಇದಕ್ಕಾಗಿ ವಿಷಯವಸ್ತುಗಳನ್ನು ಯೂವುದ್ದು ಪ್ರಾಥಮಿಕ ಮತ್ತು ಯೂವುದು ದ್ವಿತೀಯ ಎಂದು ವಿಭಜಿಸಿಕೊಳ್ಳುವುದು ಅಗತ್ಯವಾಗಿದೆ. ಇದನ್ನು ಮಾಡುವುದಕ್ಕಾಗಿ ಪಠ್ಯದಲ್ಲಿರುವ ವಿಷಯಗಳ ಬಗ್ಗೆ ಜಾಗ್ರತೆಯಿಂದ ಆಲೋಚಿಸುವುದು ಅಗತ್ಯವಾಗಿದೆ. ಜನರ ಹೆದನ್ನು ನಿಮ್ಮ ಒಬ್ಬ ಕಾಲ್ಪನಿಕ ಕೇಳುಗನಿಗೆ ಹೇಳಲು ಅಥವಾ ಕಾಗದದ ಮೇಲೆ ಬರೆಯಲು ಪ್ರಯತ್ನಿಸಿರಿ. ಅಗತ್ಯವಾದ ಸಂಗತಿಗಳನ್ನು ಆರಿಸಿಸಿಕೊಳ್ಳಲು ಇದರಿಂದ ನಿಮಗೆ ಹೆಚ್ಚು ಸಹಾಯಕವಾಗುತ್ತದೆ. ಕೊನೆಯದಾಗಿ ಎಲ್ಲ ಬಗೆಯ ತುಲನೆಗಳ ಪದ್ಧತಿಯನ್ನೂ ಉಪಯೋಗಿಸಿಕೊಳ್ಳಬೇಕು. ಸ್ಮರಣೆಯಲ್ಲಿಟ್ಟುಕೊಳ್ಳಬೇಕಾಗಿರುವ ಒಂದು ಕಠಿಣ ಸಂಗತಿಯನ್ನು ಅಂಥದೇ ಇನ್ನೊಂದು ಸುಲಭವೂ ಸುಲಭವೂ ಆದಂಥ ಸಂಗತಿಯೊಡನೆ ಹೋಲಿಸಿಟ್ಟುಕೊಳ್ಳುವುದು ನುತ್ತು ವಿಷಯವು ಆರಿಗುವುದಕ್ಕೆ ಅನುವು ಮಾಡಿಕೊಡುವಂಥ ಸಾಧನಗಳನ್ನು ಬಳಸಿಕೊಳ್ಳುವುದು ಈ ವಿಧಾನವಾಗಿದೆ. ಈ ಪದ್ಧತಿಯನ್ನು ನಿತ್ಯ ಬಳಸಿಕೊಳ್ಳುವ ಅಭ್ಯಾಸ ಮಾಡಿಕೊಳ್ಳಲು ಪ್ರಯತ್ನಿಸಿ ನೋಡಿರಿ. ಅಪ್ಪೇಕೆ ನಮ್ಮ ನಿತ್ಯ ಜೀವನದಲ್ಲಿ ಕೂಡಾ ನಮಗೆ ಅರಿವಿಲ್ಲದೆಯೆ ಈ ಪದ್ಧತಿಯನ್ನು, ಉದಾಹರಣೆಗೆ, ಹೊಸ ಹೆಸರುಗಳನ್ನು ವಿಳಾಸಗಳನ್ನು ಟೆಲಿಫೋನ್ ನಂಬರುಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದಕ್ಕಾಗಿ ನಾವು ಉಪಯೋಗಿಸುತ್ತಿರುತ್ತೇವೆ.

ನೆನಪಿನಲ್ಲಿಟ್ಟುಕೊಳ್ಳಬೇಕಾದ ವಿಷಯವನ್ನು ಪುನರುಚ್ಚರಿಸುವಲ್ಲಿ ಅನುಸರಿಸಬೇಕಾದ ಸೂತ್ರವೇನು? ವಿದುಳಿಗೆ ಅತಿ ದಣಿವಿಕೆಯಾಗದಂತೆ ಅಧ್ಯಯನದಲ್ಲಿ ಸಣ್ಣ ಭಂಗಗಳಿರುವುದು ಒಳ್ಳೆಯದು. ಈ ಕ್ರಮ

(ಹನ್ನೆರಡನೇ ಪುಟ ನೋಡಿರಿ)

ಐವತ್ತೈದು ವರ್ಷಗಳಿಗೆ ಮೇಲ್ಪಟ್ಟು
ಜನತಾಸೇವೆಯಲ್ಲಿ ತೊಡಗಿರುವ ಈ ಸಂಸ್ಥೆಯಲ್ಲಿ

ಲೋಕವಿಖ್ಯಾತಿ ಗಳಿಸಿರುವ

ನಂಜನಗೂಡು ಟೂತ್-ಪೌಡರ್

ಅನುಭವಸಿದ್ಧ ಮತ್ತು ಅತ್ಯಂತ ಪ್ರಭಾವಶಾಲಿ

ಆಯುರ್ವೇದೀಯ ಸಿದ್ಧೌಷಧಗಳು

ಮತ್ತು

ಚಿತ್ತಾಕರ್ಷಕ ಪರಿಮಳಯುಕ್ತವಾದ

ಅಗರುಬತ್ತಿ, ಹೇರ್-ಆಯಿಲ್, ಕರವಸ್ತ್ರದ ಸೆಂಟ್

ಮುಂತಾದ

ಸುಗಂಧದ್ರವ್ಯಗಳೂ ಸಹಾ

ಅತ್ಯಾಧುನಿಕ ಯಂತ್ರಗಳ ಸಹಾಯದಿಂದ
ಉತ್ತಮ ರೀತಿಯಲ್ಲಿ ಪ್ರತಿನಿತ್ಯವೂ ತಯಾರಾಗುತ್ತಲಿವೆ.

ದಿ ಸದರ್ನ್ ಇಂಡಿಯಾ ಪರ್ಫ್ಯೂಮರಿ (ಪ್ರೈವೇಟ್) ಲಿಮಿಟೆಡ್,
ನಂಜನಗೂಡು, (ಮೈಸೂರು ಸ್ಟೇಟ್)

ಶಾಖೆಗಳು :
ಬೆಂಗಳೂರು, ಮಂಗಳೂರು ಮತ್ತು ಮೈಸೂರು

ಅಮೃತಾಂಜನ

● ತಲೆ ನಿಡಿತ ● ಮೈ ನೋವು
● ಉಳುಕು ● ಕಮ್ಮು ಮತ್ತು ನೆಗಡಿ

ಇವುಗಳ ನಿವಾರಕ

ತಯಾರಕರು:

ಅಮೃತಾಂಜನ ಲಿಮಿಟೆಡ್,
ಮದ್ರಾಸು-4

ಸ್ಥಾಪನೆ: 1921

ನವಯುಗ

ಪ್ರತಿ ಗುರುವಾರ ಪ್ರಕಟವಾಗುವ
ವಾರಪತ್ರಿಕೆ
ಉಡುಪಿ, ದ. ಕ.

NAVAYUGA
(Published every Thursday)
UDIPI, S. K.

ಸಂಪುಟ : 51
ಸಂಚಿಕೆ : 17

ಸಂಸ್ಥಾಪಕರು :
ದಿ| ಎ. ಬಿ. ಶೆಟ್ಟರು
(ಮದ್ರಾಸು ಮತ್ತು ಮೈಸೂರು ಸರಕಾರಗಳಲ್ಲಿ ಆರೋಗ್ಯ ಮಂತ್ರಿಗಳಾಗಿದ್ದವರು)

ಸಂಪಾದಕ :
ಕೆ. ಹೊನ್ನಯ್ಯ ಶೆಟ್ಟಿ

ಮುದ್ರಕರು :
ನವಯುಗ ಪ್ರೆಸ್
ಉಡುಪಿ

ಫೋನ್ : 526

ವಾರ್ಷಿಕ ಚಂದಾ ರೂ. 12
ಎರಡು ವರ್ಷಗಳಿಗೆ ರೂ. 20
(ವಿಶೇಷ ಸಂಚಿಕೆಗಳು ಸಹಿತ)
ಬಿಡಿ ಪ್ರತಿ ೦–೩೫

ಚಿಕ್ಕ ಜೊಕ್ಕ ವಿವಿಧ ಲೇಖನಗಳನ್ನು ಆಹ್ವಾನಿಸಲಾಗಿದೆ.

ಆಯಾಯ ವಾರದಲ್ಲಿ ಪ್ರಕಟವಾಗ ಬೇಕಾದ ಯಾವದೇ ಪ್ರಕಟಣೆಗಳು ಕನಿಷ್ಟ ನಾಲ್ಕು ದಿನ ಮುಂಚಿತ ವಾಗಿಯೇ ನಮ್ಮ ಕೈಸೇರಬೇಕು.

ಇತಿಹಾಸ ನಿರ್ಮಿಸಿದ ಸಂಸತ್ತಿನ ಅಧಿವೇಶನ

೧೯೭೧ನೆಯ ಚಳಿಗಾಲದ ಅಧಿವೇಶನವು ಭಾರತದ ಇತಿಹಾಸದಲ್ಲಿ ಅವಿಸ್ಮರಣೀಯ. ಪ್ರಜಲಿತ ಲೋಕಸಭೆಯ ಪ್ರಥಮಾಧಿವೇಶನದಲ್ಲೇ ಬಂಗ್ಲಾ ದೇಶದ ಬಗ್ಗೆ ಕಾಳಜಿ ವ್ಯಕ್ತಪಡಿಸುವ ಗೊತ್ತುವಳಿ ಮಂಜೂರಾಗಿದ್ದು ಇದೇ ಸಂಸತ್ತು. ಈ ಬಾರಿ ಅಧಿವೇಶನದಲ್ಲಿದ್ದಾಗಲೇ ಬಂಗ್ಲಾದೇಶವು ಪಾಕಿಸ್ತಾನದ ನರಮೇಧ ಪ್ರಿಯರ ಕಪಿಮುಷ್ಟಿಯಿಂದ ವಿಮುಕ್ತಗೊಂಡದ್ದೂ ವಿಶಿಷ್ಟ ಪೂರ್ಣವಾದುದು. ಶಾಂತಿಸಾಮಯಿಕ ಮಸೂದೆಗಳಿಗೆ ಸಂಸತ್ತು ಅನುಮತಿ ನೀಡುವುದರೊಡನೆ ಸಮರ ಕಾಲೀನ ಮಸೂದೆಗಳನ್ನೂ ಆದು ಈ ಅಧಿವೇಶನದಲ್ಲಿ ಮಂಜೂರು ಮಾಡಿತು. ಏಷ್ಯನ್ ದೇಶಗಳ ಕೆಚ್ಚನ್ನು, ಶಾಂತಿಪ್ರಿಯತೆಯನ್ನು ಜನಾಂಗ ಸ್ವಾತಂತ್ರ್ಯವನ್ನು ವಿಶ್ವಕ್ಕೆ ತೋರಿಸಿಕೊಟ್ಟು ಭಾರತವು ಅದ್ವಿತೀಯ ಶಾಖಲೆ ನಿರ್ಮಾಣ ಮಾಡಿದ್ದು. ಈ ಪ್ರಯತ್ನದಲ್ಲಿ ಅಖಂಡ ದೇಶವು ಏಕಪುರುಷನಂತೆ ಎದ್ದು ನಿಂತದ್ದು ಕಡಿಮೆ ಮಹತ್ವದ್ದಲ್ಲ. ಇಂತಹ ಭಾವನೆ ಈ ಹಿಂದೆ ಮೂಡಲಿಲ್ಲವೆಂದಲ್ಲ; ಆದರೆ, ಈ ಬಾರಿಯ ಐಕ್ಯವು ಅಂತರಾತ್ಮ ಪ್ರೇರಿತವಾದದ್ದು. ಏಕೆಂದರೆ, ಸಮರದ ಆರ್ಥಿಕ ಹೊರೆಯನ್ನು ತಕ್ಷಣವೇ ನಾವು ಹೊರಲು ಮುಂದೆ ಬಂದಿದ್ದೇವೆ. ಸಮರವೆಂದರೇನು, ಅದರ ಹೊರೆಯೇನು ಎಂಬುದನ್ನು ಇಂದು ಪ್ರತಿ ನಾಗರಿಕನೂ ಅರಿತುಕೊಳ್ಳುವಂತಾಗಿದೆ. ಈ ವೇಳೆ ತನ್ನ ಕಚ್ಚನ್ನು ಪ್ರದರ್ಶಿಸಿ, ದೇಶದ ಗೌರವನ್ನು ಉಳಿಸಿದ ಪ್ರಧಾನಿ ಶ್ರೀಮತಿ ಗಾಂಧಿಯವರು ನಿಜಕ್ಕೂ ಅಭಿನಂದನಾರ್ಹರು.

ಪಾಕ್—ಭಾರತದ ಮೇಲೆ ಸಮರ ಘೋಷಿಸಿತು. ಈ ವೇಳೆಗಾಗಲೇ ಮುಂದಿನ ಫೆಬ್ರವರಿಯಲ್ಲಿ ಹಲವು ರಾಜ್ಯ ವಿಧಾನ ಸಭೆಗಳಿಗೆ ಚುನಾವಣೆಗಳು ನಡೆಯಬೇಕೆಂದು ನಿರ್ಧಾರವಾಗಿತ್ತು. ಆದರೆ, ಸಮರದ ಭವಿಷ್ಯ ಅನಿಶ್ಚಿತವಾದದ್ದರಿಂದ ಇವನ್ನು ಒಂದು ವರ್ಷಕಾಲ ಮುಂದೆ ಹಾಕುವುದಕ್ಕೆ ದೇಶದ ಎಲ್ಲ ರಾಜ್ಯಕೀಯ ಪಕ್ಷಗಳು ಒಪ್ಪಿಗೆ ನೀಡಿದ್ದುವು. ಸಮರವು ಅಲ್ಪಾವಧಿಯಲ್ಲೇ ನಿಂತುದರಿಂದ ಮಾರ್ಚಿ ತಿಂಗಳಲ್ಲೇ ಚುನಾವಣೆಗಳನ್ನು ನಡೆಸಲು ಅವು ಒಪ್ಪಿಕೊಂಡದ್ದು ನಮ್ಮ ಏಕತೆಗೊಂದು ಪ್ರಬಲ ನಿದರ್ಶನ. ಜಗತ್ತಿನ ಬೃಹತ್ ಪ್ರಜಾ ಪ್ರಭುತ್ವವಾದ ಭಾರತದಲ್ಲಿ ಕಾಲ ಕಾಲದಲ್ಲಿ ಆಗಬೇಕಾದ ಕಾರ್ಯಗಳು ನಡೆಯದೇ ಹೋದರೆ, ಭಾರತ ವಿರೋಧಿಗಳಿಗೆ ಹುಳುಕೆತ್ತಲು ಅವಕಾಶವಾಗುವುದೆಂದು ಪ್ರಧಾನಿ ಗಾಂಧಿ ಉದ್ಗರಿಸಿದ್ದು ನ್ಯಾಯವೇ. ಪಾಕಿಸ್ತಾನವು ಸಮರ ಹೂಡುತ್ತಿರುವಾಗ, ಆದರೆ ವಿಮೋಸ ನಾಳಿಗಳು ನಿರಂತರ ಸಾಗುತ್ತಿರುವಾಗ, ಸಂಸತ್ತಿನ ಅಧಿವೇಶನ ನಡೆಸಿ, ದಿಲ್ಲಿಯಲ್ಲಿ ಲಕ್ಷಾಂತರ ಜನರು ಕೂಡುವ ಬಹಿರಂಗ ಸಭೆಯನ್ನು ನಡೆಸಿ ಶತ್ರುಗಳ ನಿರ್ಬಲತೆಯನ್ನು ಜಗಜ್ಜಾಹೀರು ಮಾಡಿ ತೋರಿಸಿದ ನಾವು ಚುನಾವಣೆಗಳನ್ನೂ ಸಕಾಲದಲ್ಲಿ ನಡೆಸಿ, ದೇಶದ ನಾಗರಿಕ ಜೀವನದ ಮೇಲೆ ಸಮರದ ದುಷ್ಪ್ರಭಾವ ಬಿದ್ದಿಲ್ಲವೆಂದು ತೋರಿಸುವುದು ಅಗತ್ಯವೇ ಆದದ್ದು. ಆದುದರಿಂದ ಪರಿಸ್ಥಿತಿಯು ಇನ್ನು ಉಲ್ಬಣಕ್ಕೇರದೆ ಇದ್ದರೆ, ಚುನಾವಣೆಗಳು ನಡೆಯುವುವು. ಸರಕಾರವೂ ಹೆಚ್ಚಿನ ವಿರೋಧಿ ಪಕ್ಷಗಳೂ ಈ ನಿರ್ಧಾರಕ್ಕೆ ಬಂದುದು ಸ್ವಾಗತಾರ್ಹ. ಆದರೆ ಒಂದು ಮಾತು. ಸಮರದಲ್ಲಿ ವಿಜಯ ಗಳಿಸಿದ್ದು ಆಡಳಿತ ಪಕ್ಷವಲ್ಲ, ಇಡಿಯ ದೇಶ. ದೇಶವನ್ನು ಮುನ್ನಡೆಸಿದ ಕೀರ್ತಿ ಪ್ರಧಾನಿಗೆ ಸಲ್ಲುವುದಾದರೂ ದೇಶವೊಂದಾಗಿ ಆಕೆಗೆ ಬೆಂಬಲ ನೀಡಿದ್ದನ್ನು ಮರೆಯಂತಿಲ್ಲ. ಆದುದರಿಂದ ವಿಜಯೋತ್ಸಾಹದ ಅನುಚಿತ ಲಾಭವನ್ನು ಇಂದಿಕ್ಕೇಟು ಪಡೆದುಕೊಳ್ಳದಂತೆ ಅದು ಜಾಗ್ರತೆವಹಿಸಬೇಕು. ಸಮರದಲ್ಲಿ ಪ್ರತ್ಯಕ್ಷವಾಗಿ— ಅಪ್ರತ್ಯಕ್ಷವಾಗಿ ಆರುವತ್ತು ಕೋಟಿ ಭಾರತೀಯರು ಪಾಲ್ಗೊಂಡಿದ್ದಾರೆ; ಅದರ ನಷ್ಟವನ್ನೂ ಜಾನಿಯನ್ನೂ ಅವರೆಲ್ಲರೂ ತುಂಬಿಸಲು ಬದ್ಧ ಕಟಿಯಾಗಿದ್ದಾರೆ. ಈ ನಿಟ್ಟನಲ್ಲಿ ಸರಕಾರದ ಕ್ರಮಗಳೆಲ್ಲವನ್ನೂ ಅವರೆಲ್ಲರೂ ಏಕಕಂಠದಿಂದ ಬೆಂಬಲಿಸಿದ್ದಾರೆ. ಆದುದರಿಂದ ವಿಜಯ ಭಾರತೀಯರದ್ದು. ಭಾರತೀಯರ ಜಾತ್ಯತೀತ ನೀತಿಯದ್ದು. ಇದನ್ನು ಕೆಲವರು ಮಾತ್ರ ತಮ್ಮದೆಂದು ಹೆಗ್ಗಳಿಕೆ ಹಾಡಿ ಹೊಗಳಿಸಿಕೊಳ್ಳುವುದು ನ್ಯಾಯವಾಗದು.

ಛಲವಾದಿಯೆಂದು ಹೆಸರಾದ ಪ್ರಧಾನಿ ಗಾಂಧಿಯವರೂ ತನ್ನ ಛಲವನ್ನು ಬದಿಗೊತ್ತಿಟ್ಟದ್ದು ಈ ಅಧಿವೇಶನಾಂತ್ಯದಲ್ಲಿ ವ್ಯಕ್ತವಾಗಿದೆ. ಇದು ಶುಭ ಚಿಹ್ನೆ. ರಾಷ್ಟ್ರ ಪತಿಗಳಿಗೆ ದೇಶದ ಕೆಲವೊಂದು ಭಾಗಗಳಲ್ಲಿ ಮಾತ್ರ ವಿಷಮ ಪರಿಸ್ಥಿತಿಯನ್ನು ಘೋಷಿಸುವ ಅಧಿಕಾರ ನೀಡುವಂತೆ ಸರಕಾರ ಸಂವಿಧಾನ ತಿದ್ದುಪಡಿ ಮಸೂದೆಯೊಂದನ್ನು ಮಂಡಿಸಿತು ಇದರಿಂದ ಅನಿವಾರ್ಯವಾದೆಡೆಯಲ್ಲಿ ಮಾತ್ರ ವಿಷಮ ಪರಿಸ್ಥಿತಿ ಘೋಷಿಸಲು ಅವಕಾಶವಾಗುವುದೆಂದು ಆದು ಭಾವಿಸಿತ್ತು. ಆದರೆ, ಇದರಿಂದಾಗುವ ಜಾನಿಗಳನ್ನು ವಿರೋಧಿ ಪಕ್ಷಗಳು ಎತ್ತಿ ತೋರಿಸಿಕೊಟ್ಟಾಗ, ಪ್ರಧಾನಿಯವರು ಅವನ್ನು ಒಪ್ಪಿಕೊಂಡು ಮಸೂದೆಯನ್ನು ಹಿಂದಕ್ಕೆ ತೆಗೆದುಕೊಂಡು ತಮ್ಮ ಛಲವನ್ನು ಬಿಟ್ಟು ಬಿಟ್ಟದ್ದು ಈ ಅಧಿವೇಶನದ ಮಹತ್ವದ ಘಟನೆ. ಸಮರ ಕಾಲದಲ್ಲಿ ತನ್ನ ನೀತಿಗೆ ಒಕ್ಕೊರಲಿನ ಬೆಂಬಲನೀಡಿದ ವಿರೋಧ ಪಕ್ಷಗಳ ಒಕ್ಕೊರಲಿನ ಆಶಯದ ಮುಂದೆ ತಲೆವಾಗಿ ಪ್ರಧಾನಿಯವರು ತನ್ನ ಕೃತಜ್ಞತೆಗಳನ್ನು ಈಗಲೇ ಸಲ್ಲಿಸಿ ಬಿಟ್ಟರು. ಕೆಲವೆಡೆ ಮಾತ್ರ ವಿಷಮ ಪರಿಸ್ಥಿತಿ ಹೇರುವುದರಿಂದ ಅದರ ಪರಿಣಾಮ ಆ ಪ್ರದೇಶಗಳಿಗೆ ಮಾತ್ರ ಪರಿಸೀಮಿತವಾಗಿರುವುದಲ್ಲದೆ, ಇಡಿಯ ದೇಶದ ಮೇಳಾಗುವುದಿಲ್ಲ. ಹಾಗಾಗಿ ಇಡಿಯ ದೇಶದ ಜನತೆ ಒಂದಾಗಿ ಪರಿಸ್ಥಿತಿಯನ್ನು ಎದುರಿಸುವುದು ಸಾಧ್ಯವಾಗುವ ಪರಿಸ್ಥಿತಿ ಮೂಡುವುದಿಲ್ಲ. ಆದುದರಿಂದ ಇಡಿಯ ದೇಶದಲ್ಲೇ ವಿಷಮ ಪರಿಸ್ಥಿತಿ ಕೆಲ ಕಾಲ ಮುಂದುವರಿದರೆ 'ಭೀಕರತೆ'ಯ ಚಿತ್ರ ಎಲ್ಲ ಪ್ರಜೆಗಳ ಕಣ್ಣಾ ಮುಂದೂ ನಲಿಯುತ್ತಿರುತ್ತದೆ. ದೇಶಕ್ಕಾಗಿ ಒಂದಾಗುವ ತ್ಯಾಗಮಾಡುವ, ದುಡಿಯುವ ಮನೋಧರ್ಮ ಬೆಳೆಯಲು ಅನುಕೂಲವಾಗುತ್ತದೆ. ಲೋಕಸಭೆಯ ಈ ಚಳಿಗಾಲದ ಅಧಿವೇಶನವು ಭಾರತದ ಗೌರವವನ್ನು ಹೆಚ್ಚಿಸಿತು. ಭಾರತೀಯರ ಐಕ್ಯ ಭಾವನೆಯನ್ನು ಸುವ್ಯಕ್ತಗೊಳಿಸಿತು; ವಿಶ್ವದ ಪ್ರಜಾತಂತ್ರದ ಕೃತಕ ಕೈವಾರಿಗಳ ಮುಖಕ್ಕೆ ಮಸಿ ಬಳಿಯಿತು. ಧರ್ಮಾಂಧರ ಅಜ್ಞಾನದ ಮೇಲೆ ಹೊಸ ಬೆಳಕನ್ನು ಬೀರಿತು. ಮಾನವತೆ, ಸ್ವತಂತ್ರತೆ, ಜಾತ್ಯತೀತತೆ ಸಹೋದರತೆ ಮತ್ತು ಸಮಾನತೆಯ ದಾರಿಯಲ್ಲಿ ಹೊಸತೊಂದು ಮೈಲಿಗಲ್ಲನ್ನು ನಟ್ಟಿತು.

ಬೆಲೆಯೇರಿಕೆಯೇಕೆ?

ಯುದ್ಧದ ಕಾರ್ಮೋಡಗಳು ದಟ್ಟಣಿಸುತ್ತಿದ್ದಂತೆ, ಅವು ಗುಡುಗು ತೊಡಗಿದಂತೆ ಮತ್ತು ಮಳೆ ಸುರಿಸ ತೊಡಗಿದಂತೆ ಜನ ಜೀವನದ ಆನಿವಾರ್ಯ ಪದಾರ್ಥಗಳ ಬೆಲೆ ಯೇರುತ್ತಲೇ ಬಂದಿದೆ. ಇದೀಗ ಸಮರ ಮೋಡಗಳು ತೆಳ್ಳಗಾದರೂ ಈ ಬೆಲೆಗಳು ಇಳಿಯುವ ಬದಲು ಏರುತ್ತಲೇ ಇವೆ. ಇತ್ತೀಚೆಗಿನ ಎರಡು ವರ್ಷಗಳಿಂದ ಬೆಲೆಯೇರಿಕೆಯು ಮಿತಿಮೀರಿ ಹೋಗುತ್ತಿರುವುದು ಸುವೇದ್ಯ. ದೇಶದಲ್ಲಿ ಬೇಕಾದಷ್ಟು ಆಹಾರ ಪದಾರ್ಥಗಳು ಉತ್ಪಾದನೆಗೊಂಡಿವೆ; ಕೈಗಾರಿಕೋತ್ಪನ್ನಗಳಲ್ಲೂ ಚೇತನ ಮೂಡಿದೆ. ಹಾಗಿರುವಾಗಲೂ ಏರಿಕೆಯೇಕೆ? ಪ್ರಾಯಃ ಅವುಗಳ ಪೂರಯ್ಕೆಯ ವಿಧಾನ ಅಸಮರ್ಪಕವಾಗಿದೆಯೆನಿಸುತ್ತದೆ. ಸಮರ ಕಾಲದಲ್ಲಿ ಸೀಮೆಯೆಣ್ಣೆಯ ಅಭಾವ ತಲೆದೋರುವುದು ಸಹಜವೇ. ಆದುದರಿಂದ ಸಮರತೊಡಗಿದಂದಿನಿಂದಲೇ ಅದು ಮಾಯವಾಗತೊಡಗಿತು. ವ್ಯಾಪಾರಿ ವರ್ಗದ ಲಾಭಬಡಕತನವೂ ಜನತೆಯನ್ನು ಸುಲಿಯುವುದರೊಡನೆ ಹಿಂಸಿಸತೊಡಗುವುದು ಎಂದಿಗೂ ಸಮರ್ಥನೀಯವಲ್ಲ. ಇದೇ ರೀತಿ ಅಕ್ಕಿ–ಸಕ್ಕರೆ–ಬೇಳೆ–ಕಾಳುಗಳ ಧಾರಣೆಗಳೂ ಏರತೊಡಗಿನೆ; ಒಮ್ಮೆ ಏರಿದರೆ ಇಳಿಯುವ ಮಾತು ನಮ್ಮ ಆವಶ್ಯಕ ವಸ್ತುಗಳ ಬಾಯಿಂದ ಹೊರದುವುದಿಲ್ಲ. ಸೀಮೆ ಎಣ್ಣೆಯ ಪೂರೈಕೆ ಮಾಡಲು ಕೇಂದ್ರಸರಕಾರ ಆಜ್ಞೆ ಮಾಡಿದ್ದರಿಂದ ಪರಿಸ್ಥಿತಿ ಸುಧಾರಿಸಬಹುದು. ಇದೇರೀತಿಯಲ್ಲಿ ಸರಕಾರ ಆಹಾರ ಧಾನ್ಯಗಳನ್ನೂ ಬಿಡುಗಡೆ ಮಾಡಬೇಕು. ಹೇರಳ ಪೂರೈಕೆಯೊಡನೆ, ಬೆಲೆಗಳು ತಾವಾಗಿಯೇ ಇಳಿಯುವುವು. 'ಸಂಗ್ರಹ' ವನ್ನು ಪ್ರತಿಷೇಧಿಸುವುದು, ಲಾಭಬಡಕತನವನ್ನು ತಡೆಗಟ್ಟುವುದು ನಿರಾತಂಕ ಪೂರಯ್ಕೆಗೆ ಅನುಕೂಲ ವಾತಾವರಣ ನಿರ್ಮಿಸುವುದು ಅಗತ್ಯ. ವ್ಯಾಪಾರಿಗಳಾದರೂ ಒಂದು ಮಾತನ್ನು ಆವಶ್ಯ ಗಮನಿಸಬೇಕು. 'ಸಂಪತ್ತಿನ ಕೇಂದ್ರೀಕರಣ', 'ಹಲವರನ್ನು ಸುಲಿದುತಾನು ನು ಸುಖಲುಟಾಯಿಸುವ ನೀತಿ'ಗಳಿಂದ ತಮ್ಮ ಬೆಲೆಯನ್ನು ಕಳೆದುಕೊಂಡಿವೆ. ಕೂಡಿ ಮೆಡಿಯುವ, ಕೂಡಿ ಬದುಕುವ ನೀತಿಗೆ ಬೆಲೆ ಬಂದಿದೆ. ಆದುದರಿಂದ ಸಮೂಜದ ಮರ್ಬಲತೆಯಿಂದ ಲಾಭಗಳಿಸಿ ತಾವು ಸುಖನಾಗಿರಬಹುದೆಂದು ನಂಬಿದರೆ, ಅದು ಸುಳ್ಳಾಗುವ ದಿನಗಳು ದೂರವಿಲ್ಲ. ●

ಗೇಹರಾಜ್ಯದಲ್ಲಿ

ಹಾವಿನವಿಷಚೀಲಕ್ಕೆ ಅಪರೇಷನ್

"ಹೌದ್ರಿ...."

'ಏನು?'

'ಅಲ್ಲ, ಭದ್ರತಾ ಸಮಿತಿಯ ಯುದ್ಧ ನಡೆಯುತ್ತಿರುವಾಗ ಅದನ್ನು ನಿಲ್ಲಿಸಲು ಅಶಕ್ತವಾಯ್ತಲ್ಲಾ....'

'ನೀನು ಹೇಳುತ್ತಿರೋದುಪಾಕ್-ಭಾರತ ಸಮರ....'

'ಹೌದು...'

'ಹ್ಞೂನ್ನು. ಪಕ್ಷಪಾತಪೂರಿತ ಗೊತ್ತುವಳಿಯನ್ನು ಭಾರತ ವಿರೋಧಿಸಿತ್ತು; ರಶ್ಯ ಪ್ರತಿಷೇಧ ಮತ ಚಲಾಯಿಸಿ ಕಸದ ಬುಟ್ಟಿಗೆಸೆಯಿತು.'

'ಅದು ನಿಜಾನ್ರಿ. ಈಗ, ಭಾರತ ಏಕ ಪಕ್ಷೀಯವಾಗಿ ಸಮರ ವಿರಾಮದ ಕೊಡುಗೆ ನೀಡಿದ ಮೇಲೆ, ಅದನ್ನು ಅಂದಿನ ಪಾಕ್ ಅಧ್ಯಕ್ಷ ಯೂಹ್ಯಾಖಾನರು ಸ್ವೀಕರಿಸಿದ ಮೇಲೆ, ಕದನವಿರಾಮ ಕಾರ್ಯರೂಪಕ್ಕೆ ಬಂದ ಮೇಲೆ....'

'ಕಟ್ಟು ನಿಟ್ಟಿನ ಸಮರವಿರಾಮ ಪಾಲನೆಗೆ ಭದ್ರತಾ ಸಮಿತಿ ಕರೆಕೊಟ್ಟದ್ದು ವಿಲಕ್ಷಣ ಎನ್ನುತೀಯ?'

'ಅಲ್ಲವೇ ಮತ್ತೆ?'

'ನಿನಗೆ ತೋರಿಕೆಗೆ ಹಾಗೆನಿಸಬಹುದು ಆದರೆ, ಪಾಕಿನ ಜೊಸ ಅಧ್ಯಕ್ಷ ನಾವಿರೆ ವರ್ಷ ಭಾರತದೊಡನೆ ಯುದ್ಧವೂಡುವ ಉದ್ದುದ್ದ ಮಾತಾಡುತ್ತಿರುವ ಭುಟ್ಟೋರನ್ನು ಕುರಿತೇ ಈ ಗೊತ್ತುವಳಿಯನ್ನದು ಮಾಡಿತೆನ್ನಬಾರದೇಕೆ?'

'ಯಾಕೆ?'

'ಸಮರಾಪೇಕ್ಷೆ ಭುಟ್ಟೋ ನಿರಾಶೋಲ್ಲಂಘನೆ ನೂತಿ ಕೆಣಕಿದರೆ, ಭಾರತ ಸುಮ್ಮನಿಳಿಯಲಾದೀತೆ? ಮತ್ತೆ ಸಮರವಾರಂಭವಾಗಿ ಬಹುದು. ಆಗಾಗಬಾರದು. ಪಾಕಿನ್ತಾನವ ಜೆಸರು ಬಳಿಯಬೇಕೆಂದು ಅಮೆರಿಕನ್-ಅರಬ ಮಿತ್ರರು ಈ ಗೊತ್ತುವಳಿಯನ್ನು ತಂದರು.'

'ನಾವ್ರಿ?'

'ನಮಗೇನು? ನಾವು ಯುದ್ಧ ಮಾರಿಯನ್ನು ಕೆಣಕಲಿಲ್ಲ. ಕರೆಯಲಿಲ್ಲ. ನಮ್ಮ ಮನೆ ಬಾಗಿಲಿಗೆ ಬಂದವ್ದರಿಂದ ಕತ್ತಿಗೆ ಕೈಯಿಕ್ಕಲೇ ಬೇಕಾಯ್ತಷ್ಟೆ. ಬಂಗ್ಲಾ ವಿಮೋಚನೆಯೊಡನೆ ನಮ್ಮ ಉದ್ದೇಶವೂ ಪೂರ್ಣ. ನಮಗಿನ್ನು ಯುದ್ಧ ಬೇಡ.'

'ಹ್ಞೂಂ. ಆದರೆ ನೋಡಿ, ಕದನ ವಿರಾಮ ಪಾಲನೆಗೆ ಕರೆಕೊಟ್ಟವರು ಜಮ್ಮು ಕಾಶ್ಮೀರದ ಸಮರ ವಿರಾಮ ರೇಬೆಯ ಹಿಂದಿರುವ ತಂತಮ್ಮ ನೆಲೆಗಳಿಗೆ ಮರಳ ಬೇಕೆಂದು ಕೇಳಿಕೊಂಡಿದ್ದಾರೆ....'

'ಹ್ಞೂಂ....ಅಂದರೆ, ಪಾಕ್ ಅಕ್ರಮವಾಗಿ ಆಕ್ರಮಣ ಮಾಡಿಕೊಂಡಿರುವ ಜಮ್ಮುಕಾಶ್ಮೀರ ಭಾಗದಲ್ಲಿ ನಮ್ಮ ಸೇನೆಗಳು ಕೆಲವು ಪ್ರದೇಶಗಳನ್ನು ವಶಪಡಿಸಿಕೊಂಡದ್ದನ್ನು ಬಿಟ್ಟುಕೊಡಬೇಕೆಂದು ಅದರ ಅರ್ಥ....'

'ಆದರೆ, ಭಗತ್‌ಸಿಂಗರ ಸಮಾಧಿಯಿರುವ ನಮ್ಮ ಪ್ರದೇಶವನ್ನು ಪಾಕ್ ಸಡೆಗಳು ಬಿಟ್ಟುಕೊಡ ಬೇಕಾಗಿಲ್ಲನೆಂತಾಯ್ತು....'

'ಅಲ್ವೆ, ನಶಪಡಿಸಿದ ನೆಲವನ್ನು ಬಿಟ್ಟು ಕೊಡುವ ಪ್ರಶ್ನೆಬಂದಾಗ ತಾನೇ ಇದು ಮುಂದೆ ಬರುವುದು?'

'ಏಕೆ, ಬರುವುದಿಲ್ಲವೆನ್ನುತ್ತೀರಾ?'

'ಜಮ್ಮುಕಾಶ್ಮೀರದೆಲ್ಲಿನ ಭಾರತದ ಪವಿತ್ರ ಭೂಮಿಯನ್ನು ಪಾಕ್ ಆಕ್ರಮಣದಿಂದ ತೆರವುಗೊಡಿಸಿಕೊಡುವಲ್ಲಿ ಭದ್ರತಾ ಸಮಿತಿ ವಿಫಲವಾಗಿರುವುದರಿಂದ, ಆದರಿಂದೇನೂ ಸಾಧ್ಯವಾಗದು. ಮತ್ತೆ, ಭಾರತ ಹಿಂದಿನಷ್ಟು ಉದಾರಿಯಾಗಿ ನಲೀಸಾಗಿ ಸೇನೆಯನ್ನೂ ಹಿಂದೆಕರೆಯದು....'

'ಅಂದರೆ, ನಮ್ಮ ಭಗತ್‌ಸಿಂಗರ ಸಮಾಧಿ ಕೈಬಿಟ್ಟಂತೆಯೇ ..'

'ಅವೆಲ್ಲ ಈಗ ಹೇಗೆ ಹೇಳುವುದು? ಮುಂದಿನ ರಾಜ್ಯಕೀಯ ಬೆಳವಣಿಗೆಗಳನ್ನು ಕಾದು ನೋಡಬೇಕಷ್ಟೆ....'

'ಮತ್ತೆ ನೋಡಿ, ಭಾರತೀಯ ಉಪಖಂಡದ ಅಥವಾ ಅಂತಾರಾಷ್ಟ್ರೀಯ ಶಾಂತಿಗೆ ಧಕ್ಕೆ ತರುವ ಯಾವುದೇ ಕ್ರಮವನ್ನು ಕೈಕೊಳ್ಳದಂತದು ಸದಸ್ಯ ದೇಶಗಳಿಗೆ ಕರೆಕೊಟ್ಟಿದೆ.'

'ನೋಡು, ಇದು ಅತ್ಯಂತ ಮಹತ್ವದ ಅಂಶ....'

'ಯಾಕೆ?'

'ಸ್ವತಂತ್ರ ಬಂಗ್ಲಾದೇಶದ ಅಸ್ತಿತ್ವವನ್ನು ಭದ್ರತಾ ಸಮಿತಿಯು ಇದರಿಂದ ಒಪಿಕೊಂಡಂತಾಗಿದೆ.'

'ಹೇಗೆ?'

'ಬಂಗ್ಲಾದೇಶವನ್ನು ಭಾರತ ಈಗಾಗಲೇ ನೂನ್ಯ ನೂಡಿದೆ. ಪಾಕಿಸ್ತಾನ ಅದನ್ನು ತನ್ನ ನಶಕ್ಕೆ ತರುವ ಪ್ರಯತ್ನ ನಡೆಸಿದರೆ, ಪಾಕಿಗೆ ಅಮೆರಿಕೆ—ಚೀನಾಗಳು ಸಹಾಯ ನೂಡಿದರೆ ಅಶಾಂತಿ ತಾನೇತಾನಾಗಿ ಹರಡುವುದು. ಅದು ಈ ಗೊತ್ತುವಳಿಗೆ ವಿರುದ್ಧವಾಗುವುದು.'

'ಅಂದರೆ, ಭದ್ರತಾಸಮಿತಿಯು ಬಂಗ್ಲಾದೇಶದ ವಿನೋಚನೆಯನ್ನು ದೃಢಪಡಿಸಿತೂಂತಾಯ್ತು.'

ಅವರು ಹಾಗೆ ಹೇಳಿದಿದ್ದರೂ ನಾವು ಹಾಗೆ ಉಹ್ಹಾಪೂಡಬಹುದು.'

'ನಮ್ಮ ಸಂತೋಷಕ್ಕೆ...'

'ಮಾನವ ಜೀವಗಳ ರಕ್ಷಣೆ ಮತ್ತು ಸಮರ ನೆರೆಯೊಳುಗಳು-ಗಾಯೊಳುಗಳ ರಕ್ಷಣೆಗೆ ಜಿನೀವಸಮ್ಮೇಳನದ ಶರತ್ತುಗಳ ಪಾಲನೆಗೆ ಗೊತ್ತುವಳಿ ಕರೆ ನೀಡಿದ್ದರಿಂದ ಈ ಸಲಗತಿ ಮತ್ತಷ್ಟು ಪುಷ್ಟಿಗೊಳ್ಳುತ್ತದೆ.'

'ಅದು ಹೌದೂನ್ರಿ. ಇಲ್ಲವಾದರೆ, ಉಭಯ ಸೇನೆಗಳು ಸಮರ ಪೂರ್ಣ ನೆಲೆಗಳಿಗೆ ಮರಳುವ ಕರೆ ನೀಡುತಿತ್ತು.'

"ಅದೆಲ್ಲಿ ಸ್ಯಾಧ್ಯ? ಅಮೆರಿಕದ ಆಪ್ರಯತ್ನವನ್ನು ತಾನೇ ರಶ್ಯ ಮೂರು ಬಾರಿ ನಿಷ್ಪ್ರಯೋಗಿಸಿದ್ದು!"

'ಇನ್ನು ಭುಟ್ಟೋ ಏನು ಮಾಡುತ್ತಾರೆ?'

"ಮಾಡುವುದೇನು? ಈಗಲಾದರೂ ಬಂಗ್ಲಾದೇಶವನ್ನು ಮೂನ್ಯ ಮಾಡಿ ವಂಗ ಬಂಧುವನ್ನು ಬಿಡುಗಡೆ ಮಾಡಿದರೆ, ಬಂಗ್ಲಾದೇಶೀಯರ ಸಹಾನುಭೂತಿಯನ್ನಾದರೂ ಪಡೆಯಬಹುದು. ಆನಂತರ, ಧರ್ಮ—ಜಾತಿಗಳ ಸಂಕುಚಿತ ಬಂಧನದಿಂದ ಪಾಕ್ ಸಹೋದರರನ್ನೂ ಮುಕ್ತಗೊಳಿಸಿ, ದೇಶದ ಅಭಿವೃದ್ಧಿಯಲ್ಲಿ ಆಸಕ್ತರಾಗಬಹುದು....'

'ಏನೋಪ್ಪ, ಅವರ ಆರಂಭದ ಭಾಷಣ ಉತ್ತರ ಕುಮಾರನನ್ನೂ ಮೀರಿಸುತಿತ್ತು; ಆದರೆ, ಆನಂತರದ ಅವರ ಮಾತಿನ ಧಾಟಿ ಬದಲಾದಂತಿದೆ.'

'ಹ್ಞೂಂ, ತಾನೊಬ್ಬ ಸುಧಾರಣಾ ವಾದಿಯೆಂದವರು ಹಲವು ಕ್ರಮ ಕೈಕೊಂಡಿದ್ದಾರೆ. ಪಾಕಿಸ್ತಾನದ ಅರ್ಥ ವ್ಯವಸ್ಥೆಯನ್ನು ಇಷ್ಟು ಕಾಲ ನಿಯಂತ್ರಿಸಿ ಜನತೆಯನ್ನು ಹಿಂಡಿ ತಾವು ಶ್ರೀಮಂತರಾಗಿರುವ ೨೨ ಮನೆತನಗಳನ್ನವರು ಬಹಿಷ್ಕರಿಸಿದ್ದಾರೆ. ನಾವಾಬರಿಗೆ ನೀಡುತ್ತಿದ್ದ ವರ್ಷಾಶನದ ಮೊಗದಿಯನ್ನೂ ಕಿತ್ತುಕೊಂಡಿದ್ದಾರೆ....'

'ಹೌದಂತೆ. ಪಾಕ್ ವಿಫಲತೆಗೆ ಅಧಿಕಾರಿಗಳು ಕಾರಣರಲ್ಲವೆಂದು ತೋರಿಸಿಕೊಳ್ಳುವ ಚಾಣಾಕ್ಷತನ....'

'ಏದೆಂತದ್ದೇ ಇರಲಿ, ಅವರ ಆಟೋಪ ಕಡಿಮೆಯಾದರೆ, ಭಾರತ ದ್ವೇಷ ಕರಗಿ ಹೋದರೆ, ಭಾರತೀಯ ಉಪಖಂಡದಲ್ಲಿ ಶಾಂತಿ ನೆಲಸುತ್ತದೆ; ಪಾಕಿಸ್ತಾನವೂ ಪ್ರಗತಿಶೀಲವಾಗುತ್ತದೆ....'

'ಅಲ್ರಿ, ಹಾವು ತನ್ನ ವಿಷವನ್ನು ಬಿಡುವುದುಂಟೆ?'

'ಅಲ್ವೆ, ಹೆಳವನೂ ಪರ್ವತ ಹತ್ತಬಲ್ಲ ಈ ಕಾಲದಲ್ಲಿ ಹಾವು ವಿಷ ತ್ಯಜಿಸುವಂತೆ ಮಾಡಲಾಗದೇನು?'

'ಆದೀತು ಆದೀತು. ಅದೆಲ್ಲ ನನಗೇನು ತಿಳಿಯುತ್ತೆ?'

'ಅಲ್ವೆ, ಹಾನಾಡಿಗ ಹಾವಿನ ವಿಷದ ಚೀಲವನ್ನೊ ಹಲ್ಲನ್ನೋ ಕಿತ್ತು ಹಾಕುವುದಿಲ್ಲವೆ?'

'ಆದರೆ, ಅದು ಎರಡು-ಮೂರು ತಿಂಗಳುಗಳಲ್ಲಿ ಮತ್ತೆ ಮೂಡುವುದಂತಲ್ಲ?'

'ಅದನ್ನೇ ವೈಜ್ಞಾನಿಕವಾಗಿ ಸದಾಕಾಲಕ್ಕೆ ಕಿತ್ತುಹಾಕುವುದು ಸಾಧ್ಯವಾದರೆ?'

'ಇದು ಅಮೆರಿಕನ್ ವೈದ್ಯರಿಂದ ಆಗದ ಕೆಲಸ....'

"ಯಾಕೆ?"

"ಅಲ್ಲಾ,ಯೂಹ್ಯಾಖಾನರ ಮೂಗಿಗೆ ಪ್ಲಾಸ್ಟಿಕ್ ಸರ್ಜರಿ ಮಾಡುವಲ್ಲಿ ಸಂಪೂರ್ಣ ಆಸಫಲರಾದವರು ಈ ಭುಟ್ಟೋ ವಿಷವನ್ನು ಕೀಳಲು ಶಕ್ತರಾಗುವರೆಂದು ನಂಬುವುದು ಅಸಾಧ್ಯ...."

'ಅಲ್ವೆ, ವಿಷೋತ್ಪನ್ನ ಆಹಾರ ಸಾಮಗ್ರಿಗಳನ್ನು ಪೂರಯ್ಕೆ ಮಾಡುವುದನ್ನಾದರೂ ನಿಲ್ಲಿಸಬಹುದಲ್ಲ?'

'ಏನು ಹೇಳ್ತೀರಾ ನೀವು? ಅಮೃತದಂತಹ ಹಾಲನ್ನು ಕುಡಿದರೂ ಹಾವು ಆನರಿಂದ ವಿಷ ನಿರ್ಮಾಣ ಮಾಡಿಕೊಳ್ಳುತ್ತದೆ....'

'ಅಂದರೆ, ಅದಕ್ಕೆ ಏನೂ ಕೊಡಬಾರದು....'

'ಆದರೂ ತಾನೇ ಸ್ವತಃ ಬೇಟೆಯಾಡಿ....'

'ಆದರೂ ನೋಡು, ಪಾಕ್ ಹಾವು ಸುದೈವನಾಗಿ ಬೆಳೆದದ್ದು ಪರಕೀಯ ಅನ್ನದಿಂದ. ಆದರೂ ಅದರ ವಿಷಶಕ್ತಿಯ ಪ್ರಭಾವ ನಮ್ಮ ಮೇಲಾಗಲಿಲ್ಲ. ಇನ್ನು ತನ್ನ ದೇಶದ ಸಂಪನ್ಮೂಲಗಳಿಂದಲೇ ಅದು ಶಸ್ತ್ರ ನಿರ್ಮಾಣಮಾಡಿ, ಹೋರಾಟಕ್ಕೆ ಬಂದರೆ ನಿರಾತಂಕ. ಆ ಗಳಿಗೆ ಬರುವುದೇ ಇಲ್ಲ.....'

'ಆಂದರೆ, ಅಮೆರಿಕೆ—ಚೀನಾಗಳು ಭುಟ್ಟೋರಿಗೆ ತಿಳಿಹೇಳಬೇಕೂಂತಾಯ್ತು. ಅವರು ಕೇಳದೆ ಹೋದರೆ.....?'

'ಶಸ್ತ್ರಾಸ್ತ್ರ ಪೂರಯ್ಕೆ ನಿಲ್ಲಿಸಿದರೆ, ಮುಗಿಯಿತಲ್ಲಾ? ಭುಟ್ಟೋ ಮತ್ತೆ ಪೊಟ್ಟನಾಗುತ್ತಾನೆ....'

'ಅದು ಸರೀನ್ರಿ. ಆದರೆ, ಅವರು ನಮ್ಮನ್ನೇ ನಂಬುವುದಿಲ್ಲ.....'

'ನಮ್ಮ ಅನಾಕ್ರಮಣ ನೀತಿ ಜಗಜ್ಜನಿತ. ಹಾಲಾವುದು ನೀರಾವುದು ಎಂದೂ ತಿಳಿಯಲಾಗದವರು ನಿಷ್ಪಕ್ಷ ರಾಜಕಾರಣಿಗಳೆಂತಾದರು?'

'ಅದೇ ಬಂದದ್ದೀಗ. ಭಾರತ ಉಪಖಂಡದಲ್ಲಿ ಶಾಂತಿಯನ್ನು ಬಯಸುವವರು ಭಾರತ—ಪಾಕ್‌ಗಳನ್ನು ತಮ್ಮಷ್ಟಕ್ಕೇ ಬಿಟ್ಟು ಬಿಡಬೇಕು.'

'ಇಷ್ಟಾದರೂ ಮಾಡಿದರೆ, ಕೆಟ್ಟ ಮೇಲಾದರೂ ಪಾಕಿಗಳಿಗೆ ಜ್ಞಾನೋದಯವಾದರೂ ಆಗಬಹುದು. ಇಲ್ಲವಾದರೆ, ಪಾಕಿಗಳು ಸಂಪೂರ್ಣ ಅಧಃಪತಿತರಾಗುತ್ತಾರೆ.

'ಜಗಲಿ....'

'ಏನು?'

'ಏನೇನು ಆಗಲಿಪೆಯೋ ಅದು ಆಗಿಯೇ ಹೋಗಲೀಂದೆ....'

ಹರಿಯುವ ನೀರಿಗೆ ದೋಣಿ ನಾಯಕರ ಅನುಮತಿಯೇಕೆ?'

ಆದರೂ....'

ಏನು?'

'ಏನೂ ಇಲ್ಲಾನ್ನಿ....'

'ಏನೂ ಇಲ್ಲ?'

'ಉಹ್ಞೂಂ....'

'ಹ್ಞಾಂ....'

—ಗೋರಾ

●●

ಡಾ। ಮೋದಿಯವರಿಗೆ ವೀರೇಂದ್ರ ಹೆಗ್ಡೆಯವರ ವ್ಯಾನ್ ಕೊಡುಗೆ

ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ತಾ. 22ರಂದು ಸರಳ ಸಮಾರಂಭವೊಂದರಲ್ಲಿ ನೇತ್ರದಾನಿ ಡಾ। ಎಂ. ಸಿ. ಮೋದಿಯವರಿಗೆ 37 ಸಾವಿರ ರೂ. ಬೆಲೆಯ ವ್ಯಾನೊಂದನ್ನು ಕೊಡುಗೆಯಾಗಿತ್ತರು

ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳು ಸನ್ನಿಧಿಯ ಆಧ್ಯಕ್ಷತೆಯನ್ನು ವಹಿಸಿದ್ದರು. ಈ ವ್ಯಾನಿನಲ್ಲಿ 14 ಜನ ಕೂರಲು ಅವಕಾಶವಿದೆ. ವ್ಯಾನನ್ನು 'ಮಯೂರ'ವೆಂದು ಹೆಸರಿಸಲಾಗಿದೆ. ಸನ್ನಿಧಿಯ ಧರ್ಮಸ್ಥಳದ ವಸಂತ ಮಹಾಲ್‌ನಲ್ಲಿ ಜರಗಿತು.

ಆರಂಭದಲ್ಲಿ ಉಜ್ರಿಯ ಶ್ರೀ ಮಂಜುನಾಥೇಶ್ವರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಸ್. ಪ್ರಭಾಕರರವರು ಸ್ವಾಗತಿಸಿದರು. ಶ್ರೀ ಹೆಗ್ಗಡೆಯವರು ಮಾತನಾಡಿ ಡಾ। ಮೋದಿಯವರು ಸಲ್ಲಿಸುತ್ತಿರುವ ಸುಹಾ ಸೇವೆಗಾಗಿ ನಮ್ಮ ಅಭಿಮಾನದ ಕೊಡುಗೆ ಇದೆಂದರು. ಡಾ। ಎಂ. ಸಿ. ಮೋದಿಯವರು ನೂತನವಾಹಿದ ಬಳಿಕ ಶ್ರೀ ಪೇಜಾವರ ಮಠಾಧೀಶರು ಅಭ್ಯಕ್ಷ ಭಾಷಣ ಮಾಡಿ ಡಾ। ಮೋದಿಯವರನ್ನು ಆಶೀರ್ವದಿಸಿದರು.

ಕೊನೆಯಲ್ಲಿ ಪರಮಹಂಸ ಭಾಸ್ಕರಂ ಶೀಷಾಚಾರ್ಯರು ಧನ್ಯವಾದ ಅರ್ಪಿಸಿದರು.

ಸಮ್ಮಿಶ್ರ ಸಾಂಸ್ಕೃತಿಕ ಪರಂಪರೆಯ ನಾಡು—

ಬಂಗ್ಲಾದೇಶ

ಲೇಖಕರು: ಡಾ| ಪ್ರಭಾಕರ ಮಾಚವೆ

"ನನ್ನ ಚಿನ್ನದ ಬಂಗ್ಲಾ ದೇಶವೇ ನಿನ್ನನ್ನು ನಾನು ಅತಿಯಾಗಿ ಪ್ರೀತಿಸುವೆ"
—ರವೀಂದ್ರನಾಥ ಟಾಗೋರ್

ಈಗ್ಗೆ ಕೆಲವು ತಿಂಗಳುಗಳ ಹಿಂದೆ ಶ್ರೀ ಹುಸೇನ್ ಅಲಿ ಅವರನ್ನು ನಾನು ಭೇಟಿ ಮಾಡಿದ್ದೆ. ಅವರ ಮನೆಯ ಹಾಲಿನಲ್ಲಿ ಎರಡು ದೊಡ್ಡ ಭಾವಚಿತ್ರಗಳನ್ನು ಕಂಡೆ. ಒಂದು ರವೀಂದ್ರನಾಥ ಟಾಗೋರ್‌ರದು. ಇನ್ನೊಂದು ನಜ್ರಾಲ್ ಇಸ್ಲಾಂರದು. ಬಂಗ್ಲಾದೇಶದ ಜನತೆ ಕವಿ ಸಾಹಿತಿಗಳಲ್ಲಿ ಹಿಂದೂ ಮುಸ್ಲಿಂರೆಂಬ ಬೇದವನ್ನೇ ಎಣಿಸಿಲ್ಲ. ಇದೇ ಕಾರಣದಿಂದಾಗಿ ಡಾಕ್ಕಾ ರೇಡಿಯೋ ಕವೀಂದ್ರ ಸಂಗೀತವನ್ನು ನಿಷೇಧಿಸಿತಾದರೂ ರವೀಂದ್ರರ ಗೀತೆ ಬಂಗ್ಲಾದೇಶದ ರಾಷ್ಟ್ರಗೀತೆಯಾಯಿತು. ಜೆ. ಸಿ ಬೋಸ್, ಪಿ. ಸಿ. ರೇ, ಮೈಕಲ್ ಮಧುಸೂದನದತ್ತ್, ಜೀವಾನಂದದಾಸ್, ಚಿತ್ತರಂಜನ್‌ದಾಸ್ ಮುತ್ತಿತರ ಗಣ್ಯವ್ಯಕ್ತಿಗಳಿಗೆ ಜನ್ಮವಿತ್ತ ಬಂಗ್ಲಾದೇಶ ಉನ್ನತ ಎಟ್ಟದ ವಿಜ್ಞಾನಿಗಳು, ಚಿಂತ್ರಕಾರು, ಕವಿಗಳು, ಸಾಹಿತಿಗಳಿಗೆ ಜನನವಿತ್ತಿದೆ. ಈ ಎಲ್ಲರೂ ಕೊರಾನ್‌ನಲ್ಲಿ ಹೇಳಿರುವುದನ್ನು– ನಿಮಗೆ ನಿಮ್ಮ ದಾರಿ ನಮಗೆ ನಮ್ಮದು, ಮತಧರ್ಮಗಳ ವಿಷಯದಲ್ಲಿ ಯಾವ ಒತ್ತಾಯವೂ ಬೇಡ ಎಂಬುದರಲ್ಲಿ ಅತ್ಯಂತ ವಿಶ್ವಾಸವಿಟ್ಟವರು, ಪಾಲಿಸಿದರು. ಮತ ಸಹಿಷ್ಣುತೆ ಮತ್ತು ಸೌಹಾರ್ದಗಳ ವಿಷಯದಲ್ಲಿ ಬಂಗ್ಲಾ ದೇಶಕ್ಕೆ ತನ್ನದೇ ಆದ ಒಂದು ಸ್ಥಾನವಿದೆ ಈ ದೇಶದ ಸಾಹಿತ್ಯ ಪರಂಪರೆ ಬಹುಮುಖವಾದವು. ಇದನ್ನೇ ಅನೇಕ ಕವಿಗಳು ಹಾಡಿ ಹೊಗಳಿದ್ದಾರೆ. ಹತ್ತೊಂಭತ್ತನೇ ಶತಮಾನದ ಕವಿ ಗೋಪಿಚಂದ್ರ ರೇ ಅವರು ಹೇಳಿದ ಮಾತು—ನಿಮ್ಮ ನಾಡಿನಲ್ಲಿ ನೀನೆ ದೇಶ ಭ್ರಷ್ಟರಂತಿದ್ದೀರಿ—1905ರಿಂದ 1911ರ ವರೆಗೆ ನಡೆದ ಸ್ವದೇಶೀ ಚಳುವಳಿಗೆ ಮುಖ್ಯ ಕಾರಣವಾಯಿತು. ಗೋಪಿಚಂದ್ರ ರೇ ನುಡಿಯನ್ನೇ ಇಂದಿನ ಬಂಗಾಳಿ ಕವಿಯೂದ ಶಂಸೂರ್ ರಹಮಾನರು ಬೇರೆ ಮಾತುಗಳಲ್ಲಿ ಬರೆದಿದ್ದಾರೆ. "ನನಗೆ ಇಂದು ನನ್ನ ನಾಡಿನಲ್ಲಿ ಶಾಂತಿ ಇಲ್ಲ ಕಾರಣ ಶತ್ರು ನನ್ನ ಮನೆಯಲ್ಲಿ ನೆಲಸಿದ್ದಾನೆ. ನನ್ನ ಭೂಮಿಯಲ್ಲೇ ನಾನು ವಿದೇಶೀಯನಂತೆ ಸಂಚರಿಸ ಬೇಕಾಗಿದೆ" ಎಂದಿದ್ದಾರೆ.

ಬಂಗ್ಲಾ ದೇಶದಲ್ಲಿ ಅರಬಿಯನ್ ಪರ್ಷಿಯನ್, ಸಂಸ್ಕೃತ, ಪಾಳಿ ಭಾಷೆಗಳ ಪಂಡಿತರಾಗಿ ಡಾ| ಶಹೀದುಲ್ಲಾ ಅವರೂ ಜನನ ಪಡೆದಿದ್ದಾರೆ. ಹಿಂದುಗಳ ಮೇಲೆ ವೈರ ತನ ತೋರಿದ ಹಾಗೂ ಬಂಗಾಳಿ ಭಾಷೆಗೆ ಮನ್ನತೆ ನೀಡದಿದ್ದ ಕಾರಣ ಅವರು ಡಾಕ್ಕಾ ವಿಶ್ವವಿದ್ಯಾನಿಲಯದ ಉಪಕುಲಪತಿ ಸ್ಥಾನ್ನ ಸ್ವೀಕರಿಸಿದರು.

ಸಮ್ಮಿಶ್ರ ಸಾಂಸ್ಕೃತಿಯನ್ನು ಅಭಿವೃದ್ಧಿಗೊಳಿಸುವುದೇ ಅವರ ಆಶಯವಾಗಿತ್ತು. ದಿನೇಶ್‌ಚಂದ್ರಸೇನ್‌ರು ಸಂಪಾದಿಸಿರುವ "ಮೆಮೆನ್‌ಸಿಂಗ್ ನಾಡುಪದ" ಸಂಗ್ರಹದಲ್ಲಿ ಅನೇಕ ಮುಸ್ಲಿಂ ಫಕೀರ್‌ಗಳು ಹಾಡುವ ಬಂಗಾಳಿ ಮಂತ್ರಗಳು ಸೇರಿವೆ. ಮುಸ್ಲಿಂ ಕವಿಗಳೇ ರಚಿಸಿರುವ ಸುಮಾರು 402 ವೈಷ್ಣವ ಪದಗಳನ್ನು ಕಾಣಬಹುದು. 1542ರಲ್ಲಿ ರಚನೆಯಾದ ಚೈತನ್ಯರ ಜೀವನ ಚರಿತ್ರೆಯಲ್ಲಿ ಹರಿದಾಸರು ಈ ರೀತಿ ಬರೆದಿದ್ದಾರೆ. "ಎಲ್ಲರೂ ಪೂಜಿಸುವುದು ಒಬ್ಬ ದೇವನನ್ನೇ, ಆತನ ಬಗ್ಗೆ ಕೊರಾನ್ ಮತ್ತು ಪುರಾಣಗಳು ಒಂದೇ ರೀತಿ ಬಣ್ಣಿಸಿವೆ." ನೊಕ್‌ಹಲಿಯ ಅಬ್ದುಲ್ ಹಕೀಮ್ ಎಂಬ ಕವಿ (18ನೆಯ ಶತಮಾನ) ಶ್ರೀ ಕೃಷ್ಣ, ರಾಧಾ ಮತ್ತು ವೈಷ್ಣವ ಮತದ ತಿರುಳು ಬಗ್ಗೆ ಮುಸ್ಲಿಂ ಹಾಡುಗಾರರು ಹಾಡುವ ಸಂಪ್ರದಾಯದ ಬಗ್ಗೆ ತಮ್ಮ "ನೂರ್ ನಾಮ"ದ ಬಣ್ಣಿಸಿದ್ದಾರೆ.

ಕೇವಲ ಕವಿಗಳೇ ಅಲ್ಲ, ಕವಿಯಿತ್ರಿಗಳೂ ಈ ಬಗ್ಗೆ ತಮ್ಮ ಕಾಣಿಕೆಯನ್ನು ನೀಡಿದ್ದಾರೆ. ಬೇಗಂ ಇಸ್ತಿಫೆ ಹಿಲಾಲಿ, ಜಹನಾರಾ ಆರ್ಜೂ, ಕರಿಲತೀಫಾ ಹಕ್, ಜುಬುನ್ನೇಸಾ ಜಮೂಲ್, ಅಸ್ಯಾಅಬ್ಬಾಸಿ ಮೆಹರುನ್ನಿಸಾ ಇತ್ಯಾದಿ ಕವಿಯಿತ್ರಿಗಳು ತಮ್ಮ ಬಂಗ್ಲಾನಾಡು ನುಡಿ ಮತ್ತು ಸಂಸ್ಕೃತಿಗಳ ಬಗ್ಗೆ ಹಾಡಿದ್ದಾರೆ. "ಹಿಂದೂ ಮುಸ್ಲೀಮರಿಬ್ಬರೂ ಒಂದೇ ಬಳ್ಳಿಯ ಎರಡು ಹೂಗಳು; ಒಂದೇ ತಾಯಿಯ ಎರಡು ಕಣ್ಣುಗಳು' ಎಂದಿದ್ದಾರೆ. ಹೀಗೆ ಹಿರಿಯರು ಕಿರಿಯರು ತಮ್ಮನಾಡಿನ ಸೌಭಾಗ್ಯವನ್ನು ಉಂಡು ಇತರರಿಗೆ ಉಣಿಸಲು ಸಫಲ ಪ್ರಯತ್ನ ನಡೆಸಿದ್ದಾರೆ.

ಮಿಹಿರ್ ಆಚಾರ್ಯರು ತಮ್ಮ ಸಣ್ಣ ಕಥೆಗಳ ಸಂಕಲನದ ಮೂಲಕ ಮತೀಯ ಸೌಹಾರ್ದ ಸಾಧನೆಯ ಬಗ್ಗೆ ಶ್ರಮಿಸಿದ್ದಾರೆ. ಇದರಲ್ಲಿ "ತುಳಸಿ" ಎಂಬ ಸಣ್ಣಕತೆ ಉತ್ತಮ ಉದಾಹರಣೆಯೂಗಿದೆ. "ಪೂರ್ವ ಬಂಗಾಳದ ಸಣ್ಣಕಥೆ ಇಂದು" ಎಂಬ ಕಥಾ ಸಂಕಲನದಲ್ಲಿ 45ಮಂದಿ ಹಿಂದುಗಳು ಹಾಗೂ ಮುಸ್ಲಿಂ ಸಾಹಿತಿಗಳು ಬರೆದ ಕತೆಗಳಿವೆ.

ಪೂರ್ವ ಬಂಗ್ಲಾ ದೇಶದ ಸಾಂಸ್ಕೃತಿಕ ಬಿಕ್ಕಟ್ಟಿನ ಬಗ್ಗೆ ಬದ್ರುದ್ದೀನ್ ಒಮರ್ ಅವರು "ರವೀಂದ್ರನಾಥ ಮತ್ತು ಬಂಗ್ಲಾ ದೇಶದ ಸಂಸ್ಕೃತಿ"ಎಂಬ ಕೀರ್ತಿಕೆಯಲ್ಲಿ ಬರೆಯುತ್ತಾ ಹಿಂದೂ ಸಾಹಿತಿಗಳಾಗಲಿ, ಮುಸ್ಲಿಂ ಸಾಹಿತಿಗಳಾಗಲೀ ಮತೀಯ ದ್ವೇಷಗಳ ಬಗ್ಗೆ ಬರೆದಿಲ್ಲ. ಅವರಿಗೆ ಎಲ್ಲಾ ಮತೀಯರೂ ಒಂದೇ ಎಂಬುದನ್ನು ಎತ್ತಿ ತೋರಿಸಿದ್ದಾರೆ. ವಿಶ್ವ ಪ್ರೇಮ ಹಾಗೂ ಸೋದರತ್ವ ಆದರ್ಶಗಳೇ ಅವರ ಬರವಣಿಗೆಯ ಮುಖ್ಯ ತಿರುಳು. ಡಾಕ್ಕಾದಲ್ಲಿರುವ ಬಂಗ್ಲಾ ಅಕಾಡಮಿಯ ಹಿಂದಿನ ಡೈರೆಕ್ಟರ್ ಹಾಗೂ ಚಿತ್ತಗಾಂಗ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಸಯ್ಯದ್ ಆಲಿ ಹಾಸನ್ ಅವರು ಪಶ್ಚಿಮ ಪಾಕಿಸ್ತಾನದ ಸೈನಿಕರ ಬಗ್ಗೆ ಬರೆಯುತ್ತಾ ಅವರು ಶಿಲಾಯುಗದ ಅನಾಗರೀಕರಂತೆ ವರ್ತಿಸುತ್ತಿವ್ವಾದರೆ. ಅವರು ಸ್ವಾರ್ಥಪರರು ಸಮ್ಮಿಶ್ರ ಸಂಸ್ಕೃತಿ ಅಭಿವೃದ್ಧಿ ಅವರಿಗೆ ಬೇಕಿಲ್ಲ" ಎಂದಿದ್ದಾರೆ. ●

ಸಂದರ್ಶಿಸಿರಿ — ಸಂತೃಪ್ತರಾಗಿರಿ!!
ಬ್ಲೂಜಾಗರಾ ವಜ್ರಗಳಿಗೆ ಅಧುನಿಕ ಫೇಶನ್ ಚಿನ್ನಾಭರಣಗಳಿಗೆ ಹೆಸರಾಂತ
ಎಸ್. ಎಲ್. ಶೇಟ್ ಡೈಮಂಡ್ ಹೌಸ್
ಸ್ಟೈನ್‌ಲೆಸ್ ಸ್ಟೀಲು ಪಾತ್ರೆಗಳಿಗೂ ಮತ್ತು ಉಡುಗೊರೆ ವಸ್ತುಗಳಿಗೂ
ಅಶೋಕ ಸ್ಟೈನ್‌ಲೆಸ್ ಸ್ಟೀಲು ಸೆಂಟರ್
=ಎಲ್ಲಾ ತರದ ಫೊಟೋಗ್ರಾಫಿಕ್ ವಸ್ತುಗಳಿಗೆ=
ಐಡಿಯಲ್ ಫೊಟೋ ಹೌಸ್ PHONE: 3131
ಅಗ್ಫಾ ಕೊಡಕ್, ಇಲ್‌ಫೋರ್ಡ್ ಸೆನ್ಸಿಟ್ಸ್ ಮತ್ತು ಹಿಂದು ಫಿಲ್ಮುಗಳ ಅಧಿಕೃತ ಮಾರಾಟಗಾರರು.
ಕೆ. ಎಸ್. ರಾವ್ ರೋಡ್, ಹಂಪನಕಟ್ಟೆ, ಮಂಗಳೂರು–1
Tele: GOLDKING Estd: 1947 Phone: 3242 Res: 3272

Gram: VISHWA Tel: 28111 & 28112
When at Rangalore
Stay at
HOTEL NATARAJA
Restaurant, Boarding & Lodging,
107 Police Road, City Market,
BANGALORE-2
Centrally situated, delicious food,
Comfortable rooms, Courteous service.
Attached bath rooms with running hot and cold water.
Telephone attached rooms.

ಮೆಷೀನ್ ಟೂಲ್ ಕೈಗಾರಿಕೆಯ ಪ್ರಗತಿ

ಸರ್ಕಾರಿವಲಯದ ಹಿಂದೂಸ್ತಾನ್ ಮೆಷೀನ್‌ಟೂಲ್ಸ್ ಕಾರ್ಖಾನೆಯು ದೇಶದಲ್ಲಿ ತಯಾರಾಗುವ ಮೆಷೀನ್‌ಟೂಲ್ಸ್‌ಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಭಾಗವನ್ನು ತಯಾರಿಸುತ್ತಿದೆ.

ಈಗ ಈ ಕಾರ್ಖಾನೆಯು ವಿವಿಧೋದ್ದೇಶ ಯಂತ್ರಗಳ ಪೂರ್ಣ ಬೇಡಿಕೆಯನ್ನು ಅತ್ಯತ್ತನು ಪರಿಷ್ಕೃತ ಯಂತ್ರಗಳ ಶೇಕಡ 75ರಷ್ಟು ಬೇಡಿಕೆಗಳನ್ನು ಪೂರೈಸುತ್ತಿದೆ.

ದೇಶದ ಮೆಷೀನ್‌ಟೂಲ್ ಕೈಗಾರಿಕೆಯ ರಫ್ತು ಆದಾಯವು ಕಳೆದ ಐದುವರ್ಷಗಳ ಅವಧಿಯಲ್ಲಿ ನಾಲ್ಕುಪಟ್ಟು ಹೆಚ್ಚಿದೆ; ಎಂದರೆ 75 ಲಕ್ಷ ರೂಪಾಯಿಯಿಂದ 2.84 ಕೋಟಿ ರೂಪಾಯಿಗೇರಿದೆ

ಮೆಷೀನ್‌ಟೂಲ್‌ಗಳ ತಯಾರಿಕಾ ಪ್ರಮಾಣವು 1953ರಲ್ಲಿ 1 ಕೋಟಿ ರೂಪಾಯಿ ಇದ್ದುದು 1970ರಲ್ಲಿ 37.3 ಕೋಟಿ ರೂಪಾಯಿಗೇರಿತು.

ಇಂದು ದೇಶದಲ್ಲಿ ಮೆಷೀನ್‌ಟೂಲ್ ತಯಾರಿಸುವ 112 ಘಟಕಗಳಿವೆ ಈ ಘಟಕಗಳಲ್ಲಿರುವ ಯಂತ್ರಗಳ ಬೆಲೆ 70 ಕೋಟಿ ರೂಪಾಯಿ. ಈ ಕೈಗಾರಿಕಾ ಕ್ಷೇತ್ರದಲ್ಲಿ 28 ಸಹಸ್ರ ಉದ್ಯೋಗಿಗಳೂ, ತರಬೇತಾದ ತಂತ್ರಜ್ಞರೂ ಇದ್ದಾರೆ. ●●

ಪ್ರಕಟಣೆ

ಉಡ್ಪಿ ಮುನ್ಸಿಫ್ ಕೋರ್ಟಿನಲ್ಲಿ

O. S. No. 304/1971.

ಉಡ್ಪಿ ಅದಮಾರು ಮಟದ ಶ್ರೀ ವಿಭುದೇಶ ತೀರ್ಥ ಸ್ವಾಮಿರು —ವಾದಿರು.
ಮತ್ತು
ನಾಗಿ ಪೂಜಾರ್ತಿ ಕೂಡಾ —ಪ್ರತಿವಾದಿರು.
ಇವರೊಳಗೆ–

4ನೆ ಪ್ರತಿವಾದಿ ಸಂಜೀವ, 6ನೆ ಪ್ರತಿವಾದಿ ಸುಶೀಲ, 8ನೆ ಪ್ರತಿವಾದಿ ದಾಮೋದರ–ನಾಗಿ ಪೂಜಾರ್ತಿ ಮಕ್ಕಳು
ಉಡ್ಪಿ ತಾಲೂಕು ಮಣಿಪುರ ಗ್ರಾಮ—ಇವರಿಗೆ ಯಾ ಮೂಲ್ಕ ತಿಳಿಯಪಡ್ಪಿವದೇನೆಂದ್ರೆ

ಮೇಲ್ಕಂಡ ವಾದಿರು, ಗೇಣಿ ಬಾಕಿ ಕುರಿತು ಮೂಡಿಪ ಸದ್ರಿ ದಾವೆಯಲ್ಲಿ 4, 5, 6ನೆ ಪ್ರತಿವಾದಿರ ನೋಟ್ಸು ಬಗ್ಗೆ ತಾ. 18–1–72ಕ್ಕೆ ಯಿಜೋಣಾಗಿಯಜೆ. ಆ ಕುರಿತು ಸದ್ರಿ ಪ್ರತಿವಾದಿರಿಗೆ ಲಕ್ಷೇಪ ಹೇಳತಕ್ಕದ್ದು ಯಿದ್ರೆ ಸದ್ರಿ ದಿನ ಮೇಲ್ಕಂಡ ಕೋರ್ಟು ಮುಂದೆ ಪೂರ್ವಾಹ್ನ 10 ಗಂಟೆಗೆ ಹಾಜ್ರಾಗಿ ಹಾಜೀರು ಮಾಡಿಕೊಳ್ಳ ತಕ್ಕದ್ದೆಂಬ ಸಂಗ್ತಿ ತಿಳಿಸೋಣಾಗಿಯದೆ.

V. R. Kidiyoor.
Advocate for Plaintiff.

ಉಡ್ಪಿ, 20—12—71.

ಭುಟ್ಟೊ ತಾಡನ, ನಿಕ್ಸನ್ ಪಲಾಯನ, ಹೀತ್ ಸಮರ್ಥನ

ಪಾಕಿಸ್ತಾನದ ಹೊಸ ಅಧ್ಯಕ್ಷ ಜುಲ್ಫಿಕರ್ ಆಲಿ ಭುಟ್ಟೋ ಅವರ ಹೆಸರು ವಿಶ್ವ ಶ್ರುತ. ದಂಡಿನಾಡಳಿತೆಯಿಂದ ನೊಂದ ಪಾಕ್ ಜನತೆಗೆ ಈ ಭುಟ್ಟೊ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕಾರ ಮಾಡಿನ್ನೆರಿಂದ ಒಂದು ಮಾತ್ರ ಸಮಾಧಾನ–ಏರ್ಪಡುತ್ತಾಯಿತ ಪ್ರತಿನಿಧಿಯು ಅಧಿಕಾರ ಸೂತ್ರಗಳನ್ನು ಹಿಡಿಮಕೊಂಡನೆಂದು. ಧರ್ಮ ಮತ್ತು ದ್ವೇಷ ಭಾವನೆಗಳ ನೀರು–ಗೊಬ್ಬರಗಳನ್ನೇ ಸುರಿದು ಬೆಳೆಸಿಕೊಂಡು ಬಂದ ವಾಕ್ ಜನತಾ ವೈಕ್ಷದಲ್ಲಿ ಅಯ್ಯಬಖಾನರ ಕಾಲದಲ್ಲಿ ಹೊವಾಯ್ತು; ಯೊಹ್ಯಾಖಾನರ ಆಡಳಿತದಲ್ಲಿ ಕಾಯೊಯ್ತು; ಇನ್ನು ಭುಟ್ಟೋ ನುಹಾಶಯರ ಆಡಳಿತದಲ್ಲಿ ಹಣ್ಣಾಗುವುದು ನಿಸ್ಸಂದೇಹ ಒಂದು ನೇಳೆ ಅವು ತಾವಾಗಿ ಹಣ್ಣಾಗದೆ ಹೋದರೆ, ಮೊಡೆದೂ ಬಡಿದೂ ಹಣ್ಣು ಮಾಡುವ ತೀವ್ರ ಆಕಾಂಕ್ಷೆ ನೋಂದಿರುವ ಭುಟ್ಟೊ ವಾಕಿಸ್ತಾನದ ಸರ್ವಾಧಿಕಾರಿಯಾಗಿ ಬಿಟ್ಟಿದ್ದಾರೆ

ಭುಟ್ಟೊ ಮಹಾಶಯರು ಅಧ್ಯಕ್ಷರಾದ ಮೇಲೆ ಮೊಡಿದ ಮೊದಲ ಪ್ರಸಾರ ಭಾಷಣ ಮತ್ತು ನೀಡಿದ ಮೊದಲ ಪತ್ರಿಕಾ ಸಂದರ್ಶನದಲ್ಲಿ ಅವರ ದುಷ್ಟ ಮನೋಭಾವನೆಗಳು ಎದ್ದು ಕಾಣುತ್ತವೆ ಬಂಗ್ಲಾ ವಿಮೋಚನೆಯ ಮಣ್ಯಕಾರ್ತ್ಯವನ್ನೆವರು ವಿದೇಶೀ ಆಕ್ರಮಣವೆಂದು ಹೆಸರಿಸಿದ್ದಾರೆ.

ಇದನ್ನು ತಾನು ವಿಮೋಚನೆ ಮಾಡುವ ಹಂಬಲವನ್ನಿಟ್ಟುಕೊಂಡಿದ್ದಾರೆ ಪಶ್ಚಿಮ ಬಂಗಾಳದ ಕೋಳಿ ಪ್ರದೇಶವಿಂದೆ ಬಂಗ್ಲಾ ದೇಶವನ್ನು ವ್ಯರ್ಥವಾಗಿಡಲು ವೈತ ನಿಶ್ಚಯ ಮಾಡಿದ್ದಾರೆ ಇವರ್ಕಾಗಿ ಮನೆ ಮನೆಯಲ್ಲೂ ಯುದ್ಧ ಸನ್ನದ್ಧತೆಯುವುದೆಂದು ಪಾಪು ಪಿಪ್ಪಾರಿಕೆ ಬೇರೆ ಜಾರಿಕೊಂಡಿದ್ದಾರೆ.

ಶ್ರೀ ಭುಟ್ಟೊ ಮಹಾಶಯರು ತನ್ನ ಮಿಲಿಟರಿ ಅಧಿಕಾರಿಗಳಂತೆ ಬಾಗತದೊಡನೆ ನೇರವಾಗಿ ಸಮಾನ ಶರ್ತಗಳ ಮೇಲೆ ಸಂಧಾನ ಸಭೆಯನ್ನು ಕೊಡುವುದಕ್ಕೆ ಸಿದ್ಧರಾಗಿದ್ದಾರೆ. ಕಾಶ್ಮೀರದ ಪ್ರಶ್ನೆಯು ಇನ್ನೂ ಇತ್ಯರ್ಥವಾಗದ್ದು ಎಂದು ನಂಬುವ ಪಾಕ್ ಆ ಬಗ್ಗೆಯೂ ಶರ್ತ ಹೇರುತ್ತಲೇ ಬಂದಿದೆ. ಭಾರತ—ಪಾಕ್‌ಗಳ ಎಲ್ಲ ತರದ ಮಾತುಕತೆಯಲ್ಲೂ ಈ ಕಾಶ್ಮೀರದ ಅಪಸ್ವರವನ್ನು ಪಾಕು ಎತ್ತಿದ್ದರಿಂದಲೇ ಅನು ಮುರಿದು ಹೋಗುತ್ತ ಬಂದಿದೆ ಪಾಕಿಸ್ತಾನವು ಕಾಶ್ಮೀರದ ವಿಲಯನವನ್ನು ಒಪ್ಪಿದೆ, ಬಂಗ್ಲಾ ದೇಶದ ಘಟನೆಯನು ಮುಗಿನ ಅಧ್ಯಾಯವೆಂದು ತಿಳಿಯದೆ ಯಾವುದೇ ರೀತಿಯ ಸಂಧಾನವೂ ಸಾಧ್ಯವಿಲ್ಲ. ತಾಷ್ಕೆಂಟ್ ಒಡಂಬಡಿಕೆಯೇ ಕೊಳೆತು ನಾರುತ್ತಿರುವಾಗ ಮತ್ತೆ ಮತ್ತೆ ಒಡಂಬಡಿಕೆಗಳು ಯಾಕೆ?

ತಪ್ಪು ವಿದೇಶ ನೀತಿಯನ್ನು ಪಾಕಿಸ್ತಾನ ಪುನಾರೂಪಿಸುವುದೆಂದು ಭುಟ್ಟೊ ಘೋಷಿಸಿದ್ದಾರೆ ಬೃಹತ್ ರಾಷ್ಟ್ರಗಳು–ಮುಖ್ಯವಾಗಿ ಅಮೆರಿಕೆ ಮತ್ತು ಚೀನಾಗಳೊಡನೆ ನಿಕಟ ಸಂಬಂಧ–ನುಟ್ಟಿಗೆ ಇದು ಪರಿಸೀಮಿ ತವಾನರೆ ಸಹಜ ಸೋವಿಯತ್ತು ಭಾರತ ನರವಾಗಿ ವರ್ತಿಸಿದರಿಂದ ಅದರ ಮೇಲೆ ದ್ವೇಷಕಾರುವುದೂ ಬ್ರಿಟನ್ – ಫ್ರಾನ್ಸುಗಳು ತೆಪ್ಪಗುಳಿದದ್ದರಿಂದ ಅವನ್ನು ನಿಂದಿಸುವುದೂ ನ್ಯಾಯವೇ. ೧೯೭೦ರ ಚುನಾಯಿತ ಪ್ರತಿನಿಧಿಗಳ ಸಭೆಯನ್ನು ಕರೆಯುವ ಆಲೋಚನೆ ಮಾಡದಿರುವ ಶ್ರೀ ಭುಟ್ಟೊ ಪಾಕಿಸ್ತಾನದ ನಾಗರಿಕ ಸರ್ವಾಧಿಕಾರಿಯಾಗಿ ಬಹುಕಾಲ ಉಳಿಯುವ ನಿರ್ಧಾರ ಮಾಡಿದ್ದಾರೆನಿಸುತ್ತದೆ. ಸೋಲಿನಿಂದ ಕಂಗಟ್ಟು ವಾಕ್ ಜನತೆಯಲ್ಲಿ ಸೇಡಿನ ಭಾವನೆಯನ್ನು ಜಾಗೃತಗೊಳಿಸಿ, ವಿದೇಶೀಯ ನರವಿನಿಂದ ಭಾರತದ–ಮೇಲೆ ಪೂರ್ಣ ಪ್ರಮಾಣದ ಸಮರ ಹೂಡಿ ಪಾಕಿಸ್ತಾನದ ಗೋರಿ ಕಟ್ಟಲು ಅವರು ಹವಣಿಸಿದಂತಿದೆ.

ಆದುದರಿಂದ ಯುದ್ಧ ಮುಗಿದಿಲ್ಲ; ಅ ದೀಗತಾನೇ ಆರಂಭನಾಗಿದೆ ಮಾತ್ರವೆನಿಸುತ್ತದೆ

ಆಡಿಗೆ ಬಿದ್ದರೂ ಮೂಗು ಮೇಲೆಂದು ಹೇಳುವ ಧಾಟಿಯಲ್ಲಿ ಅಮೆರಿಕೆಯೂಗವರ್ತಿಸತೊಡಗಿದೆ. ಬಂಗ್ಲಾದೇಶದಲ್ಲಿ ಯೂ ಹ್ಯಾಖಾನರ ನಿರಾತಂಕ ನರಮೇಧ ನಡೆಸುವುದನ್ನು, ಕೋಟಿ ನಾಗರಿಕರನ್ನು ದೇಶ ಭ್ರಷ್ಟರಾಗಿಸಿದ್ದನ್ನು ಕೊನೆಯ ಗಳಿಗೆಗೂ ನಿಕ್ಸನ್ ಒಪ್ಪಿಕೊಳ್ಳಲಿಲ್ಲ. ಪಾಕು ಭಾರತದ ಮೇಲೆ ಆಕ್ರಮಣ ಮಾಡಿತೆಂದೂ ಅವರು ಹೇಳುವುದಿಲ್ಲ. ಪುಣ್ಯಕ್ಕೆ, ಬಂಗ್ಲಾದೇಶದಲ್ಲಿ ಪಾಕ್ ಸೇನೆ ಶರಣಾಗಿದೆಯೆಂದೂ ಭಾರತ ಪಶ್ಚಿಮ ವಲಯದಲ್ಲಿ ಕದನವಿರಾಮ ಘೋಷಿಸಿದೆಯೆಂದೂ ಒಪ್ಪಿದ್ದಾರೆ. ಭದ್ರತಾ ಸಮಿತಿಯಲ್ಲಿಯೂ ವಿಶ್ವ ಸಂಸ್ಥೆಯಲ್ಲಿಯೂ ಅವರು ಪಾಕಿಸ್ತಾನದ ವಕೀಲರಂತೆ ನಡೆದುಕೊಂಡರು. ಭಾರತ ಸಮರ ವಿರಾಮವನ್ನು ಕೊಡಹೊಡುವುದಕ್ಕೂ ತಾನೇ ಕಾರಣನೆಂದವರು ಕೊಚ್ಚಿಕೊಳ್ಳ ಹೊರಟಿದ್ದಾರೆ. ತಾನು ಏಳನೆಯ ನೌಕಾಪಡೆಯ ಬಂಗಾಳ ಕೊಲ್ಲಿಗೆ ಕಳಿಸಿದ್ದರಿಂದ ಭಾರತ ಹೆದರಿತೆಂದೂ ಇಲ್ಲವಾದರೆ, ಪಶ್ಚಿಮ ಪಾಕಿಸ್ತಾನವೂ ಇಲ್ಲವಾಗುತಿತ್ತು ಎಂದೂ ಅವರು ತ್ವತದ ಪ್ರಚಾರಕ್ಕೆ ತೊಡಗಿದ್ದಾರೆ. ಇದನ್ನು ಅಜ್ಞ ಪಾಕ್‌ಜನ ನಂಬಬಹುದು; ತಾನು ನ್ಯೂಯಾರ್ಕಿಗೆ ಹೋಗಿ ಸಾಧಿಸಿದ ಸಿದ್ಧಿಯಿದೆಂದು ಹಾಲಿ ರಾಷ್ಟ್ರಪತಿ ಭುಟ್ಟೊ ಕೂಡ ಕೊಚ್ಚಿಕೊಳ್ಳಬಹುದು.

ಬಂಗಾಳಕೊಲ್ಲಿಗೆ ಅಮೆರಿಕೆಯ ಏಳನೆಯ ನೌಕಾಪಡೆಯೇಕೆ ಬಂತು? ಇದು ಅಧ್ಯಕ್ಷ ನಿಕ್ಸನ್ನರಿಗೂ ಸರಿಯಾಗಿ ಗೊತ್ತಿರಲಾರದು. ಆದರೆ, ಭಾರತವು ಸಮರ ವಿರಾಮದ ಕೊಡುಗೆಯನ್ನು ಏಕೆ ನೀಡಿತು ಎಂದು ಎಲ್ಲ ಭಾರತೀಯರಿಗೂ ಅವರ ನಿಲುಮೆಯನ್ನು ನಿಷ್ಕಲಂಕ ಹೃದಯದಿಂದ ಪರಿತೀಲಿಸುವವರಿಗೂ ತಿಳಿಯುತ್ತದೆ. ಭಾರತ ಸರಕಾರದ ಏಕಮಾತ್ರ ಉದ್ದೇಶ ಬಂಗ್ಲಾ ವಿಮೋಚನೆ ಮಾತ್ರ. ಅಂತಾರಾಷ್ಟ್ರೀಯ ವಲಯವು ಕೈಕಟ್ಟಿ ಕುಳಿತಾಗ, ನಮ್ಮ ಪ್ರದೇಶದ ಮೇಲೆ ವಾಕ್ ಪಡೆಗಳು ಆಕ್ರಮಣ ಮಾಡಿದಾಗ, ಬಂಗ್ಲಾದೊಳಕ್ಕೆ ನುಗ್ಗಲು, ಅದನ್ನು ವಿಮೋಚನೆ ಗೊಳಿಸಲು ನಮ್ಮ ಪಡೆಗಳಿಗೆ ಆದೇಶ ನೀಡಲಾಯ್ತು. ಆದರೆ, ಪಾಕ್ ದೊರ್ತರು ಪಶ್ಚಿಮ ವಲಯದಲ್ಲೂ ನಮ್ಮ ರಾಜಕೆಗಳ ಮೇಲೆ ದಾಳಿ ನಡೆಸಿದ್ದರಿಂದ ಆತ್ಮರಕ್ಷಣೆಗಾಗಿ ಹೋರಾಡುವುದು ಅನಿವಾರ್ಯವಾಯ್ತು. ಇದನ್ನು ಒಪ್ಪಲು ನಿಕ್ಸನ್ ಇನ್ನೂ ಸಿದ್ಧರಿಲ್ಲ. ಅವರೂ ಅವರ ಸರಕಾರವೂ ಭಾರತವನ್ನು ಆಕ್ರಮಣಕಾರಿಯೆಂದು ಹೆಸರಿಸಲು ಭಗೀರಥ ಪ್ರಯತ್ನ ನಡೆಸಿದ್ದರು. ಆಸಫಲರಾದ ಅವರು ಇನ್ನೂ ತಮ್ಮ ವ್ಯರ್ಥ ಮಿಥ್ಯೆಯ ದಾರಿಯನ್ನು ಬಿಡದಿರುವುದು ಶೋಚನೀಯ.

ಬರ್ಮುಡದ ಹ್ಯಾಮಿಲ್ಟನ್ನದಲ್ಲಿ ಬ್ರಿಟನ್ನಿನ ವಿದೇಶಾಂಗ ಕಾರ್ಯದರ್ಶಿ ಸರ್ ಅಲೆಕ್ಸ್ ಡಗ್ಲಸ್ ಹ್ಯೂಮ್ ಮತ್ತು ಅಮೆರಿಕೆಯ ರಾಜ್ಯ ಖಾಖೆಯ ಕಾರ್ಯದರ್ಶಿ ವಿಲಿಯಂ ರೋಜರ್ಸರ ನಡುವೆ ನಡೆದ ಮಾತುಕತೆಗಳಲ್ಲಿ ಅಮೆರಿಕದ ನೀತಿ ವ್ಯಕ್ತವಾಗಿದೆ. ಪಾಕಿಸ್ತಾನವನ್ನು ಆಕ್ರಮಿಸುವುದೇ ಭಾರತದ ಘನೋದ್ದೇಶವಿದ್ದದ್ದರಿಂದ ಅದು ಪಶ್ಚಿಮ ವಲಯದಲ್ಲಿ ದಾಳಿಗೆ ತೊಡಗಿತು ಎಂದು ಹೇಳಿದ ಡಗ್ಲಾಸರು ಬಂಗಾಳದಲ್ಲಿ ಕೈಕೊಂಡ ವಿಮೋಚನಾ ಕಾರ್ಯಾಚರಣೆಯನ್ನು ಕಟುವಾಗಿ ಪರಿಗಣಿಸಿಲ್ಲವೆಂಬುದು ಗಮನಾರ್ಹ. ಎಂತಾದರೂ ಭಾರತವನ್ನೇ ತಪ್ಪುಗಾರನೆಂದು ಹೆಸರಿಸಲು ಅವರು ಪಶ್ಚಿಮದಲ್ಲಿ ಭಾರತವೇ ಆಕ್ರಮಣವಾರಂಭಿಸಿತೆಂದು ಪ್ರಚಾರ ಮಾಡಲು ಹೊರಟಿದ್ದಾರೆ. ಅಮೆರಿಕೆಯು ಈ ನೀತಿಯಿಂದ ಅದು ಪಾಕಿಸ್ತಾನವನ್ನೂ ಮೆಚ್ಚಿಸುವುದು ಸಾಧ್ಯವಿಲ್ಲದಿರುವಾಗ, ಭಾರತದೊಡನಿರುವ ಸಂಬಂಧವನ್ನು ಉಳಿಸಿಕೊಳ್ಳುವುದು ಸಾಧ್ಯವಾದೀತೆ?

ಂ ಂ ಂ

೧೯೬೫ರಲ್ಲಿ ಭಾರತದ ಮೇಲೆ ಆಕ್ರಮಣ ಮಾಡಿ ಪಾಕಿಸ್ತಾನವು ಸಮರ ಘೋಷಿಸಿದಾಗ, ಬ್ರಿಟನ್ನಿನ ಪ್ರಧಾನಿಯಾಗಿದ್ದವರು ವಿಲ್ಸನ್. ಅವರು ಬ್ರಿಟಿಷ್ ಪತ್ರಿಕೆಗಳ ಪಕ್ಷಪಾತಪೂರಿತ ವರದಿಗಳ ಆಧಾರದ ಮೇಲೆ ಪಾರ್ಲಿಮೆಂಟಿನಲ್ಲೊಂದು ಹೇಳಿಕೆ ನೀಡಿ ಬ್ರಿಟನ್ನಿನ ಮುಖಕ್ಕೆ ಮಸಿ ಬಳೆದರು; ಭಾರತದೊಡನಿದ್ದ ಸಂಬಂಧವನ್ನೂ ಸಡಿಲುಗೊಳಿಸಿದರು. ಭಾರತವನ್ನೇ ಆಕ್ರಮಣಗಾರನೆಂದವರು ಸುಳ್ಳು ಹೇಳಿದ್ದರಿಂದ, ಕಾಮನ್‌ವೆಲ್ತಿನಿಂದ ಭಾರತ ನಿರ್ಗಮಿಸಬೇಕೆಂಬ ಮಾತೂ ಗಟ್ಟಿಯಾಗಿ ಕೇಳಿ ಬಂತು ಮುಂದವರು ತಮ್ಮ ತಪ್ಪನ್ನು ತಿದ್ದಿಕೊಂಡರು. ಪ್ರಶ್ನೆಯನ್ನು ತಾನೇ ಅಧ್ಯಯನ ಮಾಡಿಲಿಲ್ಲವೆಂದೂ ದೇಶದ ಪತ್ರಿಕೆಗಳು ತನ್ನನ್ನು ತಪ್ಪುದಾರಿಗೆ ಕೊಂಡೊಯ್ದವೆಂದೂ ಹೇಳಿ ಪರಿಮರ್ಜನೆಯ ಪ್ರಯತ್ನ ಮಾಡಿದರು. ಅಂದು ವಿಲ್ಸನ್ ಮಾಡಿದ ತಪ್ಪನ್ನೇ ಈಗ ಹೀತರಿಂದ ಮಾಡಿಸಬೇಕೆಂದು ಹಲವು ಪ್ರತಿನಿಧಿಗಳು ಪ್ರಯತ್ನಿಸಿ ಸೋತರು. ಬ್ರಿಟನ್ನು ವಿಶ್ವಸಂಸ್ಥೆಯಲ್ಲಿ ಮತ್ತು ಭದ್ರತಾ ಸಮಿತಿಯಲ್ಲಿ ಅನುಸರಿಸಿದ ನೀತಿ ವಾಕ್ ಪರವಾಗಿಲ್ಲವೆಂಬುದು ಸ್ಪಷ್ಟ. ಸರ್ವಾನುಮತವಾಗಲೊಲ್ಲದ ಗೊತ್ತುವಳಿಗೆ ಮತದಾನವೇಕೆಂದು

ಂ ಂ ಂ

ಸುವ್ಯವಸ್ಥಿತ ಹಾಗೂ ಉತ್ತಮವಾದ ಎಲ್ಲಾ ತರದ ಬ್ಯಾಂಕಿಂಗ್ ವ್ಯವಹಾರಗಳಿಗೆ
141 ಶಾಖೆಗಳಿಂದ ಹಬ್ಬಿರುವ **"ವಿಜಯಾ ಬ್ಯಾಂಕ್"**ನಲ್ಲಿ
ಸಂಪರ್ಕ ಬೆಳೆಸಿರಿ.

ಠೇವಣಾತಿಗಳ ಮೇಲೆ 7½% ವರೆಗಿನ ಬಡ್ಡಿ.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ 4% ಬಡ್ಡಿ.

ಅತಿ ಲಾಭದಾಯಕವಾದ ನಮ್ಮ ದೈನಿಕ ಉಳಿತಾಯ ಯೋಜನೆ
"ಜೀವನ-ನಿಧಿ"ಯಲ್ಲಿ
ನಿಮ್ಮ ಉಳಿತಾಯವನ್ನು ವಿನಿಯೋಗಿಸಿರಿ.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್,

(ಸ್ಥಾಪನೆ: 1921)

ರಿಜಿಸ್ಟರ್ಡ್ ಆಫೀಸು:– **ಲೈಟ್ ಹೌಸ್ ಹಿಲ್ ರೋಡ್, ಮಂಗಳೂರು–3.**
ಆಡಳಿತ ಕಚೇರಿ: ಭಾರತೀಯ ವಿದ್ಯಾಭವನ, ಪಿ. ಬಿ. ನಂಬ್ರ 156,
ರೇಸ್ ಕೋರ್ಸ್ ರೋಡ್, ಬೆಂಗಳೂರು–1.

ಎಮ್. ಸುಂದರ್‌ರಾಮ್ ಶೆಟ್ಟಿ,
ಚೇಯರ್‌ಮೆನ್.

ನೋಟೀಸು

ಮುಕ್ತಾರು Hnd Adle. Munsiff ಕೋರ್ಟಿನಲ್ಲಿ

E.P. 53/71. (O. S. 312/69)

N. ಆಸಾಮ್ಯಾ ಆದಿಗ —ಅರ್ಜಿದಾರ
ಸರಿಸಿಸ ಪೂಜಾರಿ —ಎದ್ರಿ
ಕ್ಯಾಂಡ ಪೂಜಾರಿ ಆಕೆಯ ಕಸ್ಟಡ್ಯಾಶಿ,
ಒಕ್ಕಲ್ಗ ಗ್ರಾಮ.

ಸಪ್ತು ಎದ್ರಿಗೆ ಕೋರ್ಟಿನ ಕ್ರಮ ಪ್ರಕಾರ ಈ ನೋಟೀಸ ಕಳಿಯಸಿಕ್ಕೊಳ್ಳುವುದೇನೆಂದರೆ:—

ಈ ಆಮ್ಯಾಲಿಯಲ್ಲಿ ಪಾಕಲಾದ ಬೇಲಂ ಇನ್ಸ್‌ಪೆಕ್ಷನ ರಿಪೋರ್ಟಗಳನ್ನು ನೋಡಿಯಿಸಿಕೊಂಡ ನೋಟೀಸನ ಬಗ್ಗೆ ಕಾ. ೬–1–72ಕ್ಕೆ ಒಟ್ಟಿರುತ್ತದೆ. ಸದ್ರಿ ದಿವಸ ಈ ಕೆಳಗೆ ಮೊಜಿ ಪಾಜರಾಗಿ ಉದಾಹರಿಸಕತ್ತೆನ್ನು. ತಪ್ಪಿದ್ದಲ್ಲಿ ಸಮ್ಮುಖ್ಯ ತಿರ್ಮಾನಿಸಲಾಗುವುದು.

Sd/- M. Rammohan Rao.
Advocate for Petitioner.

Puttur, 18–12–71.

ಭಾರತೀಯರು ಪಡೆಗಳಿಂದ

ಬೇಗಂ ಮುಜಿಬುರ್ ವಿಮೋಚನೆ

"ಶುಕ್ರವಾರ ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಭಾರತೀಯ ಮೇಜರ್ ಒಬ್ಬರು ನಮ್ಮ ನಿವಾಸದ ಮಹಾದ್ವಾರದ ಸಮೀಪಕ್ಕೆ ಬರುತ್ತಿದ್ದುದನ್ನು ಕಂಡಾಗ, ಅದನ್ನು ನಂಬಲು ನಮಗೆ ಶಕ್ಯವಾಗಲಿಲ್ಲ. ನಾವು ಉಳಿಯಬಹುದೆಂಬ ನಂಬಿಕೆಯು ಕುಡಿ ಚಿಗುರಿತು" ಎಂದು ತನ್ನ ತಾಯಿ ಬೇಗಂ ರೇಣು ರಹಮೂನ್ ಹಾಗೂ ತಮ್ಮ ಧನಮಂಡಿ ನಿವಾಸದಲ್ಲಿ ತಮ್ಮನ್ನು ಕಾಣಲು ಬಂದಿದ್ದ ಹಲವಾರು ಮಂದಿ ಶುಭಾಕಾಂಕ್ಷಿಗಳ ಜೊತೆಯಲ್ಲಿ ಕುಳಿತಿದ್ದ ಬಂಗಬಂಧು ರಹಮೂನ್ ಅವರ ಜ್ಯೇಷ್ಠ ಕುವರಿ ಹಸೀನಾ ನುಡಿದರು.

ಶಸ್ತ್ರಾಸ್ತ್ರಗಳನ್ನು ತೆಗೆದಿಟ್ಟು ತಮ್ಮನ್ನು ನಿಶ್ಶಸ್ತ್ರರನ್ನಾಗಿಸಿಕೊಂಡ ಮೇಜರ್ ಅವರು ಮಹಾದ್ವಾರವನ್ನು ಪ್ರವೇಶಿಸಿ, ನಮ್ಮ ನೂಳಿಗೆಯ ಮೇಲಿನ ಬಂಕರುಗಳಲ್ಲಿ ಕುಳಿತಿದ್ದ ಪಡೆಗಳು ಶರಣಾಗುವಂತೆ ಅವುಗಳ ಮನ ಒಲಿಸಿಕೊಳ್ಳಲು ಪಂಜಾಬಿ ಭಾಷೆಯಲ್ಲಿ ಪ್ರಯತ್ನಿಸಿದರು ಎಂದು ಶ್ರೀಮತಿ ರಹಮೂನ್ ತಿಳಿಸಿದರು.

ಗುಂಡು ಹಾರಿಸುವುದಾಗಿ ಪಡೆಗಳು ಬೆದರಿಕೆ ಒಟ್ಟಿವು. ನಮ್ಮ ಜನರಲ್ ಶರಣಾಗತರಾಗಿರುವರಾಗಿ, ನೀವು ಈ ರೀತಿ ವರ್ತಿಸುವುದು ಸರಿಯಲ್ಲವೆಂದು ಮೇಜರ್ ಅವರು ಪಡೆಗಳಿಗೆ ತಿಳಿಸಿದರು. ಇಷ್ಟು ಹೇಳಿದ ವರೇ ಮೇಜರ್ ಅವರು ಹಠಾತ್ತಾಗಿ ಮಹಾದ್ವಾರದ ಕಡೆಗೆ ತಿರುಗಿದರು ನಮ್ಮ ನಂಬಿಕೆಗಳೆಲ್ಲ ಛಿನ್ನಾಭಿನ್ನವಾದವೆಂದು ನಾವು ಬಗೆದೆವು. ಆದರೆ ಸುತ್ತಲೂ ಇದ್ದ ಪೊದೆಗಳಿಂದ ಶಿರಸ್ತ್ರಾಣ ಧರಿಸಿದ್ದ ಅಸಂಖ್ಯಾತ ಮಂದಿ ಭಾರತೀಯ ಯೋಧರು ತಮ್ಮ ತಲೆಗಳನ್ನು ಹೊರಹಾಕುತ್ತಿರುವುದು ಹಠಾತ್ತಾಗಿ ನಮ್ಮ ಕಣ್ಣಿಗೆ ಬಿದ್ದಂತಾಗಿ ಏನು ನಡೆಯುತ್ತಿದೆಂಬುದು ನಮಗೆ ತಿಳಿದು ಹೋಯಿತು. ಮಾಳಿಗೆಯ ಮೇಲಿದ್ದ ಸೈನಿಕರು ಶರಣಾಗತರಾಗುವ ಇಚ್ಛೆ ವ್ಯಕ್ತಪಡಿಸಿದರು. ಮೇ|| ತಾರಾ ಅವರು ನಮ್ಮ ಬಳಿಗೆ ಬರುವುದಕ್ಕೆ ಮುನ್ನವೇ ನಾವು ಮನೆಯಿಂದ ಹೊರಗೆ ಓಡಿದೆವು, ಕಡೆಗೂ ನಾವು ಸ್ವತಂತ್ರವಾದೆವು ಎಂದು ಶ್ರೀಮತಿ ರಹಮೂನ್ ವಿವರಿಸಿದರು.

ಬೇಗಂ ರಹಮೂನ್ ಅವರ ಪಾದಸ್ಪರ್ಶ ಮಾಡಲು ಶನಿವಾರ ಅನೇಕ ವಿಮೋಚನಾ ಯೋಧರು ಧನಮಂಡಿ ನಿವಾಸಕ್ಕೆ ಬಂದರು. ಪುನರ್ನಿರ್ಮಲನದ ಆನಂದಾಶ್ರು ಚಿಮ್ಮಿದ ದೃಶ್ಯವಾಯಿತು ಧನಮಂಡಿ ನಿವಾಸ.

ಈ ಮಧ್ಯೆ ಅವಕಾಶ ಮಾಡಿಕೊಂಡು ಬೇಗಂ ರಹಮೂನ್ ತಮ್ಮ ಹೃದಯ ವಿದ್ರಾವಕ ಕಥೆಯನ್ನು ಮುಂದುವರಿಸಿದರು. ನಮ್ಮ ನಿವಾಸದ ಸುತ್ತಲೂ ದಿನವಿಡೀ ಕಾವಲು ಪಡೆ ಇರುತ್ತಿದ್ದಿತು.

ಒರಟು ವರ್ತನೆ ತೋರಿಸುತ್ತಿದ್ದ ಮೇ|| ರಿಯಾಜ್ ವಿನಾ ಉಳಿದ ಅಧಿಕಾರಿಗಳೆಲ್ಲರೂ ಸ್ವಲ್ಪ ಒಳ್ಳೆಯವರಾಗಿದ್ದರು. ಆದರೆ ಸಾಮಾನ್ಯ ಸೈನಿಕರು ಮಾತ್ರ ಬಹು ಒರಟಾಗಿ ವರ್ತಿಸುತ್ತಿದ್ದರಲ್ಲದೆ, ಅಧಿಕ ಪ್ರಸಂಗ ಮಾಡುತ್ತಿದ್ದರು. ದೈನಂದಿನ ಆವಶ್ಯಕತೆಯ ಸಣ್ಣಪುಟ್ಟ ವಸ್ತುಗಳಾದ ಆಹಾರ, ಔಷಧಿ ಮೊದಲಾದವುಗಳನ್ನು ಪಡೆದುಕೊಳ್ಳಲು ಕೂಡ ನಾವು ಮಾರ್ಷಲಾ ಅಧಿಕಾರಿಗಳನ್ನು ಕೇಳಿಕೊಳ್ಳಬೇಕಾಗಿದ್ದಿತು. ಶರಣಾಗತಿಗೆ ಎರಡು ದಿನಗಳ ಮುನ್ನ ಡಾಕ್ಕಾದಲ್ಲಿ ಕರ್ಫ್ಯೂ ಜಾರಿಗೆ ತರಲಾಯಿತು. ಡಿ. 16 ರಂದು ಜೈ ಬಾಂಗ್ಲಾ ಘೋಷಣೆಗಳೊಡನೆ ಡಾಕ್ಕಾಹೊಸ ಬಾಳುವೆಗೆ ಕಾಲಿಡುವವರೆವಿಗೂ ನಾವು ಕಾರ್ಗತ್ತಲಲ್ಲಿ ನಿಟ್ಟುಸಿರಾಸ ಇರಬೇಕಾಯಿತು ಎಂದು ಅವರು ತಿಳಿಸಿದರು.

ಇಬ್ಬರು ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು ಮತ್ತು ಮರಿಮಗನೊಬ್ಬನೊಡನೆ ಈ ಬವಣೆಯನ್ನು ಅನುಭವಿಸುತ್ತಿದ್ದ ಬೇಗಂ ರಹಮೂನ್ ಅವರು ಭಾರತೀಯ ಹೆಲಿಕಾಪ್ಟರೊಂದು ಹಾರಿ ಹೋದುದನ್ನು ಕಂಡಾಗ ಅವರ ಹೃದಯಮಿಡಿತ ಏರಿತು. "ಬಾರತೀಯರ ತಂಡ ಒಂದು ದೇವದೂತರಂತೆ ಮಹಾದ್ವಾರದ ಬಳಿ ಇದ್ದುದನ್ನು ಕಂಡೆ. ಭಾರತ ಮತ್ತು ಆದರ ಪ್ರಧಾನಿ ನಮಗೆ ಮೂಡಿರುವ ಉಪಕಾರವನ್ನು ಬಾಂಗ್ಲಾದೇಶ ಎಂದಿಗೂ ಮರೆಯುವುದಿಲ್ಲ. ಈ ಉಪಕಾರ ನಮ್ಮ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಲಿಖಿತಗೊಳ್ಳುತ್ತದೆ. ನನ್ನ ಮನಸ್ಸಿನಲ್ಲಿ ಪುಟಿದೇಳುತ್ತಿರುವ ಭಾವನಾತರಂಗಗಳನ್ನು ವರ್ಣಿಸುವಷ್ಟು ಶಬ್ದ ಸಂಪತ್ತು ನನಗಿಲ್ಲ" ಎಂದು ಅವರು ನುಡಿದರು.

ಪಾಕ್ ಸೇನೆ ತಮ್ಮ ಪತಿಯನ್ನು ಬಂಧಿಸಿಕೊಂಡು ಹೋದ ಮಾರ್ಚ್ 25ರ ಕರಾಳ ರಾತ್ರಿಯನ್ನು ಅವರು ಸ್ಮರಿಸಿಕೊಂಡರು.

"ಅಂದು ನಡು ರಾತ್ರಿ ಮುಗಿದು ಒಂದು ಗಂಟೆ ಕಳೆದಿತ್ತು. ಆಗ ನೀಗವಾಗಿ ಸಮೀಪಿಸುತ್ತಿದ್ದ ಬೂಟುಗಳ ಸಪ್ಪಳ. ಅದರ ಜೊತೆಯಲ್ಲೇ ಗುಂಡು ಹಾರಿಸುವ ಶಬ್ದ ಕೇಳಿ ಕಿಟಕಿಯ ಬಳಿಗೆ ಧಾವಿಸಿ ನೋಡಿದಾಗ ಪಡೆಗಳು ಮನೆಯನ್ನು ಸುತ್ತುವರಿದು, ಒಳಕ್ಕೆ ಪ್ರವೇಶಿಸುತ್ತಿದ್ದದ್ದು ಕಂಡು ಬಂದಿತು. ದಿಗ್ಭ್ರಾಂತಳಾದ ನಾನು ನನ್ನ ಪತಿದೇವರನ್ನು ಎಬ್ಬಿಸಿದೆ. ಅವರು ಕೂಡಲೇ ನಂಬಲಿಲ್ಲ. ಆದರೆ ಹೊಗಡೆ ಗದ್ದಲ ಕೇಳಿ ಬಂದನಂತರ ಕಿಟಕಿಯ ಬಳಿಗೆ ಧಾವಿಸಿ, ಅಧಿಕಾರಿಗಳನ್ನು ಕರೆಯಲು ಪ್ರಯತ್ನಿಸಿದರು. ಆದರೆ ಕೋವಿಯ ನಿನಾದದಲ್ಲಿ ಅವರ ಧ್ವನಿ ಮುಳುಗಿ ಹೋಯಿತು. ಆಗ ಅವರು ಕೆಳಗೆ ಹೋಗಿ, "ಈ ರೀತಿ ಬರುವುದಕ್ಕೆ ಬದಲು ನೀವು ನನಗೆ ಟೆಲಿಫೋನ್ ಮಾಡಬಹುದಾಗಿತ್ತು" ಎಂದು ಹೇಳುತ್ತಾ ಒಬ್ಬ ಕರ್ನಲ್, ಒಬ್ಬ ಮೇಜರ್ ಮತ್ತು ಇಬ್ಬರು ಯೋಧರೊಂದಿಗೆ ಮೇಲಕ್ಕೆ ಬಂದರು. ತಮ್ಮ ಹಾಸಿಗೆ ಮತ್ತು ಪೆಟ್ಟಿಗೆ ಕೊಡುವಂತೆ ಎರಡನೆ ಮಗ ಜಮೂಲನಿಗೆ ಹೇಳಿದರು. ತಮಗೆ ಅತಿ ಪ್ರಿಯವಾಗಿದ್ದ ಪಾದರಕ್ಷೆಯನ್ನು ಧರಿಸಿ ಅವರು ಹೊರ ನಡೆದರು. 'ನಿನಗೆ ಇಲ್ಲಿ ಅನಾನುಕೂಲವಾದರೆ ನಮ್ಮ ಸ್ವಂತ ಪಟ್ಟಣಕ್ಕೆ ಹೋಗಿ ಮುಕ್ಕಳನ್ನು ಸಾಕು.' ಹೊರಡುವ ಮುನ್ನ ಅವರು ನನಗೆ ಹೇಳಿದ ಕಟ್ಟಕಡೆಯ ಮಾತು ಇದು" ಎಂದು ಶ್ರೀಮತಿ ಬೇಗಂ ವಿವರಿಸಿದರು.

"ನಿಮ್ಮ ತಂದೆಯವರನ್ನು ಕರೆದೊಯ್ಯಲು ವಿಷಾದವಾಗುತ್ತದೆ" ಎಂದು ಕರ್ನಲ್ ಹೇಳಿದಾಗ ಜಮೂಲ್ ಕೋಪದಿಂದ ಕುದಿಯುತ್ತಿದ್ದ. "ನಮ್ಮ ಮನೆಯ ಮೂವರು ಸಿಬ್ಬಂದಿಗಳನ್ನು ವಶದಿನ ಕರೆದೊಯ್ದು, ದಂಡು ಪ್ರದೇಶದಲ್ಲಿ ಪೇಕ್ ಸಾಹೇಬ್ ಅವರ ಕೋಣೆಯ ಬದಿಗಿದ್ದ ಇನ್ನೊಂದು ಕೋಣೆಯಲ್ಲಿ ಇರಿಸಿ, ಸ್ವಲ್ಪ ಸಮಯದ ನಂತರ ಅವರನ್ನು ಮನೆಗೆ ವಾಪಸು ಕಳುಹಿಸಿದರು. ನನ್ನ ಪತಿಯ ಬಗ್ಗೆ ನನಗೆ ಕಡೆಯ ಬಾರಿ ಸುದ್ದಿ ತಿಳಿದುದು ಆಗಲೇ" ಎಂದು ಅವರು ತಮ್ಮ ಕರುಣಾಜನಕ ಕಥೆಯನ್ನು ನಿವೇದಿಸಿಕೊಂಡರು. ಆಕೆಯನ್ನು ಭೇಟಿ ಮಾಡಲು ಭಾರತೀಯ ವಿಮಾನ ಪಡೆಯ ತಂಡ ಒಂದು ಬಂದಿತು. ಅವರನ್ನು ಕಂಡಾಗ ಶ್ರೀಮತಿ ಬೇಗಂ ಹರ್ಷ ಪುರಿತ ಗೊಂದಲದಲ್ಲಿ ಬಿದ್ದರು. ಆಕೆಯ ಹಸ್ತಾಕ್ಷರ ನೀಡುವಂತೆ ಈ ತಂಡ ಕೇಳಿದಾಗ ಆಕೆ ನಾಚಿ ನೀರಾದರು. ತಮ್ಮನ್ನು ಕಾಣಲು ಬಂದ ಅತಿಥಿಗಳಿಗೆ ಚಹಾ ನೀಡಿದ ಅನಂತರ "ನಿಮಗೆ ನೀಡಲು ನಮ್ಮ ಬಳಿ ಇನ್ನೇನೂ ಇಲ್ಲ" ಎಂದರು. ಅನಂತರ ಅವರನ್ನು ಕಾಣಲು ಇನ್ನೂ ಮೂವರು ಬಂದರು.

ಬಾಂಗ್ಲಾ ದೇಶ ಮುಕ್ತವಾದ ಸಂತೋಷ ಪೂರ್ಣವಾಗಿಲ್ಲ. ಮುಜಿಬ್ ಅವರು ಇಲ್ಲದಿರುವುದು ಈ ಸಂತೋಷಕ್ಕೆ ಕೊರತೆಯಾಗಿದೆ.

ಯಾರನ್ನು ಶತ್ರುಗಳು ಮತ್ತು ಮಿತ್ರರೂ ಸೇರಿಯೇ ಅಪರಾಧಿಗಳೆಂದು ಸಾರುತ್ತಾರೊ ಅಂಥವರನ್ನು ಮಾತ್ರ ನ್ಯಾಯಶಾಸ್ತ್ರವು ದಂಡಿಸಬೇಕು.

o o o

ದೂರವುಳಿಯಲು ಕಾರಣ ಹೇಳಿದರೂ ಅಮೆರಿಕೆಯ ನಿಲುವಿಗೂ ಬ್ರಿಟನ್ ನಿಲುವಿಗೂ ಅಜಗಜಾಂತರವಿರುವುದು ಬರ್ಮುಡಾದ ಮಾತುಕತೆಯ ವೇಳೆ ಹೊರಪಟ್ಟಿದೆ.

ಭಾರತದ ಬಂಗ್ಲಾ ಮಿಲಿಟರಿ ಕಾರ್ಯಾಚರಣೆಗೆ ಭಾರತಕ್ಕೆ ಲಕ್ಷಾಂತರ ಶರಣಾರ್ಥಿಗಳು ಬಂದು ಉಂಟಾದ ಸ್ಫೋಟಕ ಪರಿಸ್ಥಿತಿಯೇ ಕಾರಣವೆಂದು ಸರ್ ಹ್ಯೂಮ್ ಹೇಳಿದರು. ಪಶ್ಚಿಮ ಪಾಕಿಸ್ತಾನಿಗಳ ಕುಕೃತ್ಯವೇ ಅಲ್ಲಿಯೂ ಭಾರತದ ಕಾರ್ಯಾಚರಣೆಗೆ ಕಾರಣನೆಂದವರು ಡಗ್ಲಾಸರಿಗೆ ತಮ್ಮ ಸರಕಾರದ ಅಭಿಪ್ರಾಯವನ್ನು ತಿಳಿಸಿದರು. ಇದನ್ನು ಒಪ್ಪುವುದು ಬಿಡುವುದು ಅಮೆರಿಕೆಗೆ ಸಂದ ಸಂಗತಿ. ಸಾವಿರಾರು ಮೈಲಿ ದೂರದಿಂದಲೇ ಇಲ್ಲಿನ ಘಟನಾವಳಿಗಳಿಗೆ ಕಾರಣವೂಹಿಸುವ ಸಾಹಸ ಅಧ್ಯಕ್ಷ ನಿಕ್ಸನ್ನರದು; ತಿಳಿಸಿ ಹೇಳಿದರೂ ತಿಳಿಯಲೊಲ್ಲದ ಹಠವವರದ್ದು. ಆದರೆ, ಬ್ರಿಟನ್ನು ಮಾತ್ರ ಸತ್ಯವನ್ನು ಮನವರಿಕೆ ಮಾಡಿಕೊಳ್ಳುವ ಪ್ರಯತ್ನ ನಡೆಸಿದೆ; ಅಮೆರಿಕೆಯಲ್ಲಿ ಮೂಡಿದ ತಪ್ಪನ್ನು ಈ ಬಾರಿ ಪುನರಾವರ್ತಿಸುವ ಎದೆಗಾರಿಕೆ ತೋರಿಸಿಲ್ಲ. ಅದಕ್ಕಾಗಿ ಅಭಿನಂದನೆಗಳು ಸಲ್ಲಲೇಬೇಕು.

●●

HOTEL SATKAR

Boarding, Lodging & Restaurant

Behind Corporation Office,

9 Mission Road — Bangalore — 27.

Phone No.— 1 72303 2 72304 Grams: HOST SATKAR

Vegetarian Cuisine

Attached Bath Rooms and Phones.

Running H and C water

Moderate Charges

Railway Station, Laundry, Post office and Entertainment Area Nearby.

Large airy Rooms; Roof garden

Quiet, Calm Atmosphere

Personalised Service.

ನೋಟೀಸು

ಮುತ್ತೂರು 1nd ಎಡಿಶನಲ್ ಮುನ್ಸಿಫ್ ಕೋರ್ಟಿನಲ್ಲಿ

I. A. V O. S. 18/69

ಸರಕಿಂಪ ಭಟ್ಟ —ಅರ್ಜಿದಾರ

ನಾರಾಯಣ ಭಟ್ಟ ಸಹಾ —ಎದ್ರಿರು

ಎದ್ರಿರು—3. ಶಾಂತಾರಾಮ ಭಟ್ಟ—ಕೃಷ್ಣ ಭಟ್ಟರ ಮಗ—ಸುಳ್ಯ ಕಸಬಾ

6. ಗೋಪಾಲಕೃಷ್ಣ ಭಟ್ಟ ನಾರಾಯಣ ಭಟ್ಟರಮಗ, ಕೊಳ್ತಿಗೆ ಗ್ರಾಮ.

ಸದ್ರಿ 3, 6ನೇ ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡ್ಸಿವುದೇನೆಂದರೆ:—

ಈ ದಾವೆಯಲ್ಲುದ ಪ್ರತಿವಾದಿರಿ ದಿಕ್ಕಿಗೆ ಅನುಸರ್ಸಿ ದಾವಾ ಅಸ್ತಿ ಮೂರಾಟದಿಂದ ದಿಕ್ಕಿಗೆ ಹಣ ವಸೂಲು ಪಡೆಯುವ ಬಗ್ಗೆ ಪ್ಲಾನಲ್ ದಿಕ್ಕಿಗೆ ಹುಕುಂ ಆಗಬೇಕಾಗಿ ಕೊಟ್ಟ ಮೇಲಿನ ಅರ್ಜಿ ನಿಮ್ಮ ನೋಟೀಸಿನ ಬಗ್ಗೆ ತಾ. 10-1-72ಕ್ಕೆ ಇಟ್ಟಿರುತ್ತದೆ. ಸದ್ರಿ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಪರಿಗತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ಯಾ ಮೂಡಿ ಯುಕ್ತಕಂಡಂತೆ ತೀರ್ಮಾನಿಸಲಾದೀತು.

Sd/- M. Rammohan Rao.

Advocate for Petitioner.

ತಾ. 18—12—71.

ಭಾರತ - ಪಾಕಿಸ್ತಾನದ ಕದನ

ವಿಶ್ವವನ್ನೇ ಬೆದರಿಸುವ ಯುದ್ಧವೆಂದು 'ಡೈಲಿ ಮಿರರ್' ಅಭಿಪ್ರಾಯ

'ವಿಶ್ವವನ್ನೇ ಬೆದರಿಸುವ ಯುದ್ಧ' ಎಂಬ ಮುಖಪುಟದ ಶಿರೋನಾಮೆಯಲ್ಲಿ ಲಂಡನ್ನಿನ 'ಡೈಲಿ ಮಿರರ್' ದೈನಿಕವು ಡಿಸೆಂಬರ್ +ನೇ ದಿನಾಂಕದ ಸಂಚಿಕೆಯಲ್ಲಿ ಪ್ರಕಟಿಸಿದ ಜಾನ್ ಪಿಲ್ಜರ್ ವರದಿಯ ಮುಖ್ಯಾಂಶಗಳು ಅತ್ಯಂತ ಗಮನಾರ್ಹವಾಗಿವೆ:-

'ಭಾರತ ಉಪಖಂಡ ಕುರಿತ ಸತ್ಯಸಂಗತಿಯೊಂದು ಬ್ರಿಟನ್ನನ್ನು ಮುಟ್ಟದೆ. ಇತೀ ಪಶ್ಚಿಮ ವಿಷ್ಣಾವನ್ನು ಪಾಕಿಸ್ತಾನ (ಭಾರತವಲ್ಲ) ಯುದ್ಧಕ್ಕೆಳೆದಿದೆ ಎಂಬುದೇ ಈ ಸತ್ಯಾಂಶ. ಜೀಗೆ ಬರೆದಿರುವುದರಿಂದ ಗೊಂದಿಲದ ಪರಿಸ್ಥಿತಿಯನ್ನು ಸಂಸ್ಪಷ್ಟಪಡಿಸುತ್ತಿಲ್ಲ ಅಥವಾ ಭಾರತದ ಇತ್ತೀಚಿನ ಕ್ರಮಗಳನ್ನು ಕ್ಷಮಿಸುತ್ತಿಲ್ಲ. ಆದರೆ ಬ್ರಿಟನ್ನಿನಲ್ಲಿ ಭಾರತವೇ ಆಕ್ರಮಣಕಾರಿ ಎಂಬ ಅಜ್ಞಾನದಿಂದ ಹೊಮ್ಮಿದ ಅಪಾಯಕಾರಿ ಅಭಿಪ್ರಾಯ ಬೇರುಬಿಡುತ್ತಿದೆ' ಎಂದು ವರದಿಯ ಆರಂಭವಲ್ಲಿ ಬರೆಯಲಾಗಿದೆ.

"ಕಳೆದ ಎಂಟು ತಿಂಗಳುಗಳಿಂದ ನಡೆದ ಘಟನೆಗಳನ್ನು ಲೆಕ್ಕಿಸದೆ ಭಾರತವನ್ನು ಪ್ರತ್ಯೇಕಿಸಿ ಮಿತ್ರರಿಲ್ಲದಂತೆ ಮಾಡುವುದು ಹಾಗೂ ಶಾಂತಿಯುತ ಪರಿಹಾರದ ಮಾರ್ಗವನ್ನು ಮುಚ್ಚುವುದು ಅತ್ಯಂತ ಅಪಾಯಕಾರಿಯೊಗುತ್ತದೆ. ತತ್ಫಲವಾಗಿ ಚೀನಾ, ಅಮೆರಿಕಾ, ರಷ್ಯಾ ರಾಷ್ಟ್ರಗಳನ್ನು ಯುದ್ಧಕ್ಕೆ ಆಹ್ವಾನಿಸಿದಂತಾಗುತ್ತದೆ.

ಈ ದೃಷ್ಟಿಕೋನಕ್ಕೆ ಬೆಂಬಲ ನೀಡುವ ದಾದರೆ ವಿಶ್ವಸಂಸ್ಥೆ ಮತ್ತು ಬ್ರಿಟನ್ ಸರ್ಕಾರವು ಈ ವರ್ಷ ಮಾರ್ಚಿಯಿಂದ ಸುಮಾರು 10ಲಕ್ಷ ಜನತೆಯನ್ನು ಕಗ್ಗೊಲೆ ಮಾಡಿರುವ ಪಾಕಿಸ್ತಾನಿ ಮಿಲಿಟರಿ ಆಡಳಿತವ ಪರವಾಗಿ ಸಂಧಾನ ಮಾಡಿದಂತಾಗುತ್ತದೆ.

ಆದ್ದರಿಂದ ಇತ್ತೀಚಿನ ಇತಿಹಾಸವನ್ನು ಸರಿಯಾಗಿ ಅರಿತುಕೊಳ್ಳೋಣ. ಈ ವರ್ಷ ಮಾರ್ಚಿಯಲ್ಲಿ ಫೀಲ್ಡ್‌ಮಾರ್ಷಲ್ ಯೂಹಾಖಾನ್ ಮತ್ತು ಮಿಲಿಟರಿ ಅಧಿಕಾರಿಗಳು ಈಗಿನ ಬಂಗ್ಲಾದೇಶದಲ್ಲಿ ಪ್ರಜಾತಂತ್ರಾತ್ಮಕವಾಗಿ ಆಯ್ಕೆಯಾಗಿದ್ದ ಸರ್ಕಾರವನ್ನು ದಮನ ಮಾಡಿದರು. ಅಂದಿನಿಂದ ಮಿಲಿಟರಿ ಆಡಳಿತವು ಬಂಗ್ಲಾ ದೇಶದ 7.5 ಕೋಟಿ ಜನತೆಯನ್ನು ಹತ್ಯೆ ಮಾಡುವ ನೀತಿ ಅನುಸರಿಸಿತು.

ಸಹಸ್ರಾರು ರಾಜಕಾರಣಿಗಳು, ಶಿಕ್ಷಕರು, ವಿದ್ಯಾರ್ಥಿಗಳು, ವೈದ್ಯರು ಮತ್ತು ನಾಗರಿಕ್ಯೋದ್ಯಮಿಗಳನ್ನು ದಮನ ಮಾಡಿದೆ. ಯುವಜನರ ರಕ್ತವನ್ನು ಹೀರಿದೆ. ಸಾರ್ವಜನಿಕ ಸ್ಥಳಗಳಲ್ಲಿ ಪುರುಷತ್ವ ಹೋಗುವಂತೆ ಮಾಡಿದೆ ಬಂಗ್ಲಾ ದೇಶದೆಲ್ಲೆಡೆ ಕೊಲೆ ಸುಲಿಗೆ ಹಾಗೂ ಮಾನಭಂಗ ಮಾಡಿದೆ. ಈ ಕಾರಣಗಳಿಂದಾಗಿ ಸುಮಾರು 1 ಕೋಟಿ ಜನರು ಭಾರತಕ್ಕೆ ನಿರಾಶ್ರಿತರಾಗಿ ಹೋದರು. ಇಂದು ಅವರು ಅನುಭವಿಸುತ್ತಿರುವ ಕಷ್ಟಕೋಟಲೆ ವರ್ಣನಾತೀತ.

ಫೀಲ್ಡ್‌ಮಾರ್ಷಲ್ ಯೂಹಾಖಾನ್ ಭಾರತವ ಗಡಿ ಪಟ್ಟಣಗಳಲ್ಲಿರುವ ನಿರಾಶ್ರಿತ ಶಾಗೂ ನಾಗರಿಕರ ಮೇಲೆ ಷೆಲ್‌ದಾಳಿ ನೂಡಿಸಿದ್ದಾರೆ.

ಈಗ ಕೆಲವುದಿನಗಳ ಹಿಂದೆ ನೆರೆರಾಷ್ಟ್ರದಿಂದ ಬಂದ ನಿರಾಶ್ರಿತರಿಗಾಗಿ ಭಾರತ ಬೆಚ್ಚನೂಡುತ್ತಿರುವ ನಿಧಿ ಬರಿದಾಯಿತು. ಪಶ್ಚಿಮ ರಾಷ್ಟ್ರಗಳ ಸಹಾಯಕ್ಕಾಗಿ ಮೂಡಿದ ಮನವಿ ಸಫಲವಾಗಲಿಲ್ಲ.

ಬಂಗ್ಲಾದೇಶದ ಗೆರಿಲ್ಲಾಗಳಿಗೆ ಪಾಕಿಸ್ತಾನಿ ಸೈಳಯ ವಿರುದ್ಧ ಹೋರಾಡುವಂತೆ ಮೂಡಲು ಭಾರತ ನೆರವಾಯಿತು. ಯಾವೊಬ್ಬ ಆಧುನಿಕ ನಾಯಕರು ಶ್ರೀಮತಿ ಇಂದಿರಾಗಾಂಧಿಯಷ್ಟು ತಾಳ್ಮೆ ಪ್ರದರ್ಶಿಸಿಲ್ಲ.

ಆನಂತರ ಪಾಕಿಸ್ತಾನಿ ಷೆಲ್‌ದಾಳಿ ತೀವ್ರಗೊಂಡಿತು ಜೆಟ್ ವಿಮಾನಗಳು ಭಾರತದ ಶ್ರೀನಗರ ರಾಜ್ಯದ ವಿಮಾನ ನೆಲೆಯ ಮೇಲೆ ಬಾಂಬಾಹಾಕಿದವು. ಇದೇ ಸಮಯದಲ್ಲಿ ಪಾಕಿಸ್ತಾನ ವಿಶ್ವಸಂಸ್ಥೆಗೆ 'ಯುದ್ಧ ಸ್ತಂಭನ'ಕ್ಕಾಗಿ ಮನವಿ ಸಲ್ಲಿಸಿತು. ಈ ರೀತಿ ಬಂಗ್ಲಾ ಜನತೆಯು ಮೇಲೆ ಅಧಿಕಾರಹೊಂದಿರಲು ಪ್ರಯತ್ನಿಸಿತು.

ಬಂಗ್ಲಾ ದೇಶಕ್ಕೆ ಸ್ರವೇಶಿಸಿರುವ ಭಾರತವನ್ನು ಆಕ್ರಮಣಕಾರಿಯೆಂದು ಜರಿಯಲಾಗುತ್ತದೆ. ಆದರೆ ಈ ದೂಷಣೆಗೆ ಇಂದಿರಾಗಾಂಧಿ ಸೂಕ್ತ ಉತ್ತರ ನೀಡಿದ್ದಾರೆ.

'ನಮ್ಮನ್ನು ಆಕ್ರಮಣಕಾರಿಯೆಂದು ಕರೆಯುವ ರಾಷ್ಟ್ರಗಳಿಂದ ಹೆದರಿ ನಾವು ನಮ್ಮ ರಾಷ್ಟ್ರೀಯ ಹಿತಾಸಕ್ತಿ ಮರೆಯುವಂತಿಲ್ಲ. ನಮ್ಮ ಕೈ ತಡೆಯಬಹುದೆಂದು ಕೆಲವು ರಾಷ್ಟ್ರಗಳು ಭಾವಿಸಿದ್ದರೆ, ಆದು ಮೂರ್ಖತನವಾಗುತ್ತದೆ.

'3.4 ಸಾವಿರ ಮೈಲಿಯೂಡೆಯಿರುವ ರಾಷ್ಟ್ರಗಳು ತಮ್ಮ ವರ್ಣ ಹಿರಿಮೆಯ ಆಧಾರದ ಮೇಲೆ ಭಾರತಕ್ಕೆ ಆಜ್ಞೆ ನೀಡುವ ಕಾಲ ಕಳೆದುಹೋಗಿದೆ. ಭಾರತ ಬದಲಾಗಿದೆ, ಆದು ಗುಲಾಮರಾಷ್ಟ್ರವಾಗಿಲ್ಲ'.

ಇಂದು ಶಾಂತಿ -- ಯುದ್ಧಗಳ ಆಯ್ಕೆ ಶ್ರೀಮತಿ ಗಾಂಧಿಗೆ ಸೇರಿಲ್ಲ. ಈ ಆಯ್ಕೆ ಪಾಕಿಸ್ತಾನದಲ್ಲಿ ಹತಾಶವಾಗಿರುವ ಸೇನಾಧಿಕಾರಿಗಳ ಗುಂಪಿನ ಬೆಂಬಲ ನೀಡುತ್ತಿರುವ ರಾಷ್ಟ್ರಗಳಿಗೆ ಸೇರಿವೆ.

ಈ ದಿಸೆಯಲ್ಲಿ ತಪ್ಪು ಆಯ್ಕೆಯೂದರೆ ಯುದ್ಧ ಸಂಭವಿಸುತ್ತದೆ. ಇದರಲ್ಲಿ ಭಾರತ—ಪಾಕಿಸ್ತಾನ ಸಿಲುಕುತ್ತದೆ. ಇದರಿಂದ ಯಾರಿಗೂ ಲಾಭವಿಲ್ಲ.

ಕಟೀಲಿನಲ್ಲಿ ಡಾ। ಮೋದಿಯವರ ಉಚಿತ ನೇತ್ರ ಯಜ್ಞ ಶಿಬಿರ

ಮುಲ್ಕಿ ಲಯನ್ಸ್ ಕ್ಲಬ್ ಮತ್ತು ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಸಹಭಾಗಿತ್ವದಲ್ಲಿ ಕಟೀಲು ದೇವಸ್ಥಾನದ ಹೈಸ್ಕೂಲಿನಲ್ಲಿ ಏರ್ಪಡಿಸಲಾದ ಪದ್ಮಭೂಷಣ ಡಾ। ಎಂ. ಸಿ. ಮೋದಿಯವರ ಉಚಿತ ನೇತ್ರಯಜ್ಞ ಶಿಬಿರವನ್ನು ತಾ. 18ರಂದು ಮಂಗಳೂರಿನ ಬಿಷಪ್ ರೈಟ್ ರೆವರೆಂಡ್ ಡಾ। ಬಾಸಿಲ್ ಡಿ' ಸೋಜಾ ರವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು.

ಆರಂಭದಲ್ಲಿ ಮುಲ್ಕಿ ಲಯನ್ಸ್ ಕ್ಲಬ್‌ನ ಅಧ್ಯಕ್ಷ ಲಯನ್ ಡಾ। ಎಸ್. ಜಂಪಾ ಸ್ವಾಗತಿಸಿದರು. ಜೋನ್ ಚೆಯರ್‌ಮೇನ್ ಲಯನ್ ರಿ। ಫಾ। ಸ್ಟೇನ್ಲಿ ಪಿರೇರಾರವರು ಪಿಪಸ್‌ರ ಪರಿಚಯ ಮಾಡಿಸಿದರು. ಲಯನ್ ಡಾ। ಕೆ. ಬಾಬು ಶೆಟ್ಟರು ಡಾ। ಮೋದಿಯವರ ಪರಿಚಯ ನೂಡಿಸಿದರು. ದೇವಸ್ಥಾನದ ಪ್ರಧಾನ ಅರ್ಚಕರೂ ಸಹ ಮೊಕ್ತೇಸರರೂ ಆದ ಶ್ರೀ ಕೆ. ಗೋಪಾಲ ಕೃಷ್ಣ ಆಸ್ರಣ್ಣರು ದೇವಸ್ಥಾನದ ಪರವಾಗಿ ಮಾತಾಡಿ ಡಾ। ಮೋದಿಯವರ ಸೇವೆ ಜಯಪ್ರದವಾಗಲೆಂದು ಹಾರೈಸಿದರು.

ಡಾ। ಮೋದಿಯವರು ಮೂತಾಡಿ ಲಯನ್ಸ್ ಕ್ಲಬ್ ಮತ್ತು ದೇವಸ್ಥಾನದವರಿಗೆ ತನ್ನ ಕೃತಜ್ಞತೆಯನ್ನರ್ಪಿಸಿದರು. ಅವರು ಸುಂದುವರೆದು ತಾನು ಈ ವರೆಗೆ ಇಂತಹ 800 ಶಿಬಿರಗಳನ್ನು ನಡೆಸಿದ್ದು ಅವುಗಳಲ್ಲಿ ಸುಮಾರು 30 ಲಕ್ಷ ಜನರನ್ನು ಪರೀಕ್ಷಿಸಿದ್ದು ಸುಮಾರು 3ಲಕ್ಷ ಮಂದಿಗೆ ತಕ್ಷ ಚಿಕಿತ್ಸೆ ನೂಡಿರುವುದಾಗಿ ಹೇಳಿ ಇದೊಂದು ನಿಜವಾದ ಸರ್ವಧರ್ಮ ಸಮ್ಮೇಳನವಾಗಿದೆ ಎಂದರು.

ಶಿವಮೊಗ್ಗದ ಶ್ರೀ. ಜಿ. ಎಂ. ಜವಳಿಯವರು ಶಿಬಿರಕ್ಕೆ ಶುಭಕೋರಿ ಮೂತಾಡಿದರು. ಕ್ಲಬ್ಬಿನ ವೈಸ್ಪಿ ಸಂಪರ್ಕಕ್ಕಳ ಸಮಿತಿಯ ಅಧ್ಯಕ್ಷ ಲಯನ್ ಡಾ। ಕೆ. ಪಿ. ಮಧ್ಯಸ್ಥರು ಸಂದೇಶಗಳನ್ನೋದಿದರು. ಅಂತ್ಯದಲ್ಲಿ ಕ್ಲಬ್ಬಿನ ಕಾರ್ಯದರ್ಶಿ ಶ್ರೀ ವೈ. ಕೆ. ಸಂಜೀವ ಶೆಟ್ಟರು ಧನ್ಯವಾದ ವಿತ್ತರು.

ಈ ಶಿಬಿರದ ಊಟದ ವ್ಯವಸ್ಥೆಯನ್ನು ದೇವಸ್ಥಾನದವರೂ, ಹಾಲಿನ ವ್ಯವಸ್ಥೆಯನ್ನು ಬಿಷಪ್‌ರ ಸೂಚನೆಯಂತೆ ಕಾರಿತಾಸ್ ಸಂಸ್ಥೆಯವರೂ ವಹಿಸಿದ್ದರು.

ಅಯ್ಯಪ್ಪನ್ ದೀಪೋತ್ಸವ

ಮಂಗಳೂರಿನ ನೆಹರೂ ಮೈದಾನದಲ್ಲಿ ಅಯ್ಯಪ್ಪ ಭಕ್ತಿ ಸಮಿತಿಯವರು ಏರ್ಪಡಿಸಿದ್ದ ಎರಡು ದಿನಗಳ "ಶ್ರೀ ದೀಪೋತ್ಸವ ಸಮಾರಂಭ" ವನ್ನು ಧರ್ಮಸ್ಥಳ ಶ್ರೀ ಡಿ ವೀರೇಂದ್ರ ಹೆಗ್ಗಡೆಯವರ ಆಧ್ಯಕ್ಷತೆಯಲ್ಲಿ ಶ್ರೀ ಪೇಜಾವರ ಮಠಾಧೀಶ ಶ್ರೀ ವಿಶ್ವೇಶ ತೀರ್ಥ ಸ್ವಾಮೀಜಿಯವರು ಉದ್ಘಾಟಿಸಿದರು. ಆರಂಭದಲ್ಲಿ ಅಯ್ಯಪ್ಪ ಭಕ್ತಿ ಸಮಿತಿಯ ಅಧ್ಯಕ್ಷ ಶ್ರೀ ರಂಗನಾಥರವರು ಸ್ವಾಗತಿಸಿದರು.

ಸ್ವಾಮೀಜಿಯವರು ಉದ್ಘಾಟಿಸುತ್ತಾ, ದೇವರಲ್ಲಿ ನಂಬಿಕೆಯುದ್ದರೆ ಕೆಟ್ಟ ಕೆಲಸಗಳು ನಡೆಯುವಂತಿಲ್ಲವಾದ್ದರಿಂದ ದೇಶದಲ್ಲಿ ಸತ್ಪ್ರಜೆಗಳ ಸೃಷ್ಟಿಯಾಗಬಹುದು, ದೇವರೆಲ್ಲಿದ್ದಾನೆ, ಎಂಬ ಪ್ರಶ್ನೆಯ ಬಗ್ಗೆ ಅವರು ಪ್ರಸ್ತಾಪಿಸಿ ಭಗವಂತನ ಶಕ್ತಿಯು ಜಗತ್ತಿನ ಎಲ್ಲ ಆಂಶದಲ್ಲಿಯೂ ವ್ಯಾಪಕವಾಗಿದೆ ಎಂಬುದನ್ನು ಜನ ಅರಿಯಬೇಕು. ನಮ್ಮಲ್ಲಿರುವ ಅಜ್ಞಾನ ದೂರವಾದಾಗ ಭಗವಂತನ ಸಾಕ್ಷಾತ್ಕಾರವಾಗಬಹುದು ಎಂದು ಅವರು ತಿಳಿಸಿದರು.

ಶ್ರೀ ಹೆಗ್ಗಡೆಯವರು ಮೂತಾಡುತ್ತಾ, ದಿನನಿತ್ಯದ ರೀತಿ ನೀತಿಗಳಲ್ಲಿ ಪರಿಶುದ್ಧವಾಗಿದ್ದು ಜೀವನದಲ್ಲಿ ಭಕ್ತಿಯನ್ನು ಹೊಂದಿದ್ದರೆ ಕಷ್ಟ ಕಾಲದಲ್ಲಿ ತಾನಾಗಿಯೇ ಅದರಿಂದ ಪರಿಹಾರ ದೊರೆಯುತ್ತದೆ ಎಂದು ಹೇಳಿದರು.

ಅಂತ್ಯದಲ್ಲಿ ಕೋಶಾಧಿಕಾರಿ ಪಿ. ನಾರಾಯಣ್ ಧನ್ಯವಾದ ವಿತ್ತರು.

ವೈರಿಗಳ ಮುಂದೆ

ನಡುಗದಿರು ಹೆದರದಿರು ವೈರಿಗಳ ಕಂಡು,
ನೀತಿಗೆಟ್ಟವರಾ ಜನರು, ಪಾಕ್‌ಗಳ ಹಿಂಡು!
ನಮ್ಮೊಡವೆ ನಾವಾಗಿ ಬಾಳುತಿರುವಾಗ!
ನೀಚರಾ ತಂಡವದು ಏನಿ ಬರುವಾಗ!
ನಡುಗದೇ, ಅಳುಕದೇ, ಸದೆಬಡಿಯಬೇಕು
ನೂರ್ಮಡಾ ಹುಂಬತನ ಸುಟ್ಟುಬಿಡಬೇಕು!
ಸತ್ಯ-ಶಾಂತಿಯ ತತ್ವ ಒಪ್ಪಿಕೊಂಡರು ಆಗ,
ಮರೆತು ಬರುವರು ನಿರಿ ಮೈಮೇಲೆ ಈಗ!
ಸ್ವಾಮಿ ದ್ರೋಹಿಗಳವರು, ನೀಚರೇ ನೈಜ
ತೋರಿಸುವ, ನೀಚರಿಗೆ ನಮಗಿರುವ ತೇಜ!
ರಕ್ತ ಕುದಿಯಲಿ ಈಗ, ವೈರಿಗಳ ಮುಂದೆ,
ವೀರರಾಗುವ ನಾವು ವಾಸಿಸದೆ ಹಿಂದೆ!
ದ್ರೋಹಿಗಳ ದ್ರೋಹಕ್ಕೆ ಕ್ರೋಧಾಗ್ನಿ ಜ್ವಾಲೆ,
ಉರಿದಾಗ, ನಮಗಲ್ಲಿ ಜಯಶ್ರೀಯ ಮಾಲೆ!
ಶಾಸ್ತ್ರಿಗಳ ಆದರ್ಶ ಬೀತನವ ನೀಡಿ,
"ದೇಶ ರಕ್ಷಿಸು", ಎಂದು ಶಿವನನ್ನು ಬೇಡಿ.!

—ಆನಂದಪುತ್ರ

ನವಯುಗ ಸುವರ್ಣ ಮಹೋತ್ಸವ

ಸ್ಥಾಪನೆ: 1921 ಚಿನ್ನದ ಹಬ್ಬ: 1971

1972ರಲ್ಲಿ ಚಿನ್ನದ ಹಬ್ಬವನ್ನು ಒಂದು ಸಂಭ್ರಮವಾಗಿ ಆಚರಿಸುವುದರ ಜತೆಗೆ ಸ್ರಕಟಿಸಲಾಗುವ ಒಂದು ವಿಸೂತನ, ವಿಶಿಷ್ಟ ರೀತಿಯ 300 ಪುಟಗಳ

ಚಿನ್ನದ ಹಬ್ಬದ ಸಂಚಿಕೆಗೆ

ಜಾಹೀರಾತುಗಳನ್ನಿತ್ತು ಪ್ರೋತ್ಸಾಹಿಸಿರಿ

ನವಯುಗದ ನವೀಕರಣಕ್ಕಾಗಿ ಯೋಜಿಸಲಾಗಿರುವ

ಚಿನ್ನದ ಹಬ್ಬದ ನಿಧಿಗೆ

ಉದಾರ ಸಹಾಯ ಮಾಡಿರಿ!

ಸಿಗುತ್ತವೆ

ಶಾಲೆಗಳಿಗೆ ಬೇಕಾಗುವ ಹಾಜರಿ ರಿಜಿಸ್ಟ್ರಿಗಳು, ವಿವಿಧ ಫಾರ್ಮುಗಳು ಸುಲಭ ದರದಲ್ಲಿ ದೊರೆಯುತ್ತವೆ.

ವರ್ಗ, ಊಳಿಗ ಮತ್ತು ವಿವಿಧ ರಶೀದಿ ಪುಸ್ತಕಗಳೂ ಸಿಗುತ್ತವೆ.

ನವಯುಗ ಪ್ರೆಸ್, ಉಡುಪಿ.

ವಿಚಿತ್ರ ಸತ್ಯ

ಆಟಗಳ ಮೂಲಕ ನೇತ್ರ-ದೃಷ್ಟಿಯ ಸುಧಾರಣೆ

ಮಕ್ಕಳು, ಮನೆಯಲ್ಲಿ ಮೂಡು ಎಂಬುದನ್ನು ಮೂಡದೆ, ಕೂಟದಲ್ಲಿದ್ದಾಗ ಪೂರ್ತ ಬೇಕಾದುದು ಬೇಡವಾದುದೆರಡನ್ನೂ ಮಾಡುತ್ತವೆಯೆಂಬುದು ಎಲ್ಲರಿಗೂ ತಿಳಿದಿರುವ ಸಂಗತಿ.

ಊಟದ ಹೊತ್ತಿನಲ್ಲಿ ಜಿಪ್ಪೊಂದು ರಂಪ ಮಾಡುವ ಮಗು ಅದೇ ಒಂದು ಕೂಟದಲ್ಲಿ ಗಬಗಬ ತಿನ್ನುವುದನ್ನು ಕಂಡು ತಾಯಿ ಸಹಜವಾಗಿಯೇ ದಿಗ್ಭ್ರಮೆಗೊಳ್ಳುತ್ತಾಳೆ

ತಿರಾಸ್ಪೋಲ್‌ನಲ್ಲಿರುವ ಮಕ್ಕಳ ಕ್ಲೆನಿಕ್ಕಿನಲ್ಲಿ ನೇತ್ರವೈದ್ಯರಾಗಿರುವ ಲೆಪೊನೀದ್ ಮೆದ್ವೆದ್ ಅವರಿಗೆ, ಇಂಥ ಮನೋಭಾವನ್ನು ವೈದ್ಯಕೀಯ ಉದ್ದೇಶಗಳಿಗೆ ಯಾಕೆ ಬಳಸಿಕೊಳ್ಳಬಾರದು ಎಂದು ಥಟ್ಟನೆ ಹೊಳೆಯಿತು.

ಅವರು ಸರಿಸುಮಾರು ೨೦ ವರ್ಷಗಳಿಂದ ಮೆಳ್ಳೆಗಣ್ಣನ್ನೂ ಒಳಗೊಂಡು ನಾನಾ ಬಗೆಯ ನೇತ್ರದೋಷಗಳ ಚಿಕಿತ್ಸೆಯಲ್ಲಿ ನಿರತರಾಗಿದ್ದಾರೆ. ಆಪರೇಷನ್ ಆದ ಬಳಿಕವೂ ಈ ಪುಟ್ಟ ಕಣ್ಣುರೋಗಿಗಳು ಸಂಪೂರ್ಣ ಗುಣವಾಗಲು ಹಲವು ವರ್ಷಗಳೇ ಬೇಕಾಗುತ್ತವೆಯೆಂಬುದನ್ನು ಈ ಅನುಭವವು ಅವರಿಗೆ ಹೇಳಿಕೊಟ್ಟಿದೆ.

ಅಂಥವೇ ದೋಷಗಳಿರುವ ಬೇರೆ ಮಕ್ಕಳೊಡನೆ ನಗರದ ಕಿಂಡರ್‌ಗಾರ್ಟನುಗಳಲ್ಲಿ ಅವರನ್ನೆಲ್ಲ ಒಟ್ಟಿಗೆ ಯಾಕೆ ಇರಿಸಬಾರದು ಎಂದು ಡಾ| ಮೆದ್ವೆದ್ ಯೋಚಿಸಿದರು.

ಹೀಗಿರುವಾಗ ಅವರಿಗೂ ತಾವು 'ಬಿನ್ನ' ರೆನಿಸುವುದಿಲ್ಲ. ಮತ್ತೆ ಅವರು ಮೂಡುವ 'ವ್ಯಾಯೊಮ'ಗಳು ಒಂದು ರೀತಿಯಲ್ಲಿ ಆಟಗಳೇ ಆಗಿರುತ್ತವೆ. ಅವರು ಎಲ್ಲರೂ ಒಟ್ಟಾಗಿಯೇ ತಮ್ಮ ದೋಷಗಳ ವಿರುದ್ಧ ಹೋರಾಡುತ್ತಿರುತ್ತಾರೆ!

ಇದು ಐದು ವರ್ಷಗಳ ಹಿಂದಿನ ಸಂಗತಿ. ನಗರ ಮುಂಡಲಿಗೂ ಇದು ಒಳ್ಳೆಯ ಆಲೋಚನೆಯೆಂದೇ ಕಾಣಿಸಿತು. ನಗರದ ಒಂದು ಕಿಂಡರ್‌ಗಾರ್ಟನಿನಲ್ಲಿ ಮೂರು ಇಂಥ ವಿಶೇಷ ಗುಂಪುಗಳು ಇದ್ದು ನಾನಾ ಬಗೆಯ ಕಣ್ಣು ದೋಷಗಳುಳ್ಳ ೭೦ ಮಕ್ಕಳು ಇವುಗಳಲ್ಲಿದ್ದಾರೆ.

ಡಾ| ಮೆದ್ವೆದ್ ಬಹುತೇಕ ದಿನನಿತ್ಯವೂ ಇಲ್ಲಿಗೆ ಭೇಟಿಕೊಡುತ್ತಿರುತ್ತಾರೆ. ಈ ಮಕ್ಕಳಿಗೂ ಇವರನ್ನು ಕಂಡರೆ ಹೆಂಬಾ ಪ್ರೀತಿ. ಮಿಕ್ಕುಳಿದ ಹೊತ್ತಿನಲ್ಲಿ ವಿಶೇಷ ರೀತಿಯ ಶಿಕ್ಷಣ ಹಾಗೂ ತರಬೇತನ್ನು ಪಡೆದ ಅಧ್ಯಾಪಕರೂ ದಾದಿಯರೂ ಈ ಮಕ್ಕಳನ್ನು ನೋಡಿಕೊಳ್ಳುತ್ತಾರೆ.

ಅನೇಕ ಮಕ್ಕಳು ಕನ್ನಡಕಗಳನ್ನು ಧರಿಸುತ್ತಾರೆ. ಆದರೆ ಇದರಿಂದ ಅವರಿಗೇನು ಚಿಂತೆ ಇಲ್ಲ. ಯಾಕೆಂದರೆ ಅವರು ಆಡುವ ಗೊಂಜೆಗಳೂ, ಹುಲಿಕರಡಿಗಳೂ ಕೂಡ ಕನ್ನಡಕ ಧರಿಸಿರುತ್ತವೆ! ಎಲ್ಲರೂ ಕನ್ನಡಕಧಾರಿಗಳೇ ಎಂದೆನಿಸುತ್ತದೆ ಅವಕ್ಕೆ!

ಕಿಂಡರ್‌ಗಾರ್ಟನಿನಲ್ಲಿರುವ ಯಾವುದೂ ಇದೊಂದು ಆಸ್ಪತ್ರೆಯೆಂಬ ಭಾವನೆಯನ್ನು ಅವರಲ್ಲುಂಟುಮಾಡುವುದಿಲ್ಲ. ವೈದ್ಯಕೀಯವಾಗಿ ಕಾಣಿಸುವಂಥ ಯಾವೊಂದು ಸಲಕರಣೆಯೂ ಇಲ್ಲ.

ಉದಾಹರಣೆಗೆ "ಮಂದ ಗಣ್ಣಿನ" ಮಕ್ಕಳಿಗೆ "ಗಾಳಿಯಲ್ಲಿ ಚಂಡು" ಎಂಬ ಒಂದು ಆಟವಿದೆ.

ಬೇರೆ ಬಗೆಯ ದೋಷಗಳುಳ್ಳ ಮಕ್ಕಳಿಗೆ ವಿಶೇಷ ರೀತಿಯ ಬೈನೊಕ್ಯುಲರುಗಳೂ ಫಿಲ್ಟ್ರ ವ್ಯೂವರುಗಳೂ ಕೆಲಿಡೋಸ್ಕೋಪುಗಳೂ ಮತ್ತು ಇಂಥವೇ ಬೇರೆ ಸಾಮಗ್ರಿಗಳೂ ಇವೆ.

ಕಿರಿಯ ಮಕ್ಕಳಿಗಾಗಿ ಬಿರಿಳ ಸೂತ್ರದ ಜೋಬೆ ಛೇಟರೊಂದಿದೆ. ಇಲ್ಲಿ ಮಕ್ಕಳು ತಮ್ಮ ಕಣ್ಣಿಗೆ ಒಂದಿಷ್ಟು "ವಣವಾಗುವ ಪಟ್ಟಿ" ಯೂರದಲ್ಲಿ ನೆಳತಿರುತ್ತಾರೆ. ಇದೊಂದು ಒಳ್ಳೆಯ ವ್ಯಾಯಾಮವೇ ಸರಿ.

ದೃಷ್ಟಿ ಪರಿಷ್ಕಾರಕವೊಂದಿದ್ದು ಇದು ಹಂಸಗಳಂತೆ, ಸಾತರಗಿತ್ತಿಗಳಂತೆ ಮತ್ತು ಕುಂದಿಲಿಗಳಂತೆ ಕಾಣಿಸುತ್ತಿರುತ್ತದೆ.

ಮಗು ಬಾಹ್ಯ ರೇಖೆಗಳ ಮೇಲೆ ಓಡಬೇಕಾಗುತ್ತದೆ. ಹಾಗೆ ಓಡುವಾಗ ಗೆರೆಬಿಟ್ಟು ಒಂದು ಜೂರು ಹೊರಬಂದರೂ ಸಾಕು. ಮತ್ತೆ ಅವನು ಸರಿದಾರಿಗೆ ಬರುವವರೆಗೂ ಆ ಚಿತ್ರವು 'ಗುಂಯ್'ಎಂದು ಸದ್ದು ಮಾಡುತ್ತಲೇ ಇರುತ್ತದೆ.

ಗುಜ್ಜಿರಿ, ಕುಂದಿಲಿ, ಕೋಳಿ, ನಾಕೆಗೆಡ್ಡೆ ಹೀಗೆ ನಾನಾ ವಸ್ತುಗಳ ಒಂದು ಫಲಕವಿದ್ದು ಒಂದೊಂದರ ಮೇಲೂ—ಅದಕ್ಕೆ ತಕ್ಕುದಾದ—ಭಿನ್ನ ಭಿನ್ನವಾದ ಬೆಳಕು ಬೀಳುತ್ತಿರುತ್ತದೆ, ಹೋಗುತ್ತಿರುತ್ತದೆ.

ಬೆಳಕಿನ ಸಂಜ್ಞೆಯ ಮೂಲಕ ಆ ವಸ್ತು ಯಾವುದು ಎಂದು ಹೇಳಲು ತಾನು ಮೊದಲು ತಾನು ಮೊದಲು ಎಂಬುದಾಗಿ ಹುರ್ಹೋದ್ದಾರ ಮಾಡುತ್ತಾರೆ – ಈ ಮಕ್ಕಳು.

ಬೇರೆ ಉಪಕರಣದ ಮೇಲೆ ಮಕ್ಕಳು ಚಿತ್ರದ ಭಿನ್ನ ಭಿನ್ನ ಭಾಗಗಳ ಮೇಲೆ ಬೆಳಕನ್ನು ಬೀರಲು ಗುಂಡಿಯನ್ನೊತ್ತುತ್ತಾರೆ. ಮತ್ತೆ ಈ ಭಾಗಗಳೆಂದರೆ . ಚಂದ್ರ, ತಾರೆ, ಮರ ಹೀಗೆ....

ಮೆಳ್ಳೆಗಣ್ಣು ಸರಿಹೋಗಲು ಸಾಮಾನ್ಯವಾಗಿಯೇ ಬಹು ದೀರ್ಘಕಾಲವು ಬೇಕಾಗುತ್ತದೆ. ಆದರೆ ಕ್ಲಿನಿಕಿನಲ್ಲಿ ಪಡೆದ ಫಲಿತಾಂಶಗಳು ನೂತ್ರ ತಂಬಾ ಉತ್ತೇಜನಕಾರಿಯಾಗಿವೆ.

ದೇಶದ ಬೇರೆ ಭಾಗಗಳಲ್ಲೂ ಕಣ್ಣಿನ ಕಿಂಡರ್ ಗಾರ್ಟನುಗಳು ಕಾಣಿಸಿಕೊಳ್ಳುವ ಕಾಲ ಇನ್ನೇನು ಬಹು ದೂರ ಇಲ್ಲವೆಂದು ಡಾ. ಮೆದ್ವೆದ್ ಆಶಿಸುತ್ತಾರೆ.

●●

ಭುಟ್ಟೊ ಮಹಾಶಯರ ಪಟ್ಟಾಭಿಷೇಕ

(ಒಂದನೇ ಪುಟದಿಂದ)

ಮೂಡಿದ ಕಾರ್ಯ—ಸೇನೆಯ ಶುದ್ಧೀಕರಣ–ತನಗೆ ಬೇಡವಾದ ದಂಡಪತಿಗಳೆಲ್ಲರನ್ನೂ ಅವರು ಮನೆಗೆ ಕಳಿಸಿದರು; ಕಳಿಸುತ್ತಿದ್ದಾರೆ.

ಮುಂದೇನು?

ಬಂಗ್ಲಾ ನಾಯಕರೊಡನೆ ಮಾತುಕತೆ ಯಾವುದಕ್ಕಾಗಿ? ಇತಿಹಾಸವನ್ನು ಬದಲಿಸಲು ಭುಟ್ಟೊ ಅಸಮರ್ಥರು. ಶೇಕ ಮುಜಿಬುರ್ ರೆಹಮಾನರನ್ನವರು ಬಿಡುಗಡೆ ಮಾಡಿದರೆ ಸರಿ, ಇಲ್ಲವಾದರೆ ಇನ್ನೊಂದು ಹಗರಣ.

ಭಾರತದೊಂದಿಗೆ ಸೇಡು ತೀರಿಸುವ ಅವರ ಅಭಿಲಾಷೆ ನುಂಗಲಾರದ ತುಪ್ಪ. ಒಂದೊಮ್ಮೆ ಅವರು ಅದಕ್ಕೆಳಸಿದರೆ, ಪಶ್ಚಿಮದ ಪಾಕಿಸ್ತಾನವೂ ಗತಿಗಾಲದ ಹೆಗ್ಗುರುತಾಗಿ ಹೋದೀತು.

ಪಾಕ್ ಜನತೆಯನ್ನು ಸುಖದ ಸುಪ್ಪತ್ತಿಗೆಯತ್ತ ಒಯ್ಯುವ ಅವರ ಗುರಿ ಸಿದ್ಧಿಸಲಿ. ಹರದೇಶವೊಂದರ ಮೇಲೆ ಕಹಿಭಾವನೆಗಳನ್ನು ಕೆರಳಿಸುವುದನ್ನು ಬಿಟ್ಟು ಸಹಜೀವನದ ಕೊಡುಗೆಯನ್ನವರು ಸ್ವೀಕರಿಸಲಿ.

ಇದಿಲ್ಲವಾದರೆ, ಆಯ್ಯೂಬಖಾನರು ನಾಂದಿ ಹಾಡಿದ ಪಾಕ್ ಪತನ ದುರಂತ ನಾಟಕಕ್ಕೆ ಜುಲ್ ಫಿಕರ್ ಆಲಿ ಭುಟ್ಟೊ ಚರಮ ಗೀತೆಯನ್ನು ಹಾಡುತ್ತಾರೆ. ಮಹಮ್ಮದ ಬಿನ್ ತೊಗಲಕನನ್ನೂ ಮೆಟ್ಟಿ ನಿಲ್ಲುತ್ತಾರೆ.

●●

ಉಡುಪಿ 'ರಂಗಭೂಮಿ'ಗೆ ಮಂಗಳೂರು ನಾಟಕ ಸ್ಪರ್ಧೆಯ ಪ್ರಥಮ ಬಹುಮಾನ

ಮಂಗಳೂರಿನ ಡಾನ್ ಬೊಸ್ಕೊ ಕ್ಲಬ್ ಅಶ್ರಯದಲ್ಲಿ ಜರಗಿದ ಅಖಿಲ ಕರ್ನಾಟಕ ನಾಟಕ ಸ್ಪರ್ಧೆಯ ಪ್ರಥಮ ಬಹುಮಾನ ಉಡುಪಿಯ 'ರಂಗಭೂಮಿ' ನಾಟಕ ತಂಡಕ್ಕೆ ಆವರ 'ಸಾಮ್ರಾಟ್ ಅಶೋಕ' ನಾಟಕಕ್ಕೆ ಸಂದಿದೆ. ಎರಡನೆ ಬಹುಮಾನವು ಹಾಸನದ ಸಾಹಿತ್ಯ ಕಲಾ ಸಂಘದವರಿಗೂ, ಸುರತಕಲ್ ಬಹುಮಾನವು ಕುಂದಾಪುರದ ರೂಪದರಿಂಗಪನರಿಗೂ ದೊರಕಿದೆ.

ನುಂಗಳೂರಿನ ಪ್ರಸಿದ್ಧ ನಟಶ್ರೀ ಮುಂಜಾನಾಥ ಕಾಲಿನಾಪನರು ಸ್ಪರ್ಧೆಯ ಸಮರೋಪ ಭಾಷಣ ನೂಡಿ ಬಹುಮಾನ ವಿತರಣೆ ಗೈದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಎಸ್. ಕೆ. ಆಮಿನರು ವಹಿಸಿದ್ದರು.

ಮಿಲಾಗ್ರಿಸ್ ಕಾಲೇಜಿನ ವರ್ಧಂತ್ಯುತ್ಸವ

ಕಲ್ಯಾಣಪುರದ ಮಿಲಾಗ್ರಿಸ್ ಕಾಲೇಜಿನ 5ನೇ ವಾರ್ಷಿಕೋತ್ಸವವು ತಾ. 19—12—71 ರಂದು ಉಡುಪಿ ಪುರ ಸಭೆಯ ಅಧ್ಯಕ್ಷ ಡಾ| ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಕಾಲೇಜಿನ ಸುವರ್ಣ ಜೂರ್ ವೆರಿ, ರೆವರೆಂಡ್ ಫೋರೆನ್ಸ್ ಸಾಯಸರು ಸ್ವಾ 'ತಿಸಿ ಕಾಲೇಜಿನ ವಿಶೇಷಗಾಗಿ ವಿದ್ಯಾಭಿವೃದ್ಧಿಗಳ ನೆರವನ್ನು ಕೋರಿದರು.

ಪ್ರಿನ್ಸಿಪಾಲ್ ಡಾ| ಗುರುರಾಜ ಭಟ್ಟರು ಕಾಲೇಜಿನ ಪ್ರಗತಿಪರವಾದ ವರದಿಯನ್ನು ಓದಿದರು. ಪೂರ್ವಾಹ್ನ ಉದ್ಘಾಟನಲ್ಲಬ್ಧ ಪುಸ್ತಕ ಭಂಡಾರದ ಹೊಸ ಕಟ್ಟಡಕ್ಕೆ ಯು ಜಿ. ಸಿ. ಇತ್ತ ಪನ ಸಹಾಯನನ್ನು ಕೃತಜ್ಞತೆಪೂರ್ವಕ ಸ್ಮರಿಸಿ ಉಡುಪಿಯ ಶ್ರೀಪತಿ ಆಚಾರ್ಯರನ್ನು ನಂದಿಸಿದರು.

ಅನ್ಯಕ್ಕರು ಬಹುಮಾನ ವಿತರಣೆ ಮಾಡಿನೂತ ನಾಡುತ್ತ ಕಾಲೇಜಿನ ಬಹುಮುಖ ಅಭಿವೃದ್ಧಿಯನ್ನು ಪ್ರಶಂಸಿಸಿ, ದೇಶದ ಇಂದಿನ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬನೂ ಒಕ್ಕಟ್ಟಿನಿಂದ ಸಾಶ್ಚಸ್ವಾಮ್ಯವು ಮುಖ್ಯ ಚೇತನಿದರು. ವಿದ್ಯಾರ್ಥಿಗಳಿಗೆ ಆತ್ಯುತ್ತಮ ಸೌಕರ್ಯಗಳನ್ನು ಒದಗಿಸಿಕೊಡಲು ಮುಂಬಾಗಿರುವ ಪ್ರಿನ್ಸಿಪಾಲರನ್ನೂ, ಆಡಳಿತ ವರ್ಗವನ್ನೂ ಅಭಿನಂದಿಸಿ ವಿದ್ಯಾರ್ಥಿಗಳು ವಿದ್ಯಾರ್ಜನೆಯಲ್ಲಿ ತನ್ಮಯರಾಗಬೇಕೆಂದು ಕರೆಕೊಟ್ಟರು. ಕೊನೆಗೆ ಪ್ರಾಧ್ಯಾಪಕ ಶ್ರೀ ನಾರಾಯಣ ಶೆಟ್ಟರು ವಂದನಾರ್ಪಡೆಗೈದರು.

ಆನಂತರ ನಡೆದ ಮನೋರಂಜನೆಯ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಂದ 'ಎಚ್ಚಮ ನಾಯಕ' ಎಂಬ ಐತಿಹಾಸಿಕ ನಾಟಕವು ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು. ಪ್ರಾಧ್ಯಾಪಕ ನಾರಾಯಣ ಶೆಟ್ಟರಿಂದ ಒಂದು 'ಫಾರ್ಸ್' ಮತ್ತು ವಿದ್ಯಾರ್ಥಿನಿಯರಿಂದ ನೃತ್ಯ ಕಾರ್ಯಕ್ರಮ ನಡೆಯಿತು.

ಎಂ. ಜಿ. ಎಂ. ಕಾಲೇಜಿನ ವಾರ್ಷಿಕೋತ್ಸವ

ಉಡುಪಿ ಎಂ. ಜಿ. ಎಂ. ಕಾಲೇಜಿನ 23ನೇ ವಾರ್ಷಿಕೋತ್ಸವವು ತಾ. 22ರಂದು ಬೆಂಗಳೂರು ವಿ. ವಿ. ನಿಲಯದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕ ಪ್ರೊ| ವಿ. ಎಂ. ಇನಾಂದಾರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಕಾಲೇಜ್ ಟ್ರಸ್ಟಿನ ಅಧ್ಯಕ್ಷ ಶ್ರೀ ಎ. ರಾಮಮೋಹನ ರಾಯರು ಸ್ವಾಗತಿಸಿದರು.

ಪ್ರಿನ್ಸಿಪಾಲ್ ಶ್ರೀ ಕು. ಶಿ. ಹರಿದಾಸ ಭಟ್ಟರು ಕಾಲೇಜಿನ ಸರ್ವಾಂಗೀಣ ಬೆಳವಣಿಗೆಯನ್ನೂ, ವಿವಿಧ ಕಾರ್ಯಕ್ರಮಗಳನ್ನೂ ವಿವರಿಸುವ ವರದಿ ಓದಿದರು. ಸಪ್ತಶ್ರೀ ಡಾ| ಟಿ. ಎಂ. ಎ. ಪೈ ಯವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತಾಡಿದರು.

ಪ್ರೊ| ಇನಾಂದಾರರು ಮಾತಾಡುತ್ತಾ, ಸುಮಾರು ಮೂವತ್ತು ವರುಷಗಳಿಂದ ಶಿಕ್ಷಣ ಕ್ಷೇತ್ರದ ಸುಖ ಮೇಲುಗಳಲ್ಲಿ ತಾನು ಪಾಲುಗೊಂಡಿರುವೆನಾದರೂ, ಈ ಕ್ಷೇತ್ರದಲ್ಲಿ ಸಮಸ್ಯೆಗಳೇ ಬೆಳೆಯುತ್ತಿರುವ ಸಂಗತಿಯನ್ನು ಮರೆಮಾಚುವಂತಿಲ್ಲ. ಶಿಕ್ಷಣರಂಗದಲ್ಲಿ ಕೆಲವು ಸೂರ್ಪಾಟುಗಳಾಗ ಬೇಕೆಂದು ಅವರು ಸೂಚಿಸಿದರು.

ಶ್ರೀಮತಿ ನಿರ್ಮಲಾ ಇನಾಂದಾರ್ ಅವರು ಬಹುಸೂಕ್ತ ವಿದ್ಯಾರ್ಥಿಗಳಿಗೆ ಪಾರಿತೋಷಕಗಳನ್ನು ಒಪ್ಪಿಸಿದರು. ಕಾರ್ಯಕ್ರಮದ ಅಂತ್ಯದಲ್ಲಿ ಪ್ರಾಧ್ಯಾಪಕ ವಿ. ಬಾಲಕೃಷ್ಣನ್ ವಂದಿಸಿದರು.

ಕಾರ್ಯಕ್ರಮವು ಆಂಗವಾಗಿ ವಿದ್ಯಾರ್ಥಿಗಳು ಒಂದು ಹಿಂದೀ ನಾಟಕ ಹಾಗೂ 'ಅಳಿಯ ದೇವರು' ಎಂಬ ಕನ್ನಡ ನಾಟಕವನ್ನೂ ಆಭಿನಯಿಸಿದರು.

ಚೀಫ್ ಆಫೀಸರರಾಗಿ ಎ. ಭೋಜರಾಜ ಶೆಟ್ಟರ ಆಯ್ಕೆ

ಉಡುಪಿ ನುಸಿಪಾಲಿಟಿಯಲ್ಲಿ 30 ವರ್ಷಕ್ಕಿಂತಲೂ ಹೆಚ್ಚು ಸೇವೆ ಸಲ್ಲಿಸಿದ್ದ ಶ್ರೀ ಎ. ಭೋಜರಾಜ ಶೆಟ್ಟರನ್ನು ಸರಕಾರ ಚೀಫ್ ಆಫೀಸರನ್ನಾಗಿ ಆರಿಸಿದೆ. ಈಚೆಗೆ ಹಲವು ವರುಷಗಳಿಂದ ಆನರು ಮುನ್ಸಿಪಾಲಿಟಿಯ ಮೆಸೀಜರರಾಗಿದ್ದರು.

ದಿ|| ಮೇಜರ್ ಕೆ. ಕೆ. ರಾವ್ ಕುಟುಂಬಕ್ಕೆ ಪರಿಹಾರ ಧನ ನೀಡಿಕೆ

ಭಾರತ ಪಾಕಿಸ್ತಾನದ ಯುದ್ಧದಲ್ಲಿ ವೀರ ಮರಣವನ್ನಪ್ಪಿದ ಮೇಜರ್ ಕೆ. ಕೆ. ರಾವ್ ಆನರ ಕುಟುಂಬದವರಿಗೆ ರಾಜ್ಯಸರಕಾರ ಮುಂಜಾರು ಮೂರುವರ ೫೦೦೦ ರೂ ಪರಿಹಾರಧನವನ್ನು ನ. ಕ. ಜಿಲ್ಲಾಧಿಕಾರಿ ಶ್ರೀ ಎನ್. ಎ. ಮುತ್ತಣ್ಣನವರು ತಾ. 21ರಂದು ನೀಡಿದರು. ಕಲ್ಯಾಣಪುರದ ದಿ|| ಮೇಜರ್ ಆನರ ಗೃಹದಲ್ಲಿ ಆವರ ಸೂತಾಸಿಕ್ಯಗಳಿಗೆ ಜಿಲ್ಲಾಧಿಕಾರಿಗಳು ಈ ಧನವನ್ನು ಒಪ್ಪಿಸಿದರು. ಆಸಾಧಾರಣ ಶೌರ್ಯ ಸಾಹಸ ಪ್ರದರ್ಶನ ಮಾಡಿ ಪ್ರಾಣತ್ಯಾಗ ಮಾಡಿದ ಮೇಜರ್ ಅವರಿಗೆ ರಾಷ್ಟ್ರಪತಿಯವರು ಮರಣೋತ್ತರ ಸೇನಾ ಪದಕವನ್ನು ನೀಡಿರುವ ಗೌರವವಿದ್ದಾರೆ.

ಗೋಮಟೇಶ್ವರ ವಿಗ್ರಹ ಸಾಗಾಟ ಸಮಸ್ಯೆ ನೀಗಿತು

ಕಾರ್ಕಳದಲ್ಲಿ ತಯಾರಿಸುತ್ತಿರುವ ಶ್ರೀ ಗೋಮಟೇಶ್ವರ ವಿಗ್ರಹವನ್ನು ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಸಾಗಿಸುವ ಸಮಸ್ಯೆಯು ಪರಿಹಾರವಾಗಿದೆಯೆಂದು ತಿಳಿದುಬಂದಿದೆ. ಈ ಕಾರ್ಯವನ್ನು ಮುಂಬಯಿಯ ಮೆಸರ್ಸ್ ಮಂಗತ್ ರಾಯ್ಸ್ ಬ್ರದರ್ಸ್ ಇವರಿಗೆ ವಹಿಸಲಾಗಿದೆಯೆಂದೂ ಅವರು ವಿಗ್ರಹವನ್ನು ಹೊತ್ತ ಟ್ರಾಲರ್‌ನಲ್ಲಿ ರಸ್ತೆಯ ಮೂಲಕವೇ ಸಾಗಿಸಲಿರುವರೆಂದೂ ಶ್ರೀ ಡಿ. ನೀರೆಂದ್ರ ಹೆಗ್ಗಡೆಯವರು ಪತ್ರಕರ್ತರಿಗೆ ತಿಳಿಸಿವ್ದಾರೆ.

ಒಂಭತ್ತು

ಎಂ. ಜಿ. ಎಂ. ಕಾಲೇಜಿನಲ್ಲಿ ಮುದ್ದಣ್ಣ ಸಾಹಿತ್ಯೋತ್ಸವ

ಉಡುಪಿಯ ಎಂ.ಜಿ.ಎಂ ಕಾಲೇಜಿನಲ್ಲಿ ಸ್ರಿ ನ್ಸಿಪಾಲ್ ಕು.ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿದ ಮುದ್ದಣ ಸ್ಮಾರಕ ಸಾಹಿತ್ಯೋತ್ಸವದಲ್ಲಿ ಶ್ರೀ ಪೂರ್ಣಪ್ರಜ್ಞ ಕಾಲೇಜಿನ ಸ್ವಾಧ್ಯಾಪಕ ಶ್ರೀ ಪಿ. ಎಲ್ ಸುಬ್ರಹ್ಮಣ್ಯ ಅವರು "ಸಾಮಾಜಿಕ ಸ್ಪಂದನೆಯನ್ನಲ್ಲಿ ಸಾಹಿತ್ಯ ಚಿಂತನ"ದ ಕುರಿತು ಭಾಷಣ ನೂಡುತ್ತ ಜನತೆಯಲ್ಲಿ ಕ್ರಿಯಾಶೀಲ ಚಿಂತನಕ್ರಮ ಬೆಳೆಯಬೇಕೆಂದರು.

ಅಧ್ಯಕ್ಷ ಕು.ಶಿ.ಹರಿದಾಸ ಭಟ್ಟರು ಭಾಷಣ ನೂಡಲಿಕ್ಕಿಂತೀ ಒಂದು ತಡೆಯೂನ ಜನವಿತ್ತು. ಅವರು ರಸತೋಕಕ್ಕೆ ನಮ್ಮನ್ನು ಒಯ್ಯುತ್ತಲಿದ್ದರು. ಆದರೆ ನುನಸ್ಸಿನ ಮೇಲೆ ಪರಿಣಾಮ ನೂಡಿರಲಿಲ್ಲ ಎಂದರು. ಅಂತ್ಯದಲ್ಲಿ ಶ್ರೀ ತಾರಾನಾಥ ಶೆಟ್ಟರು ಧನ್ಯವಾದ ಅರ್ಪಿಸಿದರು.

ಅದನೂರಿನಲ್ಲಿ ಸಮೂಜಸೇವಾ ಶಿಬಿರ

ಅದನೂರು ಶಾ. ಸೆ ಶಾಲೆಯ ನಲಾವಣಲ್ಲಿ ವಿ. ವಿ. ನಿಲಯನ ರಾಷ್ಟ್ರೀಯ ಸೇವಾ ಯೋಜನೆಯ ಆಂಗವಾಗಿ ಎ.ಜಿ.ಎಂ. ಕಾಲೇಜಿನ ವತಿಯಿಂದ ನಿಯೋಜಿಸಲಾದ ಸಮೂಜ ಸೇವಾ ಶಿಬಿರವನ್ನು ತಾ. 23ರಂದು ಡಾ। ಪಿ. ಗುರುರಾಜ ಭಟ್ಟರ ಅಧ್ಯಕ್ಷತೆಯಲ್ಲಿ ಪೇಜಾವರ ಮಠದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಉದ್ಘಾಟಿಸಿದರು. ವಿದ್ಯಾರಂಭದಲ್ಲಿ ಎ.ಜಿ.ಎಂ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕು.ಶಿ. ಹರಿದಾಸ ಭಟ್ಟರು ಸ್ವಾಗತಿಸಿದರು. ರಾಷ್ಟ್ರೀಯ ಸೇವಾ ಯೋಜನೆಯ ಇತಿಹಾಸ, ಧ್ಯೇಯೋದ್ದೇಶ ಹಾಗೂ ಶಿಬಿರದ ರೂಪುರೇಷೆ, ನಿರ್ಮಾಣ ಕಾರ್ಯಕ್ರಮಗಳನ್ನು ವಿವರಿಸಿದರು. ಊರವರ ಪರವಾಗಿ ಎರ್ಮಾಳು ಬೀಡಿನ ಶ್ರೀಪಾತಿರಾಜ ಅರಸು ಸೂರಮ್ಮ ಕೆಗ್ಗೆಮಯವರು ಹಾಗೂ ಅದೆ ಮೂರು ಶಾ. ಸೆ. ಶಾಲೆಯಮುಖ್ಯೋಪಾಧ್ಯಾಯ ಶ್ರೀ ಎ. ಶ್ರೀನಿವಾಸ ಭಟ್ಟರು ಶಿಬಿರಕ್ಕೆ ಶುಭ ಕೋರಿ ತಮ್ಮ ವ್ಯಕ್ತೋಪಕ್ತ ಸಹಕಾರ ನೀಡುವ ಭರವಸೆ ಇತ್ತರು.

ಶ್ರೀ ವಾಮಂಜಳರು ಪವಿತ್ರವಾದ ಕರ್ಮ ಚರಣೆಯಿಂದ ಮೊತ್ತ ಆಂತರಂಗ ಶುದ್ಧಿ ಸಾಧ್ಯ. ಮಹಾತ್ಮ ಗಾಂಧಿಯವರು ಸೇವಾ ಪ್ರವೃತ್ತಿಯ ಆದರ್ಶವನ್ನು ಸಮ್ಮ ಮುಂದಿಟ್ಟರು. ಜೀವನದಲ್ಲಿ ಸೇವೆಯ ಮನೆತ್ವವನ್ನು ಜನತ್ತಿಗೆ ಸಾರಿದರು. ಆ ಮಹಾತ್ಮನ ತತ್ವವನ್ನು ಧರಿಸಿರುವ ಈ ಸಂಸ್ಥೆ ಅವರ ಆದರ್ಶಗಳನ್ನು ಗುರಿಯಾಗಿಟ್ಟು ಕೊಂಡು ಮುಂದುಹೆಜ್ಜೆಯಿಟ್ಟಿದೆ ಈ ಶಿಬಿರದ ಮೂಲಕ ವಿದ್ಯಾರ್ಥಿಗಳಲ್ಲಿ ನಿರ್ಮಾಯ ಸೇವಾ ಭಾವ ಬೆಳೆಯಲಿ, ಈ ಶಿಬಿರವು ನಮ್ಮ ವ್ಯಕ್ತಿತ್ವ ವನ್ನು ರೂಪಿಸಲಿ, ಇವರ ಕಾರ್ಯಕ್ರಮವು ಯಶಸ್ವಿಯಾಗಿ ರೂಪಿಸುವಂತಾಗಲಿ ಎಂದು ಆಶೀರ್ವಚನ ನೈಮಿ ನರೆಸಿದರು.

ಶಾ। ಪಿ. ಗುರುರಾಜ ಭಟ್ಟರು ನೂಕಾಡುವ ಸ್ವಾತಂತ್ರ್ಯವು ಭಾವನೆ, ನೇಷಾಪ್ರವೃತ್ತಿ ಹಾಗೂ ಯೋಜಿಸಲಾಬದ್ಧ ಕಾರ್ಯವಿಧಾನ ಈ ನೂಯ ಗುಣಗಳು ಮಾಬು ಜೀವನದ ಪ್ರಮುಖ ಲಕ್ಷಣಗಳೂ, ಇವುಗಳಿಲ್ಲದೆಗೊಂತ ರಾಷ್ಟ್ರೀಯ ಸೇವಾಯೋಜನೆಯು ಇಂದಿನ ಯುವ ಜನಾಂಗದ ಅತಿ ಮುಖ್ಯ ಆವಶ್ಯಕತೆಯನ್ನು ಪೂರೈಸುತ್ತದೆಂದೂ ಆಭಿಪ್ರಾಯ ಪಟ್ಟು ಶಿಬಿರಕ್ಕೆ ಶುಭಹಾರೈಸಿದರು. ಅಂತ್ಯದಲ್ಲಿ ಶಿಬಿರಾಣಿ ಶ್ರೀ ಕೃಷ್ಣ ಪೈ ಧನ್ಯವಾದಗಳನ್ನರ್ಪಿಸಿದರು.

ಸುಬ್ರಹ್ಮಣ್ಯದಲ್ಲಿ ಕೆರಿ ಸೃಷ್ಟಿ ಮಹೋತ್ಸವ ಮತ್ತು ಧರ್ಮ ಸಮ್ಮೇಳನ

ದ. ಕ. ಜಿಲ್ಲೆಯ ಪ್ರಸಿದ್ಧ ಯಾತ್ರಾಸ್ಥಳ ಸ್ಥೋಂದಾದ ಸುಳ್ಯ ತಾಲೂಕಿನ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪರ್ಯಂಪ್ರತಿ ಜರಗಿ ಬರುವ ಕೆರಿ ಸೃಷ್ಟಿ ಮಹೋತ್ಸವವು ತಾ. 28-12-71 ರಂದು ಶಿಸ್ತುಬದ್ಧತೆಯಿಂದ ಯಥಾವಿಧಿಯಂತೆ ನೆರವೇರಿತು. ಅಭಿಷೇಕ, ಅರ್ಚನೆ, ಮಹಾನೈವೇದ್ಯ, ಮಹಾಮಂಗಳಾರತಿ ನೆರವೇರಿದ ಮೇಲೆ ಸಾವಿರಾರು ಜನರಿಗೆ ಪ್ರಸಾದ ವಿತರಣೆ, ಸಂತರ್ಪಣೆ ನಡೆಯಿತು.

ಅಪರಾಹ್ನ ಧರ್ಮಸ್ಥಳದ ಶ್ರೀ ಸ್ವಾಮಿ ಪರಮಹಂಸ ಶೇಷಾಚಾರ್ಯ ಇವರ ಅಧ್ಯಕ್ಷತೆಯಲ್ಲಿ ಜರಗಿದ ಧರ್ಮಸಮ್ಮೇಳನವನ್ನು ಸುಂಗಳೂರು ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ವಿಜ್ಞಾನಾನಂದಜೀ ಅವರು ಉದ್ಘಾಟಿಸಿದರು. ಆಹಲಿತ ನುಂಗಳೆಯ ಅಧ್ಯಕ್ಷ ಎಸ್ಟೇಟ್ ಶ್ರೀ ಕೆ. ಸುಬ್ರಹ್ಮಣ್ಯ ಗೌತರು ಸ್ವಾಗತಿಸಿ ಆತಿಥಿಗಳ ಪರಿಚಯ ಮಾಡಿಸಿಕೊಟ್ಟರು. ಧರ್ಮಸ್ಥಳ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕ ಶ್ರೀ ಕೆ. ನಿಷ್ಣುಮೂರ್ತಿ ಭಟ್ಟರು ಧರ್ಮ ಮತ್ತು ಸಮೂಜದ ಕುರಿತು ಉಪನ್ಯಾಸವಿತ್ತರು. ಆಹಲಿತ ಮುಂಡಳಿಯ ಟ್ರಸ್ಟಿಗಳಲ್ಲೊಬ್ಬರಾದ ಶ್ರೀ ಬಿ. ಸುಬ್ಬಯ್ಯ ಶೆಟ್ಟಿ, ಕೇಸ್ತ ಇವರು ಧನ್ಯವಾದಗಳನ್ನರ್ಪಿಸಿದರು.

ನೇಸ್ಕೆ ನಡೆದ ಸಂಗೀತ ಕಚೇರಿಯಲ್ಲಿ ಎಸ್. ಲಕ್ಷ್ಮಣ ಶಾಸ್ತ್ರಿ (ಹಾಡುಗಾರಿಕೆ), ಕೆ. ನಿಷ್ಣು ಭಟ್ಟ (ನಿಡೀಲು). ಕೆ. ವಿ. ಮೂರ್ತಿ (ಮೃದಂಗ) ಪಾಲ್ಗೊಂಡಿದ್ದರು. ರಾತ್ರಿ ಚಿಕ್ಕ ರಥೋತ್ಸವ, ಮಹಾಪೂಜೆ, ಸಾಲಕ ಉತ್ಸವಗಳೂ ನೆರವೇರಿದ ಬಳಿಕ ಪ್ರಸಿದ್ಧ ಕಲಾವಿದರ ಸಹಯೋಗದಿಂದ ಯಕ್ಷಗಾನ ಕೂಟ ನೆರವೇರಿತು. ಧರ್ಮ ಸಮ್ಮೇಳನಕ್ಕಾಗಿ ಆಕರ್ಷಣೀಯ ಮತ್ತು ಕಲಾಪೂರ್ಣ ನೇದಿಕೆಯನ್ನು ನಿರ್ಮಿಸಲಾಗಿತ್ತು. ನರ್ಷಂಪ್ರತಿ ಇಲ್ಲಿಯ ಕಾರ್ಯಕ್ರಮಗಳು ಭಕ್ತರನ್ನು ಹೆಚ್ಚು ಹೆಚ್ಚಾಗಿ ಆಕರ್ಷಿಸುವಂತೆ ಸಕಲ ವ್ಯವಸ್ಥೆಗಳನ್ನು ನೂಮುತ್ರಿರುವ ಆಡಳಿತ ಮುಂಡಳಿಯವರ ಶ್ರಮ ಪ್ರಶಂಸನೀಯವಿನಿಸಿ.

ಕಟೀಲಿನಲ್ಲಿ ನೋದಿ ನೇತ್ರ ಶಿಬಿರದ ಮುಕ್ತಾಯ ಸಮಾರಂಭ

ಕಟೀಲಿನಲ್ಲಿ ಏರ್ಪಡಿಸಲಾಗಿದ್ದ ಡಾ। ಎಂ. ಪಿ. ಮೋದಿಯವರ ಉಚಿತ ನೇತ್ರ ಚಿಕಿತ್ಸಾ ಶಿಬಿರದ ಸಮರೋಪಸಮಾರಂಭವು ಡಾ। ಎಸ್. ಚಂದ್ರಾರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕರ್ನಾಟಕ ಬ್ಯಾಂಕಿನ ಜೆಂಟರ್‌ಮೆನ್ ಶ್ರೀ ಕೆ. ಸೂರ್ಯನಾರಾಯಣ ಆಡಿಗರು ಮುಖ್ಯ ಅತಿಥಿಗಳಾಗಿದ್ದರು

ಇದೇ ಸಂದರ್ಭದಲ್ಲಿ ಡಾ। ಮೋದಿಯವರನ್ನು ಅಭಿನಂದಿಸುವ ಕಾರ್ಯಕ್ರಮವೂ ನಡೆದು ಕಟೀಲು ಶ್ರೀ ದುರ್ಗಾ ಪರಮೇಶ್ವರಿ ದೇವಳದ ಆಡಳಿತ ಮುಕ್ತೇಸರರೆಲ್ಲೊಬ್ಬರಾದ ಶ್ರೀ ಗೋಪಾಲಕೃಷ್ಣ ಆಸ್ರಣ್ಣರು ಡಾ। ಮೋದಿಯವರಿಗೆ ಮೂರು ಪವನು ತೂಕದ ಚಿನ್ನದ ಸರ ಹಾಗೂ ಪವಳವನ್ನು ನೀಡಿ ಗೌರವಿಸಿದರು.

ಕ್ಲಬ್ಬಿನ ವೈಸ್ಸಿ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಡಾ। ಕೆ. ಪಿ. ಮಧ್ಯಸ್ಥರು ಶಿಬಿರದ ವರದಿಯನ್ನೋದಿ ಶಿಬಿರವು ಆತ್ಯಂತ ಯಶಸ್ವಿಯಾಯಿತೆಂದೂ ಹೇಳಿದರು.

ಫೋನ್ ಟೆಯರ್‌ಮೆನ್ ರೆ। ಫಾ। ಸ್ಟ್ಯಾನ್ಲಿ ಪೀರೇರಾರವರು ಸಂದೇಶಗಳನ್ನೋದಿದರು. ಡಾ। ಕೆ. ಬಾಬು ಶೆಟ್ಟಿಯವರು ಮೂತಾಡಿ ಡಾ। ಮೋದಿಯವರನ್ನು ಅಭಿನಂದಿಸಿದರು. ಅನಂತರ ಕು। ಸುಮನಾ, ಶ್ರೀ ಎಂ ಎಸ್. ನಾಯಕ್ ಮತ್ತು ಶ್ರೀ ರಾಘವೇಣ್ಣ ಭಟ್ಟರವರು ಮೂತಾಡಿ ಶಿಬಿರದ ತಮ್ಮ ಅನುಭವಗಳನ್ನು ವಿವರಿಸಿದರು.

ಡಾ। ಮೋದಿಯವರು ಮೂತಾಡಿದ ಬಳಿಕ ಅವರಿಗೆ ಲಯನ್ಸ್ ಕ್ಲಬ್‌ನ ಪರವಾಗಿ ಪಾರಿತೋಷಕವೊಂದನ್ನು ನೀಡಿ ಗೌರವಿಸಲಾಯಿತು. ಶಿಬಿರವಲ್ಲಿ ಸೇವೆ ಸಲ್ಲಿಸಿದ ಸ್ವಯಂ ಸೇವಕರಿಗೆ ಪ್ರಶಸ್ತಿ ಪತ್ರ ಕೊಡಲಾಯಿತು

ಶ್ರೀ ಅಡಿಗರವರು ಮೂತಾಡಿ ಕಟೀಲಿನಲ್ಲಿ ನೇತ್ರದಾನ ಶಿಬಿರವನ್ನು ಏರ್ಪಡಿಸಿದ ಲಯನ್ಸ್ ಕ್ಲಬ್ಬನ್ನೂ, ಅವರ ಯಶಸ್ವಿಗಾಗಿ ದುಡಿದ ಸ್ವಯಂ ಸೇವಕರನ್ನೂ ಮತ್ತು ಶ್ರೀ ದೇವಳದವರನ್ನೂ ಅವರು ಅಭಿನಂದಿಸಿದರು.

ಕಾರ್ಯದರ್ಶಿ ಶ್ರೀ ವೈ. ಕೆ. ಎಸ್. ಶೆಟ್ಟಿಯವರು ಧನ್ಯವಾದ ಅರ್ಪಿಸಿದ ಬಳಿಕ ಕಟೀಲಿನ ಶ್ರೀ ದೇವಳದ ಶಾಲೆಯ ವಿದ್ಯಾರ್ಥಿಗಳಿಂದ "ಸುಧನ್ವ ಕಾಳಗ"ವೆಂಬ ಯಕ್ಷಗಾನ ನಾಟಕ ಅಭಿನಯಿಸಲ್ಪಟ್ಟಿತು.

ಮಂಗಳೂರಲ್ಲಿ ರಾಷ್ಟ್ರಪತಿ ವಿ.ವಿ. ಗಿರಿ

ಮಂಗಳೂರು ವೈದ್ಯಕೀಯ ಸಹಾಯ ಸಂಘದ ಉದ್ಘಾಟನೆಯನ್ನು ರಾಷ್ಟ್ರಪತಿ ಶ್ರೀ ವಿ. ವಿ. ಗಿರಿಯವರು ತಾ. 26ರಂದು ಉದ್ಘಾಟಿಸುತ್ತಾ, ಭಾರತದ ಪ್ರಾದೇಶಿಕ ಸಮಗ್ರತೆ ಹಾಗೂ ಗೌರವದ ರಕ್ಷಣೆ ಸ್ವಾನಲಂಬನೆ ಮತ್ತು ಸ್ವಸಹಾಯವನ್ನೇ ನುಖ್ಯವಾಗಿ ಆನಲಂಬಿಸಿವೆ ಎಂದೂ, ಭಾರತಕ್ಕೆ ಸಮರ ಸ್ವಾವಲಂಬನೆ ಸಾಕಲಿಸಿದೆ ಎಂದೂ ಅವರು ಹೇಳಿದರು. ನನ್ಮು ವೈದ್ಯರ ಹಾಗೂ ಆರೋಗ್ಯ ಸುಧಾರಕರ ಶಿಕ್ಷಣದ ಬಗ್ಗೆ ನಾವು ಹೊಸ ನೀತಿಯನ್ನೇ ರೂಪಿಸ ಬೇಕಾಗಿದೆ. ನಮ್ಮ ರಾಷ್ಟ್ರದ ವೈದ್ಯಕೀಯ ನೀತಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವೇ ತಳಹದಿಯಾಗಿದ್ದು, ವೈದ್ಯರು ಹಾಗೂ ವೈದ್ಯಕೀಯ ಸಂಬಂಧ ಶಿಕ್ಷಣ ಗ್ರಾಮಾಂತರ ಪ್ರದೇಶ ಹಾಗೂ ನಗರಗಳಲ್ಲಿ ಉತ್ತಮ ಸೇವೆ ಸಲ್ಲಿಸಲು ತಕ್ಕುದಾಗಿರಬೇಕೆಂದರು. ಆಯುರ್ವೇದ ಯುನಾನಿಗೆ ಪ್ರೋತ್ಸಾಹವೀಯುವುದು ಆಗತ್ಯವೆಂದವರು ತಿಳಿಸಿದರು.

ಈ ಸಂದರ್ಭದಲ್ಲಿ ಪ್ರಕಟಿಸಲಾಗಿದ್ದ ಸಂಸ್ಮರಣ ಸಂಚಿಕೆಯನ್ನು ಅವರು ಬಿಡುಗಡೆ ಮಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲ ಶ್ರೀ ಧರ್ಮವೀರರು ಮೂತಾಡಿ ತಜ್ಞ ವಿಭಾಗಕ್ಕೆ ಆಗತ್ಯವಾದ ಉಪಕರಣಗಳನ್ನಿಯುವುದಾಗಿ ಭರವಸೆಯಿತ್ತರು.

ಇದೇ ಸಂದರ್ಭದಲ್ಲಿ ಆಸ್ಪತ್ರೆಯ ಹೊರರೋಗಿಗಳ ವಿಭಾಗದ ಕಟ್ಟಡದ ಬಡಾವಣೆಗೆ ಬೇರೆ ಬೇರೆ ವತಿಯಿಂದ ನಿಧಿ ಆರ್ಪಿಸಲಾಯಿತು.

ಆರಂಭದಲ್ಲಿ ಸಂಘದ ಅಧ್ಯಕ್ಷ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಸ್ವಾಗತಿಸಿದರು. ಕಾರ್ಯದರ್ಶಿ ಡಾ। ಕೆ. ಆರ್. ಶೆಟ್ಟಿ ವರದಿ ಓದಿದರು. ಆಂತ್ಯದಲ್ಲಿ ಉಪಾಧ್ಯಕ್ಷ ಡಾ। ಪಿ. ಎಸ್ ಆಡಿಗರು ಧನ್ಯವಾದಗಳನ್ನು ಆರ್ಪಿಸಿದರು.

ಉಡುಪಿಯಲ್ಲಿ ರಕ್ಷಣಾ ನಿಧಿಗೆ 60 ಸಾವಿರ ರೂ. ಕಾಣಿಕೆ ನೀಡಿಕೆ

ತಾ. 26ರಂದು ಉಡುಪಿಯಲ್ಲಿ ನಗರಸಭೆ ಹಾಗೂ ವಾಣಿಜ್ಯ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಏರ್ಪಟ್ಟಿದ್ದ ಸಾರ್ವಜನಿಕ ಸಭೆಯಲ್ಲಿ ರಾಷ್ಟ್ರ ರಕ್ಷಣಾ ನಿಧಿಗೆ 60 ಸಾವಿರ ರೂ.ಗಳನ್ನು ರಾಜ್ಯಪಾಲ ಶ್ರೀ ಧರ್ಮವೀರರಿಗೆ ಅರ್ಪಿಸಲಾಯಿತು

ಈ ಸಂದರ್ಭದಲ್ಲಿ ಶಾಲಾ ಮಕ್ಕಳು, ನುಹಿಳಾ ಸಮೂಜ, ನರ್ತಕರು, ಶಿಕ್ಷಕರು, ಕಾರ್ಮಿಕ ಮುಖಂಡರು, ಎನ್. ಜಿ ಒ.ಗಳು ಮೊದಲಾಗಿ ಸಮಾಜದ ಬೇರೆ ಬೇರೆ ವರ್ಗಗಳವರೆಲ್ಲ ಸಕ್ರಿಯವಾಗಿ ಭಾಗವಹಿಸಿದ್ದರು.

ರಾಜ್ಯಪಾಲರು ಮೂತಾಡಿ ರಾಷ್ಟ್ರದ ರಕ್ಷಣೆಯ ಬಗ್ಗೆ ನ್ಯಕ್ತವಾದ ಈ ಆರ್ಪಣಾ ಭಾವವನ್ನು ಬೆಳೆಸಿಕೊಂಡು ಹೋಗಬೇಕೆಂದು ತಿಳಿಸಿದರು. ಸೈನಿಕರ ಹಾಗೂ ಅವರ ಸಂಸಾರದವರ ಯೋಗ ಕ್ಷೇಮವನ್ನು ನೋಡಿಕೊಳ್ಳಲು ಪ್ರತ್ಯೇಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂದೂ ಸೂಚಿಸಿದರು.

ಪ್ರಾರಂಭದಲ್ಲಿ ನಗರ ಸಭೆಯ ಅಧ್ಯಕ್ಷ ಡಾ। ವಿ. ಎಸ್. ಆಚಾರ್ ಅವರು ಸ್ವಾಗತಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಡಾ। ಟಿ. ಎಂ. ಎ. ಪೈಯವರು ವಹಿಸಿದ್ದರು. ವಾಣಿಜ್ಯ ಸಂಸ್ಥೆಯ ಅಧ್ಯಕ್ಷ ಶ್ರೀ ಟಿ. ರಮೇಶ ಪೈಯವರು ಕಾರ್ಯಕ್ರಮವನ್ನು ವಿವರಣೆಯನ್ನಿತ್ತರು. ಅಂತ್ಯದಲ್ಲಿ ಶ್ರೀ ಕೆ. ಪ್ರಭಾಕರ ಪೈ ವಂದಿಸಿದರು.

ಸಂಗ್ರಹಿಸಲೇ ಬೇಕಾದ ಅತ್ಯುಪಯುಕ್ತ ಪುಸ್ತಕಗಳು

ಸುಲಭದಲ್ಲಿ ಇಂಗ್ಲಿಷ್ English Made Easy

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಜನಪ್ರಿಯ ಆಂಗ್ಲ ಸ್ವಯಂಬೋಧಿನಿ ಬೆಲೆ: ರೂ. 2--00

Letter Writing Made Easy ಸುಲಭದಲ್ಲಿ ಪತ್ರಲೇಖನ

ಇಂಗ್ಲಿಷಿನಲ್ಲಿ ನಾನಾ ತರದ ಪತ್ರವ್ಯವಹಾರ ನಡೆಸಲು ಸಹಕಾರಿಯಾದ ವಿವಿಧ ಪತ್ರ ಸಂಕಲನ. ಬೆಲೆ : ರೂ. 1—50

ಮನೆ-ಮದ್ದು Home Remedies

ಡಾ| ವಿ. ಆರ್. ಕೊಗಡ್ಕಲ್‌ರು ಬರೆದ, ಪ್ರತಿ ಮನೆಯಲ್ಲೂ ಇರಲೇಬೇಕಾದ ಅತ್ಯುಪಯುಕ್ತ ಗೃಹವೈದ್ಯ. ಇದರಲ್ಲಿ ಮಕ್ಕಳ, ಹೆಂಗಸರ, ಗರ್ಭಿಣಿಯರ ಮತ್ತು ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೆ ಮದ್ದು ಮಾಡುವ ಸುಲಭ ವಿಧಾನಗಳಿವೆ. ಹೆರಿಗೆ ವಿಧಾನ ವಿಸ್ತಾರವಾಗಿ ವಿವರಿಸಲ್ಪಟ್ಟ ಸಂಗ್ರಾಹ್ಯ ಪುಸ್ತಕ. ಬೆಲೆ : ರೂ. 2-00

ವಿ ಸೂ. ವಿ. ಪಿ. ನೂಡುವುದಿಲ್ಲ. ಪುಸ್ತಕದ ಬೆಲೆಯೊಂದಿಗೆ 80 ಪೈಸೆ ಆಂಚೆ ವೆಚ್ಚ ಸೇರಿಸಿ ಮನಿಯರ್ಡರ್ ನೂಡಿದರೆ ಬುಕ್ ಪೋಸ್ಟ್ ನೂಡಲಾಗುವುದು.

— ಪ್ರತಿಗಳು ಸಿಗುವ ಸ್ಥಳ —

ನವಭಾರತ ಪುಸ್ತಕ ಭಂಡಾರ, ಪಾಲುಕೋಟಿ, ಉಡುಪಿ.

ಸೊಬಗು

ಹೊಸಮಾಗಿ ಕಳಿಯೇರೆ,
ಆಸುಗೆ ತಳಿರಿಂ ಬೀರೆ,
ಲತೆನನೆಗಳ ಕಂಪು
ಈ ಸೊಬಗು ಮನಕೆ ತಂಪು.

ಕುಸುಮರಜಗಳ ಮೇಲಿರವ
ಝುಂಬಿಗಳೇ,
ಲತಗೃಹದೊಳು ಬಿರಿವ
ಪುಷ್ಪಗುಚ್ಛಗಳೇ,
ಹರಿವ ತಿಳಿಜಲತೆರೆಯಾಗಿ
ಸೊಬಗು ಹೃದಯದಲ್ಲಿ ಮನೆಯಾಗಿ!

ಕೋಗಿಲೆಯ ಮಂಜುಳ,
ಜೀವಕೋಟಿಗಿದು ಜೋಗುಳ!
ಈ ಸೃಷ್ಟಿ ಸೊಬಗು ಮಹಮಂದಿರ
ನಮಗದು ಹಂದರ!

—ಬಿ.ವಿ. ನಾಯಕ್, ಉಡುಪಿ

ಸಾದರ ಸ್ವೀಕಾರ

'ನಿರಾಕರಣ' (ಸಾಮಾಜಿಕ ಕಾದಂಬರಿ)
ಬರೆದವರು: ಎಸ್. ಎಲ್. ಭೈರಪ್ಪ; ಪ್ರಕಾರಕರು: ಸಾಹಿತ್ಯ ಭಂಡಾರ, ರಾಷ್ಟ್ರೀಯ ವಿದ್ಯಾಲಯ ಬೀದ್ರಿವಿಶ್ವೇಶ್ವರಪುರ, ಬೆಂಗಳೂರು-4.
ಪುಟಗಳು: ಕ್ರೌನ್ ¼ ಆಕಾರದ 228.
ಬೆಲೆ: ರೂ. 5|-

ಮಕ್ಕಳನ್ನು ಸಾಕಲು ಹೆಣ್ಣು ದಿಕ್ಕಿಲ್ಲದ ತಂದೆಯು ಅವರನ್ನು ದತ್ತುಕೊಟ್ಟು ಸನ್ಯಾಸಿಯಾಗಿ ಕೊನೆಗೆ ಚಂಚಲಚಿತ್ತನಾಗುವ ಒಂದು ವಿನೂತನ ಕೃತಿ.

ಮೀನಾಕ್ಷಿಯ ಶಿಲ್ಪಕಲೋನ್ನತಿಯ

ಮ ಧು ರೈ

ಪುರಾಣ ವಿಖ್ಯಾತ ಮತ್ತು ಇತಿಹಾಸ ಪ್ರಸಿದ್ಧ ಮಥುರಾ ಅಥವಾ ಮಧುರೈ ನಗರ ದಕ್ಷಿಣ ಹಿಂದುಸ್ತಾನದಲ್ಲಿದೆ. ಶ್ರೀ ಕೃಷ್ಣ ಹುಟ್ಟಿದುದು ಇಲ್ಲಿಯೇ ಎನ್ನುತ್ತಾರೆ. ಮಥುರಾ ನಗರವಿರುವುದು ಉತ್ತರ ಹಿಂದುಸ್ತಾನದಲ್ಲಿ–ಆದೀ ಹೆಸರಿನಿಂದ ಮಧುರೈ ನಗರವನ್ನೂ ತಮಿಳು ರಾಜರು ಸ್ಥಾಪಿಸಿದರೆನ್ನಲಾಗಿದೆ. ತನ್ನದೇ ಒಂದು ಧಾರ್ಮಿಕ, ಐತಿಹಾಸಿಕ ಹಾಗೂ ಸಾಂಸ್ಕೃತಿಕ ದಾಖಲೆಯನ್ನು ಮಧುರೈಯೂ ಸ್ಥಾಪಿಸಿ, ಎರಡನೆಯ ಮಥುರಾ ನಗರವೆನಿಸಿದೆ.

ಹಿಂದೆ ಮಧುರೈ ಪಾಂಡ್ಯರ ಸಾಮ್ರಾಜ್ಯಕ್ಕೆ ರಾಜಧಾನಿಯೂಗಿತ್ತು. ಆಧುನಿಕತೆಯಲ್ಲಿ ಇಂದಿನ ಪ್ರಮುಖ ನಗರಗಳಿಗೆ ಸರಿಸಾಟಿಯೂದ ಇದಕ್ಕೆ ಮದ್ರಾಸ್ ರಾಜ್ಯದಲ್ಲಿ ಜನಸಂಖ್ಯಾ ದೃಷ್ಟಿಯಿಂದ ಎರಡನೆಯ ಸ್ಥಾನವಿದೆ. ಮರ ಮಟ್ಟಿನ ಸಾಮಾನುಗಳಿಗೆ, ಸೀರೆಗಳಿಗೆ ಈ ನಗರ ಪ್ರಸಿದ್ಧವಾದುದು. ಮಧುರೈಯಲ್ಲಿ ಪ್ರೇಕ್ಷಣೀಯವಾದ ತಿರುಗುಲ ನಾಯಕನ ಮಹಲು ಹಾಗೂ ಆಕರ್ಷಣೀಯವಾದ ಮೀನಾಕ್ಷಿ ದೇವಾಲಯವಿದೆ. ತಿರುಗುಲ ನಾಯಕನ ಮಹಲಿನಲ್ಲಿ ಉನ್ನತ ವೈಶಾಲ್ಯದ ಸ್ತಂಭಗಳು, ಸುಂದರ ಕೆತ್ತನೆಯ ಛಾವಣಿ, ಗಟ್ಟಿಯಾದ ಪ್ರಾಚೀರಗಳಿದ್ದರೂ ಒಂದೇ ಒಂದು ತಿಲೆಯೂ ಇಲ್ಲದೆ ಪೂರ್ಣ ಮಣ್ಣಿನಿಂದ ಮಹಲು ಕಟ್ಟಲ್ಪಟ್ಟಿದೆ. ಶತಮಾನಗಳ ಹಿಂದೆ ಕಟ್ಟಲ್ಪಟ್ಟ ಈ ಭವನ ಹೊಚ್ಚ ಹೊಸತೋ ಎಂದು ಭ್ರಮಿಸುವಷ್ಟು ನಿತ್ಯ ನೂತನವಾಗಿದೆ.

ಕೆಲವು ನೂರು ವರ್ಷಗಳ ಪೂರ್ವದಲ್ಲಿ ಹಿಂದೂ ರಾಜನಾದ ಸೌಂದರ್ಯ ಪಾಂಡ್ಯನಿಗೆ ಮಗಳೊಬ್ಬಳು ಜನಿಸಿದಳು. ತಂದೆ-ಮಗಳಿಬ್ಬರೂ ಒಬ್ಬರನ್ನೊಬ್ಬರು ಪ್ರಾಣಕ್ಕಿಂತ ಲೂ ಮಿಗಿಲಾಗಿ ಪ್ರೀತಿಸುತ್ತಿದ್ದರು. ಆದರೆ ವಿಧಿಯ ಆಘಾತವೊಂದರಿಂದ ತಾರುಣ್ಯದಲ್ಲೇ ಅವಳ ಜೀವನಯಾತ್ರೆ ಮುಗಿಯಿತು. ಅದುದರಿಂದ ರಾಜ ಮಗಳ ನೆನಪಿಗಾಗಿ ಸ್ಮಾರಕ ಭವನವೊಂದನ್ನು ಕಟ್ಟಿಸಿ, ಅದರಲ್ಲಿ ಮಗಳ ವಿಗ್ರಹವನ್ನು ಪ್ರತಿಷ್ಠಾಪಿಸಿದ. ಆ ವಿಗ್ರಹದಲ್ಲಿ ದೈವಿಕ ಕಲೆ ಆವಿರ್ಭವಿಸಿತು. ಆಕೆಯ ಕುರಿತಾಗಿ ಅನೇಕ ಪವಾಡ ಕತೆಗಳು ಹುಟ್ಟಿದುವು. ಆ ರಾಜಪುತ್ರಿಯೇ ಮಧುರೈ "ಮೀನಾಕ್ಷಿ".

ಸುಂದರವಾದ ಮೀನಾಕ್ಷಿದೇವಿಯ ಮಂದಿರವನ್ನು ನೋಡಲು ಭಾರತದ ನಾನಾಕಡೆಗಳಿಂದ ಸಂದರ್ಶಕರು ಬರುತ್ತಾರೆ. ಭಾರತದ ಆಂಗ್ಲರ ಕಾಲದಲ್ಲಿ ಹಲವರು ಆಂಗ್ಲರು ಆಕೆಯ ಭಕ್ತರಾಗಿದ್ದ ಉದಾಹರಣೆಗಳಿವೆಯಲ್ಲದೆ ಪರದೇಶಗಳಿಂದ ಭಕ್ತರು ಈಗಲೂ ಅಲ್ಲಿಗೆ ಬರುತ್ತಾರೆ. ನಗರದ ಮಧ್ಯದಲ್ಲಿರುವ ಈ ಮಂದಿರದ ಅದ್ಭುತವಾದ ಶಿಲ್ಪ ಕಲೆಯನ್ನು ಗಣ್ಯರಲ್ಲಿ ಇಲ್ಲಿಗೆ ಬೆಟ್ಟಿಕೊಟ್ಟ ಸ್ವೀಡನ್ನಿನ ಪ್ರಧಾನ ಮಂತ್ರಿಗಳು ಆಶ್ಚರ್ಯದಿಂದ ತಂಬುಕಂಠದಲ್ಲಿ ಹೊಗಳಿ ಪ್ಲಾರೆ.

ಮೀನಾಕ್ಷಿ ಮಂದಿರವೆ ಸುತ್ತಲೂ ಕೋಟೆ ಗೋಡೆಯಿದೆ. ಈ ಕೋಟೆಯಲ್ಲಿ ಕುಶಲ ಚಿತ್ರಕಲೆಯಿರುವ ಆಗಾಧ ಸ್ತಂಭಗಳು ಅದ್ಭುತ ರಚನೆಯ ಉನ್ನತ ಪ್ರಾಚೀರಗಳು ಭಾರತೀಯ ಪುರಾತನ ಕಲಾ ಪ್ರವೀಣತೆಗಳಿಗೆ ಸಾಕ್ಷಿಯಾಗಿವೆ. ಈ ಕೋಟೆಯಲ್ಲಿ ಚತುರ್ದಿಕ್ಕುಗಳಲ್ಲೂ ಗೋಪುರ ಗೋಪುರವಾಗಿರುವ ಬಹು ಸುಂದರವಾದ ನಾಲ್ಕು ಪ್ರವೇಶದ ಬಾಗಿಲುಗಳಿವೆ. ಇವುಗಳಲ್ಲಿ ಎಂಟರಿಂದಾರಂಭಿಸಿ ಹನ್ನೆರಡು ಅಂತಸ್ತುಗಳಿವೆ.

ದೇವ ಮಂದಿರವನ್ನು ಪ್ರವೇಶಿಸಿದೊಡನೆ ವಿಶಾಲವಾದ ಒಂದು ಸುಂದರ "ಕಮಲ ಕೊಳ"ವೆಂಬ ಸರೋವರವನ್ನು ನೋಡಬಹುದು. ಮಂದಿರದ ಒಳಭಾಗದಲ್ಲಿ ಪುರಾಣ ಸಂಬಂಧ ದೇವರು—ದೇವಿಯರ ಚಿತ್ರಗಳು, ಒಂದೇ ಶಿಲೆಯಿಂದ ಕೆತ್ತಿದ ಸ್ಮಲ್ಪವೂ ಜೋಡಣೆಯಿಲ್ಲದ ಬೃಹದಾಕಾರದ ವಿಗ್ರಹಗಳು ಇವೆ. ಕೆಲವು ಬಹು ಎತ್ತರವಾದ ಶಿಲಾಸ್ತಂಭಗಳ ನಡುವೆ "ಮಂಟಪ" ವೆಂಬ ಹೆಸರಿನಿಂದ ವಿಗ್ರಹಗಳಿಡಲ್ಪಟ್ಟಿವೆ. ಏಕ ಶಿಲೆಯಿಂದ ನಿರ್ಮಿತವಾದ ಈ ಭಾರೀ ಸುತ್ತಳತೆಯ ಸ್ತಂಭಗಳಿಗೆ ಕೈಯಿಂದ ಬಾರಿಸಿದರೆ ಸುಮಧುರ ವಾದ್ಯ ಸಂಗೀತ ಹೊರಡುತ್ತದೆ.

ಮಂದಿರದ ಒಳಗಿನ ಪ್ರಾಂಗಣಗಳು ವಿಶಾಲವಾಗಿವೆ. ಅವುಗಳಲ್ಲಿ ಸಣ್ಣ ಪುಟ್ಟ ಅಂಗಡಿಗಳಿವೆ. ಸಂಗೀತ ವಾದ್ಯಗಳಿಗೆ ಅನುಕೂಲವಾಗುವಂತಹ ದುಂಡಾದ ಹಜಾರಗಳು ಪ್ರಾಂಗಣದಲ್ಲಿದ್ದು ಅವುಗಳಲ್ಲಿ ತರಕಾರಿ, ಹಣ್ಣುಕಾಯಿ ಮೂರಾಟ ಮಾಡುತ್ತಾರೆ.

ಮನಮೋಹಕ ಸೌಂದರ್ಯದ ಕಲಾಪೂರ್ಣವಾದ ಮೀನಾಕ್ಷಿ ದೇವಿಯನ್ನು ನೋಡಲು ಎರಡೂ ಕಣ್ಣುಗಳು ಸಾಲವು ಅವಳ ಹೆಗಲಿನಲ್ಲಿ ಗಿಣಿಯೊಂದು ಕುಳಿತಿದೆಯಲ್ಲದೆ ಆಕೆಗೆ ಮೀನಿನ ಕಣ್ಣಿರುವುದರಿಂದಲೇ ಮೀನಾಕ್ಷಿಯೆನಿಸಿದ್ದಾಳೆ. ಪ್ರಾಚೀನ ಭಾರತದ ಕೆತ್ತನೆ ಕೆಲಸಕ್ಕೆ ಮೂದಿರಿಗಾದ ಅಸಂಖ್ಯ ವಸ್ತ್ರಾಭರಣಗಳು ದೇವಿಯನ್ನು ಅಲಂಕರಿಸಿಯೆಯಲ್ಲದೆ ಈ ಚಿನ್ನಾಭರಣಗಳ ಮೌಲ್ಯ ಒಂದು ಕೋಟಿ ರುಪಾಯಿಯನ್ನೂ ಮೀರಿದೆಯೆಂದು ಅಂದಾಜು ಮಾಡಲಾಗಿದೆ.

ವೈಶಾಖ ಪೂರ್ಣಿಮೆಯಲ್ಲಿ ವಿಜೃಂಭಣೆಯಿಂದ ದೇವಿಯ ರಥೋತ್ಸವ ನಡೆಯುವುದು. ನಗರವಿಡೀ ರಥದಲ್ಲಿ ದೇವಿಯ ರಥವನ್ನು ಸುತ್ತಾಡಿಸಿದ ತರುವಾಯ ನಗರದ ಬಳಿಯಲ್ಲಿರುವ ಒಂದು ಸರೋವರದ ಪಕ್ಕಕ್ಕೆ ರಥವನ್ನು ಒಯ್ಯುತ್ತಾರೆ. ಆಗ ದೇವಿಯ ಸರ್ವಾಲಂಕಾರ ಭೂಷಣ ಕಣ್ಮನಗಳಿಗೆ ಹಬ್ಬವನ್ನು ತರುತ್ತದೆ.

ದೇವಾಲಯದ ಗೋಪುರ ತುಂಬ ಉನ್ನತವಾಗಿದೆ. 'ಕಲ್ಲಿನಲ್ಲಿ ಸಂಗೀತ ಬರುವ ವಿಶ್ವಪ್ರಸಿದ್ಧ ಸ್ಥಳಗಳಿಗೆ ಮಧುರೈಯು ಹೆಸರು ವಿದೇಶೀಯರಿಂದ ಶ್ಲಾಘಿಸಲ್ಪಟ್ಟಿದೆ. ದಿನವೂ ತ್ರಿಕಾಲಗಳ ವಿಶೇಷ ಪೂಜೆಗಳಿಗೆ ಅಸಂಖ್ಯಾತ ಭಕ್ತರು ನೆರೆಯುತ್ತಾರೆ. ಒಂದು ಕಾಲದಲ್ಲಿ ರಾಜಪುತ್ರಿಯ ಸ್ಮಾರಕವಾಗಿ, ಮತ್ತೆ ಗ್ರಾನುದೇವತೆಯ ಬೀಡಾದ ಈ ಮಧುರೈ ಪ್ರಾಚೀನ ಭಾರತದ ಕಲೆಯ ಔನ್ನತ್ಯಕ್ಕೆ ಒಂದು ಹಗ್ಗುರುತಾಗಿದೆ. ಈ ಜಿಗೆ ಕೆನಡದ ಪ್ರಧಾನಿಗಳು ಇಲ್ಲಿಗೆ ಬಂದಿದ್ದಾರೆ.

—ಪ. ರಾಮುಕೃಷ್ಣಶಾಸ್ತ್ರಿ

ಜ್ಞಾ ಪ ಕ ಶ ಕ್ತಿ

(ಎರಡನೇ ಪುಟದಿಂದ)

ವನ್ನು ಅನುಸಂಸಿಬೇಕೆಂದು ನಾವು ಸೂಚಿಸುತ್ತೇವೆ ವಯಸ್ಕರಿಗೆ 10–15 ನಿಮಿಷಗಳ ಮಧ್ಯಂತರದಿಂದ 40–50 ನಿಮಿಷಗಳ ಅಧ್ಯಯನ. ಅವಿರತ ಮಾನಸಿಕ ಕಾರ್ಯ ಅನುತ್ಪಾದಕವೆಂಬುದನ್ನೂ ನೆನಪಿನಲ್ಲಿಟ್ಟುಕೊಂಡಿರಬೇಕು. ಮಲಗಿಕೊಳ್ಳುವುದಕ್ಕೆ ಮುನ್ನ ಅಥವಾ ಬೆಳಗಿನ ಹೊತ್ತು ತಲೆ ಪ್ರಶಾಂತ ಹಾಗೂ ಪರಿಶುದ್ಧವಾಗಿರುವುದರಿಂದ ಆಗ ಅಗತ್ಯವಾದ ವಿಷಯವನ್ನು ಪುನರುಚ್ಚರಿಸುವುದೆಂತೂ ತುಂಬಾ ಒಳೆಯದಾಗಿದೆ.

ಜ್ಞಾಪಕಶಕ್ತಿಕ್ಷೇತ್ರದಲ್ಲಿ ಬಿಡಿಸಿದ ಸಮಸ್ಯೆಗಳಿಗಿಂತ ರಹಸ್ಯಗಳ ಸಂಖ್ಯೆ ಬಹಳಷ್ಟು ದೊಡ್ಡದಾಗಿದೆ. ಆದರೆ ಶರೀರ ವಿಜ್ಞಾನಿಗಳು, ಜೀವರಸಾಯನ ಶಾಸ್ತ್ರಜ್ಞರು ಹಾಗೂ ಕ್ಲೈನಿಸಿಸ್ಟರ ಸಂಯುಕ್ತ ಪ್ರಯತ್ನವು—ಅನುಭವಗಳನ್ನೂ ಸಮೂಹಾರಗಳನ್ನೂ ಸ್ವೀಕರಿಸಿ, ರಕ್ಷಿಸಿಟ್ಟು ಪುನಃ ಉತ್ಪಾದಿಸುವ ಮನುಷ್ಯ ಮಿದುಳಿನ ಈ ಅದ್ಭುತ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗುತ್ತವೆಯೆನ್ನುವುದರಲ್ಲಿ ಅನುಮಾನವೇ ಇಲ್ಲ.

In the Court of the Munsif of Bantwal, S. K.

Ex.C. 70/1971 in O.S.No. 178/1970

Between

H. Ishwara Bhat
—Decree-Holder.

and

Billampadavu Narayana Bhat
—Judgement Debtor

To

Billampadavu Narayana Bhat, son of Mahalinga Bhat, residing at Billampadavu House, P.O. Alike, Bantwal Taluk.

Please take notice that in the above suit the execution Petitioner (decree-holder) has applied for the sale of the immoveable properties belonging to you and fully described in the sale proclamation and 28th January 1972 has been fixed for settling the terms of the proclamation of sale (granting permission to the Petitioner to bid and set off).

(By Order of Court).

Sd/- P. Narayana Bhat.
Advocate for Decree-Holder.
18 12 1971.

ಸುಂದರ ಕುಂದಾಪುರ ನಗರದ ಪ್ರಶಸ್ತ ಪ್ರದೇಶ ವ್ಯಾಪಾರದಲ್ಲಿ
ನೇರವಾದ ಎರಡು ರಾಷ್ಟ್ರೀಯ ಹೆದ್ದಾರಿಗಳ ಮಧ್ಯದಲ್ಲಿ
ಪ್ರೀತ್ಯಾದರಗಳಿಂದ ನಿಮ್ಮನ್ನು ಸದಾ ಸ್ವಾಗತಿಸುವುದಿಲ್ಲಿ—

ಹೊಟೆಲ್ ಶಿವಪ್ರಸಾದ

ಕುಂದಾಪುರ, ದ. ಕ.

ಊಟ, ಉಪಾಹಾರ ಮತ್ತು ಆಧುನಿಕ ವಸತಿ ಗೃಹ

ಶಿವಳ್ಳಿ ಬ್ರಾಹ್ಮಣರ ಶುಚಿ-ರುಚಿಯಾದ ಭೋಜನ, ಸಕಲ ವಿಧದ ತಿಂಡಿತಿನಸು
ಪಾನೀಯಗಳ ಉಪಾಹಾರಕ್ಕೆ ಅಗ್ರ ಸ್ಥಾನ ಪಡೆದ ಏಕಮಾತ್ರ ಹೊಟೆಲ್

Please Visit ಫೋನ್: 77

HOTEL SHIVAPRASAD

High Class Boarding, Lodging & Restaurant

COONDAPUR, S. K.

ಮಿತ ಕುಟುಂಬ ಯೋಜನೆಗೆ
ಅತ್ಯುಪಯುಕ್ತ ಪುಸ್ತಕ—

ಮಿತ ಸಂತತಿ

ಜನನಗಳನ್ನು ತಡೆಗಟ್ಟುವ ವಿಧಾನಗಳನ್ನು ವಿವರಿಸುವ ಕೈಗನ್ನಡಿ

ಬೆಲೆ 0–75 ಸ್ಪೈಸೆ ಮಾತ್ರ.

ಒಂದು ರೂ. ಸ್ಟ್ಯಾಂಪು ಕಳಿಸಿದರೆ ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಭಾರತ ಪುಸ್ತಕ ಭಂಡಾರ
(ನವಯುಗ ಪ್ರೆಸ್) ಉಡುಪಿ, ದ.ಕ.

ಹನ್ನೊಂದು

NAVAYUGA 30-12-1971

Registered with the Registrar of News Papers for India under No. R. N. 3546/'57

REGD. No. B. G. 176
LICENCE No. 33
Licensed to Post without Prepayment

ಬಂಗ್ಲಾ ದೇಶದ ಉದಯ

ವಸಾಹತುಶಾಹಿ ಶೋಷಣೆಯ ಇತಿಹಾಸ

ಸಂಯುಕ್ತ ಪಾಕಿಸ್ತಾನದ ಚೌಕಟ್ಟಿನಲ್ಲಿ ಪೂರ್ವಪಾಕಿಸ್ತಾನದ ಆರ್ಥಿಕ ಸ್ವಾಯತ್ತತೆಗಾಗಿ ಆರಂಭವಾದ ಚಳುವಳಿಯು ಎರಡು ದಶಕಗಳ ಅವಧಿಯಲ್ಲಿ ಸ್ವತಂತ್ರ ಬಂಗ್ಲಾದೇಶದ ಚಳುವಳಿಯಾಗಿ ರೂಪಾಂತರ ಹೊಂದಿತು. ಬಂಗ್ಲಾದೇಶದ ಜನರೇಕೆ ಪಾಕಿಸ್ತಾನಕ್ಕೆ ಬೆನ್ನು ತಿರುಗಿಸಿದರು ?

ಈ ಪ್ರಶ್ನೆಗೆ ಪಾಕಿಸ್ತಾನದ ಅಧ್ಯಕ್ಷ ಯಾಹ್ಯಾಖಾನರೇ ಉತ್ತರನೀಡಿದ್ದಾರೆ. ಅವರು ಅಮೆರಿಕಾದ ನ್ಯೂಸ್ ವೀಕ್ ಸಾಪ್ತಾಹಿಕಕ್ಕೆ ನೀಡಿದ ಸಂದರ್ಶನದ ವಿವರ ನವೆಂಬರ್ ೮ರ ಸಂಚಿಕೆಯಲ್ಲಿ ಪ್ರಕಟವಾಗಿದೆ "ಯಾರೊಬ್ಬರೂ ಬಂಗಾಳಿಗಳನ್ನು ಜೆನ್ನಾಗಿ ನೋಡಿಕೊಳ್ಳಲಿಲ್ಲ. ಪೂರ್ವಪಾಕಿಸ್ತಾನ ಅಲಕ್ಷಿಸಲ್ಪಟ್ಟಿತು. ನಾವು ಅವರ ತಲಾವೃದ್ಧಿಗೆ ಸಾಕಷ್ಟು ಗಮನ ಕೊಡಲಿಲ್ಲ" ಎಂದು ಯಾಹ್ಯಾ ಒಪ್ಪಿಕೊಂಡಿದ್ದಾರೆ. ಈ ರೀತಿಯ ದಬ್ಬಾಳಿಕೆಯ ವಿರುದ್ಧ ಬಂಗ್ಲಾ ದೇಶದ ಜನ ಬಂಡಾಯವೆದ್ದರು.

೧೯೪೭ನೇ ಇಸವಿಯಷ್ಟು ಹಿಂದೆಯೇ ಪಾಕಿಸ್ತಾನದ ಸಂವಿಧಾನ ಸಭೆಯ ಬಂಗಾಳಿ ಸದಸ್ಯರೊಬ್ಬರು "ಪೂರ್ವಪಾಕಿಸ್ತಾನ ಅಲಕ್ಷಿಸಲ್ಪಟ್ಟು, ಪಶ್ಚಿಮ ಪಾಕಿಸ್ತಾನದ ವಸಾಹತಿನಂತೆ ಕಾಣಲಾಗುತ್ತಿದೆಯೆಂಬ ಭಾವನೆ ಶಿಷ್ಟಿನ ಜನತೆಗಿದೆ" ಎಂದು ಎಚ್ಚರಿಕೆ ನೀಡಿದ್ದರು.

ಸ್ವಾರ್ಥ ಸಾಧನೆಗೆ ಸಹಕಾರ

ಪಾಕಿಸ್ತಾನದ ಮಿಲಿಟರಿ ನಾಯಕರು ಕೊಂಕಿಯ ನಾಗರಿಕ ಸರ್ಕಾರದ ಪ್ರಧಾನಮಂತ್ರಿಸ್ಥಾನವನ್ನು ಜನಾಭಿಪ್ರಾಯವನ್ನು ಪಡೆದ ವ್ಯಕ್ತಿ ಮುಜಿಬುರ್ ರಹಮಾನ್ ಹಿಂದೆ ಕರಾಚಿಯಲ್ಲಿ ಸಚಿವ ಕೇಂದ್ರ ವಿಧಾನಸಭೆಯಲ್ಲಿ ಪಾಕಿಸ್ತಾನಕ್ಕೆ ಸೇರಿದ್ದ ಸಮುದ್ರತೀರವು ನೂರಕ್ಕೆ ಸಗಟಾಗಿ ಪಶ್ಚಿಮ ಪಾಕಿಸ್ತಾನದ ಸಾರ್ವಭೌಮತ್ವಕ್ಕೆ ಸೇರಿದ್ದಾಗಿದೆ ಎಂದು ಹೇಳಿದ್ದರು.

ಮುಜಿಬುರ್ ರಹಮಾನ್‌ರಂತಹ ಜನನಾಯಕರು ಬಂಗ್ಲಾದೇಶವನ್ನು ದಬ್ಬಾಳಿಕೆಗೆ ಒಳಪಡಿಸಿರುವ ಪಶ್ಚಿಮಪಾಕಿಸ್ತಾನದ ನಾಯಕರೊಂದಿಗೆ ಸ್ವಾರ್ಥಸಾಧನೆಗಾಗಿ ಸಹಕರಿಸುತ್ತಿದ್ದಾಗ್ಯೂ ಬಂಗ್ಲಾ ಜನತೆ ಕ್ರಮೇಣ ಪಾಕಿಸ್ತಾನದ ವಸಾಹತುಶಾಹಿ ನೀತಿಯಿಂದ ದೂರವಾಗಿರಲು ನಿರ್ಧರಿಸಿತು.

ಸೇನಾಪಡೆ, ಸರ್ಕಾರಿ ಉದ್ಯೋಗ, ಆಭಿವೃದ್ಧಿ ಪೆಜ್ಜು, ಸಾಂಸ್ಕೃತಿಕ ಅಭಿವೃದ್ಧಿ ಮುಂತಾದುವುಗಳಿಗೆ ಅಧಿಕ ನೆರವು ನೀಡುವುದಾಗಿ ಭರವಸೆ ನೀಡಿ ಜನಕ್ಕೆ ವಿರುದ್ಧವಾಗಿ ಪಶ್ಚಿಮ ಪಾಕಿಸ್ತಾನ ವರ್ತಿಸಿತು.

ಪಾಕಿಸ್ತಾನದ ಯೋಜನಾ ಆಯೋಗಕ್ಕೆ ತಜ್ಞರ ಸಮಿತಿಯೊಂದು ಇತ್ತೀಚೆಗೆ ಸಲ್ಲಿಸಿದ ವರದಿಯಲ್ಲಿ ಪಶ್ಚಿಮ ಪಾಕಿಸ್ತಾನ, ಬಂಗ್ಲಾದೇಶಗಳ ಪ್ರಗತಿಯ ಹೋಲಿಕೆಯನ್ನು ಸೇರಿಸಿದೆ. ಈ ವರದಿಯ ಪ್ರಕಾರ ೧೯೫೬—೭೦ರ ಅವಧಿಯಲ್ಲಿ ಪಶ್ಚಿಮ ಪಾಕಿಸ್ತಾನದ ವ್ಯಕ್ತಿ ಆದಾಯವು ಬಂಗ್ಲಾದೇಶದ ವ್ಯಕ್ತಿ ಆದಾಯಕ್ಕಿಂತ ಶೇಕಡ ೩೨ರಷ್ಟು ಹೆಚ್ಚಾಗಿತ್ತು. ಮುಂದಿನ ಒಂದು ದಶಕದಲ್ಲಿ ಪಶ್ಚಿಮ ಪಾಕಿಸ್ತಾನದ ವಾರ್ಷಿಕ ವರಮಾನ ಏರಿಕೆ ಶೇಕಡ ೬೨ರಷ್ಟು, ಬಂಗ್ಲಾದೇಶದ ವಾರ್ಷಿಕ ವರಮಾನ ಏರಿಕೆ ಶೇಕಡ ೪೨ರಷ್ಟು ಇದ್ದಿತು. ತತ್ಫಲವಾಗಿ ೧೯೬೯—೭೦ರ ಪಶ್ಚಿಮ ಪಾಕಿಸ್ತಾನದ ವ್ಯಕ್ತಿ ಆದಾಯವು ಬಂಗ್ಲಾದೇಶದ ವ್ಯಕ್ತಿ ಆದಾಯಕ್ಕಿಂತ ಶೇಕಡ ೬೦ರಷ್ಟು ಹೆಚ್ಚಾಗಿತ್ತು.

ಆರ್ಥಿಕ ದಬ್ಬಾಳಿಕೆ

ಕಳೆದ ಎರಡು ದಶಕಗಳಲ್ಲಿ ಪಾಕಿಸ್ತಾನ ಸರ್ಕಾರ ನೂಡಿದ ಒಟ್ಟು ರೆವಿನ್ಯೂ ವೆಚ್ಚದಲ್ಲಿ ಕೇವಲ ಮೂರನೇ ಒಂದು ಭಾಗವನ್ನು ಬಂಗ್ಲಾದೇಶಕ್ಕೆ ನೀಡಿತು. ಇದೇ ಅವಧಿಯಲ್ಲಿ ಪಾಕಿಸ್ತಾನದ ರಫ್ತಿನ ವರಮಾನದಲ್ಲಿ ಬಂಗ್ಲಾದೇಶದ ಕಾಣಿಕೆ ಶೇಕಡ ೫೦ ರಿಂದ ೭೦ರ ವರೆಗೆ ವ್ಯಾಪಿಸಿ ಆದರ ಆಮದು ಪ್ರಮಾಣ ಶೇಕಡ ೨೫ ರಿಂದ ೩೦ ಮಾತ್ರ. ಆದರೆ ಪಾಕಿಸ್ತಾನಕ್ಕೆ ಬಂದ ವಿದೇಶಿ ಧನಸಹಾಯದಲ್ಲಿ ಬಹುಪಾಲು (ಶೇಕಡ ೮೦ರಷ್ಟು) ಪಶ್ಚಿಮ ಪಾಕಿಸ್ತಾನದಲ್ಲಿ ವಿನಿಯೋಗಿಸಲಾಗಿದೆ

ಸಹಾಸರಿಯಲ್ಲಿ ಒಬ್ಬ ಪಶ್ಚಿಮ ಪಾಕಿಸ್ತಾನದ ಪ್ರಜೆಯು ಬಂಗ್ಲಾದೇಶದ ಪ್ರಜೆಗಿಂತ ೧೯ಪಟ್ಟು ಹೆಚ್ಚು ನಿದ್ಯುತ್ತನ್ನು ಬಳಸುತ್ತಾನೆ, ೮ ಪಟ್ಟು ಹೆಚ್ಚಾಗಿ ಚಹಾ, ಹಾಗೂ ಪೆಟ್ರೋಲ್ ಉಪಯೋಗಿಸುತ್ತಾನೆ; ಆರು ಪಟ್ಟು ಹೆಚ್ಚಾಗಿ ಸಿಗರೇಟನ್ನೂ, ೮ ಪಟ್ಟು ಹೆಚ್ಚಾಗಿ ಸಕ್ಕರೆ ಹಾಗೂ ಬಟ್ಟೆಗಳನ್ನೂ ಬಳಸುತ್ತಾನೆ; ಹತ್ತು ಪಟ್ಟು ಅಧಿಕವಾಗಿ ಮೋಟಾರ್ ಕೊಳ್ಳುತ್ತಾನೆ ಹಾಗೂ ೭೭ಪಟ್ಟು ಹೆಚ್ಚಾಗಿ ರೇಡಿಯೋ ಉಪಯೋಗಿಸುತ್ತಾನೆ. ಈ ಅಸಮತೆಗಳು ವರ್ಷಗಳುರುಳಿದಂತೆ ರಾವಲ್ಪಿಂಡಿಯ ವಸಾಹತುಶಾಹಿ ಆಡಳಿತ ಯಂತ್ರದ ಹಿಡಿತದಲ್ಲಿ ಉಲ್ಬಣಿಸಿದವು.

ಬಂಗ್ಲಾ ದೇಶದಿಂದ ಪಾಕಿಸ್ತಾನದ ರಾಷ್ಟ್ರೀಯ ಸಭೆಯ ಸದಸ್ಯನಾಗಿದ್ದ ಸಯ್ಯದ್ ಸುಲ್ತಾನ್ ೧೯೬೬ನೇ ಇಸವಿಯ ಜೂನ್ ೨೦ರಂದು ಮೂತನಾಡುತ್ತ ಹಿಂದಿನ ೧೪ ವರ್ಷಗಳಲ್ಲಿ ಪಶ್ಚಿಮ ಪಾಕಿಸ್ತಾನದ ಆಡಳಿತ ವರ್ಗವು ಬಂಗ್ಲಾದೇಶದ ಮೇಲೆ ಮಾಡುತ್ತಿರುವ ಆರ್ಥಿಕ ದಬ್ಬಾಳಿಕೆಯನ್ನು ಯಥಾವತ್ತಾಗಿ ಚಿತ್ರಿಸಿದರು. ಅವರು ನಮೂದಿಸಿದ ಅಂಕಿ ಅಂಶಗಳ ಸ್ಪಕಾರ "ಸರ್ಕಾರಿ ವಲಯದ ಅಭಿವೃದ್ಧಿ ವೆಚ್ಚದಲ್ಲಿ ೧೯೪ ಕೋಟಿ ರುಪಾಯಿ ಪಶ್ಚಿಮ ಪಾಕಿಸ್ತಾನಕ್ಕೂ, ೬೦ ಕೋಟಿ ರೂಪಾಯಿ ಪೂರ್ವ ಬಂಗಾಳಕ್ಕೂ ಸಿಕ್ಕಿತು. ಪಾಕಿಸ್ತಾನ್ ಕೈಗಾರಿಕಾ ಸಾಲನೀಡಿಕೆ ಕಾರ್ಪೋರೆಶನ್ ನೀಡಿದ ಮೊತ್ತದಲ್ಲಿ ಶೇಕಡ ೨೪ರಷ್ಟು ಕೈಗಾರಿಕಾಭಿವೃದ್ಧಿ 'ಬ್ಯಾಂಕ್'ನೀಡಿದ ಮೊತ್ತದಲ್ಲಿ ಶೇಕಡ ೨೦ರಷ್ಟು ವಸತಿ ನಿರ್ಮಾಣ' ಹಣಕಾಸು ಕಾರ್ಪೊರೇಶನ್‌ನೀಡಿದ ಮೊತ್ತದಲ್ಲಿ ಶೇಕಡ ೧೨ರಷ್ಟು ಮಾತ್ರ ಪೂರ್ವ ಬಂಗಾಳಕ್ಕೆ ದೊರಕಿತು.

"ಪಾಕಿಸ್ತಾನಕ್ಕೆ ದೊರಕಿದ ವಿದೇಶೀ ಸಾಲಗಳಲ್ಲಿ ಶೇಕಡ ೧೬ ವಿದೇಶೀ ಅಭಿವೃದ್ಧಿ ನಿಧಿಯಲ್ಲಿ ಶೇಕಡ ೨೦ರಷ್ಟು ಮಾತ್ರ ಪೂರ್ವ ಬಂಗಾಳಕ್ಕೆ ದೊರಕಿತು. ಪೂರ್ವ ಬಂಗಾಳದ ವಿದೇಶೀ ವಿನಿಮಯ ಆದಾಯ ೧೧೫೫ ಕೋಟಿ ರೂಪಾಯಿ; ಪಶ್ಚಿಮ ಪಾಕಿಸ್ತಾನದ ವಿದೇಶೀ ವಿನಿಮಯ ವರಮಾನ ೮೧೫ ಕೋಟಿ ರೂಪಾಯಿ. ಆದರೆ ಪೂರ್ವ ಬಂಗಾಳಕ್ಕೆ ೫೪೦ ಕೋಟಿ ರೂಪಾಯಿ ವಿದೇಶೀ ವಿನಿಮಯ ವೆಚ್ಚ ಮಾಡಲು ಅವಕಾಶ ನೀಡಿ ಪಶ್ಚಿಮ ಪಾಕಿಸ್ತಾನವು ೧೫೦೦ ಕೋಟಿ ರೂಪಾಯಿ ವಿದೇಶೀ ವಿನಿಮಯ ವೆಚ್ಚಮಾಡಿತು.

ಅಗಾಧ ಕಾರತಮ್ಯ

ಬಂಗ್ಲಾ ದೇಶದ ಜನತೆಗೆ ಜಾಗತಿಕ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶವನ್ನು ನಿರಾಕರಿಸಿದ ಬಗ್ಗೆಯೂ ಸಯ್ಯದ್ ಅಬ್ದುಲ್ ಸುಲ್ತಾನ್ ಹೀಗೆ ಹೇಳಿದ್ದಾರೆ. "ವಿಶ್ವಸಂಸ್ಥೆಯ ವಿವಿಧ ಯೋಜನೆಗಳ ಆಶ್ರಯದಲ್ಲಿ ತರಬೇತಿ ಪಡೆಯಲು ೧೦೦ ಪೂರ್ವಬಂಗಾಳಿಗೆ ಅವಕಾಶ ಕೊಟ್ಟು ೭೩೨ ಪಶ್ಚಿಮ ಪಾಕಿಸ್ತಾನಿಗಳನ್ನು ಕಳುಹಿಸಲಾಯಿತು. ಕೊಲಂಬೋ ಯೋಜನೆಯ ಆಶ್ರಯದಲ್ಲಿ ೧೪೩೧ ಪಶ್ಚಿಮ ಪಾಕಿಸ್ತಾನಿಗಳೂ, ಕೇವಲ ೧೫೦ ಪೂರ್ವ ಬಂಗಾಳಿಗಳೂ ತರಬೇತಿ ಪಡೆದರು. ಪಾಕಿಸ್ತಾನಿ ಕೇಂದ್ರ ಸರ್ಕಾರವು ಅಭಿವೃದ್ಧಿಯೇತರ ಕ್ಷೇತ್ರಗಳಲ್ಲಿ ಮಾಡಿರುವ ವೆಚ್ಚದಲ್ಲಿರುವ ತಾರತಮ್ಯದ ಬಗ್ಗೆಯೂ ಸಯ್ಯದ್ ಸುಲ್ತಾನ್ ಗಮನ ಸೆಳೆದರು. "ಈ ಕ್ಷೇತ್ರದಲ್ಲಿ ಪಶ್ಚಿಮ ಪಾಕಿಸ್ತಾನ ಸರ್ಕಾರವು ೩ ಸಹಸ್ರಕೋಟಿ ರೂಪಾಯಿ ವೆಚ್ಚಮಾಡಿ ಕೇವಲ ೫೦೦ ಕೋಟಿ ರೂಪಾಯಿಯನ್ನು ಬಂಗ್ಲಾ ದೇಶಕ್ಕೆ ನೀಡಿತು.

ಇತರ ಕ್ಷೇತ್ರಗಳಲ್ಲೂ ಪಶ್ಚಿಮ ಪಾಕಿಸ್ತಾನ ಹಾಗೂ ಬಂಗ್ಲಾ ದೇಶದ ನಡುವಣ ಪರಿಸ್ಥಿತಿ ಉತ್ತಮವಾಗಿಲ್ಲ ಸೇನಾ ಕ್ಷೇತ್ರದ ಅಸಮತೆಯೂ ಕಣ್ಣುಕುಕ್ಕುವಂತಿದೆ. ಬಂಗ್ಲಾ ದೇಶದಿಂದ ರಾಷ್ಟ್ರೀಯ ಸಭೆಯ ಸದಸ್ಯರಾಗಿದ್ದ ಮಹಬೂಲ್ ಹಕ್ ೧೯೬೬ನೇ ಇಸವಿ ಜೂನ್ ಮೂಸದಲ್ಲಿ ತಿಳಿಸಿದಂತೆ ಕೇಂದ್ರ ಸರ್ಕಾರದಲ್ಲಿರುವ ೧೯ ಕಾರ್ಯದರ್ಶಿಗಳಲ್ಲಿ ಒಬ್ಬ ಬಂಗ್ಲಾ ಅಧಿಕಾರಿಯೂ ಇರಲಿಲ್ಲ.೧೩ ಉಪಕಾರ್ಯದರ್ಶಿಗಳಲ್ಲಿ ೫ ಬಂಗ್ಲಾದೇಶದವರಿದ್ದರು. ಇದೇ ರೀತಿ ೬೩ ಅನುಭಾಗ ಅಧಿಕಾರಿಗಳಲ್ಲಿ ಕೇವಲ ೮ ಜನ ಬಂಗ್ಲಾ ದೇಶದವರಿದ್ದರು.

ಪಾಕಿಸ್ತಾನದ ಹಣಕಾಸು ಶಾಖೆ ಸ್ಪಷ್ಟಪಡಿಸಿದಂತೆ ಕೈಪಿಡಿಯೊಂದರಲ್ಲಿ ತಿಳಿಸಿದ್ದಂತೆ ಸರ್ಕಾರದ ನಿರ್ದೇಶನದಲ್ಲಿರುವ ೭೫ ಕಾರ್ಪೊರೇಶನುಗಳಲ್ಲಿ ೨೨ ಪಶ್ಚಿಮ ಪಾಕಿಸ್ತಾನದಲ್ಲಿದ್ದುವು.

೧೯೬೫ರಲ್ಲಿ ನಡೆದ ರಾಷ್ಟ್ರಪತಿ ಚುನಾವಣೆಯ ಪ್ರಚಾರದಲ್ಲಿ ಪಶ್ಚಿಮ ಪಾಕಿಸ್ತಾನ, ಬಂಗ್ಲಾದೇಶಗಳ ನಡುವಣ ಅಸಮತೆ ಚರ್ಚೆಯ ಪ್ರಮುಖಾಂಶವಾಗಿತ್ತು. ಈ ಅಸಮತೆಗೆ ಮೂರ್ಶಲಾ ಪೂರ್ವದ ಪರಿಸ್ಥಿತಿಯೇ ಕಾರಣವೆಂದು ಪಾಕಿಸ್ತಾನದ ಮುಸ್ಲಿಂ ಲೀಗ್ ಅಭಿಪ್ರಾಯ ಪಟ್ಟಿತು. ಆದರೆ ಕುಮೂರಿ ಫಾತಿಮಾ ಜಿನ್ನಾ "ಈ ಅಸಮತೆಗೆ ಜನರಲ್ ಅಯೂಬ್ ಖಾನ್ ಮುಖ್ಯ ಶಿಲ್ಪಿ" ಎಂದು ಹೇಳಿದರು.

ಬಂಗ್ಲಾದೇಶದ ಸಂಪತ್ತನ್ನು ಪಶ್ಚಿಮ ಪಾಕಿಸ್ತಾನದ ಜನತೆಯ ಸೌಲಭ್ಯಕ್ಕೆ ಬಳಸಬೆ ಕೇವಲ ಅಲ್ಲಿನ ನಾಯಕರ ಹಾಗೂ ಪ್ರಮುಖರ ಕುಟುಂಬಗಳು ಸಂಪದಭಿವೃದ್ಧಿಗೆ ಬಳಸಿಕೊಂಡುದೇ ಈ ಶೋಷಣೆಯ ಇತಿಹಾಸದ ಮಹಾದುರಂತವಾಗಿದೆ.

ಪಶ್ಚಿಮ ಪಾಕಿಸ್ತಾನದಲ್ಲಿರುವ ಕೇವಲ ೨೦ ಕುಟುಂಬಗಳು ದೇಶದ ಸಂಪತ್ತಿನ ಶೇಕಡ ೬೦ ಭಾಗವನ್ನು ಹೊಂದಿರುವುದು ಎಲ್ಲರಿಗೂ ಗೊತ್ತಿದೆ. ಬಡ ಪಶ್ಚಿಮ ಪಾಕಿಸ್ತಾನಿ ಜನತೆಯೂ ಸೇರಿದರೆ ಎಲ್ಲರನ್ನೂ ಶೋಷಣೆಗೀಡುಮಾಡಿದುದು ವಸಾಹತು ಶಾಹಿ ಆಡಳಿತದ ವೈಶಿಷ್ಟ್ಯವಾಗಿತ್ತು. ಈಗ ಪಶ್ಚಿಮ ಪಾಕಿಸ್ತಾನದ ಜನತೆ ಯಾಹ್ಯಾ ಹಿಡಿತದಿಂದ ವಿಮೋಚನೆ ಪಡೆದ ಆಡಳಿತಕ್ಕೆ ಜೀವಾರ್ಪಣೆ ಮಾಡಬೇಕಾಗಿ ಬಂದುದು ದೌರ್ಭಾಗ್ಯವೆನಿಸಿದೆ

ದಬ್ಬಾಳಿಕೆ : ಒಂದು ಪಕ್ಷಿನೋಟ

ಸಂಖ್ಯೆ	ವಿವರ	ಪಶ್ಚಿಮ ಪಾಕಿಸ್ತಾನ	ಬಂಗ್ಲಾ ದೇಶ
1.	ಜನಸಂಖ್ಯೆ (1969-70)	6.1 ಕೋಟಿ	7.1 ಕೋಟಿ
2	ಸಂರಕ್ಷಣ ಸೇವೆಯಲ್ಲಿ ಪಾಲು	ಶೇಕಡ 90	ಶೇಕಡ 10
3.	ಕೇಂದ್ರ ಸರ್ಕಾರದ ಸೇವೆಯಲ್ಲಿ ಪಾಲು	ಶೇಕಡ 85	ಶೇಕಡ 15
4.	ಬ್ಯಾಂಕ್ ಠೇವಣಿ	1250 ಕೋಟಿ ರೂಪಾಯಿ	250 ಕೋಟಿ ರೂಪಾಯಿ
5.	ಅಭಿವೃದ್ಧಿ ವೆಚ್ಚದಲ್ಲಿ ಪಾಲು	ಶೇಕಡ 60.	ಶೇಕಡ 30
6.	ವಿದೇಶೀ ಸಹಾಯದಲ್ಲಿ ಪಾಲು	ಶೇಕಡ 80	ಶೇಕಡ 20

ಕೊಡ್ಡಿಸ್ತಿಕೆ ಉಂಟೆಂದು ಹೆಂಗಿಸಬಾರದು; ಲೇಪನಿ ಉಂಟೆಂದು ಭಂಗಿಸಬಾರದು; ನಾಲಗೆ ಉಟೆಂದು ಯೆಂಕರಿಸಬಾರದು

ಸೋಲು ಗೆಲವು ಪುಣ್ಯವಶಂ. ಧರ್ಮ ಬಿಟ್ಟು ಕರ್ಮವೆಷ್ಟಿದ್ದರೇನು?

Edited, Printed & Published by K. H. Shetty at the Navayuga Press, Udipi, S. India.